Dr. R. NAGAN GOWDA.—May I know whether any opportunity was given to the officers to opt out to the State to which they wanted to go when the Andhra State was created under an Act ?

Sri S. NIJALINGAPPA.—I am not aware of it.

Sri Y. MANJAYA SHETTY.—May I know whether the opinion of the Madras Government was taken with regard to those applicants ?

Sri S. NIJALINGAPPA.—I cannot give a categorical answer.

Sri Y. MANJAYA SHETTY.—May I presume that these papers have not been sent to the Madras Government from this Secretariat seeking their opinion ?

Sri S. NIJALINGAPPA.—Usually we send them for their opinion.

Sri M. C. NARASIMHAN.—Is it the difficulty of the Government that there are not identical posts vacant so far as our State is concerned ?

Sri S. NIJALINGAPPA.—Sometimes that is true.

SHORT NOTICE QUESTION AND ANSWER

Discontinuance of Fair Price Depots in the State.

Q.—131. Sri V. P. DEENADAYALU NAIDU (Cubbonpet).—

Will the Government be pleased to state :—

(*a*) whether it is a fact that Fair Price Depots in the State were ordered to be closed from 1st March 1958 ;

(*b*) at whose instance these depots were discontinued ;

(*c*) the steps taken to have sufficient stocks of food stuffs in the State and the extent to which the stock position has improved till the end of last month ;

(*d*) whether the discontinuance of Fair Price Depots has not rasulted in the rise of prices of foodgrains, and if so the steps they propose to take to check the rise in food prices ?

A.—Sri M. P. PATIL (Minister for Revenue).—

(*a*) and (*b*) Fair Price Depots were opened for the distribution of rice and wheat supplied by Government of India. Government of India have stopped the issue of rice to the Fair Price Depots from 1st February 1958.

(*c*) There are sufficient stocks of food stuffs in the Southern Zone.

(*d*) There has been no noticeable rise in the prices of foodgrains.

Sri V. P. DEENADAYALU NAIDU.—The answer to (*c*) is that there are sufficient stocks of foodstuffs in the Southern Zone. May I take it that it is in Andhra ? May I know in what part of the Southern Zone ?

Sri M. P. PATIL.—Andhra, Mysore, Madras and Kerala.

Sri V. P. DEENADAYALU NAIDU.—I would like to know where exactly we have them. Everybody is indenting on Andhra and other places. What exactly is the position of Mysore and on which State in the Southern Zone does it depend ?

Sri M. P. PATIL.—Andhra is surplus, Mysore is deficit, Madras is deficit and Kerala is highly deficit, but taking the production of the whole Southern Zone and consumption into consideration, it is found that the Southern Zone is self-supporting.

Sri V. P. DEENADAYALU NAIDU.—What is the guarantee of the Mysore State to get adequate stocks during stress and strain and scarcity times ?

Sri M. P. PATIL.—There is no question of scarcity in this case. When scarcity arises, the Government will make the necessary arrangements.

Sri V. P. DEENADAYALU NAIDU.—Has the Government entered into any agreement with the Andhra State and other places because when scarcity comes it does not come after intimating us?

Mr. SPEAKER.—We will make a representation to scarcity to give us notice!

Sri M. P. PATIL.—There is no such guarantee from other States because the dealings are not made at the State level. The markets are open.

Sri J. B. MALLARADHYA.—With the creation of the Southern Zone, are the Government satisfied that they are getting enough rice from Andhra?

Sri M. P. PATIL.—It is true that we are getting some rice, but I cannot say whether it is sufficient or not.

Sri J. B. MALLARADHYA.—From what other areas in the Southern Zone is the Mysore Government getting rice?

Sri M. P. PATIL.—Mainly from Andhra.

Sri J. B. MALLARADHYA.—May I know whether they are getting all their requirements of rice from Andhra or from any other State?

Sri M. P. PATIL.—We are getting our requirements from Andhra and for the present the requirement is met by the market.

Sri J. B. MALLARADHYA.—My question is whether we are getting our requirements in full from Andhra?

Sri M. P. PATIL.—We are not importing at the State level. So, how can I say that? The markets are open and the merchants are bringing and selling it.

Sri J. B. MALLARADHYA.—After the creation of the South Zone, it is understood that our requirements must be met only by the States in the South. The man who is in need of rice does not care to see whether it is at State level or at still higher level.

Mr. SPEAKER.—He means to say that the market is open in the South Zone.

Sri J. B. MALLARADHYA.—May I take it that the Mysore Government is not aware as to that is happening so far as our supplies are concerned and whether they are adequate?

Sri M. P. PATIL.—We are aware of the situation and we are watching it. For the present, the situation is quite all right.

Sri J. B. MALLARADHYA.—As a result of watching, what is the assessment that the Government have made? May I know whether Andhra has supplied all our requirements and whether the supply is adequate?

Sri M. P. PATIL.—The requirement is met from local production and from Andhra. At present, the requirement is met from both these sources.

Sri H. C. LINGA REDDY.—May I know whether representations are not made from the scarcity areas of the State that the fair price depots in those areas must be continued to be supplied with rice?

Sri M. P. PATIL.—Some representations have been received but it is not necessary to act on them because fair price depots are to be run only when the rates are high in the market.

Sri G. VENKATAI GOWDA.—May I know whether the Government is confident of meeting any demand in the event of scarcity arising?

Sri M. P. PATIL.—The Government will make all necessary arrangements when there is scarcity.

Sri M. C. NARASIMHAN.—The Minister was pleased to say that it was the private channels that fed the scarcity areas. In such a situation is it not likely that the prices of rice and other foodgrains are likely to shoot up beyond the capacity of the people in the scarcity areas?

Sri M. P. PATIL.—The question is about rise or fall in the prices of foodgrains in future. We are not sure whether prices will rise or fall down, but I may assure the Hon'ble Member that when such a situation arises, Government will surely consider that question.

Sri J. B. MALLARADHYA.—May I know the variation in the price level from the date of closing of the fair price depots upto date?

Sri M. P. PATIL.—Since the closing of the fair price depots, there is not much difference. The rate in the open market today is Rs. 58 per palla or

(SRI M. P. PATIL)

$1\frac{3}{4}$ seers per rupee in retail while the rate at the fair price depot was only two seers a rupee.

Sri J. B. MALLARADHYA.—What were the price levels at the time the fair price depots were running and what they are now ?

Sri M. P. PATIL.- I said that there was no change.

Sri M. C. NARASIMHAN.—Is it not necessary that so far as the scarcity areas are concerned, at least jowar and other commodities are supplied ?

Sri M. P. PATIL.—The reasonable rate for jowar would be three seers per rupee and at present the market rate is $3\frac{1}{4}$ seers per rupee and therefore there is no necessity to make any provision at the State level for this purpose.

Sri M. C. NARASIMHAN.—Not in scarcity areas ?

Sri M. P. PATIL.—It is so.

Sri H. C. LINGA REDDY.—Were the Government procuring any foodgrains to build up buffer stocks ?

Sri M. P. PATIL.—Yes.

Sri V. P. DEENADAYALU NAIDU.—Are the Government aware that the price of rice has gone up by Rs. 5-10 after the closure of fair price depots ?

Sri M. P. PATIL.—No. It has risen by only Rs. 2-3.

Sri J. B. MALLARADHYA.—He said that there was no variation in the price level. Now in answer to my friend's question he says that it has increased by Rs. 2. Which answer is correct ?

Sri M. P. PATIL.—Difference of 2-3 rupees is not much.

Sri M. C. NARASIMHAN.—Does the Hon'ble Minister have rates for corresponding months ?

Sri M. P. PATIL.—We get rates from month to month and week to week, but I am quoting the rates prevailing at present.

ಶ್ರೀ ಜೆ. ಬಿ. ಮಲ್ಲಾರಾಧ್ಯ.—"ಬಿ" ಭಾಗದ ಉತ್ತರದಲ್ಲಿ "ಯಾರ ಸೂಚನೆಯ ಮೇರೆಗೆ ಇದನ್ನು ನಿಲ್ಲಿಸಲಾಯಿತು" ಎಂಬುದಕ್ಕೆ ಉತ್ತರ ಕೊಟ್ಟಿಲ್ಲ, ಏಕೆ ?

Sri M. P. PATIL.—Nobody has issued an order that the fair price depots should be closed ; Government has not issued such an order that rice would not be supplied and that wheat would be supplied.

Sri S. MUNIRAJU.—Has it come to the notice of the Government that the price of ragi has gone up ?

Sri M. P. PATIL.— On the other hand, it has come down.

ಶ್ರೀ ಕೆ. ಎಲ್. ನರಸಿಂಹಯ್ಯ.—Buffer Stock ಎಷ್ಟು ಮಾಡಿದ್ದೀರೆಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ಪಿ. ಪಾಟೀಲ್.—1,80,000 ಪಲ್ಲಾಗಳು.

ಶ್ರೀ ಕೆ. ಎಲ್. ನರಸಿಂಹಯ್ಯ.— ಸೊಸೈಟಿಗಳು ಈಗ ಕೆಲವು ಬತ್ತವನ್ನು ಕೊಳ್ಳುತ್ತಿವೆಯಲ್ಲಾ, ಅದೂ ಸೇರಿಯೋ ನೀವುಹೇಳುವುದು ?

ಶ್ರೀ ಎಂ. ಪಿ. ಪಾಟೀಲ್.—ಸರ್ಕಾರದವರು ಕೊಂಡು ಕೊಂಡಿರುವ ಭತ್ತ ಇಷ್ಟು.

Mr. SPEAKER.—Question time is over.

QUESTIONS FOR ANSWERS ON THE DAY

(but not taken up)

Number of Landless and Land-Owning Peasant Families in the State.

Q.—947. Sri T. K. GANGI REDDY (Chintamani).—

Will the Government be pleased to state :—

(*a*) the number of landless peasant families in the State ;

(*b*) the number of peasant families who own less than five acres of dry land or one acre of wet land ;

(*c*) the number of peasant families owning fifteen acres of dry land or three acres of wet land ?

A.—Sri M. P. PATIL (Minister for Revenue).—

(*a*) 9,32,188 (excludes figures for South Kanara District)

(*b*) 9,91,978.

(*c*) 4,46,212.

National Extension Service Scheme for Kushtagi Taluk.

Q.—1369. Sri E. PUNDLIKAPPA (Kushtagi).—

Will the Government be pleased to state :—

whether they propose to allot a National Extension Service Block for Kushtagi Taluk, Raichur District, this year in view of its backwardness ?

A.—Sri S. NIJALINGAPPA (Chief Minister).—

National Extension Service Scheme has been extended to the Kushtagi Taluk from 2nd October, 1957.

Police Prosecutors and Assistant Prosecutors remaining in the same place for more than three years in Bombay Karnatak area.

Q.—1382. Sri H. V. KOUJALGI (Sampagaon-I).—

Will the Government be pleased to state :—

(*a*) the number of Police Prosecutors and Assistant Police Prosecutors in the Districts of Belgaum, Dharwar. Bijapur and Karwar ;

(*b*) the number of them working in one place for more than three years ;

(*c*) the reasons for keeping them in the same place for more than three years ?

A.—Sri C. M. POONACHA (Minister for Home Affairs and Industries).—

(*a*)—

Belgaum	...	11 Prosecutors.
Dharwar	...	16 .. Do
Bijapur	...	1 Sr. Prosecutor.
	...	9 Asst. Do
Karwar	...	9 Procutors.

(*b*)—

Belgaum	...	1 Prosecutor.
Dharwar	...	2 Prosecutors.
Bijapur	...	3 Do
North Kanara.		1 Prosecutor.

(*c*) Sri H. B. Kulkarni (Belgaum District) was transferred to Nasik by the I.G.P., Bombay State, from Poona, in 1954 but the same was cancelled at the request of the Prosecutor on domestic grounds. He was again transferred in June 1955 but the same was cancelled by the D.S.P. on administrative grounds.

Sri M. Y. A. Sheik (Dharwar District) is above the Efficiency Bar. He is therefore kept at Dharwar on administrative grounds.

Sri D. B. Hombal (Dharwar District) was transferred from Navalgund to Gadag in 1953 and he is there since then on the grounds of health.

Sri N. F. Elasia (Bijapur District) is a Senior Police Prosecutor who is a Gazetted Officer in Bijapur being the Headquarters of the District he is kept there.

Sri Akber Navis (Bijapur District) is the Seniormost among the 9 Assistant Police Prosecutors and Bagalkot being an important place on account of the location of the Sub-Divisional Police Offices and Sub-Divisional Magistrate Offices he is kept there.

Sri M. A. Yadwad (Bijapur District) is continued at Mudhol as he has a thorough knowledge of that area. He looks after the Prosecution work at Mudhol and Jamkhandi.

Sri S. G. Kumat (North Kanara District) transferred to Holyal during the General Transfers of Prosecutors in the month of May 1957. His transfer was cancelled on the following grounds:

1. That he is a diabetic patient and the climate of Halyal would not suit his health.

2. He was due to retire on 1st November 1959.

3. He is the Seniormost Prosecutor in the North Kanara District and he claimed the privilege of being continued at the Headquarters as was being done in respect of other Senior Prosecutors in the past.

Establishment of a Munsiff-Magistrate Court at Arsikere.

Q.—1457. Sri A. R. KARISIDDAPPA (Arsikere).—

Will the Government be pleased to state :—

(*a*) since how many years the people of Arsikere and the surrounding areas are requesting them to establish a Munsiff-Magistrate Court at Arsikere ;

(*b*) whether it is not a fact that a committee was formed by them to submit a report in this behalf ;

(*c*) the details of the report submitted by the said committee ?

A.—Sri C. M. POONACHA (Minister for Home Affairs and Industries).—

(*a*) From a long time.

(*b*) and (*c*) The Mallappa Committee was constituted to go into the question of redistribution of territorial and pecuniary jurisdiction of Courts in the State.

An extract from the report relating to the question of establishment of Munsiff-Magistrate's Court at Arsikere is appended.

Extract

Report of the Committee constituted to go into the question of re-distribution of territorial and pecuniary jurisdiction of Courts in the State.

"The people of Arsikere Taluk have been agitating for the establishment of a Munsiff-Magistrate's Court at Arsikere. Some parts of Arsikere Taluk are 40 to 60 miles away from Hassan. Arsikere Town has grown rapidly and is an important trade centre and a railway junction. The necessity for a court at this place has become more urgent with the abolition of the Bench Magistrate's Court. The Committee, therefore, recommends the establishment of a Munsiff-Magistrate's Court (invested with First Class Magisterial powers) at Arsikere.

* * *

There is, therefore, no doubt that the proposed Munsiff-Magistrate's Court at Arsikere will have sufficient work."

Supply of power to taluqa headquarters in Dharwar District.

Q.—1528. Sri T. K. KAMBLI (Kundgol).—

Will the Government be pleased to state :—

(*a*) whether they propose to supply electric power to Kundgol, Lakshmeshwar and Shirahatti, taluka headquarters of Dharwar District ;

(*b*) if so, when ;

(*c*) whether any survey has been conducted in this regard ;

(*d*) whether any estimate has been prepared for the above purpose ?

A.—Sri H. K. VEERANNA GOWDH (Minister for Public Works).—

(*a*) The State Electricity Board proposes to make the supply provided the local bodies concerned fulfil the requirements laid down for power supply.

(*b*) This depends on the time that will be taken for conducting surveys, preparation of estimates and collection of materials.

(*c*) Yes, in respect of Shirahatti.

(*d*) No.

Officiating arrangement for the post of Munsiff-Magistrate, Humnabad.

Q.—1537. Sri BALWANT RAO KHANAPURKAR (Bhalki).—

Will the Government be pleased to state :—

(*a*) whether it has come to their notice that no officiating arrangements have been made for the post of Munsiff-Magistrate, Humnabad (District Bidar), for the last four months ;

(*b*) the reasons for the delay ;

(*c*) whether it has come to their notice that the litigant public are undergoing hardships because of the delay ;

(*d*) when they propose to take action in this behalf ?

A.—Sri C. M. POONACHA (Minister for Home Affairs and Industries).—

(*a*) Yes.

(b) Since there were no Officers available for posting the question of making temporary appointments was under the consideration of Government.

(c) No.

(d) An Officer has already been posted to the Munsiff-Magistrate's Court, Humnabad, from 12th August 1957.

Gambling in City Club in Hubli City.

Q.—1839. Sri F. H. MOHSIN (Hubli City).—

Will the Government be pleased to state :—

(a) whether there is any institution called the 'City Club' in the old Cotton Market area of Hubli City ;

(b) whether it has come to their notice that it has almost become a gambling centre ;

(c) whether there have been any police raids on the Club at any time ;

(d) if so, when and the number of times it was raided ;

(e) whether there were any raids by Anti-Corruption Department, and if so, when ?

A.—Sri C. M. POONACHA (Minister for Home Affairs and Industries).—

(a) Yes.

(b) No.

(c) No.

(d) Does not arise.

(e) Yes. The Deputy Superintendent of Police, Anti-Corruption Branch, Belgaum, paid a surprise visit to the Club on 28th January 1955 along with his staff.

MYSORE APPROPRIATION BILL, 1958.

Introduction.

Sri B. VAIKUNTA BALIGA (Minister for Labour and Legal Affairs).—Sir, I introduce the Mysore Appropriation Bill, 1958, which has been published in the *Mysore Gazette* Extraordinary dated 17th March 1958 under rule 48 of the Rules of Procedure and Conduct of Business in the Mysore Legislative Assembly.

Mr. SPEAKER.—The Bill is introduced.

Motion to consider.

Sri B. VAIKUNTA BALIGA.—Sir, I move :

"That the Mysore Appropriation Bill, 1958, be taken into consideration."

Mr. SPEAKER.—Motion moved :

"That the Mysore Appropriation Bill, 1958, be taken into consideration."

Sri B. VAIKUNTA BALIGA.—It is needless to remind the House that the matter has been fully discussed and there is not much more for me to offer by way of remarks.

Mr. SPEAKER.—The question is :

"That the Mysore Appropriation Bill, 1958, be taken into consideration."

The motion was adopted.

Mr. SPEAKER.—The Bill will be read, clause by clause. Clauses 2 and 3. The question is :

"That Clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.—Clause 1. The question is :

"That Clause 1 stand part of the Bill."

The motion was adopted.

Clause 1 was added to the Bill.

Mr. SPEAKER.—The Schedule and the Title and the Preamble. The question is :

"That the Schedule and the Title and the Preamble stand part of the Bill."

The motion was adopted.

The Schedule and the Title and the Preamble were added to the Bill.

Motion to pass.

Sri B. VAIKUNTA BALIGA.—Sir, I move :

"That the Mysore Appropriation Bill, 1958, be passed."

Mr. SPEAKER.—The question is :

"That the Mysore Appropriation Bill, 1958, be passed."

The motion was adopted.

MYSORE SALES TAX (AMENDMENT) BILL, 1958.

Motion to consider.

Sri B. VAIKUNTA BALIGA (Minister for Labour and Legal Affairs).—Sir, I move :

"That the Mysore Sales Tax (Amendment) Bill, 1958, be taken into consideration."

Mr. SPEAKER.—Motion moved :

"That the Mysore Sales Tax (Amendment) Bill, 1958, be taken into consideration."

Sri B. VAIKUNTA BALIGA.—I find there is a keen desire to participate in the debate. I would not take much of the time of the House except saying that the Statement of Objects and Reasons for bringing in the Bill is fairly clear by itself. It has been occasioned on account of two or three circumstances; that is with regard to certain difficulties experienced in the tobacco market and also with regard to the excise duty on textiles that has been introduced by the Centre. Therefore, I would not offer more remarks than what I have already said.

Sri C. J. MUCKANNAPPA (Gubbi).—May I know when we can expect your ruling on the notice of adjournment motions given by us ?

Mr. SPEAKER.—I have not yet gone through the question, because the books were supplied to me only day before yesterday and I have to look into them.

***ಶ್ರೀ ಕೆ. ಕೆಂಚಪ್ಪ** (ಹಿರಿಯೂರು).—ಅಧ್ಯಕ್ಷರೆ, ಮೈಸೂರು ಸಂಸ್ಥಾನದ ಸಾಮಾನುಗಳ ಮೇಲಿನ ತೆರಿಗೆಯ ವಿಚಾರದಲ್ಲಿ ಮತ್ತೊಂದು ತಿದ್ದುಪಡಿಯ ಬಿಲ್ಲನ್ನು ತಂದಿರುವುದು ನೋಡಿ ನನಗೆ ಬಹಳ ಆಶ್ಚರ್ಯವಾಗಿದೆ. ಈ ಸಂಬಂಧದಲ್ಲಿ ಕೊಟ್ಟಿರತಕ್ಕ ಕಾರಣಗಳನ್ನು ನೋಡಿದರೆ ಅವು ಏನೇನೂ ಸಮರ್ಪಕವಾಗಿಲ್ಲ. ಕೇಂದ್ರ ಸರ್ಕಾರದವರು ಕೆಲವು ಪದಾರ್ಥಗಳ ಮೇಲೆ ಎಕ್ಸೈಸ್ ಡ್ಯೂಟಿಗಳನ್ನು ಹಾಕಿದ್ದು, ಅವರು, ನಮ್ಮ ಸರ್ಕಾರಕ್ಕೆ, ಆ ಸಾಮಾನುಗಳನ್ನು ಬಿಟ್ಟು ಬೇರೆ ಸಾಮಾನುಗಳ ಮೇಲೆ ತೆರಿಗೆ ಹಾಕಿದರೆ ಸರಿ, ಇಲ್ಲದೆ ಇದ್ದರೆ ಈ ಸರ್ಕಾರಕ್ಕೆ ಕೊಡಬೇಕಾದ ತೆರಿಗೆಯ ಕೋಟಾ ಕೊಡುವುದಿಲ್ಲವೆಂದು ಹೇಳಿದುದರ ದೆಶೆಯಿಂದ, ಇವರು ಈ ಬಿಲ್ಲನ್ನು ತಂದಿದ್ದಾರೆಂದು ಗೊತ್ತಾಗಿದೆ. ಹಾಗಿದ್ದಮೇಲೆ ಈ ಸರ್ಕಾರದವರು, ಯಾವಯಾವ ವಸ್ತುಗಳ ಮೇಲೆ ಎಕ್ಸೈಸ್ ಡ್ಯೂಟಿ ಹಾಕಿದ್ದಾರೋ ಆ ಸಾಮಾನುಗಳ ಮೇಲಿರುವ ನಮ್ಮ ತೆರಿಗೆಯನ್ನು ತೆಗೆದುಹಾಕಿ ಈರೀತಿ ಬೇರೆ ವಿಷಯಗಳ ಮೇಲೆ ತೆರಿಗೆಯನ್ನು ಹಾಕಬೇಕೆಂದು ಉದ್ದೇಶಪಟ್ಟು ತಂದಿದ್ದರೆ ನಾವು ಒಪ್ಪಬಹುದಾಗಿತ್ತು. ಆದರೆ ಇವರಿಗೆ ಅಂಥ ಉದ್ದೇಶ ಯಾವುದೂ ಇಲ್ಲ. ಅದಕ್ಕೆ ಬದಲು ಕೇಂದ್ರ ಸರ್ಕಾರದವರು ಎಕ್ಸೈಸ್ ಡ್ಯೂಟಿ ಹಾಕಿದುದರ ದೆಶೆಯಿಂದ ದಾಮಾಷಾ ಪ್ರಕಾರ ಹೆಚ್ಚಿಗೆ ದುಡ್ಡನ್ನೂ ಈ ಸರ್ಕಾರದವರು ಪಡೆಯುತ್ತಾರೆ. ಅದರ ಜೊತೆಗೆ ಇಲ್ಲಿ ಐದನೆಯ ಸೆಕ್ಷನ್‌ನಲ್ಲಿ Pulses ಎಂಬ ಪದವನ್ನು ಬದಲಾಯಿಸಿ, ಬೆಳ್ಳುಳ್ಳಿ, ಬೆಲ್ಲ, ಈರುಳ್ಳಿ ಆಲೂಗೆಡ್ಡೆ, ದ್ವಿದಳಧಾನ್ಯಗಳು ಮತ್ತು ಅವುಗಳಿಂದ ತಯಾರಾದ ಪದಾರ್ಥಗಳೆಂದು ಸೇರಿಸಿ ಎರಡು ಭಾಗದ ತೆರಿಗೆಯನ್ನು ಹೊಂದುವಂತೆ ಸಿದ್ಧ ಮಾಡಿದ್ದಾರೆ. ಗೆಣಸು, ಅರಿಶಿನ ಕೂಡ ಇದರಲ್ಲಿ ಸೇರಿಸಿದೆ. ಮನುಷ್ಯನ ಜೀವನಕ್ಕೆ ಆವಶ್ಯಕವಾಗಿ ಬೇಕಾಗತಕ್ಕಂಥ ಪದಾರ್ಥಗಳ ಮೇಲೆ ತೆರಿಗೆಯನ್ನು ಹಾಕಬಾರದೆಂದು ನಾವು ಹಿಂದೆ ಎಷ್ಟೋಸಾರಿ ಹೇಳಿದರೂ ಕೆಲವಕ್ಕೆ ಹಾಕಿ ಕೆಲವಕ್ಕೆ ಬಿಟ್ಟಿದ್ದರು. ಈಗ ಐದನೆಯ ಸೆಕ್ಷನ್‌ನಲ್ಲಿ ಕೆಲವು ಸಾಮಾನುಗಳ ಮೇಲೆ ತೆರಿಗೆಹಾಕುವುದರ ಮೂಲಕ ಟರ್ನ್‌ಓವರ್ ಬೇಸಿಸ್ ಮೇಲೆ ಇದ್ದುದನ್ನು ಹೆಚ್ಚು ಮಾಡುವ ಹವ್ಯಾಸಕ್ಕೆ ಹೋಗಿದ್ದಾರೆ. ರಾಜ್ಯಾಂಗದ ಪ್ರಕಾರ ಮನುಷ್ಯನ ಉಪಯೋಗಕ್ಕೆ ಆವಶ್ಯಕವಾಗಿ ಬೇಕಾದ ಸಾಮಾನುಗಳ ಮೇಲೆ ತೆರಿಗೆ ಹಾಕಿದರೆ ಕೆಡುಕಾಗುತ್ತದೆ ಮತ್ತು ಅದು ಒಳ್ಳೆಯದಲ್ಲ ಎಂದು ಸ್ಪಷ್ಟವಾಗಿದ್ದರೂ ಅದನ್ನು ಉಲ್ಲಂಘನೆ ಮಾಡಿ ಈ ರೀತಿಯಾಗಿ ಆವಶ್ಯಕವಾಗಿರತಕ್ಕಂಥ ಸಾಮಾನುಗಳ ಮೇಲೆ ತೆರಿಗೆ ಹಾಕುವ ಹವ್ಯಾಸಕ್ಕೆ ಹೊರಟಿರುವ ಉದ್ದೇಶವಾದರೂ ಏನು ? ನಾವು ತೆರಿಗೆ ಹಾಕಿರುವ ಸಾಮಾನುಗಳ ಮೇಲೆ ಇಂಡಿಯಾ ಸರ್ಕಾರ ತೆರಿಗೆ ಹಾಕುತ್ತದೆ. ಬಟ್ಟೆಮೇಲೆ, ಹತ್ತಿಯಿಂದ ತಯಾರಾಗುವ ಸಾಮಾನುಗಳ ಮೇಲೆ ಮತ್ತು ತಂಬಾಕಿನ ಸಹಾಯದಿಂದ ತಯಾರಾಗುವ ಸಾಮಾನುಗಳ ಮೇಲೆ ನಾವು ತೆರಿಗೆ ಹಾಕಿದರೆ ಇಂಡಿಯಾ ಸರ್ಕಾರದವರು ಕೊಡುವ ದಾಮಾಷಾ ಹಣ ಕೊಡುವುದಿಲ್ಲ. ಅದರಿಂದ ನಷ್ಟವಾಗುತ್ತದೆ ಎಂದು ಹೇಳಬಹುದು. ಆ ಭಾವನೆಯಿದ್ದರೆ ಅದನ್ನು ತೆಗೆದು, ಆ ಸಾಮಾನುಗಳ ಮೇಲೆ ತೆರಿಗೆ ಹಾಕದೆ ಇಂಡಿಯಾ ಸರ್ಕಾರದಿಂದ ಬರುವ ಮೊಬಲಗನ್ನು ತೆಗೆದುಕೊಂಡು ಸುಮ್ಮನಿರಬೇಕಾಗಿತ್ತು. ಈಗ ಅದರ ಜೊತೆಗೆ ಇಲ್ಲೂ ಉತ್ಪತ್ತಿ ಪಡೆಯಬೇಕೆಂದು ಭಾವನೆಯಿರುವಂತೆ ಕಾಣುತ್ತದೆ. ಇದನ್ನು ನೋಡಿದರೆ ಈಗ ಬರಿಯ ತೆರಿಗೆ ಹಾಕುವ ಯುಗದಲ್ಲಿರುವಂತೆ ಕಾಣುತ್ತದೆ; ತೆರಿಗೆಹಾಕುವುದೇ ಒಂದು ಹವ್ಯಾಸವಾಗಿದೆ. ಈಗ ಅನೇಕರಿಗೆ ತೆರಿಗೆ ಹೊರುವ ಶಕ್ತಿಯಿಲ್ಲ. ಇದೇ ವಿಧಾನಸೌಧದಲ್ಲಿರುವ ಅನೇಕ ನೌಕರರು ಬೆಳಗ್ಗೆ 11 ರಿಂದ ಐದು ಘಂಟೆಯವರೆಗೆ

ಕೆಲಸ ಮಾಡುವುದಲ್ಲದೆ ರಾತ್ರಿ ವೇಳೆ ಮತ್ತು ಇತರ ವಿರಾಮ ಕಾಲಗಳಲ್ಲಿ ಹೆಚ್ಚು ಕೆಲಸಮಾಡುತ್ತಿರುವುದು ಬೆಂಗಳೂರಿಗೆ ಬಂದಮೇಲೆ ನಾನು ನೋಡಿದ್ದೇನೆ. ಅವರ ಕಷ್ಟ ಕಡಮೆಮಾಡುವ ಹವ್ಯಾಸಕ್ಕೆ ಹೋಗಿದ್ದರೆ ಇಂಥ ಮಸೂದೆ ತರುತ್ತಿದ್ದಿಲ್ಲ. ಈಗ ಇಲ್ಲಿ ವಿಶಾಲ ಕರ್ಣಾಟಕಕ್ಕಾಗಿ ದುಡಿದ ಮಾನ್ಯ ಮಹನೀಯರು ಬಹುಮಂದಿ ಇದ್ದಾರೆ, ಮುಖ್ಯ ಮಂತ್ರಿಗಳಿದ್ದಾರೆ. ಅಂಥ ಮಹಾಜನರು ಈ ಸಾಮಾನುಗಳ ಮೇಲೆ ತೆರಿಗೆ ಹಾಕುವುದರಿಂದ ಜನರ ಮೇಲಿರುವ ಭಾರ ಕಡಮೆಯಾಗುತ್ತದೆಯೇ ಅಥವಾ ಹೆಚ್ಚಾಗುತ್ತದೆಯೇ ಎಂಬುದನ್ನು ಹೇಳಲಿ, ನೋಡೋಣ. ಈ ಸಾಮಾನುಗಳ ಮೇಲೆ ತೆರಿಗೆಹಾಕುವುದು, ಟರ್ನೋವರ್ ಟ್ಯಾಕ್ಸ್ ಹಾಕುವುದು ಸರಿಯಲ್ಲ. ಇನ್ನೊಂದು ಕ್ಲಾಜಿನ ಕೊನೆಯಲ್ಲಿ ಸಾಮಾನು ಮಾರುವಾಗ ತೆರಿಗೆ ಹೆಚ್ಚಾಗಿ ಸೇರಿಸಿ ಮಾರಬೇಡಿ ಎಂದು ಹೇಳಿದ್ದಾರೆ. ಇನ್ನೊಂದು ಸೆಕ್ಷನಲ್ಲೂ ಅದೇರೀತಿಯಿದೆ. ಈ ವಿಚಾರದಲ್ಲಿ ತಾಳಿರುವ ಮನೋಭಾವ ಬಹಳವಾಗಿ ಬೇಸರ ಪಡಿಸುತ್ತಿದೆ. ಹೀಗೆ ಅವಶ್ಯಕವಾದ ಸಾಮಾನುಗಳ ಮೇಲೆ ತೆರಿಗೆ ಹಾಕುವಾಗ ರಾಗಿ, ಜೋಳ, ಅಕ್ಕಿ ಮುಂತಾದುವನ್ನು ಬಿಟ್ಟಿರುವುದು ಆಶ್ಚರ್ಯಕರವಾಗಿದೆ. ನಾವು ಸೆಲೆಕ್ಟ್ ಕಮಿಟಿಯಲ್ಲಿ ಹೇಳಿದಾಗ ಕೆಲವು ಪದಾರ್ಥಗಳಿಗೆ ತೆರಿಗೆಹಾಕದೆ ಬಿಟ್ಟು ಮತ್ತೆ ಈಗ ಹಾಕಿರುವುದರಿಂದ ಸರ್ವೇಸಾಧಾರಣವಾಗಿ ಜೀವನಮಟ್ಟದ ಖರ್ಚು ಹೆಚ್ಚುತ್ತದೆ. ಇದು ಬೇಡಿ; ಏಕೆಂದರೆ ಇದೇರೀತಿಯಾಗಿ ತೆರಿಗೆ ಹಾಕುವುದರಿಂದ ದೇಶದ ಉತ್ಪಾದನಾ ಶಕ್ತಿ ಕಡಮೆಯಾಗುತ್ತದೆ; ಇದಕ್ಕೆ ಒಂದು ಮಿತಿ ಯಿರಬೇಕು. ಮನುಷ್ಯ ತನ ಬೆಳವಣಿಗೆಗೆ ಸಹ ಬೇಕಾದಷ್ಟು ಖರ್ಚು ಮಾಡಬೇಕಾಗುತ್ತದೆ. ಇಲ್ಲದಿರುವುದನ್ನು ಈಗ ಸೇರಿಸಿ ಮನುಷ್ಯನ ಜೀವನದ ಒಂದು ಮಾರ್ಗವನ್ನು ಹಾಳು ಮಾಡುವ ಹವ್ಯಾಸಕ್ಕೆ ಹೋಗಬೇಡಿ. ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ಬಾಕಿ ವಿಚಾರವನ್ನು ಮಾನ್ಯ ಮಿತ್ರರು ಬೇಕಾದಷ್ಟು ಹೇಳಬಹುದು. ಇಷ್ಟನ್ನು ಮಾತ್ರ ತಿಳಿಸಿ ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಮನಃಪೂರ್ವಕವಾಗಿ ಬೇಡಿಕೊಳ್ಳುತ್ತೇನೆ.

ಶ್ರೀ ಎಂ. ಸಿ. ನರಸಿಂಹನ್ (ಕೋಲಾರದ ಚಿನ್ನದಗಣಿ ಪ್ರದೇಶ).—ಅಧ್ಯಕ್ಷರೇ, ಈ ತಿದ್ದುಪಡಿಯ ಮಸೂದೆಯ ಉದ್ದೇಶ ಮೊದಲನೆಯದಾಗಿ ಕೇಂದ್ರ ಸರ್ಕಾರದವರು ಕೆಲವು ಸಾಮಗ್ರಿಗಳು ಎಂದರೆ, ಟೊಬ್ಯಾಕೊ, ಟೆಕ್ಸ್‌ಟೈಲ್ಸ್, ಸಕ್ಕರೆ—ಈ ಮೂರು ಸಾಮಗ್ರಿಗಳ ಮೇಲೆ ಎಕ್ಸೈಜ್ ಡ್ಯೂಟಿಹಾಕಬೇಕೆಂದಿದ್ದಾರೆ, ಆದ್ದರಿಂದ 14 ನೆಯ ಡಿಸೆಂಬರ್‌ನಿಂದ ಇದು ಜಾರಿಗೆ ಬರುತ್ತದೆ, ಈ ಸಾಮಾನುಗಳ ಮೇಲೆ ಸೇಲ್ಸ್ ಟ್ಯಾಕ್ಸ್ ಇರಬಾರದು ಎಂಬುದು. ಇದಕ್ಕೆ ಯಾವ ವಿಧವಾದ ಅಭ್ಯಂತರವೂ ಇರಲಿಕ್ಕಿಲ್ಲ. ಎರಡನೆಯ ವಿಷಯ ತಾಟಿಬೆಲ್ಲ, ಈರುಳ್ಳಿ ಮತ್ತು ಕೆಲವು ದ್ವಿದಳ ಧಾನ್ಯಗಳು, ಗೆಣಸು ಇವುಗಳ ಮೇಲೆ ಒಂದು ಲೈಸೆನ್ಸ್ ಫೀ ಹಾಕಬೇಕೆಂಬುದು. ಇದರ ಬಗ್ಗೆ ನನ್ನ ಬಲವಾದ ಆಕ್ಷೇಪಣೆ ಇದೆ. ಏಕೆಂದರೆ, ಈ ಸಂಬಂಧವಾದ ಎಲೆಕ್ಟ್ರಿಕಲ್ ಎನರ್ಜಿ, ಬೆಲ್ಲ ಇತ್ಯಾದಿ ಸಾಮಾನುಗಳ ಮೇಲೆ ಲೈಸೆನ್ಸ್ ಫೀ ಹಾಕಲು ಒಂದು ಆರ್ಡಿನೆನ್ಸ್ ಹೊರಡಿಸುವ ಅಗತ್ಯವೇನಿತ್ತು? ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಹೇಳಿರುವುದು ಆರ್ಡಿನೆನ್ಸ್ ಹೊರಡಿಸಲಾಯಿತು ಎಂದು. ಆದರೆ ಅದನ್ನು ಹೊರಡಿಸಬೇಕಾದ ಜರೂರು ಪರಿಸ್ಥಿತಿಯೇನಿತ್ತೆಂಬುದು ಕಂಡುಬರುವುದಿಲ್ಲ. ಈ ಅಧಿವೇಶನ ಡಿಸೆಂಬರಿನಲ್ಲೇ ಸೇರಬೇಕಾಗಿತ್ತು, ಸೇರದಿದ್ದರೆ ಫೆಬ್ರವರಿಯಲ್ಲಾದರೂ ಸೇರುತ್ತದೆಂಬುದು ಗೊತ್ತಿತ್ತು. ಫೆಬ್ರವರಿ ಅಥವಾ ಮಾರ್ಚಿಯಲ್ಲಿ ಸೇರುವಾಗ ಈ ತಿದ್ದುಪಡಿಯನ್ನು ಈ ಸಭೆಯಲ್ಲಿ ತರಬಹುದಾಗಿತ್ತು. ಇದಕ್ಕೆ ಆರ್ಡಿನೆನ್ಸ್ ತರಬೇಕಾದ ಅಗತ್ಯವೇನಿತ್ತು? ಆರ್ಡಿನೆನ್ಸ್ ವಿಚಾರದಲ್ಲಿ ಅನೇಕ ಸಲ ಟೀಕೆ ಮಾಡಿದ್ದೇವೆ. ಈ ರೀತಿ ತುರ್ತು ಶಾಸನ ತರುವ ಅಧಿಕಾರವನ್ನು ದುರುಪಯೋಗಪಡಿಸಬಾರದು ಎಂದು; ಬಹಳ ಅಗತ್ಯವಿದ್ದಾಗ ಮಾತ್ರ ಉಪಯೋಗಿಸಬೇಕೆಂದು ಹೇಳಿದ್ದೇವೆ.

2-30 P.M.

ಎರಡನೆಯದಾಗಿ, ಮುಖ್ಯ ಸಾಮಗ್ರಿಗಳ ಮೇಲೇನು ತೆರಿಗೆ ವಿಧಿಸಿದೆ ಅವೆಲ್ಲಾ ಸ್ವಲ್ಪ ಹೆಚ್ಚು ಕಡಿಮೆ ಆಹಾರ ಸಾಮಗ್ರಿಗಳಿದ್ದಹಾಗೆ, ಈ ಬಗ್ಗೆ ಕೇಂದ್ರ ಸರ್ಕಾರದವರು ರಾಜ್ಯಸರ್ಕಾರಗಳಿಗೆ ಒಂದು ಆದೇಶವನ್ನು ಕೊಟ್ಟಿದ್ದಾರೆ. ಅದೇನೆಂದರೆ ಅಕ್ಕಿ, ರಾಗಿ ಇತ್ಯಾದಿ ಸಾಮಾನುಗಳ ಮೇಲೆ ಸೇಲ್ಸ್ ಟ್ಯಾಕ್ಸ್‌ಅನ್ನು ವಿಧಿಸಕೂಡದು ಎಂದು ಇತ್ತೀಚೆಗೆ ನಿರ್ದೇಶನ ಕೂಡ ಕೊಟ್ಟಿದ್ದಾರೆ. ಈ ಸಾಮಗ್ರಿಗಳೆಲ್ಲಾ ಹೆಚ್ಚು ಕಡಮೆ ಆಹಾರ ಸಾಮಗ್ರಿಗಳಾಗಿವೆ. ಉದಾಹರಣೆಗೆ ಗೆಣಸು ತೆಗೆದುಕೊಂಡರೆ ಕೆಲವು ಭಾಗಗಳಲ್ಲಿ ಅದು ಮುಖ್ಯವಾದ ಆಹಾರ ಸಾಮಗ್ರಿ ಆಗುತ್ತದೆ. ಹೀಗಿರುವಾಗ ಇದರ ಮೇಲೆ ಲೈಸೆನ್ಸ್ ಫೀ ಹಾಕಬೇಕೆಂದು ಏತಕ್ಕೆ ನಿರ್ಧಾರ ಮಾಡಿದ್ದಾರೋ ನನಗೆ ಗೊತ್ತಾಗುವುದಿಲ್ಲ. ಮಾನ್ಯ ಮಿತ್ರರಾದ ಶ್ರೀ ಕೆಂಚಪ್ಪನವರು ಹೇಳಿದಹಾಗೆ ಬಡಜನಗಳಿಗೆ ಬಹಳ ಅನಾನುಕೂಲವಾಗುತ್ತದೆ. ಈ ದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಮತ್ತೊಂದು ವಿಷಯವನ್ನು ಗಮನಿಸಬೇಕು. ಅದೇನೆಂದರೆ ಸೇಲ್ಸ್‌ಟ್ಯಾಕ್ಸ್ ವಿಷಯ. ಇದನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಎರಡು ಕುಳಿತುಕೊಂಡು ಚರ್ಚಿಸಿ ದಕ್ಷಿಣದಲ್ಲಿ ಇರತಕ್ಕ ರಾಜ್ಯಗಳಲ್ಲಿ ಒಂದೇ ತರಹದ ರೇಟು ಇರಬೇಕು, ಸಾಮಗ್ರಿಗಳ ಮೇಲೆ ಒಂದೇ ತರಹದ ಟ್ಯಾಕ್ಸ್ ಹಾಕಬೇಕು. ಒಂದೇ ತರಹದ ವ್ಯವಸ್ಥೆ ಇರಬೇಕು. ಒಂದೇ ತರಹದ ಕಾನೂನು ಇರಬೇಕು. ಎನ್ನುವ ವಿಚಾರದಲ್ಲಿ ಒಪ್ಪಿಗೆ ಆಗಿದೆ. ಅದು ಅಗತ್ಯ. ಇಲ್ಲದಿದ್ದರೆ ಇಂಟರ್ ಸ್ಟೇಟ್ ಟ್ರಾನ್ಸಾಕ್ಷನ್ಸ್‌ನಲ್ಲಿ ಹೆಚ್ಚು ಲೀಕೇಜ್ ಆಗಲು ಅವಕಾಶವಾಗುತ್ತದೆ. ಅದನ್ನು ತಪ್ಪಿಸಬೇಕಾದರೆ ಮದ್ರಾಸ್, ಕೇರಳ ಮತ್ತು ಆಂಧ್ರ ಸರ್ಕಾರಗಳ ಜೊತೆಯಲ್ಲಿ ನಮ್ಮ ಸರ್ಕಾರದವರು ಮಾತುಕತೆ ನಡೆಸಿ ಒಂದೇ ತರಹದ ಶಾಸನ ವನ್ನು ಆದಷ್ಟು ಬೇಗ ತರುವುದು ಬುದ್ಧಿವಂತಿಕೆ. ಆರ್ಡಿನೆನ್ಸ್ ಮೂಲಕ ಇನ್ನು ನಾಲ್ಕು ಸಾಮಾನುಗಳ ಮೇಲೆ ತೆರಿಗೆ ಹಾಕುವಂತೆ ಮಾಡುವುದು ಸರಿಯಲ್ಲ. ನೆರೆಯ ಪ್ರಾಂತವಾದಂಥ ಮದ್ರಾಸಿನಲ್ಲಿ ಈಗಾಗಲೇ ಸೇಲ್ಸ್ ಟ್ಯಾಕ್ಸ್ ವ್ಯವಸ್ಥೆ ಏನಿದೆ ಅದನ್ನು ಸಂಪೂರ್ಣ ತಿದ್ದುಪಾಟು ಮಾಡಬೇಕು ಎನ್ನುವ ಬಗ್ಗೆ ವಿಚಾರಣೆ ನಡೆಯಿತು. ಡಾ॥ ಪಿ. ಎಸ್. ಲೋಕನಾಥನ್ ಅವರು ಒಂದು ವರದಿ ಕೂಡ ಈ ಬಗ್ಗೆ ಕೊಟ್ಟಿದ್ದಾರೆ. ಅದನ್ನು ಹೆಚ್ಚು ಕಡಮೆ ಮದ್ರಾಸ್ ಸರ್ಕಾರದವರು ಒಪ್ಪಿಕೊಂಡಿದ್ದಾರೆ: ಬಹು ಮುಖ್ಯವಾದ ಸೂಚನೆ ಏನೆಂದರೆ ದಕ್ಷಿಣದಲ್ಲಿರುವ ಎಲ್ಲಾ ರಾಜ್ಯ ಸರ್ಕಾರಗಳು ಸಭೆ ಸೇರಿ ಸಾಮಗ್ರಿಗಳನ್ನು ಮಾರುವುದಕ್ಕೆ ಹಾಕುವ ತೆರಿಗೆ ವಿಚಾರದಲ್ಲಿ ಏಕಪ್ರಕಾರವಾದ ಶಾಸನವನ್ನು ತರುವುದಕ್ಕೆ ಏರ್ಪಾಡು ಮಾಡಬೇಕೆಂದಿದೆ. ಸಮಿತಿ ಸಿಫಾರಿಸ್ಸು

(ಶ್ರೀ ಎಂ. ಸಿ. ನರಸಿಂಹನ್)

ನಮ್ಮನ್ನು ಬಂಧಿಸುತ್ತದೆ ಎಂದು ಹೇಳುತ್ತಾ ಇಲ್ಲ. ಆದರೂ ಕೂಡ ಅದು ಯೋಗ್ಯವಾದ ಸಲಹೆಯಾಗಿರುವುದರಿಂದ ಅದನ್ನು ಕೂಡ ನಮ್ಮ ಸರ್ಕಾರದವರು ಪರಿಶೀಲನೆ ಮಾಡಬೇಕಾಗಿತ್ತು. ಅದಕ್ಕೆ ಬದಲಾಗಿ ಈ ತಿದ್ದುಪಡಿಯು ಶಾಸನವನ್ನು ತಂದು ಅವಸರ ಅವಸರವಾಗಿ ಮಾಡುತ್ತಿದ್ದಾರೆ. ಎಕ್ಸೈಜ್ ಡ್ಯೂಟಿ ಬಿಟ್ಟರೆ ಬಾಕಿ ಯಾವುದೂ ಅವಶ್ಯಕವಿಲ್ಲ. ಹೊಗೆ ಸೊಪ್ಪು, ಸಕ್ಕರೆ ಮತ್ತು ಟೆಕ್ಸ್‌ಟೈಲ್ಸ್ ಈ ಮೂರು ಸಾಮಗ್ರಿಗಳ ಮೇಲೆ ಎಕ್ಸೈಜ್ ಡ್ಯೂಟಿ ಎಷ್ಟಾಗುತ್ತದೆ? ಮತ್ತು ನಮ್ಮಪಾಲು ಎಷ್ಟು ಹೆಚ್ಚಿಗೆ ಬರುತ್ತದೆ ಎನ್ನುವುದು ಮುಖ್ಯ. ನನಗೆ ತಿಳಿದಮಟ್ಟಿಗೆ ಫೈನಾನ್ಸ್ ಕಮಿಷನ್ ಅವರ ತೀರ್ಮಾನದ ಪ್ರಕಾರ ಅಖಿಲ ಭಾರತದಲ್ಲಿ ಎಕ್ಸೈಜ್ ಡ್ಯೂಟಿ ಎಷ್ಟು ಬರುತ್ತದೋ ಅದರಲ್ಲಿ ಶೇಕಡ 25ರಷ್ಟು ರಾಜ್ಯ ಸರ್ಕಾರಗಳಿಗೆ ಹೋಗತಕ್ಕದ್ದು ಎಂದೂ ಆ ಶೇಕಡ 25 ಅಂಶದಲ್ಲಿ ನಮಗೆ ಬರುವುದು ಐದೂವರೆ ಪರ್ಸೆಂಟ್ ಎಂದು ಹೇಳಿದೆ. ಇದು ಎಲ್ಲಾ ಎಕ್ಸೈಜ್ ಡ್ಯೂಟಿಗೂ ಅನ್ವಯಿಸುತ್ತದೆ. ಸಕ್ಕರೆ, ಟೆಕ್ಸ್‌ಟೈಲ್ಸ್ ಮತ್ತು ಟೊಬ್ಯಾಕೋ ಪ್ರಾಡಕ್ಟ್ಸ್ ಮೇಲೆ ಬರುವ ಎಕ್ಸೈಜ್ ಡ್ಯೂಟಿಯನ್ನು ಹೊಸದಾಗಿ ಬಿಟ್ಟುಕೊಡಬೇಕೆಂದು ಹೇಳುತ್ತಿದ್ದಾರೆ. ಆ ವಿಷಯದಲ್ಲಿ ನಮ್ಮ ರಾಜ್ಯ ಸರ್ಕಾರಕ್ಕೆ ಎಷ್ಟು ಬರುತ್ತದೆ ಎಂದು ನೋಡಿದರೆ ಹೊಸ ಪ್ಲಾನ್ ಪ್ರಕಾರ ಫೈನಾನ್ಸ್ ಕಮಿಷನ್‌ರವರ ತೀರ್ಮಾನದ ಪ್ರಕಾರ ನಮಗೆ ಎಷ್ಟು ಪ್ರಮಾಣದಲ್ಲಿ ಬರುತ್ತದೋ ಅದು ಡಿಸೆಂಬರ್ 14ನೆಯ ತಾರೀಖಿನವರೆಗೆ ಈ ಬಾಬಿನಲ್ಲಿ ಬರುತ್ತಿದ್ದ ಪ್ರಮಾಣದಲ್ಲೇ ಬರುತ್ತದೆ ಎಂಬುದು ಸ್ಪಷ್ಟವಾಗಿಲ್ಲ. ಅಷ್ಟೂ ಬರಲಾರದು. ಅದಕ್ಕಿಂತ ಕಡಿಮೆಯಾಗುವಂಥ ಅಪಾಯ ಇದೆ. ಫೈನಾನ್ಸ್ ಕಮಿಷನ್ ಸಲಹೆಯ ಪ್ರಕಾರ ನಮ್ಮ ಎಕ್ಸೈಜ್ ಡ್ಯೂಟಿ ಭಾಗ ಸೇಲ್ಸ್ ಟ್ಯಾಕ್ಸ್ ಬಾಬಿನಿಂದ ಎಷ್ಟು ಹಣ ಬರಬೇಕಾಗಿತ್ತೋ ಅದಕ್ಕಿಂತ ಕಡಮೆ ಬರುತ್ತದೆ. ಆದ್ದರಿಂದ ನಮಗೆ ಈ ಶಾಸನದಿಂದ ನಮ್ಮ ಆರ್ಥಿಕ ಪರಿಸ್ಥಿತಿಗೆ ಧಕ್ಕೆ ಬರುವ ಪ್ರಸಂಗವಿದೆ ಎಂದು ನನಗೆ ಸಮಾಚಾರ ಬಂದಿದೆ. ಆ ವಿಚಾರವನ್ನು ಕೂಡ ಮಾನ್ಯ ಸಚಿವರು ಶಾಸನವನ್ನು ಮಂಡಿಸುವಾಗ ಹೇಳಿದ್ದರೆ ಚೆನ್ನಾಗಿತ್ತು. ಮತ್ತು ಇದನ್ನು ಅರ್ಥಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತಿತ್ತು. ಅನಂತರ ಇದಕ್ಕೆ ಫೈನಾನ್ಸ್ ಮಿನಿಷ್ಟರ್ ಒಪ್ಪಿಗೆ ಕೊಡುವಾಗ ಈ ವಿಷಯವನ್ನು ಕೂಡ ಪ್ರಸ್ತಾಪಿಸಬಹುದಾಗಿತ್ತು. ಇದನ್ನು ಪ್ರಸ್ತಾಪ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ.

ಇನ್ನೊಂದು ವಿಷಯ ನಾವು ಕೆಲವರು ತಿದ್ದುಪಡಿಯನ್ನು ಸೂಚಿಸಿದ್ದೆವು. ಸೆಕ್ಷನ್ಸ್ 17 ಮತ್ತು 18 ಅನ್ನು ಅಮೆಂಡ್ ಮಾಡತಕ್ಕ ಈ ಸಂದರ್ಭವನ್ನು ಉಪಯೋಗಿಸಿ 5ನೆಯ ಷೆಡ್ಯೂಲಿನಲ್ಲಿ ಬದಲಾವಣೆ ಮಾಡಬಹುದಾಗಿತ್ತು. ಪುಸ್ತಕದ ವಿಷಯದಲ್ಲಿ ವಿನಾಯಿತಿ ಕೊಡಬೇಕು ಎಂದು ಮಾನ್ಯ ಅರ್ಥಸಚಿವರು ತತ್ವಕ್ಕೆ ಒಪ್ಪಿದರು. ಮತ್ತು ಆಶ್ವಾಸನೆ ಕೊಟ್ಟಿದ್ದಾರೆಂದು ಗೊತ್ತಾಗುತ್ತದೆ. ಇವೇ ಮೊದಲಾದ ಕೆಲವು ತಿದ್ದುಪಡಿಗಳನ್ನು ಇದರಲ್ಲಿ ಸೂಚಿಸಿ ಸಣ್ಣಪುಟ್ಟ ವ್ಯಾಪಾರಸ್ಥರಿಗೆ ಇರಬೇಕಾದಂಥ ತೊಂದರೆಯನ್ನು ಇನ್ನು ಕಡಮೆ ಮಾಡುವುದಕ್ಕೆ ಈ ಸಂದರ್ಭವನ್ನು ಉಪಯೋಗಿಸಿಕೊಳ್ಳಬಹುದಾಗಿತ್ತು. ಆದರೆ ಸರ್ಕಾರದವರು ಇದನ್ನು ಉಪಯೋಗಿಸದೇ ಇರುವುದು ಬಹಳ ವಿಷಾದಕರ ಎಂದು ಹೇಳಿ ನಾನು ನನ್ನ ನಾಲ್ಕಾರು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯ್ಕನಹಳ್ಳಿ).—ಸೇಲ್ಸ್‌ಟ್ಯಾಕ್ಸ್ ಅಮೆಂಡ್‌ಮೆಂಟ್ ವಿಚಾರದಲ್ಲಿ ನಿಜವಾಗಿ ಸರ್ಕಾರದವರು ಈ ಬಿಲ್ಲನ್ನು ಮಂಡಿಸಿದುದಕ್ಕಾಗಿ ನನಗೆ ಒಂದು ತರಹದ ದುಃಖವಾಗುತ್ತದೆ. ಸರ್ಕಾರದವರು ಈ ಬಾಬಿನಲ್ಲಿ ಎಷ್ಟುಹಣ ನಿರೀಕ್ಷಣೆ ಮಾಡಿದ್ದಾರೆಯೋ ಅದಕ್ಕಿಂತ ಜಾಸ್ತಿ ಬರುತ್ತದೆ ಎಂದು ನನಗೆ ಫಿಗರ್ಸ್ ಹೇಳಬಹುದು. ಆದರೆ ಶ್ರೀ ಮರಿಯಪ್ಪನವರು ಈ ಸೇಲ್ಸ್ ಟ್ಯಾಕ್ಸ್ ಮಸೂದೆಯನ್ನು ಮಂಡಿಸುವಾಗ ಆರು ಕೋಟಿ ಬರಬಹುದು ಎಂದು ಹೇಳಿದ್ದರು. ಈಗ ವರಮಾನ ಏಳು ಕೋಟಿ ರೂಪಾಯಿಗಳನ್ನು ಅವರಾಗಿಯೇ ತೋರಿಸಿದ್ದಾರೆ. ನನ್ನ ಅಂದಾಜಿನ ಪ್ರಕಾರ 10 ಕೋಟಿ ಬರುತ್ತದೆ. ಕೊನೆಯದಾಗಿ ಎಂಟು ಕೋಟಿಯಾದರೂ ಬರುತ್ತದೆ. ಹಾಗೆ ಇದ್ದರೂ ಕೂಡ ಹೊಸ ಹೊಸದಾಗಿ. . . .

Sri T. MARIAPPA (Minister for Finance).—I have estimated only Rs. 580 lakhs. Please see the figures.

Sri C. K. RAJAIAH SETTY (Chicknaikanahalli).—But to that we have to add what we get from the Centre.

Sri T. MARIAPPA.—One crore and odd rupees do not merely relate to cloth but also sugar and tobacco. It does not exceed that amount.

Sri C. K. RAJAIAH SETTY.—Budget is only a probable estimation. I am sure that the Government will get more.

Sri T. MARIAPPA.—My friend is mistaken. This time I have got a separate heading. It does not exceed Rs. 580 lakhs.

Sri C. K. RAJAIAH SETTY.—It is only an estimate.

Sri T. MARIAPPA.—For the convenience of the Members, a separate Head is given for Sales Tax and sales tax is the largest slice of taxable revenue.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಆದುದರಿಂದ ಖಂಡಿತವಾಗಿಯೂ ಇದರಿಂದ ಅದನ್ನು ತೆಗೆದುಬಿಡಬೇಕು. 'ಎಲೆಕ್ಟ್ರಿಕಲ್ ಎನರ್ಜಿ' ಎನ್ನುವುದನ್ನೂ ಸಹ ವಿನಾಯಿತಿ ಮಾಡಬೇಕೆಂದು ಶ್ರೀಮಾನ್ ನರಸಿಂಹನ್‌ರವರು ಹೇಳಿದರು. ಆದರ ಜೊತೆಗೆ ಇನ್ನೂ ಕೆಲವು ಪದಾರ್ಥಗಳನ್ನು ಸೇರಿಸಬೇಕಾಗಿದೆ. ವಿದ್ಯಾರ್ಥಿಗಳು ಓದತಕ್ಕ ಪುಸ್ತಕಗಳನ್ನೂ ವಿನಾಯಿತಿ ಮಾಡಲು ಯೋಚನೆ ಮಾಡುತ್ತೇವೆಂದು ಹೇಳಿದ್ದರು. ಅದನ್ನೂ ವಿನಾಯಿತಿ ಪಟ್ಟಿಗೆ ಸೇರಿಸಿದರೆ ಒಳ್ಳೆಯದು.

Sri T. MARIAPPA.—It is under consideration.

Sri C. K. RAJAIAH SETTY.—That consideration should have been in time.

ಒಂದು ಹೊಸ ಕಾನೂನನ್ನು ಜಾರಿಗೆ ತಂದಾಗ ಅನೇಕ ನ್ಯೂನತೆಗಳು ಅನುಭವಕ್ಕೆ ಬರುತ್ತವೆ. ಅಂಥಾ ಅನುಭವ ಬಂದಾಗ ಪುನಃ ಪರಿಶೀಲನೆ ಮಾಡಿ ಈ ಮಸೂದೆಯನ್ನು ಸರಿಮಾಡಲು ಏನು ಅವಕಾಶ ಮಾಡಬಹುದಾಗಿತ್ತೋ ಅದನ್ನು ಮಾಡಬೇಕಾಗಿತ್ತು. ಏಳು

ಷೆಡ್ಯೂಲುಗಳನ್ನು ಮೂರು ಅಥವಾ ನಾಲ್ಕಕ್ಕೆ ಇಳಿಸದೇ ಹೋದರೆ ಬಹಳ ತೊಂದರೆಯಾಗುತ್ತದೆ. ಅಲ್ಲದೆ Composition 20 ಸಾವಿರದಿಂದ 30 ಅಥವಾ 40 ಸಾವಿರಕ್ಕೆ ಏರಿಸಿದರೆ ಅನುಕೂಲವಾಗುತ್ತದೆ. ಇಲ್ಲವಾದರೆ, ಸಂಪಾದನೆ ಮಾಡುವುದೆಲ್ಲ ಲೆಕ್ಕಗಳನ್ನಿಡಲು ಸಿಬ್ಬಂದಿಗೆ ಖರ್ಚಾಗುತ್ತದೆ. ಆದುದರಿಂದ ಈ ತಿದ್ದುಪಡಿಗಳನ್ನು ಮಾಡುತ್ತಾರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಎಸ್. ಮುನಿರಾಜು (ಚಿಕ್ಕಬಳ್ಳಾಪುರ).—ಸ್ವಾಮಿ, ಈ ಮಸೂದೆಯನ್ನು ಸ್ವಾಗತಿಸುತ್ತ ಕೆಲವು ಸೂಚನೆಗಳನ್ನು ಕೊಡಲಿಚ್ಛಿಸುತ್ತೇನೆ. ಈ ತಿದ್ದುಪಡಿ ಮಸೂದೆಯನ್ನು ಮಂಡಿಸುವಾಗ, ಕೇಂದ್ರ ಸರ್ಕಾರದವರು ಬಟ್ಟೆ, ತಂಬಾಕು, ಸಕ್ಕರೆ ಮುಂತಾದ ವಸ್ತುಗಳ ಮೇಲೆ ಸುಂಕವನ್ನು ಹಾಕುವುದರಿಂದಲೂ ಅದರಲ್ಲಿ ಬರುವ ಉತ್ಪತ್ತಿಯಲ್ಲಿ ಒಂದು ಭಾಗ ನಮಗೆ ಬರುವುದರಿಂದಲೂ ಆ ವಸ್ತುಗಳನ್ನು ಇಲ್ಲಿ ವಿನಾಯಿತಿ ಮಾಡಬೇಕಾಗಿದೆ ಎಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಒಂದು ಆರ್ಡಿನೆನ್ಸ್ ತಂದ ಕೆಲವು ದಿನಗಳಲ್ಲೇ ಮತ್ತೊಂದು ಆರ್ಡಿನೆನ್ಸ್ ತಂದು ಪುನಃ ಅದರ ಬಗ್ಗೆ ಈ ಅಧಿವೇಶನದಲ್ಲಿ ಈ ಮಸೂದೆಯನ್ನು ಏಕೆ ತಂದರು, ಆಗಲೇ ಮಸೂದೆಯನ್ನು ತರಬೇಕಾಗಿತ್ತು ಎಂದು ಅನೇಕರು ಹೇಳಿದರು. ನಾನು ಕೂಡ ಸರ್ಕಾರವನ್ನು ಅದೇ ರೀತಿ ಮಾಡಬೇಕಾಗಿತ್ತೆಂದು ಪ್ರಾರ್ಥಿಸುತ್ತೇನೆ. ಪದೇ ಪದೇ ಆರ್ಡಿನೆನ್ಸ್ ತರುವುದರಿಂದ ಅದರ ಪ್ರಾಮುಖ್ಯತೆ ಹೊರಟುಹೋಗುತ್ತದೆ, ಯಾವಾಗ ಅತ್ಯಗತ್ಯವೋ ಆಗ ಮಾತ್ರ ತರುವುದು ಸೂಕ್ತವೆಂದು ನಾನು ಕೂಡ ಭಾವಿಸುತ್ತೇನೆ. ಆದರೂ ನಮ್ಮ ಸರ್ಕಾರದವರು ಕೇವಲ ಕೆಲವೇ ತಿಂಗಳಲ್ಲಿ ಸೇಲ್ಸ್ ಟ್ಯಾಕ್ಸ್ ಕಾನೂನಿನಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಬೇಕೆಂದು ಮನಗಂಡು ಈ ಮಸೂದೆಯನ್ನು ತಂದಿದ್ದಾರೆ, ಇದಕ್ಕಾಗಿ ಅಭಿನಂದಿಸುತ್ತೇನೆ.

ನಾನಾ ಹಂತಗಳಲ್ಲಿ ಕೆಲವು ತಿದ್ದುಪಡಿಗಳಾಗಬೇಕಾಗಿವೆಯೆಂದು ಅನೇಕ ಸದಸ್ಯರು ಹೇಳಿದ್ದಾರೆ. ಪುಸ್ತಕಗಳ ವಿಷಯದಲ್ಲಿ ರಿಯಾಯಿತಿ ಕೊಡುವ ವಿಚಾರ ಪರಿಶೀಲನೆಯಲ್ಲಿದೆ ಎಂದು ಸಚಿವರು ಹೇಳಿದರು. ದೇಶದಲ್ಲಿ ಇದರಿಂದ ಏನೇನು ತೊಂದರೆ ಇದೆ ಎಂಬುದನ್ನೆಲ್ಲಾ ನೋಡಿ, ಎಲ್ಲವನ್ನೂ ಪರಿಶೀಲಿಸಿ ಒಂದೇ ಸಾರಿ ಏನೇನು ತಿದ್ದುಪಡಿಗಳನ್ನು ತರಬೇಕೋ ಅವುಗಳನ್ನೆಲ್ಲ ಒಮ್ಮೆಗೆ ತಂದಿದ್ದರೆ ಚೆನ್ನಾಗಿತ್ತು.

Sri T. MARIAPPA.—Sir, I would like to correct the impression in the minds of the Hon'ble Members. This is purely to replace the Ordinance which was inevitable in the circumstancs which prevailed. All States have promulgated Ordinances in this respect because they wanted to keep the whole thing in secret. On 14th December, if my friends can kindly recollect, all States promulgated Ordinances; otherwise, there would have been a lot of confusion and people would have made a lot of money. To prevent that we were all kept informed not to divulge this and we received a telegram from the Centre to keep this as a secret. A comprehensive legislation to correct the mistakes is under consideration. There was an amendment during the last session to exempt books. We did not bring it in this Bill becase this is purely to replace the Ordinance. All States have done it. Therefore, let there be no impression that we want to have Ordinances often. Far, far from it. Only in emergent cases where it is not possible to disclose things, we will do it. Kerala has done it; Madras has done it. Therefore, the criticism that we ought not to have promulgated the Ordinance is not correct. Sir, one step further we have gone. Because there were representations from all parts with regard to garlic, gur, onion, potatoes, etc., which are perishable items, we have included them. There is nothing else.

ಶ್ರೀ ಎಸ್. ಮುನಿರಾಜು.—ಮಾನ್ಯ ಮಂತ್ರಿಗಳು ಹೇಳಿದವಿಚಾರವನ್ನು ಅನುಮೋದಿಸುತ್ತೇನೆ. ಮುಖ್ಯವಾಗಿ, ಈ ಮಸೂದೆಯು ಎರಡನೆಯ ಕ್ಲಾಜಿನಲ್ಲಿ garlics, gur, onions, potatoes, pulses, sweet potatoes ಮುಂತಾದ ಪದಾರ್ಥಗಳನ್ನು ಸೇರಿಸಿದ್ದೇವೆಂದು ಹೇಳಿದ್ದಾರೆ. ಈ ವಿಷಯವಾಗಿ ನಾನು ವಿನಂತಿ ಮಾಡಿಕೊಳ್ಳಬೇಕಾಗಿದೆ. ಆಂಧ್ರ ಮತ್ತು ಮದರಾಸು ಪ್ರಾಂತಗಳಲ್ಲಿ ಈ ಪದಾರ್ಥಗಳಿಗೆ ಯಾವ ಸುಂಕವೂ ಇಲ್ಲ. ನಮ್ಮಲ್ಲಿ ಮಾತ್ರ ಹಾಕುವುದರಿಂದ ತೊಂದರೆಯಾಗುತ್ತದೆಂದು ಇದಕ್ಕೆ ವರ್ತಕರು ವಿನಾಯಿತಿ ಕೇಳುತ್ತಾರೆ. ಈ ಕೆಲವು ಸರಕುಗಳ ಮಾರಾಟ ಇಲ್ಲಿ ಆಗುವುದಕ್ಕಿಂತ ಬಹುಭಾಗ ಹೊರ ಪ್ರಾಂತಗಳಿಗೆ ಹೋಗುತ್ತದೆ. ಸೇಕಡ 90-95 ರಷ್ಟು ವ್ಯಾಪಾರ ಹೊರ ಪ್ರಾಂತಗಳವರೇ ನಡೆಸುವುದರಿಂದ ನಮಗೇನೂ ಇದರಿಂದ ಪ್ರಯೋಜನವಾಗುವುದಿಲ್ಲ. ಸೇಲ್ಸ್ ಟ್ಯಾಕ್ಸ್ ನಮಗೆ ಬರುವುದಿಲ್ಲ. ಇಲ್ಲಿ ಮಾತ್ರ ಸೇಕಡ ಒಂದರಷ್ಟು ಸುಂಕ ಹಾಕುವುದರಿಂದ ಅಲ್ಲಿನವರು ತಪ್ಪಿಸಿಕೊಳ್ಳುತಾರೆ, ಇಲ್ಲಿನವರು ಮಾತ್ರ ಕೊಡಬೇಕಾಗುತ್ತದೆ. ಆದುದರಿಂದ ಹೊರ ಪ್ರಾಂತಗಳಲ್ಲಿರುವ ರೀತಿ ಈ ಪದಾರ್ಥಗಳಿಗೆ ಯಾವತೆರಿಗೆಯೂ ಇಲ್ಲದಂತೆ ಮಾಡಬೇಕು. ಹಿಂದೆ ಸ್ಲ್ಯಾಬ್ ರೇಟ್ ಎಂದು ಆಲೂಗಡ್ಡೆಯ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕಿದರು. ಆ ಮೇಲೆ ಇದನ್ನು ಆಹಾರ ವಸ್ತು ಎಂದು ಪರಿಗಣಿಸಿದ್ದರಿಂದ ಒಂದು ಲಕ್ಷರೂಪಾಯಿ ಟರ್ನ್ ಓವರ್ ಆಗುವುದಕ್ಕೆ 35 ರೂಪಾಯಿ ಹಾಕಿದರು. ಆ ಮೇಲೆ ಅದನ್ನು 25 ರೂಪಾಯಿಗೆ ಇಳಿಸಿದರು. ಇದನ್ನು ಹಾಕುವುದರಿಂದ ತೊಂದರೆಯಾಗುತ್ತದೆಂದು ಹೇಳಿದ ಮೇಲೆ ಪುನಃವಿನಾಯಿತಿ ಕೊಟ್ಟರು. ಹೀಗೆ, ವಿನಾಯಿತಿ ಇತ್ತು. 1957 ರಲ್ಲಿ ಸೇಕಡ 2 ರಂತೆ ತೆರಿಗೆ ಹಾಕಿ ಈಗ ಸೇಕಡ ಒಂದರಷ್ಟು ಕಡಮೆ ಮಾಡಿದ್ದೇವೆಂದು ಹೇಳುತ್ತಾರೆ. ಹೀಗೆ ಒಂದರಷ್ಟು ಕಡಮೇ ಮಾಡಿದ್ದರಿಂದ ಯಾವರೀತಿಯಲ್ಲಿಯೂ ಲಾಭವಾಗುವುದಿಲ್ಲ. ಹೊರಪ್ರಾಂತಗಳಲ್ಲೇ ಇದರವ್ಯಾಪಾರ ಹೆಚ್ಚು ನಡೆಯುತ್ತಿರುವುದರಿಂದ ಪೂರ್ತಿ ಅಲ್ಲಿರುವಂತೆ ಇಲ್ಲಿಯೂ ವಿನಾಯಿತಿಕೊಡಬೇಕು. ಸ್ಲ್ಯಾಬ್ ರೇಟ್ ಹಾಕುವುದ

(ಶ್ರೀ ಎಸ್. ಮುನಿರಾಜು)

ರಿಂದ ನಮಗೆ ಹೆಚ್ಚು ತೆರಿಗೆ ಬರುತ್ತದೆ. ಅದನ್ನು ಬಿಟ್ಟು ಈಗ ಮಾಡಿರುವ ಪ್ರಕಾರ ನಮ್ಮ ಬೊಕ್ಕಸಕ್ಕೆ ಹಣಬರುವುದಿಲ್ಲ. ಇನ್ನೂ ಕೆಲವು ವಿಷಯಗಳು ಆಲೋಚನೆಯಲ್ಲಿವೆ ಎಂದು ಹೇಳಿದರು. ಹಿಂದಿನ ಕಾನೂನುಗಳಲ್ಲಿ ಯಾವರೀತಿ ಮಾಡಿದ್ದರು ಎಂಬುದನ್ನು ನೋಡಿ, ಹೊರಪ್ರಾಂತಗಳಲ್ಲಿರುವಂತೆ ಒಂದೇರೀತಿ ಇಲ್ಲಿಯೂ ಮಾಡುತ್ತಾರೆಂದು ನಂಬಿದ್ದೇನೆ.

ಶ್ರೀ ವೈ. ವೀರಪ್ಪ (ಹೊಳೇನರಸೀಪುರ).—ಮಾನ್ಯ ಅಧ್ಯಕ್ಷರೇ, 1958 ನೇ ಇಸವಿಯ ಮೈಸೂರು ಸಂಸ್ಥಾನದ ಮಾರಾಟ ತೆರಿಗೆಯ ತಿದ್ದುಪಡಿ ಮಸೂದೆಯನ್ನು ಸರ್ಕಾರದವರು ಈ ದಿನ ಮಂಡಿಸಿದ್ದಾರೆ. ಆದರೆ ಈ ಮಸೂದೆಯ ಸೆಕ್ಷನ್ 5 ರಲ್ಲಿ ಈ ರೀತಿ ಹೇಳಿದೆ :

"5. Levy of tax on sale or purchase of goods.—(1) Every dealer shall pay for each year tax on his total turnover at the rate of two per cent of such turnover."

ಇದರ ಪ್ರಕಾರ ಮೈಸೂರಿನಲ್ಲಿ ಮತ್ತು ಇಂಡಿಯಾ ದೇಶದ ಇತರ ಭಾಗಗಳಲ್ಲಿ ಹಣ್ಣಿನ ವ್ಯಾಪಾರ ಮಾಡತಕ್ಕಂಥ ಒಟ್ಟು ವ್ಯಾಪಾರಿಗಳೂ ಚಿಲ್ಲರೆ ವ್ಯಾಪಾರಿಗಳೂ ಸೇರಿಕೊಂಡಿದ್ದಾರೆ. ಇದರಲ್ಲಿ ಸೆಕ್ಷನ್ 8 ರ ಪ್ರಕಾರ ಹಣ್ಣಿನಮೇಲೆ ಸೇಲ್ಸ್ ಟ್ಯಾಕ್ಸ್ ವಿನಾಯಿತಿಯಾಗಿದ್ದರೂ ಕೂಡ ಷೆಡ್ಯೂಲ್ 5ರ ಪ್ರಕಾರ ಟರ್ನ್‌ಓವರ್ ಟ್ಯಾಕ್ಸ್ ಇದೆ. ಇದರಿಂದ ಹಣ್ಣಿನ ವ್ಯಾಪಾರಕ್ಕೂ, ಹಣ್ಣುಗಳನ್ನು ಬೆಳೆಯುವ ವ್ಯವಸಾಯಗಾರರಿಗೂ ಹೆಚ್ಚಿನಮಟ್ಟಿಗೆ ಧಕ್ಕೆ ಬರುವುದಲ್ಲದೆ ಹಣ್ಣುಗಳನ್ನು ತಿನ್ನುವವರಿಗೂ ಬಹಳಮಟ್ಟಿಗೆ ಧಕ್ಕೆ ಬರುತ್ತದೆ. ಅದರಲ್ಲಿಯೂ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೆಲವು ತಜ್ಞರು ಒಬ್ಬ ಮನುಷ್ಯ ಸಾಮಾನ್ಯವಾಗಿ ಒಂದೂವರೆ ಔನ್ಸ್ ತಿನ್ನಬೇಕು. ಆದರೆ ಒಬ್ಬ ಮನುಷ್ಯ ಸರಿಯಾದಮಟ್ಟಿದಲ್ಲಿ ದೇಹವನ್ನು ಬೆಳೆಸಿಕೊಂಡು ಆರೋಗ್ಯವನ್ನು ಕಾಪಾಡಿಕೊಳ್ಳಬೇಕಾದರೆ ಮೂರು ಔನ್ಸ್ ತಿನ್ನಬೇಕು, ತರಕಾರಿಗಳನ್ನು ಹತ್ತು ಔನ್ಸ್ ತಿನ್ನಬೇಕೆಂದು ಹೇಳಿರುವುದು ಅದರಲ್ಲಿ ಸೂಚನೆಯಾಗಿದೆ. ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಸ್ವಲ್ಪ ಪರಿಶೀಲನೆ ಮಾಡಿನೋಡಿದರೆ, ಟರ್ನ್‌ಓವರ್ ಟ್ಯಾಕ್ಸನ್ನು ಹಣ್ಣಿನ ವ್ಯಾಪಾರಿಗಳ ಮೇಲೆ ಹಾಕುವುದು ಹಣ್ಣನ್ನು ಮಾರುವವರಿಗೂ ಅಲ್ಲದೆ ಹಣ್ಣನ್ನು ತಿನ್ನುವವರಿಗೂ ತೊಂದರೆಯಾಗುತ್ತದೆ. ಅದು ಸರ್ಕಾರದ ಮತ್ತು ಇಂಡಿಯಾದೇಶದ ಇತರ ಪ್ರಾಂತಗಳಲ್ಲಿರತಕ್ಕಂಥ ಒಂದು ತತ್ವಕ್ಕೇ ವಿರೋಧವಾಗಿದೆ. ಉದಾಹರಣೆಗೆ ಹೇಳುವುದಾದರೆ, ಮದ್ರಾಸ್, ಆಂಧ್ರ ಪ್ರದೇಶ, ಬೊಂಬಾಯಿ ಮತ್ತು ಒರಿಸ್ಸಾ ದೇಶಗಳಲ್ಲಿ ಹಣ್ಣಿನ ವ್ಯಾಪಾರ ಮಾಡುವವರಿಗೆ ಈ ರೀತಿ ಟರ್ನ್‌ಓವರ್ ಟ್ಯಾಕ್ಸ್ ಇಲ್ಲ. ಆದ್ದರಿಂದ ಸೆಕ್ಷನ್ 5 ರಲ್ಲಿರತಕ್ಕಂಥ 'dealer' ಎಂಬ ಪದ ಹಣ್ಣುಗಳ ಒಟ್ಟು ವ್ಯಾಪಾರ ಮಾಡುವ ಮನುಷ್ಯನಿಗೆ ಅನುಸರಿಸುವುದರಿಂದ ಅನೇಕ ಜನಗಳಿಗೆ ತೊಂದರೆಯಾಗುತ್ತದೆ. ಹಣ್ಣು ಕಾಯಿಲೆಯಾಗಿರುವವರು ಮತ್ತು ಮಕ್ಕಳು ತಿನ್ನುವ ಪದಾರ್ಥವಾಗಿರುವುದರಿಂದ ಹಣ್ಣಿನಮೇಲೆ ಹಾಕಬಹುದಾದ ಈ ಟರ್ನ್‌ಓವರ್ ಟ್ಯಾಕ್ಸನ್ನು ತೆಗೆಯುವುದು ಉತ್ತಮವೆಂದು ಕಾಣುತ್ತದೆ. ನಾವು ಹಿಂದೆ ಈ ಮಾರಾಟತೆರಿಗೆಯ ಪ್ರಧಾನ ಮಸೂದೆಯನ್ನು ಇಲ್ಲಿ ಮಂಡಿಸಿದಾಗ ಬಹುಮಟ್ಟಿಗೆ ಇದನ್ನು ಟೀಕೆಮಾಡಿದ್ದೇವೆ ಮತ್ತು ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದೇವೆ.

ಇನ್ನು ಟರ್‌ಮೆರಿಕ್ ಅಂದರೆ ಅರಿಶಿನ ವಸ್ತುವಿನ ಮೇಲೆ ತೆರಿಗೆ ಹಾಕಲು ಹೊರಟಿದ್ದಾರೆ. ಇದು ದೇವರ ಪೂಜಾದಿ ಕೈಂಕರ್ಯಗಳಲ್ಲಿ ಮತ್ತು ಮುತ್ತೈದೆಯರಲ್ಲಿ ಬಳಕೆಯಲ್ಲಿರುವ ವಸ್ತು. ಇದರಮೇಲೆ ತೆರಿಗೆಹಾಕಬೇಕಾಗಿದೆ ಎಂದು ಈ ಮಸೂದೆಯಲ್ಲಿ ತಿಳಿಸಿದ್ದಾರೆ. ಇಂತಹ ನಾನಾತರಹಗಳಿಂದ ಸರ್ಕಾರಕ್ಕೆ ಆದಾಯವನ್ನು ಹೆಚ್ಚಿಸಿಕೊಳ್ಳುವ ಅಭಿಪ್ರಾಯವಿದೆಯೆಂದು ನಾನು ಹೇಳುತ್ತೇನೆ. ಈ ಸಭಾಸದಸ್ಯರು ಈ ಸಭೆಯಲ್ಲಿ ಹೇಳುವ ಸಲಹೆಗಳನ್ನು ಸರ್ಕಾರದವರು ಸ್ವಲ್ಪಮಟ್ಟಿಗಾದರೂ ಪರಿಗಣನೆಗೆ ತೆಗೆದುಕೊಳ್ಳದೆ, ಇಂತಹ ವಸ್ತುಗಳ ಮೇಲೆ ಟರ್ನ್‌ಓವರ್ ಟ್ಯಾಕ್ಸನ್ನು ಹಾಕಿರುವುದು ಬಹಳವಾಗಿ ಧಕ್ಕೆ ಬರುತ್ತದೆ.

ಇನ್ನು ಗೆಣಸು ಒಂದು ಆಹಾರ ಪದಾರ್ಥ. ನಮ್ಮ ರಾಜ್ಯದಲ್ಲಿ ಆಹಾರ ಅಭಾವವಿರುವ ಪ್ರದೇಶಗಳಲ್ಲಿರುವ ಅನೇಕ ಬಡ ಜನರು ಎಷ್ಟೋಸಾರಿ ಗೆಣಸನ್ನು ಸುಟ್ಟು ತಿನ್ನುವ ಪದ್ಧತಿಯಿದೆ. ಈ ರೀತಿಯಲ್ಲಿ ಜೀವನ ಮಾಡುವವರು ನಮ್ಮ ರಾಜ್ಯದಲ್ಲಿ ಬಹಳ ಜನ ಇದ್ದಾರೆ. ಸಾಮಾನ್ಯವಾಗಿ ಒಂದು ದಿವಸವೆಲ್ಲಾ ಒಂದು ಗೆಣಸಿನ ಗಡ್ಡೆಯನ್ನು ಸುಟ್ಟುತಿಂದು ಜೀವನ ಮಾಡಿಕೊಂಡಿರುವವರು ಎಷ್ಟೋ ಬಡಜನ ನಮ್ಮಲ್ಲಿ ಇದ್ದಾರೆಂದು ಹೇಳಿದರೆ ಏನೂ ತಪ್ಪಾಗಲಾರದು. ಇದು ಸರ್ಕಾರದ ನೀತಿಗೆ ವಿರೋಧವಾಗಿದೆ. ಈ ದೃಷ್ಟಿಯಿಂದ ಇಂತಹ ಆಹಾರ ಪದಾರ್ಥಗಳಮೇಲೆ ಹಾಕಿರತಕ್ಕ ತೆರಿಗೆಯನ್ನು ತೆಗೆಯುವುದು ಉತ್ತಮ, ಸರಳ, ಸೂಕ್ತ ಮತ್ತು ಉಚಿತ. ಸಾಮಾನ್ಯವಾಗಿ ಬೆಂಗಳೂರು ಮಾರ್ಕೆಟ್ಟಿನಲ್ಲಿ ಒಟ್ಟು ಹಣ್ಣಿನ ವ್ಯಾಪಾರಿಗಳ ಅಂಗಡಿಗಳಿಗೆ ಹೋಗಿ ನೋಡಿದರೆ, ಹೊರಗಡೆ ಪ್ರಾಂತಗಳಿಂದ ಬರುವ ಕಿತ್ತಲೆಹಣ್ಣು, ಬಾಳೆಹಣ್ಣು, ಸೇಬು ಮತ್ತು ಕಾಬೂಲ್ ಮುಂತಾದ ಪ್ರದೇಶಗಳಿಂದ ಬರುವ ಸಿಹಿ ದ್ರಾಕ್ಷಿ, ಬಹಳ ವಿರಳವಾಗಿ ಸಿಕ್ಕುತ್ತದೆ. ಈ ತೆರಿಗೆಯನ್ನು ಜಾರಿಗೆತರುವುದರಿಂದ, ನಮ್ಮ ಪಕ್ಕದ ಪ್ರಾಂತದವರು ಇಲ್ಲಿಗೆ ಹಣ್ಣನ್ನು ತರುವ ಸ್ಥಿತಿಯಲ್ಲಿಲ್ಲ. ಇದರಿಂದ ಹಣ್ಣಿನ ವ್ಯಾಪಾರಮಾಡುವ ಕೈಗಾರಿಕೆಗೆ ಧಕ್ಕೆ ಬರುತ್ತದೆ. ಈ ದೃಷ್ಟಿಯಿಂದಾದರೂ ಸರ್ಕಾರದವರು ಇದನ್ನು ಪರಿಶೀಲನೆಮಾಡಿ ಈ ಪದಾರ್ಥಗಳ ಮೇಲೆ ವಿಧಿಸಿರತಕ್ಕ ಟರ್ನ್‌ಓವರ್ ಟ್ಯಾಕ್ಸನ್ನು ತೆಗೆಯುವುದು ಬಹಳ ಉತ್ತಮವಾಗಿದೆಯೆಂದು ನನಗೆ ತೋರುತ್ತದೆ. ಆದ್ದರಿಂದ ಸರ್ಕಾರದವರು ಸೆಕ್ಷನ್ 5 ರಲ್ಲಿರುವುದನ್ನು ಸ್ವಲ್ಪಮಟ್ಟಿಗೆ ದುರಸ್ತುಮಾಡಿ ಹಣ್ಣಿನ ವ್ಯಾಪಾರ ಮಾಡುವವರಿಗೆ ಇದು ಅನ್ವಯಿಸುವುದಿಲ್ಲವೆಂದು ತಿದ್ದುಪಡಿಮಾಡಿದರೆ ಸ್ವಲ್ಪ ಮಟ್ಟಿಗೆ ಉತ್ತಮ ವಾಗುತ್ತದೆ. ಒಟ್ಟು ಹಣ್ಣಿನ ವ್ಯಾಪಾರಿಗಳು ಕೇವಲ ಶೇಕಡ 5-6 ಮಂದಿ ಇರಬಹುದು. ಉಳಿದವರೆಲ್ಲರೂ ಚಿಲ್ಲರೆಹಣ್ಣಿನ ವ್ಯಾಪಾರಿಗಳು. ಇವರು ಹಣ್ಣನ್ನು ಕೊಂಡುಕೊಂಡು ಹೋಗಿ ಜನಸಾಮಾನ್ಯರಿಗೆ ಹಂಚುತ್ತಾರೆ. ಅವರಲ್ಲಿ ಅವಿದ್ಯಾವಂತರು ಬೇಕಾದಷ್ಟು ಜನರಿದ್ದಾರೆ. ಅವರಿಗೆ ನಿಯಮಾವಳಿಗಳನ್ನನುಸರಿಸಿ ಲೆಕ್ಕಪತ್ರಗಳನ್ನಿಡುವುದಕ್ಕೆ ಆಗುವುದಿಲ್ಲ. ಅವರು ಮಾಡುವ ಅಲ್ಪಸ್ವಲ್ಪ ವ್ಯಾಪಾರದಲ್ಲಿ ಮತ್ತು ಅವರಿಗೆ ಬರುವ ಅಲ್ಪ ವರಮಾನದಲ್ಲಿ, ಲೆಕ್ಕಪತ್ರಗಳನ್ನಿಟ್ಟುಕೊಳ್ಳುವುದಕ್ಕೆ ಗುಮಾಸ್ತರನ್ನು ನೇಮಕಮಾಡಿಕೊಳ್ಳಲು ಶಕ್ತಿಯಿಲ್ಲ. ಅದರಿಂದ ಹೆಚ್ಚು ಹಣವ್ಯಯಮಾಡಬೇಕಾಗಿ ಬರುತ್ತದೆ.

ಈ ದೃಷ್ಟಿಯಿಂದ ತನಗೆ ಆದ ಖರ್ಚನ್ನು ಹಣ್ಣಿನ ಮೇಲೆ ಹಾಕಬೇಕಾಗುತ್ತದೆ. ಈ ತತ್ತ್ವದೃಷ್ಟಿಯಿಂದ ಹಣ್ಣಿನಮೇಲೆ ಹಾಕಿರತಕ್ಕ ಟರ್ನ್‌ಓವರ್ ಟ್ಯಾಕ್ಸನ್ನು ಕೇವಲ ಶೇಕಡ 3 ರಿಂದ ಶೇಕಡ ½ಕ್ಕೆ ತರುವುದರಿಂದ ನಿಜವಾಗಿಯೂ ಹಣ್ಣಿನವ್ಯಾಪಾರ ಮಾಡುವವರಿಗೆ ಬಹಳ ತೊಂದರೆಯಾಗುತ್ತದೆ. ಹಣ್ಣಿನ ಮೇಲೆ ಹಾಕುವ ತೆರಿಗೆಯನ್ನು ಪೂರ್ತಿಯಾಗಿ ತೆಗೆದುಬಿಟ್ಟರೆ ಜನಸಾಮಾನ್ಯರಿಗೆ ಹೆಚ್ಚು ಅನುಕೂಲವಾಗುವುದಲ್ಲದೆ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಪುಷ್ಟಿಕರವಾದ ಆಹಾರದ ವಿಷಯದಲ್ಲಿ ವೈಜ್ಞಾನಿಕರು ಹೇಳಿರುವ ಸಲಹೆಗಳಿಗೂ, ವೈದ್ಯರನೇಕರ ಅಭಿಪ್ರಾಯಕ್ಕೂ ಕೂಡ ವಿಶೇಷವಾಗಿ ಮನ್ನಣೆಕೊಟ್ಟಂತಾಗುತ್ತದೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Dr. R. NAGAN GOWDA (Hospet).-Sir, I wish to state that I agree with the views expressed by my Hon'ble friend from Chickballapur. The imposition of this tax on gur works real hardship on the people. The gur market is a very fluctuating one and as a result of that the people engaged in it are put to considerable loss at frequent intervals. I would, therefore, suggest to the Finance Minister that he should consider the question of exempting gur from this tax. However I am glad that he has reduced the tax from 2 per cent to 1 per cent.

There is another thing which I wish to bring to the notice of the Government. Sales tax has been collected on excise duty paid by the merchants purchasing sugar from the sugar factories. In spite of the fact that it is proposed to be exempted here, it has been collected already. I suggest that the sales tax that has been collected on the excise duty on sugar should be refunded to the sugar merchants. I, therefore, request the Finance Minister to issue the necessary orders.

Mr. SPEAKER.—The House will now rise and will meet after half-an-hour

---

The House adjourned for recess at Three of the Clock and re-assembled at Thirty Minutes past Three of the Clock.

[MR. SPEAKER in the Chair]

(*Quorum was formed at 3-35 p.m.*)

ಶ್ರೀ ಜಿ. ಎಚ್. ಪುಟ್ಟಣ್ಣ (ತುಮಕೂರು).—ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರದವರು ಈಗ ಮಂಡಿಸಿರತಕ್ಕ ತಿದ್ದುಪಡಿ ಬಹಳ ವ್ಯಸನಕರವಾಗಿದೆ. ಹಿಂದೆ ಪೂಜ್ಯ ಮಹಾತ್ಮ ಗಾಂಧಿಯವರು ಕುಡಿತವನ್ನು ತಪ್ಪಿಸಿ ಜನಗಳಿಗೆ ಒಳ್ಳೆಯದನ್ನು ಮಾಡಿ ಎಂದು ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಟ್ಟರು. ನಮ್ಮ ಸರ್ಕಾರದವರೂ ಅದನ್ನು ಒಪ್ಪಿಕೊಂಡರು. ತಕ್ಷಣ ದೇಶದಲ್ಲಿ ಕುಡಿತವನ್ನು ನಿಲ್ಲಿಸಿದರೆ ಸರ್ಕಾರಕ್ಕೆ ವರಮಾನ ಕಡಮೆಯಾಗುವುದೆಂದು ತಿಳಿದು ಕ್ರಮಕ್ರಮವಾಗಿ ಕುಡಿತವನ್ನು ನಿಲ್ಲಿಸಬೇಕು ಎಂದು ಯೋಚನೆ ಮಾಡಿದರು ಎಂದು ಕೇಳಿದ್ದೇನೆ. ಕುಡಿತವನ್ನು ತಪ್ಪಿಸಿ ಅದರಿಂದ ಸರ್ಕಾರಕ್ಕೆ ಕೊರತೆ ಬೀಳುವ ಆದಾಯವನ್ನು ಭರ್ತಿಮಾಡಲು ಮಾರಾಟ ತೆರಿಗೆಯನ್ನು ಹಾಕೋಣವೆಂದು ಯೋಚನೆ ಮಾಡಿದರು. ಮಾರಾಟ ತೆರಿಗೆಯನ್ನು ಹಾಕಿದ ಕೂಡಲೆ ಕುಡಿತವನ್ನು ತಪ್ಪಿಸುತ್ತೇವೆಂದು ಹೇಳಿದರು. ಕುಡಿತವನ್ನು ಕೆಲವುಕಡೆ ತಪ್ಪಿಸಿದರು, ಮತ್ತೆ ಕೆಲವುಕಡೆ ಇನ್ನೂ ಜಾಸ್ತಿ ಕುಡಿಯುವುದಕ್ಕೆ ಅವಕಾಶ ಕೊಟ್ಟರು. ಒಂದು ಕಡೆ ಕುಡಿಯುವುದಕ್ಕೆ ಅವಕಾಶಕೊಟ್ಟು ಕುಡಿಯಿರಿ ಎಂದು ಹೇಳುತ್ತಾರೆ, ಮತ್ತೊಂದುಕಡೆ ಕುಡಿಯಬೇಡಿ ಎಂದು ಹೇಳುತ್ತಾರೆ. ಈ ವಿಷಯ ಈ ಸಭೆಯಲ್ಲೂ ಮತ್ತು ಹಿಂದಿನ ಅಸೆಂಬ್ಲಿಯಲ್ಲೂ ಸಹ ಚರ್ಚೆಗೆ ಬಂದಿದೆ......

ಅಧ್ಯಕ್ಷರು.—ಈಗ ಆ ಪ್ರಶ್ನೆ ನಮ್ಮ ಮುಂದಿಲ್ಲ.

ಶ್ರೀ ಜಿ. ಎಚ್. ಪುಟ್ಟಣ್ಣ.—ಒಂದು analogy ಹೇಳುತ್ತಿದ್ದೇನೆ, ಅಷ್ಟೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಅದನ್ನೆಲ್ಲ ಹೇಳದೆ ಇದ್ದರೆ ಅವರ ಮನಸ್ಸಿಗೆ ಸಮಾಧಾನವಾಗುವುದಿಲ್ಲ. ಅದಕ್ಕೋಸ್ಕರ ಹೇಳುತ್ತಿದ್ದಾರೆ. ಹೇಳಲಿ.

ಶ್ರೀ ಜಿ. ಎಚ್. ಪುಟ್ಟಣ್ಣ.—ಗೋವಿನ ಕಥೆಯಲ್ಲಿ 'ಕೊಟ್ಟ ಭಾಷೆಗೆ ತಪ್ಪಲಾರೆನು, ಕೆಟ್ಟ ಯೋಚನೆ ಮಾಡಲಾರೆನು' ಎಂದು ಓದಿದ್ದು ಜ್ಞಾಪಕಕ್ಕೆ ಬರುತ್ತದೆ, ದನವೂಕೂಡ ಹೀಗೆ ಹೇಳಿದೆ, ಕಾಂಗ್ರೆಸ್ಸಿನವರು ಪ್ರೊಹಿಬಿಷನ್ ತೆಗೆಯುತ್ತೇವೆಂದು ವಾಗ್ದಾನ ಮಾಡಿದ್ದರು. ಅದರ ಜೊತೆಗೆ ಸೇಲ್ಸ್ ಟ್ಯಾಕ್ಸನ್ನು ಹಾಕಿ ಪ್ರೊಹಿಬಿಷನ್ನನ್ನು ನಿಲ್ಲಿಸಿಲ್ಲ.

ಮೊನ್ನೆತಾನೆ ಈ ಮಾರಾಟ ತೆರಿಗೆಯ ವಸೂಲಿಯ ವಿಚಾರದಲ್ಲಿ ಎಷ್ಟು ಹಣ ವಸೂಲಾಗಿದೆ, ಎಷ್ಟು ಬಾಕಿ ಬಿದ್ದಿದೆ ಎಂಬ ವಿಚಾರದಲ್ಲಿ ಸುಮಾರು 28 ಜನರಿಂದ ಸರ್ಕಾರಕ್ಕೆ 25 ಸಾವಿರಕ್ಕೆ ಮೇಲ್ಪಟ್ಟು ಬರಬೇಕಾದ ಬಾಕಿಯಿದೆಯೆಂದು ಗೊತ್ತಾಗಿದೆ. ನಮ್ಮ ಸರ್ಕಾರ ಅನುಸರಿಸುತ್ತಿರುವ ನೀತಿ ಹೇಗಿದೆಯೆಂದರೆ, "ಬಾಗಿಲಲ್ಲಿ ಹಾಳಾಗಿ ಹೋಗುವುದು ಹೋಗಲಿ. ಬಾದಲದಲ್ಲಿ ಹಾಳಾಗುವುದು ಬೇಡ" ಎಂದು ಹೇಳುವ ರೀತಿಯಲ್ಲಿದೆ. ಸರ್ಕಾರಕ್ಕೆ ಇರತಕ್ಕ ವರಮಾನ ಸರಿಯಾಗಿ ಬರುತ್ತಿಲ್ಲ. ಬರತಕ್ಕ ಉತ್ಪತ್ತಿ ಏನಿದೆಯೋ ಅದನ್ನೂ ಸಹ ಸರಿಯಾದ ಕ್ರಮದಲ್ಲಿ ವಸೂಲುಮಾಡುತ್ತಿಲ್ಲ. ಹಿಂದೆ ಮೈಸೂರು ಸಿಟಿಯಲ್ಲಿ ಈ ಬಾಬಿನಿಂದ ಸರ್ಕಾರಕ್ಕೆ ಮೂರು ಲಕ್ಷ ರೂಪಾಯಿಗಳಷ್ಟು ವರಮಾನವಿತ್ತು. ನಾನು ಹಿಂದೆ ಈ ಇಲಾಖೆಯಲ್ಲಿ ಕೆಲಸಮಾಡುತ್ತಿದ್ದಾಗ ಸುಮಾರು ಒಂದು ಸಾವಿರದ ನೂರ ಹನ್ನೆರಡು ಕೇಸುಗಳನ್ನು ಪತ್ತೆಮಾಡಿದ್ದೆ. ಒಬ್ಬನೇ ಒಬ್ಬ ವ್ಯಾಪಾರಿಯಿಂದ ಸರ್ಕಾರಕ್ಕೆ 25 ಸಾವಿರ ರೂಪಾಯಿಗಳ ತೆರಿಗೆ ನಷ್ಟವಾಗುತ್ತಿತ್ತು. ಅಂಥಾದ್ದನ್ನು ನಾನು ಪತ್ತೆ ಮಾಡಿ ಅಸೆಸ್‌ಮಾಡಿ ಒಂದೇ ಗಂಟಿನಲ್ಲಿ ವಸೂಲ್ಮಾಡಿದ್ದೆನು. ಆದುದರಿಂದ ಸರ್ಕಾರದವರು ಸೇಲ್ಸ್ ಟ್ಯಾಕ್ಸ್ ಆಫೀಸರುಗಳನ್ನು ನೇಮಕಮಾಡುವಾಗ ಅವರಿಗೆ ಈ ಕೇಸುಗಳನ್ನು ಪತ್ತೆ ಮಾಡುವ ಶಕ್ತಿ ಅವರಿಗಿದೆಯೋ,

(ಶ್ರೀ ಜಿ. ಎಚ್. ಪುಟ್ಟಣ್ಣ)

ಅವರು ಅಷ್ಟು ದಕ್ಷರಾಗಿರುತ್ತಾರೆಯೇ, ಅವರು ಅಷ್ಟು ನಿರ್ವಂಚನೆಯಿಂದ ಕೆಲಸ ಮಾಡುವರೇ ಎಂಬುದನ್ನೆಲ್ಲ ಪರಿಶೀಲನೆ ಮಾಡಬೇಕು. ಇದು ಒಂದು ಟೆಕ್ನಿಕಲ್ ಇಲಾಖೆ, ಆದುದರಿಂದ ಇದಕ್ಕೆ ಅಧಿಕಾರಿಗಳನ್ನು ಆರಿಸುವಾಗ......

ಶ್ರೀ ಟಿ. ಡಿ. ಮಾರಣ್ಣ (ಮಾಗಡಿ).—ನೀವು......

ಶ್ರೀ ಜಿ. ಎಚ್. ಪುಟ್ಟಣ್ಣ.—ನಾನು ಮಾತನಾಡುತ್ತಿರುವಾಗ ಬೇರೆಯವರು ಬಾಯಿ ಹಾಕಲು ನಾನು ಅವಕಾಶ ಕೊಡುವುದಿಲ್ಲ. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ತಡಕಿಕೊಂಡ ಅಂದ ಹಾಗೆ ಹೇಳಬೇಡಿ.

Mr. SPEAKER.—Order, order.

ಶ್ರೀ ಜಿ. ಎಚ್. ಪುಟ್ಟಣ್ಣ.—ಕುಂಬಳಕಾಯಿ ಕಳ್ಳ ಎಂದರೆ ಹೆಗಲುಮುಟ್ಟಿ ನೋಡಿ ಕೊಂಡ ಎನ್ನುವಂತೆ ಕೆಲವರಿಗೆ ಅಳುಕಾಗಬಹುದು. ಸುಮಾರು 612 ಕೇಸುಗಳು ರಿಜಿಸ್ಟರಾಗಿದ್ದಂಥವುಗಳಲ್ಲಿ ಒಬ್ಬ ಅಸಿಸ್ಟೆಂಟ್ ಸೇಲ್ಸ್ ಟ್ಯಾಕ್ಸ್ ಆಫೀಸರು ರಿಜಿಸ್ಟರಿನಿಂದ ವಜಾಮಾಡಿದ್ದಾರೆ. ಮುಂದಿನಕ್ರಮ ಕೈಗೊಳ್ಳದೆ ಹಾಗೆ ಬಿಟ್ಟುಬಿಟ್ಟಿದ್ದಾರೆ. ಆ ಸಂಗತಿ ನನಗೆ ಗೊತ್ತಿದೆ. ಸರ್ಕಾರ ಇಲ್ಲಿಯತನಕ ಆ ತಪ್ಪಿತಸ್ಥರ ಬಗ್ಗೆ ಏನೊಂದೂ ಕ್ರಮವನ್ನೂ ಕೈಗೊಂಡಿಲ್ಲ. ಇದರಿಂದ ಸರ್ಕಾರಕ್ಕೆ ಬರಬೇಕಾಗಿದ್ದ ಲಕ್ಷಾಂತರ ರೂಪಾಯಿಗಳ ವರಮಾನ ಹಾಳಾಗಿ ಹೋಗುತ್ತಿದೆ.

ಅಧ್ಯಕ್ಷರು.—ಈ ಸಂದರ್ಭದಲ್ಲಿ ಆ ವಿಚಾರಗಳೆಲ್ಲ ಹೇಗೆ ಬರುತ್ತವೆ?

ಶ್ರೀ ಜಿ. ಎಚ್. ಪುಟ್ಟಣ್ಣ.—ಬರುವುದರಿಂದಲೇ ನಾನು ಸೇರಿಸಿಕೊಂಡಿದ್ದೇನೆ. ಈ ಹಿಂದೆ ಮಾನ್ಯ ಮಂತ್ರಿಗಳು ದ್ವಿದಳ ಧಾನ್ಯಗಳ ಮೇಲೆ ಮಾರಾಟ ತೆರಿಗೆ ಹಾಕುವುದಿಲ್ಲ. ಬಿಟ್ಟುಬಿಡುತ್ತೇವೆ ಎಂಬುದಾಗಿ ಹೇಳಿದ್ದರು. ಆ ದಿವಸ ಆ ರೀತಿ ಹೇಳಿ ಈಗ ಬೆಳ್ಳುಳ್ಳಿಯಮೇಲೂ ಮಾರಾಟತೆರಿಗೆಯನ್ನು ವಿಧಿಸಿದ್ದಾರೆ. ಹಳ್ಳಿಗಾಡುಗಳಲ್ಲಿರತಕ್ಕ ಶೇಕಡ 75 ರಷ್ಟು ಜನರು ಇದನ್ನು ಉಪಯೋಗಿಸುತ್ತಾರೆ. ನೀರುಳ್ಳಿಯ ವಿಚಾರವೂ ಅಷ್ಟೆ. ಈ ಎರಡು ಸಾಮಾನುಗಳೂ ಹಳ್ಳಿಯ ಜನರಿಗೆ ತೀರಾ ಅತ್ಯಗತ್ಯವಾದುವುಗಳು. ಈ ವಿಚಾರಕ್ಕೆ ಮಾನ್ಯ ಮಂತ್ರಿಗಳ ಆತ್ಮ ಖಂಡಿತ ಒಪ್ಪಿಲ್ಲ. ಅವರಿಗೆ ಹಳ್ಳಿಗಳ ವಿಚಾರ ಚೆನ್ನಾಗಿ ಗೊತ್ತಿದೆ. ಆದಾಗ್ಯೂ ಅವರು ಇದಕ್ಕೆ ಹೇಗೆ ಒಪ್ಪಿದರೋ ನಾನು ಕಾಣೆ. ಆದರೆ ಇತ್ತೀಚೆಗೆ ಅರಿಶಿನಕ್ಕೂ ತೆರಿಗೆ ಹಾಕಿದ ಮೇಲೆ ಹೆಂಗಸರು ಇದರ ಉಪಯೋಗವನ್ನು ಬಹಳ ಕಡಿಮೆ ಮಾಡಿದ್ದಾರೆ. ಈ ಎಲ್ಲವಸ್ತುಗಳಿಗೂ ತೆರಿಗೆ ವಿನಾಯಿತಿಕೊಡುವುದಾಗಿ ಮಾನ್ಯ ಹಣಕಾಸಿನ ಮಂತ್ರಿಗಳು ಮಾತು ಕೊಟ್ಟಿದ್ದರು. ಅದನ್ನೀಗ ಅವರು ಉಳಿಸಿಕೊಳ್ಳಬೇಕೆಂದು ಕೇಳುತ್ತೇನೆ. ಆದರೆ ಕೆಲವುಕಡೆ ರಾಗಿ, ಜೋಳ ಇತ್ಯಾದಿ ಬೆಳೆಗಳಿಗೆ ನೀರುಹಾಯಿಸಿದಾಗ್ಯೂ ಅವುಗಳು ಬೆಳೆಯುವುದಿಲ್ಲ. ಅಂಥ ಸೀಜನ್ನಿನಲ್ಲಿ ಕೆಲವು ಕಡೆ ಗೆಣಸನ್ನು ಬೆಳೆಯುತ್ತಾರೆ. ಈ ದಿವಸ ಆ ಗೆಣಸಿಗೂ ಕೂಡ ಮಾರಾಟತೆರಿಗೆ ಹಾಕಿದ್ದಾರೆ. ಇಂಥ ಒಳ್ಳೆಯ ಬುದ್ಧಿಯನ್ನು ದೇವರು ಇವರಿಗೇಕೆ ಕೊಟ್ಟನೋ ನನಗೆ ಗೊತ್ತಾಗುತ್ತಿಲ್ಲ! ಕೋಲಾರ ಜಿಲ್ಲೆಯಲ್ಲಿ ಅನೇಕರಿಗೆ ಜಮೀನಿರುವುದಿಲ್ಲ. ಅವರಿಗೆ ಉದರಂಭರಣಕ್ಕೆ ಬೇರೆ ಕೆಲಸ ಸಿಕ್ಕುವುದಿಲ್ಲ. ಆ ಪ್ರದೇಶದ ಜಮೀನ್ದಾರರು ಕೂಲಿಕೊಟ್ಟು ಹಾಳಾಗಿ ಹೋಗಿದ್ದಾರೆ. ಅಂಥಾಪ್ರದೇಶದಲ್ಲಿ ಬೆಳೆಯತಕ್ಕದ್ದು ಈ ಗೆಣಸು. ಇದಕ್ಕೆ ತೆರಿಗೆ ಹಾಕಿದ್ದಾರೆ. ಬಾದಲದಲ್ಲಿ ಹೋಗುವುದನ್ನು ತಪ್ಪಿಸುವ ಬದಲು ಬಾಗಿಲಲ್ಲಿ ಹೋಗುವುದನ್ನು ಹಿಡಿದರೆ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳ ವರಮಾನ ಹೆಚ್ಚುತ್ತದೆ. ಆದರೆ ಈ ದಿವಸ ನಮಗೆ ಈ ಬಾಬಿನಿಂದ ಎಷ್ಟು ಉತ್ಪತ್ತಿ ಬರುತ್ತಿದೆಯೋ ಇದಕ್ಕೂ ಹೆಚ್ಚಿನ ಉತ್ಪತ್ತಿ ಬೇರೆ ಮಾರ್ಗದಲ್ಲಿ ವ್ಯಯವಾಗಿ ಹೋಗುತ್ತಿದೆ. ಇಲಾಖೆಗೆ ಹೆಚ್ಚು ಹಣ ವೆಚ್ಚವಾಗುತ್ತದೆ. ಕೆಲಸ ನಡೆಸಲು ತಕ್ಕ ಶಕ್ತಿ, ಸಾಮರ್ಥ್ಯಗಳಿಲ್ಲದ ಜನರನ್ನು ಕೆಲಸಕ್ಕೆ ಸೇರಿಸಿಕೊಂಡಿದ್ದಾರೆ. ಇದರಿಂದ ಇಲಾಖೆಯ ಅಡ್ಮಿನಿಸ್ಟ್ರೇಷನ್ ಹಾಳಾಗಿ ಹೋಗಿದೆ. ನಮ್ಮಲ್ಲಿ ಅನೇಕರು ಮಾಂಸಾಹಾರಿಗಳಲ್ಲ. ಅಂಥವರಿಗೂ ಕೂಡ ಈ ದಿವಸ ಬೇಳೆಗಳನ್ನಾದರೂ ಉಪಯೋಗಿಸೋಣವೆಂದರೆ ಅದಕ್ಕೂ ಸಹ ಅವಕಾಶವಿಲ್ಲ. ಬೇಳೆ ತಿನ್ನಬೇಕಾಗಿದ್ದರೂ ಅದಕ್ಕೂ ಟ್ಯಾಕ್ಸನ್ನು ಕೊಡಬೇಕಾಗಿದೆ. ಇದಕ್ಕೆಲ್ಲ ಮೂಲಕಾರಣ ರೈತರಲ್ಲಿ ಶೇಕಡ 70-80 ಜನರಲ್ಲಿ ಒಗ್ಗಟ್ಟಿಲ್ಲ. ಅವರಿಗೆ ಒಂದು ಮೀಟಿಂಗ್ ಕರೆಯುವ ಶಕ್ತಿಯಿಲ್ಲ. ಅದರ ಪರಿಣಾಮವೇ ಇದಕ್ಕೆಲ್ಲ ಅವಕಾಶ ನೀಡಿದೆ. ಆದರೆ ಇತ್ತೀಚೆಗೆ ಜತ್ತಿಸಮಿತಿಯ ವರದಿ ಹೊರಕ್ಕೆ ಬಂದನಂತರ ರೈತಾಪಿಜನರಲ್ಲಿ ಒಂದು ಸಂಘಟನಾಶಕ್ತಿ ಬೆಳೆಯುತ್ತಿರುವಂತೆ ಭಾಸವಾಗುತ್ತಿದೆ. ಆದರೆ ಅಂಥಾದ್ದಕ್ಕೆಲ್ಲ ಸರ್ಕಾರ ಅವಕಾಶ ಕೊಡಬಾರದು. ಅದಕ್ಕಾಗಿ ಸರ್ಕಾರದವರು ಈ ವಸ್ತುಗಳ ಮೇಲೆಲ್ಲಾ ವಿಧಿಸಿರುವ ಮಾರಾಟ ತೆರಿಗೆಯನ್ನು ಹೋಲ್-ಸೇಲಾಗಿ ವಜಾಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಈಗ ಸಭೆಯಮುಂದಿಟ್ಟರತಕ್ಕ ಮಾರಾಟ ತೆರಿಗೆಯ ತಿದ್ದುಪಡಿ ಮಸೂದೆಯ ವಿಚಾರದಲ್ಲಿ ನಾನು ಸರ್ಕಾರದವರಿಂದ ಒಂದೆರಡು ವಿಚಾರಗಳನ್ನು ತಿಳಿದುಕೊಳ್ಳಬೇಕಾಗಿದೆ. ಅದಕ್ಕಾಗಿ ನನಗೀಗ ಎರಡು ಮಾತುಗಳನ್ನಾಡತಕ್ಕ ಅಗತ್ಯ ಉಂಟಾಯಿತು. ಮಸೂದೆಯ ಕೊನೆಯಲ್ಲಿ ಕೊಟ್ಟಿರತಕ್ಕ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಒಂದು ಮಹತ್ತರವಾದಂಥ ವಿಚಾರ ತಿಳಿಸಿದ್ದಾರೆ. ಅದರಲ್ಲಿ ತಿಳಿಸಿರುವ ಪ್ರಕಾರ ಕೇಂದ್ರ ಸರ್ಕಾರದವರು ನಮ್ಮ ರಾಜ್ಯ ಸರ್ಕಾರಕ್ಕೆ ಈ ತೆರಿಗೆ ವಸೂಲ್ಮಾಡತಕ್ಕ ವಿಚಾರದಲ್ಲಿ ಒಂದು ಹೊಸ ರೀತಿನೀತಿಯನ್ನು ತಿಳಿಸಿದ್ದಾರೆ. ಅದರ ಪ್ರಕಾರ ಇನ್ನು ಮುಂದೆ ನಮ್ಮ ಸ್ಟೇಟ್ ಗೌರ್ನಮೆಂಟಿನವರು ಈ ಕೆಲವು ವಸ್ತುಗಳ ಮೇಲೆ ಮಾರಾಟ ತೆರಿಗೆಯನ್ನು ಹಾಕಿದ್ದೇ ಆದರೆ ಕೇಂದ್ರ ಸರ್ಕಾರದವರು ನಮ್ಮ ಸರ್ಕಾರಕ್ಕೆ ಈಗೇನು ಒಂದು ದಾಮೂಷಾ ಪ್ರಕಾರ ಆ ಎಕ್ಸೈಜ್ ಡ್ಯೂಟಿಯಲ್ಲಿ ಒಂದು ಭಾಗವನ್ನು ಕೊಡುತ್ತಿದ್ದಾರೋ ಅದಕ್ಕೆ ಮೇಲ್ಪಟ್ಟು ಕೊಡುವುದಿಲ್ಲ ಎಂಬುದಾಗಿ ತಿಳಿಸಿದ್ದಾರೆ. ಆ ಒಂದು ಅಡಿಷನಲ್ ಎಕ್ಸೈಜ್ ಡ್ಯೂಟಿ ನಮಗೆ ಬರುವುದಿಲ್ಲ ಎಂಬುದಾಗಿ ತಿಳಿಸಿದ್ದಾರೆ. ಹಾಗೇನಾದರೂ ಆ ಎಕ್ಸೈಜ್ ಡ್ಯೂಟಿಯಲ್ಲಿ ನಮಗೆ ಒಂದು ಅಡಿಷನಲ್ ಭಾಗ ಬರಬೇಕೆಂಬುದಾಗಿದ್ದರೆ ಇನ್ನು ಮುಂದಕ್ಕೆ ಸ್ಟೇಟ್ ಗೌರ್ನಮೆಂಟ್ ಈ ವಸ್ತುಗಳ ಮೇಲೆ ಹಾಕಿರತಕ್ಕ ಸೇಲ್ಸ್ ಟ್ಯಾಕ್ಸನ್ನು ಮನ್ನಾ ಮಾಡಬೇಕಾಗಿರುತ್ತದೆ. ಈ ಸಂದರ್ಭದಲ್ಲಿ ಸರ್ಕಾರದವರಿಂದ ನನಗೆ ಒಂದು ವಿಷಯ ತಿಳಿದುಕೊಳ್ಳಬೇಕಾಗಿದೆ. Statement of Objects and Reasons ನ ಪ್ರಾರಂಭದಲ್ಲೇ—

"The State should discontinue the levy of State Sales Tax on Textiles (other than the pure silk cloth), tobacco and its products

and sugar, so as to enable the Central Government to levy additional excise duties on these commodities and to distribute the proceeds to the various States"

ಎಂದು ಹೇಳಿದ್ದಾರೆ. ಆದರೆ ಈ ಸಂದರ್ಭದಲ್ಲಿ ನಾವು ಇಲ್ಲಿಯವರೆಗೂ ಈ ವಸ್ತುಗಳ ಮೇಲೆ ಸೇಲ್ಸ್ ಟ್ಯಾಕ್ಸನ್ನು ವಿಧಿಸುತ್ತಿದ್ದುದರಿಂದ ನಮಗೆಷ್ಟು ವರಮಾನ ಬರುತ್ತಿತ್ತು, ಇನ್ನುಮುಂದೆ ಈ ಬಾಬನ್ನು ಕೇಂದ್ರ ಸರ್ಕಾರಕ್ಕೆ ವಹಿಸಿದರೆ ಅವರಿಂದ ನಮಗೆ ಅಡಿಷನಲ್ ಎಕ್ಸೈಜ್‌ರೂಪದಲ್ಲಿ ಬರತಕ್ಕ ಮೊಬಲಗೆಷ್ಟು, ನಾವು ವಸೂಲ್ಮಾಡುತ್ತಿದ್ದ ಹಣಕ್ಕಿಂತ ಜಾಸ್ತಿಯಾಗಿ ಬರುತ್ತದೆಯೇ ಅಥವ ಅದಕ್ಕಿಂತ ಕಡಿಮೆಯಾಗಿರುತ್ತದೆಯೇ ಎಂಬ ಅಂಶವನ್ನು ಸರ್ಕಾರದವರು ಪರಿಶೀಲನೆ ಮಾಡಬೇಕಾಗಿದೆ. ಈ ಬಗ್ಗೆ ಯಾವ ವಿಚಾರವನ್ನೂ ಇಲ್ಲಿ ತಿಳಿಸಿಲ್ಲ. ಈ ಮುಖ್ಯ ವಿಚಾರವನ್ನು ಪರಿಶೀಲನೆ ಮಾಡದೆ ಏನೋ ಕೇಂದ್ರದವರಿಂದ ಒಂದು ವಿಚಾರ ಬಂದಿದೆ, ಅವರನ್ನು ತೃಪ್ತಿಪಡಿಸಲೇಬೇಕು, ಅದಕ್ಕಾಗಿ ಅದನ್ನು ಅಂಗೀಕಾರ ಮಾಡಿಕೊಂಡಿದ್ದೇವೆ ಎಂಬ ವಿಚಾರ ಅವರಿಗೆ ತಿಳಿಸಬೇಕಾಗಿರುವುದರಿಂದ, ಈಗ ಮಸೂದೆಯನ್ನು ಸರ್ಕಾರದವರು ನಮ್ಮ ಮುಂದಿಟ್ಟಿರುತ್ತಾರೆ ಎಂದು ನನಗೆ ಭಾಸವಾಗುತ್ತದೆ. ನಮ್ಮಲ್ಲಿ ಇಂಥ ಒಂದು ಮೂಢನಂಬಿಕೆಯೇನಿದೆ ಅದು ಹೋಗಬೇಕು. ನಾವು ಇಂಥ ಸಂದರ್ಭಗಳಲ್ಲಿ ಮುಖ್ಯವಾಗಿ ಆಲೋಚಿಸಬೇಕಾದುದೇನೆಂದರೆ ನಮ್ಮ ರಾಜ್ಯದ ಆರ್ಥಿಕ ಸ್ಥಿತಿಗತಿಗಳು ಹೇಗಿದೆ— ಇಂಥ ಒಂದು ಒಪ್ಪಂದಮಾಡಿಕೊಂಡರೆ ಅದಕ್ಕೇನಾದರೂ ಅಡ್ಡಿ ಆತಂಕಗಳು ಬರುತ್ತವೆ ಎನ್ನುವುದನ್ನು ಪರ್ಯಾಲೋಚಿಸಬೇಕು. ಆದರೆ ಹಿಂದೆಯೇ ಈ ವಿಚಾರದಲ್ಲಿ ನಮ್ಮ ಸರ್ಕಾರದವರೂ 1957ನೇ ಇಸ್ವಿಯಲ್ಲಿ 9ನೇ ನಂಬರಿನ ಆರ್ಡಿನೆನ್ಸನ್ನು ಹೊರಡಿಸಿದ್ದಾರೆ. ಅದನ್ನೀಗ ಅವರು ಕಾರ್ಯಗತ ಮಾಡಬೇಕಾಗಿದೆ, ಅದರಲ್ಲಿ ಅನೇಕ ವಸ್ತುಗಳನ್ನು ಸೇರಿಸಿದ್ದಾರೆ. ಆದರೆ ಆ ರೀತಿ ಒಂದು ಆರ್ಡಿನೆನ್ಸನ್ನು ಹೊರಡಿಸಿ ಅದರಲ್ಲಿ ಈ ಪದಾರ್ಥಗಳನ್ನೆಲ್ಲಾ ಸೇರಿಸಲು ಕಾರಣವೇನೆಂಬುದನ್ನು ಈ ದಿವಸ ಸರ್ಕಾರದವರು ನಮಗೆ ತಿಳಿಸಿಲ್ಲ. ಆ ಆರ್ಡಿನೆನ್ಸಿನಲ್ಲಿ ಎಲೆಕ್ಟ್ರಿಕಲ್ ಎನರ್ಜಿಯನ್ನೂ ಸೇರಿಸಿದ್ದಾರೆ. ಆದರೆ ನಮ್ಮಲ್ಲಿ ಇತ್ತೀಚೆಗೆ ಒಂದು ಎಲೆಕ್ಟ್ರಿಸಿಟಿ ಬೋರ್ಡ್ ರಚಿತವಾಗಿರುತ್ತದೆ. ಈ ಎಲೆಕ್ಟ್ರಿಸಿಟಿ ಒಂದನ್ನೇ ಅಲ್ಲದೆ ಇನ್ನೂ 10–12 ಸಾಮಾನುಗಳನ್ನು ಅದರಲ್ಲಿ ಸೇರಿಸಿದ್ದಾರೆ. ಹೀಗೆ ಈ ಸಾಮಾನುಗಳನ್ನು ಆ ಆರ್ಡಿನೆನ್ಸಿನಲ್ಲಿ ಸೇರಿಸಬೇಕಾಗಿದ್ದರೆ ನಮ್ಮ ಸರ್ಕಾರದವರು ಯಾವ ಆಧಾರದಮೇಲೆ-ಯಾವ ಅರ್ಥಶಾಸ್ತ್ರದ ಅನುಭವದಮೇಲೆ ಇದನ್ನು ಹೀಗೆ ಮಾಡಿರುತ್ತಾರೆಂಬುದನ್ನು ನಾವೀಗ ವಿಮರ್ಶೆಮಾಡಬೇಕಾಗಿದೆ. ಆದರೆ ಈಗ ನಮಗೆ ಎಲೆಕ್ಟ್ರಿಕಲ್ ಬೋರ್ಡ್ ರಚಿತವಾದಮೇಲೆ ನಮಗೆ ಎಲೆಕ್ಟ್ರಿಕಲ್ ಎನರ್ಜಿಯ ಮೇಲೆ ಅಧಿಕಾರವಿಲ್ಲ. ಆದಾಗ್ಯೂ ಅದನ್ನೂ ಸಹ ಆರ್ಡಿನೆನ್ಸಿನಲ್ಲಿ ಸೇರಿಸಿದ್ದಾರೆ. ಆದರೆ ಇದರ ಪರಿಣಾಮ ಮುಂದೇನಾಗುತ್ತದೋ ನೋಡಬೇಕು. ಇಂಥ ಕೆಲಸಗಳನ್ನೆಲ್ಲ ಒಂದು 'ನೀತಿಯ' ಆಧಾರದ ಮೇಲೆ ನಡೆಸಬೇಕಾದ್ದು ಯುಕ್ತ, ವ್ಯವಹಾರ ದೃಷ್ಟಿಯಿಲ್ಲದೆ ಯಾವ ಕೆಲಸವನ್ನೂ ನಡೆಸಬಾರದು. ಪ್ರತಿಯೊಂದು ವಿಚಾರದಲ್ಲೂ ನಮ್ಮ ಸಂಸ್ಥಾನದ ಪರಿಸ್ಥಿತಿ ಏನಿದೆ ಎಂಬುದನ್ನು ಅವಲೋಕಿಸಿ ಕೆಲಸಮಾಡದಿದ್ದರೆ ನಮ್ಮ ಆರ್ಥಿಕ ಪರಿಸ್ಥಿತಿ ಕೆಡಬಹುದು. ಕೇಂದ್ರ ಸರಕಾರದವರು ಯಾವ ಆದೇಶ ಕಳುಹಿಸಿದ್ದಾರೆ? ಯಾವ ಆಧಾರದ ಮೇಲೆ ಎಗ್‌ಜೆಂಫ್ಟ್ ಮಾಡಬೇಕಾಗಿದೆ? ರಿಕಮೆಂಡೇಷನ್ ಅಪ್ರೂವ್ ಆಗಲಿಲ್ಲ ಎನ್ನುವಾಗ ಎಕ್ಸೈಜ್‌ಡ್ಯೂಟಿ ಬರುತ್ತದೆ ಎನ್ನುವುದಕ್ಕೆ ಗ್ಯಾರಂಟಿ ಏನು ಇದೆ? ಈ ರೀತಿ ಎಗ್‌ಜೆಂಫ್ಟ್ ಮಾಡಿದರೆ ಆರ್ಥಿಕ ಪರಿಸ್ಥಿತಿ ಕೆಡುವುದಿಲ್ಲವೇ? ರೆಕಮೆಂಡೇಷನ್ಸ್ ಅಪ್ರೂವ್ ಆಗಲಿಲ್ಲ ಅಂದ ಮೇಲೆ ಅದಕ್ಕೆ ಆಧಾರವೇನು? ಈ ರೀತಿ ಮಾಡುತ್ತಿರುವುದು ಮೂಢನಂಬಿಕೆ ಎಂದು ಹೇಳಬಹುದು. ನಮಗಿರುವ ಸ್ವಾತಂತ್ರ್ಯವನ್ನು ನಾವು ಏಕೆ ಕಳೆದುಕೊಳ್ಳಬೇಕು? ಕಾನೂನು ರಚನೆ ಮಾಡುವುದು ಇರಲಿ. ಈ ವಿಚಾರವನ್ನು ಸಭೆಯ ಗಮನಕ್ಕೆ ತರಬೇಕು. ಹೀಗೆ ವೇಗವಾಗಿ ಕಾನೂನು ತರುವುದು ಒಳ್ಳೆಯದಲ್ಲವೆಂದು ನಾನು ಹೇಳುತ್ತೇನೆ.

(*a*) the number of gazetted posts of A.S.Ps. created and filled up in the Police Department for the last three years;

(*b*) whether those vacancies were filled up by direct recruitment or by departmental promotion;

(*c*) whether the provisions made in the Mysore Police Manual, Vol. I, Chapter II, rules 8 to 10, were followed in making such appointments;

(*d*) whether the provisions made in Chapter VIII, Rules 215 to 217 of the Manual of General Circulars and Standing Orders of the Government, Part I, were followed in making those appointments;

(*e*) the number of Police Inspectors among the Scheduled Castes eligible for such appointments in the State Police Service;

(*f*) the number of such posts that could have been given to Scheduled Castes if appointments were made as per rules?

A.—Sri C. M. POONACHA (Minister for Home Affairs and Industries).—

(*a*) Three posts.

(*b*) All the above posts except that of the Headquarters Asst. to the Superintendent of Police, M.A.R.P., were filled up by promotion. The post of Headquarters Asst. to the District Superintendent of Police, M.A.R.P., was created for accommodating a surplus Deputy Superintendent of Police of Hyderabad State Reserve Police allotted to Mysore State.

(*c*) Yes.

(*d*) No Probationers have been recruited since 1948 as there were a number of qualified officers in the Department itself fit for promotion.

(*e*) There are only 2 P.Is. belonging to the Scheduled Castes. Their case will be given due consideration.

(*f*) The reservation of vacancies for the Scheduled Castes and Tribes refer to direct recruitment only. As no direct recruitment has been made no such person belonging to the Scheduled Castes could have been appointed.

Sri B. BASAVALINGAPPA.—In answer to (*a*) you have stated that there are only three posts of A.S.Ps. available. May I know whether it is a fact that the Government prepared a list consisting of 15 A.S.Ps. and recently they have appointed six, making a total of 21?

*Sri C. M. POONACHA.—The question is very specific. The Hon'ble Member wanted information as to the number of gazetted posts of A.S.Ps. created and filled up in the Police Department since 1953 and the answers have been furnished for the period for which the information was sought.

Sri B. BASAVALINGAPPA.—My question is, is it not a fact that the Government prepared a list consisting of 15 A.S.Ps. within the period of these three years?

Sri C. M. POONACHA.—Does the Hon'ble Member refer to what is called as eligibility list which is being prepared? Here the question relates to postings.

Sri B. BASAVALINGAPPA.—Question (*c*): "whether the provisions made in the Mysore Police Manual, Vol. I, Chapter II, rules 8 to 10 were followed in making such appointments." You have stated "Yes". Is it not a fact that as per the provisions of this Chapter, one-third must be appointed by direct recruitment, one-third by recruitment of candidates belonging to minority communities and one-third by selection?

Sri C. M. POONACHA.—To the extent the recruitment is concerned, that particular aspect of the rules as mentioned by my friend does apply, but in the case of promotions, it is merit

cum seniority which is taken into consideration.

Sri B. BASAVALINGAPPA.—My question is, whether it is not a fact that one-third of the vacancies must be filled up by direct recruitment, one-third by equalisation of minority communities and one-third by selections on merit *cum* efficiency as the Minister put it.

Sri C. M. POONACHA.—That is so far as recruitment is concerned. This is where we have made departmental promotions.

Sri B. BASAVALINGAPPA.—I want to know whether the vacancies have been filled up as per the provisions of the Police Manual. He says 'Yes'. Now I want to know whether one-third has been filled up by direct recruitment.........

Mr. SPEAKER.—He is speaking about the eligibility list.

Sri C. M. POONACHA.—Evidently there is some confusion. He wanted the number of gazetted posts of A.S.Ps. created and filled up for the last three years and the answers are furnished. There are normal vacancies which occur in the department for which of course eligibility list is prepared in consultation with the Public Service Commission and as and when vacancies arise, members are selected from out of the list for the posts.

Sri B. BASAVALINGAPPA.—In answer to (*d*), you have stated that no probationers have been recruited since 1948. How do those normal vacancies occur ?

Sri C. M. POONACHA.—The point is that direct recruitment has not been done since 1948, which is a fact ; but so far as vacancies are concerned, they do occur to be filled up by recruitment and other means.

Sri B. BASAVALINGAPPA.—Have you followed the rules of procedure laid down in the Manual ?

Sri C. M. POONACHA.—There is now a proposal to recruit a number of officers for the vacancies existing in the Department.

Sri B. BASAVALINGAPPA.—Question (*d*) is : "whether the provisions made in Chapter VIII, Rules 215 to 217 of the Manual of General Circulars and Standing Orders of the Government were followed in making those appointments." You have stated that "no probationers have been recruited since 1948 as there were a number of qualified officers in the Department itself fit for promotion." Now as per these General Circulars and Standing Orders, 50 per cent must be filled up by direct recruitment and another 50 per cent by selection on merit *cum* efficiency from the Inspectorate.

Sri C. M. POONACHA.—What my friend suggests is true, but that has happened with regard to the erstwhile Mysore State. We are now making arrangements to recruit probationary officers for the vacancies that occur in the department and action is being taken.

Sri G. DUGGAPPA.—Is it not a fact that the Inspectors of Police were interviewed by the P.S.C. for being promoted to the cadre of Assistant Superintendents of Police ?

Sri C. M. POONACHA.—Yes, interviews have taken place.

Sri G. DUGGAPPA.—May I know how many were interviewed and among them how many belonged to Scheduled Castes?

Sri C. M. POONACHA.—I would require notice because it is the P.S.C. that selected officers for interview.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈ ಹೊಸ ಮೈಸೂರಿನ ಪ್ರದೇಶದಲ್ಲಿ ಯಾವ ಪ್ರದೇಶಗಳಿಗೆ ಸೇರಿದ ಜನಗಳಿಗೆ ಈ ಪ್ರಮೋಷನ್ನುಗಳು ಸಿಕ್ಕಿವೆ ?

ಶ್ರೀ ಸಿ. ಎಂ. ಪೂಣಚ್ಚ.—ಏಳು ಜನಗಳಿಗೆ ಪ್ರಮೋಷನ್ನು ಸಿಕ್ಕಿದೆ. ಇದರಲ್ಲಿ ಆರು ಜನಗಳು ಮೈಸೂರು ಪ್ರದೇಶಕ್ಕೆ ಸೇರಿದವರು ಮತ್ತು ಒಂದು ಸ್ಥಳವನ್ನು ಹೈದರಾಬಾದಿನಿಂದ ವರ್ಗವಾಗಿ ಬಂದ ಒಬ್ಬ ಆಫೀಸರಿಗೆ ಕೊಡಲಾಗಿದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈ ಏಳು ಜನಗಳು ಯಾವ ಯಾವ ಪ್ರದೇಶಕ್ಕೆ ಸೇರಿದವರು ಎನ್ನುವುದನ್ನು ತಿಳಿಸಲಾಗುವುದೇ ?

ಶ್ರೀ ಸಿ. ಎಂ. ಪೂಣಚ್ಚ.—ಇದರ ಪೈಕಿ ಆರು ಜನಗಳು ಹಳೆಯ ಮೈಸೂರಿನ ಭಾಗಗಳಿಗೆ ಸೇರಿದವರು ಮತ್ತು ಒಬ್ಬರು ಹೈದರಾಬಾದುಭಾಗಕ್ಕೆ ಸೇರಿದವರು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಹೀಗೆ ಮೆರಿಟ್ಟಿನ ಮೇಲೆ ಪ್ರಮೋಷನ್ನುಗಳನ್ನು ಕೊಡಲಾಗಿದೆ ಎಂದು ಅಪ್ಪಣೆ ಕೊಡಿಸಿದಿರಿ. ಈ ಮೆರಿಟ್ಟು ಎನ್ನುವುದರ ಅರ್ಥ ವಿವರಣೆ (ಡೆಫಿನಿಷನ್ನು) ಏನು ?

ಶ್ರೀ ಸಿ. ಎಂ. ಪೂಣಚ್ಚ.—ಮೆರಿಟ್ಟು ಎಂದರೆ "ಯೋಗ್ಯತೆ ಮತ್ತು ಅರ್ಹತೆ."

Sri G. VENKATAI GOWDA.—May I know whether these officers were promoted and the promotion lists have been approved by the P.S.C. ?

Sri C. M. POONACHA.—The matter is pending with the P.S.C. and we are awaiting their recommendation.

Sri G. VENKATAI GOWDA.—May I know whether the cases of the officers who have been promoted were referred to the P.S.C. ?

Sri C. M. POONACHA.—These posts belong to the State cadre. They are referred to the P.S.C. for their concurrence and I do not know at what stage the matter is. Their concurrence will be obtained for all these posts.

Sri C. M. ARUMUGHAM.—In answer to supplementary question (*e*) it is stated that two P. I.s belong to the Scheduled Castes and their case will be given due consideration. May I know whether these people are not in the State Police service ?

Sri C. M. POONACHA.—They are in the State Police service. They are still serving.

Sri C. M. ARUMUGHAM.—Then, may I know what is it that is under consideration ?

Sri C. M. POONACHA.—The consideration is for promotion to A. S. P.'s cadre.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಷೆಡ್ಯೂಲು ಕ್ಯಾಸ್ಟು ಸಂಗಡದವರಿಗೆ ಮಾತ್ರ ಈ ಮೆರಿಟ್ಟು ಆಗಲಿ ಎಫಿಷಿಯೆಂಟು ಸರ್ವಿಸ್ಸು ಆಗಲಿ ಒಂದೂ ಕೌಂಟು ಆಗುವುದಿಲ್ಲ ಅಲ್ಲವೆ ?

ಶ್ರೀ ಸಿ. ಎಂ. ಪೂಣಚ್ಚ.—ಷೆಡ್ಯೂಲು ಕಾಸ್ಟು ಆಗಲೀ ಯಾವ ಸಂಗಡಕ್ಕೆ ಸೇರಿದವರಾಗಲೀ ಅವರುಗಳ ಮೆರಿಟ್ಟು ಎಂದರೆ ಅರ್ಹತೆಗಳನ್ನು ಗಣನೆಗೆ ತೆಗೆದುಕೊಂಡು ಅವರ ಪ್ರಮೋಷನ್ನುಗಳನ್ನು ನಿರ್ಣಯಿಸಲಾಗುತ್ತದೆ.

Mr. SPEAKER.—Question hour is over.

ADJOURNMENT MOTION

Re: Death of Smt. Muniamma.

Mr. SPEAKER.—On the 6th instant Hon'ble Member Sri Y. Veerappa and two other Hon'ble Members, namely, Sri C. J. Muckannappa and Sri B. K. Puttaramaiya, gave notices of adjournment motions relating to the conduct of the Seshadripuram Police in respect of one Shrimathi Muniamma and her subsequent death in the Victoria Hospital. On the 10th instant, after I read out the notices of these adjournment motions, the Hon'ble Home Minister stated that the cause of death of Shrimathi Muniamma was being enquired into under the Criminal Procedure Code. The question therefore arose for decision as to whether such an enquiry would preclude consideration of these adjournment motions in the House and I requested the Advocate General to speak on this issue. On the 11th instant the Advocate General expressed his views on the question of *sub judice* in relation to these motions. He stated that an enquiry was being conducted into the cause of death of Shrimathi Muniamma by a Magistrate under section 176 of the Criminal Procedure Code. He also argued on the question of whether an enquiry under section 176 of the Criminal Procedure Code would preclude consideration of any matter by the House. He has since also written to me furnishing some recent decisions bearing on the point. I however learn that the Magistrate has concluded his enquiry.

(Addressing the Hon'ble the Home Minister) : I take that the Magistrate has concluded the enquiry ?

Sri C. M. POONACHA (Minister for Home Affairs and Industries).—He has not concluded his enquiry.

Mr. SPEAKER.—Yesterday I was given to understand by some highest authority that the enquiry was complete.

Sri C. M. POONACHA.—I made further enquiries and learn that the investigating Magistrate is still conducting enquiries.

Mr. SPEAKER.—Then, I will have to reserve my ruling. I was given to understand by a high authority that the enquiry is complete. Now I learn that the enquiry is still going on. So, I will give the ruling tomorrow.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮೀ, ಇವತ್ತೇ ಕೊಡುತ್ತೇನೆಂದು ಹೇಳಿದ್ದಿರಿ . . . .

(*At this stage there were many interruptions*).

Mr. SPEAKER.—I will have to understand whether enquiry under Section 176 is over I will give my ruling today only after 10-30 A.M.

Sri A. BHEEMAPPA NAIK (Challakere).—Your ruling need not depend upon whether enquiries are complete or not.

Mr. SPEAKER.—No, no.

Sri A. BHEEMAPPA NAIK.—The concerned Minister says that an enquiry is still going on. The ruling to be given need not depend upon the fact whether an enquiry is still going or not.

Mr. SPEAKER.—The point is that if the enquiry is over a new situation arises. But if the enquiry is still on, the situation is quite different. I was given to understand yesterday that the enquiry was over and on that basis I have prepared the ruling. Now if the enquiry is on, a different situation arises and therefore I have to give an exhaustive ruling.

Sri A. BHEEMAPPA NAIK.—Then on that basis you are giving the ruling.

Sri J. B. MALLARADHYA (Nanjangud).—Whether the enquiry under Section 176 is completed or not, I do not think the decision of the Chair would be affected by it. Irrespective of whether the enquiry under Section 176 is over or is still pending the decision of the Chair remains the same, in view of the latest decisions on the subject.

Mr. SPEAKER.—If the enquiry is proceeding, my ruling should concern whether the question is *sub judice* or not. Now I learn that the question is still under enquiry by the Magistrate under Section 176.

Sri J. B. MALLARADHYA.—How does it affect the decision of the Chair —whether the enquiry is proceeding or not.

Sri C. J. MUCKANNAPPA (Gubbi).—What the Home Minister stated just now, is not relevant to your decision. Why should the Chair, first of all, seek any clarification from the Home Minister?

ಅಧ್ಯಕ್ಷರು.—ನಾನು ಎರಡು ಬೇಸಿಸ್ ಮೇಲೆ ಕೆಲಸ ಮಾಡುತ್ತಿದ್ದೇನೆ. 176ನೆಯ ಸೆಕ್ಷನ್ ಪ್ರಕಾರ ಎನ್‌ಕ್ವೈರಿ ಪೂರ್ಣವಾಗಿದ್ದರೆ ಒಂದು ತರಹ ರೂಲಿಂಗ್ ಕೊಡಬೇಕಾಗುತ್ತದೆ. ಎನ್‌ಕ್ವೈರಿ ನಡೆಯುತ್ತಿದ್ದರೆ ಈ ವಿಷಯ ಸಬ್ ಜುಡಿಸ್ ಹೌದೆ ಅಲ್ಲವೆ ಎಂಬ ವಿಷಯದಲ್ಲಿ ರೂಲಿಂಗ್ ಕೊಡಬೇಕಾಗುತ್ತದೆ. 10½ ಗಂಟೆಗೆ ನನ್ನ ರೂಲಿಂಗ್ ಕೊಡುತ್ತೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಇತರರಿಗೆ ಕ್ಲಾರಿಫಿಕೇಷನ್‌ಗೆ ಅವಕಾಶ ಕೊಟ್ಟ ಮೇಲೆ ನಮಗೂ ಅವಕಾಶ ಕೊಡಬೇಕು.

Sri U. M. MADAPPA (Chamarajanagar).—On a point of information. Sir, ಅಡ್ವೋಕೇಟ್ ಜನರಲ್ ಒಂದು ಕಾಗದ ಬರೆದಿದ್ದಾರೆಂದು ತಿಳಿಯಿತು. ಅದು ನಿಜವಾಗಿದ್ದರೆ ಅದನ್ನು ಸಭೆಗೆ ತಿಳಿಸುವುದು ಉತ್ತಮವೆಂದು ಹೇಳುತ್ತೇನೆ. ಅಡ್ವೋಕೇಟ್ ಜನರಲ್ ಕೂಡ ಈ ಸಭೆಯ ಸದಸ್ಯರಾಗಿದ್ದಾರೆ.

Sri N. HUCHAMASTHY GOWDA (Chandrasekharapura).—On a point of order, Sir. ಈಗ 10½ ಗಂಟೆಗೆ ರೂಲಿಂಗ್ ಕೊಡುವುದಾಗಿ ತಾವು ಹೇಳಿದ ಮೇಲೆ ಈ ವಿಷಯದ ಮೇಲೆ ಚರ್ಚೆಯಾಗುವುದು ಸರಿಯೆ? ಅದಕ್ಕೆ ಅವಕಾಶವೆಲ್ಲಿದೆ?

[As several Members held the floor and spoke simultaneously, the Speaker directed that the proceedings need not be recorded. Later, he permitted Sri Mallaradhya to speak.]

Sri J. B. MALLARADHYA.—Sir, you just said that you are about to give a ruling based on some advice given by the Advocate General, subsequent to the advice he had given while he was in this House. If that is so, we would like to know the cases he had quoted and the reasons behind his advice.

Mr. SPEAKER.—That question arises only after I give the ruling, taking into consideration the fact that the proceedings under Section 176 are still on. After I give the ruling, if Members have any doubt, they can raise them. But there is no occasion for such a thing at this stage.

Sri J. B. MALLARADHYA.—My difficulty is that the Advocate General was given a full opportunity, for nearly one hour, to state the case and quote decisions. If after he left the House, he has quoted more decisions, let us have them.

Mr. SPEAKER.—You are simply over-anxious.

Sri J. B. MALLARADHYA.—Not at all.

Mr. SPEAKER.—I still say that you are over-anxious. After hearing my ruling on the present basis, if you have any doubt, you can raise it.

Sri Y. VEERAPPA.—What has your decision to do with the question whether proceedings under Section 176 is pending or not?

Mr. SPEAKER.—Everything. I have been telling and telling the Member that I have to differentiate between two situations: One is if the enquiry under Section 176 is over, my ruling would be different. If 176 is still on, my ruling would be on the question whether the matter is *sub judice*. If the proceedings under 176 are over, my ruling would be different, because then a new situation arises.

Sri V. P. DEENADAYALU NAIDU (Cubbonpet).—Sir, the Chair was pleased to say that there is another higher authority which had told him that the proceedings under Section 176 in this case are over. I would like to know which is the authority higher than the Home Minister. Secondly, I would like to point out that this question has been discussed on the floor of this House and certain matters were squarely placed before the Chair for his ruling. Now I am unable to understand how the Chair could entertain extraneous information, on which it would give a ruling. The ruling has therefore to be based on what transpired on the floor of the House and if the Chair has come into possession certain other information, of which the House was unaware when it discussed the matter, then I would very humbly submit that that information must be supplied to the House.

Mr. SPEAKER.—The Speaker cannot over-ride certain facts. After all, the Speaker has to ascertain facts, even if they are to be obtained from outside the House. In this case, I am given to understand that the proceedings under Section 176 are over. Of course, as to who gave this information, is an irrelevant matter. It must necessarily have come from an authority that has complete control over the situation. Now the Government has given the information that the proceedings are still going on. Nobody need bother about it now. After I give the ruling, Members may raise doubts if any.

The House then adjourned for recess at Ten of the Clock and reassembled at Thirty Minutes past Ten of the Clock.

[MR. SPEAKER in the Chair]

Mr. SPEAKER.—On the 6th instant Hon'ble Member, Sri Y. Veerappa and two other Hon'ble Members, namely, Shri C. J. Muckannappa and Sri B. K. Puttaramiya, gave notice of adjournment motions relating to the conduct of Seshadripuram Police in respect of one Smt. Muniamma and her subsequent death in the Victoria Hospital. On the 10th instant, after I read out the notice of these adjournment motions, the Hon'ble Home Minister stated that the cause of death of Smt. Muniamma was being enquired into under the Criminal Procedure Code. The question therefore arose for decision as to whether such an enquiry would preclude consideration of these adjournment motions in the House and I requested the Advocate General to speak on this issue. On the 11th instant the Advocate General expressed his views on the queston of *sub judice* in relation to these motions. He stated that an enquiry was being conducted into the cause of death of Smt. Muniamma by a Magistrate under Section 176 of the Criminal Procedure Code. He stated that while Art. 194 of the Constitution conferred on the members absolute privilege of freedom of speech and no action would lie against any member for contempt of court or defamation or any other kind of action in respect of speeches made on the floor, nevertheless the House had itself imposed certain restrictions on this freedom of speech. One of them was to shut out debate or speeches in regard to any matter which was under adjudication by a court of law having jurisdiction in part of India. He next expressed the view that what was ruled out of debate by this limitation under the Rules of Procedure must be treated as co-extensive with whatever was treated as contempt under the Contempt of Courts Act. Speaking in particular as to the nature of proceedings under Section 176 of the Criminal

Procedure Code, the learned Advocate General referred to certain decisions particularly A.I.R. 1928-Bombay, page 300 and A. I. R. 1940 Rangoon, and stated that proceedings under section 176 of the Criminal Procedure Code are judicial proceedings and any comment in respect of them would amount to contempt. He next advanced the view that as laid down in I.L.R. 1939—Madras and A.I.R. 1943 Lahore, an offence of contempt may be committed even if there is no proceeding or cause actually pending, provided that such proceeding or cause is imminent and the writer of the offending publications either knew it to be imminent or should have known that it was imminent.

The learned Advocate General has subsequently written to me to say that he has come across a more recent decision of the Punjab High Court in which it has been held that a Magistrate holding an enquiry under section 176 of the Criminal Procedure Code cannot be considered to be performing the functions of a Court of Law. He has stated in his letter that any comment outside the House not being contempt in the circumstances there is no restriction of comment within the House. In view of this decision and the view now expressed by the learned Advocate General, I must hold that for the purpose of rule 40 (*f*) an enquiry under section 176 of the Criminal Procedure Code cannot be considered to be a matter which is under adjudication by a court of law. The objection of *sub judice* will not therefore apply. The general question of whether what should be excluded from the debate would be whatever would amount to contempt of court, need not be either examined or decided on the present occasion. This would require much more detailed examination particularly as the composition and powers of the Legislature under the Constitution require that fullest freedom of speech should be conceded to members and any limitation on this freedom which is essential for the proper discharge of their functions and duties should be construed very strictly. For instance, while in some cases it has been held to be contempt even if a proceeding or cause is not actually pending but is imminent, the extension of this principle to the debates in this House may really lead to such curtailment as may interfere with the proper discharge of the duties by members. However as I stated it is not necessary for me to decide this issue on this occasion.

While the objection of *sub judice* may not apply, I am afraid that there are other rulings of our own Assembly as well as of other Legislatures which prevent me from accepting this Notice. There are long series of rulings to the effect where other parliamentary opportunities are available very soon for raising the matter which is the subject matter of adjournment, such adjournment motions are inadmissible. Hon'ble Members will have sufficient opportunity during debate on the Budget to raise this issue. There is also a short notice question which is pending and is likely to be taken up soon. In view of these opportunities, the adjournment motions become inadmissible and I hold that they are out of order. I must also add at the end that today we are discussing Vote on Account and Members are at full liberty to make their comments on this incident.

Members' Representations.

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ವೋಟ್ ಆನ್ ಅಕೌಂಟ್ ಬಂದಾಗ ನಿನ್ನೆ ದಿವಸ . . . . .

ಅಧ್ಯಕ್ಷರು.—ನನ್ನ ಒಪ್ಪಿಗೆಯನ್ನು ಪಡೆದುಕೊಂಡರೆ ಮಾತನಾಡಲು ಅವಕಾಶ ಕೊಡುತ್ತೇನೆ. ನನ್ನ ಚೇಂಬರಿನಲ್ಲಿ ಬನ್ನಿ. ಒಪ್ಪಿಗೆಯನ್ನು ತೆಗೆದುಕೊಂಡು ಆಮೇಲೆ ಮಾತನಾಡಿ.

ಶ್ರೀ ಕೆ. ಕೆಂಚಪ್ಪ.—ಈ ಹೌಸ್‌ನಲ್ಲಿ ಕೆಲವು ವಿಚಾರ ಹೇಳಬೇಕು.

ಅಧ್ಯಕ್ಷರು.—ಸಭೆಯಲ್ಲಿ ಅನುಮತಿಯನ್ನು ಕೊಡುವುದಿಲ್ಲ. ಅದು ತೊಡಕಿಗೆ ಬೀಳಿಸುತ್ತದೆ. ಬಹಳ ಜನ ಹೇಳಿಕೆಯನ್ನು ಕೊಡಲು ಅನುಮತಿ ಕೊಡಿ ಎಂದರೆ ಆದರಿಂದ ಏನೂ ಉಪಯೋಗ ಆಗುವುದಿಲ್ಲ. ನನ್ನ ಚೇಂಬರಿನಲ್ಲಿ ಬಂದು ಮಾತನಾಡಿ ಅನುಮತಿಯನ್ನು ಪಡೆಯಬಹುದು.

ಶ್ರೀ ಕೆ. ಕೆಂಚಪ್ಪ.—ವಿರೋಧಪಕ್ಷದವರ ಎಲ್ಲರ ಪರವಾಗಿ ನಿನ್ನೆ ಅಸೆಂಬ್ಲಿ ಮೆಂಬರುಗಳಿಗೆ ಇರತಕ್ಕ ಹಕ್ಕು ಬಾಧ್ಯತೆಗಳಿಗೆ ಚ್ಯುತಿ ಬಂದಿರುವ ವಿಚಾರದಲ್ಲಿ ಒಂದು ಅಪ್ಲಿಕೇಷನ್ ಕೊಡುವವರಾಗಿದ್ದೇವೆ. ಒಂದು ಪ್ರಿವಿಲೇಜ್ ಮೋಷನ್ ಇದೆ.

ಅಧ್ಯಕ್ಷರು.—ಪ್ರಿವಿಲೇಜ್ ಮೋಷನ್ ಕೊಟ್ಟಿದ್ದೀರಿ.

ಶ್ರೀ ಕೆ. ಕೆಂಚಪ್ಪ.—ಬೇರೆ ಒಂದು ಕೊಡಬೇಕಾಗುತ್ತದೆ.

ಅಧ್ಯಕ್ಷರು.—ಕೊಡಿ.

ಶ್ರೀ ಕೆ. ಕೆಂಚಪ್ಪ.—ಅದರ ವಿಚಾರದಲ್ಲಿ ಸ್ಟೇಟ್ ಮೆಂಟ್ ಮಾಡಬೇಕಾಗಿದೆ.

ಅಧ್ಯಕ್ಷರು.—ನನ್ನ ಕೈಗೆ ಬಂದಿಲ್ಲ. ನೀವು ಕೊಟ್ಟಿದ್ದೀರೆಂದು ಗೊತ್ತಾಯಿತು. ಆಲೋಚನೆ ಮಾಡೋಣ. ಅದನ್ನು ಪರಿಶೀಲಿಸಬೇಕು. ಪ್ರಿವಿಲೇಜ್ ಮೋಷನ್ ನಲ್ಲ ಪ್ರೈಮಾಫೇಸಿ ಕೇಸು ಇದೆಯೋ ಇಲ್ಲವೋ ನೋಡಬೇಕಾಗುತ್ತದೆ.

ಶ್ರೀ ಕೆ. ಕೆಂಚಪ್ಪ.—ಅದರ ವಿಚಾರದಲ್ಲಿ ಹೇಳಬೇಕು.

Mr. SPEAKER.—I must be satisfied that there is a *prima facie* case. The office has received the notice. That will be examined. If there is a *prima facie* case, I will allow you to raise it here.

ಶ್ರೀ ಕೆ. ಕೆಂಚಪ್ಪ.—ಅಪ್ಲಿಕೇಷನ್‌ನಲ್ಲಿ ಎಲ್ಲವನ್ನೂ ಬರೆಯುವುದಕ್ಕೆ ಆಗುವುದಿಲ್ಲ. ಸ್ವಲ್ಪ ವಿಚಾರ ಸ್ಪಷ್ಟೀಕರಿಸಿ ಹೇಳಬೇಕಾಗಿ ಬರುತ್ತದೆ.

ಅಧ್ಯಕ್ಷರು.—ನಿಯಮಗಳ ಪ್ರಕಾರ ಬರವಣಿಗೆಯಲ್ಲಿ ಕೊಡಬೇಕೆಂದಿದೆ. ಹಾಗೆ ಕೊಟ್ಟಮೇಲೆ *prima facie* case ಇದೆಯೆ ಎಂಬುದನ್ನು ಪರೀಕ್ಷೆ ಮಾಡುತ್ತೇನೆ. ಆ ಮೇಲೆ ಅದಕ್ಕೆ ಅನುಮತಿ ಕೊಡುವುದು ಬಿಡುವುದು ಎಂಬುದನ್ನು ತೀರ್ಮಾನ ಮಾಡುವುದು.

ಶ್ರೀ ಕೆ. ಕೆಂಚಪ್ಪ.—173 ನೆಯ ವಿಧಿಯ ಪ್ರಕಾರ ಇಂಥಾ ಸೂಚನೆಯನ್ನು ತಕ್ಷಣ ಚರ್ಚೆ ಮಾಡಬೇಕೆಂದಿದೆ.

ಅಧ್ಯಕ್ಷರು.—ನನ್ನ ಅವಲೋಕನಕ್ಕೆ ಕೂಡ ಅವಕಾಶವಿಲ್ಲದೆ ಹೇಗೆ ಇತ್ಯರ್ಥ ಮಾಡುವುದು ?

ಶ್ರೀ ಕೆ. ಕೆಂಚಪ್ಪ.—ನಾವು ಅದನ್ನು ಕೊಟ್ಟು ಬಹಳ ಹೊತ್ತಾಯಿತು. .

Sri J. B. MALLARADHYA (Nanjangud).—Sir, I am the person who has given notice for the privilege motion and if I remember correctly, I have given it within half-an-hour of my entering the Assembly Hall. I request kind indulgence of the Speaker to give a chance to the Leader of the Opposition to explain.

Mr. SPEAKER.—I do not deny the chance to the Leader of the Opposition. But, I must find out whether there is *prima facie* case or not. You say, you have given it about 8-30. I am in the House since this morning; how can I examine it? I will consider it later on.

Sri J. B. MALLARADHYA.—The position requires a little latitude.

ಅಧ್ಯಕ್ಷರು.—ನೀವು ನಿಮ್ಮ ಸೂಚನೆಯನ್ನು ಅರ್ಧ ಗಂಟೆಯ ಹಿಂದೆ ಕೊಟ್ಟಿದ್ದಾಗಿ ಹೇಳುತ್ತೀರಿ. ನಾನು ಹೊರಗಡೆ ಇದ್ದಿದ್ದರೆ ಅದನ್ನು ನೋಡುತ್ತಿದ್ದೆ. ನಾನು ಈವರೆಗೂ ಸಭೆಯಲ್ಲಿಯೇ ಇದ್ದೇನೆ. ಅದನ್ನು ನೋಡಿ ಪರಿಶೀಲನೆ ಮಾಡುವುದು ಹೇಗೆ ಸಾಧ್ಯ ?

ಶ್ರೀ ಕೆ. ಕೆಂಚಪ್ಪ.—173 ನೆಯ ವಿಧಿಯಲ್ಲಿ ಹೀಗಿದೆ:

"(2) A motion on a matter of privilege arising during the sitting of the Assembly is, notwithstanding anything contained in rules 41 and 43 entitled to immediate precedence over all other business,"

ಅಧ್ಯಕ್ಷರು.—*Prima facie* case ಇದೆಯೆ ಎಂಬುದನ್ನು ನೋಡದೆ ಹೇಗೆ ಅದರ ಚರ್ಚೆಗೆ ಅವಕಾಶ ಕೊಡುವುದು ? Should I not examine it ?

Sri J. B. MALLARADHYA.—It is for this reason, Sir. The consequent conduct of the proceedings of this House is depending on the statement you are making. In fact, the privilege motion is not going to be discussed immediately.

Mr. SPEAKER.—I have made the position clear. Unless there is *prima facie* case, I cannot allow. Since I am sitting in the House, I had no opportunity to examine the motion. I must have some time to consider whether it is permissible or not.

Sri B. K. PUTTARAMIYA (Channapatna.)—I rise to a point of order, Sir. ನಮ್ಮ ಪ್ರಶ್ನೋತ್ತರ ಕಾಲವಾದಮೇಲೆ, ಹೇಳಿಕೆಗಳನ್ನು ಕೊಡುವುದಕ್ಕೆ ಅವಕಾಶಕೊಡುವ ಸಂಪ್ರದಾಯವನ್ನು ಹಾಕಿದ್ದೀರಿ. ಅದರಂತೆ ನಮಗೆ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವಕಾಶವಿದೆಯೆ ಅಥವ ಇಲ್ಲವೆ ಎನ್ನುವ ಬಗ್ಗೆ ತಮ್ಮ ರೂಲಿಂಗ್ ಕೊಡಬೇಕು.

ಅಧ್ಯಕ್ಷರು.—ಇದು ಹಳೆಯ ಮಾತು. ಇದರಲ್ಲಿ 'ಪಾಯಿಂಟ್ ಆಫ್ ಆರ್ಡರ್' ಏನೂ ಇಲ್ಲ, Clarification ಬೇಕು ಅಷ್ಟೆ. ಯಾರಾದರೂ ಒಂದು 'ಪ್ರಿವಿಲೇಜ್ ಮೋಷನ್' ಕೊಟ್ಟರೆ ನಾನು ಅದನ್ನು ಪರೀಕ್ಷೆಮಾಡಬೇಕು. ನನ್ನಲ್ಲಿ ಬಂದು ಅನುಮತಿ ಪಡೆದು ಸ್ಟೇಟ್‌ಮೆಂಟ್ ಮಾಡಬೇಕು. ಸ್ಪೀಕರ್ ಅನುಮತಿಯಿಲ್ಲದೆ ಮಾಡುವುದಕ್ಕಾಗುವುದಿಲ್ಲ.

Sri B. K. PUTTARAMIYA.—I raise another point of order.

ನಿನ್ನೆಯ ದಿವಸ ನಾವು ಡಿವಿಜನ್ ಕೇಳಿದಾಗ ನಮ್ಮ ಕಡೆ 34 ಜನರಿದ್ದಾಗ ಈ ಸರ್ಕಾರ ಹೋಯಿತು . . .

Mr. SPEAKER.—I will not allow any Hon'ble member to raise that question. I have already said that I will examine the motion that is tabled and if I think that there is a *prima facie* case, I shall allow it. Directly or indirectly I will not allow this matter to be discussed. There is an end of the matter.

Sri Y. VEERAPPA (Holenarasipur).—Sir, you were pleased to make some observation regarding the adjournment motion. For heaven's sake, I am not entering into the merits or finding fault with the decision of the esteemed Chair. You were pleased to state that it does not amount to adjudication because of several reasons. Would it not frustrate rule 40 of the VIII Chapter if opportunity is not accorded to discuss this matter—an important matter of recent nature which affects the prestige, honour and safety of our brothers and sisters ?

Mr. SPEAKER.—After all, the Hon'ble Member is trying to over-ride my ruling in an indirect method. I have said that I have disallowed the adjournment motion. There is the end of the matter. If the Hon'ble Member wants to speak on the matter, there is an opportunity because we are going to discuss the Vote on Account.

PAPERS LAID ON THE TABLE.

Sri C. M. POONACHA (Minister for Industries and Home Affairs).—Sir, I beg to lay on the Table the State Transport Undertakings (Mysore) Rules, 1958 issued under Section 68-1 of the Motor Vehicles Act, 1939 (Central Act IV of 1939).

BUDGET FOR 1958-59—DEMANDS FOR GRANTS ON ACCOUNT.

No. 2—Land Revenue

7. Land Revenue

Mr. SPEAKER.—Motion moved :

"That a sum not exceeding Rs. 50,79,000 be granted 'on account' to the Government to defray the charges which will come in course of payment during the period from 1st April 1958 to end of 31st day of July 1958, in respect of 'Land Revenue'."

Before discussion starts, I must say that members should take that all the Demands are before the House and they may make remarks in respect of all the Demands including the one which I have now put before the House.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮಿ, ನಾವು ನಿನ್ನೆ ಸೋತಿರತಕ್ಕ ಸರ್ಕಾರ ಈಗ ಮಂಡಿಸಿರತಕ್ಕ 'Vote on Account' ಮೇಲೆ ಮಾತನಾಡಲು ಭಾಗವಹಿಸುವುದಿಲ್ಲ. ನಾವು ಹೊರಟು ಹೋಗುತ್ತೇವೆ. We stage a walk out.

(The Opposition members withdrew from the House.)

Sri V. P. DEENADAYALU NAIDU (Cubbonpet).—Sir, I have a small technical difficulty which I would like to place before you. I want to know whether this Vote on Account is placed before the House under the provisions of Rule 127 of the Rules of Procedure and Conduct of Business of the House. I hope that the vote on account for the period from 1st April to end of July will have to be covered by certain provisions and it is under the provisions of Rule 127 that it is placed before the House. Therefore it is also necessary that it should be circumscribed by Rule 121 relating to demands for grants and so this has to be done in consultation with the Estimates Committee. I would like to know the necessity for placing before this House the vote on account for a period of 4 months. An explanation for the same may kindly be given. I would also like to know the opinion of the Estimates Committee when it was consulted as contemplated by the provisions of Rule 121.

Mr. SPEAKER.—The Estimates Committee is supposed to send the form only.

Sri V. P. DEENADAYALU NAIDU.—I want to know why this piecemeal vote on account is being placed before the House.

Sri S. NIJALINGAPPA (Chief Minister).—I think I have already explained the reasons for adopting this method. This method has been adopted because by that members may have the opportunity of discussing the budget at greater length item by item and department by department when the demands for grants come before the House instead of being required to finish the discussion before the end of

(SRI S. NIJALINGAPPA)

March. The discussion can now go on even during the next month so that there may be a threadbare discussion and members may have more opportunities to discuss the whole thing. I think this was made clear on that day and it was accepted by members.

Sri V. P. DEENADAYALU NAIDU.—If this vote on account is placed before the House under Rule 127, then it is also stated in sub-rule (4) of this rule that "in other respects a motion for vote on account shall be dealt with in the same way as if it were a demand for grant." So this motion for vote on account will have to be governed by Rule 121 also and sub-rule (3) of rule 121 says that "subject to these rules the budget shall be presented in such form as the Government may, in consultation with the Estimates Committee, settle." I would like to know whether this vote on account was settled in consultation with the Estimates Committee and, if so, what is the report of that Committee on the matter.

Mr. SPEAKER.—What that sub-rule says is only this: "Subject to these rules the Budget shall be presented in such form as the Government may, in consultation with the Estimates Committee, settle." So it deals only with the form. The form has already been settled.

Sri V. P. DEENADAYALU NAIDU.—Are we to take it that since the form of the budget has been once decided, that is to be accepted for all time? This is a special case and so it has to be presented in a special form. This vote on account is not the usual procedure. So is it not necessary and incumbent on the part of the Government to consult the Estimates Committee and settle the form?

Sri S. NIJALINGAPPA.—This method has now become universal. Every State is adopting it; the Lok Sabha is adopting it. Even Madras has accepted it. This has been adopted only for giving more opportunities to members to discuss the budget. This is practically a universal method and there is nothing special about it.

*ಶ್ರೀ ಕೆ. ಪುಟ್ಟಸ್ವಾಮಿ (ಮೈಸೂರು).—1958-59ನೇ ಸಾಲಿನ ಪೂರ್ಣ ಆಯವ್ಯಯದ ಅಂದಾಜು ಪಟ್ಟಿಯನ್ನು ವಿಧಾನಸಭೆಯ ಮುಂದೆ ಮಂಡಿಸಿದಮೇಲೆ ನಾಲ್ಕು ತಿಂಗಳಿಗೆ ಮಾತ್ರ Vote on Account ಎಂಬುದಕ್ಕೆ ಈ ಸಭೆಯ ಮಂಜೂರಾತಿಯನ್ನು ಕೇಳುತ್ತಾ ಇರುವುದನ್ನು ನಾನು ತುಂಬಾ ಸಂತೋಷದಿಂದ ಸ್ವಾಗತಿಸುತ್ತೇನೆ. ಕಾರಣವಾದರೂ ಇಷ್ಟೇ. ಆಯವ್ಯಯದ ಅಂದಾಜು ದೀರ್ಘವಾಗಿ ಮತ್ತು ಪರಿಷ್ಕಾರವಾಗಿ ಚರ್ಚೆಯಾಗಬೇಕಾದುದು ಅಗತ್ಯ. ಪ್ರತಿಯೊಂದು ಬಡ್ಜೆಟ್ ಅಧಿವೇಶನದಲ್ಲೂ ಈ ಬಗ್ಗೆ ಮಾತನಾಡಲು ಸಾಕಷ್ಟು ಕಾಲವಿಲ್ಲ. ಎಷ್ಟೋ ವಿಚಾರಗಳು ಚರ್ಚೆಯಾಗಬೇಕಾಗುತ್ತದೆ. ಸಾರ್ವಜನಿಕರ ಅಭಿಪ್ರಾಯವನ್ನು ಈ ಸಭೆಯಲ್ಲಿ ವ್ಯಕ್ತಪಡಿಸಬೇಕಾದ ಅಗತ್ಯವಿದೆ ಎನ್ನುವ ವಾದವನ್ನು ನಾವು ಕೇಳುತ್ತಲೇ ಇದ್ದೇವೆ. ನಾನಾದರೂ ಈ "Vote on Account" ಇಲ್ಲಿ ಮಂಡಿಸಿದ ನಂತರದಲ್ಲಿ 58–59ನೇ ಸಾಲಿನ ಆಯವ್ಯಯದ ಅಂದಾಜನ್ನು ಆಮೂಲಾಗ್ರವಾಗಿ ಚರ್ಚೆಮಾಡುವುದಕ್ಕೆ ಏರ್ಪಾಡುಮಾಡಿರುವುದು ಬಹಳ ಒಳ್ಳೆಯ ಕ್ರಮವೆಂದು ಈ ಸಭೆಯಲ್ಲಿ ಅಭಿಪ್ರಾಯಪಡುತ್ತೇನೆ. ಆದರೆ ಒಂದು ವಿಚಾರವನ್ನು ಈ ಸಭೆಯ ಗಮನಕ್ಕೆ ತರುವುದು ಅಗತ್ಯವಿದೆ. 1957-58ನೇ ಇಸವಿಯಲ್ಲಿ ಈ ಸಭೆ ಪಬ್ಲಿಕ್ ಅಕೌಂಟ್ಸ್ ಕಮಿಟಿ ಮತ್ತು ಎಸ್ಟಿಮೇಟ್ ಕಮಿಟಿಗಳನ್ನು ರಚಿಸಿತು. ಈ ಸಭೆಯ ಮುಂದೆ ಆಯವ್ಯಯದ ಅಂದಾಜನ್ನು ಇಡುವುದು, ಮತ್ತೆ ಈ ಪಬ್ಲಿಕ್ ಅಕೌಂಟ್ಸ್ ಕಮಿಟಿ ಮತ್ತು ಎಸ್ಟಿಮೇಟ್ ಕಮಿಟಿಗಳನ್ನು ರಚನೆಮಾಡುವುದು, ಈ ವಿಧಾನಸಭೆ ಸರ್ಕಾರದ ಹಣಕಾಸಿನ ವಿಚಾರದಲ್ಲಿಯೂ, ಆಡಳಿತ ವಿಚಾರದಲ್ಲಿಯೂ ನೇರವಾಗಿ ತನ್ನ ಹಿಡಿತವನ್ನು ಪಯೋಗಿಸುವುದಕ್ಕೆ ಅದು ಒಂದು ಸಾಧನ. 1957-58ನೇ ಸಾಲಿನಲ್ಲಿ ಪಬ್ಲಿಕ್ ಅಕೌಂಟ್ಸ್ ಕಮಿಟಿಯಾಗಲೀ, ಎಸ್ಟಿಮೇಟ್ಸ್ ಕಮಿಟಿಯಾಗಲೀ ಸೇರಲೇ ಇಲ್ಲ. ಬಹುಶಃ ನನಗೆ ತಿಳಿದಮಟ್ಟಿಗೆ ಅದು ಸೇರಲಿಲ್ಲ. ಅದು ತುಂಬಾ ವಿಷಾದಕರವಾದಂಥ ಪ್ರಸಂಗ ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳು ಹಿಂದೆ ಈ ಸ್ವರಾಜ್ಯ ಬರುವುದಕ್ಕೆ ಮುಂಚಿತವಾಗಿದ್ದಂಥ ನ್ಯಾಯವಿಧಾಯಕ ಸಭೆಯಲ್ಲಿ ವಿರೋಧಪಕ್ಷದ ನಾಯಕರಾಗಿದ್ದರು. ಬಹುಶಃ ಆ ಕಾಲದಲ್ಲಿ ಎಸ್ಟಿಮೇಟ್ಸ್ ಕಮಿಟಿಯೂ ಇರಲಿಲ್ಲವೆಂದು ಕಾಣುತ್ತದೆ.

11 A.M.

ಆ ಕಾಲದಲ್ಲೇನಾದರೂ ಹೀಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿ ಸೇರದೆ ಇರುವಂಥ ಪ್ರಸಂಗ ಬಂದಿದ್ದರೆ ಅವರು ಎಷ್ಟು ಕಟುವಾಗಿ ಟೀಕೆ ಮಾಡುತ್ತಿದ್ದರೆಂಬುದನ್ನು ನನಗೆ ಊಹಿಸಲು ಕಷ್ಟವಾಗಿದೆ. ಏಕೆ ಈ ರೀತಿ ಉಪೇಕ್ಷೆ ಮಾಡಿದ್ದಾರೆನ್ನುವುದು ನನ್ನ ಅರಿವಿಗೆ ನಿಲುಕದ ಅಂಶವಾಗಿದೆ. ಪಬ್ಲಿಕ್ ಅಕೌಂಟ್ಸ್ ಕಮಿಟಿ ಮತ್ತು ಎಸ್ಟಿಮೇಟ್ಸ್ ಕಮಿಟಿಗಳವರು, ಈ ಸಭೆಯವರು ಮಂಜೂರು ಮಾಡಿದ ಹಣ ಯಾವ ರೀತಿಯಲ್ಲಿ ಖರ್ಚಾಗುತ್ತಿದೆ,, ಯಾವ ಉದ್ದೇಶಕ್ಕಾಗಿ ಹಣವನ್ನು ಮಂಜೂರು ಮಾಡಿದ್ದಾರೆಯೋ ಅದಕ್ಕಾಗಿಯೇ ಆ ಹಣ ಖರ್ಚಾಗುತ್ತಿದೆಯೋ ಅಥವ ಇಲ್ಲವೇ, ಅದರಲ್ಲಿ ಏನಾದರೂ ದುಂದು ವೆಚ್ಚವಿದೆಯೇ, ಕ್ರಮವರಿತು ಸರ್ಕಾರದ ಹಣ ಖರ್ಚಾಗುತ್ತಿದೆಯೇ, ಇಲ್ಲವೇ ಎನ್ನುವುದನ್ನು ಅರಿಯಬೇಕಾದರೆ ಪ್ರತಿಯೊಂದು ಬಡ್ಜೆಟ್ ಅಧಿವೇಶನಕ್ಕೆ ಮುಂಚೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿ ಮತ್ತು ಎಸ್ಟಿಮೇಟ್ಸ್ ಕಮಿಟಿಯ ವರದಿಗಳನ್ನು ಈ ಸಭೆಗೆ ಸಲ್ಲಿಸಬೇಕಾದುದು ಸರ್ಕಾರದ ಆದ್ಯ ಕರ್ತವ್ಯ

(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No (G) 4751
ದಿನಾಂಕ Date.................

ವಾಗಿತ್ತು. ಆ ರೀತಿ ಮಾಡದೆ ಇರುವುದು ಒಂದು ಕರ್ತವ್ಯ ಲೋಪವಾಗಿದೆ, ಕ್ಷಮಾರ್ಹವಾದ ಲೋಪವಲ್ಲ ವೆಂದು ಹೇಳುತ್ತೇನೆ. ನಾವು ಸಾರ್ವಜನಿಕರ ಪ್ರತಿನಿಧಿಗಳು. ಸಾರ್ವಜನಿಕ ಪ್ರತಿನಿಧಿಗಳಾಗಿ ಬಂದು ದೇಶದ ಆಡಳಿತ ನಡೆಸುವಾಗ ಅದು ಸರಿಯಾಗಿ ನಡೆಯುತ್ತಿದೆಯೇ ಇಲ್ಲವೇ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾದುದು ನಮ್ಮ ಕರ್ತವ್ಯ.

1947ರಿಂದೀಚೆಗೆ ಈ ದೇಶಕ್ಕೆ ಸ್ವರಾಜ್ಯ ಬಂದ ಮೇಲೆ ನಾವೇ ನಮ್ಮ ಆಡಳಿತವನ್ನು ನಡೆಸಿಕೊಳ್ಳುವುದಕ್ಕೆ ನಾವು ನಡೆಸುವಂಥ ಆಡಳಿತಕ್ಕೆ ನಾವೇ ಜವಾಬ್ದಾರರು ಎಂದು ನಮ್ಮ ಮೇಲೆ ಜವಾಬ್ದಾರಿ ಬಂದಮೇಲೆ ಸಾರ್ವಜನಿಕಾಭಿಪ್ರಾಯ ಸರಿಯಾದ ರೀತಿಯಲ್ಲಿ ವ್ಯಕ್ತವಾಗುತ್ತಿಲ್ಲವೆಂದು ನನಗಾದರೂ ಅನ್ನಿಸುತ್ತದೆ. ಆಳುವ ಪಕ್ಷದ ಸದಸ್ಯರಾದ ನಮ್ಮ ಮೇಲೆ ಒಂದು ಮಿತಿ ಇದೆ. ನಾವು ಮಾಡುವ ಟೀಕೆಗಳ ಮೇಲೆ ಒಂದು ಮಿತಿ ಇದೆ. ನಾವು ಮಿತಿಮೀರಿದ ಟೀಕೆ ಮಾಡುವ ಹಾಗಿಲ್ಲ. ವಿರೋಧ ಪಕ್ಷದವರು ಈಗ ಇಲ್ಲದಿರುವುದರಿಂದ ಅವರ ವಿಚಾರದಲ್ಲಿ ಟೀಕೆ ಮಾಡುವುದಕ್ಕೆ ಇಷ್ಟವಿಲ್ಲ. ಅವರು ಇದ್ದಿದ್ದರೆ ಆ ವಿಚಾರದಲ್ಲಿಯೂ ಕೂಡ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೆ. ಪ್ರಜಾಪ್ರಭುತ್ವಾಡಳಿತ ಪದ್ಧತಿಯಲ್ಲಿ ಆಡಳಿತ ಪಕ್ಷಕ್ಕೆ ಒಂದು ವಿರೋಧ ಪಕ್ಷ ಅಗತ್ಯ. ನಾವು ನಮ್ಮ ರೂಪವನ್ನು ನೋಡಿಕೊಳ್ಳಬೇಕಾದರೆ ಕನ್ನಡಿ ಹೇಗೆ ಅಗತ್ಯವೋ ಅದೇ ರೀತಿಯಲ್ಲಿ ನಮ್ಮ ಆಡಳಿತ ಸರಿಯಾಗಿ ನಡೆಯುತ್ತಿದೆಯೇ ಇಲ್ಲವೇ ಎನ್ನುವುದನ್ನು ನೋಡಬೇಕಾದರೆ ಎಚ್ಚರವಾಗಿರತಕ್ಕ, alert ಆಗಿರತಕ್ಕ ವಿರೋಧ ಪಕ್ಷ ಅಗತ್ಯವಾಗಿ ಬೇಕು. ಈಗ ಆ ರೀತಿಯ ವಿರೋಧ ಪಕ್ಷ ಇದೆಯೇ ಇಲ್ಲವೇ ಎನ್ನುವ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ನನ್ನ ಮಾನ್ಯ ಸ್ನೇಹಿತರಾದ ವಿರೋಧ ಪಕ್ಷದ ಸದಸ್ಯರು ಈ ಸಭೆಯಲ್ಲಿಲ್ಲದೆ ಇರುವಾಗ ಅವರ ವಿಚಾರದಲ್ಲಿ ಒಂದು ಟೀಕೆಯನ್ನು ಮಾಡಿದಂಥ ಅಪವಾದಕ್ಕೆ ಗುರಿಯಾಗುತ್ತೇನೆ ಎನ್ನುವ ಭಯದಿಂದ ಟೀಕೆ ಮಾಡುವುದಿಲ್ಲ.

ಆಡಳಿತವಾದರೂ ಸರಿಯಾಗಿ ನಾವು ನಿರೀಕ್ಷಿಸಿದ ರೀತಿಯಲ್ಲಿ ಆ ವೇಗದಲ್ಲಿ ನಡೆಯುತ್ತಿದೆಯೇ ಎಂದರೆ ಅದೂ ಇಲ್ಲ. ಅಧಿಕಾರವರ್ಗ ಯಾವ ರೀತಿಯಲ್ಲಿ ಹೆಜ್ಜೆ ಹಾಕುತ್ತಿದೆ ಎಂದರೆ ಅದನ್ನು ಇಲ್ಲಿ ವ್ಯಕ್ತಪಡಿಸುವುದು ಕೂಡ ಕಷ್ಟ. ಸರ್ಕಾರ ಒಂದು ರೀತಿಯಲ್ಲಿ ಹೋಗುತ್ತಿದ್ದರೆ ಅಧಿಕಾರವರ್ಗ ಇನ್ನೊಂದು ರೀತಿಯಲ್ಲಿ ಹೋಗುತ್ತಿದೆ. ಬರುಬರುತ್ತ ಸರ್ಕಾರದ ಹಿಡಿತ ಅಧಿಕಾರ ವರ್ಗದಮೇಲೆ ಬಹುಮಟ್ಟಿಗೆ ಕಡಮೆಯಾಗಿದೆ ಅದಕ್ಕೆ ನೂರೆಂಟು ಕಾರಣಗಳಿವೆ. ಹಿಂದೆ ಇದ್ದಂಥ set upನಲ್ಲಿ ಒಬ್ಬ ಡೆಪ್ಯುಟಿ ಕಮೀಷನರು ಅಮಲ್ದಾರರ ಮೇಲೆ ಅವರು ಸರಿಯಾಗಿ ಕೆಲಸಮಾಡುವುದಿಲ್ಲವೆಂದು ಒಂದು ಕಾಗದ ಬರೆದರೆ ಅಲ್ಲಿಗೆ ಮುಗಿದು ಹೋಗುತ್ತಿತ್ತು. ಅವರಿಗೆ ಪ್ರಮೋಷನ್ ವಗೈರೆ ಸಿಕ್ಕುವ ಹಾಗೆಯೇ ಇರಲಿಲ್ಲ. ಈಗ ಹಾಗಿಲ್ಲ. ಡೆಪ್ಯುಟಿ ಕಮೀಷನರು ಏನಾದರೂ ಬರೆದರೆ, ಅವರು ಹಾಗೆ ಬರೆದದ್ದು ಸರಿ ಎನ್ನುವುದಕ್ಕೆ ಅವರೇ ರುಜುವಾತು ಕೊಡಬೇಕು. ಅದಕ್ಕೆ ಪಬ್ಲಿಕ್ ಸರ್ವಿಸ್ ಕಮಿಷನ್ ಮುಂದೆ ಹೋಗಬೇಕು, ಹೀಗೆ ನೂರೆಂಟಿವೆ. ಹೀಗಾಗಿರುವುದರಿಂದ ಮೇಲ್ಪಟ್ಟ ಅಧಿಕಾರಿಗಳ ಹಿಡಿತ ಅವರ ಕೈಕೆಳಗೆ ಕೆಲಸ ಮಾಡುವವರ ಮೇಲೆ ಏನೇನೂ ಇಲ್ಲದ ಹಾಗೆ ಆಗಿದೆ. ಇದೂ ಅಲ್ಲದೆ ಇನ್ನೂ ಅನೇಕ ಕಾರಣಗಳಿಂದ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ನೆರವೇರಿಸುವುದಕ್ಕೆ ಅಡಚಣೆಯಾಗಿದೆ. ಅಲ್ಲದೆ ಅನೇಕ ಅಧಿಕಾರಿಗಳಿಗೆ ಅವರು ಮಾಡಬೇಕಾದ ಕೆಲಸಗಳಲ್ಲಿ ನಂಬಿಕೆಯೇ ಇಲ್ಲ. ಸರ್ಕಾರದ ಕೆಲಸದಲ್ಲಿ ಅಡಚಣೆಯಾಗುವುದಕ್ಕೆ ಇದೂ ಒಂದು ಬಲವತ್ತರವಾದ ಕಾರಣವಾಗಿರಬಹುದು. ಅನೇಕ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ನೆರವೇರಿಸುವುದಕ್ಕೆ ಬದಲಾಗಿ, ಅವರು ಯಾವ ಕರ್ತವ್ಯವನ್ನು ಮಾಡಬೇಕೋ ಅದನ್ನು ಬಿಟ್ಟು ಬೇರೆ ಕೆಲಸಗಳಲ್ಲಿ ತೊಡಗಿರುತ್ತಾರೆ. ಹೀಗಾಗಿ ದೇಶದಲ್ಲಿ ಆಡಳಿತ ಎಷ್ಟು ವೇಗದಿಂದ ಹೋಗಬೇಕೆಂದು ನಾವು ನಿರೀಕ್ಷೆ ಮಾಡಿದ್ದೆವೋ, ಈ ದೇಶವನ್ನು ಪುನರ್ರಚನೆ ಮಾಡಬೇಕಾದರೆ, ದೇಶವನ್ನು ಸುಭದ್ರವಾಗಿ ಕಟ್ಟಬೇಕಾದರೆ ಯಾವ ರೀತಿಯ ಆಡಳಿತ ನಡೆಯಬೇಕೆಂದು ನಿರೀಕ್ಷೆ ಮಾಡಿದ್ದೆವೋ ಆ ನಿರೀಕ್ಷೆ ನಮಗೆ ಈಡೇರುತ್ತಿಲ್ಲ. ಹೀಗಾಗಿ ದೇಶದಲ್ಲಿ ಆಡಳಿತ ಸರಿಯಾಗಿ, ಸಾಕಷ್ಟು ಸಮರ್ಪಕವಾಗಿ ನಡೆಯುತ್ತಿಲ್ಲವೆಂದರೆ, ನಾವು ನಮ್ಮ ಪಕ್ಷವನ್ನೇ ಟೀಕೆಮಾಡಿಕೊಂಡೆವು ಎಂದು ಯಾರೂ ಭಾವನೆ ಮಾಡಬಾರದು. ಇದನ್ನು ಅತ್ಯಗತ್ಯವಾಗಿ ಹೇಳಬೇಕಾಗಿದೆ.

'ವೋಟ್ ಆನ್ ಅಕೌಂಟ್'ನಲ್ಲಿ ನಾಲ್ಕು ತಿಂಗಳಿಗೆ ಮಾತ್ರ ಹಣವನ್ನು ಕೇಳಿದ್ದಾರೆ. ಪ್ರತಿಯೊಂದು ಬಾಬೂ ಕೂಡ ಚರ್ಚೆಯಾಗುತ್ತದೆ. ಆದುದರಿಂದ ಈಗ ವಿವರವಾಗಿ ಪ್ರತಿಯೊಂದು ಬಾಬಿನ ಮೇಲೂ ಕೂಡ ನಾವು ಹೇಳಬೇಕಾಗಿಲ್ಲ. ಸಾಮಾನ್ಯವಾಗಿ Vote on Account ಎಂದರೆ ಎಲ್ಲಿಯೂ ಕೂಡ ಒಂದೆರಡು ದಿನದಲ್ಲಿ ಮಂಜೂರಾತಿ ದೊರಕುತ್ತದೆ. ಸರ್ಕಾರ ನಡೆಯುವುದಕ್ಕೆ ಒಂದು ಏರ್ಪಾಡನ್ನು ನಾವು ಮಾಡತಕ್ಕದ್ದು. ಸರ್ಕಾರದ ರೀತಿ ನೀತಿಯ ಬಗ್ಗೆ ಚರ್ಚೆ ಮಾಡುವ ಸಂದರ್ಭ ಬೇರೆ ಬರುತ್ತದೆ. ಈ ಸಂದರ್ಭದಲ್ಲಿ ನನ್ನ ಮನಸ್ಸಿನ ಮೇಲೆ ಬಹಳ ಯಾತನೆಯನ್ನುಂಟುಮಾಡುತ್ತಿರುವ ವಿಚಾರವೆಂದರೆ ಮಾನ್ಯ ಶ್ರೀ ಮರಿಯಪ್ಪನವರು ಆರ್ಥಿಕ ಮಂತ್ರಿಗಳಾಗಿದ್ದೂ ಎಸ್ಟಿಮೇಟ್ಸ್ ಕಮಿಟಿ ಮತ್ತು ಪಬ್ಲಿಕ್ ಅಕೌಂಟ್ಸ್ ಕಮಿಟಿ ಈ ಎರಡರ ವರದಿ ನಮ್ಮ ಕೈಸೇರಲಿಲ್ಲವಲ್ಲ ಎನ್ನುವುದು. ಈ ವಿಷಯದಲ್ಲಿ ನನ್ನ ವಿಷಾದವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳಿರತಕ್ಕದ್ದು ಬಹಳ ಪ್ರಾಮುಖ್ಯವಾದ ವಿಚಾರ. ಪಬ್ಲಿಕ್ ಅಕೌಂಟ್ಸ್ ಕಮಿಟಿ ಮತ್ತು ಎಸ್ಟಿಮೇಟ್ಸ್ ಕಮಿಟಿ ಇವೆರಡೂ watch dogs of the House over Governmental Expenditure. ಸಾಮಾನ್ಯವಾಗಿ ಈ ಎರಡು ಸಮಿತಿಗಳೂ ಕೆಲಸಮಾಡಬೇಕು ಎನ್ನುವುದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ ಈ ವರ್ಷ ಸ್ವಲ್ಪ ಪ್ರೊಸೀಜರ್‌ನಲ್ಲಿ ಬದಲಾವಣೆಯಾಗಿದೆ. ಬೊಂಬಾಯಿನಲ್ಲಿ ಆರ್ಥಿಕ ಮಂತ್ರಿಗಳು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಚೇರ್‌ಮನ್ ಆಗಿದ್ದಾರೆ. ಹಳೇ ಮೈಸೂರಿನಲ್ಲಿಯೂ ಅದೇ ಸಂಪ್ರದಾಯವನ್ನು ನಾವು ಇಟ್ಟುಕೊಂಡು ಬಂದೆವು. ಆದರೆ ಈಗ ಅದನ್ನು ಸಂಪೂರ್ಣವಾಗಿ ಸ್ವತಂತ್ರವಾದುದನ್ನಾಗಿ ಮಾಡಬೇಕೆಂದು ನಮ್ಮ ಅಧ್ಯಕ್ಷರು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಖಾಸಗಿ ಸದಸ್ಯರನ್ನೇ ಚೇರ್‌ಮನ್ ಆಗಿ ಮಾಡಿದ್ದಾರೆ. ಇನ್ನೊಂದು ವಿಷಯವನ್ನು ತಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು: ಪಬ್ಲಿಕ್ ಅಕೌಂಟ್ಸ್ ಕಮಿಟಿ ಮತ್ತು ಎಸ್ಟಿಮೇಟ್ಸ್ ಕಮಿಟಿ ಇವೆರಡೂ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದಿರತಕ್ಕ ಈ ಸಭೆಯ ಉಪ ಸಮಿತಿಗಳು. ನನಗೆ ಅವುಗಳ ಮೇಲೆ ಯಾವ ವಿಧವಾದ ಹತೋಟಿಯೂ ಇಲ್ಲ. ಎಸ್ಟಿಮೇಟ್ಸ್ ಕಮಿಟಿ ಸೇರುವುದಕ್ಕಾಗಲಿಲ್ಲವಲ್ಲ ಎಂದು ನಾನೂ ಸಹ ನೊಂದುಕೊಂಡೆ. ಬಡ್ಜೆಟ್

(ಶ್ರೀ ಟಿ. ಮರಿಯಪ್ಪ)

ಅಂದಾಜುಗಳನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಮೊದಲು ಪಬ್ಲಿಕ್ ಅಕೌಂಟ್ಸ್ ಕಮಿಟಿ ಸೇರಿ ಅದರ ವರದಿಯನ್ನು ಸಭಾಸದರಿಗೆ ಕೊಡಬೇಕಾಗಿತ್ತು. ಆದರೆ ಅದಕ್ಕೆ ಖಾಸಗಿ ಸದಸ್ಯರು ಅಧ್ಯಕ್ಷರಾಗಿರುವುದರಿಂದ ನನ್ನ ಹತೋಟಿ ಅದರ ಮೇಲಿಲ್ಲ. ಈ ಸಮಿತಿಯ ಚೇರ್‌ಮನ್ ಅವರು ಸಭಾಧ್ಯಕ್ಷರನ್ನು consult ಮಾಡಿ ಮೀಟಿಂಗ್ ಕರೆಯಬೇಕಾಗಿತ್ತು. ಸರ್ಕಾರಕ್ಕೆ ಈ ವಿಷಯದಲ್ಲಿ ಎಳ್ಳಷ್ಟೂ ಜವಾಬ್ದಾರಿ ಇಲ್ಲವೆಂದು ಮನವಿ ಮಾಡಿಕೊಳ್ಳುತ್ತೇನೆ. ಅವರುಗಳು ಮೀಟಿಂಗ್ ಕರೆದಿದ್ದರೆ ನಾವು ಅವರಿಗೆ ಬೇಕಾದ ಸಹಾಯವನ್ನೆಲ್ಲ ಕೊಡುವುದಕ್ಕೆ ತಯಾರಾಗಿದ್ದೆವು. ಈ ಮಾನ್ಯ ಸಭೆಯ ಮೂಲಕ ನಾನು ಅಧ್ಯಕ್ಷರನ್ನು ಪ್ರಾರ್ಥನೆ ಮಾಡುವುದೇನೆಂದರೆ ದಯವಿಟ್ಟು, ಆದಷ್ಟು ಬೇಗ ಈ ಸಮಿತಿಯ ಮೀಟಿಂಗನ್ನು ಕರೆಯಬೇಕು. ಅಧಿವೇಶನ ನಡೆಯುವ ಕಾಲದಲ್ಲಿಯೇ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಸೇರಿ, ಪ್ರತಿದಿನವೂ ಸೇರಿ ಆಡಿಟ್ ರಿಪೋರ್ಟ್ ವಗೈರೆ ಅವರ ಮುಂದಿಟ್ಟು ಸಮಿತಿಯವರ ಅಭಿಪ್ರಾಯವನ್ನು ಈ ಸಭೆ ಮುಕ್ತಾಯವಾಗುವುದರೊಳಗಾಗಿ ಸಭೆಯ ಮುಂದೆ ಮಂಡಿಸುವಂತೆ ಏರ್ಪಾಡುಮಾಡಬೇಕು. ಮರಿಯಪ್ಪನವರು ಇದ್ದೂ ಹೀಗೇಕೆ ಮಾಡಿದರು ಎಂದು ಸಭಾಸದಸ್ಯರು ಕೇಳುತ್ತಾರೆಂದು ನನಗೆ ಗೊತ್ತಿತ್ತು. ಆದರೆ ಸಮಿತಿಯ ಮೀಟಿಂಗನ್ನು ಕರೆಯದೆ ಇದ್ದುದಕ್ಕೆ ನಾನೂ ಜವಾಬ್ದಾರನಲ್ಲ, ಹಣಕಾಸಿನ ಶಾಖೆಯೂ ಜವಾಬ್ದಾರಿಯಲ್ಲ. ಇದು ಸಂಪೂರ್ಣ ಸ್ವತಂತ್ರ ಸಂಸ್ಥೆಯಾದುದರಿಂದ ಸಮಿತಿಯ ಅಧ್ಯಕ್ಷರೂ ಮತ್ತು ಈ ಸಭಾಧ್ಯಕ್ಷರೂ ಮಾಡಬೇಕಾದ ಕಾರ್ಯ. ಆದಷ್ಟು ಬೇಗನೆ ಈ ಸಮಿತಿಯನ್ನು ಕರೆಯಬೇಕಾದ್ದು ಅಗತ್ಯವಾದದ್ದು. ಇದರಲ್ಲಿ ಕರ್ತವ್ಯಲೋಪವಾಗುವುದಿಲ್ಲವೆಂದು ನಂಬಿದ್ದೇನೆ.

ಅಧ್ಯಕ್ಷರು.—ನಾನೂ ಸಹ ಇದಕ್ಕೆ ಸ್ವಲ್ಪ ಜವಾಬ್ದಾರನಾಗಿದ್ದೇನೆ. ಇದರಲ್ಲಿ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಟಿ. ಮರಿಯಪ್ಪನವರ ಜವಾಬ್ದಾರಿ ಏನೂ ಇಲ್ಲ. ನಾನು ಈ ಬಗ್ಗೆ ಎರಡಾವರ್ತಿ ಪ್ರಯತ್ನ ಮಾಡಿದೆ. ಆದರೆ ಹಾಗೆ ನಾನು ಒಂದಲ್ಲಾ ಎರಡು ಸಾರಿ ಪ್ರಯತ್ನ ಪಟ್ಟಾಗ್ಯೂ ಆ ಸಮಿತಿ ಒಂದಲ್ಲಾ ಒಂದು ಕಾರಣದಿಂದ ಸೇರಲು ಸಾಧ್ಯವಾಗಲಿಲ್ಲ. ಈ ವಿಚಾರವಾಗಿ ನಾನು ಅಕೌಂಟೆಂಟ್ ಜನರಲ್ ಅವರನ್ನು ಸಹ ಭೇಟಿ ಮಾಡಿದ್ದೇನೆ. ಅವರು "ನಾವೂ ನೀವು ಇಷ್ಟರಲ್ಲೇ ಒಂದು ಕಡೆ ಸೇರಿ ಈ ವಿಚಾರವನ್ನು ಚರ್ಚೆ ಮಾಡಿ ಆದಷ್ಟು ಬೇಗ ಪಬ್ಲಿಕ್ ಅಕೌಂಟ್ಸ್ ಕಮಿಟಿಯನ್ನು ಕರೆಯೋಣವೆಂದು ಹೇಳಿದ್ದಾರೆ. ಆ ರೀತಿ ಆದಷ್ಟು ಬೇಗ ಆ ಸಮಿತಿಯನ್ನು ಕರೆಯಲು ಪ್ರಯತ್ನ ಮಾಡುತ್ತೇನೆ.

*ಶ್ರೀ ಎ. ಮುನಿರಾಜು (ಚಿಕ್ಕಬಳ್ಳಾಪುರ).—ಮಾನ್ಯ ಸಭಾಪತಿಗಳೇ, ಈ ದಿವಸ ವೋಟ್ ಆನ್ ಅಕೌಂಟ್ ಬಡ್ಜೆಟ್ ಪಟ್ಟಿಯನ್ನು ಸರ್ಕಾರದವರು ಸಭೆಯ ಮುಂದಿಟ್ಟು ಇದರಮೇಲೆ ಚರ್ಚೆ ಮಾಡಬೇಕೆಂದು ತಿಳಿಸಿದ್ದಾರೆ. ಆದರೆ ಈಗಾಗಲೇ ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಸರ್ಕಾರಿ ಆಡಳಿತ ಯಂತ್ರ ಸಡಿಲವಾಗಿ ದೇಶಾಭಿವೃದ್ಧಿಯ ಕೆಲಸ ಕಾರ್ಯಗಳು ಎಷ್ಟು ವೇಗವಾಗಿ ನಡೆಯಬೇಕೋ ಎಷ್ಟು ಸಮರ್ಪಕವಾಗಿ ನಡೆಯಬೇಕೋ ಅಷ್ಟು ಆಗುತ್ತಿಲ್ಲವಾದುದರಿಂದ ಬೇಗ ಅದನ್ನು ಉತ್ತಮಗೊಳಿಸಬೇಕೆಂದು ಹೇಳಿದ್ದಾರೆ. ಆದುದರಿಂದ ನಾನಿನ್ನು ಈ ವಿಚಾರವನ್ನು ಹೆಚ್ಚು ಲಂಬಿಸುವುದಕ್ಕೆ ಹೋಗುವುದಿಲ್ಲ. ನಮಗೆ ಸ್ವಾತಂತ್ರ್ಯ ಬಂದಮೇಲೆ ನಾವು ಒಂದು ಹೆಚ್ಚಿನ ವೇಗದಲ್ಲಿ ಒಂದು ಒಳ್ಳೆಯ ಬುನಾದಿಯ ಮೇಲೆ ನಮ್ಮ ದೇಶದ ಅಭ್ಯುದಯವನ್ನು ಸಾಧಿಸತಕ್ಕಂಥ ರೀತಿಯಲ್ಲಿ ನಮ್ಮ ಆಡಳಿತವನ್ನು ನಡೆಸಿಕೊಂಡು ಹೋಗಬೇಕೆಂದಿದ್ದೆವು. ಆದರೆ ಈ ಕಾರ್ಯಗಳು ನಾವು ಆಶಿಸಿದ್ದ ರೀತಿಯಲ್ಲಿ ನಡೆಯಲಿಲ್ಲ. (ಸದುದ್ದೇಶದಿಂದಲೋ ಅಥವಾ ಮತ್ತೆ ಯಾವ ಉದ್ದೇಶದಿಂದಲೋ) ಇಲ್ಲಿಯವರೆಗೂ ಆದದ್ದಾಯಿತು. ಇನ್ನು ಮುಂದಕ್ಕಾದರೂ ಇಂಥ ದೋಷಾರೋಪಣೆಗಳಿಗೆ ಅವಕಾಶ ಕೊಡದ ರೀತಿಯಲ್ಲಿ ನಮ್ಮ ಸರ್ಕಾರಿ ಆಡಳಿತವರ್ಗ ದೇಶಾಭಿವೃದ್ಧಿಯ ಕೆಲಸ ಕಾರ್ಯಗಳನ್ನು ಚಟುವಟಿಕೆಯಿಂದ ನಡೆಸಲು ತಕ್ಕ ಏರ್ಪಾಡುಗಳನ್ನು ಮಾಡುತ್ತಾರೆಂದು ಭಾವಿಸುತ್ತೇನೆ.

ಇನ್ನು ಪ್ರಜಾಪ್ರಭುತ್ವಾಡಳಿತದಲ್ಲಿ ಯಾವತ್ತೂ ಒಂದು ವಿರೋಧಪಕ್ಷವಿರಬೇಕಾದುದು ಅತ್ಯಾವಶ್ಯಕ. ಆದರೆ ಅದೊಂದು ಸುವ್ಯವಸ್ಥಿತವಾದ ಪಕ್ಷವಾಗಿರಬೇಕು. ದೇಶದ ಒಂದು ಆಗು-ಹೋಗುಗಳೇನಿವೆಯೋ ಅದನ್ನು ನಿರ್ಧರಿಸಲು ಸರ್ಕಾರಕ್ಕೆ ಒಂದು ಮಾರ್ಗದರ್ಶಕವಾದಂಥ ಪಕ್ಷ ಅದು. ಆದುದರಿಂದ ಈ ದಿನ ಯಾವುದು ಒಂದು ವಿರೋಧಪಕ್ಷವೆಂದು ಇರುತ್ತದೆಯೋ ಅದು ಸರ್ಕಾರದ ಕಾರ್ಯಕಲಾಪಗಳನ್ನು ಒಂದು ಅನ್ಯಥಾ ರೀತಿಯಲ್ಲಿ ಟೀಕೆ ಮಾಡುವುದಕ್ಕೆ ಹೋಗದೆ ಒಂದು ರಚನಾತ್ಮಕ ರೀತಿಯಲ್ಲಿ ಟೀಕೆ ಮಾಡಿ ಸರ್ಕಾರ ಒಂದು ಒಳ್ಳೆಯ ಹಾದಿಯಲ್ಲಿ ಹೋಗುವಂತೆ ಮಾಡಬೇಕಾದ ಒಂದು ಮುಖ್ಯ ಕರ್ತವ್ಯ ಆ ವಿರೋಧಪಕ್ಷದ ಹೊಣಗಾರಿಕೆಗೆ ಸೇರಿದ್ದಾಗಿದೆ. ಅಂಥ ಒಂದು ಸದವಕಾಶವನ್ನು ನಮ್ಮ ವಿರೋಧಪಕ್ಷದ ಮಾನ್ಯ ಸದಸ್ಯರ ಉಪಯೋಗಿಸಿಕೊಳ್ಳದೆ ಅದರಿಂದ ದೇಶಕ್ಕೊಂದು ಹೆಚ್ಚಿನ ಅಪಘಾತಕವೇನಾದರೂ ಆದರೆ ಅದಕ್ಕೆಲ್ಲ ಅವರೇ ಜವಾಬ್ದಾರರಾಗಬೇಕಾಗಿ ಬರಬಹುದೆಂದು ನನಗೆ ಅನಿಸುತ್ತಿದೆ. ಆದರೆ ಆ ವಿರೋಧ ಪಕ್ಷದ ಮಾನ್ಯ ಸದಸ್ಯರು ಈಗ ಸಭೆಯಲಿಲ್ಲ. ಆದಕಾರಣ ನಾನೀಗ ಅವರ ವಿಚಾರವಾಗಿ ಪ್ರಸ್ತಾಪ ಮಾಡುವುದು ಅಷ್ಟು ಸಾಧುವಾದುದಲ್ಲ. ಆದರೆ ಈ ಹಿಂದೆ ನಮ್ಮ ಮಾನ್ಯ ಸಭಾಪತಿಗಳವರು ವಿರೋಧ ಪಕ್ಷದವರು ತಂದಿದ್ದಂಥ ಒಂದು ನಿಲುವಳಿ ಸೂಚನೆಯ ಬಗ್ಗೆ ಏನೊಂದು ತಮ್ಮ ರೂಲಿಂಗನ್ನು ಕೊಟ್ಟರೋ ಅದರಿಂದ ಆ ವಿರೋಧ ಪಕ್ಷದವರಿಗೆ ಅವರ ಮನಸ್ಸಿನಲ್ಲಿ ಅವರೇನು ದೇಶಕ್ಕೊಂದು ಒಳ್ಳೆಯದನ್ನುಂಟು ಮಾಡಬೇಕೆಂಬ ಸದುದ್ದೇಶದಿಂದ ಆ ಒಂದು ನಿಲುವಳಿ ಸೂಚನೆಯನ್ನು ತಂದಿದ್ದರೋ ಅದನ್ನು ಸಭೆಯಲ್ಲಿ ಚರ್ಚೆಮಾಡಿ ಅದಕ್ಕೊಂದು ಒಳ್ಳೆಯ ಚಿತ್ರಕೊಟ್ಟು ತನ್ಮೂಲಕ ಅವರು ಪ್ರಜೆಗಳಿಂದ ಒಂದು ಒಳ್ಳೆಯ ಅಭಿಪ್ರಾಯ ಪಡೆಯಬೇಕೆಂದಿದ್ದು ಆಗ ಸಫಲವಾಗದೆ ಇದ್ದರೂ ಅವರಿಗೆ ಬಡ್ಜೆಟ್ ಮೇಲೆ ಚರ್ಚೆನಡೆಸುವಾಗ ಇದ್ದ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಆ ವಿಚಾರಗಳನ್ನೇ ಮತ್ತೆ ಚರ್ಚೆ ಮಾಡಲು ಅವಕಾಶವಿತ್ತು. ಆದರೆ ಅವರೇಕೆ ಆ ರೀತಿ ಮಾಡಲಿಲ್ಲವೋ ನನಗೆ ಅದು ಗೊತ್ತಾಗುತ್ತಿಲ್ಲ. ಅವರು ಆ ವಿಚಾರದಲ್ಲಿ ಇತ್ತೀಚೆಗೆ ಅನುಸರಿಸಿದ ರೀತಿ ನೀತಿಯನ್ನು ನೋಡಿದರೆ ಅವರೇನು ತಮ್ಮ ನಿಲುವಳಿ ಸೂಚನೆಯಲ್ಲಿ ಯಾವ ಒಂದು ಅಂಶ ಅತ್ಯಂತ ಖಚಿತವಾದುದೆಂದು ಭಾವಿಸಿ ಅದಕ್ಕೊಂದು ರೂಪು ಕೊಡಬೇಕೆಂದು ಉದ್ದೇಶಿಸಿದ್ದಾರೋ ಆ ವಿಚಾರದಲ್ಲೇ ಅವರಿಗೆ ಅಂಥ ಒಂದು ನಂಬಿಕೆ ಇಲ್ಲದುದರಿಂದಲೇ ಪ್ರಾಯಶಃ ಅವರು ಅಧ್ಯಕ್ಷರು ಕೊಡುತ್ತಿದ್ದ ಈ ಒಂದು ಅವಕಾಶವನ್ನು ಅವರು ಉಪಯೋಗ ಮಾಡಿ

ಕೊಳ್ಳಲು ಇಷ್ಟಪಡಲಿಲ್ಲವೆಂದೂ ಮತ್ತು ಅವರು ಅಂಥ ಒಂದು ನಿರ್ದಿಷ್ಟರೀತಿಯಲ್ಲಿ ಕ್ರಮ ಕೈಗೊಳ್ಳ ಲಿಲ್ಲವೆಂದೂ ನನಗನಿಸುತ್ತದೆ. ಈಗ ನಮ್ಮ ಸಭೆಯ ಮುಂದಿರತಕ್ಕ ಬಡ್ಜೆಟ್ಟಿನ ಮೇಲೆ ಅನೇಕ ವಿಷಯಗಳು ಚರ್ಚೆಯಾಗಬೇಕಾದ್ದಿದೆ. ಅನೇಕ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಆದರೆ ಸರ್ಕಾರ ನಿರ್ವಹಿಸಿಕೊಂಡು ಬರತಕ್ಕ ಕೆಲಸ ಕಾರ್ಯ ಗಳು ಅನೇಕವಾಗಿವೆ. ಅವುಗಳನ್ನು ಸರ್ಕಾರ ಆದಷ್ಟು ನಿರ್ವಹಿಸಿಕೊಂಡು ಬರುತ್ತಿದೆ. ಆದರೆ ಇತ್ತೀ ಚೆಗೆ ಹೊಸ ರಾಜ್ಯವಾದಮೇಲೆ 5 ಹೊಸ ಭಾಗಗಳು ಒಂದುಕಡೆ ಒಟ್ಟಾಗಿ ಸೇರಿರುವಾಗ ಕೆಲಸಗಳು ಅಷ್ಟು ಸರಾಗವಾಗಿ ನಡೆಯಬೇಕೆಂದರೆ ಅದು ಸಾಧ್ಯವಿಲ್ಲ. ಅನೇಕ ಕಷ್ಟಗಳಿರುತ್ತವೆ. ಆದ್ದರಿಂದ ಜನರು ದೇಶಾ ಭ್ಯುದಯ ಕಾರ್ಯಗಳ ಬಗ್ಗೆ ಏನೊಂದು ನಿರೀಕ್ಷಣೆ ಮಾಡಿಕೊಂಡಿದ್ದರೋ ಅಷ್ಟು ಹೆಚ್ಚಿನ ವೇಗದಲ್ಲಿ ಆ ಕೆಲಸಗಳನ್ನು ನಡೆಸಿಕೊಂಡು ಹೋಗಲು ಸಾಧ್ಯವಾಗ ಲಿಲ್ಲವೆಂದು ನಾವೀಗ ಅಂದುಕೊಳ್ಳಬೇಕಾಗಿದೆ. ಆದರೆ ಇಂದು ನಮ್ಮ ಸರ್ಕಾರೀ ಆಡಳಿತ ಯಂತ್ರವು ಜನತೆ ಏನೊಂದು ಹೆಚ್ಚಿನ ನಿರೀಕ್ಷಣೆಯನ್ನು ಮತ್ತು ಒಂದು ಹೆಚ್ಚಿನ ವೇಗದಲ್ಲಿ ಜನಾನುಕೂಲ ಕಾರ್ಯಗಳಾಗ ಬೇಕೆಂದು ಆಶಿಸುತ್ತಿದೆಯೋ ಆ ಮಟ್ಟದಲ್ಲಿ ಅದು ಕೆಲಸ ಕಾರ್ಯಗಳನ್ನು ಮಾಡುತ್ತಿಲ್ಲ ಎನ್ನುವುದು ನಿರ್ವಿವಾದವಾದ ವಿಷಯ. ಆದುದರಿಂದ ಈ ಸರ್ಕಾರಿ ಆಡಳಿತ ಯಂತ್ರವನ್ನು ಸರಿಪಡಿಸಿ, ತನ್ಮೂಲಕ ಸುಖೀ ರಾಜ್ಯಸ್ಥಾಪನೆಗೆ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಬೇಗ ಕಾರ್ಯರೂಪಕ್ಕೆ ತಂದು ಅದರಿಂದ ದೇಶಕ್ಕೊಂದು ಫಲ ದೊರೆಯು ವಂಥ ರೀತಿಯಲ್ಲಿ ಈ ಆಡಳಿತ ಯಂತ್ರವನ್ನು ಆದಷ್ಟು ಬೇಗ ಸರ್ಕಾರ ಸರಿಪಡಿಸಬೇಕೆಂದು ನಾನು ಈ ಸಂದ ರ್ಭದಲ್ಲಿ ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದರೆ ಇದೇ ಸಂದರ್ಭದಲ್ಲಿ ನಾನು ಮತ್ತೊಂದು ವಿಚಾರ ತಿಳಿಸಬೇಕಾಗಿದೆ. ಗೆಜೆಟೆಡ್ ಹುದ್ದೆಯಲ್ಲಿ ಮತ್ತು ನಾನ್ ಗೆಜೆಟೆಡ್ ಹುದ್ದೆಯಲ್ಲಿರತಕ್ಕ ನೌಕರರಲ್ಲಿ ಅವರ ಸೀನಿಯಾರಿಟಿ ಬಗ್ಗೆ ಏನೋ ಒಂದು ತರಹೆಯ ಜಿಗುಪ್ಸೆ ಬಂದಿರುವಂತೆ ಎಲ್ಲೆಲ್ಲಿಯೂ ಕಾಣಬರುತ್ತಿದೆ. ಎಲ್ಲಿ ನೋಡಲಿ ಈ ನೌಕರ ವರ್ಗ ದಲ್ಲಿ ಅನೇಕರು ನಮಗೆ ದೊರೆಯಬೇಗಿಕಾದ್ದ ಪ್ರಮೋ ಷನ್ ಕೊಡಲಿಲ್ಲ ನಮಗೆ ದೊರೆಯಬೇಕಾಗಿದ್ದ ಸೀನಿಯಾ ಟಿರಿ ತಪ್ಪಿಹೋಯಿತು ಎಂದು ಹೇಳುತ್ತಿದ್ದಾರೆ. ಆದುದ ರಿಂದ ಸರ್ಕಾರದವರು ಆದಷ್ಟು ಬೇಗ ಈ ಸಮಸ್ಯೆಯ ಬಗ್ಗೆ ಒಂದು ಕೂಲಂಕಷವಾದ ಪರಿಶೀಲನೆ ನಡಿಸಿ ಒಂದು ನಿರ್ದಿಷ್ಟ ತೀರ್ಮಾನವನ್ನು ತೆಗೆದುಕೊಳ್ಳದ ವಿನಾ ಅವರಲ್ಲಿರತಕ್ಕ ಆ ಜಿಗುಪ್ಸೆ ಹೋಗುವಂತಿಲ್ಲ. ಆದರೆ ಆ ಜಿಗುಪ್ಸೆ ಆದಷ್ಟು ಬೇಗ ಹೋಗಲೇಬೇಕು. ಅವರ ಜಿಗುಪ್ಸೆ ಹೋಗದಿದ್ದರೆ ಇಲ್ಲಿ ನಮ್ಮ ಕೆಲಸ ಗಳು ಸರಿಯಾಗಿ ನಡೆಯುವುದಿಲ್ಲ. ಆದರೆ ಈ ದಿವಸ ನಮ್ಮ ದೇಶದಲ್ಲಿರತಕ್ಕ ಐ.ಎ.ಎಸ್. ಮತ್ತು ಐ.ಪಿ.ಎಸ್. ಹುದ್ದೆಗಳೇನಿವೆಯೋ ಅವು ನಮ್ಮ ದೇಶಕ್ಕೆ ಖಂಡಿತ ತರವಲ್ಲ. ಈ ಹುದ್ದೆಗಳನ್ನು ಕೇಂದ್ರ ಸರ್ಕಾರ ದವರೇ ಮಾಡಬಹುದು. ಅವರೇ ಮಾಡಿದ್ದಾಗ್ಯೂ ನಮಗೀಹುದ್ದೆಗಳು ಅನಾವಶ್ಯಕವೆಂಬುದಾಗಿ ನಮ್ಮ ಸರ್ಕಾರದವರು ಅವರಿಗೆ ಘಂಟಾಘೋಷವಾಗಿ ತಿಳಿ ಸಲೇಬೇಕು. ನಮ್ಮ ಹಿಂದಿನ ಮೈಸೂರಿನಲ್ಲಿದ್ದ M.C.S. ದರ್ಜೆ ಈಗಿನ I.A.S. ದರ್ಜೆಗಿಂತ ಬಹಳ ಖ್ಯಾತಿ ಹೊಂದಿತ್ತು. ದೇಶವಾತ್ಸಲ್ಯದಿಂದ ಕೆಲಸವ ಮಾಡಿಕೊಂಡು ದೇಶದಲ್ಲಿ ಸಂಪದಭಿವೃದ್ಧಿ ಕಾರ್ಯ ಗಳನ್ನು ಸಲಲಿತವಾಗಿ ಮತ್ತು ಸಮರ್ಪಕವಾಗಿ ನಡೆಸಿಕೊಂಡು ಹೋಗಬೇಕಾಗಿದ್ದರೆ ಇದಕ್ಕೆಲ್ಲ ಹಿಂದಿನ ಮೈಸೂರು ಸಿವಿಲ್ ಸರ್ವಿಸ್ ಅಧಿಕಾರಿಗಳು ಹೆಸರು ಪಡೆದಿದ್ದಾರೆ. ಈಗಿರತಕ್ಕ ನವೀನ I.A.S. ಮತ್ತು I.P.S. ದರ್ಜೆಗಳು ಹಿಂದಿದ್ದ M.C.S. ದರ್ಜೆಗಿಂತ 10 ಪಟ್ಟು ಕಡಮೆ ದರ್ಜೆಯವುಗಳಾಗಿರುತ್ತವೆ. ಹಾಗಿ ದ್ದರೂ ಇವರಿಗೆ ಪ್ರತಿ ತಿಂಗಳೂ 200-250 ರೂಪಾಯಿ ಗಳ ಅಲೋಯನ್ಸುಗಳನ್ನು ಹೆಚ್ಚಾಗಿ ಕೊಡಬೇಕಾ ಗಿದೆ. ಹೀಗೆ ಅಧಿಕಾರಿಗಳ ವರ್ಗಕ್ಕೆ ಒಂದು ಕಡೆ ಅತಿ ಹೆಚ್ಚಿನ 1,200-1,800 ರೂಪಾಯಿಗಳ ಸಂಬಳ ಸಾರಿಗೆಗಳನ್ನು ಕೊಡುತ್ತ ಇನ್ನೊಂದು ಕಡೆ ದೇಶದಲ್ಲಿ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿಯನ್ನು ಜಾರಿಗೆ ತರುತ್ತೇವೆಂದು ಬಾಯಿನಲ್ಲಿ ಹೇಳುತ್ತ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರೈತರಿಗೆ ಒಂದು ಫ್ಯಾಮಿಲಿ ಹಿಡುವಳಿ ಜಮೀನಿದ್ದರೆ ಸಾಕೆಂದು ಹೇಳುತ್ತ 2,000 ರೂಪಾಯಿಗಳ ನೌಕರಿಗಳನ್ನು ಹೆಚ್ಚಿಸಲು ಹೋಗುವುದು ಸರಿಯಾದ್ದಲ್ಲ. ಏನೋ ಕೇಂದ್ರ ಸರ್ಕಾರದವರು ಮಾಡಿದ್ದಾರೆಂದರೆ ಅದೇನು ನಾವೆ ಲ್ಲರೂ ಒಪ್ಪಿಕೊಳ್ಳಲೇಬೇಕೆಂದಿಲ್ಲ. ನಾವು ಈ ಹುದ್ದೆ ಗಳು ನಮಗೆ ಬೇಕಾಗಿಲ್ಲವೆಂದು ಸೂಚಿಸಿದರಾಯಿತು. ಇಂಡಿಯಾ ಸರ್ಕಾರದ ಪ್ಲಾನಿಂಗ್ ಕಮಿಷನಿನವರು ಭೂಸುಧಾರಣೆಯ ಸಂಬಂಧದಲ್ಲಿ ವ್ಯವಸಾಯಗಾರ ರಿಗೆ ಎಂದರೆ ಜಮೀನ್ದಾರರಿಗೆ 1,200 ರೂಪಾಯಿ ಗಳ ವಾರ್ಷಿಕ ವರಮಾನ ಬರತಕ್ಕಂಥ ಒಂದು ಫ್ಯಾಮಿಲಿ ಹಿಡುವಳಿ ಆಸ್ತಿಗಿಂತ ಹೆಚ್ಚಾಗಿರಕೂಡ ದೆಂದು ಹೇಳಿ ಇನ್ನೊಂದು ವರ್ಗದ ಜನರಿಗೆ ತಿಂಗಳಿಗೆ 2,000-3,000 ರೂಪಾಯಿಗಳ ಹುದ್ದೆಗಳನ್ನು ನಿರ್ಮಿಸುತ್ತ ಹೋಗುವುದು ದೇಶಕ್ಕೆ ಕೀರ್ತಿ ತರು ವಂಥ ಕೆಲಸವಲ್ಲ. ಇದರಿಂದ ಮುಂದೆ ದೇಶಕ್ಕೆ ಬಹಳ ಅನ್ಯಾಯ ಮತ್ತು ಅನಾನುಕೂಲಗಳಾಗುತ್ತವೆ. ಆದುದರಿಂದ ಸಮಾಜವನ್ನೇ ಏರುಪೇರು ಮಾಡತಕ್ಕ ಕಾರ್ಯಗಳಿವು. ಸರ್ಕಾರದವರು ಕೂಡಲೆ ಇದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ಇದೇ ರೀತಿ ನಮ್ಮ ರಾಜ್ಯಸರ್ಕಾರದ ಆಡಳಿತ ಯಂತ್ರವನ್ನು ಕೂಡ ಸರಿ ಪಡಿಸಲೇಬೇಕಾಗಿದೆ. ಹಿಂದಿನ ಕಾಲದಲ್ಲಿ ಒಬ್ಬ ಆಫೀಸರು 20-25 ವರ್ಷ ಸರ್ವಿಸ್ ಆಗದ ವಿನಾ ಅತ ನಿಗೆ ಡೆಪ್ಯುಟೀ ಕಮೀಷನರ ಹುದ್ದೆ ದೊರೆಯುವುದು ಬಹಳ ಕಷ್ಟವಾಗಿತ್ತು. ಆದರೆ ಈ ದಿವಸ ಕೆಲವು ವರ್ಷ ಗಳ ಸರ್ವಿಸ್ ಆಗುತ್ತಿದ್ದಹಾಗೇ ಅವರು ಡೆಪ್ಯುಟೀ ಕಮೀಷನರಾಗುತ್ತಾರೆ. ಹಳಬರು ನಮಗೆ ಸೀನಿ ಯರ್ ಡೆಪ್ಯುಟೀ ಕಮಿಷನರ್ ಛಾನ್ಸ್ ಇನ್ನೂ ಬರ ಲಿಲ್ಲವೆಂದು ಕೊರಗಾಡುತ್ತಿದ್ದಾರೆ. ಆದರೆ ನಮ್ಮ ದೇಶದಲ್ಲಿ ಈ ಹೊತ್ತು ಸಹ ಶೇಕಡ 95ರಷ್ಟು ಜನರು ದಿನ ಒಂದಕ್ಕೆ ಒಂದು ರೂಪಾಯಿನ ದಿನ ಕೂಲಿ ಮೇಲೆ ಜೀವನ ನಡೆಸುತ್ತಿದ್ದಾರೆ. ಹಾಗೆ ಒಂದು ಕಡೆ ಜನ ಜೀವನದ ದುರ್ಭರವನ್ನು ಕಾಣುತ್ತಿರುವಾಗ ಇತ್ತ ಕಡೆ ನೌಕರಿ ವರ್ಗದಲ್ಲಿರತಕ್ಕ ಜನ ತಮಗೊಂದು ಜೀವನ ಸುಗಮವಾಗಿ ನಡೆಯುವಂಥ ಅವಕಾಶವಿದ್ದರೂ ಯಾವಾಗ್ಯೂ ತಮ್ಮ ಮೇಲ್ಮೆಯ ಕಡೆಗೇ ಅವರು ದೃಷ್ಟಿಯಿಟ್ಟುಕೊಂಡು ದೇಶದ ಬೆನ್ನು ಮೂಳೆಯೆಂದು ಈ ದಿವಸ ನಾವುಗಳೆಲ್ಲ ಕರೆಯುತ್ತಿರುವ ಜನ ಏನಿ ದ್ದಾರೋ ಅವರು ಸುಖವಾಗಿದ್ದು ದೇಶದ ಉತ್ಪತ್ತಿ ಯನ್ನು ಹೆಚ್ಚು ಮಾಡುವಂಥ ರೀತಿಯಲ್ಲಿ ನಮ್ಮ ಆಡ ಳಿತ ಯಂತ್ರ ಕೆಲಸಕಾರ್ಯಗಳನ್ನು ನಡೆಸಿಕೊಂಡು ಹೋಗತಕ್ಕ ರೀತಿಯಲ್ಲಿ ಒಂದು ಏರ್ಪಾಟನ್ನು ಮಾಡ ಬೇಕಾಗಿದೆ. ಇದರ ಜೊತೆಗೆ ಈ ದಿವಸ ಆ ಅಧಿಕಾರ ವರ್ಗದವರಾದರೂ ತಮಗೆ ಏನೇ ಒಂದು ಜಿಗುಪ್ಸೆಯಿ ರಲಿ ಅವರಿಗೆ ಸಲ್ಲಬೇಕಾಗಿರತಕ್ಕ ಸಂಬಳ ಸಾರಿಗೆಗಳು

(ಶ್ರೀ ಎ. ಮುನಿರಾಜು.)

ಯಾವ ಮಟ್ಟದಲ್ಲೇ ಇರಲಿ ಅವುಗಳಲ್ಲಿರತಕ್ಕ ಏರು ಪೇರುಗಳನ್ನು ಖಂಡಿತ ಸರಿಪಡಿಸಿ ಅವರವರಿಗೆ ನ್ಯಾಯವಾಗಿ ಸಲ್ಲಬೇಕಾದ ಸಂಬಳಗಳು ಖಂಡಿತ ದೊರೆಯುತ್ತವೆ. ನಮ್ಮವರೇ ಆಡಳಿತ ನಡೆಸುತ್ತಿದ್ದಾರೆ, ಒಂದಲ್ಲ ಒಂದುರೀತಿಯಲ್ಲಿ ಅದನ್ನು ಸರಿಪಡಿಸುತ್ತಾರೆಂಬ ಭರವಸೆಯನ್ನಿಟ್ಟುಕೊಂಡು ಒಂದೇ ದೃಢ ಮನಸ್ಸಿನಿಂದ ನಮ್ಮ ನೌಕರ ವರ್ಗದವರು ದೇಶಾಡಳಿತ ಕೆಲಸ ಕಾರ್ಯಗಳನ್ನು ಒಂದು ದೇಶಪ್ರೇಮ ಭಾವನೆಯಿಂದ ಮಾಡಿಕೊಂಡು ಹೋಗಬೇಕೆಂದು ನಾನು ನಮ್ಮ ಸರ್ಕಾರದವರ ಮೂಲಕ ಅವರನ್ನು ಸಹ ಪ್ರಾರ್ಥಿಸಿಕೊಳ್ಳುತ್ತೇನೆ.

ಈ ವಿಚಾರವಾಗಿ ಈಗ ನಾನು ಹೆಚ್ಚಿಗೆ ಹೇಳುವುದಿಲ್ಲ. ನ್ಯಾಯಾಂಗ ಆಡಳಿತೆಯ ಬಗ್ಗೆ ಹೇಳುವುದಾದರೆ ಫೆಬ್ರುವರಿ ತಿಂಗಳಿನಲ್ಲಿ ಕೂಡ ಮುನಿಸಿಫ್‌ರ ನೇಮಕವಾಗದೇ ಇದ್ದರೆ ಕೋರ್ಟು ಮುಚ್ಚಿ ಬಿಡುವ ಪ್ರಸಂಗ ಬರಬಹುದು. ಇಂಥ ಪ್ರಸಂಗ ನಮ್ಮ ದೇಶದ ಚರಿತ್ರೆಯಲ್ಲಿ ಇರಲಿಲ್ಲ. ಒಂದು ವರ್ಷದಿಂದ ನೇಮಕ ಮಾಡದೆ ಇದ್ದರೆ ನ್ಯಾಯಾಂಗ ಆಡಳಿತೆಯು ದಕ್ಷತೆಯಿಂದ ಹೇಗೆ ನಡೆಯಬಲ್ಲದು ? ಖಂಡಿತವಾಗಿ ಆಡಳಿತ ಯಂತ್ರ ಸುಸೂತ್ರವಾಗಿ ನಡೆಯುತ್ತಿಲ್ಲ. ಇದು ದೇಶಕ್ಕೆ ಕೀರ್ತಿ ತರತಕ್ಕ ವಿಷಯವಲ್ಲ. ಇಂಥಾದ್ದನ್ನು ಲಘುವಾಗಿ ಯೋಚನೆ ಮಾಡತಕ್ಕದ್ದಲ್ಲ. ಹಾಗು ಯಾರೂ ಒಪ್ಪತಕ್ಕಂಥಾದ್ದಲ್ಲ. ಸಂಬಂಧಪಟ್ಟ ಮಂತ್ರಿಗಳು ಮತ್ತು ಇಲಾಖೆಯವರೂ ಕೂಲಂಕಷವಾಗಿ ವಿಚಾರ ಮಾಡಬೇಕು, ಹಾಗು ಮುನ್ನೆಚ್ಚರಿಕೆಯ ಕ್ರಮ ತೆಗೆದುಕೊಳ್ಳಬೇಕು. ಈ ವಿಷಯದ ಬಗ್ಗೆ ಈಗಾಗಲೇ ಅನೇಕ ಸದಸ್ಯರು ಸೂಚನೆಗಳನ್ನು ಕೊಟ್ಟಿದ್ದಾರೆ ಏನು ಮಾಡಬೇಕೆಂಬುದನ್ನು ತಿರ್ಮಾನ ಮಾಡಬೇಕು. ಆಡಳಿತ ಯಂತ್ರ ಸರಿಯಾಗಿ ಕೆಲಸ ಮಾಡುವಂತೆ ಆಗಬೇಕು ಎಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

Sri J. H. SHAMSUDDIN (Honawar].-On a point of information. Can the Hon'ble Member discuss the whole Budget or his remarks should be confined to 7 Land Revenue only ?

ಶ್ರೀ ಎ. ಮುನಿರಾಜು.—ಸಾಮಾನ್ಯ ಚರ್ಚೆಮಾಡಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಕೋ-ಆಪರೇಟಿವ್ ಸೊಸೈಟಿ ವಿಷಯ ಬಹಳ ಮುಖ್ಯವಾದುದು. ದೇಶಕ್ಕೆ ಒಳ್ಳೆಯದಾಗಲೆಂದು ಅನೇಕ ಯೋಜನೆಗಳಿಗಾಗಿ ಸರಕಾರ ಹಣ ಕೊಡುತ್ತಿದೆ. ಈ ಕೆಲಸ ಕಾರ್ಯಗಳು ಸರಿಯಾಗಿ ನಡೆಯಬೇಕು. ಒಂದೊಂದುಸಾರಿ ಸರಿಯಾದ ಸಾಮಗ್ರಿಗಳನ್ನು ಒದಗಿಸಲಾಗುವದಿಲ್ಲವೇ ಎಂಬ ಆಭಾಸವಾಗುತ್ತದೆ ಈ ಇಲಾಖೆಗೆ ಹೆಚ್ಚಿನ ಗಮನ ಕೊಡಬೇಕಾದುದು ಅಗತ್ಯ. ಅದೇರೀತಿಯಾಗಿ ಡೆವಲಪ್‌ಮೆಂಟ್ ಇಲಾಖೆ, ಜನರಲ್ ಆಡ್‌ಮಿನಿಸ್ಟ್ರೇಷನ್, ಕುಡಿಯುವ ನೀರಿನ ಯೋಜನೆ ಮುಂತಾದುವುಗಳಿಗೆ ಸಹ ಹೆಚ್ಚಿನ ಗಮನ ಕೊಡತಕ್ಕದ್ದು ಅವಶ್ಯಕ. 1957-58ನೇ ಸಾಲಿನಲ್ಲಿ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆ ಮಾಡಲಾಗುತ್ತದೆಂದು ಹೇಳುತ್ತಲೇ ಇದ್ದಾರೆ. ಆದರೆ ಇಂದು ಮಾರ್ಚಿ ತಿಂಗಳ 19ನೇ ತಾರೀಖು ಇದ್ದರೂ ಸಹ ಯೋಜನೆ ಕಾರ್ಯಗತವಾಗಿಲ್ಲ. ಈ ರೀತಿ ವಿಳಂಬ ಮಾಡದೆ ಕೆಲಸ ಕಾರ್ಯಗಳು ಸರಿಯಾಗಿ ನಡೆಸಿಕೊಂಡು ಹೋಗುವಹಾಗೆ ಮಾಡಬೇಕೆಂದು ಮತ್ತೊಮ್ಮೆ ಸರಕಾರಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್ (ಮೈಸೂರು).—ಸ್ವಾಮಿ, ಈ ಆಯವ್ಯಯ ಪಟ್ಟಿಯ ಮೇಲೆ ಮಾತನಾಡಲು ಅವಕಾಶ ದೊರೆತಿರುವ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ನಾನು ಹೇಳಲು ಬಯಸುತ್ತೇನೆ. ನನಗಿಂತ ಮೊದಲು ಮಾತನಾಡಿದ ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಈಗಾಗಲೇ ಹೇಳಿದ್ದಾರೆ. ಮೊದಲನೆಯದಾಗಿ ಆಡಳಿತ ಯಂತ್ರ. ಅಷ್ಟು ಸುಸೂತ್ರವಾಗಿ ನಡೆಯುತ್ತಿಲ್ಲವಲ್ಲಾ ಎಂದು ಹೇಳತಕ್ಕ ಪರಿಸ್ಥಿತಿ ಬಂದಿದೆಯಲ್ಲಾ ಎಂದು ಅನಿಸುತ್ತದೆ. ಇದಕ್ಕೆ ಒಂದೆರಡು ಕಾರಣ ಹೇಳುತ್ತೇನೆ. ಸಾಮಾನ್ಯವಾಗಿ ಸದಸ್ಯರು ಅಭಿಪ್ರಾಯಪಟ್ಟಹಾಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿ, ಎಸ್ಟಿಮೇಟ್ಸ್ ಕಮಿಟಿ ವರದಿಗಳನ್ನು ಈ ಸಭೆಯಮುಂದೆ ಇಟ್ಟಿದ್ದರೆ, ಬಡ್ಜೆಟ್ ಡಿಮ್ಯಾಂಡ್ಸ್ ಮೇಲೆ ಅಭಿಪ್ರಾಯ ಸೂಚಿಸುವುದಕ್ಕೆ ಅನುಕೂಲವಾಗುತ್ತಿತ್ತು. ಆ ರೀತಿ ನಮಗೆ ಅವಕಾಶವಾಗಲಿಲ್ಲ. ಇದರಿಂದ ಕರ್ತವ್ಯ ಲೋಪವಾಗಿದೆ ಎಂದು ಹೇಳಬಹುದು. ಯಾಕೆಂದರೆ ಇದೊಂದು ಬಹಳ ಮುಖ್ಯವಾದ ವಿಷಯ. ಈ ವರದಿಗಳು ಸಭೆಯ ಮುಂದೆ ಇರದೇ ಇರುವದರಿಂದ ಸಾಮಾನ್ಯವಾಗಿ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿವೆಯೋ ಅಥವಾ ಇಲ್ಲವೋ ಎಂಬ ಭಾವನೆ ಮೂಡಲು ಅವಕಾಶವಾಗುತ್ತದೆ. ಇನ್ನೊಂದು ಉದಾಹರಣೆ ಹೇಳುವದಾದರೆ ಹೋದ ಅಸೆಂಬ್ಲಿ ಅಧಿವೇಶನ ಕಾಲದಲ್ಲಿ ನಾನು ಒಂದು ಶಾರ್ಟ ನೋಟೀಸ ಪ್ರಶ್ನೆ ಕೊಟ್ಟಿದ್ದೇನೆ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳಿಗೂ ಈ ವಿಚಾರ ನಾನು ತಿಳಿಸಿದ್ದೇನೆ. ಈಗ ಒಂಬತ್ತು ತಿಂಗಳಾಗಿ ಹೋಯಿತು. ಅದರ ಬಗ್ಗೆ ಯಾವ ಕಾರ್ಯಕ್ರಮ ತೆಗೆದುಕೊಂಡಿಲ್ಲ, ಶಾರ್ಟ್ ನೋಟೀಸ್ ಪ್ರಶ್ನೆ ಎಷ್ಟು ಮಹತ್ವದ್ದೆಂಬುದನ್ನು ಹೇಳುವುದು ಅವಶ್ಯವಿಲ್ಲ. ಒಬ್ಬ ಮ್ಯಾಜಿಸ್ಟ್ರೇಟ್ ಪೋಲಿಸ್ ಚಾರ್ಜಶೀಟ್ ಬಗ್ಗೆ ಏನು ಅಭಿಪ್ರಾಯಪಟ್ಟರು ಮತ್ತು ಅದರ ಪರಿಣಾಮವಾಗಿ ಎಷ್ಟು ಮೊಕದ್ದಮೆಗಳನ್ನು ವಜಾಮಾಡಿದರು ಎಂದು ಕೂಡಲೇ ಇಂತಹ ತುರ್ತು ವಿಷಯಗಳ ಬಗ್ಗೆ ಉತ್ತರ ಕೊಡುವ ಅವಕಾಶ ಆಗಬೇಕು. ಇದರ ಸಲುವಾಗಿ ಎರಡು ಮೂರುಸಲ ಸಂಬಂಧಪಟ್ಟ ಮಂತ್ರಿಗಳಿಗೂ ಹೇಳಿದೆ. ಅಧ್ಯಕ್ಷರಿಗೂ ಕೂಡ ಹೇಳಿದ್ದೇನೆ. ಆದರೆ ಇದರ ಬಗ್ಗೆ ಯಾವ ಕೆಲಸ ನಡೆದಿಲ್ಲ. ಸರಕಾರದ ಆಡಳಿತ ಯಂತ್ರ ಸರಿಯಾಗಿ ನಡೆಯುವದಾಗಿದ್ದರೆ ಇದಕ್ಕೆ ಉತ್ತರ ಏಕೆ ಬರಲಿಲ್ಲ ?

The information is not with us. It is their responsibility to get the information; if they do not get the information, it only means the information has not been supplied. That means the administration is not co-operating with them or refuses to work.

ಇಂಥ ಅಭಿಪ್ರಾಯ ಬರುವದಕ್ಕೆ ಅವಕಾಶ ಉಂಟಾಗುತ್ತದೆಂದು ಹೇಳಬೇಕಾಗಿದೆ.

ಶ್ರೀ ಸಿ. ಎಂ. ಪೂಣಚ್ಚ (ಕೈಗಾರಿಕೆ ಮತ್ತು ಒಳಾಡಳಿತ ಶಾಖೆಯ ಮಂತ್ರಿಗಳು).—ಮಾನ್ಯ ಸದಸ್ಯರು ಈಗತಾನೆ ಒಂದು ತ್ವರಿತ ಪ್ರಶ್ನೆಯ ವಿಷಯ ಪ್ರಸ್ತಾಪ ಮಾಡಿ ಹೇಳಿದರು. ಆ ಪ್ರಶ್ನೆಗೆ ಬೇಕಾಗಿದ್ದ ವಿಷಯಗಳನ್ನೆಲ್ಲಾ ಸಂಗ್ರಹಿಸಿ ಅದಕ್ಕಿರುವ ಉತ್ತರವನ್ನು ಸಹ ಸಿದ್ಧಪಡಿಸಿ ಅಸೆಂಬ್ಲಿ ಸೆಕ್ರೆಟೆರಿಯಟ್‌ಗೆ ಕಳಿಸಿ

ಕೊಟ್ಟಿದ್ದೇವೆ. ಬೇರೆ ಜಿಲ್ಲೆಯ ಮ್ಯಾಜಿಸ್ಟ್ರೇಟ್ ಕೋರ್ಟಿನಿಂದ ವಿಷಯ ಸಂಗ್ರಹಿಸಬೇಕಾದ್ದರಿಂದ ಸ್ವಲ್ಪ ಕಾಲ ವಿಳಂಬವಾಯಿತು. ಪರಿಪೂರ್ಣವಾಗಿ ವಿಷಯ ಸಂಗ್ರಹಿಸಲು ಸ್ವಲ್ಪ ಸಾವಕಾಶವಾಗಿದೆ ಈಗಾಗಲೇ ಪ್ರಶ್ನೆ ಮತ್ತು ಉತ್ತರ ಅಸೆಂಬ್ಲಿ ಸೆಕ್ರೆಟೇರಿಯಟ್ಟಿಗೆ ಕಳಿಸಲಾಗಿದೆ. ಆದುದರಿಂದ ಇನ್ನುಮೇಲೆ ಶೀಘ್ರವಾಗಿ ಸಭೆಯಮುಂದೆ ಅದು ಬರುತ್ತದೆಂದು ಆಶ್ವಾಸನ ಕೊಡುತ್ತೇನೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಒಂಭತ್ತು ತಿಂಗಳಾದಮೇಲೆ ಕೂಡ ಇನ್ನು ಶೀಘ್ರವಾಗಿ ಆ ಪ್ರಶ್ನೆ ಸಭೆಯಮುಂದೆ ಬರುತ್ತದೆಂದು ಹೇಳಿದ್ದನ್ನು ಕೇಳಿ ಸಂತೋಷಪಟ್ಟುಕೊಳ್ಳುತ್ತೇನೆ.

11-30 A.M.

[MR. DEPUTY SPEAKER in the Chair]

ಏಕೆಂದರೆ, ಇವೊತ್ತೇನೋ ನಾವು ಸದಸ್ಯರುಗಳು ಇಲ್ಲಿ ಸಭೆ ನಡೆಯುತ್ತಿದ್ದಾಗ ಕೆಲವು ವಿಷಯಗಳನ್ನು ಸಭೆಯ ಮುಂದೆ ತರಬಹುದು. ಆದರೆ, ಈ ವಿಳಂಬ ನೀತಿಯಿಂದ ಜನಸಾಮಾನ್ಯರಲ್ಲಿ ಯಾವ ಭಾವನೆ ಬರುವುದಕ್ಕೆ ಅವಕಾಶವಾಗುತ್ತದೆಂಬುದನ್ನು ಯೋಚನೆಮಾಡಬೇಕು. ಆಡಳಿತ ಯಂತ್ರ ಎಷ್ಟು ಸಡಿಲವಾಗಿದೆಯೆಂಬುದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಈಹೊತ್ತಿನ ಅಡ್ಜರ್ನ್‌ಮೆಂಟ್ ಸೂಚನೆಯ ವಿಚಾರ. ಸಭೆಯಲ್ಲಿ ಬಹಿರಂಗವಾಗಿ ತಿಳಿಸಿ ಎಲ್ಲಾ ವಿಷಯಗಳನ್ನು ಸರ್ಕಾರದವರು ಒಂದು ಮಾರ್ಗದರ್ಶನ ಮಾಡಬೇಕಾಗಿತ್ತು. ನಮಗೇನೋ ಮಂತ್ರಿಗಳು ಹೇಳಿರಬಹುದು. ಆದರೆ ಸಭೆಯ ಗಮನಕ್ಕೂ ತರಬೇಕಾದ್ದು ಅವಶ್ಯಕವಾಗಿತ್ತು. ಈ ಮಧ್ಯೆ ಸದಸ್ಯರೊಬ್ಬರು ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟರೆಂದೂ ತಿಳಿದಿದ್ದೇನೆ. ಒಟ್ಟಿನಲ್ಲಿ ಇದರಿಂದ ಈಗ್ಗೆ ಎರಡು ಮೂರು ದಿನಗಳಿಂದ ಈ ಸಭೆಯಲ್ಲಿ ಯಾವ ಉಪಯುಕ್ತ ಕೆಲಸವೂ ಆಗದೆ ಕಾಲ ಕಳೆಯಬೇಕಾದ ಪರಿಸ್ಥಿತಿ ಬಂತು. ಇದಕ್ಕೆಲ್ಲಾ ಮುಖ್ಯ ಕಾರಣ ಸರ್ಕಾರದವರು ನಿಶ್ಚಿತವಾಗಿ ಯಾವ ವಿಷಯವನ್ನೂ ತಿಳಿಸದಿರುವುದು. ವಿಷಯಗಳ ಬಗ್ಗೆ ಪರಿಪೂರ್ಣವಾದ ವಿವರಗಳಿಲ್ಲದಿದ್ದರೆ ಹೀಗಾಗುವುದು ಅನಿವಾರ್ಯ. ಈ ಹೊತ್ತು ಸ್ಪೀಕರ್‌ರವರು ರೂಲಿಂಗ್ ಕೊಡಲೆದ್ದಾಗ, ಸ್ಪೀಕರ್ ಅವರು ಈ ಬಗ್ಗೆ ವಿಚಾರಣೆ ಮುಗಿದಿದೆಯೆಂದು ತಿಳಿದುಬಂದಿದೆಯೆಂದು ಹೇಳಲುಪಕ್ರಮಿಸಿದಾಗ ಮಂತ್ರಿಗಳು ಇನ್ನೂ ವರದಿ ಪೂರೈಸಿಲ್ಲವೆಂದು ಹೇಳಿದರು. ಇದರಿಂದ ಏನಾಯಿತು? ವಿರಾಮಕಾಲವಾದಮೇಲೆ ರೂಲಿಂಗ್ ಕೊಡುವುದಾಗಿ ಸ್ಪೀಕರ್ ಹೇಳಬೇಕಾಗಿಬಂತು. ಒಂದುವೇಳೆ ಸ್ಪೀಕರ್ ಅವರಿಗೆ ಅಡ್ವೊಕೇಟ್ ಜನರಲ್‌ರಿಂದ ವಿವರಗಳು ಬೇಕಾಗಿದ್ದರೆ ಪೂರ್ಣ ವಿವರಗಳನ್ನು ತರಿಸಿಕೊಡಬೇಕಾಗಿತ್ತು.

Mr. DEPUTY SPEAKER.—It is not now necessary to speak on the ruling. ತಾವು ವೋಟ್ on account ವಿಚಾರದಲ್ಲಿ ಮಾತನಾಡಿ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ನಾನು ಜನರಲ್ ಅಡ್ಮಿನಿಸ್ಟ್ರೇಷನ್ ವಿಚಾರವಾಗಿ ಮಾತನಾಡುತ್ತಾ ಆಡಳಿತ ಯಂತ್ರ ಹೇಗೆ ಸಡಿಲವಾಗಿದೆಯೆಂದು ಹೇಳುತ್ತಿದ್ದೇನೆ. ನಾನೀಗ ಒಂದು ಉದಾಹರಣೆಯನ್ನು ಮಾತ್ರ ಕೊಟ್ಟೆ, ಆ ವಿಚಾರ ಹೆಚ್ಚಿಗೆ ಹೇಳಲು ನಾನು ಇಷ್ಟಪಡುವುದಿಲ್ಲ. ಮುಖ್ಯವಾಗಿ ಇಂಥ ಪರಿಸ್ಥಿತಿ ಮುಂದೆ ಬರಬಾರದೆಂಬ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ ಅಷ್ಟೆ.

ಇನ್ನು ಕೆಲಸಕಾರ್ಯಗಳು ಯಾವರೀತಿ ಆಗಬೇಕೋ ಆ ರೀತಿ ಆಗುತ್ತಿಲ್ಲವೆಂಬುದಕ್ಕೆ ಡಿಸ್ಟ್ರಿಕ್ಟ್ ಬೋರ್ಡ್‌ಗಳ ಸ್ಥಿತಿಯೇ ಸಾಕು. ಹೋದ ಅಧಿವೇಶನದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್‌ಗಳ ವಿಚಾರದಲ್ಲಿ ಆಖೈರಾಗಿ ಯಾವುದಾದರೊಂದು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಕೆಲವು ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ಏಳು ಎಂಟು ವರ್ಷಗಳಿಂದಲೂ ಚುನಾವಣೆಗಳೇ ಆಗಿಲ್ಲ. ಅವು ಇರುತ್ತವೆಯೋ ಅಥವಾ ಹೋಗುತ್ತವೆಯೋ ಒಂದೂ ತೀರ್ಮಾನವಾಗಿಲ್ಲ. ಮುಂದಿನ ಅಧಿವೇಶನದೊಳಗೆ ಏನಾದರೊಂದು ಈ ಬಗ್ಗೆ ತಿಳಿಸುವುದಾಗಿ ಹೇಳಿದರು. ಇನ್ನೂ ಏನೂ ಹೇಳಿಲ್ಲ. ಹೀಗೆ ಒಂದೊಂದು ಬಾಬಿನಲ್ಲೂ ಅನೇಕ ನಿದರ್ಶನಗಳಿವೆ. ಜನರಲ್ ಬಡ್ಜೆಟ ಮೇಲೆ ಮಾತನಾಡುವಾಗ ಅದನ್ನೆಲ್ಲಾ ಹೇಳುತ್ತೇನೆ. ಮುಖ್ಯವಾಗಿ ಈ ಕೆಲಸಕಾರ್ಯಗಳು ಬೇಗ ಬೇಗ ನಡೆಯಬೇಕೆಂದು ಮಂತ್ರಿಗಳು ಮುತುವರ್ಜಿಯಿಂದಿದ್ದರೂ, ಯಂತ್ರ ಸರಿಯಾಗಿಲ್ಲದೆ ಇದ್ದು ಕೆಲಸಗಳು ನಡೆಯುತ್ತಿಲ್ಲ. ಮಂತ್ರಿಗಳಿಗೆ ಸಲಕರಣೆಗಳು ಸರಿಯಾಗಿಲ್ಲದಿದ್ದರೆ ಅವರೇನು ಮಾಡಿಯಾರು? ಆದ್ದರಿಂದ ನಾನು ಆಡಳಿತಪಕ್ಷಕ್ಕೆ ಸೇರಿದವನಾದರೂ ಇದನ್ನು ಹೇಳಬೇಕಾಗಿ ಬಂದಿದೆ. ಏಕೆಂದರೆ, ರಾಜ್ಯದಲ್ಲಿ ಸರಿಯಾದ ಸರ್ಕಾರವನ್ನು ನಡೆಸತಕ್ಕ ಹೊಣೆ ಮಂತ್ರಿಗಳಿಗೆ ಎಷ್ಟಿದೆಯೋ, ಅಷ್ಟೇಮಟ್ಟಿಗೆ ಈ ಸಭಾ ಸದಸ್ಯರಿಗೂ ಇದೆ.

ಸ್ಟ್ಯಾಂಪ್‌ಗಳ ವಿಚಾರ ಹೇಳುತ್ತೇನೆ. Copying sheet ಮತ್ತು ಸ್ಟ್ಯಾಂಪ್‌ಗಳಿಗೆ ಎಲ್ಲಾಕಡೆಯಲ್ಲೂ ಈಗ ಅಭಾವಬಂದಿದೆ, ಮುಂಚೆ ಎಷ್ಟು ಬೇಕಾದರೂ ಸಿಕ್ಕುತ್ತಿತ್ತು. ಈಚೆಗೆ ಆರು ತಿಂಗಳಿನಿಂದ ಯಾವ ಕೋರ್ಟಿನಲ್ಲಿ ಕೇಳಿದರೂ ಸಿಕ್ಕುತ್ತಿಲ್ಲ. ಏಕೆ ಹೀಗಾಯಿತೆಂದು ಯಾರೂ ವಿಚಾರ ಮಾಡಿದಹಾಗೆ ಕಾಣುವುದಿಲ್ಲ. ಇದನ್ನೇಕೆ ಹೇಳುತ್ತಿದ್ದೇನೆಂದರೆ, ದಾವೆಗಳನ್ನು ಹಾಕುವ ಜನರಿಗೆ ಎಷ್ಟು ಕಷ್ಟವಾಗುತ್ತದೆಂಬುದನ್ನು ಯೋಚನೆಮಾಡಬೇಡವೇ, ಸರ್ಕಾರ?

ಇನ್ನು ಪೋಲೀಸ್ ಇಲಾಖೆಯ ವಿಚಾರದಲ್ಲಿ ನಾನು ಬಹಳವಾಗಿ ಮಾತನಾಡಬೇಕಾಗಿದೆ. ಆ ಡಿಮ್ಯಾಂಡ್ ಚರ್ಚೆಗೆ ಬಂದಾಗ ವಿಶದವಾಗಿ ಮಾತನಾಡುತ್ತೇನೆ. ಸದ್ಯಕ್ಕೆ ಇಷ್ಟು ಹೇಳಲಿಚ್ಛಿಸುತ್ತೇನೆ. ಇದರ ಸತ್ಯಾಸತ್ಯತೆಯ ವಿಚಾರವನ್ನು ಮಂತ್ರಿಗಳೇ ಕೂಲಂಕಷವಾಗಿ ವಿಮರ್ಶಿಸಲಿ. ಪೋಲೀಸ ಇಲಾಖೆಯ ಆಡಳಿತದ ಮೇಲೆ ಈಗೀಗ ಬಹಳ ದೂರುಗಳು ಬರುತ್ತಿವೆ. ಕೆಲವು ಸಂದರ್ಭಗಳಲ್ಲಿ interestedness ನಿಂದ ಹೀಗೆ ನಡೆಯುತ್ತಿದೆಯೆಂದು ಹೇಳಬಹುದು.

*Sri J. H. SHAMSUDDIN.—Sir, I rise to support Demand No. 7–Land Revenue. Though the scope of the discussion is enlarged, I will confine myself to the particular Demand No. 7, Land Revenue. In this respect I would first examine the figures from a financial point of view. I find here under Land Revenue, an attempt is generally made by the Finance Department not to anticipate or assess the relevant revenue and expenditure. I

(SRI J. H. SHAMSUDDIN)

thought that was the feature of last year only, because it was first year of integration and naturally the concerned departments had not sufficient figures to compile. But, I feel even now the same tendency is adopted in this year's Budget. I will illustrate my point this way. If one looks to the Budget of 1957-1958 and compares it with 1958-1959, my point will be clear. There are several items of anticipated receipts and expenditure which have not been mentioned. Such a feature should be recorded in a budgetary arrangement because that will speak whether the department is properly geared up or could not properly assess its requirements both from the revenue side as well as expenditure side. Of course I do not know if proper explanations were given for a large saving either on the expenditure side or anticipated income. If they had been given, then, it would not be proper on my part in offering these remarks. But, explanations given are scanty or do not clear my doubts. For example, take 'ordinary revenue' on page 14. Budget estimate is Rs. 384.83 lakhs, revised estimate is Rs. 348.91 lakhs. So, there is a vast lacuna between estimate and the actuals. Proper explanation for this difference is not given. Of course, one of the explanations given is rather criptical or elusive, in a manner that does not make clear thinking. It is stated that a decrease of Rs. 35.92 lakhs in the revised estimate is on the basis of progress of collections and is also due to scarcity conditions in certain areas.

It is not clear whether the progress of collection is slow or has quickened. Now I understand that the collection is slow. I would like to bring it to the notice of the Department concerned that there are large arrears of land revenue and the machinery of collection is very slow and therefore in the budget estimates the difference between the actuals and the estimates will recur year after year, if the machinery for collection of arrears is not geared or whipped up. There are several other reasons for this slow rate of progress. I find that the processes mentioned in the land revenue code are not adhered to by the collecting authorities. I am told that there are two ways open to the revenue authorities for enforcement of collection. One is that they can put the land of the defaulter for sale or secondly, they can take recourse to seizure of movable properties. It seems to me that the more effective remedy is taking advantage of the provision for seizure of movables, though it is a little irksome and the officers may feel that this process would incur the displeasure of the villager concerned. But it is worth taking the trouble because it is in the interest of the villager himself not to accumulate the arrears, because he would find it extremely difficult to pay them in a lump. The method of seizure of movables would be more effective inas much as if the Amildar or anybody on his behalf should say that such and such person's movables would be seized, the villager concerned would feel that his prestige is at stake and he would manage to pay the land revenue. There is thus a psychological effect in the seizure of movables than in the attachment of immovables. This method, though provided for in the Land Revenue Code, is not taken advantage of by the revenue-authorities. This is one of the reasons why land revenue arrears are piling up, the budgetary position is being affected and there is such a wide gap between the actuals and estimates. Therefore the Department should examine the possibility of taking the villagers into confidence by telling them publicly that henceforward Government may seize movable properties if land revenue is not paid in time and therefore they should avoid the irksomeness that would follow.

Another method is attachment of immovable property. There are two ways open here. One method is to put up a certain serial of immovable property for auction. What usually happens is there are no bidders, because the villagers do not want to bid on properties belonging to their neighbours and thus incur their displeasure. Then the second list is put

for auction and thus the matter is delayed indefinitely. I feel there is only one method, *i.e.*, for the Government to resume the land and put it on its Khatta so that it could be distributed to the landless. I would like the Government to examine these proposals and see that the collection work is geared up so that budgetary position improves.

Sir, there were some comments about the services. I would not go into the details, but I would like to point out that the way to assess efficiency would be by comparison of the past and the present. Unless we have a clear picture of the past years, it would be uncharitable to criticise the services on an invidious basis. One of the remarks was that efficiency has suffered on account of the inclusion of the I.A.S. and I.P.S. I think this is not a just remark. These persons have been selected on an all-India basis. The idea is to pool the experience of the administrative services and then distribute them to all the States. To say that because they have come from different parts of India, they are unaware of the conditions in this State and hence administration is impaired, is not the correct approach. On the other hand it has been felt both by the Central and State Governments that people coming from outside have broader vision and can tackle problems without local bias. But I must point out that the services could function efficiently only if a proper atmosphere is created. It is upto us legislators to create that atmosphere which would be conducive for and promote better efficiency in the services. But to criticise the services, without trying to understand their problems, would have a demoralising effect.

This is all I wanted to say at the moment, Sir.

ಶ್ರೀ ವೈ. ಮಂಜಯ್ಯಶೆಟ್ಟಿ (ಬೈಂದೂರು).—ಮಾನ್ಯ ಉಪಸಭಾಪತಿಗಳೇ, ಈ ಸಂದರ್ಭದಲ್ಲಿ ಒಂದೆರಡು ವಿಷಯಗಳನ್ನು ನಾನು ಹೇಳಲು ಇಚ್ಛಿಸುತ್ತೇನೆ. ನಮ್ಮ ರಾಜ್ಯವನ್ನು ಸುಖೀರಾಜ್ಯವನ್ನಾಗಿ ಮಾಡಬೇಕೆಂದು ನಮ್ಮ ಸರಕಾರ ಪಾಂಚವಾರ್ಷಿಕ-ಯೋಜನೆಯ ಮೂಲಕ ಅನೇಕ ಅಭಿವೃದ್ಧಿಕಾರ್ಯಗಳನ್ನು ಕೈಗೊಂಡಿದ್ದಾರೆ. ಅದು ಮಾತ್ರವಲ್ಲ. ಆ ಕಾರ್ಯಗಳನ್ನು ಕಾರ್ಯರೂಪಕ್ಕೆ ಸಹ ತಂದಿದ್ದಾರೆ. ಆದರೆ ಈಗ ನಾವು ಐದು ಬೇರೆ ಬೇರೆ ರಾಜ್ಯಗಳಲ್ಲಿದ್ದವರು ಒಂದು ರಾಜ್ಯವನ್ನಾಗಿ ಮಾಡಿಕೊಂಡಿರುವುದರಿಂದ ಆಡಳಿತದ ವಿಷಯದಲ್ಲಿ ಅನೇಕ ತೊಂದರೆತೊಡಕುಗಳು ಬಂದದ್ದರಿಂದ ಪಾಂಚವಾರ್ಷಿಕ ಯೋಜನೆಯು ಮೇರೆಗೆ ಇಟ್ಟುಕೊಂಡ ಅನೇಕ ಯೋಜನೆಗಳು ಬೇಕಾದ ಮಟ್ಟವನ್ನು ಮತ್ತು ಗುರಿಯನ್ನು ತಲಪಲಿಲ್ಲ ಎಂದು ಹೇಳಲು ವಿಷಾದವಾಗುತ್ತದೆ. ಹಾಗಿದ್ದಾಗ್ಯೂ ಇನ್ನು ಮುಂದೆ ಈ ಯೋಜನೆ ಸಫಲಗೊಳ್ಳುವಂತೆ ತಾವು ಕೈಗೊಂಡ ಕಾರ್ಯಗಳನ್ನು ಬಹಳ ಆಸಕ್ತಿಯಿಂದ ಮಾಡುತ್ತಿರುವುದಾಗಿ ಮಾನ್ಯ ಆರ್ಥಿಕ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿರುವುದು ಬಹಳ ಸಂತೋಷ ಎಂದು ಹೇಳುವುದು ಮಾತ್ರವಲ್ಲ ಮತ್ತು ಆ ಪ್ರಕಾರ ಕಾರ್ಯವನ್ನು ಮಾಡಿಯಾರು ಎನ್ನುವ ಭರವಸೆ ನಮ್ಮಲ್ಲಿದೆ. ಈ ಸಂದರ್ಭದಲ್ಲಿ ಈ ವರ್ಷ ನಮ್ಮ ಮುಂದೆ ಇಟ್ಟ ಆಯವ್ಯಯ ಪಟ್ಟಿಯಲ್ಲಿ ಅನೇಕ ಅಭಿವೃದ್ಧಿಕಾರ್ಯಗಳನ್ನು ತೋರಿಸಿದ್ದಾರೆ.

ಆ ಎಲ್ಲಾ ಕಾರ್ಯಗಳನ್ನೂ ಮುಂದಿನ ವರ್ಷದಲ್ಲಿ ಅತಿ ಶೀಘ್ರದಲ್ಲಿ ಆಗುವಂತೆ ಆಡಳಿತದವರು ಪ್ರಯತ್ನ ಮಾಡಬೇಕಾಗಿದೆ ಎಂದು ಈ ಸಂದರ್ಭದಲ್ಲಿ ನಾನು ಅವರೊಡವೆ ಅತಿ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಏನೋ ಐದು ರಾಜ್ಯ ಕೂಡಿ ಒಂದು ರಾಜ್ಯ ಆದಾಗ್ಯೂ ನಮ್ಮ ಮೋಟಾರ್ ಸಾರಿಗೆ ವಿಷಯದಲ್ಲಿ ಐದು ರಾಜ್ಯದಲ್ಲಿ ಮೊದಲು ಇದ್ದಂತೆಯೇ ಈಗಲೂ ಇರುವುದು ಕಂಡುಬರುತ್ತದೆ. ಮಾನ್ಯ ಮಂತ್ರಿಗಳಾದ ಶ್ರೀ ಪೂಣಚ್ಚನವರು ನಾನು ಹೇಳುವುದನ್ನು ಬಹಳ ಆಕಾಂಕ್ಷೆಯಿಂದ ಕೇಳುತ್ತಾ ಇರುವುದು ಬಹಳ ಸಂತೋಷ. ಹಿಂದೆ ಬೊಂಬಾಯಿ ಸಂಸ್ಥಾನದಲ್ಲಿ ಮೋಟಾರ್ ಸಾರಿಗೆ ವ್ಯವಸ್ಥೆಯನ್ನು ಸರ್ಕಾರವೇ ವಹಿಸಿಕೊಂಡು ಈಗ ಅದನ್ನ ಮೈಸೂರು ಸರ್ಕಾರಕ್ಕೆ ಬಿಟ್ಟುಕೊಟ್ಟಿದೆ. ಈಗ ಉತ್ತರ ಕರ್ಣಾಟಕದ ಭಟ್‌ಕಲ್‌ನಿಂದ ಬೈಂದೂರುವರೆಗೂ ಇರುವ ಪ್ರದೇಶದಲ್ಲಿ ಒಂದೇ ಸ್ಟೇಟಿನಲ್ಲಿ ಇದ್ದಾಗ್ಯೂ ಭಟ್‌ಕಲ್‌ನಿಂದ ಬೈಂದೂರಿಗೆ ಹೋಗುವ ಪ್ರಯಾಣಿಕರು ಮಧ್ಯದಾರಿಯಲ್ಲಿ ಅಡವಿಯಲ್ಲಿ ಬಸ್ಸನ್ನು ಬದಲಾಯಿಸುವ ಪ್ರಸಂಗ ಇದೆ. ಅದರಂತೆ ಶಿವಮೊಗ್ಗದಿಂದ, ಕುಂದಾಪುರಕ್ಕೆ ಹೋಗುವಾಗ ಮಧ್ಯೆ ಅಡವಿಯಲ್ಲಿ ಬಸ್ಸನ್ನು ಬದಲಾಯಿಸಬೇಕಾಗುತ್ತದೆ. ಅಲ್ಲಿ ಒಂದು ಹೋಟಲೂ ಇಲ್ಲ, ಊಟದ ವ್ಯವಸ್ಥೆಯಿಲ್ಲ, ಮಳೆಗಾದಲ್ಲಿ ಅನೇಕ ಪ್ರಯಾಣಿಕರು ಬಹಳ ಘಂಟೆಗಳಕಾಲ ಅಲ್ಲಿಯೆ ಇದ್ದು ಒಂದು ಬಸ್ಸಿನಿಂದ ಇನ್ನೊಂದು ಬಸ್ಸಿಗೆ ಬದಲಾಯಿಸುವ ಪ್ರಸಂಗ ಇದೆ. ಈ ವಿಷಯವನ್ನು 1957ನೇ ಇಸವಿ ನವಂಬರ್ ಒಂದನೇ ತಾರೀಖು ಶ್ರೀ ಪೂಣಚ್ಚರವರಿಗಿಂತ ಮುಂಚೆ ಮಂತ್ರಿಗಳಗಿದ್ದ ಶ್ರೀ ಎಂ. ವಿ. ರಾಮರಾವ್‌ರವರ ಅವಗಾಹನೆಗೂ ನಂತರ ಶ್ರೀ ಪೂಣಚ್ಚರವರ ಅವಗಾಹನೆಗೂ ತಂದಾಗ್ಯೂ ಈ ಸಣ್ಣ ವಿಷಯದಬಗ್ಗೆ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳದೆ ಇದ್ದುದು ಬಹಳ ವ್ಯಸನಕರ. ಆದ್ದರಿಂದ ದಯವಿಟ್ಟು ಆ ವಿಷಯದಲ್ಲಿ ಮಾನ್ಯ ಮಂತ್ರಿಗಳು ನಿಗಾವನ್ನು ತೋರಿಸಿ ಜನರ ಕಷ್ಟವನ್ನು ಬಗೆಹರಿಸಬೇಕಾಗಿ ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ. ಏನೋ ನಮ್ಮ ಜಿಲ್ಲೆಯಲ್ಲಿ ಸಾಧಾರಣವಾಗಿ ಏಳು ಲಕ್ಷ ಜನ ಸಂಖ್ಯೆ ಇದೆ. ಕಾಸರಗೋಡು ಹೋದುದರಿಂದ ಮೂರು ಲಕ್ಷ ಇಳಿದಿದೆ. ಅಲ್ಲಿಹೆಚ್ಚಿನ ಜನರು ತೆಂಗಿನ ಎಣ್ಣೆಯನ್ನು ಅವರ ಆಹಾರಪದಾರ್ಥವಾಗಿ ಉಪಯೋಗಿಸುವ ಕ್ರಮವನ್ನು ಇಟ್ಟುಕೊಂಡಿದ್ದಾರೆ. ಧಾರ್ವಾಡ ಮತ್ತು ಉತ್ತರ ಕರ್ಣಾಟಕದಲ್ಲಿ ನೆಲಗಡಲೆ ಎಣ್ಣೆಯನ್ನು ಉಪಯೋಗಿಸುವ

(ಶ್ರೀ ವೈ. ಮಂಜಯ್ಯಶೆಟ್ಟಿ)

ಕ್ರಮವನ್ನು ಇಟ್ಟುಕೊಂಡಿದ್ದಾರೆ. ನೆಲಗಡಲೆ ಎಣ್ಣೆ ಉಪಯೋಗಿಸುವ ಜನರು ಸೇಲ್ಸ್‌ಟ್ಯಾಕ್ಸ್ ವಿನಾಯ್ತಿ ಹೊಂದಿದ್ದಾರೆ. ಆದರೆ ತೆಂಗಿನ ಎಣ್ಣೆಯನ್ನು ಉಪಯೋಗಿಸುವ ಹೆಚ್ಚಿನ ಜನರಿಗೆ ಯಾವರೀತಿಯ ವಿನಾಯ್ತಿಯೂ ಇಲ್ಲದೆ ಇದ್ದುದು ಬಹಳ ಪಕ್ಷಪಾತ ಮಾಡಿದಂತಾಗುತ್ತದೆ. ಕಾರವಾರದಲ್ಲಿಯೂ ಸಹ ಹಳ್ಳಿಗಳಲ್ಲಿ ತೆಂಗಿನ ಎಣ್ಣೆಯನ್ನು ಜನರು ತಮ್ಮ ಆಹಾರಪದಾರ್ಥವಾಗಿ ಉಪಯೋಗಿಸುತ್ತಿದ್ದಾರೆ. ತೆಂಗಿನ ಎಣ್ಣೆಯ ಬಾಬಿನಲ್ಲಿ ಮಲ್ಟಿಪಲ್ ಸೇಲ್ಸ್ ಟ್ಯಾಕ್ಸ್ ಹಾಕಿದ್ದಾರೆ. ನೆಲಗಡಲೆ ಎಣ್ಣೆಬಾಬಿನಲ್ಲಿ ಸಿಂಗಲ್ ಪಾಯಿಂಟ್ ಸೇಲ್ಸ್‌ಟ್ಯಾಕ್ಸ್ ಹಾಕಿದ್ದಾರೆ. ಈ ವಿಷಯದಲ್ಲಿ ನಮ್ಮ ದಕ್ಷಣ ಕನ್ನಡ ಜಿಲ್ಲೆಯ ಚೇಂಬರ್ ಆಫ್ ಕಾಮರ್ಸ್ ಹಾಗೂ ರೈತರ ಪ್ರತಿನಿಧಿಗಳು ಬಂದು ನಾವೆಲ್ಲರೂ ಒಂದೇ ಸ್ವರದಿಂದ ತೆಂಗಿನ ಎಣ್ಣೆಯಮೇಲೆ ಮಲ್ಟಿ ಪಾಯಿಂಟ್ ಸೇಲ್ಸ್ ಟ್ಯಾಕ್ಸ್ ಹಾಕಿದ್ದೀರಿ, ಅದಕ್ಕೆ ವಿನಾಯ್ತಿಮಾಡಬೇಕು ಎಂದು ಮೊರೆ ಇಟ್ಟಾಗ್ಯೂ ಯಾವ ಕಾರ್ಯಕ್ರಮವನ್ನೂ ತೆಗೆದು ಕೊಳ್ಳದೆಇರುವುದು ಬಹಳ ವ್ಯಸನಕರ. ಶ್ರೀ ಮರಿಯಪ್ಪನವರು ಖಾಯಿಲೆಯಲ್ಲಿ ಇದ್ದಾಗ ಅವರ ಚಾರ್ಜಿನಲ್ಲಿದ್ದ ನಮ್ಮ ಊರಿನ ಮಂತ್ರಿಗಳಾದ ಶ್ರೀ ವೈಕುಂಠ ಬಾಳಿಗರವರು ಸಹ ನಮ್ಮ ಕಷ್ಟವನ್ನು ಪರಿಹರಿಸದೆ ಇದ್ದುದು ವ್ಯಸನಕರ. ದಯವಿಟ್ಟು ಮಂತ್ರಿಮಂಡಲದವರು ಆಲೋಚನೆಮಾಡಿ ನಮಗೆ ಅಗತ್ಯವಾದ ವಿನಾಯಿತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಳ್ಳಿಯ ಜನರಿಗೆ ಔಷಧೋಪಚಾರದ ಬಗ್ಗೆ ಗ್ರಾಮದಲ್ಲಿ ಆಸ್ಪತ್ರೆಗಳು ಅವಶ್ಯಕ. ಸರ್ಕಾರದವರನ್ನು ಕೇಳಿಕೊಂಡರೆ ನಮಗೆ ಬೇಕಾದ ಡಾಕ್ಟರುಗಳು ಸಿಕ್ಕುವುದಿಲ್ಲ. ವೈದ್ಯ ಶಿಕ್ಷಣದಲ್ಲಿ ತರಪೇತು ಹೊಂದಿದವರು ಹಳ್ಳಿಗೆ ಹೋಗಲು ಇಷ್ಟಪಡುವುದಿಲ್ಲ ಎಂದು ಹೇಳುತ್ತಾರೆ. ನಾವು ಮದ್ರಾಸಿನಲ್ಲಿ ಇದ್ದಾಗ ಅಲ್ಲಿದ್ದ ಮಂತ್ರಿಗಳು ಇದೇರೀತಿ ಹೇಳುತ್ತಿದ್ದರು. ಈ ಸಮಸ್ಯೆಯನ್ನು ಬಗೆಹರಿಸುವುದು ಸರ್ಕಾರಕ್ಕೆ ಕಷ್ಟಸಾಧ್ಯವಿಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ಒಂದು ಸೂಚನೆಯನ್ನು ಸರ್ಕಾರದ ಮುಂದೆ ಇಡಲು ಇಚ್ಛಿಸುತ್ತೇನೆ. ಸರ್ಕಾರದವರು ಅನೇಕ ಮೆಡಿಕಲ್ ಕಾಲೇಜುಗಳನ್ನು ನಡೆಸುತ್ತಿದ್ದಾರೆ. ಪ್ರತಿವರ್ಷವೂ ಈ ಮೆಡಿಕಲ್ ಕಾಲೇಜನ್ನು ಸೇರುವ ಬಗ್ಗೆ ಸಾವಿರಾರು ವಿದ್ಯಾರ್ಥಿಗಳು ಆಕಾಂಕ್ಷೆಯಿಂದ ಇದ್ದಾರೆ. ಆದರೆ ಸ್ವಲ್ಪ ಜನರಿಗೆ ಮಾತ್ರ ಈ ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಕ್ಕುವುದು ಸಾಧ್ಯ. ಆದ್ದರಿಂದ ಸೀಟು ಕೊಡುವ ಸಂದರ್ಭದಲ್ಲಿ ಸರ್ಕಾರದವರು ಅವರು ಪಾಸು ಆದೊಡನೆ ಕನಿಷ್ಟಪಕ್ಷ ಮೂರು ವರ್ಷ ಕಾಲವಾದರೂ ಹಳ್ಳಿಯಲ್ಲಿ ಹೋಗಿ ಕೆಲಸಮಾಡುವಂತೆ ಅವರಿಂದ ಕಡ್ಡಾಯವಾಗಿ ಒಂದು ಬಾಂಡನ್ನು ತೆಗೆದುಕೊಂಡ ಪಕ್ಷದಲ್ಲಿ ಈ ಕಷ್ಟ ಪರಿಹಾರವಾದೀತು ಎಂದು ನನ್ನ ಭರವಸೆ. ಈ ವಿಷಯದಲ್ಲಿ ಮಾನ್ಯಮಂತ್ರಿಗಳು ಆಲೋಚಿಸಬೇಕಾಗಿದೆ ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಮೀನುಗಾರಿಕೆಯ ಬಗ್ಗೆ ನಾವು ಆಗಿಂದಾಗ್ಯೆ ಅನೇಕ್ಕ ಹೇಳಿಕೆಗಳನ್ನು ಮಂತ್ರಿಗಳ ಬಾಯಿಂದಲೇ ಕೇಳುತ್ತಿದ್ದೇವೆ. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಮೀನುಗಾರಿಕೆಯ ಬಗ್ಗೆ 75 ಲಕ್ಷ ರೂಪಾಯಿ ವಿಂಗಡಿಸಿಟ್ಟಿದ್ದಾರೆ ಎಂದು ಹೇಳಿದ್ದಾರೆ. ಅದು ನಿಜ ಇರಬಹುದು. ಆದರೆ ಅದು ಅಭಿವೃದ್ಧಿ ಹೊಂದಿದ್ದು ಸಾಲದು. ಕೆಲಸವು ಬಹಳ ಜರೂರಿಯಿಂದ ಆಗತಕ್ಕದ್ದಾಗಿದೆ. ಆ ಬಗ್ಗೆ ಅಗತ್ಯವುಳ್ಳ ಡಿಪಾರ್ಟ್‌ಮೆಂಟಿನವರಿಗೆ ಸರ್ಕಾರದವರು ಹೆಚ್ಚಿನ ಸಹಾನುಭೂತಿಯಿಂದ ಹಣವನ್ನು ಕೊಟ್ಟು ದಯವಿಟ್ಟು ಮೀನುಗಾರಿಕೆಯ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಬಂದರುಗಳ ವಿಷಯ ಹೇಳಬೇಕಾದ ಅಗತ್ಯವಿಲ್ಲ. ಈಗಾಗಲೆ ಸರ್ಕಾರದವರು ಬಂದರುಗಳ ಅಭಿವೃದ್ಧಿಯ ಅವಶ್ಯಕತೆಯನ್ನು ಮನಗಂಡಿದ್ದಾರೆ. ಮೊನ್ನೆತಾನೆ ಶ್ರೀ ಎಸ್. ವಿ. ರಾಮಮೂರ್ತಿಯವರ ಜೊತೆಕೂಡಿ ಅನೇಕ ಮಂತ್ರಿವರ್ಯರು ಬಂದರುಗಳ ಪರಿಶೀಲನೆಯ ಬಗ್ಗೆ ಸಂಬಂಧಪಟ್ಟ ಪ್ರದೇಶಗಳನ್ನು ಸಂದರ್ಶಿಸಿ, ಅನೇಕ ಮಾಹಿತಿಗಳನ್ನು ಪಡೆದಿದ್ದಾರೆ. ಈ ಬಂದರುಗಳ ಅಭಿವೃದ್ಧಿ ಎಷ್ಟು ಅವಶ್ಯಕ ಎನ್ನುವ ವಿಚಾರದಲ್ಲಿ ಶ್ರೀರಾಮಮೂರ್ತಿಯವರು ಕೇಂದ್ರ ಸರ್ಕಾರಕ್ಕೆ ಯೋಗ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಈ ವಿಷಯದಲ್ಲಿ ಶ್ರಮಿಸಿದ ನಮ್ಮ ಮಂತ್ರಿವರ್ಯರನ್ನು ಎಷ್ಟು ಕೊಂಡಾಡಿದರೂ ಸಾಲದು. ಇದು ಬರೀ ರಿಪೋರ್ಟಿನಲ್ಲಿ ಉಳಿಯದೆ ಕೇಂದ್ರ ಸರ್ಕಾರದಿಂದ ಸಿಗತಕ್ಕ ಹಣವನ್ನು ಆದಷ್ಟು ಶೀಘ್ರವಾಗಿ ನಮ್ಮ ಸರ್ಕಾರದವರು ಪಡೆದು ಬಂದರುಗಳ ಅಭಿವೃದ್ಧಿಯನ್ನು ಸಾಧಿಸಬೇಕಾಗಿದೆಎಂದು ನಾನು ಈ ಸಂದರ್ಭದಲ್ಲಿ ಸೂಚಿಸಲು ಇಚ್ಛಿಸುತ್ತೇನೆ. ಏನೋ ದೊಡ್ಡ ಬಂದರುಗಳ ಕಡೆಗೆ ಮಾತ್ರ ಸರ್ಕಾರದವರು ಗಮನ ಕೊಟ್ಟರೆ ಸಾಲದು. ಒಂದು ಸಣ್ಣ ಬಂದರು ನಮ್ಮ ಊರಿನಲ್ಲಿದೆ. ಎಕ್ಸ್‌ಪೋರ್ಟ್ ಮತ್ತು ಇಂಪೋರ್ಟ್ ಲೆಕ್ಕವನ್ನು ನೋಡಿದರೆ ನಮ್ಮ ಜಿಲ್ಲೆಯಲ್ಲಿ ಇದು ಮೂರನೆಯ ಸ್ಥಾನವನ್ನು ಪಡೆದಿದೆ. ಬಂದರುಗಳ ವಿಷಯದಲ್ಲಿ ಹೆಚ್ಚಿನ ಅನುಭವ ನಮ್ಮ ಮಂತ್ರಿಗಳಿಗೆ ಇದೆ. ಅಲ್ಲಿಯ ಜನರು ಅವರಿಗೆ ಹೆಚ್ಚಿನ ಅನುಭವವನ್ನು ಕೊಟ್ಟಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ನಿರ್ಲಕ್ಷ್ಯ ತೋರಿಸದೆ ಅವು ಹೆಚ್ಚಿನ ಅಭಿವೃದ್ಧಿ ಹೊಂದುವಂತೆ ಪ್ರಯತ್ನಮಾಡಬೇಕೆಂದು ನಾನು ದೈನ್ಯದಿಂದ ಕೇಳಿಕೊಳ್ಳುತ್ತೇನೆ.

12 NOON.

ನಮ್ಮ ಗ್ರಾಮೋದ್ಯೋಗಸ್ಥರು ನಮ್ಮ ರಾಜ್ಯದ ಆಡಳಿತದ ಒಂದು ಜೀವಾಳ. ಅವರ ವಿಷಯದಲ್ಲಿ ಅನೇಕ ಪ್ರಶ್ನಾವಳಿಗಳು ಅನೇಕ ಸಂದರ್ಭದಲ್ಲಿ ಈ ಸಭೆಯ ಮುಂದೆ ಬಂದಿವೆ. ಸರ್ಕಾರದವರು ಇದನ್ನೆಲ್ಲಾ ಮನಗಂಡು ಇವರ ಸಂಕಷ್ಟಗಳನ್ನು ನಿವಾರಣೆಮಾಡುವ ಉದ್ದೇಶದಿಂದ ಒಬ್ಬ ವಿಶೇಷಾಧಿಕಾರಿಗಳನ್ನು ನೇಮಿಸಿದ್ದಾರೆ. ಅವರ ವರದಿ ಈ ತಿಂಗಳ ಅಂತ್ಯದಲ್ಲಿ ದೊರಕುತ್ತದೆ. ಈಗಾಗಲೆ ಐದು ರಾಜ್ಯಗಳು ಒಟ್ಟುಗೂಡಿರುವ ಈ ರಾಜ್ಯದಲ್ಲಿ ಗ್ರಾಮೋದ್ಯೋಗಸ್ಥರಲ್ಲಿ ಅನೇಕ ಭೇದಗಳಿವೆ. ಅವರಿಗೆ ಉತ್ತಮ ಸಂಬಳಗಳನ್ನು ಕೊಡುವ ಬಗ್ಗೆ ಆದಷ್ಟು ಬೇಗ ತೀರ್ಮಾನಮಾಡಬೇಕು. ಈ ವ್ಯತ್ಯಾಸಗಳನ್ನು ನೀಗಲು ಪ್ರಯತ್ನಿಸಬೇಕು. ಇಲ್ಲದಿದ್ದರೆ ಗ್ರಾಮೋದ್ಯೋಗಿಗಳಲ್ಲಿ ಅತೃಪ್ತಿ ಹೆಚ್ಚುತ್ತದೆ. ಹೀಗಾದರೆ ನಮ್ಮ ರಾಜ್ಯದ ಆಡಳಿತ ವ್ಯವಸ್ಥೆ ಸರಿಯಾಗಿ ನಡೆಯಲಿಕ್ಕಿಲ್ಲವೆಂದ ಈ ಸಮಯದಲ್ಲಿ ಹೇಳುತ್ತೇನೆ.

ರಾಷ್ಟ್ರಕಲ್ಯಾಣದ ಬಗ್ಗೆ, ಹಳ್ಳಿಯ ಜನರ ಉದ್ಧಾರದ ಬಗ್ಗೆ, ರಾಷ್ಟ್ರೀಯ ಅಭಿವೃದ್ಧಿ ಯೋಜನೆ, ಸಮಾ

ಜಾಭಿವೃದ್ಧಿ ಯೋಜನೆಗಳನ್ನಿಟ್ಟುಕೊಂಡು ಕಳೆದ ಐದು ವರ್ಷಗಳಲ್ಲಿ ಈ ಯೋಜನೆಗಳ ಮೂಲಕ ಸಾವಿರಾರು ಮೈಲಿಯಷ್ಟು ರಸ್ತೆಗಳನ್ನು ಗ್ರಾಮಾಂತರಗಳಲ್ಲಿ ರಚಿಸಿದ್ದಾರೆ. ಆದರೆ ಆ ರಸ್ತೆಗಳನ್ನು ದುರಸ್ತುಮಾಡುವುದಕ್ಕೆ ಹಣ ಗ್ರಾಮಪಂಚಾಯಿತಿಗಳಲ್ಲಿಯೂ ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿಯೂ ಇಲ್ಲದೇಯಿರುವುದರಿಂದ ಎಷ್ಟೋ ರಸ್ತೆಗಳು ಮಾಯವಾಗಿವೆ. ಎಂದರೆ ಅತಿಶಯೋಕ್ತಿಯಾಗಲಾರದು. ಈ ಸಂದರ್ಭದಲ್ಲಿ ನಾನು ಟೀಕೆಮಾಡುತ್ತಿದ್ದೇನೆಂದು ಸರ್ಕಾರದವರು ಭಾವಿಸಬಾರದು. ದಯವಿಟ್ಟು ಆ ರಸ್ತೆಗಳನ್ನು ಜಾಗ್ರತೆಯಾಗಿ ಸಂಬಂಧಪಟ್ಟ ಪಂಚಾಯಿತಿಗಳಿಗೋ ಡಿಸ್ಟ್ರಿಕ್ಟ್ ಬೋರ್ಡುಗಳಿಗೋ ವಹಿಸಿ, ಅವುಗಳ ರಿಪೇರಿಗೆ ಬೇಕಾದ ಹಣವನ್ನೊದಗಿಸಿಕೊಟ್ಟು ಆ ಜನರ ಅನುಕೂಲಕ್ಕಾಗಿ ಆ ಹಳ್ಳಿಗಳ ಮಾರ್ಗಗಳನ್ನು ಉಳಿಸಿಕೊಡಬೇಕೆಂದು ಸೂಚಿಸುತ್ತೇನೆ.

ಇನ್ನು ನಮ್ಮ ಜಿಲ್ಲೆಯ ಎಷ್ಟೋ ಪಂಚಾಯಿತಿಗಳಿಗೆ ಸರ್ಕಾರದಿಂದ ನ್ಯಾಯವಾಗಿ ಸಿಕ್ಕಬೇಕಾದ ಹಣ ಕಾಸು ಇದುವರೆಗೂ ಸಿಕ್ಕಿಲ್ಲವೆಂಬ ದೂರಿದೆ. ಸಂಬಂಧಪಟ್ಟ ಮಂತ್ರಿಗಳು ಈ ವಿಷಯದಲ್ಲಿ ಪರಿಶೀಲನೆ ನಡೆಸಿ ಆ ಪಂಚಾಯಿತಿಗಳಿಗೆ ಹೆಚ್ಚಿನ ಹಣ, ಎಂದರೆ, ನ್ಯಾಯವಾಗಿ ದೊರಕಬೇಕಾದ ಹಣವನ್ನು ಕೂಡಲೆ ಮಂಜೂರುಮಾಡಬೇಕೆಂದು ಹೇಳಿ ಈ ನನ್ನ ಪುಟ್ಟ ಭಾಷಣವನ್ನು ಅಂತ್ಯಗೊಳಿಸುತ್ತೇನೆ.

*ಶ್ರೀ ಆಲೂರು ಹನುಮಂತಪ್ಪ (ನೆಲಮಂಗಲ).—ಮಾನ್ಯ ಸಭಾಪತಿಗಳೆ, ಇದುವರೆಗೆ ಮಾನ್ಯ ಸ್ನೇಹಿತರು ಅನೇಕ ವಿಷಯಗಳನ್ನು ಸಭೆಯ ಮುಂದಿಟ್ಟಿದ್ದಾರೆ. ನಾನು ಅನೇಕ ವಿಚಾರಗಳನ್ನು ಹೇಳಬೇಕೆಂದಿದ್ದೆ, ಆದರೆ ನನಗೆ ಕೊಟ್ಟಿರುವ ಸ್ವಲ್ಪ ಅವಕಾಶದಲ್ಲಿ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟಹಾಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಈ ಆಯವ್ಯಯ ಪಟ್ಟಿಯ ಮೇಲೆ ಮಾತನಾಡುವಾಗ ರೆವಿನ್ಯೂ ಇಲಾಖೆ ಈಗ ಎಷ್ಟುಮಟ್ಟಿಗೆ ನಮ್ಮ ಹಳ್ಳಿಗಾಡಿನ ರೈತರ ನೆರವಿಗಾಗಿ, ಅವರ ಏಳಿಗೆಗಾಗಿ ದುಡಿಯುತ್ತಿದೆಎನ್ನುವ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಭಾರತ ಸರ್ಕಾರ ಅಥವ ಮೈಸೂರು ಸರ್ಕಾರ ಈಗಾಗಲೇ ಅನೇಕ ಯೋಜನೆಗಳನ್ನು ನಮ್ಮ ಹಳ್ಳಿಗಾಡಿಗಾಗಿ ತಯಾರಿಸಿಟ್ಟಿದ್ದಾರೆ. ಈ ಯೋಜನೆಗಳ ಫಲ ಪ್ರತಿ ಕುಟುಂಬಕ್ಕೂ ಪ್ರತಿ ಗ್ರಾಮಕ್ಕೂ ಹೋಗುತ್ತಿದೆಯೇ, ಅವರ ಸಮಸ್ಯೆಗಳು ಪರಿಹಾರವಾಗುತ್ತಿವೆಯೇ ಎಂದು ನೋಡಿದರೆ, ಇವುಗಳ ಸಂಬಂಧವಾಗಿ ಇಲಾಖೆಗಳು ಜಾಸ್ತಿಯಾಗಿ ತೊಡಕುಗಳು ಜಾಸ್ತಿಯಾಗಿವೆ, ಹಣ ಖರ್ಚಾಗುತ್ತಿದೆ. ಆದರೆ ದೊರಕಬೇಕಾದ ಸೌಲಭ್ಯಗಳು ಬಹಳ ಕಡಮೆ ದೊರಕುತ್ತಿವೆ, ಸಮರ್ಪಕವಾಗಿಲ್ಲ. ಏನೂ ತಿಳಿಯದೇಇರುವ ರೈತನಿಗೆ ಈ ಯೋಜನೆಗಳ ಪ್ರಯೋಜನ ಬಹಳ ಕಡಮೆ ಪ್ರಮಾಣದಲ್ಲಿ ಸಿಕ್ಕುತ್ತಿದೆ. ಇದರ ಕಾರಣ ವೇನೆಂದು ಪ್ರತಿ ತಾಲ್ಲೂಕಿನ ವಿಚಾರದಲ್ಲಿ ಯೋಚನೆ ಮಾಡಿದರೆ, ಪ್ರತಿಯೊಬ್ಬ ರೈತನ ಕಷ್ಟ ಸುಖಗಳೇನೆಂದು ವಿಚಾರ ಮಾಡಿದರೆ ಆಗ ಗೊತ್ತಾಗುತ್ತದೆ. ಖಾತೆ ಬದಲಾವಣೆ ಮಾಡುವ ವಿಚಾರದಲ್ಲಿ ಎಷ್ಟು ತಾತ್ಸಾರ ಮಾಡಿದ್ದಾರೆಂದರೆ, ಹತ್ತು ಹದಿನೈದು ವರ್ಷಗಳಿಂದಲೂ ಬದಲಾವಣೆಯಾಗದೆ ಹಾಗೆಯೇ ಇರುವ ಸಂದರ್ಭಗಳಿವೆ. ಇದಕ್ಕೆ ಕಾರಣವೇನು? ಸಿಬ್ಬಂದಿ ಇಲ್ಲವೆ ಅಥವ ಸರ್ಕಾರ ಇಲಾಖೆಯ ಮೇಲೆ ಸರಿಯಾದ ಹತೋಟಿಯನ್ನಿಟ್ಟು ಕಾರ್ಯಕ್ರಮ ತೆಗೆದುಕೊಂಡಿಲ್ಲವೇ?

Sri A. BHEEMAPPA NAIK (Challakere).—I rise to a point of order, Sir. There is no quorum in the House.

Sri A. V. NARASIMHA REDDY (Bangalore South).—Sir, 21 is the number required for quorum. There are more than 21 members in the House now.

ಶ್ರೀ ಆಲೂರು ಹನುಮಂತಪ್ಪ.—ಖಾತೆಗಳನ್ನು ಬದಲಾವಣೆ ಮಾಡದೇಯಿರುವ ಕಾರಣ, ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳು ಅಥವ ಬೇರೆ ಯೋಜನೆಗಳಿಂದ ದೊರೆಯುವ ಸೌಲಭ್ಯಗಳು ರೈತರಿಗೆ ದೊರೆಯುವುದಕ್ಕೆ ಅವಕಾಶವಾಗುತ್ತಿಲ್ಲ. ಅಲ್ಲದೆ ರೈತರಿಗೆ ಸಾಲಗಳನ್ನು ಕೊಡಲು ಖಾತೆ ಅವರ ಹೆಸರಿನಲ್ಲಿ ಇರಬೇಕಾದುದು ಅತ್ಯಾವಶ್ಯಕ. ಈ ಕೊರತೆಗಳನ್ನು ಹೋಗಲಾಡಿಸದೇ ಹೋದರೆ, ರೈತನಿಗೆ ಸಾಲ ಸಿಕ್ಕುವುದು ಅಸಂಭವ, ರೈತರು ತಮ್ಮ ಜೀವನದ ಮಟ್ಟವನ್ನು ಸುಧಾರಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಜರೂರಾಗಿ ರೆವಿನ್ಯೂ ಇಲಾಖೆಯವರು ಈ ವಿಷಯವನ್ನು ಮನಸ್ಸಿಗೆ ತಂದುಕೊಂಡು ಸರಿಯಾದ ಸಿಬ್ಬಂದಿಯನ್ನು ಪ್ರತಿ ತಾಲ್ಲೂಕಿಗೂ ಕೊಟ್ಟು ಹದಿನೈದುವರ್ಷಗಳ ಈ ತೊಡಕನ್ನು ತಕ್ಷಣ ನಿವಾರಣೆಮಾಡಬೇಕು. ಇಲ್ಲದಿದ್ದರೆ ಯಾವಯೋಜನೆಯೂ ಫಲಪ್ರದವಾಗುವುದಿಲ್ಲ. ರೈತರಿಗೆ ಸೌಲಭ್ಯ ಸಿಕ್ಕುವುದಿಲ್ಲ. ರೈತರಿಗೆ ಬಾವಿತೋಡುವುದಕ್ಕೆ, ಮನೆಗಳನ್ನು ಕಟ್ಟುವುದಕ್ಕೆ ಮತ್ತು ಕೈಗಾರಿಕೆಗೆ ಕೊಡತಕ್ಕ ಸಾಲ, ಖಾತೆ ಅವರವರ ಹೆಸರಿನಲ್ಲಿಲ್ಲದೇ ಹೋದರೆ ದೊರಕುವುದಿಲ್ಲ.

ಕೈಗಾರಿಕೋದ್ಯಮ ಎಷ್ಟುಮಟ್ಟಿಗೆ ಹಳ್ಳಿಗಳಲ್ಲಿ ಉಪಕಸಬಾಗುತ್ತಿದೆ ಎಂದರೆ, ಇದು ಶೋಚನೀಯ ಸ್ಥಿತಿಯಲ್ಲಿದೆ. ದೊಡ್ಡ ಪಟ್ಟಣಗಳಲ್ಲಿ ವಸ್ತು ಪ್ರದರ್ಶನ, ಕೈಗಾರಿಕಾ ಪ್ರದರ್ಶನಗಳನ್ನು ಮಾಡಬಹುದು. ಇವನ್ನು ನೂರಾರು ಸಾವಿರಾರು ಮಂದಿ ಪಟ್ಟಣವಾಸಿಗಳು ನೋಡಿ ಆನಂದ ಪಡಬಹುದಾಗಿದೆ. ಆದರೆ ರೈತನಿಗೆ ಇದರ ಫಲ ದೊರೆಯುವುದಿಲ್ಲ, ಇದು ಹಳ್ಳಿಗಳಲ್ಲಿ ಪ್ರಚಾರವಾಗಬೇಕು. ಪ್ರತಿ ತಾಲ್ಲೂಕಿನಲ್ಲಿಯೂ ಕೈಗಾರಿಕೆಗಳು ಸ್ಥಾಪನೆಯಾಗಬೇಕು. ಹಳ್ಳಿಗಳ ಕಡೆ ನಿರುದ್ಯೋಗ ಬೆಳೆಯುತ್ತಿದೆ, ಇದನ್ನು ಹೋಗಲಾಡಿಸಲು ಕೈಗಾರಿಕಾಭಿವೃದ್ಧಿ ಸಾಧನ. ಹಳ್ಳಿಗಳಲ್ಲಿ ತಯಾರಾಗುವ ಸಾಮಾನುಗಳು ಮಾರಾಟವಾಗುವುದಕ್ಕೆ ತಕ್ಕ ಅನುಕೂಲಮಾಡಿಲ್ಲ. ಇದರಿಂದ ಅಲ್ಲಿ ಕೈಗಾರಿಕೆ ಬೆಳೆಯುವುದಿಲ್ಲ, ರೈತನಿಗೆ ಫಲದೊರಕುವುದಿಲ್ಲ. ಇಲಾಖೆಗಳ ಜಾಸ್ತಿಯಾಗಿವೆ, ಖರ್ಚು ಜಾಸ್ತಿಯಾಗಿದೆ, ಆದರೆ ರೈತನ ಏಳಿಗೆಯನ್ನು ಸಾಧಿಸಬೇಕೆಂದು ಏನು ಯೋಚನೆ ಮಾಡುತ್ತೇವೋ ಅದು ಫಲಪ್ರದವಾಗುವುದಿಲ್ಲ. ಎಲ್ಲ ಇಲಾಖೆಗಳಿಗೂ ಸಂಬಂಧಪಟ್ಟ ಹಾಗೆ ಇನ್ನೂ ಹೆಚ್ಚಿನ ಜವಾಬ್ದಾರಿಯನ್ನು ಅಧಿಕಾರಿಗಳ ಮೇಲೆ ಹಾಕಬೇಕೆಂದು ಕೆಲವು ಸ್ನೇಹಿತರು ಹೇಳುತ್ತಾರೆ. ಆದರೆ ಈ ದಿವಸ ಒಂದು ರೀತಿಯ ಅನಡ್ಡೆಯ ಮನೋಭಾವ ಅಧಿಕಾರ ವರ್ಗದಲ್ಲಿದೆ ಎಂದು, ಹೇಳಬೇಕಾಗಿದೆ. ಇಷ್ಟೊಂದು ಯೋಜನೆಗಳನ್ನು ಮಾಡಿದರೂ ಇವರ ಮನೋಭಾವ ಹೀಗಿದ್ದರೆ, ದೇಶದಲ್ಲಿ ನೂರಕ್ಕೆ ಎಂಭತ್ತರಷ್ಟಿರುವ ರೈತರ ಏಳಿಗೆಯನ್ನು ಎಷ್ಟು ವರ್ಷಗಳಲ್ಲಿ ತಾನೆ ಸಾಧಿಸಲು ಸಾಧ್ಯ? ಇದನ್ನು ಸಾಧಿಸಬೇಕಾದರೆ, ಅಧಿಕಾರವರ್ಗದ ಮನೋಭಾವ, ರೀತಿ ನೀತಿಗಳು ಬದಲಾವಣೆಯಾಗಬೇಕು. ಇದನ್ನು ನಾವು ಯೋಚನೆ

(ಶ್ರೀ ಆಲೂರು ಹನುಮಂತಪ್ಪ)

ಮಾಡದೇ ಹೋದರೆ ಯಾವ ಯೋಜನೆಗಳೂ ಫಲವಾಗುವುದಿಲ್ಲ, ರೈತನಿಗೆ ಇವುಗಳ ಫಲ ದೊರಕುವುದಿಲ್ಲ.

ಉಪಾಧ್ಯಕ್ಷರು.—ಬಡ್ಜೆಟ್ ಮೇಲಿನ ಸಾಮಾನ್ಯ ಚರ್ಚೆಯಲ್ಲಿ ಮಾತನಾಡಲು ಅವಕಾಶವಿರುತ್ತದೆ.

ಶ್ರೀ ಆಲೂರು ಹನುಮಂತಪ್ಪ.—ಮುಖ್ಯವಾಗಿ ರೆವೆನ್ಯೂಗೆ ಸಂಬಂಧಪಟ್ಟ ಹಾಗೆ ಖಾತೆ ಬದಲಾವಣೆ ಮಾಡುವುದು, ಗ್ರಾಮಪಂಚಾಯಿತಿ ವಿಷಯದಲ್ಲಿ ರೆವೆನ್ಯೂ ಇಲಾಖೆ ಅದರ ಲೆಕ್ಕ ಆಡಿಟ್ ಮಾಡಿ ಆಯವ್ಯಯಪಟ್ಟಿಯನ್ನು ತಕ್ಷಣ ಸರಿಪಡಿಸುವುದು, ಗ್ರಾಮಪಂಚಾಯಿತಿಗೆ ಅದರ ಏಳಿಗೆಗಾಗಿ ಕೊಡುವ ಸಹಾಯ ತಕ್ಷಣಕೊಟ್ಟು ಅವನ್ನು ಕಾಪಾಡುವುದು ಈ ವಿಷಯಗಳಲ್ಲಿ ಸರ್ಕಾರದವರು ತಕ್ಷಣ ಮನಸ್ಸಿಟ್ಟು ಸೂಕ್ತ ಕಾರ್ಯಕ್ರಮ ಕೈಕೊಳ್ಳುತ್ತಾರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri V. P. DEENADAYALU NAIDU.—Sir, I am very much reluctant to speak to-day. The reason for that is that there are certain properties of which we should have been proud as belonging to the State of Mysore, but which have not come to the possession of our State in spite of our efforts for the last seven or eight years. I am sorry that Government has not focussed its attention on this matter. This is a matter about which we had conducted certain negotiations with the Government of India. There are certain lands by the side of the Residency which really belong to the Government of Mysore, but certain army camps have come up there and those lands have been taken away from the Government of Mysore and not a single pie is given by way of rent to the Mysore Government. This has gone on for the last seven or eight years with the result that now a doubt has been created as to whether these lands at all belong to the Government of Mysore. Why I say this is because at the time of retrocession when the assigned tract was transferred to the Government of Mysore, there was an order by the Government of India that all the lands which were then in possession of the army and the air force were transferred to the Government of India temporarily for a temporary period and negotiations were to be started by the Government of Mysore with the Government of India for their transfer back to the Mysore Government. I am sorry to state that till today the matter has not been settled. This is a matter which pertains to the Home Department and so I would like Sri Poonacha to kindly consider this question. I understand that certain correspondence has gone on between the Government of Mysore and the Government of India. A very long time has elapsed after this that we are now forgetting this issue. I think it is too late to be settled now. This matter should have been settled long back. At least I would like to know what has happened in this behalf. Why I am mentioning this is because I was present when the discussion about this took place with the Deputy Minister for Defence at the Air Commodore's residence and that is why I am interested to know the outcome of the negotiations. I find that no final conclusion has been arrived at in this matter. I feel that as Government we must take certain difinite decisions. We must not be evasive, but we must be firm in these matters.

I feel jealous when I see the developments in the neighbouring States where Finance Corporations have been formed. Has our Government thought of forming a Finance Corporation like that? We are now considering the budget and so I want to say that the formation of a Finance Corporation for the State of Mysore is a vital and urgent necessity.

Next I want to ask the Industries Minister Sri Poonacha why he has not constituted Boards for running the Government concerns efficiently in consonance with the policy of the Government of India. Such independent Boards are necessary for running the Government Soap Factory, the Government Electric Factory, the Government Porcelain Factory and other concerns. It has come to my knowledge from authoritative sources that we are incurring a loss in running the Porcelain Factory. I had referred to this matter some time back and I expect a very authoritative and correct reply to that. If what is stated is true, then is it not because we have gone out of the way and we are not acting in conformity with the policy laid down by the Government of India for constituting Boards to run these industrial concerns?

This is a major policy decision which Government should have taken by now. The position as it is now does not give a very rosy picture of what Mysore ought to be. That prosperity which I anticipated could be achieved though not yet within vision. Why? That is because we are not taking decisions with a determination. We cannot succeed in anything unless we have certain priorities fixed even with regard to legislation. Bangalore could be one of the best cities in India, but today it is not so. Slums are developing everywhere. In spite of the Government of India coming to our rescue by contributing one-fourth of the expenditure for slum clearance and rehabilitation, by way of grant, we are not able to succeed in removing the slums from the City. We have not given top priority to slum clearance as has been done in Delhi and Madras. As a result of that we are losing the grants which the Government of India have given us for slum clearance and we are not improving the metropolis of Bangalore; on the contrary, it is deteriorating as a result of our keeping silent about slum clearance schemes. The Corporation has done its best by asking us to amend the Corporation Act, but we are silent about that also.

Then, I come to the question of hospitals and dispensaries. Whenever we demand major hospitals in Bangalore then the question of local fund dispensaries in the mofussil is placed before us, but I would like to inform the House that a major portion, at least 50 per cent., of the patients in the big hospitals in Bangalore come from the mofussil. I know this because I have served in several Boards. Therefore, by keeping the major hospitals in Bangalore City uptodate, we are not in any way depriving the local fund dispensaries of their due. Some of our hospitals go without the necessary supply of medicines. That is because we have not given proper attention to the proper method of indenting for the necessary supplies in advance. Our method of indenting is defective and needs to be improved.

Even in matters of education, when we make certain demands for High Schools the Hon'ble Minister for Education readily comes out with the answer that 'this is the policy of Government'. I should say that the policy of Government should be to serve the people to the best; it is not the policy of Government to prevent amenities being provided to the people. In this connection, I want to bring to the notice of Government the distinction that is being made between the City Area and the Civil Area. In the City Area we have 8 Government High Schools and in the Civil Area there is not even one such institution run by Government. Does it redound to the prestige of Government to keep this distinction for all time. Government may say that it is prepared to start such institutions provided a donor comes forward with a donation of Rs. 33,000. Suppose no donor comes forward with a donation of Rs. 33,000 to start a high school. Does it mean that Government will allow that particular area to go without a high school by sticking to the policy of Government?

For that is a policy which is not going to help the people of that area. I make bold to say that that policy will have to be altered to suit the convenience of people. We cannot afford to continue this disparity between people and people any longer. I know that Government are making some efforts to bring about uniformity. These are matters in which Government should have a ittle boldness and determination in dealing with things.

Lastly, I would like to bring to the notice of the Government this point: Why is it that the efficiency of the administration is coming down? It is for these reasons, I bring it to the notice of the Government, particularly, Hon'ble Minister Sri C. M. Poonacha. Let me say, I present a petition against certain irregularity. What does he do? He sends it to the person against whom I am complaining! And what is the explanation that you expect from a man against whom you are levelling charges and accusations? If that is, the procedure of the administration, I think that procedure will have to be certainly altered. You

(SRI V. P. DEENADAYALU NAIDU)

must be in a position to institute independent and impartial enquiries against these complaints.

Sri C. M. POONACHA.—May I just intervene and offer a word of personal explanation to the point that has just been made, Sir? It is no doubt true that we receive complaints against particular officers. The enquiry is held independently and after certain things come to the notice of the Government, the concerned officer's explanation is obtained on specific points, and that way alone we can successfully conclude the enquiry. That is all. Without calling for the explanation from the officers concerned, the enquiry will not be complete. Does my Hon'ble Friend suggest that such explanation should not be obtained from certain officers against whom certain allegations have been made?

Sri V. P. DEENADAYALU NAIDU.—My point was, exactly what was in the mind of the Hon'ble Minister? An independent enquiry is what is required. But in all cases, it is not done; and wherever it is necessary, you must tone up the administration. I am one of those who has no objection to be lavish in spending for the administration, provided it can bring about efficiency and certain benefits to the people. Well, Sir, we come to the courts. I wish to know, who has seen these courts? I am one of those who has to spend days and days in these courts. The administration of these courts will have to be gone into, particularly, the subordinate courts. I do not know whether the Government has at any time given any casual attention at least to this aspect. It is no doubt true that for generation we have gone on without certain facilities. Today, I would like the Hon'ble Minister—I know that he is judicial minded person and one who has practised also for some time......

Sri B. VAIKUNTA BALIGA (Minister for Law and Labour).—Sir, the Hon'ble Minister in charge of courts is my Hon'ble Friend Sri Poonacha. May I know if the Hon'ble Member thinks that Sri Poonacha is a practising lawyer or has practised?

Sri V. P. DEENADAYALU NAIDU.—Sir, if he is not a practising lawyer, I would like to take him to see round and understand what these courts are, where hundreds of lawyers frequent—there is no room for these lawyers to sit. You come to criminal courts. Is that a position of which we should be proud? Does it show that the Minister or the Department has made any investigation and has understood what is going on? What is the type of assistance you give to the accused? You engage an advocate with Rs. 16 per day. You engage per day a prosecutor on Rs. 16 a day! Can there be anything more shameful than that? I would rather prefer that nothing is paid, or pay properly and ask that man to defend the accused. I would tell you, Sir, it is not justice. Any man who has a sense of administration and who has gone into it, not even critically, but even casually cannot be silent. And for generations we are going on like this, without even providing for basic necessities! These are the amenities, these are the most ordinary things which will have to be attended to. I will tell you, it will bring about a certain amount of decency and administrative efficiency. How is it that we have not been able to do that? It is therefore I said that certain thoughts come up in my mind, I feel reluctant to speak; and I have done.

ಶ್ರೀ ಟಿ. ತಾರೇಗೌಡ (ಸಿರಾ).—ಅಧ್ಯಕ್ಷರೇ ಸರ್ಕಾರದವರು ರಿಫಾರಮ್ಸನ್ನು ಜಾರಿಗೆ ತರುವಾಗ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕವರಿಗೆ ಸಮತಾವಾದ ಸಮಾಜದ ಗುರಿಯನ್ನು ಜಾರಿಗೆ ತರಬೇಕೆಂದು ಮನಸ್ಸು ಮಾಡಿದ್ದಾರೆ.

ಉಪಾಧ್ಯಕ್ಷರು.—ಯಾವ ರಿಫಾರಮ್ಸ್?

ಶ್ರೀ ಟಿ. ತಾರೇಗೌಡ.—ಈಗ ಲ್ಯಾಂಡ್ ರಿಫಾರಮ್ಸ್ ವಿಷಯದಲ್ಲಿ ತಂದಿರತಕ್ಕ ಸುಧಾರಣೆಗಳನ್ನು ನೋಡಿದರೆ, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕವರಿಗೆ.....

ಉಪಾಧ್ಯಕ್ಷರು.—Vote on Account ಮೇಲೆ ಮಾತ್ರ ಮಾತನಾಡಿ ಈಗ ಲ್ಯಾಂಡ್ ರಿಫಾರಮ್ಸ್ ವಿಷಯ ಏತಕ್ಕೆ? ಆ ವಿಷಯ ಬಂದಾಗ ಚರ್ಚೆಮಾಡುವುದು ಸೂಕ್ತ.

ಶ್ರೀ ಟಿ. ತಾರೇಗೌಡ.—Vote on Account ಮೇಲೆ ಮಾತನಾಡುವಾಗ, ಲ್ಯಾಂಡ್ ರಿಫಾರಮ್ಸ್ ಸೀಲಿಂಗ್ ವಿಷಯದ ಮೇಲೆ ಮಾತನಾಡುತ್ತೇನೆ.

ಅದೂ ಸಹ ಸರ್ಕಾರದ ಆಡಳಿತಕ್ಕೆ ಸಂಬಂಧವಾಗಿ ಮಾತನಾಡುತ್ತೇನೆ. ಈಗ ಸರ್ಕಾರದವರು ಐ.ಎ.ಎಸ್. ಆಫೀಸರು ಮತ್ತು ಇತರೇ ಆಫೀಸರುಗಳನ್ನು ಹೆಚ್ಚಿಗೆ ಮಾಡಬೇಕೆಂದು ಜಮೀನುದಾರರುಗಳಿಗೆ ವರಮಾನದ ಸೀಲಿಂಗನ್ನು ಹಾಕಿದ್ದಾರೆ. ಆಫೀಸರುಗಳ ಸಂಬಳಗಳಿಗೂ ಸೀಲಿಂಗ್ ಹಾಕಬೇಕು. ಆದರೆ ಕೇವಲ ಗ್ರಾಮಾಂತರದಲ್ಲಿರತಕ್ಕವರಿಗೆ ಅವರ ವರಮಾನ ಕಡಿಮೆಮಾಡಿ, ಅವರನ್ನು ಅವಿದ್ಯಾವಂತರನ್ನಾಗಿ ಮಾಡಿ ಅವರ ಮಕ್ಕಳುಮರಿಗಳಿಗೆ ಜೀವನಕ್ಕನುಕೂಲವಾಗದಂತಿರುವ ಅವರು ನಾಗರಿಕರಾಗಲು ಸರ್ಕಾರದ ಹುದ್ದೆಗಳಿಗೆ ಬರದಂತಾಗಲು, ವಿಧಾನಸಭೆಗಳಿಗೆ ಸದಸ್ಯರಾಗಲು ಆರ್ಥಿಕ ಮುಗ್ಗಟ್ಟಿನಿಂದ ಅಡಚಣೆಯುಂಟಾಗಲು ಹಾಲಿ ಉದ್ದೇಶಿಸಿರುವಂತೆ ಸರ್ಕಾರದ ದಿನಚರಿ ಆಡಳಿತದಿಂದ ಕಂಡುಬರುತ್ತೆ. ದೇಶದಲ್ಲಿ ಲಂಚ ರುಷುವತ್ತು ಹೆಚ್ಚಾಗುತ್ತಿದೆ. ರೈತರ ಅರ್ಜಿಗಳಿಗೆ ಉತ್ತರವಿಲ್ಲ. ಅವರನ್ನು ಉದಾಸೀನದಿಂದ ಕಾಣುವ ಸಾಮಾನ್ಯ ಆಡಳಿತ ಸರ್ಕಾರದಲ್ಲಿ ಇರುವುದು ದೇಶದ ಹಿತದೃಷ್ಟಿಯಿಂದ ಸಾಧುವಾದುದಲ್ಲ. ಮಂತ್ರಿಗಳು ಅವರ ಸಂಬಳದ ಸೀಲಿಂಗನ್ನು ಕಡಿಮೆ ಮಾಡಿಕೊಳ್ಳುವುದು ಧರ್ಮ. ಕೇರಳ ರಾಜ್ಯದಲ್ಲಿರುವ ರೀತಿಯಲ್ಲಿ ನಮ್ಮ ಮಂತ್ರಿಗಳು ಕಡಿಮೆಮಾಡಿಕೊಳ್ಳಬೇಕು. ಪಟ್ಟಣಗಳಲ್ಲಿ ಇತರೆ ವೃತ್ತಿಗಳಲ್ಲಿರುವವರ ವರಮಾನಕ್ಕೆ ಸೀಲಿಂಗಿಲ್ಲ. ವಿದ್ಯಾಭ್ಯಾಸದ ವಿಚಾರದಲ್ಲಿ ಹೇಳುವುದಾದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಪ್ರೈಮರಿ ಸ್ಕೂಲುಗಳನ್ನು ಮತ್ತು ಮಿಡಲ್ ಸ್ಕೂಲುಗಳನ್ನು ಕಟ್ಟಬೇಕೆಂದರೆ, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕವರು ಒಟ್ಟು ಖರ್ಚಿನ ಅರ್ಧಭಾಗದಷ್ಟು ಹಣವನ್ನು ಕೊಡಬೇಕು. ಆ ರೀತಿ ಕೊಟ್ಟರೆ ಸ್ಕೂಲುಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ಕೊಡುತ್ತೇವೆ ಎಂದು ಹೇಳುತ್ತಾರೆ. ಪಟ್ಟಣಗಳಲ್ಲಿ ಈ ರೀತಿ ಇಲ್ಲ. ಅಲ್ಲಿ ಲಕ್ಷಾಂತರ ರೂಪಾಯಿಗಳನ್ನು ಸರ್ಕಾರದವರು ಖರ್ಚು ಮಾಡಿ ಸ್ಕೂಲು ಕಾಲೇಜುಗಳನ್ನು ಕಟ್ಟಿಸಿಕೊಡುತ್ತಾರೆ. ಈ ರೀತಿಯಾಗಿ ಸರ್ಕಾರದವರು ಇಟ್ಟುಕೊಂಡಿರುವ ನೀತಿ ಸಾಧುವಾದುದಲ್ಲ. ಇಂತಹ ನೀತಿಯನ್ನು ಹಾಕಿಕೊಂಡರೆ ಗ್ರಾಮಾಂತರ ಪ್ರದೇಶಗಳಲ್ಲಿ ಅವಿದ್ಯಾವಂತರು ಹೆಚ್ಚಾಗಿ, ವಿದ್ಯಾವಂತರ ಸಂಖ್ಯೆಯೇ ಇಲ್ಲದೇ ಹೋಗುತ್ತದೆ, ಕೆಲವು ಕಾಲದಲ್ಲಿಯೇ ಸರ್ಕಾರದ ನೀತಿಗೆ ಧಕ್ಕೆ ಬಂದೀತು. ಈಗಿನ ಕಾಲದಲ್ಲಿ ಅವಿದ್ಯಾವಂತರು ವಿಶೇಷವಾಗಿ ದುಡಿದು, ಪಟ್ಟಣಗಳಲ್ಲಿರತಕ್ಕವರಿಗೆ ಜೀವನ ನಡೆಸುವವರಾಗಿದ್ದಾರೆ. ಇಂತಹ ನೀತಿ ಎಲ್ಲಿಯವರೆಗೆ ನಮ್ಮ ಸರ್ಕಾರದಲ್ಲಿರುತ್ತದೆಯೋ ಅಲ್ಲಿಯವರೆಗೆ ಜನರ ಬೆಂಬಲ ಸರ್ಕಾರಕ್ಕೆ ಸಿಕ್ಕುವುದು ಬಹಳ ಕಷ್ಟ. ರೈತರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ, ಸ್ಕೂಲು, ಕಾಲೇಜುಗಳಲ್ಲಿ, ಟೆಕ್ನಿಕಲ್ ಇನ್ಸ್ಟಿಟ್ಯೂಟ್‌ಗಳಲ್ಲಿ ಒದಗಿಸಿ ಆಮೇಲೆ ರೈತರ ವರಮಾನಕ್ಕೆ ಸೀಲಿಂಗ್ ಹಾಕುವುದು ನ್ಯಾಯ. ಸರ್ಕಾರದ ಸುಧಾರಣಾನೀತಿ ಎಲ್ಲ ವರ್ಗದವರನ್ನೂ ಒಂದೇ ಸಮನಾಗಿ ಕಾಣಬೇಕು. ಶ್ರೀಮಂತರು ಕುಬೇರರಾಗಲು ರೈತರು ಬಡವರಾಗಲು, ಅವಿದ್ಯಾವಂತರಾಗಲು ಕಾರಣವಾಗತಕ್ಕ ಸುಧಾರಣೆ ನ್ಯಾಯವಲ್ಲ.

12-30 P.M.

ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತರು ಆಹಾರ ಪದಾರ್ಥಗಳನ್ನು ಹೆಚ್ಚು ಬೆಳೆಯಬೇಕು ಮತ್ತು ಆಹಾರ ಪದಾರ್ಥಗಳನ್ನು ಹೆಚ್ಚಿಸಿಕೊಳ್ಳಬೇಕೆಂಬುದು ಸರ್ಕಾರದ ನೀತಿ. ಆದರೆ ಈಗ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದು ಬಹಳ ಕಡಮೆಯಾಗಿದೆ. ಇದಕ್ಕೆ ನಾನಾ ತೊಡಕುಗಳನ್ನೊಡ್ಡುತ್ತಿದ್ದಾರೆ ನನ್ನ ಕ್ಷೇತ್ರದಲ್ಲಿ ಸುಮಾರು 300 ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಬೇಕೆಂದು ಹಣವನ್ನು ಕಟ್ಟಿ ಎಲ್ಲವೂ ಸಿದ್ಧವಾಗಿದ್ದರೂ ಕೂಡ ಸರ್ಕಾರದವರು ಕಂಬಗಳು, ತಾಮ್ರದ ಕಂಬಿ ಮುಂತಾದ ಸಾಮಾನುಗಳನ್ನು ಜಾಗ್ರತೆಯಾಗಿ ಕೊಡುತ್ತಿಲ್ಲ. ಹೀಗಿರಬೇಕಾದರೆ ಹೆಚ್ಚಿಗೆ ಆಹಾರವನ್ನು ಬೆಳೆಯುವುದಾದರೂ ಹೇಗೆ? ಬಾಯಲ್ಲಿ ಮಾತ್ರ ಹೆಚ್ಚಿಗೆ ಆಹಾರ ಬೆಳೆಯಬೇಕೆಂದು ಹೇಳುತ್ತ, ಕಾರ್ಯತಃ ಅಡಚಣೆಯನ್ನು ತರುತ್ತಿದ್ದಾರೆ. ಸಿದ್ಧವಾಗಿರತಕ್ಕ ಬಾವಿಗಳಿಗೆ time switch ಹಾಕಬೇಕು, ರಾತ್ರಿವೇಳೆ ಮಾತ್ರ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳಬಹುದೆಂದು ಹೇಳುತ್ತಿದ್ದಾರೆ. ದೊಡ್ಡ ಕೈಗಾರಿಕೆಗಳಿಗೆ, ಪವರ್ ಲೂಮ್ಸ್ ಮತ್ತು ಇತರೆ ಕೈಗಾರಿಕೆಗಳಿಗೆ, ಪಟ್ಟಣಗಳಲ್ಲಿ ಅಡಿಗೆಗೆ, ಸ್ನಾನಕ್ಕೆ, ಗಾಳಿ, ಬೆಳಕಿಗೆ ಯಥೇಚ್ಛವಾಗಿ ವಿದ್ಯುತ್ತನ್ನು ಕೊಡುತ್ತಿದ್ದಾರೆ. ಗ್ರಾಮಾಂತರದವರಿಗೆ ಆಹಾರ ಬೆಳೆಯಲು ವಿದ್ಯುತ್ ಕೊಡಲು ನಾನಾ ತೊಂದರೆ. ಇಂಥ ನೀತಿಯನ್ನು ಇಟ್ಟುಕೊಂಡಿರುವಾಗ ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರಕ್ಕೆ ಎಷ್ಟು ಮಟ್ಟಿನ ಬೆಂಬಲ ಸಿಕ್ಕುತ್ತದೆಂಬುದನ್ನು ಯೋಚನೆ ಮಾಡಬೇಕು. ಆದುದರಿಂದ ಸರ್ಕಾರದವರು ಗ್ರಾಮಾಂತರ ಜನಗಳ ಬಗ್ಗೆ ಅವರ ನೀತಿಯನ್ನು ಸಂಪೂರ್ಣವಾಗಿ ಬದಲಾಯಿಸಬೇಕಾದ್ದು ಅತ್ಯಗತ್ಯವಾಗಿದೆ. ಒಣನಾಡು ಪ್ರದೇಶ ಅಭಿವೃದ್ಧಿ ಬೋರ್ಡ್ Drynad Improvement Board ಕೂಡಲೆ ಸ್ಥಾಪನೆಮಾಡಿ ಎಲ್ಲಾ ಸೌಲಭ್ಯಗಳನ್ನು ಕ್ಷಾಮ ಪ್ರದೇಶಗಳಿಗೆ ಜಾಗ್ರತೆ ಒದಗಿಸಬೇಕು.

ಶ್ರೀ ಎಚ್. ಎಸ್. ರುದ್ರಪ್ಪ.—ಹೊಸದಾಗಿ ಪವರ್ ಲೂಮ್ಸ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತಿಲ್ಲ. ಸಾಧ್ಯವಾದಷ್ಟೂ ಗ್ರಾಮಾಂತರಗಳಲ್ಲಿ ಬಾವಿಗಳಿಗೇ ಕೊಡುತ್ತಿದ್ದೇವೆ.

ಶ್ರೀ ಟಿ. ತಾರೇಗೌಡ.—ವಿದ್ಯುಚ್ಛಕ್ತಿಯನ್ನು ಕೊಡುವ ನೀತಿಯಲ್ಲಿ ಬದಲಾವಣೆಯಾಗಬೇಕು. ಇದುವರೆಗೂ ಗ್ರಾಮಾಂತರದಲ್ಲಿ ಜನಗಳಿಗೆ ವ್ಯವಸಾಯಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸುವುದರಲ್ಲಿ ತೊಡಕುಗಳು ಹೆಚ್ಚಿ ಅದರ ಅಭಿವೃದ್ಧಿಯಾಗಬೇಕೆನ್ನುವುದು ಕನಸಿನ ಮಾತಾಗಿದೆ. ಆದುದರಿಂದ ಗ್ರಾಮಾಂತರ ಜನಗಳ ಅಭಿವೃದ್ಧಿಯಾಗಬೇಕಾದರೆ ವಿದ್ಯುತ್ ಸೌಲಭ್ಯ ಅತಿ ಮುಖ್ಯ. ಸರ್ಕಾರದವರು ಜರೂರಾಗಿ ನನ್ನ ಕ್ಷೇತ್ರಕ್ಕೆ ಪ್ರಯಾರಿಟಿ ಕೊಟ್ಟು ವಿದ್ಯುತ್ ಸೌಲಭ್ಯ ಪಂಪ್ ಸೆಟ್ಟುಗಳಿಗೆ ಒದಗಿಸಿ, ಈಗಿನ ನೀತಿಯನ್ನು ಖಂಡಿತವಾಗಿಯೂ ಬದಲಾಯಿಸಬೇಕು ಎಂದು ವಿಷಾದದಿಂದ ಮತ್ತೊಮ್ಮೆ ತಿಳಿಸುತ್ತೇನೆ.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಹಿಂದಿನ ಮಂತ್ರಿ ಮಂಡಲ ರಚನೆಯಾದಾಗ ಖಾತೆಗಳು ಯಾವ ರೀತಿ ವಿಂಗಡಣೆಯಾದುವು ಎಂದರೆ ಸಹಕಾರ ಸಂಘಗಳಿಗೇ ಬೇರೆ ಖಾತೆಯಾಗಿ ಅದಕ್ಕೆ ಬೇರೆ ಒಬ್ಬ ಮಂತ್ರಿಗಳು ಸಹ ಆದರು. ಆದರೆ ಈಗಿನ ಮಂತ್ರಿಮಂಡಲವೇರ್ಪಟ್ಟಾಗ ಈ ಏರ್ಪಾಡು ಬದಲಾವಣೆಯಾಗಿ ನಮ್ಮ ಮುಖ್ಯಮಂತ್ರಿಗಳೇ ಈ ಖಾತೆಯನ್ನೂ ನೋಡಿಕೊಳ್ಳುತ್ತಿದ್ದಾರೆ. ಸಹಕಾರ ಸಂಘಗಳ ಆಡಳಿತಕ್ಕೆ ಹೆಚ್ಚು ಪ್ರೋತ್ಸಾಹ ಮತ್ತು ಸಹಕಾರ ಸರ್ಕಾರಕ್ಕಿದೆ ಮತ್ತು ಅವರ ದೃಷ್ಟಿ ಇವುಗಳ ವಿಷಯದಲ್ಲಿ ಬಹಳವಾಗಿಬಿದ್ದಿದೆ ಎಂದು ನಾವು ಮೊದಲು ತಿಳಿದುಕೊಂಡೆವು. ಈ ರೀತಿಯ ಏರ್ಪಾಡು ಆದಾಗ ಅದರ ಬಗ್ಗೆ ಮೆಚ್ಚುಗೆಯಿಂದ ಮಾತನಾಡಿದವ

(ಶ್ರೀ ಡಿ. ದೇವರಾಜ ಅರಸ್)

ರಲ್ಲಿ ನಾನೂ ಒಬ್ಬ. ಆದರೆ ಒಂದು ಸಲ ಮುಂದೆ ಇಟ್ಟ ಹೆಜ್ಜೆ ಮತ್ತೆ ಹಿಂದಕ್ಕೆ ಹೋಯಿತು. ಸಹಕಾರ ಸಂಘಗಳ ಆಡಳಿತ ದೃಷ್ಟಿಯಿಂದ ಮತ್ತು ಅದರ ವ್ಯಾಪ್ತಿ ಬಹಳ ಬೇಗಬೇಗ ಬೆಳೆಯುತ್ತಿರುವ ದೃಷ್ಟಿಯಿಂದ ಇದರ ಆಡಳಿತಕ್ಕೆ ಪ್ರತ್ಯೇಕವಾಗಿ ಒಬ್ಬ ಮಂತ್ರಿಗಳಿದ್ದು ಹೆಚ್ಚು ಚುರುಕಾಗಿ ಕೆಲಸಕಾರ್ಯಗಳು ನಡೆಯಬೇಕೆಂದು ನಾನು ಸೂಚಿಸುತ್ತೇನೆ. ನಮ್ಮ ಧ್ಯೇಯವಾದರು ಸಹ Co-operative Commonwealth establish ಮಾಡಬೇಕು ಎಂದಿದೆ. ರೈತರ ಮತ್ತು ಗ್ರಾಮಾಂತರ ಜನಗಳ ಅಭ್ಯುದಯ ಸಾಧನೆಯಾಗಬೇಕಾದರೆ ಬೇರೆ ಯಾವ ಆಡಳಿತದಿಂದಲೂ ಸಾಧ್ಯವಿಲ್ಲ, ಸಹಕಾರ ಸಂಘಗಳ ಮೂಲಕ ಮಾತ್ರ ಸಾಧ್ಯವೆಂಬ ಬಗ್ಗೆ ಸಂಪೂರ್ಣ ನಂಬಿಕೆಯುಳ್ಳವರಲ್ಲಿ ನಾನೂ ಒಬ್ಬ. ಈಗ ಸಹಕಾರ ಸಂಘಗಳ ಬೆಳವಣಿಗೆಗೆ ಸಾಕಷ್ಟು ಗಮನ ಕೊಡುತ್ತಿಲ್ಲವೆಂದು ನಾನು ಸ್ವಲ್ಪ ವ್ಯಥೆಯಿಂದ ಹೇಳಬೇಕಾಗಿದೆ. ಇದಕ್ಕೆ ಒಂದು ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ ಸಹಕಾರ ಸಂಘಗಳ ಮೇಲ್ವಿಚಾರಕರು (head of the department) ಈಗ ಕೆಲವರು ತಿಂಗಳಲ್ಲಿ ಒಬ್ಬರಲ್ಲ, ಇಬ್ಬರಲ್ಲ, ಮೂವರು ಬದಲಾವಣೆಯಾದರು ; ಮತ್ತು ಇನ್ನೂ ಬದಲಾವಣೆಯಾಗುವ ಸಂಭವವಿದೆ ಎಂದು ತಿಳಿಯುತ್ತೇನೆ. ಈಗಿರುವವರೂ ಬದಲಾವಣೆಯಾಗಬಹುದು ಎಂದು ಕೇಳುತ್ತೇನೆ. ಇದು ಎಷ್ಟರಮಟ್ಟಿಗೆ ನಿಜವೋ ಗೊತ್ತಿಲ್ಲ. ಆದರೆ ನಾನು ಸರ್ಕಾರದ ಗಮನಕ್ಕೆ ತರಲು ಇಚ್ಛಿಸುವ ವಿಚಾರವಿಷ್ಟೆ. ಸಹಕಾರ ಸಂಘಗಳು ಇನ್ನೂ ಬೆಳೆಯಬೇಕಾದಲ್ಲಿ ಅದರ ಮುಖ್ಯಾಧಿಕಾರಿಗಳು ಸಹಕಾರತತ್ವಗಳಲ್ಲಿ ಸಂಪೂರ್ಣ ನಂಬಿಕೆಯುಳ್ಳವರು ಆಗಬೇಕಾದದ್ದು ತೀರ ಅಗತ್ಯ. ಇದನ್ನು ಸರ್ಕಾರದವರು ಒಪ್ಪುತ್ತಾರೆಂದು ಭಾವಿಸುತ್ತೇನೆ. ನಮ್ಮ ಹಳೆ ಮೈಸೂರು ರಾಜ್ಯದಲ್ಲಿ ಸಹಕಾರ ತತ್ವಗಳ ಮೇಲೆ ಕೆಲವು Co-operative farms ಸ್ಥಾಪನೆಯಾದುವು. ಇದು ಸ್ಥಾಪನೆಯಾದ ಕಾಲದಲ್ಲಿ ಅದಕ್ಕೆ ಸಂಬಂಧಪಟ್ಟ ಇಲಾಖೆಯವರೆಲ್ಲ ಪ್ರೋತ್ಸಾಹ ಕೊಡಬೇಕು, ರೆವಿನ್ಯೂ ಇಲಾಖೆ, ಇಂಜನಿಯರಿಂಗ್ ಇಲಾಖೆ ಮತ್ತು ಇತರ ಯಾವ ಯಾವ ಇಲಾಖೆಯಿಂದ ಈ ಸಂಘಗಳಿಗೆ ಸಹಾಯ ಅಗತ್ಯವಾಗಿದೆಯೋ ಆ ಇಲಾಖೆಯವರೆಲ್ಲ ಈ ಸಹಕಾರಸಂಘಗಳಿಗೆ ಪ್ರೋತ್ಸಾಹಕೊಡಬೇಕೆಂದು ಬಹಳ ಆಸೆಯಿಂದ ಪ್ರಾರಂಭಮಾಡಿದರು.

ಈಗ ಅವುಗಳು ಯಾವ ರೀತಿ ನಡೆಯುತ್ತಿವೆ. ಅವುಗಳ ಪ್ರಗತಿ ಏನು ಎಂದು ನೋಡಿದರೆ ಅನೇಕ ವ್ಯವಸಾಯ ಸಹಕಾರ ಸಂಘಗಳ ಸ್ಥಿತಿ ಚಿಂತಾಜನಕವಾಗಿದೆ ಮತ್ತು ಕೆಲವಂತೂ ಮುಚ್ಚುವ ಸ್ಥಿತಿಯಲ್ಲಿಯೇ ಇದೆಯೋ ಏನೋ ಎಂದನ್ನಿಸುತ್ತದೆ. ಹೀಗೆಲ್ಲ ಏತಕ್ಕೆ ಆಯಿತು ಎಂದರೆ ಸಹಕಾರ ಸಂಘಗಳ ರಿಜಿಸ್ಟ್ರಾರ್ ಅವರಿಗೆ, ಈ ಸಂಘಗಳು ಯಾವ ಉದ್ದೇಶದಿಂದ ಸ್ಥಾಪನೆಯಾದುವು ಎನ್ನುವುದರ ಮೇಲೆ ಆ ತತ್ವಗಳ ಮೇಲೆ ನಂಬಿಕೆಯೇ ಇಲ್ಲ. ಅಲ್ಲದೆ ಕೆಲವು ಸಹಕಾರ ಸಂಘಗಳ ಮೇಲ್ವಿಚಾರಕರನ್ನಾಗಿ ರೆವಿನ್ಯೂ ಅಧಿಕಾರಿಗಳನ್ನು ನೇಮಿಸಿರುತ್ತಾರೆ. ಅವರು ತಮ್ಮ ಇತರ ಕೆಲಸ ಕಾರ್ಯಗಳ ಜೊತೆಯಲ್ಲಿ ಇದೂ ಒಂದು ಕೆಲಸವೆಂದು ಈ ಸಂಘಗಳ ಕೆಲಸಗಳನ್ನೂ ನೋಡುತ್ತಾರೆ. ಈ ಸಂಘಗಳ ಮೇಲ್ವಿಚಾರಕರು ಸಾಕಷ್ಟು ಕಾಲವನ್ನು ಇದಕ್ಕೆ ವಿನಿಯೋಗ ಮಾಡಬೇಕು, ಸಂಘಗಳು ಚೆನ್ನಾಗಿ ಬೆಳೆಯಬೇಕು, ಕೆಲಸ ದಕ್ಷತೆಯಿಂದ ನಡೆಯಬೇಕು. ಸಂಘಗಳು ತಾತ್ವಿಕವಾಗಿ ಬೆಳವಣಿಗೆಯಾದರೆ ಇವನ್ನು ಮಾದರಿಯನ್ನಾಗಿಟ್ಟುಕೊಂಡು ಮುಂದೆ ವ್ಯವಸಾಯಕ್ಕೆ ಜಮೀನನ್ನು ಯಾವ ರೀತಿ ಹಂಚಿಕೆ ಮಾಡಬೇಕೆನ್ನುವುದಕ್ಕೆ ಆಧಾರವಾದೀತು ಎನ್ನುವ ನಂಬಿಕೆಯಿಂದ ಕೆಲಸ ಮಾಡುತ್ತಿರುವ ಹಾಗೆ ಕಾಣುವುದಿಲ್ಲ. ಏನೋ ಒಂದು experiment ಇದೆ, ಇದರಲ್ಲಿ ಯಾರಿಗೋ ಪ್ರೇಮವಿದೆ, ಅದಕ್ಕೋಸ್ಕರ ನಾಲ್ಕಾರು ಕಡೆ ಸಂಘಗಳನ್ನು ಸ್ಥಾಪನೆ ಮಾಡಿದ್ದಾರೆ, ಎಲ್ಲವೂ ನಡೆಯುವಂತೆ ಇವೂ ನಡೆಯಲಿ, ಕೆಲಸವಾದರೆ ಆಯಿತು ಇಲ್ಲದಿದ್ದರೆ ಇಲ್ಲವೆಂಬ ಧೋರಣೆಯಿಂದ ಕೆಲಸ ಮಾಡಿದರೆ ಸಹಕಾರ ಪದ್ಧತಿಯ ಮೂಲಕ ವ್ಯವಸಾಯ ನಡೆಯುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ. ಕೊಡಗಿನಲ್ಲಿ ಒಂದು ಇಂಥ ಕ್ಷೇತ್ರವಿದೆ, ಎಂದು ಕೇಳಿದ್ದೇನೆ. ಅಲ್ಲಿ ಚೆನ್ನಾಗಿ ಕೆಲಸನಡೆಯುತ್ತಿದ್ದರೆ ಬಾಕಿ ಕಡೆಗಳಲ್ಲಿಯೂ ಚೆನ್ನಾಗಿ ನಡೆಯಲು ಸಾಧ್ಯವಿದೆ ಇತ್ಯಾದಿಯಾಗಿ ಹೇಳಬಹುದು. ಆದರೆ ಈ ಸಂಘಗಳನ್ನು ನಡೆಸತಕ್ಕಂಥ ಮೇಲ್ವಿಚಾರಕರಲ್ಲಿ ನಂಬಿಕೆ ಇಲ್ಲದಿರುವ ಸ್ಥಿತಿಯಲ್ಲಿ ಇಂದು ನಾವಿದ್ದೇವೆ. ಇತರ ಸಹಕಾರ ಸಂಘಗಳನ್ನು ತೆಗೆದುಕೊಂಡರೂ ಸಹ ಅವೂ ಅಷ್ಟು ತೃಪ್ತಿಕರವಾಗಿ ಕೆಲಸವನ್ನು ಮಾಡುತ್ತಿಲ್ಲ. ಹಿಂದಿನ ಸರ್ಕಾರದವರು, ನಮ್ಮಲ್ಲಿ ತರಬೇತು ಹೊಂದಿದ ಅಧಿಕಾರ ವರ್ಗದವರು ಸಾಕಷ್ಟಿಲ್ಲವೆಂದು ಹೇಳುತ್ತಿದ್ದರು. ಬಹುಶಃ ಈ ಸಂಘಗಳು ಸರಿಯಾಗಿ ಕೆಲಸ ಮಾಡದಿರಲು ಇದೂ ಒಂದು ಕಾರಣವಿರಬಹುದು. ಎಲ್ಲ ಕಡೆಯೂ ಸಹಕಾರ ಸಂಘಗಳ ಆಡಳಿತ ವಿಚಾರದಲ್ಲಾಗಲಿ, ಅದರ ಬೆಳವಣಿಗೆಯ ವಿಚಾರದಲ್ಲಾಗಲೀ ತೃಪ್ತಿಕರವಾದ ರೀತಿಯಲ್ಲಿ ಕೆಲಸ ನಡೆಯುತ್ತಿಲ್ಲವೆಂದು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಒಂದು ವೇಳೆ ಸಾಕಷ್ಟು ತರಬೇತು ಹೊಂದಿದ ಸಿಬ್ಬಂದಿ ಇಲ್ಲದೆ ಹೋದರೆ ಅಂಥ ಕಡೆಗಳಿಗೆ ತರಬೇತು ಪಡೆದ ಸಿಬ್ಬಂದಿಯನ್ನು ಒದಗಿಸುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವುದನ್ನು ಸರ್ಕಾರದ ಪಾಲಿಗೇ ಬಿಡುತ್ತೇನೆ. ಒಟ್ಟಿನಲ್ಲಿ ದೇಶಾಭಿವೃದ್ಧಿಯನ್ನು ನಾವು ಬೇಗ ಬೇಗ ಸಾಧಿಸಬೇಕೆಂದಿದ್ದರೆ ಅದು ಕೇವಲ ಈ ಸಹಕಾರ ಸಂಸ್ಥೆಗಳ ನೆರವಿನಿಂದಲೇ ಆಗಬೇಕು. ರೈತಾಭಿವೃದ್ಧಿಯೇ ದೇಶಾಭಿವೃದ್ಧಿಯ ಚಿಹ್ನೆ. ಈ ದಿವಸ ನಾವು ನಮ್ಮ ದೇಶದ ರೈತಾಪಿಜನಗಳಿಗೆ ಸಹಕಾರ ಸಂಘಗಳ ಮೂಲಕ ಧನ ಸಹಾಯ ನೀಡತಕ್ಕ ಒಂದು ವ್ಯವಸ್ಥೆಯನ್ನೇರ್ಪಾಡು ಮಾಡಿದ್ದೇವೆ. ಈ ಒಂದು ವ್ಯವಸ್ಥೆಯ ಮೂಲಕ ಎಲ್ಲ ರೈತರಿಗೂ ಸರಾಗವಾಗಿ ಸಾಲದೊರೆಯುವಂತೆ ಒಂದು ಏರ್ಪಾಡನ್ನು ಮಾಡಲೇಬೇಕು. ನಮ್ಮ ರೈತರು ವರ್ತಕರ ಕೈಗೆ ಸಿಕ್ಕಿ ಅವರ ಕಿರುಕುಳಗಳಿಗೊಳಗಾಗದಂತೆ ಮತ್ತು ವ್ಯಾಪಾರಿಗಳು ಅವರನ್ನು ಶೋಷಣೆ ಮಾಡದಂತೆ ಮಾಡಬೇಕಾಗಿದ್ದರೆ ನಮ್ಮ ಸಹಕಾರ ಸಂಸ್ಥೆಗಳು ಚೆನ್ನಾಗಿ ಅಭಿವೃದ್ಧಿಗೆ ಬರಬೇಕು. ಈ ಸಂಸ್ಥೆಗಳು ಹೆಚ್ಚು ಹೆಚ್ಚಾಗಿ ಬೆಳೆಯಬೇಕು. ಈ ಬಾಬಿಗೆ ಸರ್ಕಾರದವರು ಹೆಚ್ಚಿನ ಗಮನಕೊಡಬೇಕೆಂದು ಸೂಚಿಸುತ್ತೇನೆ.

ಇನ್ನು ಅರಣ್ಯ ಶಾಖೆಯ ವಿಚಾರವಾಗಿ ಎರಡು ಮಾತುಗಳನ್ನು ಹೇಳಬೇಕಾಗಿದೆ. ಹಿಂದಿನ ಬಡ್ಜೆಟ್ ಅಧಿವೇಶನದಲ್ಲೇ ನಾನು ಅರಣ್ಯ ಶಾಖೆಯ ವಿಚಾರದಲ್ಲಿ ಮಾತನಾಡುವಾಗ ಸರ್ಕಾರದವರಿಗೆ ಒಂದೆರಡು ಸಲಹೆಗಳನ್ನು ನೀಡಿದ್ದೆನು. ಆದರೆ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಆ ಸಲಹೆಗಳನ್ನು ತಮ್ಮ ಗಮನಕ್ಕೆ

ತೆಗೆದುಕೊಂಡಿರುವ ಹಾಗೆ ಕಾಣುವುದಿಲ್ಲ. ಈಗ ಏನೊಂದು ಪರಿಸ್ಥಿತಿ ಇದೆಯೆಂದರೆ—ಸೌದೆಗಾಗಿ ಅರಣ್ಯದಲ್ಲಿರತಕ್ಕ ಕಾಡುಜಾತಿ ಮರಗಳನ್ನು ಹಳ್ಳಿಯಲ್ಲಿರತಕ್ಕ ಜನರೂ ಮತ್ತು ಪಟ್ಟಣಗಳಲ್ಲಿರತಕ್ಕ ಜನರೂ ತರಬೇಕಾಗಿದ್ದರೆ ಈ ಬಗ್ಗೆ ಇರತಕ್ಕ ಒಂದು ವ್ಯವಸ್ಥೆ ಏನಿದೆಯೋ ಅದು ಬಹಳ ವಿಚಿತ್ರವಾಗಿದೆ. ಪಟ್ಟಣಗಳಿಗೆ ಸೌದೆಗಾಗಿ ಅರಣ್ಯದಿಂದ ಕಾಡು ಜಾತಿ ಮರಗಳನ್ನು ಲಾರಿಗಳ ಮೂಲಕ ತರಲು ಅರಣ್ಯ ಪ್ರದೇಶವಿರುವ ಕಡೆ ಇಂತಿಷ್ಟು ಪ್ರದೇಶವೆಂದು ನಿರ್ಧರಿಸಿ ಅದನ್ನು ಒಂದು ಕೂಪ್ ಎಂದು ಕರೆದು—ಒಂದು ಲಾರಿ ಲೋಡಿಗೆ ಇಂತಿಷ್ಟು ದುಡ್ಡು ಕೊಡಬೇಕೆಂಬುದಾಗಿ ಒಂದು ಪದ್ಧತಿಯನ್ನು ಹಳೆ ಮೈಸೂರಿನವರು 1942ರಿಂದೀಚೆಗೆ ಅನುಸರಿಸಿಕೊಂಡು ಬರುತ್ತಿದ್ದರು. ಈಗಲೂ ಇದು ಹಾಗೇ ನಡೆದುಕೊಂಡು ಬರುತ್ತಿದೆ. ಆದರೆ ನಮ್ಮ ಹೊಸರಾಜ್ಯದ ಬೇರೆ ಭಾಗಗಳಲ್ಲಿ ಈ ಪದ್ಧತಿ ಯಾವ ರೀತಿಯಿದೆಯೋ ನನಗೆ ಅದು ಗೊತ್ತಿಲ್ಲ. ಯುದ್ಧ ನಡೆಯುತ್ತಿದ್ದಾಗ ಮತ್ತು ಯುದ್ಧಾನಂತರ ಸೌದೆ ಅಭಾವವನ್ನು ನೀಗಲು ಈ ರೀತಿ ಒಂದು ವ್ಯವಸ್ಥೆಯನ್ನು ಏರ್ಪಾಡುಮಾಡಿ ಕೂಪ್ ಸಿಸ್ಟಂ ಮೇಲೆ ಒಂದು ಲಾರಿ ಲೋಡಿಗಿಷ್ಟೆಂದು ಕಾಡು ಜಾತಿ ಮರಗಳನ್ನು ತರತಕ್ಕ ಏರ್ಪಾಡು ಈಗಲೂ ನಡೆದುಕೊಂಡು ಬರುತ್ತಿದೆ. ಇದೆಲ್ಲ ಪಟ್ಟಣಗಳಿಗೆ ಸೌದೆ ಸರಬರಾಯಿ ಮಾಡತಕ್ಕ ವ್ಯವಸ್ಥೆ. ಇನ್ನು ಹಳ್ಳಿಗಳಿಗೆ ಸೌದೆ ಸರಬರಾಯಿನ ವಿಚಾರ ತೆಗೆದುಕೊಂಡರೆ ಅದು ಬಹಳ ಕಷ್ಟಕರವಾಗಿದೆ. ಹಳ್ಳಿಯವರ್ಯಾರಾದರೂ ಸೌದೆ ತರಲು ಕಾಡಿಗೆ ಹೋಗಬೇಕಾಗಿದ್ದರೆ ಮೊದಲೇ ಫಾರೆಸ್ಟ್ ಇಲಾಖೆಯವರ ಹತ್ತಿರ ಹೋಗಿ ಒಂದು ಗಾಡಿಗೆ ಒಂದು ರೂಪಾಯಿ ನಂತೆ ಲೈಸೆನ್ಸ್ ಫೀಜನ್ನು ಕೊಟ್ಟು ಇಂತಿಷ್ಟು ದಿನಗಳೊಳಗಾಗಿ ಅಷ್ಟು ಗಾಡಿ ಸೌದೆ ತರಬೇಕೆಂಬ ನಿಯಮವಿದೆ. ಈ ದಿನ ಕಾಡುಗಳೆಲ್ಲ ಹಾಳಾಗಿ ಹೋಗುತ್ತಿರುವುದರಿಂದ ಕಾಡಿನಲ್ಲಿ ಒಣಮರಗಳು ಸೌದೆಗಾಗಿ ಸಿಕ್ಕಲು ಬಹಳ ಕಷ್ಟವಾಗಿದೆ. ಹಳ್ಳಿ ಜನರು ಒಣ ಸೌದೆ ವಿನಾ ಮತ್ತೊಂದನ್ನು ತರಲು ಅವಕಾಶವಿಲ್ಲ. ಆ ರೀತಿಯ ಒಂದು ನಿಯಮವಿದೆ. ಆ ನಿಯಮವನ್ನು ಅನುಸರಿಸೋಣವೆಂದರೆ ಅಲ್ಲಿ ಒಣ ಸೌದೆ ಸಿಕ್ಕುತ್ತಿಲ್ಲ. ಹೀಗೆಲ್ಲ ತೊಂದರೆಯುಂಟಾದ್ದರಿಂದ ಇತ್ತೀಚೆಗೆ ಹಳ್ಳಿಯ ಜನರೇನು ಮಾಡುತ್ತಿದ್ದಾರೆಂದರೆ ಕಾಡಿನಲ್ಲೇ ಸದಾ ವಾಸಮಾಡತಕ್ಕ ಕಾಡು ಕುರುಬರೆಂಬ ಒಂದು ಜನಾಂಗವಿದೆ; ಅವರಿಗೆ ಮೊದಲೇ ತಿಳಿಸಿ ನಾವು ಇಂಥ ದಿವಸ ಕಟ್ಟಿಗೆಗೆ ಬರುತ್ತೇವೆಂದು ಹೇಳಿಬಿಡುತ್ತಾರೆ; ಅದಕ್ಕನುಸಾರವಾಗಿ ಅವರು ಮುಂಚಿತವಾಗಿ 50—60 ಹಸಿ ಮರಗಳನ್ನು ಕಡಿದು ಒಣಗು ಬಿಟ್ಟಿರುತ್ತಾರೆ; ಹಾಗೆ ಕಡಿದು ಒಂದೆರಡು ತಿಂಗಳು ಬಿಟ್ಟನಂತರ ಅದನ್ನೇ ಒಣ ಸೌದೆಯೆಂದು ಹಳ್ಳಿಯವರು ತರುತ್ತಿದ್ದಾರೆ.

Sri H. S. RUDRAPPA (Minister for Agriculture).—It is one method of manufacturing of dry fuel.

ಶ್ರೀ ಡಿ. ದೇವರಾಜ ಅರಸ್.—ಈ ರೀತಿ ಆಗುತ್ತಿರುವುದನ್ನ ತಪ್ಪಿಸಲು ಹಳ್ಳಿಯ ಜನರಿಗೂ ಹಸಿ ಸೌದೆಯನ್ನೇ ತರುವಂತೆ ಏನಾದರೊಂದು ಏರ್ಪಾಡನ್ನು ಮಾಡಬೇಕೆಂದು ಅರಣ್ಯ ಶಾಖೆಯ ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡಿದ್ದೆನು. ಆದರೆ ಏಕೋ ಈ ಸಲಹೆಗೆ ಅವರು ತಮ್ಮ ಗಮನ ಕೊಟ್ಟ ಹಾಗೆ ಕಾಣಲಿಲ್ಲ. ಅದೇಕೆ ಕೊಡಲಿಲ್ಲವೋ ಅದೂ ನಹ ಗೊತ್ತಾಗಲಿಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ.—ತಮ್ಮ ಸಲಹೆಗೆ ಸಂಪೂರ್ಣ ಗಮನ ಕೊಟ್ಟಿದೆ.

ಶ್ರೀ ಡಿ. ದೇವರಾಜ ಅರಸ್.—ನಮ್ಮ ಮೈಸೂರು ಜಿಲ್ಲೆಯಲ್ಲಿ ಹೆಗ್ಗಡ ದೇವನಕೋಟೆ ಗುಂಡ್ಲುಪೇಟೆ ಇತ್ಯಾದಿ 3-4 ತಾಲ್ಲೂಕುಗಳ ಜನರಿಗೆ ಈ ಸೌದೆ ತರುವ ವಿಚಾರದಲ್ಲಿ ಬಹಳ ತೊಂದರೆಯಾಗಿದೆ. ಕೆಲವು ಹಳ್ಳಿಯ ಜನರು ಮೈಸೂರುನಗರಕ್ಕೆ ಗಾಡಿಗಳಲ್ಲಿ ಸೌದೆಯನ್ನು ತಂದುಹಾಕಿ ಅದರಿಂದಲೇ ತಮ್ಮ ಜೀವನೋಪಾಯ ಮಾಡತಕ್ಕಂಥ ಜನರೂ ಇದ್ದಾರೆ. ಅಂಥವರಿಗೆಲ್ಲ ಈಗ ಬಹಳ ತೊಂದರೆಯಾಗಿದೆ. ಸರ್ಕಾರದವರು ಈ ಒಂದು ತೊಂದರೆಯನ್ನು ತಪ್ಪಿಸಲು ಏನಾದರೂ ಒಂದು ಹಾದಿಯನ್ನು ಇದುವರೆಗೂ ಕಂಡುಹಿಡಿಯಲು ಅವರು ಮನಸ್ಸು ಮಾಡದೆ ಇರುವುದನ್ನು ನೋಡಿದರೆ—ಸರ್ಕಾರದವರೇ ಆ ಜನರಿಗೆ ಕಾಡಿನಲ್ಲಿ ಹಸಿ ಮರಗಳನ್ನು ಕಡಿಯಲು ಒಂದು ಉತ್ತೇಜನ ಕೊಡೋ ಹಾಗೆ ಕಾಣುತ್ತಿದೆ. ರೈತರಿಗೆ ಇದು ತೀರಾ ಅವಶ್ಯಕ. ಆದುದರಿಂದ ಸರ್ಕಾರದವರು ಅವರಿಗೆ ಈಗ ಹಾಕತಕ್ಕ ಒಂದು ರೂಪಾಯಿ ಲೈಸೆನ್ಸ್ ಫೀ ಏನಿದೆಯೋ ಅದನ್ನು ಒಂದೂವರೆ ರೂಪಾಯಿಗೆ ಬೇಕಾದರೂ ಹೆಚ್ಚಿಸಲಿ, ಇಲ್ಲವೇ ಎರಡು ರೂಪಾಯಿ ಕೊಡಬೇಕೆಂದು ಕೇಳಲಿ. ಆ ರೀತಿ ಏಕೆ ಮಾಡಬಾರದು ? ಹಸಿ ಮರಗಳನ್ನು ಲಾರಿಗಳಲ್ಲಿ ಕಾಡಿನಿಂದ ಕಡಿದು ಸಾಗಿಸಲು ಸರ್ಕಾರದವರೇ ಅನುಮತಿ ಕೊಟ್ಟಿದ್ದಾರೆ. ಆದರೆ ಆ ಅವಕಾಶವನ್ನು ಗಾಡಿಗಳಲ್ಲಿ ತರಲು ಕೊಟ್ಟಿಲ್ಲ. ಈ ಒಂದು ಕಾರಣದಿಂದ ಹಳ್ಳಿ ಜನರು ಸೌದೆ ತರುತ್ತಿದ್ದ ಗಾಡಿಗಳನ್ನು ಹಿಡಿದು ಅವರಿಗೆ 5-10 ರೂಪಾಯಿ ಜುಲ್ಮಾನೆ ವಿಧಿಸಿ ಅವರಿಂದ ದಂಡ ವಸೂಲ್ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಎಚ್. ಎಸ್. ರುದ್ರಪ್ಪ.—ಈ ದಿವಸ ಆ ವಿಷಯದ ಬಗ್ಗೆ ಏನು ಏರ್ಪಾಡಾಗಿದೆಯೆಂಬುದು ಬಹುಶಃ ನಿಮಗೆ ಗೊತ್ತಿಲ್ಲವೆಂದು ಕಾಣುತ್ತದೆ. ಈಗ ಗಾಡಿಗಳಲ್ಲಿ ಸೌದೆ ತರತಕ್ಕವರಿಗೂ ಸಹ ಕೂಪ್‌ಗಳನ್ನು ಅಲಾಟ್ ಮಾಡಿದ್ದೇವೆ. ಒಂದು ಗಾಡಿಗೆ ಅವರು ಒಂದೂವರೆ ರೂಪಾಯಿನಂತೆ ಕೊಡಬೇಕಾಗಿದೆ. ಈ ರೀತಿ ಒಂದು ಆರ್ಡರನ್ನು ಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆಲ್ಲ ತಿಳಿಸಿದ್ದೇವೆ. ಶ್ರೀಮತಿ ನಾಗರತ್ನಮ್ಮನವರು ಒಂದೆರಡು ಕಾಗದ ಪತ್ರಗಳನ್ನು ಈ ವಿಚಾರವಾಗಿ ಬರೆದಿದ್ದರು. ಆ ಸಂಬಂಧದಲ್ಲಿ ಒಂದು ಆರ್ಡರನ್ನು ಹೊರಡಿಸಿದ್ದೇವೆ.

ಶ್ರೀ ಡಿ. ದೇವರಾಜಅರಸ್.—ತಾವು ಯಾವಾಗ ಆ ರೀತಿ ಆರ್ಡರ್ ಮಾಡಿದ್ದು ? ಆ ಆರ್ಡರನ್ನು ಎಲ್ಲ ರೇಂಜರುಗಳಿಗೂ ಕಳುಹಿಸಿದ್ದೀರಾ ? ಅದು ಅವರಿಗೆ ತಲುಪಿದೆಯೇ ? ಹಾಗಿದ್ದರೆ ಅವರೇ ಈಗಲೂ ರೈತರಿಗೆ ತೊಂದರೆಕೊಡುತ್ತಿದ್ದಾರೆ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ನಾನು ಸರ್ಕಾರದವರಿಗೆ ಈ ವಿಚಾರದಲ್ಲಿ ಕಾಗದ ಪತ್ರ ಬರೆದಿದ್ದುದಕ್ಕೆ ಮಾರ್ಚಿ 14ನೇ ತಾರೀಖಿನಲ್ಲಿ ಹಾಗೆ ಮಾಡುವುದಕ್ಕಾಗುವುದಿಲ್ಲವೆಂದು ಒಂದು ಉತ್ತರ ಕಳುಹಿಸಿದ್ದಾರೆ.

ಶ್ರೀ ಎಚ್. ಎಸ್. ರುದ್ರಪ್ಪ.—ನಾವು ಆರ್ಡರ್ ಮಾಡಿ ಕಳುಹಿಸಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ಇನ್ನು ನಾನು ಕಮ್ಯುನಿಟಿ ಪ್ರಾಜೆಕ್ಟ್ ಮತ್ತು ಎನ್. ಈ. ಎಸ್. ಬ್ಲಾಕುಗಳ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ನಮ್ಮ ಇಡೀ ರಾಜ್ಯದಲ್ಲೆಲ್ಲಾ-ದೇಶಾದ್ಯಂತವೂ ಈ

(ಶ್ರೀ ಡಿ. ದೇವರಾಜ ಅರಸ್)

ಕಮ್ಯುನಿಟಿ ಪ್ರಾಜೆಕ್ಟುಗಳನ್ನು ಮತ್ತು ಎನ್.ಇ.ಎಸ್. ಬ್ಲಾಕುಗಳನ್ನೂ ನಮ್ಮ ದ್ವಿತೀಯ ಪಾಂಚವಾರ್ಷಿಕ ಯೋಜನೆ ಪೂರೈಸುವುದರೊಳಗಾಗಿ ಜಾರಿಗೆ ತರಬೇಕೆಂದು ಒಂದು ಪ್ಲಾನು ಹಾಕಿದ್ದಾಯಿತು. ಆದರೆ ಈಗ ಹಾಲಿ ಯಾವ ಯಾವ ಪ್ರಾಂತ್ಯದಲ್ಲಿ ಈ ರಾಷ್ಟ್ರೀಯ ವಿಸ್ತರಣಾ ಯೋಜನೆ ಕೆಲಸಕಾರ್ಯಗಳು ನಡೆಯುತ್ತವೆಯೋ ಅವುಗಳನ್ನು ನೋಡಿದರೆ ಅವುಗಳಿಂದ ಆಗುತ್ತಿರುವ ಪ್ರಯೋಜನದ ಬಗ್ಗೆ ಇಂಡಿಯಾ ಸರ್ಕಾರದವರೂ ಒಂದು ವರದಿ ಮಾಡಿದ್ದಾರೆ, ನಮ್ಮ ಸರ್ಕಾರದವರೂ ಒಂದು ವರದಿಯನ್ನು ಹೊರಡಿಸಿದ್ದಾರೆ. ಏನೇ ಆಗಲಿ ಇವುಗಳಿಂದ ನಾವು ನಿರೀಕ್ಷಣೆ ಮಾಡಿಕೊಂಡಿದ್ದಷ್ಟು ಕೆಲಸಗಳಾಗಿಲ್ಲ ಇಷ್ಟೇ ಅಲ್ಲ. ಇದರ ಬಗ್ಗೆ ಇನ್ನೂ ಒಂದು ಮುಖ್ಯವಾದ ಟೀಕೆ ಇದೆ. ಅದೇನೆಂದರೆ ಈ ಯೋಜನೆಯಲ್ಲಿ ಕೇವಲ ಡೆವಲಪ್‌ಮೆಂಟಲ್ ಆಕ್ಟಿವಿಟೀಸ್ ಕೈಗೊಳ್ಳಲಾಗುತ್ತಿದೆಯೆಂದು ಹೇಳುತ್ತ ಏನೋ ಅಲ್ಲೊಂದು ಇಲ್ಲೊಂದು ರಸ್ತೆ, ಕಲ್‌ವರ್ಟ್ ಕೆಲಸ ಮತ್ತು ಒಂದು ಸ್ಕೂಲು ಕಟ್ಟಡ ಕಟ್ಟಿಸಿದರೆ ನಮ್ಮ ಆಶೋತ್ತರಗಳೆಲ್ಲ ಈಡೇರಿದಂತಾಗಲಿಲ್ಲ. ಹೀಗಾಗಿ ನಾವು ಕೇಳತಕ್ಕ ಕೆಲಸಗಳೊಂದೂ ಈಗ ನಡೆಯುತ್ತಿಲ್ಲ. ನನಗೆ ತಿಳಿದಿರುವಂತೆ ಈ ರಾಷ್ಟ್ರೀಯ ವಿಸ್ತರಣಾಯೋಜನೆಯಲ್ಲಿ ಅಡಗಿರಬೇಕಾದಂಥ ಒಂದು ಬಹುಮುಖ್ಯತತ್ವವೆಂದರೆ ಈ ಯೋಜನೆಯ ದೆಸೆಯಿಂದ ದೇಶದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಯೂ ಮುಖ್ಯವಾಗಿ ಪ್ರತಿಯೊಬ್ಬ ರೈತನಿಂದ ಹಿಡಿದು ಎಲ್ಲರಲ್ಲೂ ಅವರ ಆರ್ಥಿಕ, ಸಂಸಾರಿಕ ಸಾಮಾಜಿಕ ಜೀವನವು ಈ ಎಲ್ಲ ವಿಧಗಳಲ್ಲಿಯೂ ವಿಕಾಸಗೊಳ್ಳುವಂಥಾ ಯಾವ ಒಂದು ಪ್ಲಾನ್ ಇದೆಯೋ ಅದನ್ನು ಗೊತ್ತುಮಾಡಿ ಅದರ ಪ್ರಕಾರ ಜನತೆಯ ಮನಸ್ಸನ್ನು ವಿಕಾಸಗೊಳಿಸಲು ಈ ಯೋಜನೆ ಸಹಕಾರಿಯಾಗುತ್ತದೆಂದು ಹೇಳುತ್ತಿದ್ದೆವು. ಆದರೆ ಈ ದಿವಸ ಆ ರೀತಿಯಲ್ಲಿ ಇದು ಕೆಲಸ ನಡೆಸುತ್ತಿಲ್ಲ. ಇದಕ್ಕೇ ಒಂದು ಬೇರೆ ಎಸ್ಟಿಮೇಟ್ ತಯಾರಿಸಲಾಗಿದೆ. ಶಿಬ್ಬಂದಿಗಾಗಿಯೇ 2 ಲಕ್ಷ ರೂಪಾಯಿಗಳು ವೆಚ್ಚವಾಗುತ್ತಿದೆ. ಇದಿಷ್ಟು ಕೆಲಸ ಮಾಡಲು ಇದಕ್ಕೇ ಒಂದು ಇಂಥಾ ದೊಡ್ಡ ಎಸ್ಟಾಬ್ಲಿಷ್‌ಮೆಂಟ್ ಇರಬೇಕೇ? ಈ ಕೆಲಸಕಾರ್ಯಗಳನ್ನು ಆಯಾಯ ಕೆಲಸಗಳಿಗೆ ಸಂಬಂಧಪಟ್ಟ ಇಲಾಖೆಗಳೇನಿರುತ್ತವೋ ಅವು ತಮ್ಮ ಇಲಾಖೆಯ ಕಾರ್ಯಕ್ರಮದ ಜೊತೆಯಲ್ಲಿ ಇವುಗಳನ್ನೂ ಮಾಡಲು ಸಾಧ್ಯವಿಲ್ಲವೇ ಎನ್ನತಕ್ಕ ಒಂದು ಟೀಕೆಯಿದೆ.

ರಾಷ್ಟ್ರೀಯ ವಿಸ್ತರಣಾ ಯೋಜನೆಯ ಕೆಲಸ ಕಾರ್ಯಗಳು ಈಗ ನಡೆಸಿರತಕ್ಕ ರೀತಿಯಲ್ಲಿಯೇ ಇನ್ನು ಮುಂದೆ ನಡೆಯುತ್ತಾ ಹೋದರೆ ನಿಜವಾಗಿ ನಾವು ನಿರೀಕ್ಷಣೆ ಮಾಡಿದಷ್ಟು ಪ್ರಯೋಜನ ದೊರೆಯುವುದಿಲ್ಲ. ಅದು ಹೇಗೆ ಎಂಬುದಕ್ಕೆ ಉತ್ತರ ನಾನು ಹೇಳುತ್ತೇನೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯ ಕೆಲಸಕ್ಕೆ ನಮ್ಮಲ್ಲಿ ಸಾಕಷ್ಟು trained personnel ಇಲ್ಲ. ಈ ಕಾರಣದಿಂದ ಅನೇಕ ಕೆಲಸ ಕಾರ್ಯಗಳು ನಿರೀಕ್ಷಣೆ ಮಾಡಿದ ಹಾಗೆ ಆಗುತ್ತಿಲ್ಲ. ಈಗಾಗಲೇ ನಡೆಸಿಕೊಂಡು ಬಂದಿರತಕ್ಕ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಬ್ಲಾಕುಗಳಲ್ಲಿ ಕೆಲಸ ಕಾರ್ಯಗಳು ಉತ್ತಮ ರೀತಿಯಿಂದ ನಡೆಯುವುದಕ್ಕೆ ಟ್ರೈನ್ಡ್ ಕೆಲಸಗಾರರು ಇಲ್ಲದಿರುವಾಗ, ಇನ್ನುಳಿದ ಮೂರೂವರೆ ವರ್ಷಗಳಲ್ಲಿ ದೇಶಾದ್ಯಂತ ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ತಂದು ಕೆಲಸ ಮಾಡುತ್ತೇವೆ ಎಂದು ಹೇಳುವುದಾದರೆ ಅದು ಸಾಧ್ಯವಾಗುತ್ತದೆಯೇ? ನಿರೀಕ್ಷಣೆ ಮಾಡಿದಷ್ಟು ಪ್ರಯೋಜನವಾಗುತ್ತದೆಯೇ? ಇದನ್ನು ಬಹಳ ಗಹನವಾಗಿ ವಿಚಾರ ಮಾಡಬೇಕಾಗಿದೆ. ಈಗ ನಡೆಸಿಕೊಂಡು ಬಂದಿರತಕ್ಕ ಕೆಲಸ ಕಾರ್ಯಗಳನ್ನು ಟ್ರೈನ್ಡ್ ಕೆಲಸಗಾರರು ಇಲ್ಲದ ಕಾರಣ ಮುಂದುವರಿಸಲು ಸಾಧ್ಯವೇ ಎಂಬ ಭಾವನೆಯುಂಟಾಗಿದೆ. ಟ್ರೈನಿಂಗ್ ಕೊಡುವ ಒಂದು ವ್ಯವಸ್ಥೆಯು ಆಗುವವರೆಗೆ ಇನ್ನು ಮುಂದೆ ವಿಸ್ತರಿಸಬೇಕಾಗಿರುವುದನ್ನು ಮುಂದಕ್ಕೆ ಹಾಕಲಿ. ಯಾವ ಯಾವ ಕ್ಷೇತ್ರದಲ್ಲಿ ಈಗಾಗಲೇ ಕೆಲಸ ನಡೆಯುತ್ತಿದೆಯೋ ಅದು ಚೆನ್ನಾಗಿ ನಡೆಯಬೇಕು. ಅದಕ್ಕೆ ಹೆಚ್ಚು ಗಮನ ಕೊಟ್ಟು ಸರಿಯಾದ ರೀತಿಯಲ್ಲಿ ತೀವ್ರವಾಗಿ ಕೆಲಸ ನಡೆಯುವಂತೆ ಮಾಡಿ ರೈತನು ವಿಕಾಸಗೊಳ್ಳುವಂತೆ ಆಗಬೇಕು. ಇನ್ನೊಂದು ಉದಾಹರಣೆ ಹೇಳುವುದಾದರೆ, Village Worker, ಅಂದರೆ, ಗ್ರಾಮ ಸುಧಾರಕರ ವಿಷಯ. ಸುಮಾರು ಎಂಟು-ಹತ್ತು ಹಳ್ಳಿಗಳಿಗೆ ಒಬ್ಬ ಗ್ರಾಮ ಸುಧಾರಕನು ಇದ್ದಾನೆ. ಇವರ ಕೆಲಸವೇನು? ಸಂಬಂಧಪಟ್ಟ ಎಂಟು-ಹತ್ತು ಹಳ್ಳಿಗಳಲ್ಲಿರುವ ಸುಮಾರು 2,000 ಸಂಸಾರಗಳಿರುವ ಕ್ಷೇತ್ರ ಇವರಿಗೆ ಒಳಪಟ್ಟಿರುತ್ತದೆ. ತನ್ನ ಕ್ಷೇತ್ರದಲ್ಲಿರುವ ಈ ಎಲ್ಲಾ ಸಂಸಾರಗಳ ಕಷ್ಟಸುಖಗಳು ಏನು? ಅವರ ಕೈಗಾರಿಕೋದ್ಯಮಗಳೇನು? ಆ ಪ್ರದೇಶದಲ್ಲಿ cottage industry, village industry ಯಾವ ಯಾವುವು ಇವೆ? ಸರಕಾರದ ಸಹಾಯ ಅವರಿಗೆ ಹೇಗೆ ಒದಗಿಸಿಕೊಡಬೇಕು? ಹೀಗೆ ಎಲ್ಲವನ್ನೂ ಈ ಒಬ್ಬ ಗ್ರಾಮ ಸುಧಾರಕ ಪರಿಶೀಲಿಸಬೇಕಾಗುತ್ತದೆ. ನಾವು ಇಟ್ಟುಕೊಂಡ ಗುರಿಯಂತೆ ಈ ಕೆಲಸಗಳು ಕಾರ್ಯತಃ ನಡೆಯುತ್ತಿವೆಯೇ? ಒಬ್ಬ ಗ್ರಾಮ ಸುಧಾರಕನಿಗೆ ಇಷ್ಟು ಕೆಲಸಗಳನ್ನು ಕಾರ್ಯತಃ ಮಾಡಲು ಸಾಧ್ಯವಾಗುವುದಿಲ್ಲ. ಮಂತ್ರಿಗಳು ಪ್ರವಾಸಕ್ಕೆ ಹೋದರೆ ಅಲ್ಲಿ ರೆವೆನ್ಯೂ ಇನ್‌ಸ್ಪೆಕ್ಟರ್ ಜೊತೆಗೆ ಗ್ರಾಮ ಸುಧಾರಕನೂ ಬರಬೇಕು. ಈ ರೀತಿಯಾಗಿ ಅವನ ಕಾರ್ಯವ್ಯಾಪ್ತಿ ಜಾಸ್ತಿಯಾಗಿರುವುದರಿಂದ ಏಕಾಗ್ರತೆಯಿಂದ ತನ್ನ ಕೆಲಸವನ್ನು ಮಾಡಲು ಸಾಧ್ಯವಾಗುವುದಿಲ್ಲ. ಆದಕಾರಣ ಗ್ರಾಮಸುಧಾರಕನ ಕಾರ್ಯಕ್ಷೇತ್ರ ಇನ್ನೂ ಕಡಿಮೆಯಾಗಬೇಕು. ಒಂದು ಬ್ಲಾಕಿಗೆ ಸಾಮಾನ್ಯವಾಗಿ 10-15 ಜನ ಗ್ರಾಮಸುಧಾರಕರು ಇರುವಂತೆ ಮಾಡಬೇಕು. ಇನ್ನೂ ಹೆಚ್ಚಿಗೆ ಮಾಡಿದರೂ ಪರವಾಗಿಲ್ಲ. ಅವರಿಗೆ ಸರಿಯಾದ ಶಿಕ್ಷಣ ಕೊಡುವಂತೆ ಆಗಬೇಕು ಮತ್ತು ಅವರ ಕಾರ್ಯಕ್ಷೇತ್ರದ ವ್ಯಾಪ್ತಿ ಕಡಿಮೆಯಾಗಬೇಕು, ತಮ್ಮ ಕೆಲಸದಲ್ಲಿ ನಿರತರಾಗುವ ಹಾಗೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಈ ನನ್ನ ಸಲಹೆಯನ್ನು ಸರಕಾರ ತೀವ್ರ ಯೋಚನೆ ಮಾಡುತ್ತಾರೆಂದು ನಾನು ಆಶಿಸುತ್ತೇನೆ. ಹೆಚ್ಚಿಗೆ ಕಾಲ ಮಾತನಾಡಲು ಇಲ್ಲದೇ ಇರುವುದರಿಂದ ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri C. M. POONACHA.—It is net profit as computed by the Accountant-General from year to year.

ಶ್ರೀ ಎ. ಆರ್. ಬದರಿನಾರಾಯಣ್.—1955-56ರಲ್ಲಿ 70 ಲಕ್ಷ ರೂಪಾಯಿಗಳಷ್ಟು ಆದಾಯ ಬಂದಿದೆ. 1956-57ರಲ್ಲಿ 61 ಲಕ್ಷ ರೂಪಾಯಿಗಳಷ್ಟು ಆದಾಯ

ಬಂದಿದೆ. ಹಾಗಾದರೆ, ಈ ಕಾರ್ಖಾನೆಯಲ್ಲಿ 10 ಲಕ್ಷ ರೂಪಾಯಿ ಲುಕ್ಸಾನು ಆಗಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಲುಕ್ಸಾನು ಆಗಿಲ್ಲ. ಈ ವರ್ಷದಲ್ಲಿ ಸ್ವಲ್ಪ ಹೆಚ್ಚಿನ ಖರ್ಚು ಸಂಭವಿಸಿತು. ಈ ಖರ್ಚು ಈ ವರ್ಷಕ್ಕೆ ಅನ್ವಯಿಸತಕ್ಕ ಖರ್ಚಾದ್ದರಿಂದ, ಲಾಭದ ಅಂಶದಲ್ಲಿ ಸ್ವಲ್ಪ ಕಡಮೆ ಕಾಣುತ್ತದೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಹೆಚ್ಚಿನ ಉತ್ಪನ್ನಕ್ಕೋಸ್ಕರ, ಭಾರತ ಸರ್ಕಾರದ ಸಹಾಯ ವನ್ನು ತೆಗೆದುಕೊಳ್ಳುವ ಯೋಜನೆ ಇದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಹೌದು, ಭಾರತ ಸರ್ಕಾರದಿಂದ ಸಾಲದ ರೂಪದಲ್ಲಿ ಹಣ ಸಹಾಯ ಪಡೆ ಯುತ್ತಾ ಇದೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಅದನ್ನು ವಿವರಿಸಿ.

ಶ್ರೀ ಸಿ. ಎಂ. ಪೂಣಚ್ಚ.—ವರ್ಷಂ ಪ್ರತಿ ಭಾರತ ಸರ್ಕಾರದಿಂದ ಸಾಲದ ರೂಪವಾಗಿ ಈ ರೀತಿ ಹಣ ಪಡೆದಿದ್ದೇವೆ :

		ರೂಪಾಯಿಗಳು
1951-52	...	40,00,000
1952-53	...	27,00,000
1953-54	...	17,39,000
1954-55	...	37,00,000
1955-56	...	30,27,000
1956-57	...	5,00,000

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಭದ್ರಾವತಿ ಕಬ್ಬಿಣ ಕಾರ್ಖಾನೆಗೆ ಸಂಬಂಧಪಟ್ಟಂತೆ ಒಂದು ಸ್ಟೇನ್‌ಲೆಸ್ ಸ್ಟೀಲ್ ಪ್ಲಾಂಟ್ ಸ್ಥಾಪನೆ ಮಾಡಬೇಕೆಂದು ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಅಂಥ ಯೋಜನೆ ಒಂದು ಇದೆ. ಅದು ಇನ್ನೂ ಕೇಂದ್ರ ಸರ್ಕಾರದ ಪರಿ ಶೀಲನೆಯಲ್ಲಿದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಒಬ್ಬ ಅಮೇರಿಕನ್ ಎಕ್ಸ್‌ಪರ್ಟ್ ಬಂದು ಈ ವಿಷಯದಲ್ಲಿ ಸರ್ವೆ ಮಾಡಿ ಕೊಂಡು ಹೋದರಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ಪರಿಶೀಲನೆ, ಸರ್ವೆ ಆಗುತ್ತಾ ಇದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಇಲ್ಲಿ ಸ್ಥಳ ಅನು ಕೂಲವಿಲ್ಲವೆಂದು ವರದಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬಿ. ಪಿ. ಮಿತಿನಾಲ್ ಮತ್ತು ಕ್ರೂಡ್ ಮಿತಿನಾಲ್ ಮಾರಿದ್ದರಿಂದ ಲಾಭ ಎಷ್ಟು ಬಂದಿದೆ ?

ಶ್ರೀ ಸಿ. ಎಂ. ಪೂಣಚ್ಚ.—ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಕೊಡಬಲ್ಲೆ.

Sri M. C. NARASIMHAN.—Is it not a fact that the capital has varied over these years ?

Sri C. M. POONACHA.—Today it is so. I would, however, require notice to furnish an adequate reply.

Sri J. B. MALLARADHYA.—The answer gives the amount invested by the Government as on 1st April 1957. Does it not include or does it exclude the amount which was written off from the capital ?

Sri C. M. POONACHA.—I would require specific notice for that question.

ಶ್ರೀ ಡಿ. ಟಿ. ಸೀತಾರಾಮರಾವ್.—ಈ ಭದ್ರಾವತಿ ಕಾರ್ಖಾನೆಯ ಮ್ಯಾನೇಜ್‌ಮೆಂಟನ್ನು ಕಾರ್ಪೊರೇಷನಿಗೆ ಒಳಪಡಿಸುತ್ತೀರಾ ?

Mr. SPEAKER.—It is a suggestion for action.

ಶ್ರೀ ಡಿ. ಟಿ. ಸೀತಾರಾಮರಾವ್.—ಈಗ ಕೇಂದ್ರ ಸರ್ಕಾರದಿಂದ ಪಡೆದಿರತಕ್ಕ ಹಣವನ್ನು ಎಷ್ಟು ಕಂತು ಗಳಲ್ಲಿ ಮತ್ತು ಯಾವ ಬಡ್ಡಿ ದರದಲ್ಲಿ ವಾಪಸ್ಸು ಕೊಡು ತ್ತೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಸಿ. ಎಂ. ಪೂಣಚ್ಚ.—ಸಾಧಾರಣವಾಗಿ ಎಲ್ಲ ಅಭಿವೃದ್ಧಿ ಯೋಜನೆಗಳಿಗೂ ಇಂಡಿಯಾ ಸರ್ಕಾರ ದವರು ಕೊಡುವಂಥ ಸಾಲದ ಬಡ್ಡಿದರ ನಾಲ್ಕು ಶೇಕಡ ವರ್ಷಾಂತ್ಯದಲ್ಲಿ ಎಷ್ಟಾಗುತ್ತದೆ ಎಂಬುದನ್ನು ಸ್ಪಷ್ಟ ವಾಗಿ ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಪ್ರತ್ಯೇಕವಾಗಿ ಪ್ರಶ್ನೆ ಹಾಕಿದರೆ ಉತ್ತರ ಒದಗಿಸು ತ್ತೇನೆ.

Sri GAJANAN PANDIT.—In the expansion scheme envisaged is there any proposal to put ovens for converting coal into coke ?

Sri C. M. POONACHA.—The question of installing a coke plant here is not quite feasible because we are far away from the coal sources. Therefore, it is more profitable for us to get coke instead of getting coal and getting it converted into coke by installing a plant here.

Sri S. R. RAMIAH.—What is the present market value of the factory ?

Sri C. M. POONACHA.—That will have to be assessed. I am unable to furnish that answer.

Graduation for Promotion to Gazetted posts.

Q.—1578. Sri M. M. J. SADYOJATHAPPAIAH (Harapanahalli).—

Will the Government be pleased to state:—

(*a*) whether it is a fact that only graduates were promoted to gazetted posts in the old Mysore State ;

(*b*) whether they are aware of the fact that no such practice was prevalent in Bombay Karnatak, Hyderabad Karnatak areas and Mangalore ;

(*c*) whether the same old practice will hold good in the case of employees belonging to these areas ?

A.—Sri S. NIJALINGAPPA (Chief Minister).—

(*a*) No.

(*b*) Yes.

(*c*) The old practice will continue till revised rules are framed.

ಶ್ರೀ ಎಂ. ಎಂ. ಜೆ. ಸದ್ಯೋಜಾತಪ್ಪಯ್ಯ.—ರಿವೈಸ್ಡ್ ರೂಲ್ಸ್ ಫ್ರೇಂ ಮಾಡಿಲಕ್ಕೆ ಎಷ್ಟು ಕಾಲ ಬೇಕಾಗುತ್ತದೆ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ಮಾಡುತ್ತಾ ಇದ್ದೇವೆ.

Dr. R. NAGAN GOWDA.—Is the Government aware that the Deputy Tahsildars of Bellary were not promoted as Tahsildars because they were not graduates?

Sri S. NIJALINGAPPA.—I cannot give the answer offhand. I must enquire and say.

Dr. R. NAGAN GOWDA.—In answer to (*c*) the Government have stated that the old practice will continue. Will this apply to Bellary also?

Sri S. NIJALINGAPPA.—Yes.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ—ದೇಶದಲ್ಲಿ ಉನ್ನತ ವ್ಯಾಸಂಗ ಪಡೆದವರು ಬಹುಮಟ್ಟಿಗೆ ಇರುವುದರಿಂದ ಅವರನ್ನು ನಿಯಮಿಸುವುದು ಉಚಿತವಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ಸರ್ವೀಸ್‌ನಲ್ಲಿದ್ದವರಿಗೆ ಅನ್ಯಾಯವಾಗಬಾರದಲ್ಲಾ!

Sri G. VENKATAI GOWDA.—Does it mean that the old practice prevalent in old Mysore will continue or the old practices in the various regions will continue?

Sri S. NIJALINGAPPA.—The old practices prevailing in the respective areas will continue.

Sri K. S. SURYANARAYANA RAO.—The answer to (*a*) is 'No' while the answer to (*b*) is Yes'. What is the procedure adopted in the old Mysore area and what is the procedure adopted in Bombay Karnatak?

Sri S. NIJALINGAPPA.—I request my friend to read the questions and answers twice over. Those answers have been given because the questions are worded differently. Otherwise, the answer will be the same for both the questions.

Sri H. C. LINGA REDDY.—When will the rules be revised?

Sri S. NIJALINGAPPA.—They are being revised.

Sri M. C. NARASIMHAN.—My supplementary to (*c*) si whether there is any intention to fix a proportion between the graduates and non-graduates?

Sri S. NIJALINGAPPA.—I do not think that can be done.

Sri D. ABDUL RASHEED.—What are the conditions for promoting non-graduates to gazetted posts?

Sri S. NIJALINGAPPA.—Efficiency, experience and fitness.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಎಸ್. ಎಸ್. ಎಲ್. ಸಿ. ಆಗಿರುವವರನ್ನು ಗೆಜೆಟೆಡ್ ರ್‍ಯಾಂಕ್‌ಗೆ ಪ್ರಮೋಟ್ ಮಾಡುವ ವ್ಯವಸ್ಥೆ ಹಳೆಯ ಮೈಸೂರಿನಲ್ಲಿ ಇದ್ದಿಲ್ಲ ಎಂದು ಹೇಳಿದಿರಿ. ಈಗ ಹೊಸ ಮೈಸೂರಿಗೆ ಹೊರಗಿನಿಂದ ಬಂದವರಿಗೆ ಮಾತ್ರ ಆ ರೀತಿ ಮಾಡಬೇಕೆಂದು ಹೇಳಿದ್ದೀರಿ. ಇದನ್ನು ಎಲ್ಲರಿಗೂ ಅನ್ವಯಿಸುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ತಾವು ಪ್ರಶ್ನೆ ಸರಿಯಾಗಿ ತಿಳಿದುಕೊಂಡಿಲ್ಲ. ಇನ್ನೊಂದು ಸಲ ಓದಿ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ತಹಸೀಲ್‌ದಾರರ ಹುದ್ದೆಗೆ ನೇಮಕ ಮಾಡಲು ನಾನ್ ಗೆಜೆಟೆಡ್ ಆಫೀಸರುಗಳಿಂದ ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಅರ್ಜಿಗಳನ್ನು ಕರೆದಿದ್ದಾರೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಮಾಡಿದ್ದಾರೆಯಲ್ಲಾ!

ಶ್ರೀ ಎಚ್. ಜಿ. ನರಸಿಂಹೇಗೌಡ.—ಆ ಪ್ರಕಾರ ಎಸ್. ಎಸ್. ಎಲ್. ಸಿ. ಆದವರಿಗೆ ತಹಸೀಲ್‌ದಾರರ ಹುದ್ದೇ ಕೊಡುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಆ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ.

Extension of Service to Officers and Officials after Superannuation.

Q.—376. Sri G. N. PUTTANNA (Tumkur).—

Will the Government be pleased to state:—

(*a*) whether it is a fact that they have passed an order stating that no extension will be granted to officers and officials after superannuation;

(*b*) the number of officers who have been granted extension of service after their superannuation since 1947 (the names of such officers mentioning the duration of their service after such extension of service was sanctioned may be furnished)?

A.—Sri S. NIJALINGAPPA (Chief Minister).—

(*a*) Yes, subject to the conditions specified in Order No. G.A.D. (S-2) 4–G.E. 1–57, dated 7th June 1957.

(*b*) There is only one instance, *viz.*, that of a Driver in the Training Centre, Mandya, Sri Thangavelu, who has been granted 6 months extension from 12th November 1956.

ಶ್ರೀ ಜಿ. ಎನ್. ಪುಟ್ಟಣ್ಣ.—'Extensions of service intended to secure purely financial benefits to the individual concerned were forbidden under that order' ಎಂದು ಹೇಳಿದ್ದೀರಿ. ಆ ಆರ್ಡರ್‌ನ್ನೂ ಸಭೆಯ ಮುಂದೆ ಇಡುವುದಕ್ಕೆ ಸಾಧ್ಯವೆ ?

ಶ್ರೀ ಎಸ್. ನಿಜಲಿಂಗಪ್ಪ.—ಇಡಬಹುದು, ಅಭ್ಯಂತರವಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ತಾವು ಇಲ್ಲಿ ಒಂದು ಲಿಸ್ಟ್‌ಕೊಟ್ಟಿದ್ದೀರಿ. Is this list exhaustive ?

Sri S. NIJALINGAPPA.—As far as my office is concerned, it is exhaustive.

ಶ್ರೀ ಜಿ. ಎನ್. ಪುಟ್ಟಣ್ಣ.—ಸ್ವಾಮಿ, ಸಾಧ್ಯವಾದ ಮಟ್ಟಿಗೆ ಜ್ಯೂನಿಯರ್ ಅಧಿಕಾರಿಗಳ ಹಿತದೃಷ್ಟಿಯಿಂದ ಎಕ್‌ಷ್ಟೆನ್‌ಷನ್ ಕೊಡದೇ ಇರುವುದು ಒಳ್ಳೆಯದು ಅಲ್ಲವೇ ?

Sri S. NIJALINGAPPA.—I have already answered. My friend is both giving information as well as suggesting action.

Sri G. N. PUTTANNA.—What is the reason in granting extension to some and not granting to others ?

ಶ್ರೀ ಎಸ್. ನಿಜಲಿಂಗಪ್ಪ.—ಆವಶ್ಯಕತೆ ಇದ್ದರೆ ಮಾತ್ರ ಕೊಡಲಾಗುವುದು.

ಶ್ರೀ ಜಿ. ಎನ್. ಪುಟ್ಟಣ್ಣ.—ಸಂಬಳವಿಲ್ಲದೆ ಕೆಲಸ ಮಾಡಲು ಒಪ್ಪಿದರೆ ಅಂಥವರಿಗೆ ಎಕ್‌ಷ್ಟೆನ್‌ಷನ್ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಸಂಬಳಕೊಡದೆ ಕೆಲಸ ಮಾಡಿಸಿಕೊಳ್ಳುವುದಕ್ಕಾಗುವುದಿಲ್ಲ.

Sri G. N. PUTTANNA.—Will this be stopped once for all ?

Sri S. NIJALINGAPPA.—No.

Sri G. N. PUTTANNA.—Will it not affect the interests of the younger generation who are waiting for promotion if such people are given extensions ?

Sri S. NIJALINGAPPA.—It is a matter of opinion.

Sri G. VENKATAI GOWDA.—Is it for want of qualified persons that officers who are superannuated are retained and given extensions ?

Sri S. NIJALINGAPPA.—In granting extensions, experience, merit, desirability under the circumstances, etc., count.

Sri C. J. MUCKANNAPPA.—In the list it is mentioned that one Superintending Engineer was given an extension. During the extension period he was promoted as Chief Engineer. What is the principle ?

Sri S. NIJALINGAPPA.—The principle is that he deserved the promotion.

Sri C. J. MUCKANNAPPA.—What is the policy of the Government in giving a promotion to an officer when he is in the extension period ?

Sri S. NIJALINGAPPA.—The policy is to recognise merit and service.

Sri M. C. NARASIMHAN.—In the list all departments are included. Is there not a policy to confine extensions to only technical departments and departments where experienced personnel are not available ?

Sri S. NIJALINGAPPA.—Mostly the question is a suggestion for action but I do not think it can be accepted.

Sri C. M. ARUMUGHAM.—May I know how many officers were re-appointed after retirement ?

Mr. SPEAKER.—It is there in the list.

Sri C. M. ARUMUGHAM.—I want to know how many officers were reappointed.

Sri S. NIJALINGAPPA.—I wish my friend puts another question.

Sri G. SIVAPPA.—May I know in the name of merit and experience how many times an officer was granted extension of service ?

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕೆ limit ಏನೂ ಇಲ್ಲ. ಎರಡು-ಮೂರು ಸಲ ಕೊಡಬಹುದು.

ಶ್ರೀ ಕೆ. ಎಫ್. ಪಾಟೀಲ್.—ಎಷ್ಟು ಜನರನ್ನು re-employ ಮಾಡಲಾಗಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಈ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. Re-employmentನ ಬಗ್ಗೆ ಬೇರೆ ಒಂದು ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಉತ್ತರಕೊಡಬಹುದು.

ಶ್ರೀ ಟಿ. ಹನುಮಯ್ಯ.—ರಿಟೈರ್ ಆದಮೇಲೆ ಎಷ್ಟು ಜನರನ್ನು ಪುನಃ re-employ ಮಾಡಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಇದಕ್ಕಾಗಿ ಬೇರೊಂದು ಪ್ರಶ್ನೆಯನ್ನು ಕೇಳಿದರೆ ಉತ್ತರ ಹೇಳಬಹುದು.

Sri M. C. NARASIMHAN.—What is the basis on which extensions for different periods are given ?

Sri S. NIJALINGAPPA.—The basis is only the necessity.

ಶ್ರೀ ಕೆ. ಕೆಂಚಪ್ಪ.—ಸರ್ವಿಸ್ ಆದನಂತರ ಎಷ್ಟು ದಿವಸದ ಮೇಲೆ re-employ ಮಾಡುತ್ತೀರಿ ಮತ್ತು extension ಕೊಡುತ್ತೀರಿ ? Extension ಕೊಟ್ಟು ಸರ್ವಿಸ್ ಮುಂದುವರಿಸುವ ಹಾಗೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—Extension ಕೊಡುವುದು ಎಂದರೆ ಸರ್ವಿಸ್ ಮುಂದುವರಿಸುವುದು. ಹಿಂದಿನ ಸರ್ವಿಸ್ಸಿಗೆ ಹೊಂದಿಕೊಂಡೇ Extension ಮುಂದುವರಿಸಲಾಗುವುದು. ಅದರಲ್ಲಿ ವ್ಯತ್ಯಾಸವೇನೂ ಇಲ್ಲ. ಇನ್ನು re-employment ಇದೊಂದು ಬೇರೆ ಪ್ರಶ್ನೆಯಾಗಿದೆ. ಪ್ರತ್ಯೇಕವಾಗಿ ಮತ್ತೊಂದು ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಕೊಡಬಹುದು.

Sri G. N. PUTTANNA.—Was there any intellectual bankruptcy among the people which made the Government give extensions ?

Sri S. NIJALINGAPPA.—There was no bankruptcy. There was dearth of experienced officers which is very regrettable.

QUESTIONS FOR ANSWERS ON THE DAY.

(but not taken up)

Lighting, Water Taps and Drainage Facilities to certain Extensions of Hubli City.

Q.—1464. Sri F. H. MOHSIN (Hubli City).—

Will the Government be pleased to state :—

(*a*) whether it is a fact that there are no lighting arrangements, water taps, public privies and drainage facilities in certain parts of Hubli, *e.g.*, Ramanagar, Gandhinagar, Harijankeri of Hosur and Sikkalgar Tanda of Old Hubli ;

(*b*) whether it is a fact that the people of that area have represented this fact several times to the Hubli Municipality ;

(*c*) whether it is a fact that the Municipality is recovering property tax, sanitary cess and general water tax and so on in spite of the absence of these amenities ?

A.—Sri R. CHENNIGARAMAIAH (Minister for Local Self-Government).—

(*a*) There are lighting and water supply facilities in certain areas. Necessary action is being taken to provide other amenities in all the areas.

(*b*) Yes.

(*c*) Yes, certain amenities have been provided in some of the areas.

Publication of two Dailies under one and the same Name at Gadag.

Q.—1489. Sri M. S. PATTAN (Ramdurg).—

Will the Government be pleased to state :—

(*a*) whether it is a fact that two dailies under one and the same name, *viz.*, "Nagarika" are being published from Gadag, Dharwar district ;

(*b*) whether they are aware of the inconvenience caused to the public due to issue of licences to publish two different dailies under one and the same name ;

(*c*) whether they propose to take necessary action in this regard so as to avoid inconvenience caused both to the public and to the correspondents ?

A.—Sri C. M. POONACHA (Minister for Home Affairs and Industries).—

(*a*) Yes ; two dailies under one and the same name "Nagarika": were published from 7th March 1957 to 5th August 1957.

(*b*) No licence is necessary for publishing a newspaper.

(*c*) One of the two dailies "Nagarika" has ceased to be published from 5th August 1957.

SHORT NOTICE QUESTION AND ANSWER.

Closing of the New Karnatak Cotton Mills, Hubli.

Q.—133. Sri F. H. MOHSIN (Hubli City).—

Will the Government be pleased to state :—

(*a*) whether they are aware that the management of the New Karnataka

Mills, Hubli, has given notice of closure of the Mills;

(b) whether it is a fact that the said Mills are going to be closed by the end of this month;

(c) if so, the steps the State Government have taken to prevent the impending closure?

A.—Sri C. M. POONACHA (Minister for Home Affairs and Industries).—

(a) Messrs. New Karnatak Cotton Mills, Hubli, have intimated Government that in case the licence to work the Mills as powerloom factory is not extended by the Government of India beyond March 1958, the only alternative would be a permanent closure of the Mills.

(b) Please see reply to clause (a).

(c) Recommendation has been made to the Central Government to extend the licence to work the Mills as powerloom factory.

Mr. SPEAKER.—Question time is over.

Member's representation.

ಶ್ರೀ ಜಿ. ಶಿವಪ್ಪ.—ಸ್ವಾಮಿ, ನನ್ನದೊಂದು ಪ್ರಶ್ನೆ ಹಾಗೆಯೇ ಉಳಿದು ಹೋಯಿತು. Next time ತೆಗೆದುಕೊಳ್ಳಲಾಗುವುದೆಂದು ನನಗೆ ತಿಳಿಸಲಾಗಿತ್ತು.

ಅಧ್ಯಕ್ಷರು.—ನಿಮ್ಮ ಪ್ರಶ್ನೆಗೆ ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿ ಹಾಜರಿದ್ದಾಗ ನೀವು ಹಾಜರ್ ಇದ್ದಿಲ್ಲ. ಅದಕ್ಕಾಗಿ ನಿಮ್ಮ ಪ್ರಶ್ನೆ ಹೋಯಿತು.

ಶ್ರೀ ಜಿ. ಶಿವಪ್ಪ.—ನಾನು ಹಾಜರಿದ್ದಾಗ next time ನನ್ನ ಪ್ರಶ್ನೆ ತೆಗೆದುಕೊಳ್ಳಲಾಗುತ್ತದೆಂದು ತಿಳಿಸಲಾಗಿದೆ.

Mr. SPEAKER.—I am sorry it cannot be done. When the Minister was present the member was absent and therefore the question has lapsed. Of course the Hon'ble member had come and seen me in my chambers. But the point is, hon'ble Member Sri G. Sivappa was not present when the Minister was here. So the question cannot be revived.

Sri G. SIVAPPA.—Sir, I am not prepared to argue with the Chair. You were pleased to give me permission to put the question afterwards. It has gone into the proceedings.

Sri C. J. MUCKANNAPPA.—Sir, you had promised that it would be taken up later.

Mr. SPEAKER.—If I have promised, I shall certainly look into the matter, and allow the question.

ADJOURNMENT MOTION

Re-Scarcity of Water in Bangalore City

Mr. SPEAKER.—Now, there is an adjournment motion. It is as follows:

> "That this Assembly do stand adjourned to discuss a matter of public importance, to wit, the situation created by scarcity of water in Bangalore City."

Before I decide whether to allow or disallow the motion, I would like to hear from the concerned Hon'ble Minister.

ಶ್ರೀ ಎಚ್. ಕೆ. ವೀರಣ್ಣಗೌಡ (ಮರಾಮತ್ ಶಾಖಾ ಸಚಿವರು).—ಸ್ವಾಮಿ, ಈ ನಿಲುವಳಿ ಸೂಚನೆಯ ಸಂಬಂಧವಾಗಿ ನನಗೆ ಅವಕಾಶ ಕೊಟ್ಟರೆ ಸಾಧ್ಯವಾದಮಟ್ಟಿಗೆ ವಿವರಗಳನ್ನು ಕೊಡುತ್ತೇನೆ. ಹಾಗೆ ಮಾಡಿದರೆ ಈ ಸೂಚನೆ ಚರ್ಚೆಗೆ ತೆಗೆದುಕೊಳ್ಳುವ ಅಗತ್ಯ ಬಾರದೇ ಹೋಗಬಹುದು ನಿಲುವಳಿ ಸೂಚನೆಯನ್ನು ಕಳುಹಿಸಿರುವವರೂ ಸಹ ಅದನ್ನು ಒತ್ತಾಯ ಪಡಿಸಲಾರರು ಎಂಬ ನಂಬಿಕೆಯಿದೆ. ಆ ದೃಷ್ಟಿಯಿಂದ ಒಂದು ಸಮಗ್ರವಾದಂಥ ಹೇಳಿಕೆಯನ್ನು ಸಭೆಯಮುಂದೆ ಕೊಡಲು ಪ್ರಯತ್ನಪಡುತ್ತೇನೆ.

ಮೊದಲನೆಯದಾಗಿ ಈ ಮೂರು ನಾಲ್ಕು ದಿನಗಳಿಂದೀಚೆಗೆ ಬೆಂಗಳೂರು ನಗರದಲ್ಲಿ ನೀರಿನ ಅಭಾವ ಕೆಲವು ಕಡೆಗಳಲ್ಲಿ ಬಹಳ ಉತ್ಕಟ ಪರಿಸ್ಥಿತಿಗೆ ಬಂದಿರತಕ್ಕ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ಆ ಸಂಬಂಧವಾಗಿ ಮೇಯರ್‌ಅವರು ಇವೊತ್ತಿನ ಪತ್ರಿಕೆಗಳಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದಾರೆ. ಬಹುಶಃ ಮಾನ್ಯ ಸದಸ್ಯರು ಅದನ್ನು ಅವಲೋಕಿಸಿರಬಹುದು. ಸಾಮಾನ್ಯವಾಗಿ ಬೆಂಗಳೂರು ನಗರದಲ್ಲಿ ಬೇಸಿಗೆಯ ಕಾಲದಲ್ಲಿ ಪ್ರತಿದಿನವೂ ನಿರ್ದಿಷ್ಟ ಕಾಲದಲ್ಲಿ ಮಾತ್ರ ನೀರನ್ನು ಒದಗಿಸುತ್ತಿತ್ತು. ಆದರೆ ಉಗಾದಿ ಹಬ್ಬಕ್ಕಾಗಿ ಆ ದಿನ ಹೆಚ್ಚು ನೀರನ್ನು ಒದಗಿಸಲಾಯಿತು; ಅನೇಕರು ಅದನ್ನು ಉಪಯೋಗಿಸಿದ್ದಾರೆ. ಆದ್ದರಿಂದ ಸ್ಟೋರ್ ಮಾಡುವ ಸ್ಥಳದಲ್ಲಿ ಸ್ಟೋರೇಜ್ ಕಡಮೆಯಾಗಿದೆ. ಅದರ ಜೊತೆಗೆ ದುರದೃಷ್ಟವಶಾತ್ ತಿಪ್ಪಗೊಂಡನಹಳ್ಳಿಯಿಂದ ನೀರನ್ನು ಹೊತ್ತುಕೊಂಡು ಬರುತ್ತಿದ್ದ ಒಂದು ಪೈಪು ಅಗಲೇ ಒಡೆದು ಹೋಯಿತು. ಆದರಿಂದ ಬಹಳ ನೀರು ನಷ್ಟವಾಯಿತು. ಈ ಎರಡು ಕಾರಣಗಳಿಂದ ತಾ॥ 22-3-1958 ರಲ್ಲಿ ಸ್ಟೋರೇಜ್‌ನಲ್ಲಿರಬೇಕಾದ 14 ಮಿಲಿಯನ್ ಗ್ಯಾಲನ್‌ಗಳ ನೀರು 6.1 ಮಿಲಿಯನ್ ಗ್ಯಾಲನ್‌ಗಳಿಗೆ ಇಳಿಯಿತು. ಆದ್ದರಿಂದ ಅಲ್ಲಿಂದೀಚೆಗೆ ಇಲಾಖೆ

(ಶ್ರೀ ಎಚ್. ಕೆ. ವೀರಣ್ಣಗೌಡ)

ಯವರು ನೀರನ್ನು ಸ್ವಲ್ಪವಾಗಿ ಸರಬರಾಯಿ ಮಾಡಿ ಸ್ಟೋರೇಜ್ ಭರ್ತಿಮಾಡಬೇಕಾಯಿತು. ಈ ಕಾರಣ ದಿಂದ ನೀರನ್ನೊದಗಿಸುವ ಕಾಲಾವಧಿಯನ್ನು ಬೆಳಗ್ಗೆ ಒಂದು ಗಂಟೆ, ಸಾಯಂಕಾಲ ಒಂದು ಗಂಟೆ ಕಡಮೆ ಮಾಡಿದರು; ಎಂದರೆ ಬೆಳಗ್ಗೆ ಏಳೂವರೆ ಗಂಟೆಯುವರೆಗೆ ಸರಬರಾಯಿ ಮಾಡುತ್ತಿದ್ದುದನ್ನು ನಿಲ್ಲಿಸಿ ಐದೂವರೆ ಗಂಟೆಯಿಂದ ಆರೂವರೆ ಗಂಟೆಯವರೆಗೂ ಸಾಯಂ ಕಾಲ ಐದೂವರೆ ಗಂಟೆಯಿಂದ ಆರೂವರೆ ಗಂಟೆಯು ವರೆಗೂ ಸರಬರಾಯಿ ಮಾಡುತ್ತಿದ್ದಾರೆ. ಹೀಗಾಗಿ ಜನರಿಗೆ ನೀರಿನ ಸರಬರಾಯಿ ಸ್ವಲ್ಪ ಕಡಮೆಯಾ ಯಿತು. ಪರಿಸ್ಥಿತಿಗನುಸಾರವಾಗಿ ಕಾಲವನ್ನು ನಿಗದಿ ಮಾಡಬೇಕಾಯಿತು. ಇದರಿಂದ ಕೆಲವು ಭಾಗಗಳಲ್ಲಿ ನೀರಿಗಾಗಿ ಸ್ವಲ್ಪ ತೊಂದರೆಯಾಗಿರುವುದು ನಿಜ. ಒಡೆದು ಹೋಗಿದ್ದ ಪೈಪ್ ರಿಪೇರಿಯ ಕೆಲಸವನ್ನು ಆದಿನವೇ ಬೆಳಗಿನಝಾವ ಎರಡೂವರೆ ಗಂಟೆಗೆ ಪೂರೈ ಸಿತು. ಈಗ ಸ್ಟೋರೇಜ್‌ನಲ್ಲಿ ಎಷ್ಟು ನೀರಿರಬೇಕೋ ಅಷ್ಟು ಇರುವಂತೆ ವ್ಯವಸ್ಥೆ ಮಾಡಬೇಕಾಗಿದೆ. 27ನೆಯ ತಾರೀಖಿನ ಹೊತ್ತಿಗೆ ಪರಿಸ್ಥಿತಿ ಉತ್ತಮ ವಾಗಿ 14 ಮಿಲಿಯನ್ ಗ್ಯಾಲನ್‌ಗಳು ಸ್ಟೋರೇಜಿನಲ್ಲಿ ಶೇಖರಣೆಯಾಗಿ ಬೆಳಗ್ಗೆ ಎರಡು ಗಂಟೆ, ಸಾಯಂಕಾಲ ಎರಡು ಗಂಟೆ ನೀರನ್ನು ಕೊಡಲು ಅವಕಾಶವಾಗ ಬಹುದು; ಈದಿವಸ ಉಂಟಾಗಿರುವ ಪರಿಸ್ಥಿತಿ ಆ ವೇಳೆಗೆ ಉತ್ತಮವಾಗಬಹುದು.

ಈ ಸಂಬಂಧವಾಗಿ ಕೆಲವು ಅಂಕಿ ಅಂಶಗಳನ್ನು ಸಭೆಯ ಮುಂದಿಟ್ಟರೆ ಈ ನಿಲುವಳಿ ಸೂಚನೆಯ ಅಗತ್ಯ ವಿಲ್ಲದೆ ಹೋಗಬಹುದು. ಆ ದೃಷ್ಟಿಯಿಂದ ಈ ಸಂಬಂಧವಾಗಿ ಸಾಧ್ಯವಾದಷ್ಟು ಅಂಕಿ ಅಂಶಗಳನ್ನು ಸಭೆಯ ಮುಂದಿಡುವುದಕ್ಕೆ ಅಪ್ಪಣೆ ಬೇಡುತ್ತೇನೆ. ಬೆಂಗಳೂರು ನಗರಕ್ಕೆ ನೀರು ಸರಬರಾಯಿ ಮಾಡುವ ವ್ಯವಸ್ಥೆ ಸುಮಾರು 62 ವರ್ಷಗಳಿಂದ ನಡೆದಿದೆ. ಮೊದಲು 1896ನೆಯ ಇಸವಿಯಲ್ಲಿ ಹೆಸರುಘಟ್ಟದಿಂದ ಸೋಲ್ದೇವನಹಳ್ಳಿಗೆ ನಾಲ್ಕು ಮೈಲಿ ದೂರ ನೀರನ್ನು ತಂದು ಅಲ್ಲಿಂದ ಎಂಟು ಮೈಲಿ ದೂರದಲ್ಲಿರುವ ಕಂಬೈನ್ಡ್ ಜ್ಯೂಯರ್ ಫಿಲ್ಟರ್ಸ್‌ಗೆ ತೆಗೆದುಕೊಂಡು ಹೋಗಿ ಶುದ್ಧಿಮಾಡಿ ಪಟ್ಟಣಕ್ಕೆ ನೀರನ್ನು ಒದಗಿಸ ಲಾಗುತ್ತಿತ್ತು. ಸೋಲ್ದೇವನಹಳ್ಳಿಯಲ್ಲಿ 170 ಅಶ್ವ ಶಕ್ತಿಯುಳ್ಳ ಎರಡು ಪಂಪುಗಳು, 235 ಅಶ್ವಶಕ್ತಿಯುಳ್ಳ ಒಂದು ಪಂಪು ಇದ್ದುವು. ಅದರಿಂದ 1.3 ಮಿಲಿಯನ್ ಗ್ಯಾಲನ್ ನೀರನ್ನು ದಿನ ಒಂದಕ್ಕೆ ಒದಗಿಸಬಹುದಾ ಗಿತ್ತು. ಆ ಕೆಲಸ 25 ಸೈಕಲ್‌ನ ವಿದ್ಯುಚ್ಛಕ್ತಿ ಸಹಾಯದಿಂದ ನಡೆಯುತ್ತಿತ್ತು. ಅದನ್ನು ಉತ್ತಮ ಪಡಿಸಬೇಕೆಂದು 29,98,500 ರೂಪಾಯಿಗಳ ಖರ್ಚಿ ನಲ್ಲಿ ಹೊಸದಾಗಿ ಒಂದು ಡೂಪ್ಲಿಕೇಟ್ ಲೈನು ಹಾಕಲಾಯಿತು. 1926ನೆಯ ಇಸವಿಯಲ್ಲಿ ಸರ್ಕಾರ ದವರು ನೀರು ಸರಬರಾಯಿ ಉತ್ತಮಪಡಿಸುವ ವಿಷಯದಲ್ಲಿ ಸಲಹೆ ಮಾಡಲು ಒಂದು ಸಮಿತಿಯನ್ನು ರಚಿಸಿದ್ದರು. ಆ ಸಮಿತಿ ಕೆಲವು ಸಲಹೆಗಳನ್ನು ನೀಡಿತು. ಆ ಸಲಹೆಗಳಂತೆ ಕೆಲಸಮಾಡಿ 1933 ರಲ್ಲಿ ಪರಿಸ್ಥಿತಿ ಸ್ವಲ್ಪ ಉತ್ತಮವಾಯಿತು. ತಿಪ್ಪ ಗೊಂಡನಹಳ್ಳಿ ಕೆರೆಯಿಂದ ನೀರನ್ನೊದಗಿಸಲು ಸುಮಾರು ಒಂದು ಸಾವಿರ ಅಶ್ವಶಕ್ತಿಯುಳ್ಳ ನಾಲ್ಕು ಪಂಪುಗಳು ಕೆಲಸಮಾಡಲು ಆರಂಭಿಸಿದವು. ಅದರಿಂದ ದಿನಕ್ಕೆ 13 ಮಿಲಿಯನ್ ಗ್ಯಾಲನುಗಳ ನೀರನ್ನು ಶೇಖರಿಸಲು ಅವಕಾಶಯಿತು. ಈಗ ತಿಪ್ಪ ಗೊಂಡನಹಳ್ಳಿಯಿಂದ 24 ಇಂಚುಗಳ ಪೈಪೊಂದು 27 ಇಂಚುಗಳ ಪೈಪೊಂದು ನೀರು ಸರಬರಾಯಿ ಮಾಡುತ್ತವೆ. ಇದನ್ನು ಇನ್ನೂ ಉತ್ತಮಪಡಿಸಿ ಸುಮಾರು 15-16 ಮಿಲಿಯನ್ ಗ್ಯಾಲನ್ ನೀರನ್ನು ತಿಪ್ಪಗೊಂಡನಹಳ್ಳಿಯಿಂದ ಒದಗಿಸಲು ಅಂದಾಜಾ ಗಿದೆ. 30 ಇಂಚುಗಳ ಪೈಪ್‌ಲೈನ್ ಹಾಕ ಬೇಕೆಂದಿದೆ. ಈಗ ತಿಪ್ಪಗೊಂಡನಹಳ್ಳಿ ಮತ್ತು ಹೆಸರುಘಟ್ಟದಿಂದ ಬೆಂಗಳೂರು ನಗರಕ್ಕೆ 14.30 ಮಿಲಿಯನ್ ಗ್ಯಾಲನುಗಳ ನೀರು ಸರಬರಾಯಾ ಗುತ್ತಿದೆ. ಅದರಲ್ಲಿ ಒಪ್ಪಂದದ ಪ್ರಕಾರ ಬಿನ್ನಿಮಿಲ್ಲು, ರೈಲ್ವೆ, ಮಹಾರಾಜ ಮಿಲ್ಲು, ಇಂಡಿಯನ್ ಟೆಲಿಫೋನ್ ಇಂಡಸ್ಟ್ರಿ, ಹಿಂದೂಸ್ಥಾನ್ ಮೆಷೀನ್ ಟೂಲ್ಸ್, ಫ್ಯಾಕ್ಟರಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಮುಂತಾದ ಕೆಲವು ಕೈಗಾರಿಕೆಗಳಿಗೆ ಸುಮಾರು 1.50 ಮಿಲಿಯನ್ ಗ್ಯಾಲನುಗಳ ನೀರನ್ನು ಕೊಡಬೇಕಾಗಿದೆ. ಸರಬರಾಯಿಯಾಗುವ 14.30 ಮಿಲಿಯನ್ ಗ್ಯಾಲನ್ ಗಳಲ್ಲಿ 1.50 ಮಿಲಿಯನ್ ಗ್ಯಾಲನ್‌ಗಳು ಹೋದರೆ 12.80 ಮಿಲಿಯನ್ ಗ್ಯಾಲನ್‌ಗಳು ಮಾತ್ರ ಜನರ ಬಳಕೆಗೆ ಸಿಕ್ಕುವುದಾಗಿದೆ. ಈ ದಿವಸ ಬೆಂಗಳೂರಿನ ಜನಸಂಖ್ಯೆ ಸುಮಾರು 11¼ ಲಕ್ಷವೆಂದು ಅಂದಾಜು ಮಾಡಿದ್ದಾರೆ. ಈಗ ಒದಗುತ್ತಾ ಇರುವ ನೀರನ್ನು ತಲೆಯೊಂದಕ್ಕೆ ಸುಮಾರು ಹತ್ತು ಗ್ಯಾಲನ್‌ಗಳಂತೆ ಮಾತ್ರ ಒದಗಿಸುವುದಕ್ಕೆ ಸಾಧ್ಯವಿದೆ. ಇದನ್ನು ಇನ್ನೂ ಉತ್ತಮಪಡಿಸಬೇಕೆಂದು ಯೋಚಿಸಿ ಇತ್ತೀಚೆಗೆ ಸರ್ಕಾರದವರು ಪೌರಸಭೆಯ ಸಹಾಯದಿಂದಲೇ ತಜ್ಞರ ಸಲಹೆಯ ಪ್ರಕಾರ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಆ ಪೈಕಿ 69 ಲಕ್ಷದ ಒಂದು ಯೋಜನೆ ಪೂರ್ಣವಾಗಿದೆ. ಅದರ ಪ್ರಕಾರ ಎರಡು ಸಾವಿರ ಅಶ್ವಶಕ್ತಿಯುಳ್ಳ ಮೂರು ಹೊಸ ಪಂಪುಗಳು 50 ಸೈಕಲ್ಸ್ ವಿದ್ಯುತ್‌ಶಕ್ತಿಯಿಂದ ಕೆಲಸ ಮಾಡುತ್ತವೆ. ಈ ಸಂದರ್ಭದಲ್ಲಿ ಸ್ವಲ್ಪ ತೊಂದರೆಯಾಗಿದೆ. ಷಿಂಷಾ ಪವರ್ ಸ್ಟೇಷನ್‌ನಲ್ಲಿ 25 ಸೈಕಲ್ಸ್‌ನಿಂದ 50 ಸೈಕಲ್ಸ್‌ಗೆ ಪರಿವರ್ತನೆಮಾಡುವ ಕೆಲಸ ಇದು ವರೆಗೆ ಮುಗಿಯಬೇಕಾಗಿತ್ತು. ಆದರೆ ಹೊರದೇಶದಿಂದ ಬರಬೇಕಾಗಿದ್ದ ಯಂತ್ರೋಪಕರಣಗಳು ಬರುವುದು ನಿಧಾನವಾಗಿದೆ. ಎರಡು ತಿಂಗಳಕಾಲದೊಳಗಾಗಿ 50 ಸೈಕಲ್ಸ್‌ಗೆ ಪರಿವರ್ತನೆ ಮಾಡಬೇಕಾದ ಕಾರ್ಯ ಆಗಬಹುದು. ಆಗ ತಿಪ್ಪಗೊಂಡನಹಳ್ಳಿಯಿಂದ ಸುಮಾರು 15-16 ಮಿಲಿಯನ್ ಗ್ಯಾಲನ್‌ಗಳಷ್ಟು ನೀರನ್ನು ಒದಗಿಸುವುದಕ್ಕೆ ಅವಕಾಶವಾಗುತ್ತದೆ. ಬೆಂಗಳೂರಿನ ಜನಸಂಖ್ಯೆ ಸುಮಾರು ಹತ್ತು ಲಕ್ಷ ವಿದ್ದರೆ 15 ಮಿಲಿಯನ್ ಗ್ಯಾಲನ್‌ಗಳ ಪ್ರಕಾರ ಒದಗಿಸಿದರೆ ಸಾಕಾಗಬಹುದೆಂಬ ಅಂದಾಜಿತ್ತು. ಈಗ ಸಿಟಿ ಹೆಚ್ಚಾಗಿ ಬೆಳೆದಿರುವುದರಿಂದ ನೀರಿನ ಸರಬರಾಜನ್ನು ಹೆಚ್ಚಿಸಬೇಕೆಂಬುದನ್ನು ಸರ್ಕಾರದವರು ಮನಗಂಡು ಈ ವರ್ಷದ ಆಯವ್ಯಯದ ಪಟ್ಟಿಯಲ್ಲಿ ಅದಕ್ಕಾಗಿ ಮೊಬಲಗನ್ನು ಒದಗಿಸಿದ್ದಾರೆ. ಸರ್ಕಾರದವರು ಕೈಗೊಂಡಿರುವ ಈ ಕಾರ್ಯಕ್ರಮ ಮುಗಿದ ಅನಂತರ ಸುಮಾರು 22 ಮಿಲಿಯನ್ ಗ್ಯಾಲನ್‌ಗಳ ನೀರನ್ನು ಬೆಂಗಳೂರಿಗೆ ತಿಪ್ಪಗೊಂಡನಹಳ್ಳಿಯಿಂದ ಸರಬರಾಯಿ ಮಾಡುವುದಕ್ಕೆ ಅವಕಾಶವಾಗುತ್ತದೆಂಬ ನಿರೀಕ್ಷೆಯಿದೆ.

ಈ ಮಧ್ಯೆ Greater Bangalore ಯೋಜನೆ ಯೊಂದು ದಿವಾನ್ ಮಾಧವರಾಯರ ಅಧ್ಯಕ್ಷತೆಯಲ್ಲಿ ನೇಮಕವಾದ ಸಮಿತಿಯವರಿಂದ ತಯಾರಾಗಿದೆ. ಆ ಸಮಿತಿಯ ಅಭಿಪ್ರಾಯದ ಪ್ರಕಾರ ಬೆಂಗಳೂರಿನ ಜನಸಂಖ್ಯೆ 20 ಲಕ್ಷದವರೆಗೆ ಏರಬಹುದು. ತಲೆಗೆ ದಿನಕ್ಕೆ 30 ಗ್ಯಾಲನ್ ನೀರು ಕೊಟ್ಟರೆ 60 ಮಿಲಿಯನ್ ಗ್ಯಾಲನ್ ನೀರು ಬೇಕಾಗುತ್ತದೆ. ಕೊನೆಯ ಪಕ್ಷ 25 ಗ್ಯಾಲನ್

(B)
Accession No. 4750

ಕೊಡುವುದಾದರೂ 50 ಮಿಲಿಯನ್ ಗ್ಯಾಲನ್ ನೀರು ಬೇಕಾಗುತ್ತದೆ. 30 ಅಂಗುಲದ ಪೈಪುಗಳನ್ನು ಹಾಕುವ ಯೋಜನೆ ಕಾರ್ಯಗತವಾದರೂ ತಿಪ್ಪಗೊಂಡನಹಳ್ಳಿಯಿಂದ 20 ಮಿಲಿಯನ್ ಗ್ಯಾಲನ್‌ಗಳಿಗಿಂತ ಹೆಚ್ಚು ದೊರೆಯುವುದಿಲ್ಲ. ಆದುದರಿಂದ ಹೇಗೆ ಮಾಡುವುದು? ತಲೆಗೆ 20 ಅಥವಾ 25 ಗ್ಯಾಲನ್ ಪ್ರಕಾರ ನೀರನ್ನು ತಿಪ್ಪಗೊಂಡನಹಳ್ಳಿಯಿಂದ ಒದಗಿಸಲು ಏನು ಮಾಡಬೇಕೆಂದು ತಜ್ಞರ ಅಭಿಪ್ರಾಯವನ್ನು ಕೇಳಿದ್ದೇವೆ. ಈ ಸಂಬಂಧವಾಗಿ ಎರಡು ಅಭಿಪ್ರಾಯಗಳಿವೆ. ಅರ್ಕಾವತಿ ವ್ಯಾಲಿಯಿಂದ ನೀರನ್ನು ಪೂರ್ತಿಯಾಗಿ ಉಪಯೋಗಿಸಿಕೊಂಡರೆ ಬೆಂಗಳೂರಿಗೆ ಬೇಕಾಗುವಷ್ಟು ನೀರನ್ನೊದಗಿಸಲು ಸಾಧ್ಯವೆಂಬುದು ಒಂದು ಅಭಿಪ್ರಾಯ. ಆದರೆ ಅರ್ಕಾವತಿ ವ್ಯಾಲಿಯಲ್ಲಿ ವ್ಯವಸಾಯಕ್ಕೆ ನೀರನ್ನು ಕೊಡಬಾರದೆಂದು ಅವರು ಹೇಳಿದ್ದಾರೆ. ತಿಪ್ಪಗೊಂಡನಹಳ್ಳಿಯಿಂದ ಐದೈದು ಮೈಲಿಗೊಂದರಂತೆ ಕೆಳಗಡೆ ಎರಡು ಸ್ಥಳಗಳಿಂದ ನೀರೆತ್ತಿ ತಿಪ್ಪಗೊಂಡನಹಳ್ಳಿಗೆ ತಂದುಕೊಂಡು ಬೆಂಗಳೂರಿಗೆ ಬೇಕಾದ ನೀರನ್ನು ಕೊಡಲು ಸಾಧ್ಯವೆಂಬುದು ಒಂದು ಅಭಿಪ್ರಾಯ. ಹೀಗೆ ಎರಡು ಅಂತಸ್ತಿನಲ್ಲಿ ಐದು ಮೈಲಿಗಳ ಅಂತರದಲ್ಲಿ ಜಲಾಶಯಗಳನ್ನು ಕಟ್ಟಿಸಿದರೆ ಬೆಂಗಳೂರಿಗೆ, 20 ಲಕ್ಷ ಜನಸಂಖ್ಯೆಯಾದರೂ 20-30 ಗ್ಯಾಲನ್‌ಗಳ ಪ್ರಕಾರ ನೀರನ್ನೊದಗಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿದ್ದಾರೆ. ಇನ್ನು ಕೆಲವರು ಇದು ಕಷ್ಟ, ಕಾವೇರಿ ನದಿಯಿಂದ ಬೆಂಗಳೂರಿಗೆ ನೀರನ್ನೊದಗಿಸುವ ಏರ್ಪಾಡು ಮಾಡಿದರೆ ಮಾತ್ರ ಬೆಳೆಯುತ್ತಿರುವ ಬೆಂಗಳೂರಿಗೆ ತೃಪ್ತಿಕರವಾಗಿ ನೀರೊದಗಿಸುವುದು ಸಾಧ್ಯವೆಂದು ಹೇಳುತ್ತಾರೆ. ಈ ಎಲ್ಲ ಅಭಿಪ್ರಾಯಗಳನ್ನೂ ಪರಿಶೀಲನೆಮಾಡಿ ಒಂದು ವರದಿಯನ್ನು ಕೊಡಬೇಕೆಂದು ಸರ್ಕಾರದವರು ಇದೇ ಫೆಬ್ರುವರಿ 17ರಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ಅವರಿಂದ ವರದಿ ಬಂದ ಮೇಲೆ ಅರ್ಕಾವತಿ ನದಿಯಿಂದ ಪೂರ್ತಿಯಾಗಿ ನೀರನ್ನು ಪಡೆಯಲು ಸಾಧ್ಯವೆ ಅಥವಾ ಕಾವೇರಿಯಿಂದ ಒದಗಿಸುವುದಕ್ಕೆ ಸಾಧ್ಯವೆ ಎನ್ನುವುದನ್ನು ಪರಿಶೀಲಿಸಿ ತೀರ್ಮಾನ ಮಾಡಬೇಕಾಗಿದೆ. ಈ ಮಧ್ಯೇ ಇಂಡಿಯಾ ಸರ್ಕಾರದಿಂದ ಧನಸಹಾಯವನ್ನು ಕೇಳಿದ್ದೇವೆ. ಈಗ ಕೈಗೊಂಡಿರುವ ಯೋಜನೆ ಕಾರ್ಯಗತವಾದರೆ 15-16 ಮಿಲಿಯನ್ ಗ್ಯಾಲನ್‌ಗಳಷ್ಟು ನೀರನ್ನು ಬೆಂಗಳೂರಿಗೆ ಒದಗಿಸುವುದಕ್ಕೆ ಸಾಧ್ಯ. ಮೂರು ನಾಲ್ಕು ತಿಂಗಳುಗಳಲ್ಲಿ ಇದನ್ನು ಮಾಡುತ್ತೇವೆಂಬ ನಂಬಿಗೆ ಇದೆ. ಆದರೆ ಇಂತಿಷ್ಟೆ ಅವಧಿಯಲ್ಲಿ ಸಾಧ್ಯವಾಗುವುದೆಂದು ಭರವಸೆಯನ್ನು ಕೊಡುವುದಕ್ಕಾಗುವುದಿಲ್ಲ. ನಮ್ಮ ನಿರೀಕ್ಷೆಯಂತೆ ಕೆಲಸ ನಡೆಸಲು ಅನೇಕ ತೊಂದರೆಗಳಿರುತ್ತವೆ. ಪರದೇಶಗಳಿಂದ ಯಂತ್ರೋಪಕರಣಗಳು ಬರುವುದು ತಡವಾಗಬಹುದು. 25 ಸೈಕಲ್‌ನಿಂದ 50 ಸೈಕಲ್‌ಗೆ ವಿದ್ಯುಚ್ಛಕ್ತಿ ಯಂತ್ರಗಳು ಪರಿವರ್ತನೆಯಾಗಬೇಕಾದ ಕಾರ್ಯಗಳು ನಿಧಾನವಾದೀತು. ಅಲ್ಲದೆ ಹಳೆಯ ಪೈಪುಗಳು ಒಡೆದುಹೋದುದರಿಂದ ನಾವು ಹೇಳಿದ ಕಾಲಕ್ಕೆ ಕೆಲಸವಾಗದೆ ಜನರಿಗೆ ನಿರಾಶೆಯಾಗಿರುವುದು ನಿಜ. ಆದರೂ ಇನ್ನು ಹೆಚ್ಚು ವಿಳಂಬವಿಲ್ಲದೆ ಈಗಿರುವ ಕಷ್ಟದ ಪರಿಸ್ಥಿತಿಯನ್ನು ತಕ್ಕಮಟ್ಟಿಗೆ ಸುಧಾರಿಸುವುದು ಸಾಧ್ಯ. ಉತ್ತರೋತ್ತರ ಒಂದು ದೀರ್ಘವಾದ ಯೋಜನೆಯನ್ನು ಕೈಗೊಂಡು ಬೆಂಗಳೂರು ನಗರಕ್ಕೆ ತೃಪ್ತಿಕರವಾದ ರೀತಿಯಲ್ಲಿ ನೀರನ್ನೊದಗಿಸುವುದಕ್ಕೆ ಎಷ್ಟು ಸಾಧ್ಯವೋ ಅಷ್ಟು ಪ್ರಯತ್ನವನ್ನು ಸರ್ಕಾರದವರು ಮಾಡುತ್ತಾರೆ. ಈಗಿನ ಪರಿಸ್ಥಿತಿಯ ಬಗ್ಗೆ ಸ್ಥೂಲವಾಗಿ ಇಷ್ಟು ಅಂಶಗಳನ್ನು ಹೇಳಿದ್ದೇನೆ. ತೀರ್ಮಾನವನ್ನು ಅಧ್ಯಕ್ಷರಿಗೇ ಬಿಟ್ಟಿದ್ದೇನೆ. ಒಂದು ವೇಳೆ ಇದು ಚರ್ಚೆಯಾದರೂ ಇದೇ ವಿಷಯವನ್ನೇ ಪುನಃ ಉತ್ತರರೂಪವಾಗಿ ಹೇಳಬೇಕಾಗುತ್ತದೆ. ಒಟ್ಟಿನಲ್ಲಿ, ಮನುಷ್ಯ ಪ್ರಯತ್ನದಲ್ಲಿ ಎಷ್ಟು ಕೆಲಸ ಮಾಡಬಹುದೋ ಅಷ್ಟುಮಾಡಿ, ಎಷ್ಟು ಬೇಗ, ಎಷ್ಟು ಮುತುವರ್ಜಿಯಿಂದ ಕೆಲಸ ಮಾಡಬಹುದೋ ಅಷ್ಟನ್ನೂ ಮಾಡುತ್ತೇವೆ. ಸುಮ್ಮನೆ ಕಾಲತಳ್ಳಿದುದರಿಂದ ಈ ಪರಿಸ್ಥಿತಿ ಉಂಟಾಗಲಿಲ್ಲ. ಅನಿರೀಕ್ಷಿತವಾಗಿ ಪೈಪು ಒಡೆದುಹೋಯಿತು. ಇದರಿಂದ ನೀರಿನ ದಾಸ್ತಾನು ಕಡಮೆಯಾಯಿತು. ಇದಲ್ಲದೆ ಯುಗಾದಿಯ ಹಬ್ಬಕ್ಕೆ ಹೆಚ್ಚು ನೀರನ್ನು ಒದಗಿಸಲಾಯಿತು. ಇದರಿಂದ ನೀರಿನ ದಾಸ್ತಾನು ಮತ್ತಷ್ಟು ಕಡಮೆಯಾಯಿತು. ಹದಿನಾಲ್ಕು ಲಕ್ಷ ಚಿಲ್ಲರೆ ಗ್ಯಾಲನ್ ನೀರು ಭರ್ತಿಯಾದರೆ ಆ ಮೇಲೆ ಬೆಳಗ್ಗೆ ಎರಡು ಗಂಟೆಯ ಕಾಲ ಮತ್ತು ಮಧ್ಯಾಹ್ನ ಎರಡು ಗಂಟೆಯ ಕಾಲ ನೀರದೊದಗಿಸಲು ಸಾಧ್ಯವಾಗುತ್ತದೆ.

Mr. SPEAKER.—In view of the reply given by the Hon'ble Minister, I disallow the adjournment motion.

MYSORE APPROPRIATION (VOTE ON ACCOUNT) BILL, 1958.

Introduction.

Sri B. VAIKUNTA BALIGA (Minister for Labour and Legal Affairs).—Sir, I introduce the Mysore Appropriation (Vote on Account) Bill, 1958, which has been published in the *Mysore Gazette*, dated 20th March 1958 under rule 48 of the Rules of Procedure and Conduct of Business in the Mysore Legislative Assembly.

Mr. SPEAKER.—The Bill is introduced.

MYSORE APPROPRIATION (VOTE ON ACCOUNT) BILL, 1958.

Motion to consider.

Sri B. VAIKUNTA BALIGA (Minister for Labour and Legal Affairs).—Sir, I move:

"That the Mysore Appropriation (Vote on Account) Bill, 1958, be taken into consideration."

Mr. SPEAKER.—The question is:

"That the Mysore Appropriation (Vote on Account) Bill, 1958, be taken into consideration."

The motion was adopted.

Mr. SPEAKER.—The Bill will be put, clause by clause. Since there are no amendments, I put all the clauses. The question is:

"That Clauses 1, 2 and 3, the Schedule and the Title and Preamble form part of the Bill."

The motion was adopted.

Clauses 1, 2 and 3, the Schedule and the Title and the Preamble were added to the Bill.

Motion to pass.

Sri B. VAIKUNTA BALIGA.—Sir, I move:

"That the Mysore Appropriation (Vote on Account) Bill, 1958, be passed."

Mr. SPEAKER.—The question is:

"That the Mysore Appropriation (Vote on Account) Bill, 1958, be passed."

The motion was adopted.

REPORT OF THE MYSORE TENANCY AND AGRICULTURAL LAND LAWS COMMITTEE.

(Discussion continued).

ಅಧ್ಯಕ್ಷರು.—ಈ ದಿನ, ನಾಳೆ ಮತ್ತು ನಾಡಿದ್ದು ಈ ಮೂರುದಿನ ಜತ್ತಿ ಸಮಿತಿಯ ವರದಿಯ ಬಗ್ಗೆ ಚರ್ಚೆಯಾಗುತ್ತದೆ. ಇನ್ನೂ ಬಹಳ ಜನ ಸದಸ್ಯರು ಮಾತನಾಡುವವರಿದ್ದಾರೆ. ಆದಕಾರಣ ಮಾತನಾಡುವವರು ಆದಷ್ಟು ಕಡಮೆ ಕಾಲವನ್ನು ತೆಗೆದುಕೊಳ್ಳಬೇಕಾಗಿದೆ. ಒಬ್ಬೊಬ್ಬರು ಹದಿನೈದು ನಿಮಿಷ ಮಾತನಾಡಬಹುದೆಂದು ನಾನು ಸೂಚಿಸುತ್ತೇನೆ. ತಾವೆಲ್ಲರೂ ಸ್ವಲ್ಪ ಹೆಚ್ಚು ಕಡಮೆ ಹದಿನೈದು ನಿಮಿಷಗಳೊಳಗೆ ಮಾತನಾಡಿ ಮುಗಿಸಿದರೆ ಒಳ್ಳೆಯದು. ನಾನಾಗಿಯೇ ಹದಿನೈದು ನಿಮಿಷದ ಮಿತಿಯನ್ನು ಹಾಕಬೇಕೆಂದು ಮನಸ್ಸುಮಾಡಿಲ್ಲ, ಸದಸ್ಯರಿಗೇ ಬಿಡುತ್ತೇನೆ. ಎಲ್ಲ ಸದಸ್ಯರಿಗೂ ಅವರ ಅಭಿಪ್ರಾಯಗಳನ್ನು ಹೇಳಲು ಕಾಲಾವಕಾಶ ಸಿಕ್ಕಬೇಕೆಂಬ ದೃಷ್ಟಿಯಿಂದ ಸ್ವಲ್ಪ ಕಡಮೆ ಕಾಲವನ್ನು ಪ್ರತಿಯೊಬ್ಬ ಸದಸ್ಯರೂ ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

ಶ್ರೀ ಕೆ. ಎಲ್. ನರಸಿಂಹಯ್ಯ (ಹೆಬ್ಬೂರು).—ಪ್ರತಿಯೊಬ್ಬರೂ ಹದಿನೈದು ನಿಮಿಷಗಳ ಕಾಲಮಾತ್ರ ತೆಗೆದುಕೊಳ್ಳಬೇಕು ಎಂದರೆ ತೊಂದರೆಯಾಗುತ್ತದೆ. ಇದುವರೆಗೂ ಮಾತನಾಡಿದವರಿಗೆಲ್ಲ ಅರ್ಧಗಂಟೆ, —ಮುಕ್ಕಾಲು ಗಂಟೆ ಕಾಲಕೊಟ್ಟು ಈಗ ಕಾಲವನ್ನು ಗೊತ್ತುಮಾಡಿದರೆ ಬಹಳ ತೊಂದರೆಯಾಗುವುದರಿಂದ ಕಾಲವನ್ನು ಮಿತಿಗೊಳಿಸಬಾರದು.

ಅಧ್ಯಕ್ಷರು.—ಕಾಲವನ್ನು ಮಿತಿಗೊಳಿಸಬೇಕೆಂಬ ಇಚ್ಛೆ ನನಗಿಲ್ಲ. ಆದರೆ ಪ್ರತಿಯೊಬ್ಬರೂ ಹೆಚ್ಚು ಕಾಲವನ್ನು ತೆಗೆದುಕೊಂಡರೆ ಕೆಲವರಿಗೆ ಮಾತನಾಡಲು ಅವಕಾಶ ಸಿಕ್ಕಬಹುದು, ಮತ್ತೆ ಕೆಲವರಿಗೆ ಸಿಕ್ಕದೆ ಇರಬಹುದು. ಅಂಥ ಸಂದರ್ಭಗಳಲ್ಲಿ ಮಾತನಾಡಲು ಅವಕಾಶ ಸಿಕ್ಕಲಿಲ್ಲವೆನ್ನುವ ಭಾವನೆ ಸದಸ್ಯರಿಗೆ ಬರುತ್ತದೆ. ಆದುದರಿಂದ ಸದಸ್ಯರು ಕಡಮೆ ಕಾಲವನ್ನು ತೆಗೆದುಕೊಂಡು ಎಲ್ಲರಿಗೂ ಅವಕಾಶ ಸಿಕ್ಕುವಂತೆ ಮಾಡಬೇಕೆಂದು ಹೇಳುತ್ತೇನೆ.

Sri J. H. SHAMSUDDIN (Honawar).—May I make a suggestion? Time limit may be fixed, the minimum being 15 minutes and maximum 20 minutes. That will solve the problem.

Sri C. K. RAJAIAH SETTY (Chiknaikanahally).—Sri Shamsuddin is not in the waiting list, Sir.

ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಅಧ್ಯಕ್ಷರು ಹೇಳುವುದು ಸರಿಯಾಗಿ ಕಾಣುತ್ತದೆ. ಪ್ರತಿಯೊಬ್ಬ ಸದಸ್ಯರೂ ಇಷ್ಟೇ ಕಾಲವನ್ನು ತೆಗೆದುಕೊಳ್ಳಬೇಕೆಂದು ನಿಗದಿ ಮಾಡುವುದು ಸರಿಯಲ್ಲ.

ಅಧ್ಯಕ್ಷರು.—ಕಾಲವನ್ನು ಮಿತಿಮಾಡದೆ ಇದ್ದರೆ ಅದರಲ್ಲಿಯೂ ಒಂದು ತೊಂದರೆ ಇದೆ. ಕಾಲವನ್ನು ನಿಗದಿ ಮಾಡದೆ ಇದ್ದರೆ ತಾವು ಯಾರೂ ಬೇಗ ಭಾಷಣವನ್ನು ಮುಗಿಸುವುದಿಲ್ಲ. ಆದರೂ ಸಹ ಎಲ್ಲರಿಗೂ ಅವಕಾಶ ಸಿಕ್ಕಲಿ ಎನ್ನುವ ದೃಷ್ಟಿಯಿಂದ ಎಲ್ಲರೂ adjust ಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಡಿ. ಮೂಕಪ್ಪ (ಸಾಗರ).—ಸ್ವಾಮಿ, ನಮ್ಮ ದೇಶದಲ್ಲಿ ಸಾಕಷ್ಟು ಆಹಾರೋತ್ಪತ್ತಿ ಇಲ್ಲದೆ ಇದ್ದುದರಿಂದ ಸರ್ಕಾರದವರು ಮೊದಲನೆಯ ಪಂಚವಾರ್ಷಿಕ ಯೋಜನೆ, ಎರಡನೆಯ ಪಂಚವಾರ್ಷಿಕ ಯೋಜನೆಗಳನ್ನು ಹಾಕಿ ಆಹಾರ ಪದಾರ್ಥಗಳ ಉತ್ಪತ್ತಿಯನ್ನು ಹೆಚ್ಚಿಸಲು ಕೋಟ್ಯಂತರ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ. ಆದರೂ ಕೂಡ ಆಹಾರದ ಉತ್ಪತ್ತಿ ಸ್ವಲ್ಪವೂ ಕೂಡ ಹೆಚ್ಚಿಲ್ಲ. ಈ ವಿಷಯವನ್ನು ತಮ್ಮ ಮುಂದಿಟ್ಟು ಜತ್ತಿ ಸಮಿತಿಯ ವರದಿಯ ವಿಷಯವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ದೇಶದಲ್ಲಿ ಆಹಾರ ಪದಾರ್ಥಗಳನ್ನು ಬೆಳೆಯತಕ್ಕ ಮಂದಿ ಹೆಚ್ಚಾಗಿದ್ದರೂ ಕೂಡ ಅವರಿಗೆ ಸಾಕಷ್ಟು ಉತ್ಸಾಹವಿಲ್ಲದೆ ಅವರು ಸರಿಯಾಗಿ ಆಹಾರ ಪದಾರ್ಥಗಳನ್ನು ಬೆಳೆಯುತ್ತಿಲ್ಲವೆನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಉದಾಹರಣೆಗೆ ಹೇಳುವುದಾದರೆ ಶಿವಮೊಗ್ಗ ಜಿಲ್ಲೆಯಲ್ಲಿ ಎಕರೆಯೊಂದಕ್ಕೆ ಸರಾಸರಿ ಎಂಟರಿಂದ ಹತ್ತು ಪಲ್ಲದ ವರೆಗೂ ಧಾನ್ಯವನ್ನು ಬೆಳೆಯತಕ್ಕ ಸಂದರ್ಭವನ್ನು ನೋಡಿದ್ದೇನೆ. ಇದರಲ್ಲಿ ಹಿಡುವಳಿ ಜಮೀನನ್ನು ಹೊಂದಿ ವ್ಯವಸಾಯ ಮಾಡತಕ್ಕ ರೈತ ಎಕರೆಗೆ ಹತ್ತರಿಂದ ಹನ್ನೆರಡು ಪಲ್ಲದ ವರೆಗೂ ಉತ್ಪಾದನೆ ಮಾಡುತ್ತಿದ್ದಾನೆ. ಅದೇ ಪ್ರದೇಶದಲ್ಲಿ ಅಷ್ಟೆ ರೀತಿಯಲ್ಲಿ ಕೆಲಸಮಾಡುವ ಗೇಣಿ ರೈತನು ಎಷ್ಟು ಬೆಳೆಯು

ಪ್ರಾಪ್ತಿ ಕ್ರಮಾಂಕ Accession No. (9)
ದಿನಾಂಕ Date........ 4-7-52

ತ್ತಾನೆಂದು ನೋಡಿದರೆ ಸರಾಸರಿ ಆರರಿಂದ ಎಂಟು ಪಲ್ಲ ಧಾನ್ಯವನ್ನು ಮಾತ್ರ ಉತ್ಪನ್ನ ಮಾಡುತ್ತಿದ್ದಾನೆ. ಅವನ ಅಸಮಾಧಾನವೇ ಇದಕ್ಕೆ ಕಾರಣ. ಜಮೀನಿನಲ್ಲಿ ಆಸಕ್ತಿ ಇಲ್ಲದೇ ಇರುವುದೇ ಒಂದು ಕಾರಣವೆಂದು ನನಗೆ ಅರ್ಥವಾಗುತ್ತದೆ. ಗೇಣಿಗೆ ಮಾಡುವ ಜಮೀನಿಗೆ ಅವನೇನಾದರೂ ಗೊಬ್ಬರ, ಗೋಡು ವಗೈರೆ ಹಾಕಿ ಕಷ್ಟಪಟ್ಟು ದುಡಿದು ಹೆಚ್ಚಾಗಿ ಉತ್ಪನ್ನ ತರಲು ಪ್ರಯತ್ನ ಪಟ್ಟರೆ ಸ್ವಾಭಾವಿಕವಾಗಿ ಹಿಡುವಳಿದಾರನಿಗೆ ಸ್ವಲ್ಪ ಸಂಕೋಚವುಂಟಾಗಿ ಗೇಣಿದಾರನಿಗೆ ಜಮೀನು ಕೈ ತಪ್ಪತಕ್ಕ ಸಂದರ್ಭ ಒದಗುತ್ತದೆ. ಇಲ್ಲವಾದರೆ ಪಕ್ಕದಲ್ಲಿರತಕ್ಕ ಇನ್ನೊಬ್ಬ ಗೇಣಿದಾರ ಹಿಡುವಳಿದಾರನ ಬಳಿಗೆ ಬಂದು, ಅವನು ಹೆಚ್ಚಿಗೆ ಧಾನ್ಯವನ್ನು ಬೆಳೆದುಕೊಂಡು ನಿಮಗೆ ಕಡಮೆ ಪ್ರಮಾಣದಲ್ಲಿ ಕೊಡುತ್ತಿದ್ದಾನೆ; ಅವನನ್ನು ಬಿಡಿಸಿ ಆ ಜಮೀನನ್ನು ನನಗೆ ಕೊಟ್ಟರೆ ನಾನು ಹೆಚ್ಚಿಗೆ ಪ್ರಮಾಣದಲ್ಲಿ ಗೇಣಿಯನ್ನು ಕೊಡುತ್ತೇನೆಂದು ಹೇಳಿ ಜಮೀನನ್ನು ಅವನ ಕೈ ತಪ್ಪಿಸಿರತಕ್ಕ ನಿದರ್ಶನಗಳು ಬೇಕಾದಷ್ಟಿವೆ. ಈ ಕಾರಣಗಳಿಂದ ಗೇಣಿದಾರನು ಹೆಚ್ಚು ಶ್ರಮವಹಿಸಿ ಜಮೀನಿನಲ್ಲಿ ಧಾನ್ಯವನ್ನು ಬೆಳೆಯಲು ಅವಕಾಶವುಂಟಾಗುತ್ತಿಲ್ಲ. ಇದಕ್ಕಾಗಿಯೇ ಉಳುವವನೇ ಭೂಮಿಯ ಒಡೆಯನಾಗಬೇಕು ಎಂದು ಹೇಳುವುದು. ದೇಶದಲ್ಲಿ ಆಹಾರೋತ್ಪಾದನೆ ಹೆಚ್ಚಾಗಬೇಕಾದರೆ ಯಾರು ಕಷ್ಟಪಟ್ಟು ದುಡಿಯುತ್ತಾರೆಯೋ ಅವರಿಗೇ ಆದರ ಹಕ್ಕು ಇರಬೇಕೇ ವಿನಾ ಇನ್ನೊಬ್ಬರ ಕಾರ್ಯಕ್ಷೇತ್ರವಾಗಿರುವ ಭೂಮಿಯಲ್ಲಿ ರೈತನು ಶ್ರಮಪಡತಕ್ಕದ್ದು ಸರಿಯಲ್ಲ ಮತ್ತು ಅವನಿಗೆ ಕೆಲಸಮಾಡಲು ಉತ್ಸುಕತೆ ಬರುವುದಿಲ್ಲ. ಇದನ್ನು ಈಗಾಗಲೇ ಅನೇಕ ಮಾನ್ಯ ಸ್ನೇಹಿತರು ಹೇಳಿದ್ದಾರೆ. ಮಹಾತ್ಮಗಾಂಧಿಯವರು ಕೂಡ ಇದನ್ನೆಲ್ಲ ಅರಿತೇ ದೇಶದಲ್ಲಿ ಉಳುವವನೇ ಹೊಲದ ಒಡೆಯನಾಗಬೇಕು ಎಂಬ ತತ್ವವನ್ನು ಅನುಷ್ಠಾನಕ್ಕೆ ತರಬೇಕು, ಕಾರ್ಯರೂಪಕ್ಕೆ ತರಬೇಕು ಎಂದು ಹೇಳಿದ್ದಾರೆ. ಮಾನ್ಯ ಸ್ನೇಹಿತರುಗಳು ಐದು ವರ್ಷಕ್ಕೆ ಒಂದು ಸಲವಾದರೂ ಹಳ್ಳಿಯ ಕಡೆ ಪ್ರವಾಸ ಮಾಡಿ ರೈತರಿಗೆ ಬೋಧನೆಮಾಡಿ ಗಾಂಧೀಜಿಯವರು ಹೇಳಿರುವ ತತ್ವವನ್ನು ಕಾರ್ಯರೂಪಕ್ಕೆ ಅನಿವಾರ್ಯವಾಗಿ ಜಾರಿಗೆ ತರಲೇಬೇಕು ಎಂದು ಹೇಳಿದ್ದಾರೆ. ಅದಕ್ಕೋಸ್ಕರವೇ ಸರ್ಕಾರದವರು ಜತ್ತಿ ಸಮಿತಿಯನ್ನು ನೇಮಕ ಮಾಡಿದರು. ಸಮಿತಿಯವರು ದೇಶಾದ್ಯಂತ ಪ್ರವಾಸಮಾಡಿ ರೈತನ ಕಷ್ಟನಷ್ಟಗಳನ್ನರಿತು, ಅವರಿಗಿರತಕ್ಕ ನ್ಯೂನತೆಗಳನ್ನು ಸರಿಪಡಿಸಲು ಕೆಲವು ಸಲಹೆಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಇದನ್ನೆಲ್ಲ ಪರಿಶೀಲನೆಮಾಡಿ ಉಳುವವನೇ ಹೊಲದೊಡೆಯನಾಗತಕ್ಕ ಯೋಜನೆಯನ್ನು ಜಾರಿಗೆ ತರುತ್ತೀರೆಂದು ನಾನು ನಂಬಿದ್ದೇನೆ.

ಸರ್ಕಾರದವರು ಆಹಾರ ಪದಾರ್ಥಗಳ ಮೇಲೆ ಹತೋಟಿಯನ್ನು ತಂದು, ಒಂದು ದರವನ್ನು ಸಹ ನಿಗದಿ ಮಾಡಿದ್ದುದು ತಮಗೆ ಗೊತ್ತಿದೆ. ಈ ಸಂದರ್ಭದಲ್ಲಿ ವ್ಯವಸಾಯ ಮಾಡತಕ್ಕ ನಮ್ಮ ದೇಶದಲ್ಲಿ ಆಹಾರವನ್ನು ಸೃಷ್ಟಿಮಾಡತಕ್ಕ ತನ್ನ ರೈತನ ಕಷ್ಟಸುಖ, ಅವನ ಶ್ರಮ ಏನು ಎನ್ನುವುದನ್ನು ಪರಿಶೀಲನೆ ಮಾಡಿದದೆ, ಹಳ್ಳಿಯವನನ್ನು ತೊರೆದು ಪಟ್ಟಣವಾಸಿಗಳು ಮತ್ತು ಅಧಿಕಾರಿಗಳು ಇವರಿಗೆ ಅನಾನುಕೂಲವಾಗುವಂತೆ ಮಾಡಿರುವುದರಿಂದ ವ್ಯವಸಾಯ ಹಿಂದೆ ಬೀಳುವುದಕ್ಕೆ ಕಾರಣವಾಗಿದೆ ಎಂದು ಹೇಳಬೇಕಾಗಿದೆ. ಇದನ್ನೆಲ್ಲ ಹಳ್ಳಿಯವರ ಕೂಗು ಸಾಧಾರಣವಾಗಿ ದಿಲ್ಲಿಯವರೆಗೆ ಮುಟ್ಟುವುದಿಲ್ಲವೆನ್ನುವುದಕ್ಕೆ ಹೇಳುತ್ತಿದ್ದೇನೆ. ಜಮೀನ್ದಾರರ ವತಿಯಿಂದ ಬರತಕ್ಕ ಕೆಲವು ಅಭಿಪ್ರಾಯಗಳಲ್ಲಿ ಜಮೀನು ಸುಧಾರಣೆ ಈ ರೀತಿ ಇರಬೇಕು, ಆ ರೀತಿ ಇರಬೇಕು, ಸಮಿತಿಯವರು ಸೂಚಿಸಿರುವಂತೆ ಮಾಡಿದರೆ ಆಹಾರೋತ್ಪಾದನೆ ಕುಂಠಿತವಾಗುತ್ತದೆ, ದೇಶ ಹಾಳಾಗುತ್ತದೆ ಎಂದು ಅನೇಕ ಸಲಹೆಗಳನ್ನು ಕೊಡುತ್ತಿದ್ದಾರೆ. ಆದರೆ ಅದೇ ರೀತಿ ರೈತರಿಗೆ ಅನ್ಯಾಯವಾಗುತ್ತದೆನ್ನುವ ವಿಷಯವನ್ನು ರೈತನು ಇದುವರೆಗೂ ತಮ್ಮ ಗಮನಕ್ಕೆ ತರಲಿಲ್ಲ. ರೈತನಾದವನು ಇಲ್ಲಿಗೆ ಬರಲು ಶಕ್ತಿ ಇದೆಯೋ ಇಲ್ಲವೇ ಅವನು ಏತಕ್ಕೆ ಸರ್ಕಾರದ ಬಳಿ ಬರಲಿಲ್ಲ, ಅವನಿಗೆ ಕಷ್ಟವಿದೆಯೋ ಎನ್ನುವುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಮಾನ್ಯ ಸದಸ್ಯರು ಈ ಸಭೆಗೆ ಬರುವಾಗ ರೈತರಿಗೆ ಕೊಟ್ಟಿರತಕ್ಕ ಭರವಸೆಗಳನ್ನು ಖಂಡಿತವಾಗಿಯೂ ನೆರವೇರಿಸಿಕೊಡುತ್ತಾರೆಂದು ನಂಬಿದ್ದೇನೆ. ಸರ್ಕಾರದವರು ಕೋಟ್ಯಂತರ ರೂಪಾಯಿಗಳನ್ನು ವೆಚ್ಚಮಾಡಿ ಗೊಬ್ಬರ, ಗೋಡು, ಒಳ್ಳೆಯ ಬೀಜ ಇವುಗಳನ್ನು ರೈತನಿಗೆ ಒದಗಿಸುತ್ತಿದ್ದಾರೆ. ಆದರೂ ಸಹ ಉಳುವವನೇ ಹೊಲದ ಒಡೆಯ ಎನ್ನುವ ವಿಚಾರದಲ್ಲಿ ಸ್ವಲ್ಪ ಉಪೇಕ್ಷೆ ಇದೆ. ಈ ಕಾರಣದಿಂದ ಸರ್ಕಾರದವರು ಇಷ್ಟು ಹಣವನ್ನು ಖರ್ಚುಮಾಡಿದರೂ ಉಪಯೋಗವಿಲ್ಲದಂತಾಗಿದೆ. ಇದರ ಬದಲು ಉಳುವವನೇ ಹೊಲದ ಒಡೆಯ, ಇನ್ನೊಬ್ಬನಲ್ಲ ಎನ್ನುವ ಕಾನೂನನ್ನು ಜಾರಿಗೆ ತರುವುದಾದರೆ ಈಗ ಯಾರು ಗೇಣಿ ಸಾಗುವಳಿಯನ್ನು ಮಾಡಿಕೊಂಡಿದ್ದಾರೋ ಅವರು ಉತ್ಸುಕತೆಯಿಂದ ಎಕರೆಯೊಂದಕ್ಕೆ ಒಂದು ಪಲ್ಲದಂತೆ ಧಾನ್ಯವನ್ನು ಹೆಚ್ಚಿಗೆ ಬೆಳೆದರೆ ಮೂರು ಲಕ್ಷ ಪಲ್ಲ ಧಾನ್ಯವನ್ನು ಮುಂದಿನ ವರ್ಷವೇ ಹೆಚ್ಚಾಗಿ ಪಡೆಯಲು ಸಾಧ್ಯವೆನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡಬಯಸುತ್ತೇನೆ. ಈಗ ಮೂರು ವರ್ಷಗಳಿಂದ ಈ ವಿಚಾರದಲ್ಲಿ ನಿಧಾನವಾಗುತ್ತಿರುವುದನ್ನು ನೋಡಿ ಜನಗಳಿಗೆ ತುಂಬಾ ನಿರಾಶೆಯಾಗಿದೆ ಎಂದು ತಮ್ಮ ಮುಂದೆ ಇಡಬಯಸುತ್ತೇನೆ. ಆದುದರಿಂದ ಕೂಡಲೆ ಉಳುವವನೇ ಹೊಲದೊಡೆಯನಾಗಬೇಕೆಂಬ ಕಾಯಿದೆಯನ್ನು ಜಾರಿಗೆ ತರಬೇಕೆಂದು ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ.

ಈಗ ಜತ್ತಿ ಸಮಿತಿಯವರು ತಯಾರಿಸಿರತಕ್ಕಂಥ ವರದಿಯು ಅಷ್ಟು ಆಶಾದಾಯಕವಾಗಿಲ್ಲದಿದ್ದರೂ ಕೂಡ, ಕೆಲವು ತಿದ್ದುಪಡಿಗಳೊಡನೆ ಅದನ್ನು ಕಾರ್ಯರೂಪಕ್ಕೆ ತಂದು ರೈತನ ಹಿತವನ್ನು ಗಳಿಸಬೇಕೆಂದು ಬೇಡಿಕೊಳ್ಳುತ್ತೇನೆ. ಈ ಸಂದರ್ಭಗಳಲ್ಲಿ ಸಮಿತಿಯು ಮಾಡಿರತಕ್ಕಂಥ ಸಲಹೆಗಳನ್ನು ತಮ್ಮ ಮುಂದಿಟ್ಟು ಅವರ ವರದಿಯಲ್ಲಿರತಕ್ಕಂಥ ನ್ಯೂನತೆಗಳನ್ನು ತಮ್ಮ ಗಮನಕ್ಕೆ ತರಲಿಚ್ಛೆಪಡುತ್ತೇನೆ.

ಈ ಸಮಿತಿಯವರು ಒಂದು ಕನಿಷ್ಟ ಹಿಡುವಳಿಯಲ್ಲಿ ನಾಲ್ಕು ನೂರು ರೂಪಾಯಿ ನಿವ್ವಳ ವರಮಾನ ಬರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಪರಮಾವಧಿ ವರಮಾನವೆಂದರೆ 5,400 ರೂಪಾಯಿ ಉತ್ಪಾದನೆ ಬರತಕ್ಕಂಥ ಜಮೀನು ಎಂದು ಪರಿಗಣಿಸಿದ್ದಾರೆ. 1,200 ರೂಪಾಯಿ ಕನಿಷ್ಠ ಹಿಡುವಳಿ ಇರಬೇಕಾದರೆ, ನಮ್ಮ ಪ್ರಾಂತ್ಯದಲ್ಲಿ ಒಬ್ಬ ಮನುಷ್ಯನಿಗೆ $7\frac{1}{2}$ ಎಕರೆ ಜಮೀನು ಇರಬೇಕು ಎಂದು ಲೆಕ್ಕ ಹಾಕಬಹುದು. ಆವಾಗ ಕುಟುಂಬ ಹಿಡುವಳಿಯು ಸರಾಸರಿ $22\frac{1}{2}$ ಎಕರೆ ಸಾಗುವಳಿ ಮಾಡುವ ಜಮೀನು ಆಗುತ್ತದೆ. ಅಂದರೆ ಒಂದು ಹಿಡುವಳಿಯ ಪರಮಾವಧಿಯು ವಿಸ್ತೀರ್ಣ $102\frac{1}{2}$ ಎಕರೆಯಾಗಲು ಅವಕಾಶವಿದೆ. ಈ ಲೆಕ್ಕದಮೇಲೆ ಜಮೀನು ಕೊಟ್ಟರೆ, ಸುಲಿಗೆಮಾಡತಕ್ಕಂಥ ಅವಕಾಶವನ್ನು ತಪ್ಪಿಸಿದ ಹಾಗಾಗುವುದಿಲ್ಲ. ಒಂದು ಕುಟುಂಬ ಹಿಡುವಳಿಯ ಪರಮಾವಧಿಯನ್ನು ನಿರ್ಧರಿಸು

(ಶ್ರೀ ಡಿ. ಮೂಕಪ್ಪ)

ವಾಗ, ಒಂದು ಕುಟುಂಬಕ್ಕೆ ಸಾಗುವಳಿ ಮಾಡುವುದಕ್ಕೆ ಎಷ್ಟು ಸಾಧ್ಯವೋ, ಅಷ್ಟು ಜಮೀನಿನ ವಿಸ್ತೀರ್ಣವನ್ನು ಪರಮಾವಧಿಯಾಗಿ ನಿಗದಿಮಾಡಬೇಕು. ಇದಕ್ಕನುಸಾರವಾಗಿ ಲೆಕ್ಕ ಹಾಕಿದರೆ, ಒಂದು ಕುಟುಂಬ ಸಾಧಾರಣವಾಗಿ ಒಂದು ಉಕ್ಕೆಯಷ್ಟು ಜಮೀನನ್ನು ಉಳುಮೆ ಮಾಡಬಹುದು ಎಂದು ಲೆಕ್ಕ ಹಾಕಬಹುದು. ಇನ್ನು ಕೆಲವು ಸಂದರ್ಭಗಳಲ್ಲಿ ಗೇಣಿಯ ಪರಮಾವಧಿಯನ್ನು ನಿಗದಿ ಮಾಡಿದ್ದಾರೆ. ನೀರಾವರಿಯ ಬಗ್ಗೆ ಸೌಕರ್ಯಗಳಿರುವಂಥ ಜಮೀನುಗಳ ಸಂಬಂಧದಲ್ಲಿ ಪರಮಾವಧಿ ಗೇಣಿಯು ಹುಟ್ಟುವಳಿಯ ¼ನೆಯ ಭಾಗದಷ್ಟು ಮತ್ತು ನೀರಾವರಿ ಸೌಕರ್ಯವಿಲ್ಲದ ಜಮೀನುಗಳಾಗಿದ್ದರೆ, ಹುಟ್ಟುವಳಿಯ 1/5 ಭಾಗದಷ್ಟು ಎಂದು ಅಭಿಪ್ರಾಯಪಟ್ಟಿದ್ದಾರೆ. ಒಂದು ಎಕರೆಗೆ ಎರಡು ಪಲ್ಲ ಗೇಣಿ ಆಗಿ, 40 ರೂಪಾಯಿ ವರಮಾನ ಬರುವ ಸಂದರ್ಭದಲ್ಲಿ, ನಾಲ್ಕು ರೂಪಾಯಿ ಕಂದಾಯ ಹೋದರೆ, 36 ರೂಪಾಯಿ ವರಮಾನ ಕೊಡಿ ಎಂದು ನಿರ್ಧಾರಮಾಡಿದ ಹಾಗಾಯಿತು. ಯಾರು ಜಮೀನನ್ನು ಸಾಗುವಳಿಗೆ ಕೊಡುತ್ತಾರೋ ಅಂಥ ಜಮೀನು ಮಾಲೀಕರಿಗೆ ಬೆಳೆಯ ರೂಪದಲ್ಲಿ ಅಲ್ಲದೇನೇ, ಕಂದಾಯ ರೂಪದಲ್ಲಿಯೂ ಗೇಣಿ ನಿಗದಿ ಮಾಡುವುದು ಸೂಕ್ತ. ಈಗಾಗಲೇ ನೆರೆಯ ಪ್ರಾಂತ್ಯವಾದ ಬೊಂಬಾಯಿ ಪ್ರಾಂತದಲ್ಲಿ ಕೂಡ ಈ ರೀತಿ ನಿಗದಿಯಾಗಿರುವುದು ತಮ್ಮ ಗಮನಕ್ಕೆ ಬಂದಿದೆ. ಅಲ್ಲಿ ಬಂದಿರತಕ್ಕಂಥ ಗೇಣಿ ಪರಮಾವಧಿ ಇಲ್ಲಿಯೂ ಜಾರಿಗೆ ತರುವುದು ಸೂಕ್ತ.

ಭೂಮಿಯ ಮಾಲೀಕನಿಗೆ ಕೊಡಬೇಕಾದ ಪರಿಹಾರದ ವಿಚಾರದಲ್ಲಿ, ಗೇಣಿಯ 15 ಪಟ್ಟು ಎಂದು ಸಮಿತಿಯವರು ಅಭಿಪ್ರಾಯಪಟ್ಟಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಉದಾಹರಣೆಯನ್ನು ಕೊಡಬೇಕೆಂದಿದ್ದೇನೆ. ನಮ್ಮ ಪ್ರದೇಶದಲ್ಲಿ ಒಂದು ಎಕರೆಗೆ ಹತ್ತು ಪಲ್ಲ ಬೆಳೆಯಬಹುದು. ಹತ್ತು ಪಲ್ಲ ಉತ್ಪನ್ನವಾಗತಕ್ಕಂಥ ಜಮೀನಿಗೆ ಸಾಧಾರಣವಾಗಿ ಎರಡು ಪಲ್ಲ ಗೇಣಿ ಎಂದು ಭಾವಿಸಿಕೊಂಡರೆ, ಪರಿಹಾರ, ಅದರ 15 ಪಟ್ಟು; ಅಂದರೆ 30 ಪಲ್ಲ ಬೆಳೆಯನ್ನು ಪರಿಹಾರವಾಗಿ ನಿಷ್ಕರ್ಷೆ ಮಾಡಿದ ಹಾಗಾಯಿತು. ಅಲ್ಲಿಗೆ 600 ರೂಪಾಯಿ ಪರಿಹಾರ ನಿಗದಿ ಮಾಡಿದ ಹಾಗಾಯಿತು. ಈಗಿನ ಮಾರ್ಕೆಟ್ ರೇಟ್ ಪ್ರಕಾರ ಇಲ್ಲಿಯ ಆ ಜಮೀನು 250 ರೂಪಾಯಿ ಅಥವಾ ಮುನ್ನೂರು ರೂಪಾಯಿ ಬೆಲೆಬಾಳುವ ಜಮೀನಾಗಿರುತ್ತದೆ. ಹೀಗಿರುವಲ್ಲಿ ಉತ್ಪತ್ತಿಯ ಎರಡರಷ್ಟು ಪರಿಹಾರವಾಗಿ ಕೊಡಬೇಕು. ಈ ನಿಗದಿ ಮಾಡಿರುವ ಪರಿಹಾರ ರೈತನ ಹಿತರಕ್ಷಣೆ ಮಾಡಿದಂತೆ ಆಗುತ್ತದೆ ಎಂದು ಯೋಚನೆ ಮಾಡಬೇಕು. ರೈತ ಎಲ್ಲಿ ಹೆಚ್ಚಾಗಿ ಶ್ರಮವಹಿಸಿ ದುಡಿಯುತ್ತಾನೋ, ಅಲ್ಲಿ ಬೆಳೆ ಹೆಚ್ಚಾಗಿ ಬರುತ್ತದೆ ಮತ್ತು ಜಮೀನಿನ ಬೆಲೆ ಜಾಸ್ತಿ ಇರುತ್ತದೆ. ಉದಾಹರಣೆಗೆ ಹೇಳಬಹುದು. ಸಾಗುವಳಿ ಸರಿಯಾಗಿ ಮಾಡದೆಇದ್ದರೆ, ಉತ್ಪನ್ನವೂ ಕಡಮೆ ಇರುತ್ತದೆ; ಆ ಜಮೀನನ್ನು 50 ರೂಪಾಯಿಗೂ ಕೂಡ ಕೇಳತಕ್ಕಂಥವರು ಇರುವುದಿಲ್ಲ. ಆದರೆ ರೈತ ಅದೇ ಜಮೀನನ್ನು ಕೃಷಿಮಾಡಿ, ಹೆಚ್ಚು ಫಲವತ್ತಾಗಿ ಮಾಡಿದರೆ, ಆ ಜಮೀನಿನ ಬೆಲೆಯನ್ನು 500 ರೂಪಾಯಿಗಳಿಗೆ ಏರಿಸುವ ಶಕ್ತಿ ಅವನು ಗಳಿಸಬಹುದು. ಆದ್ದರಿಂದ ಯಾವ ರೈತ ಒಂದು ಜಮೀನಿನಲ್ಲಿ ಕಷ್ಟಪಟ್ಟು, ಕೃಷಿಮಾಡಿ, ಹೆಚ್ಚು ಬೆಳೆ ಬೆಳೆದುಕೊಂಡಿರುತ್ತಾನೋ, ಅಂತಹ ರೈತನಿಗೆ ಆ ಜಮೀನಿನಲ್ಲಿ ಪ್ರಿಫರೆನ್ಸ್ ಕೊಡದೆ ಇರುವುದು ಸೂಕ್ತವಲ್ಲ. 10-12 ವರ್ಷದ ಲಾಗಾಯಿತು, ಸಾಗುವಳಿ ಮಾಡಿಕೊಂಡಿದ್ದ ರೈತನಿಗೆ, ಪರಿಹಾರದಲ್ಲಿ ಅರ್ಧ ಭಾಗ, ಆರು ವರ್ಷಗಳು ಸಾಗುವಳಿ ಮಾಡಿಕೊಂಡಿದ್ದಂಥವನಿಗೆ ಪರಿಹಾರದಲ್ಲಿ ¼ ಭಾಗ ಭೂಮಾಲೀಕನಿಗೆ ಪರಿಹಾರವಾಗಿ ಕೊಡುವ ರಿಯಾಯಿತಿ ಮಾಡಬೇಕು.

ದ್ವಿಕುಟುಂಬಕ್ಕೆ, ಒಂದು ಕುಟುಂಬದ ಎರಡರಷ್ಟು ಪರಮಾವಧಿ ಇರಬಹುದು ಎಂದು ಸಮಿತಿಯ ವರದಿಯಲ್ಲಿ ಹೇಳಿದೆ. ನಮ್ಮ ಹಿಂದು ಕುಟುಂಬಗಳಲ್ಲಿ 50-80-100 ಜನ ಒಂದೊಂದು ಮನೆಯಲ್ಲಿ ಇದ್ದಾರೆ. ಇಂತಹ ಸಂದರ್ಭದಲ್ಲಿ ಒಂದು ಕುಟುಂಬ ಹಿಡುವಳಿಯ ಎರಡರಷ್ಟು, ಅಂದರೆ, 45 ಎಕರೆ ಜಮೀನು ಮಾತ್ರ ಇರತಕ್ಕುದು ಎಂದು ಹೇಳಿದ ಹಾಗಾಯಿತು. ನೂರು ಜನರಿರುವ ಒಂದು ಕುಟುಂಬ ಇಷ್ಟು ಜಮೀನಿನಲ್ಲಿ ಜೀವನ ಮಾಡುವುದಕ್ಕೆ ಸಾಧ್ಯವೇ? ಈ ಕುಟುಂಬ ಹಿಡುವಳಿಯ ಸೀಲಿಂಗನ್ನು ಬದಲುಮಾಡಿ, ಆ ಕುಟುಂಬಕ್ಕೆ ಎಷ್ಟು ಸಾಗುವಳಿ ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನೂ ಇಟ್ಟುಕೊಳ್ಳುವುದಕ್ಕೆ ಅವಕಾಶವಿರಬೇಕು.

ಬಂಜರು ಇರತಕ್ಕಂಥ ಜಮೀನಿಗೆ ಪರಿಹಾರ ಕೊಡಕೂಡದು. ಬಂಜರು ಬಿಟ್ಟಿರುವ ಮನುಷ್ಯ ದೇಶಕ್ಕೆ ಎಷ್ಟು ದ್ರೋಹ ಮಾಡಿದ್ದಾನೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಗ್ರೋ ಮೋರ್ ಫುಡ್ ಸ್ಕೀಮಿನಲ್ಲಿ ಜಮೀನಿನಲ್ಲಿ ಸರ್ಕಾರದಿಂದ ಜಮೀನು ಕೊಟ್ಟು ಹೆಚ್ಚು ಆಹಾರ ಉತ್ಪಾದನೆ ತೆಗೆದುಕೊಂಡು ಅದನ್ನು ಫಲವತ್ತಾಗಿ ಮಾಡದೆ, ದೊಡ್ಡ ದೊಡ್ಡ ಜಮೀನ್ದಾರನು ಹಾಳು ಜಮೀನು ಬಿಟ್ಟು ದ್ರೋಹ ಮಾಡಿದವನಿಗೆ ಪರಿಹಾರ ಕೊಡಬೇಕು ಎನ್ನುವುದು ಸರಿಯಲ್ಲ. ದೇಶಕ್ಕೆ ಆಹಾರ ಬೆಳೆಯುವ ಜಮೀನನ್ನು ಬಂಜರು ಬಿಟ್ಟರೆ, ಸರ್ಕಾರದವರು ಅದನ್ನು ಯೋಗ್ಯ ರೀತಿಯಿಂದ ಸಾಗುವಳಿ ಮಾಡುವವರಿಗೆ ಪರಿಹಾರವಿಲ್ಲದೆಯೇ ಹಂಚಿಕೊಡಬೇಕು. ಆದ್ದರಿಂದ ಅಂಥಾ ಬಂಜರು ಭೂಮಿಯನ್ನು ಸರ್ಕಾರದವರು ಪರಿಹಾರವಿಲ್ಲದೆಯೇ ಸ್ವಾಧೀನಪಡಿಸಿಕೊಳ್ಳಬೇಕೆಂದು ನಾನು ಅಪೇಕ್ಷಿಸುತ್ತೇನೆ.

ಇನ್ನು ಹತ್ತು ಮೈಲಿ ಪ್ರದೇಶದಲ್ಲಿ ಒಬ್ಬ ರೈತ ವ್ಯವಸಾಯಮಾಡುವುದಕ್ಕೆ ಅವಕಾಶವಿದೆ ಎಂದು ಹೇಳಿದ್ದೀರಿ. ಹತ್ತು ಮೈಲಿ, 20 ಮೈಲಿ ಪ್ರದೇಶ ಸಾಗುವಳಿ ಮಾಡುವುದಾದರೆ ಅಂತಹವರು ಸ್ವತಃ ಸಾಗುವಳಿ ಮಾಡತಕ್ಕವರೇ ಎಂದು ಪ್ರಶ್ನೆ ಹಾಕುತ್ತೇನೆ. ಸಾಗುವಳಿ ಮಾಡುವುದು ಎಂದರೆ ಒರಿ ಆಫೀಸಿಗೆ ಹೋಗಿ ಒಂದು ಕಾಗದ, ಒಂದು ಪುಸ್ತಕ, ಒಂದು ಪೆನ್ನು ತೆಗೆದುಕೊಂಡು ಬರೆಯುತ್ತಾ ಕೂಡುವ ಉದ್ಯಮವಲ್ಲ. ಸಾಗುವಳಿ ಮಾಡಬೇಕಾದರೆ ತಾನು, ತನ್ನ ಕುಟುಂಬ, ಮಕ್ಕಳು ಮರಿ ಆದಿಯಾಗಿ, ಹಗಲು, ರಾತ್ರಿ, ಮಳೆ ಬಿಸಿಲು ಯಾವುದನ್ನೂ ಲಕ್ಷಿಸದೆ ಶ್ರಮವಹಿಸಿ ದುಡಿಯತಕ್ಕ ಶಕ್ತಿ ಇರಬೇಕು. ಆ ರೀತಿ ಶಕ್ತಿ ಇದ್ದರೆ ಸ್ವತಃ ಸಾಗುವಳಿ ಮಾಡಲು ಅವಕಾಶವಿರುತ್ತದೆ. ಅಂತಹದರಲ್ಲಿ ಹತ್ತು ಮೈಲಿ ದೂರ ವ್ಯವಸಾಯ ಮಾಡುತ್ತೇನೆ ಎಂದು ಹೇಳುವುದಾದರೆ ಅದು ಅಸಾಧ್ಯವಾದ ಮಾತು. ಇಷ್ಟು ಫಾಸಲೆ ವ್ಯವಸಾಯ ಮಾಡುವುದಕ್ಕೆ ಅವಕಾಶವಿರಬೇಕೆಂದರೆ ಆ ಪ್ರಾಂತದಲ್ಲಿ ಇನ್ನಾರೂ ಜಮೀನು ಸಾಗುವಳಿ ಮಾಡತಕ್ಕ ಮನುಷ್ಯರೇ ಇಲ್ಲವೇ ಹಾಗಾದರೆ? ಅವರ ಗತಿ ಏನಾಗುತ್ತದೆ? ಅವರು ಎಲ್ಲಗೆ ಹೋಗಬೇಕು? ಆದ್ದರಿಂದ ಆಯಾ ಪ್ರದೇಶದಲ್ಲಿರತಕ್ಕ ಜನರಿಗೆ ಹೆಚ್ಚಿನ ಒಂದು ಸಾಗುವಳಿ ಮಾಡತಕ್ಕ

ಅವಕಾಶವಿರಬೇಕು. ಜಮೀನ್ದಾರರು ಒಂದು ವೇಳೆ ಜಮೀನು ಕೊಡದೇ ಹೋದರೆ ಅವನು ಮಾಡುತ್ತಾ ಇದ್ದ ಜಮೀನನ್ನು ಕೈಬಿಡಬೇಕಾಗುತ್ತದೆ. ಅವನಗತಿ ಏನಾಗಬಹುದು ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು. ಆದ್ದರಿಂದ ಗೇಣಿ ಸಾಗುವಳಿ ಮಾಡತಕ್ಕವರಿಗೆ, ಬೇರೆ ಜಮೀನು ಇಲ್ಲ ಎನ್ನುವ ದೃಷ್ಟಿಯಿಂದ ಅವರು ಮಾಡುತ್ತಾ ಇರತಕ್ಕ ಜಮೀನನ್ನು ಅವರ ಕೈ ತಪ್ಪಿಸಲು ಅವಕಾಶವಿರಬಾರದು ಎಂದು ತಮ್ಮಲ್ಲಿ ಸೂಚಿಸುತ್ತೇನೆ.

ಇನ್ನು ಯಾವ ಕಾರಣದಿಂದಲೇ ಆಗಲೀ 1952 ರಿಂದ ಇಲ್ಲಿಯವರೆಗೂ ರೈತರಿಗೆ ತಾವು ಮಾಡುತ್ತಿದ್ದ ಜಮೀನು ಕೈತಪ್ಪಿ ನಿರ್ಗತಿಕರಾಗಿದ್ದರೆ ಅಂತಹವರಿಗೆ ಅವರ ಜಮೀನನ್ನು ವಾಪಸ್ಸು ಕೊಡಿಸಬೇಕೆಂದು ತಮ್ಮಲ್ಲಿ ಬೇಡಿಕೊಳ್ಳುತ್ತೇನೆ. ಏಕೆಂದರೆ ಈ ಜಮೀನು ಸಾಧಾರಣವಾಗಿ ಸಮಿತಿ ಶಿಫಾರಸ್ಸಿನ ಮೇಲೆ ಜಮೀನಿನ ಒಂದು ಸುಧಾರಣೆ ಆಗತಕ್ಕ ಸಂದರ್ಭದಲ್ಲಿ ಸರ್ಕಾರದವರು ಜಮೀನನ್ನು ಸ್ವಾಧೀನಪಡಿಸಿಕೊಳ್ಳುತ್ತಾರೆ ಎಂಬ ಕಾರಣದಿಂದ, ರೈತರನ್ನು ಜಮೀನ್ದಾರರು ಗೇಣಿ ಕೊಟ್ಟಿಲ್ಲ ಎಂದೋ ಅಥವಾ ಇನ್ನಾವುದೋ ಹಣ ಕೊಟ್ಟಿಲ್ಲ ಎಂದೋ ಅಥವಾ ಹೇಳಿದ ಪ್ರಕಾರ ನಡೆದುಕೊಂಡಿಲ್ಲ ಎಂದೋ ಹೀಗೆ ನಾನಾ ಕಾರಣಗಳಿಂದ ಗೇಣೀದಾರನಿಂದ ಜಮೀನು ಕೈತಪ್ಪಿಸಿ ತಮ್ಮ ಸ್ವಾಧೀನಪಡಿಸಿಕೊಂಡಿರುವುದು ಈ ಐದಾರು ವರ್ಷಗಳಲ್ಲಿ ತಮ್ಮ ಗಮನಕ್ಕೆ ಬಂದಿರಬಹುದು. ಕೋರ್ಟಿನಲ್ಲೂ ಕೂಡ ಅಂತಹ ಕೇಸುಗಳು ಇವೆ. ಈ ಕಾರಣದಿಂದ ಯಾರಾದರೂ ರೈತರು ನಿರ್ಗತಿಕರಾಗಿದ್ದ ಸಂದರ್ಭದಲ್ಲಿ ಅಂತಹವರಿಗೆ ಜಮೀನನ್ನು ವಾಪಸ್ಸು ಕೊಡಿಸಿ ರಕ್ಷಣೆ ಮಾಡತಕ್ಕ ಜವಾಬ್ದಾರಿಯನ್ನು ಸರ್ಕಾರದವರು ವಹಿಸಿಕೊಳ್ಳಬೇಕು. ಏಕೆಂದರೆ ನಾನು ಮುಂಚೆ ಹೇಳಿದಹಾಗೆ ಜಮೀನ್‌ದಾರನಿಗೆ ಯಾವುದೋ ಒಂದು ಪರಿಹಾರ ಸಿಕ್ಕುತ್ತದೆ, ಹಣ ಸಿಕ್ಕುತ್ತದೆ. ಗೇಣೀದಾರರಿಗೆ ಏನೂ ಸಿಕ್ಕುವುದಿಲ್ಲ; ಅವರು ನಿರ್ಗತಿಕರಾಗುತ್ತಾರೆ. ಅವರಿಗೆ ಹಣವೂ ಸಿಕ್ಕುವುದಿಲ್ಲ. ಸರ್ಕಾರದವರು ದೇಶದಲ್ಲಿ ಗೇಣೀದಾರರ ಕಡೆಗೂ ಇರಬೇಕು, ಜಮೀನ್‌ದಾರರ ಕಡೆಗೂ ಇರಬೇಕು. ಎಲ್ಲ ಪ್ರಜೆಗಳನ್ನು ರಕ್ಷಣೆಮಾಡತಕ್ಕ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಆದ್ದರಿಂದ ಗೇಣೀದಾರರ ವಿಷಯದಲ್ಲಿ ಒಂದು ಸರಿಯಾದ ವ್ಯವಸ್ಥೆ ಮಾಡಬೇಕು ಎನ್ನತಕ್ಕ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು. 1952 ರಿಂದ ಈಚೆಗೆ ಯಾರು ಯಾರು ಜಮೀನು ಕೈತಪ್ಪಿ ಹೋಗಿ ನಿರ್ಗತಿಕರಾಗಿದ್ದಾರೆ ಅವರಿಗೆ, ಪುನಃ ಜಮೀನು ಕೊಡತಕ್ಕ ಕಾರ್ಯವನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಆಮೇಲೆ ಜಮೀನು ಸಾಗುವಳಿ ಮಾಡುವವನದೇ, ಜಮೀನಿಗೆ ಅವನೇ ಮಾಲೀಕ ಎಂದದಾದ ಪಕ್ಷದಲ್ಲಿ, ಜಮೀನು ನನ್ನದು ಎಂಬ ಅಭಿಮಾನದಿಂದ, ದೇಶದ ಹಿತದೃಷ್ಟಿಯಿಂದ ಹೆಚ್ಚು ಶ್ರಮಪಟ್ಟು ಹೆಚ್ಚು ಉತ್ಪನ್ನ ಮಾಡತಕ್ಕ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತಾನೆ ಎಂದು ಅಭಿಪ್ರಾಯಪಟ್ಟಿದ್ದಾರೆ. ತಾವು ನಿರೀಕ್ಷಿಸಿದ ಮಟ್ಟದಲ್ಲಿ ಆಹಾರ ಉತ್ಪನ್ನಮಾಡುವುದಕ್ಕೆ ಪ್ರತಿಯೊಬ್ಬ ರೈತನೂ ಪಣತೊಟ್ಟುಕೊಳ್ಳುತ್ತಾನೆ ಎಂದು ನಾನು ಹೇಳುತ್ತೇನೆ. ಇನ್ನು ಮುಂದೆ ಜಮೀನ್‌ದಾರರಾಗಲೀ, ರೈತರಾಗಲೀ ಅವರು ಎಷ್ಟು ಕ್ಷೇತ್ರವನ್ನು ಅವಲಂಬಿಸಿಕೊಂಡು ಸ್ವತಃ ವ್ಯವಸಾಯವಮಾಡುತ್ತಾರೆಯೋ ಅದಕ್ಕೆ ತಕ್ಕಂತೆ ಒಂದು ಪರಿಮಿತಿಯನ್ನು ಇಡುವುದು ಸೂಕ್ತ ಎಂದು ಸಲಹೆ ಮಾಡುತ್ತೇನೆ. ದೇಶದಲ್ಲಿ ಎಷ್ಟೋ ಬಂಜರು ಜಮೀನು ಇರಲಿ ಯಾರ ಹಿಡುವಳಿಯಲ್ಲೇ ಇರಲಿ ವ್ಯವಸಾಯಕ್ಕೆ ಯೋಗ್ಯವಾಗಿದ್ದರೆ ಆ ಬಂಜರು ಜಮೀನನ್ನು ಮೊದಲು ಸರ್ಕಾರದವರು ಸರಿಪಡಿಸಿಕೊಂಡು ಅದನ್ನು ಯೋಗ್ಯ ರೀತಿಯಲ್ಲಿ ಸಾಗುವಳಿ ಮಾಡತಕ್ಕ ನಿಗೆ ಕೊಡಬೇಕೆಂದು ಸಲಹೆಮಾಡುತ್ತೇನೆ. ಈ ಮಾತನ್ನು ಆಗಲೆ ಹೇಳಿದ್ದೇನೆ. ಇನ್ನು ಮುಂದೆ ಜಮೀನು ಬೇರೆ ಯಾವರೀತಿಯಲ್ಲೂ ಬಿಕರಿ ಆಗಲಿಕ್ಕೆ ಅವಕಾಶಕೊಡದೆ ಸರ್ಕಾರದವರೆ ಆ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಆ ಮೇಲೆ ಈ ಭೂಸುಧಾರಣೆಗೆ ಸಂಬಂಧಿಸಿದ ಕಾಯಿದೆ ಪರಿಣಾಮಕಾರಿಯಾಗಿ ಜನಗಳಿಗೆ ಉಪಯೋಗವಾಗಬೇಕಾದರೆ ಆ ಯಾ ಗ್ರಾಮಪಂಚಾಯಿತಿಯ ಗ್ರಾಮದ ಮುಖಂಡರು, ರೆವಿನ್ಯೂ ಅಧಿಕಾರಿಗಳು ಯಾವ ತಕರಾರೂ ತಂಟೆಗಳೂ ಬಾರದೇ ಇರತಕ್ಕ ರೀತಿಯಲ್ಲಿ ನೋಡಿಕೊಳ್ಳತಕ್ಕದ್ದು ಬಹಳ ಅವಶ್ಯಕ ಎಂದು ನಾನು ಸಲಹೆ ಮಾಡುತ್ತೇನೆ. ಈ ಎಲ್ಲಾ ಕಾರಣಗಳಿಂದಲೂ ಕೂಡ ರೈತರಿಗೆ ಅನುವುಮಾಡಿಕೊಡುವುದಕ್ಕೆ ಪ್ರತಿಗ್ರಾಮದ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಆಯಾ ಗ್ರಾಮದ ಪ್ರತಿನಿಧಿಗಳನ್ನೊಳಗೊಂಡ ಒಂದು ಸಲಹಾಸಮಿತಿಯನ್ನು ಸ್ಥಾಪನೆಮಾಡಿ ಆ ಮೂಲಕ ರೈತನಿಗೆ ಅಲ್ಲಿ ಜಾರಿಯಲ್ಲಿರತಕ್ಕ ಪ್ರತಿಯೊಂದು ಕಾಯಿದೆ, ಕಾನೂನುಗಳ ಸೌಲಭ್ಯವನ್ನೂ ನೇರವಾಗಿ ಒದಗಿಸತಕ್ಕ ಅವಕಾಶವನ್ನು ಒದಗಿಸಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರು ಇಷ್ಟು ಮಾತ ನಾಡುವುದಕ್ಕೆ ಅವಕಾಶಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ)—ಮಾನ್ಯ ಅಧ್ಯಕ್ಷರೆ, ಶ್ರೀಯುತ ಜತ್ತಿ ಸಮಿತಿಯವರ ಭೂಸುಧಾರಣೆ ವ್ಯವಸ್ಥೆಯ ಬಗ್ಗೆ ಚರ್ಚೆನಡೆಯುತ್ತಿರುವ ಈ ಸಂದರ್ಭದಲ್ಲಿ ನಾನೂ ಕೆಲವು ಸಂಗತಿಗಳನ್ನು ಮತ್ತು ಸೂಚನೆಗಳನ್ನು ಹೇಳಬೇಕೆಂದು ನಿಂತಿದ್ದೇನೆ.

ಈ ಸಮಿತಿಯು ರಚನೆಯಾಗುವಾಗ ಇದರಲ್ಲಿ ಇಬ್ಬರು ಹೆಂಗಸರನ್ನು ಸೇರಿಸಿದ್ದರೆ ಚೆನ್ನಾಗಿತ್ತೆಂದು ನನ್ನ ಅಭಿಪ್ರಾಯ. ಅವರೂ ತಮ್ಮ ಪಂಗಡದ ಬಗ್ಗೆ ತಮಗೆ ತಿಳಿದ ಸೂಚನೆಗಳನ್ನು ಕೊಡುತ್ತಿದ್ದರು ಎಂದು ಕಾಣುತ್ತದೆ.

ವ್ಯವಸಾಯ ಬರಿಯ ನಮ್ಮ ಮಾನ್ಯ ಬೋರಣ್ಣಗೌಡರು ಹೇಳಿದಂತೆ, ನೇಗಿಲು ಹಿಡಿದು ಉಳುವವರಿಂದಲೇ ನಡೆದು ಹೋಗುವುದಿಲ್ಲ. ಮುಂದೆ ನೇಗಿಲು ಹಿಡಿದು ಹೋದರೆ, ಹಿಂದೆ ಜೋಳ ಬಿಡುವ ಹೆಣ್ಣುಮಕ್ಕಳು ಬೇಕಾಗುತ್ತಾರೆ, ಪೈರು ನಾಟಿಹಾಕುವ ಹೆಣ್ಣುಮಕ್ಕಳು ಬೇಕಾಗುತ್ತಾರೆ, ಕಳೆ ಕೀಳತಕ್ಕ, ಕುಯ್ಯಲು ಕುಯ್ಯತಕ್ಕ, ಹೆಣ್ಣುಮಕ್ಕಳಿಲ್ಲದಿದ್ದರೆ ವ್ಯವಸಾಯದ ಶೇಕಡ 75 ರಷ್ಟು ಕೆಲಸ ನಿಂತುಹೋಗುತ್ತದೆ. ಇಂತಹ ಹೆಣ್ಣುಮಕ್ಕಳ ಅಭಿಪ್ರಾಯವನ್ನೇ ಕೇಳದೆ ಅವರನ್ನು ನಿರ್ಲಕ್ಷಿಸಿ ತಮಗೆ ಹೇಗೆ ಬೇಕೋ ಹಾಗೆ ಸಮಿತಿಯವರು ಅಭಿಪ್ರಾಯ ತಿಳಿಸಿರುವುದು ಬಹಳ ಅವಸರದ ಕೆಲಸ ಎಂದು ನನ್ನ ಭಾವನೆ.

ಕಾರ್ಖಾನೆ ಮತ್ತು ಕೈಗಾರಿಕಾ ಉದ್ಯಮಗಳು, ಹೇಗೆ ಷೇರ್ ಹೋಲ್ಡರ್‌ಗಳ, ಡೈರೆಕ್ಟರುಗಳ, ಮ್ಯಾನೇಜ್‌ಮೆಂಟಿನವರ ಮತ್ತು ಕೂಲಿಯವರುಗಳ ಪರಸ್ಪರ ಸಂಬಂಧದಿಂದ ನಡೆಯುತ್ತಿರುತ್ತವೆಯೋ ಹಾಗೆ ವ್ಯವಸಾಯವೂ ಮಾಲೀಕರು, ಗೇಣಿದಾರರು, ಮತ್ತು ಕೂಲಿಕೆಲಸಗಾರರು ಇವರುಗಳ ಮಿಳಿತ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಉದ್ಯಮದಿಂದ ನಡೆಯುವುದೆಂದು ಅರಿತುಕೊಳ್ಳಲು ಸಮಿತಿಯವರು ಈ ಬಗ್ಗೆ ಜಾಸ್ತಿ ನಿಗಾ ಕೊಟ್ಟಂತೆ ನನಗೆ ಅನಿಸುವುದಿಲ್ಲ.

3 P.M.

ಶ್ರೀಯುತ ಬೋರಣ್ಣಗೌಡರು ಗುತ್ತಿಗೆದಾರರ ಚಿತ್ರವನ್ನು ಬಹಳ ವಿಚಿತ್ರ ರೀತಿಯಲ್ಲಿ ನಮ್ಮ ಎದುರಿಗೆ ಬಣ್ಣಿಸಿದರು. ಅವರುಗಳಿಗೆ ಬೆಳೆದ ಬೆಳೆಯಲ್ಲ ಹುಲ್ಲನ್ನು ಮಾತ್ರ ಬಿಟ್ಟುಕೊಡುವರೆಂದೂ, 50 ರೂಪಾಯಿ ಕಾಗದ ಬರೆಯಿಸಿಕೊಳ್ಳುವರೆಂದೂ ಹೇಳಿದರು. ಇದು ನಿಜವಾಗಿ ನನಗೆ ಬಹಳ ಆಶ್ಚರ್ಯವನ್ನುಂಟುಮಾಡಿದೆ. ಬಹುಶಃ ಅವರ ಊರಿನ ಕಡೆ ಎಲ್ಲಯಾದರೂ ಇಂಥಾ ವ್ಯವಹಾರ ಇರಬಹುದು, ಮತ್ತು ಅವರ ಅನುಭವಕ್ಕೆ ಬಂದಿರಬಹುದು. ಆದರೆ ನಮ್ಮ ಕಡೆಯಂತೂ ಮಾಲೀಕರು, ಗುತ್ತಿಗೆದಾರರು ಮತ್ತು ಕೆಲಸದ ಆಳುಗಳು ಇವರೆಲ್ಲರೂ ಸೇರಿಕೊಂಡು ಒಂದು ಒಗ್ಗಟ್ಟಾಗಿರುವ ಕುಟುಂಬದಂತೆ ಇರುವುದು ಪದ್ಧತಿ ಮತ್ತು ಅಭ್ಯಾಸ. ಅನ್ಯಾಯ ಮಾಡುವುದಿಲ್ಲ. ಬೇಕಾದರೆ ಅವರು ನಮ್ಮ ಹಳ್ಳಿಗಳಿಗೆ ಬಂದು ನೋಡಬಹುದು. ಗುತ್ತಿಗೆದಾರರ ಮನೆಯಲ್ಲಿ ಖಾಯಿಲೆಬಂದರೆ ಅದರ ಇಲಾಜಿನಬಗ್ಗೆ ವ್ಯವಸ್ಥೆಮಾಡುವುದು, ಅವರ ಮನೆಯಲ್ಲಿ ಮಕ್ಕಳು ಹುಟ್ಟಿದರೆ ಬಾಣಂತಿತನಕ್ಕೆ ಏರ್ಪಾಡು ಮಾಡುವುದು, ಮದುವೆಯಾದರೆ ಅದಕ್ಕೆ ಅನುಕೂಲಮಾಡಿಕೊಡುವುದು—ಇದೆಲ್ಲಾ ನಮ್ಮ ಕಡೆ ಇರತಕ್ಕ ಜಮೀನುದಾರರಿಗೆ ಸರ್ವೇಸಾಮಾನ್ಯವಾಗಿದೆ. ಜಮೀನುದಾರರು ಇಂಥ ಸಂದರ್ಭದಲ್ಲ ಅನೇಕವೇಳೆ ತಮ್ಮ ರೈತರ ಹಿತರಕ್ಷಣೆ ಮಾಡುತ್ತಾರೆ. ಇಷ್ಟೆಲ್ಲಾ ನಡೆಯುತ್ತಿರುವುದು ಮತ್ತು ಮಾಡುತ್ತಿರುವುದು ಏನೋ ಒಂದು ಕಾನೂನಿನ ಒತ್ತಾಯದಿಂದಲ್ಲ ಅಥವಾ ಇನ್ನೊಬ್ಬರ ಭಯದಿಂದಲ್ಲ. ಭೂಮಾಲಿಕ ಮತ್ತು ರೈತರ ಮಧುರ ಬಾಂಧವ್ಯದಿಂದ, ಆ ಬಾಂಧವ್ಯದ ಆತ್ಮೀಯತೆಯಿಂದ ಇಷ್ಟೆಲ್ಲಾ ನಡೆಯುತ್ತಿದೆಯೇ ಹೊರತು ಬೇರೆ ಯಾವ ಕಾರಣದಿಂದಲೂ ಅಲ್ಲ.

ಈಗ ಈ ಜತ್ತಿ ಸಮಿತಿಯ ವರದಿಯ ಅಭಿಪ್ರಾಯದ ಪ್ರಕಾರ ಈ ಬಾಂಧವ್ಯವೆಲ್ಲ ಒಂದೂ ಬೇಕಿಲ್ಲ. ಅವರು ಬೇರೆಯಾಗಬೇಕು. ಅವರೇ ಭೂಮಾಲೀಕರಾಗಬೇಕು! ಜಮೀನುದಾರರೇ ಬೇರೆ ಇರಬೇಕು ಎಂದು ಶುರುಮಾಡಿ ಕೆಲವು ಜನರುಗಳಮಟ್ಟಿಗೆ ಅಂದರೆ ಕೆಲವು ಮಟ್ಟದ ಮಾಲೀಕರುಗಳಿಗೆ ಸಹಾಯಮಾಡಲು ಗೇಣಿದಾರರೂ ಇರಬೇಕೆಂದೂ ಅಭಿಪ್ರಾಯಪಟ್ಟಿದ್ದಾರೆ. ಇವರ ಪೈಕಿ ಹೆಂಗಸರು, ಮೈನರ್ ಮಕ್ಕಳು, ಮಾನಸಿಕ ಶಕ್ತಿ ಇಲ್ಲದ ದುರ್ಬಲರು ಮತ್ತು Army ಯಲ್ಲಿ ಕೆಲಸಮಾಡುವವರು ಇವರುಗಳು ತಾವೇ ಹೋಗಿ ವ್ಯವಸಾಯ ಮಾಡಲು ಶಕ್ಯವಿಲ್ಲದ್ದರಿಂದ ಇವರುಗಳು ತಮ್ಮ ಜಮೀನನ್ನು ಗೇಣಿಗೆಕೊಟ್ಟು ಜೀವಿಸಬಹುದೆಂಬ ಒಂದು ಸಲಹೆಯನ್ನು ಸಮಿತಿಯವರು ಕೊಟ್ಟಿದ್ದಾರೆ.

ಈ ಸಮಿತಿಯ ವರದಿಯ ಪ್ರಕಾರ ಖುಷ್ಕೀ ಜಮೀನಿನಲ್ಲಿ ಐದನೆಯ ಒಂದು ಭಾಗವೂ, ತರೀ ಜಮೀನಿನಲ್ಲಿ ಕಾಲು ಭಾಗವೂ ಗೇಣಿಪಡೆಯತಕ್ಕದ್ದೆಂದೂ, ಕಂದಾಯ ವಗೈರೆ ಖರ್ಚೆಲ್ಲ ಭೂಮಾಲೀಕನು ಹೊರತಕ್ಕದ್ದೆಂದೂ ಹೇಳುತ್ತಿದ್ದಾರೆ. ಆದರೆ ಗೇಣಿದಾರರಿಗೆ ಮಾತ್ರ ಅವರು ಇಂಥಾ ಜಮೀನುಗಳಿಗೆ ಇಂತಿಷ್ಟೇ ಗೊಬ್ಬರ ಹಾಕಬೇಕು, ಉತ್ತಮವಾದ ಬಿತ್ತನೆಯನ್ನು ಉಪಯೋಗಿಸಬೇಕು ಮತ್ತು ಸುಧಾರಿಸಿದ ರೀತಿಯಲ್ಲಿಯೇ ವ್ಯವಸಾಯ ಕ್ರಮ ಜರುಗಿಸಿ, ತರೀ ಜಮೀನಿನಲ್ಲಿ ಜಪಾನ್ ಮಾದರಿ ಭತ್ತ ನಾಟಿಯನ್ನೇ ಹಾಕಬೇಕು ಎನ್ನುವ ನಿಬಂಧನೆಯನ್ನೇನೂ ಮಾಡಿಲ್ಲ. ಗೇಣಿಗೆ ತೆಗೆದುಕೊಂಡಿರುವ ರೈತರು ತಮ್ಮ ಇಷ್ಟ ಪ್ರಕಾರ ವ್ಯವಸಾಯಮಾಡಿ, ತಮಗೆ ಸುಲಭ ಕ್ರಯಕ್ಕೆ ಸಿಕ್ಕಿದ ಕಾಳನ್ನು ಬಿತ್ತನೆ ಹಾಕಿ, ಕಾಲಕ್ಕೆ ಸರಿಯಾಗಿಯೋ ಅಥವಾ ತಮಗೆ ಖುಷಿ ಬಂದಾಗ, ನಾಟಿ ಹಾಕಿ ಎಕರೆಗೆ ಎಂಟು ಪಲ್ಲ ಭತ್ತ ಬಂತೆಂದು ಹೇಳಿದ ಮಾತನ್ನು ನಂಬಿಕೊಂಡು ಜಮೀನು ಮಾಲೀಕರು ಅದರಲ್ಲಿ ಎರಡು ಪಲ್ಲ ತಂದು, ಅದರ ಪೈಕಿ ಸರಕಾರಕ್ಕೆ ಅರ್ಧ ಮಾರಿ, ಕಂದಾಯಕಟ್ಟಿ, ಬಾಕಿ ಉಳಿದದ್ದರಲ್ಲಿ ಸುಖವಾಗಿ ಜೀವನ ನಡೆಯಿಸಬೇಕೆಂದು ಉದಾರವಾಗಿ ಸೂಚಿಸಿರುವುದು ಕಂಡುಬರುತ್ತಿದೆ. ಗುತ್ತಿಗೆ ಕೊಟ್ಟಿರುವವರಾದರೋ, ಮೊದಲೇ ಹೆಣ್ಣುಮಕ್ಕಳು ಇಲ್ಲದಿದ್ದರೆ ದುರ್ಬಲರು, ಅವರೂ ಅಲ್ಲದಿದ್ದರೆ ಚಿಕ್ಕ ಚಿಕ್ಕ minor ಮಕ್ಕಳು, ಗೇಣಿದಾರ ಏನು ಮಾಡಿದ! ಹೇಗೆ ಬೆಳೆದ! ಎಷ್ಟು ಬಂತು! ಇದನ್ನೆಲ್ಲಾ ನೋಡಲು ಅಸಮರ್ಥರಾದವರು. ಇವರಿಗೆ ನಮ್ಮ ಜತ್ತಿ ಸಮಿತಿಯವರಿಂದ, ದುರ್ಬಲರು ಕೈಯಲ್ಲಿ ಸಾಗದವರು, ಅಯ್ಯೋ ಪಾಪ ಎನ್ನುವ ಸಹಾನುಭೂತಿಯೊಡನೆ, ಇಷ್ಟು ಅನುಕೂಲವಾಗಿ ಜೀವನ ಸಾಗಿಸುವ ಸಲಹೆ!

ಇದರ ಮೇಲೆ ಎಲ್ಲಿ ಜಮೀನು ಇದೆಯೋ ಅಲ್ಲೇಹೋಗಿ ಕಾಲು ಭಾಗವೋ ಐದನೆಯ ಒಂದು ಭಾಗವೋ ಅಳಸಿಕೊಂಡು ರಶೀತಿ ಕೊಟ್ಟು ಬರಬೇಕೆಂಬ ಸಲಹೆ. ಇದರಿಂದ ಹೆಣ್ಣುಮಕ್ಕಳಿಗೆ ಎಷ್ಟು ಉಪಕಾರವಾದಂತಾಯಿತೋ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಇನ್ನು ಎರಡನೆಯದಾಗಿ ಜತ್ತಿ ಸಮಿತಿಯ ವರದಿಯಲ್ಲಿ ಜಾಸ್ತಿ ಜಮೀನು ಇರುವವರಿಂದ ಕಿತ್ತುಕೊಂಡು ಜಮೀನು ಇಲ್ಲದವರಿಗೆ ಹಂಚಬಹುದು ಎಂದು ಹೇಳಿದೆ. ಆದರೆ ಈ ಜಮೀನುದಾರರುಗಳು ತಮ್ಮ ಭೂಮಿಯನ್ನು ಉತ್ತಮಪಡಿಸಲು, ಮಗಳ ಮದುವೆಗೋ ಅಥವಾ ಬೇರೆ ಯಾವ ತಾಪತ್ರಯಕ್ಕಾದರೂ ಆ ಜಮೀನುಗಳ ಮೇಲೆ ಸಾಲ ಮಾಡಿದಪಕ್ಷದಲ್ಲಿ, ಆ ಸಾಲ ತೀರಿಸಿ ಅನಂತರ ಏನಾದರೂ ಅವರ ಜಮೀನಿಗೆ ಪರಿಹಾರ ಕೊಡುತ್ತಾರೋ ಏನೋ ತಿಳಿಯಲಿಲ್ಲ. ಏಕೆಂದರೆ ಆ ಜಮೀನುದಾರನು ಸಾಲ ಮಾಡುವಾಗ ತಾನು ಕಷ್ಟಪಟ್ಟು ಸಂಪಾದಿಸಿ, ಸಾಲ ತೀರಿಸಿ, ಆಸ್ತಿ ಉಳಿಸಿಕೊಳ್ಳುವ ನಂಬಿಕೆ ಮತ್ತು ಭರವಸೆಯಿಂದ ತನ್ನ ತಾತ್ಕಾಲಿಕ ತಾಪತ್ರಯಕ್ಕೆ ಸಾಲ ತಂದಿರುತ್ತಾನೆ. ಈಗ ಅವನ ಆಸ್ತಿಯೇ ಅಪಹಾರವಾಗುವ ಸಂದರ್ಭದಲ್ಲಿ ಅವನ ಮುಂದಿನ ಜೀವನ ಮತ್ತು ಅವನ ಸಂಸಾರ ನಿರ್ವಹಣೆ ಹೇಗೆ ನಡೆಯಬೇಕೋ ಒಂದೂ ಅರ್ಥವಾಗುತ್ತಿಲ್ಲ. ಆಮೇಲೆ ಜತ್ತಿ ಸಮಿತಿಯವರ ಶಿಫಾರಸಿನ ಫಲವಾಗಿ ಸುಖವಾಗಿ ಗುತ್ತಿಗೆ ಮಾಡಿಕೊಂಡು ಜೀವಿಸುತ್ತಿದ್ದ ಒಬ್ಬ ಗೇಣಿದಾರ ಒಂದು ಕುಟುಂಬ ಹಿಡುವಳಿಯ ಮಾಲೀಕನಾಗಿಬಿಡುತ್ತಾನೆ ಎನ್ನೋಣ. ಅವನು, ಅವನ ಹೆಂಡತಿ, ಅವನ ನಾಲ್ಕು ಚಿಕ್ಕ ಮಕ್ಕಳು ಎಲ್ಲರೂ ಸೇರಿ ಸರಕಾರಕ್ಕೆ ಕಂದಾಯದ ಜೊತೆಗೆ ಜಮೀನುದಾರನಿಗೆ ಕೊಡತಕ್ಕ ಕಂತು ಮತ್ತು ಬಡ್ಡಿ, ಎತ್ತುಗಳ ಬಾಬತು ಅಲ್ಪಾವಧಿ ಸಾಲದ ಕಂತು, ಬಿತ್ತನೆ, ಗೊಬ್ಬರದ ಬಾಬತು ಕೊಡತಕ್ಕ ಸೊಸೈಟಿ ಕಂತು, ಇಷ್ಟೆಲ್ಲ ಕಟ್ಟಿ ಐದಾರು ಜನರ ಸಂಸಾರದ ಊಟ, ಬಟ್ಟೆ, ರೋಗರುಜಿನದ ಖರ್ಚೆಲ್ಲಾ ಕಳೆದು ಕಷ್ಟಮಾಡಿ ಎರಡೋ ಮೂರೋ ಕಂತು ಕಟ್ಟಿದ್ದವನಿಗೆ, ಅಕಸ್ಮಾತ್ ಏನೋ

ಬರಬಾರದ್ದು ಬಂದು, ಅವನು ಸತ್ತು ಹೋದರೆ, ಅವಾಗ ದಿಕ್ಕಿಲ್ಲದ ಆ ಸಂಸಾರದ ಗತಿ ಏನು ! ಹೆಂಡತಿಯ ಮೇಲೆ ಬಿದ್ದ ಇಷ್ಟೆಲ್ಲ ಸಾಲದ ಹೊರೆ ಹೇಗೆ ತೀರಿಸಬೇಕು ? ಆ ಅನಾಥ ಹೆಣ್ಣುಮಗಳು ಈ ಆಸ್ತಿ ಕಾಪಾಡಿಕೊಳ್ಳುವುದು ಹೇಗೆ ! ಮಕ್ಕಳನ್ನು ಸಾಕುವುದು ಹೇಗೆ ! ಒಂದು ವೇಳೆ ಅವಳು ಗುತ್ತಿಗೆಗೆ ಕೊಟ್ಟರೆ ಅವಳಿಗೆ ಬರುವ ಕಾಲು ಭಾಗ ಅಥವಾ ಐದನೆಯ ಒಂದು ಭಾಗದಲ್ಲಿ ಅವಳು ಏನು ಮಾಡಬಹುದು ! ಇದು ಆ ಸಂಸಾರದ ಚಿತ್ರವಾಯಿತು.

ಆ ಗುತ್ತಿಗೆದಾರನಿಗೆ ಜಮೀನು ಕೊಡಿಸಿಕೊಟ್ಟ ಸರಕಾರ ಜಮೀನಿನ ಕಂದಾಯವನ್ನೇ ವಜಾ ಮಾಡುವುದೇ ! ಇಲ್ಲವೆ ಜಮೀನುದಾರನಿಗೆ ಕಂತು ಕೊಡುವುದೇ, ಇಲ್ಲವೆ ಬಡ್ಡಿಯನ್ನೇ ಕೊಡುವುದೇ ? ಆಗ ಸರಕಾರದ ಕರ್ತವ್ಯವೇನು ! ಪಟ್ಟಣದಲ್ಲಿ ಲಕ್ಷಾಂತರ ರೂಪಾಯಿ ಬೆಲೆಬಾಳುವ ಬಂಗ್ಲೆಗಳನ್ನೋ, ಅಂಗಡಿಗಳನ್ನೋ ಕಟ್ಟಿಕೊಂಡು ಬಾಡಿಗೆಗೆ ಕೊಟ್ಟುಕೊಂಡು, ಕುಳಿತಿರದೆ ಬ್ಯಾಂಕಿನಲ್ಲಿ ಷೇರುಗಳನ್ನು ಕೊಂಡು ಕುಳಿತಿರದೆ, ಪೆಟ್ರೋಲ್ ಬಂಕ್‌ಗಳನ್ನು ಹಾಕಿಕೊಳ್ಳದೆ ಅವರ ಅಪ್ಪ ಮತ್ತು ಹಿರಿಯರುಗಳು ಇಂಜಿನಿಯರ್ ಆಗಿಯೋ, ಲಾಯರಾಗಿಯೋ, ಡಾಕ್ಟರಾಗಿಯೋ ಸರಕಾರಿ ಅಧಿಕಾರಿಯಾಗಿಯೋ ಆಗಲು ಅವಕಾಶ ಕೊಡದೆ ಇದ್ದುದರಿಂದ ಇದ್ದ ಹಾಳುಪಾಳು ಭೂಮಿಯನ್ನೆಲ್ಲಾ ಆಬಾದುಮಾಡಿ ಅದಕ್ಕೆ ಸಾವಿರಾರು ರೂಪಾಯಿ ಖರ್ಚುಮಾಡಿ, ಅದನ್ನು ಸಾಗುವಳಿ ಮಾಡಿಸಿ ಅದರ ಫಲವನ್ನು ಅನುಭವಿಸುತ್ತಿರುವ ಆ ಜಮೀನುದಾರನ ಗತಿ ಏನು ! ಅವನಿಗೆ ಎಷ್ಟು ಬುದ್ಧಿ ಇದ್ದರೂ ಬಂಡವಾಳವಿಲ್ಲದ್ದರಿಂದ ಇವರು ಕೊಡುವ ಕಂತು ಮತ್ತು ಬಡ್ಡಿ ಇವುಗಳನ್ನು ನಂಬಿಕೊಂಡು ಅವನು ಜಪ ಮಾಡುತ್ತ ಕುಳಿತಿರುವಾಗ ಹೀಗೆ ಅಕಸ್ಮಾತ್ ಅನಾಹುತ ಆಗಿಹೋದರೆ ಅವನಿಗೆ ಇದರಿಂದ ಪರಿಹಾರ ದೊರಕಿಸಿಕೊಡುವ ಬಗೆ ಹೇಗೆ !

ಇನ್ನು ನಾಲ್ಕನೆಯದಾಗಿ ನಮ್ಮ ದೇಶದಲ್ಲಿ ಬಹಳ ಮಂದಿ ರೈತರಿದ್ದಾರೆ. ಅವರಿಗೆಲ್ಲ ಜಮೀನು ಬೇಕು ನಿಜ. ಇಲ್ಲದೇ ಇರುವ ಸಾಮಾನು ಯಾರಿಗೆ ಬೇಡ ! ಬಾಡಿಗೆ ಮನೆಯಲ್ಲಿರುವವನಿಗೆ ನೀನೇ ಮನೆ ತೆಗೆದುಕೋ ಎಂದರೆ ಬೇಡ ಅನ್ನುವನೇ ? ಕಾರು ಇಲ್ಲದವನಿಗೆ ಈ ಕಾರು ನೀನೇ ತೆಗೆದುಕೋ ಎಂದರೆ ಬೇಡ ಎನ್ನುವನೇ ! ಬ್ಯಾಂಕಿನಲ್ಲಿರುವ cash ನನಗೆ ಬೇಡ ನೀನೇ ಇಟ್ಟುಕೋ ಅಂದರೆ ಯಾರಾದರೂ ಬೇಡ ಅನ್ನುವರೇ ! ಕಡೆಗೆ ಮಂತ್ರಿತ್ವ ನನಗೆ ಬೇಡ ನೀವು ತೆಗೆದುಕೊಳ್ಳಿ ಎಂದರೆ ಇನ್ನೊಬ್ಬರು ಬೇಡ ಎನ್ನುವರೇ! ಇದು ಎಂತಹ ವಿಚಿತ್ರ ಪ್ರಶ್ನೆ ! ಎಲ್ಲರಿಗೂ ಜಮೀನಿನ ದಾಹ ಬಂದಿದೆ. ಅದನ್ನು ಹಂಚಿ ದಾಹ ತೀರಿಸಬೇಕು ಎನ್ನುವುದು ಶುದ್ಧ ಅವಸರದ ನಿರ್ಧಾರ. ಇದರ ಸಾಧಕ ಬಾಧಕಗಳನ್ನು ಸ್ವಲ್ಪವೂ ಯೋಚಿಸಿದಂತೆ ಕಾಣುತ್ತಿಲ್ಲ. ಸಮಿತಿಯವರು ಹೀಗೆ ಹಂಚುವುದರಿಂದ ಆಹಾರಧಾನ್ಯ ಉತ್ಪತ್ತಿ ಬಹಳ ಜಾಸ್ತಿಯಾಗುವುದೆಂದು ಒಂದು ಸುಂದರ ಸ್ವಪ್ನ ಕಾಣುತ್ತಿರುವಂತಿದೆ. ಭೂಮಿಯು ಸಣ್ಣ ಸಣ್ಣ ಹಿಡುವಳಿಯಿಂದ ಭಿನ್ನ ಭಿನ್ನವಾಗಿ rotation of cropsಗೂ ಮಾರ್ಗವಿಲ್ಲದೆ ಅವನು ಬೆಳೆದದ್ದು ಅವನಿಗೆ ತಿನ್ನುವುದಕ್ಕೇ ಆಗಬೇಕಾಗಿರುವುದರಿಂದ ಬಾಕಿ ಬೆಳೆ ಇಡಲು ಸಹ ಅವನಿಗೆ ಅವಕಾಶವಾಗದೆ ಭೂಮಿಯ ಸತ್ವವೆಲ್ಲ ಕಡಮೆಯಾಗಿ, ಉತ್ಪತ್ತಿಯೂ ಇಲ್ಲದೆ, ಏನೂ ಇಲ್ಲದೆ, ಭೂಮಿ ಬರಡಾಗಿ ನಿಲ್ಲಲು ಮಾರ್ಗವಾಗುತ್ತದೆ.

ಇನ್ನು ಮುಂದೆ ಕೆಲವು ಜಮೀನುಗಳ ವಿನಾಯಿತಿಯ ಬಗ್ಗೆ ಜತ್ತಿ ಸಮಿತಿಯವರು ಶಿಫಾರಸು ಮಾಡುತ್ತಾ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಟ್ರಸ್ಟ್ ಮತ್ತು ಮತ ಸಂಬಂಧವಾದ ಮತ್ತು ಧರ್ಮಾರ್ಥ ಸಂಬಂಧವಾದ ಟ್ರಸ್ಟುಗಳ ಗೇಣಿದಾರರುಗಳ ವಿಚಾರದಲ್ಲೂ ಬಾಕಿ ಜಮೀನುದಾರರ ಜಮೀನು ಅಪಹರಣದ ರೀತಿಯಲ್ಲಿಯೇ ಅದೂ ಸಹ ಆಗಬೇಕೆಂಬು ಹೇಳಿದ್ದಾರೆ. ಸಾರ್ವಜನಿಕರು ತಮ್ಮ ಹಿರಿಯರ ಆತ್ಮ ತೃಪ್ತಿಗಾಗಿಯೂ ತಮ್ಮ ಮನಸ್ಸಿನ ಶಾಂತಿಗಾಗಿಯೂ ಇಂಥ ಸಂಸ್ಥೆಗಳಿಗೆ ದಾನಧರ್ಮ ಮಾಡಿದರೆ ಸಾರ್ವತ್ರಿಕವಾಗಿ ತಲೆತಲಾಂತರದವರೆಗೂ ನಾವು ಮಾಡಿದ ಧರ್ಮ ಸಾಂಗವಾಗಿ ನಡೆಯುವುದೆಂಬ ಭಕ್ತಿ ಮತ್ತು ನಂಬಿಕೆಯಿಂದ ಈ ಸಂಸ್ಥೆಗಳಿಗೆ ಜಮೀನು ಧಾರೆ ಎರೆದಿರುತ್ತಾರೆ. ಮತ್ತು ಹಾಗೆಯೇ ಈ ಸಂಸ್ಥೆಗಳಿಂದ ಎಷ್ಟೋ ಜನ ವಿದ್ಯಾವಂತರಾಗಿ, ನೀತಿವಂತರಾಗಿ, ಬುದ್ಧಿವಂತರಾಗಿ ದೇಶ ಸೇವೆ ಮಾಡುತ್ತಿರುತ್ತಾರೆ. ಶ್ರೀ ಜತ್ತಿ ಸಮಿತಿಯವರು ಇದರ ಪ್ರಸ್ತಾಪಕ್ಕೇ ಹೋಗದಿದ್ದರೆ ಬಹಳ ಚೆನ್ನಾಗಿತ್ತು ಎಂದು ಅನಿಸುತ್ತದೆ.

ಆಮೇಲೆ ಒಂದು ಕುಟುಂಬಕ್ಕೆ ಪರಮಾವಧಿ ಪ್ರಮಾಣದ ವ್ಯಾಪ್ತಿಯಿಂದ ರಿಯಾಯತಿ ಕೊಡುವ ವ್ಯವಸಾಯ ಕ್ಷೇತ್ರದ ಬಗ್ಗೆ ಮಾತನಾಡುತ್ತಾ ಟೀ, ಕಾಫಿ, ರಬ್ಬರ್, ಹಣ್ಣಿನ ತೋಟ ಮುಂತಾದುವುಗಳನ್ನು ಆ ಪಟ್ಟಿಗೆ ಸೇರಿಸಿದ ಮೇಲೆ ಅಡಿಕೆ ತೋಟ ಮತ್ತು ತೆಂಗಿನ ತೋಟಗಳನ್ನು ಅದರಲ್ಲಿ ಏಕೆ ಸೇರಿಸಿಲ್ಲ ಎಂದು ಪ್ರಶ್ನೆ ಮಾಡಬೇಕಾಗಿದೆ. ಐದು ವರ್ಷಗಳಿಗೆ ಬೆಳೆ ಕೊಡುವ ಕಾಫಿತೋಟಕ್ಕೆ ವಿನಾಯಿತಿಯುಂಟು, ಮೂರು ವರ್ಷಗಳಿಗೆ ಫಲಕ್ಕೆ ಬರುವ ದ್ರಾಕ್ಷಿ ತೋಟಕ್ಕೆ ವಿನಾಯಿತಿ ಉಂಟು, 10-12 ವರ್ಷಗಳಿಗೆ ಫಲಕ್ಕೆ ಬರುವ ತೆಂಗು ಮತ್ತು ಅಡಿಕೆ ತೋಟಗಳಿಗಿಲ್ಲ ಎಂದರೆ ಆ ಅದು ಸಮಿತಿಯವರ ದೂರದರ್ಶಿತ್ವವನ್ನು ಚೆನ್ನಾಗಿ ವ್ಯಕ್ತಪಡಿಸುತ್ತದೆ. ಬಹುಶಃ ತೆಂಗು ಮತ್ತು ಅಡಿಕೆ ತೋಟಗಳನ್ನು ಏಳಿಸುವುದು ಬಹಳ ಸುಲಭದ ಕೆಲಸವೆಂದು ಅವರು ಭಾವಿಸಿದಂತಿದೆ.

ಶ್ರೀಮಾನ್ ಶ್ರೀನಿವಾಸಶೆಟ್ಟರು ತೆಂಗಿನ ತೋಟಕ್ಕೆ ವಿನಾಯಿತಿ ಕೊಟ್ಟರೆ ತಮ್ಮ ಊರೆಲ್ಲ ತೆಂಗಿನ ತೋಟವೇ ಆದೀತೆಂದರು. ಆ ರೀತಿಯ ಒಂದು ಭಯವಿದೆ ಎಂದು ಹೇಳಿದರು. ನಾನು ಅವರನ್ನು ಕೇಳುವುದಾದರೂ ಇಷ್ಟೆ. ಎಷ್ಟು ಜನ ಎಷ್ಟು ಎಕರೆಗಳಲ್ಲಿ ತೆಂಗಿನ ಸಸಿಗಳನ್ನು ನೆಟ್ಟು 10-12 ವರ್ಷಗಳ ವರೆಗೆ ಆ ಜಮೀನಿನಲ್ಲಿ ಬೇರೆ ಪ್ರತಿಫಲವೇ ಇಲ್ಲದೆ ಆ ಸಸಿಗಳನ್ನು ಕಾಪಾಡಲು ಶಕ್ತಿಯುಳ್ಳವರಿದ್ದಾರೆ ! ಹಾಗೆ ಇದ್ದು ತೆಂಗಿನ ಸಸಿ ಎದ್ದರೆ ದೇಶಕ್ಕೇನಾದರೂ ನಷ್ಟವೆ ! ಅಥವಾ ಹಾನಿಯೆ ! ಸರ್ಕಾರಕ್ಕೆ ಇದರಿಂದ ಯಾವ ತರಹ ನಷ್ಟವಾಗುತ್ತದೆ ! ತೆರಿಗೆ ಬರುವುದಿಲ್ಲವೆ ! ಮಾನ್ಯ ಸದಸ್ಯರು ಇರುವ ಕಡೆ ತೆಂಗಿನ ಬೆಳೆ ಏಕೆ ಹೆಚ್ಚಬಾರದು ! ಇದನ್ನೇಕೆ ಸೇರಿಸಿಲ್ಲ ಎಂಬುದನ್ನು ಹೇಳುತ್ತಾರೆಂದು ನಂಬಿದ್ದೇನೆ.

ಕೊನೆಯದಾಗಿ ಈ ವರದಿಯನ್ನನುಸರಿಸಿ ರಚಿಸಲಿರುವ ಶಾಸನವನ್ನು ಕಾರ್ಯಗತಮಾಡಲು ನೇಮಿಸುವ ಸಿಬ್ಬಂದಿಯ ಬಗ್ಗೆ ಸೂಕ್ಷ್ಮವಾಗಿ ಹೇಳಬೇಕಾದರೆ ಇದೆಲ್ಲಾ ಸನ್ಯಾಸಿಯು ಬೆಕ್ಕನ್ನು ಸಾಕಿದ ಹಾಗಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಷ್ಟು ಹೇಳಿ ಇದು ಬಹಳ ಅವಸರದಲ್ಲಿ ತಯಾರಿಸಿರುವ ವರದಿ, ಇದರಿಂದ ದೇಶ ಮುಳುಗಿಹೋಗುವ ಪರಿಸ್ಥಿತಿಯಿದೆ, ಇದರಲ್ಲಿ ನ್ಯೂನತೆಗಳು ಬಹಳವಾಗಿವೆ; ಒಂದು ವೇಳೆ ಲ್ಯಾಂಡ್ ರಿಫಾರಂ ಮಾಡಲೇಬೇಕಾಗಿದ್ದರೆ ಮೊದಲು ಒಂದು ಸ್ಕೀಮು ತಯಾರು ಮಾಡಿ, ಹಣ ಎಲ್ಲಿಂದ ಹೇಗೆ ಒದಗಿಸಬೇಕೋ ಅದಕ್ಕೆ ತಕ್ಕ ಏರ್ಪಾಡು ಮಾಡಿಕೊಂಡು,

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಜಮೀನುದಾರರಿಂದ ತೆಗೆದು ಕೊಳ್ಳುವ ಜಮೀನಿಗೆ ಮಾರ್ಕೆಟ್ ವ್ಯಾಲ್ಯೂ ಪ್ರಕಾರ ಹಣ ಕೊಟ್ಟು, ಸರ್ಕಾರ ಜಮೀನನ್ನು ವಹಿಸಿಕೊಂಡು ರೈತರಿಗೆ ಸಹಾಯ ಮಾಡಲಿ; ಬೇಕಾದರೆ ಜಮೀನಿನ ಹಂಚಿಕೆ ಬೊಂಬಾಯಿ ಪ್ರದೇಶದಿಂದಲೇ ಶುರುವಾಗಲಿ ಎಂದು ಹೇಳುತ್ತೇನೆ. ಇಂಪೀರಿಯಲ್ ಬ್ಯಾಂಕ್ ಷೇರ್ ಹೋಲ್ಡರುಗಳಿಗೆಲ್ಲಾ ಪ್ರೆಸೆಂಟ್ ಮಾರ್ಕೆಟ್ ರೇಟಿನಂತೆ ಹಣ ಕೊಡಲಿಲ್ಲವೆ? ಜಮೀನುದಾರರು ಮಾಡಿರುವ ಪಾಪವಾದರೂ ಏನು? ಅವರ ಆಸ್ತಿಯ ಅಪಹರಣ ವೇಕೆ?

ಸಮಿತಿಯು ಹೆಣ್ಣು ಮಕ್ಕಳಿಗೂ, ಮೈನರ್ ಮಕ್ಕಳಿಗೂ, ದುರ್ಬಲಸ್ಥರು ಮುಂತಾದವರಿಗೂ ಉಪಕಾರ ಮಾಡಬೇಕೆಂದಿದ್ದರೆ, ಅದು ನಿಜವಾಗಿಯೂ ಸರ್ಕಾರದ ಅತಿ ಜವಾಬ್ದಾರಿಯುತ ಕೆಲಸವೆಂದು ತಿಳಿದುಕೊಂಡಿದ್ದರೆ, ಅವರಿಗೆ ಗೇಣಿಯ ¼ ಭಾಗ, 1/5 ಭಾಗ ಎಂದು ನಿಯಮಿಸದೆ ಅವರಿಗೆ ಹೇಗೆಬೇಕೋ ಹಾಗೆಅವರು ಅನುಕೂಲವಾಗುವಂತೆ ಏರ್ಪಾಡುಮಾಡಿಕೊಳ್ಳಲು ಅವಕಾಶ ಕೊಡಿ. ಅವರ ತಂಟೆಗೆ ಹೋಗಬೇಡಿ, ನೀವು ಆ ವಿಚಾರದಲ್ಲಿ ಕೈಹಾಕಿದರೆ, ಅವರು ನಿಮ್ಮ ಸಹಾಯ ಕೋರಿದಿಲ್ಲ, ⅓ ಭಾಗ ಗೇಣಿ ನಿಗದಿ ಮಾಡಿ ಅವರುಗಳು ಕೇಳುವ ಕಡೆಗೆ ದವಸ ತೆಗೆದುಕೊಂಡು ಹೋಗಿ ಕೊಡಬೇಕೆಂದು ಶಿಫಾರಸ್ಸು ಮಾಡಬೇಕೆಂದು ಬಹಳ ವಿನಯ ಪೂರ್ವಕವಾಗಿ ಕೇಳಿಕೊಂಡು, ಇಷ್ಟು ಹೇಳಿ ಈ ವರದಿಯನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

MR. SPEAKER.—The House now rises and will meet after half-an-hour.

The House rose for Lunch at Fifteen Minutes past Three of the Clock and re-ssembled at Forty-five Minutes past Three of the Clock.

[MR. SPEAKER in the Chair]

ಶ್ರೀ ಜಿ. ವೆಂಕಟೇಗೌಡ (ಪಾಳ್ಯಂ).—ಮಾನ್ಯ ಅಧ್ಯಕ್ಷರೇ, ಜತ್ತಿ ಸಮಿತಿಯವರು ಕೊಟ್ಟಿರುವ ವರದಿಯ ಮೇಲೆ ಬಂದಂಥ ಟೀಕೆ ಟಿಪ್ಪಣಿಗಳನ್ನು ನೋಡಿದ್ದೇನೆ. ಅಲ್ಲದೆ ಇದರ ಬಗ್ಗೆ ಮಾತನಾಡಿದವರ ಭಾಷಣಗಳನ್ನೂ ಚೆನ್ನಾಗಿ ಕೇಳಿದ್ದೇನೆ. ಶ್ರೀಮತಿ ನಾಗರತ್ನಮ್ಮನವರು ಬಹಳಅರ್ಥಗರ್ಭಿತವಾಗಿ ಮಾತನಾಡಿದ್ದಾರೆ. ಇದು ಹೀಗೆಯೇ ಮುಂದುವರಿದರೆ ಯಾವ ರೀತಿ ರೈತರ ಜೀವನ ಸುವ್ಯವಸ್ಥಿತವಾಗಿ ಸಾಗಲು ಸಾಧ್ಯ ಎಂಬ ಸಂಶಯವಿದೆ. ಸದಸ್ಯರು ಕೆಲವರು ಮಾತನಾಡಿದಾಗ ಕಂಡುಬಂದ ವಿರೋಧಾಭಾಸವನ್ನು ನೋಡಿದರೆ ಯಾವಯೋಜನೆಯನ್ನು ಸಾಧನೆ ಮಾಡಬೇಕೆಂದಿದೆಯೋ, ಯಾವ ನೀತಿಯನ್ನು ಪ್ರತಿಪಾದಿಸಬೇಕೆಂದಿದೆಯೋ ಅದು ಸಾಧ್ಯವಾಗುವುದಿಲ್ಲ ಎಂದು ಭಾಸವಾಗುತ್ತದೆ. ರಾಜ್ಯಾಂಗ ಶಾಸನದಲ್ಲಿರುವ ಪ್ರಕಾರ ರಾಜಕೀಯ, ಆರ್ಥಿಕ, ಸಾಮಾಜಿಕ ಈ ಮೂರು ಕ್ಷೇತ್ರಗಳಲ್ಲಿಯೂ ಎಲ್ಲರಿಗೂ ಸಮಾನಾವಕಾಶಗಳಿರಬೇಕು, ಅದು ಕಾರ್ಯರೂಪಕ್ಕೆ ಬರಬೇಕು ಎಂದೇನಿದೆಯೋ ಅದಕ್ಕೆ ವ್ಯತಿರಿಕ್ತವಾದಂಥ ಮನೋಭಾವನೆಯನ್ನು ಪ್ರದರ್ಶನ ಮಾಡುತ್ತಿರುವುದು ಬಹಳ ಶೋಚನೀಯವೆಂದು ನನಗನ್ನಿಸುತ್ತದೆ. ಅಲ್ಲಸಲ್ಲದ ಕಾರಣಗಳನ್ನು ಮುಂದುವರಿಸಿ ಈ ಸುಧಾರಣೆಯಾಗದಿರುವ ರೀತಿಯಲ್ಲಿ ಮಾಡುತ್ತಿರುವ ಪ್ರಯತ್ನ ಶೋಚನೀಯವಾಗಿದೆ. ರೈತರಿಗಿರುವ ಕಿರುಕುಳ ತಪ್ಪಿಸಬೇಕಾದ್ದು ನಮ್ಮ ಕರ್ತವ್ಯವಾಗಿರುವಾಗ ಮಾನ್ಯ ಮಿತ್ರರು ಕೊಟ್ಟಿರುವ ಕಾರಣಗಳನ್ನು ನೋಡುವುದಾದರೆ ಯಾವ ಒಂದು ಆಧಾರದಮೇಲೆ ಅವರು ವಾದವನ್ನು ಹೂಡಿದ್ದಾರೆಂಬುದೇ ನನಗಂತೂ ಅರ್ಥವಾಗುವುದಿಲ್ಲ. ಯಾವ ರೀತಿಯ ಬದಲಾವಣೆಯೂ ಭೂ ಸ್ವಾಮ್ಯ ಪದ್ಧತಿಯಲ್ಲಿ ಅಗತ್ಯವಿಲ್ಲವೆಂದು ಹೇಳುವುದು ಬಹಳ ಶೋಚನೀಯ. ಆದರೆ ಜತ್ತಿಸಮಿತಿ ಕೊಟ್ಟಿರುವ ಸೂಚನೆಗಳು ಉತ್ತಮವಾಗಿವೆ. ಉದಾರವಾದ ಪ್ರಗತಿದಾಯಕವಾದ ಸುಧಾರಣೆಗಳು ಜಾರಿಗೆಬರಬೇಕೆಂದು ಮಾಡಿರುವ ಅವರ ಸಲಹೆಗಳು ಯೋಗ್ಯವಾಗಿವೆ ಎಂದು ಹೇಳುವವರು ಕೂಡ ನಮ್ಮಲ್ಲಿದ್ದಾರೆ. ಆದ್ದರಿಂದ ಹೊರಗಡೆಯಿರುವ ರೈತರಿಂದ ತೀವ್ರವಾದ ಚಳುವಳಿ ನಡೆದರೆ ಅದು ಪ್ರಗತಿಪರವಾದ ಸೂಚನೆಯೆಂದು ನಾನು ಅಭಿಪ್ರಾಯಪಡುತ್ತೇನೆ. ಇದನ್ನು ವಿರೋಧಿಸಿದವರು ಕೊಟ್ಟಿರುವ ಕೆಲವು ಕಾರಣಗಳು ಸರಿಯಾಗಿಲ್ಲ. ಈ ರೀತಿ ಭೂಸುಧಾರಣೆಯನ್ನು ಮಾಡುವುದಕ್ಕೆ ಹೊರಟರೆ ಹಿಡುವಳಿಗಳು ಚೂರು ಚೂರಾಗುತ್ತವೆ, ತುಂಡು ತುಂಡಾಗುತ್ತವೆ, ಇದರಿಂದ ರೈತರ ಹಿತಕ್ಕೆ ಧಕ್ಕೆ ಬರುತ್ತದೆ ಎಂದು ವಾದಿಸಿದ್ದಾರೆ. ಆದರೆ ನೂರು ಎಕರೆಯ ಪರಿಮಿತಿಯನ್ನು ಇಡುವುದಾದರೆ, ಅದರ ಮೇಲಿನದನ್ನು ಗೇಣಿದಾರರಿಗೆ ವರ್ಗ ಮಾಡಿದರೆ ಯಾವ ರೀತಿ ತುಂಡುತುಂಡಾಗುತ್ತದೆಯೋ ಅರ್ಥವಾಗುವುದಿಲ್ಲ. ಈಗಿರುವ ಹಿಡುವಳಿಗಳ ಸಂಖ್ಯೆಯನ್ನು ನೋಡಿದರೆ, ಹತ್ತು ಎಕರೆಗಳಿಗಿಂತ ಕಡಮೆ ಇರುವುದು ಸೇಕಡ 69.05 ಎಂದರೆ ಸುಮಾರು ಮೂರನೆಯ ಎರಡು ಭಾಗಕ್ಕಿಂತ ಹೆಚ್ಚಾಗಿದೆ. ಐದು ಎಕರೆಗಳೊಳಗಿರುವುದು ಸೇಕಡ 47.16 ರಷ್ಟಿದೆ. ಹೀಗೆ ಸಣ್ಣ ಹಿಡುವಳಿದಾರರ ಸಂಖ್ಯೆ ಜಾಸ್ತಿ ಇದೆ. ಹೀಗಿರುವಾಗ ನೂರು ಎಕರೆಗಳಿಗಿಂತ ಹೆಚ್ಚಾಗಿಟ್ಟುಕೊಂಡಿರುವವರಿಂದ ಹೆಚ್ಚಿನ ಜಮೀನನ್ನು ಬೇರೆ ಜನರಿಗೆ ವರ್ಗಮಾಡುವುದರಿಂದ ಹೇಗೆ ಚೂರು ಚೂರಾಗುತ್ತದೆಯೋ ಅರ್ಥವಾಗುವುದಿಲ್ಲ. ಹಾಲಿ ಇರುವ ಹಿಡುವಳಿಗಳನ್ನು ನೋಡಿದರೆ, ಹೆಚ್ಚು ಜಮೀನಿರುವವರು ಬೇರೆಯವರಿಗೆ ಹಂಚಿದರೆ ಹಿಡುವಳಿಗಳು ತುಂಡು ತುಂಡಾಗುವುದಿಲ್ಲ.

ಹೀಗೆ ಮಾಡುವುದರಿಂದ ರಾಷ್ಟ್ರದ ಹಿತಕ್ಕೆ ಧಕ್ಕೆ ಬರುತ್ತದೆ; ಉತ್ಪತ್ತಿ ಕಡಮೆಯಾಗುತ್ತದೆ ಎಂದು ಇನ್ನು ಕೆಲವರು ಹೇಳಿದರು. ಅದಕ್ಕೆ ಶ್ರೀ ಮೂಕಪ್ಪನವರು ಉತ್ತರ ಕೊಟ್ಟಿದ್ದಾರೆ. ನೂರು ಎಕರೆಗಳಿಗಿಂತ ಹೆಚ್ಚಿರುವವರಿಂದ ಗೇಣಿದಾರರಿಗೆ ಜಮೀನನ್ನು ವರ್ಗ ಮಾಡುವುದರಿಂದ ಹೆಚ್ಚು ಬೆಳೆಯುವುದಕ್ಕೆ ಸಾಧ್ಯ ಎಂದು ಭರವಸೆ ಕೊಡಬಹುದು. ಒಬ್ಬನು ಗೇಣಿದಾರನಾಗಿ ಒಂದು ಜಮೀನಿನಲ್ಲಿ ಎಷ್ಟು ಬೆಳೆಯನ್ನು ತೆಗೆಯುತ್ತಾನೋ ಅದಕ್ಕಿಂತ ಹೆಚ್ಚಾಗಿ ಅವನು ಮಾಲೀಕನಾದರೆ ಬೆಳೆಯನ್ನು ತೆಗೆಯಲು ಸಾಧ್ಯ. ಹೆಚ್ಚಿನ ಶ್ರದ್ಧೆಯಿಂದ ಕೆಲಸ ಮಾಡುತ್ತಾನೆ; ಹೀಗಿರುವಾಗ ಗೇಣಿದಾರರಿಗೆ ಜಮೀನನ್ನು ವರ್ಗ ಮಾಡುವುದರಿಂದ ಆಹಾರೋತ್ಪತ್ತಿಗೆ ಧಕ್ಕೆ ಬರುತ್ತದೆ; ರಾಷ್ಟ್ರಕ್ಕೆ ಧಕ್ಕೆ ಬರುತ್ತದೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ನೂರು ಎಕರೆಗಳಿಗಿಂತ ಹೆಚ್ಚು ಜಮೀನುಳ್ಳವರು ಸಾವಿ

ರಕ್ಕೆ 56 ಜನರಿದ್ದಾರೆ. ಇಂಥವರಿಂದ ಬೇರೆಯವರಿಗೆ ವರ್ಗಮಾಡುವುದಾದರೆ ರಾಷ್ಟ್ರದ ಹಿತಕ್ಕೆ ಧಕ್ಕೆ ಬರುವುದಿಲ್ಲವೆಂಬುದನ್ನು ಹೇಳಲು ಪ್ರಯತ್ನಿಸುತ್ತಿದ್ದೇನೆ.

ದೇಶದಲ್ಲಿ ಭೂಸುಧಾರಣೆಯಾಗಬೇಕೆಂಬ ಕೂಗನ್ನು 1927ನೆಯ ಇಸವಿಯಿಂದಲೂ ಕೇಳುತ್ತಿದ್ದೇವೆ. 1931, 1932 ಮತ್ತು 1933ನೆಯ ಇಸವಿಗಳಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಗಳಲ್ಲಿ ಇದನ್ನು ಸ್ಪಷ್ಟ ಮಾಡಿದ್ದಾರೆ. 1937 ರಲ್ಲಿ ಕಾಂಗ್ರೆಸ್ ಸರ್ಕಾರಗಳು ಬಂದಾಗ ಯಾವ ಸುಧಾರಣೆಯನ್ನೂ ಮಾಡಲಿಲ್ಲ. 1947 ರಲ್ಲಿ ಶ್ರೀ ಜೆ. ಸಿ. ಕುಮಾರಪ್ಪನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕಮಾಡಿದರು. ಆ ಸಮಿತಿಯವರು ಕೆಲವು ಸಲಹೆಗಳನ್ನು ಕೊಟ್ಟರು. ಅವುಗಳನ್ನು ಎ.ಐ.ಸಿ.ಸಿ. ಒಪ್ಪಲಿಲ್ಲ. ಅವರಲ್ಲಿ ಉಳುವವನಿಗೆ ಆ ಜಮೀನಿನ ಒಡೆತನವಿರಬೇಕು, ಗೇಣಿದಾರನಿಗೆ ಸ್ಥಿರವಾದ ಹಕ್ಕಿರಬೇಕು, ಸುಲಭ ಬೆಲೆಗೆ ಗೇಣಿದಾರನಿಗೆ ಆ ಜಮೀನು ಸಿಕ್ಕುವಹಾಗಿರಬೇಕು ಎಂಬ ಸಲಹೆಗಳನ್ನು ಶ್ರೀ ಜೆ. ಸಿ. ಕುಮಾರಪ್ಪನವರು ಕೊಟ್ಟರು. ಇಷ್ಟಾದರೂ ಕಾಂಗ್ರೆಸ್ ಸಂಸ್ಥೆ ಖಚಿತವಾದ ನಿರ್ಧಾರ ಮಾಡದೆ ಆಯಾ ಸರ್ಕಾರಗಳಿಗೆ ಇಷ್ಟಬಂದರೆ ಅದನ್ನು ಕಾರ್ಯರೂಪಕ್ಕೆ ತರಬಹುದೆಂದು ಅಡ್ಡಗೋಡೆಯ ಮೇಲೆ ದೀಪ ಇಟ್ಟಹಾಗೆ ಮಾಡಿದರು. 1950ನೆಯ ಇಸವಿಯಲ್ಲಿ ಹಿಮಾಚಲ ಪ್ರದೇಶದಲ್ಲಿ ಜಮೀನ್ದಾರರಿಂದ ಹೆಚ್ಚು ಭೂಮಿಯನ್ನು ಗೇಣಿದಾರರಿಗೆ ವರ್ಗ ಮಾಡಬೇಕೆಂದು ಪ್ರಯತ್ನಮಾಡಿದಾಗ ಕೇಂದ್ರ ಸರ್ಕಾರದವರು ಅಡ್ಡಬಂದುದರಿಂದ ಅದು ಯಶಸ್ವಿಯಾಗಲಿಲ್ಲ.

ಈಚೆಗೆ ಇನಾಮ್ ಭೂಮಿಗಳನ್ನು ರದ್ದುಮಾಡಲು ಕಾಯಿದೆ ಮಾಡಿದ್ದಾರೆ. ಇದೂ ತೃಪ್ತಿಕರವಾಗಿಲ್ಲ. ಇನ್ನೂ ಅನೇಕ ಇನಾಮ್‌ಗಳು ರದ್ದಾಗಿಲ್ಲ; ರೈತರಿಗೆ ಹಕ್ಕುಬಂದಿಲ್ಲ. ಹೀಗೆ ಇದು ಅಸಮರ್ಪಕವಾದ ಕಾಯಿದೆ ಆಗಿದೆ. ಇದು ಪ್ರತಿಗಾಮಿ ಕಾಯಿದೆಯಾಗಿದೆಯೇ ವಿನಾ ಪ್ರಗತಿದಾಯಕವಾದ ಕಾಯಿದೆಯಲ್ಲವೆಂಬುದನ್ನು ಹೇಳಲು ಪ್ರಯತ್ನಪಡುತ್ತಿದ್ದೇನೆ. ಈ ಹಿನ್ನೆಲೆಯಲ್ಲಿ ಈ ಜತ್ತಿ ಸಮಿತಿಯ ವರದಿಯನ್ನು ನೋಡಬೇಕು. ಈ ದಿವಸ ಬರಿಯ ಬಡರೈತರಿಗೆ ಒಂದು ಸೌಲಭ್ಯವನ್ನೊದಗಿಸುವ ಒಂದೇ ದೃಷ್ಟಿಯಿಂದ ನೋಡುವ ಪ್ರಶ್ನೆ ಇದಲ್ಲ. ಇದು ಇಡಿಯ ರಾಷ್ಟ್ರದ ಪ್ರಶ್ನೆ. ಭೂಸುಧಾರಣೆಯೆಂದರೆ ಏನೆಂಬುದನ್ನು ತೀವ್ರವಾಗಿ ಆಲೋಚನೆ ಮಾಡಬೇಕಾಗಿದೆ. ಹಳ್ಳಿಗಳಲ್ಲಿ ನಿರುದ್ಯೋಗ ಸಮಸ್ಯೆ ದೊಡ್ಡದಾಗಿ ನಿಂತಿದೆ. ಇದನ್ನು ಸ್ವಲ್ಪಮಟ್ಟಿಗಾದರೂ ಪರಿಹಾರಮಾಡಬೇಕೆಂದರೆ, ಈ ಭೂಸಮಸ್ಯೆ ಅಗತ್ಯವಾಗಿ ಬಗೆಹರಿಯಲೇಬೇಕು.

ಎರಡನೆಯದಾಗಿ, ಹಣದ ಅಭಾವವಿದೆ. ಈ ಹಣದ ಅಭಾವಕ್ಕೆ ಭೂಸಮಸ್ಯೆಯೇ ಕಾರಣ. ಹೇಗೆಂದರೆ, ಅನೇಕರು ಸಾಹುಕಾರರು, ಜಮೀನ್ದಾರರು, ದಳ್ಳಾಳಿಗಳು ಸಣ್ಣ ರೈತರಿಗೆ ಸಾಲ ಕೊಟ್ಟಿದ್ದಾರೆ. ಸುಮಾರು 900 ಕೋಟಿ ರೂಪಾಯಿ ಹೀಗೆ ಸಾಲ ಪಡೆದಿದ್ದಾರೆ, ವರ್ಷಕ್ಕೆ 75 ಕೋಟಿ ರೂಪಾಯಿ ಬಡ್ಡಿ ಕೊಡುತ್ತಾ ಇದ್ದಾರೆ ಎಂದು ತಿಳಿದುಬಂದಿದೆ. ಇದರಲ್ಲಿ ಹೆಚ್ಚು ಪ್ರಮಾಣ ಸಾಲವನ್ನು ಜಮೀನ್ದಾರರಿಂದ ಪಡೆದಿದ್ದಾರೆ. ಅವರಿಗೆ ರೈತರು ಹೆಚ್ಚು ಬಡ್ಡಿ ಕೊಡುತ್ತಿದ್ದಾರೆ. ಇನ್ನು ಮುಂದೆ ರೈತರನ್ನು ಭೂಮಿಯ ಮಾಲೀಕರನ್ನಾಗಿಮಾಡಿ, ಅವರಿಗೆ ಬೇಕಾದ ಹಣವನ್ನು ಸರ್ಕಾರದವರು ಬ್ಯಾಂಕುಗಳ ಮೂಲಕವೂ ಸಹಕಾರ ಸಂಘಗಳ ಮೂಲಕವೂ ಸಾಲವಾಗಿ ಒದಗಿಸಿದರೆ, ಅವರಿಂದ ಬರುವ ಬಡ್ಡಿಯ ಹಣವನ್ನು ಬೇರೆ ಯೋಜನೆಗಳಿಗೆ ಉಪಯೋಗಿಸಬಹುದು. ಈಗಿನ ಪರಿಸ್ಥಿತಿಯನ್ನು ತಪ್ಪಿಸಿ, ಭೂಸ್ವಾಮ್ಯವನ್ನು ಗೇಣಿದಾರರಿಗೆ ಹಚ್ಚಿಸಿದರೆ, ಅಷ್ಟು ಹೆಚ್ಚಿನ ಹಣ ದೊರೆಯುತ್ತದೆ. ಇದು ಯಶಸ್ವಿಯಾದರೆ ಲಕ್ಷಾಂತರ ರೈತರ ಜೀವನದ ಮಟ್ಟ ಮೇಲೆ ಬರುವುದರಲ್ಲಿ ಸಂಶಯವಿಲ್ಲ. ಅಲ್ಲದೆ ದೇಶದ ಮಾರುಕಟ್ಟೆ ಬೆಳೆಯುವುದರಲ್ಲಿಯೂ ಸಂಶಯವಿಲ್ಲ. ವ್ಯವಸಾಯ ಉತ್ತಮವಾಗುತ್ತದಲ್ಲದೆ ಮಿಕ್ಕ ಅನೇಕ ಅನುಕೂಲಗಳೂ ದೊರೆಯುತ್ತವೆಂಬುದನ್ನು ಮರೆಯಬಾರದು. ಈ ಎಲ್ಲ ದೃಷ್ಟಿಯಿಂದ ಈ ಸಮಿತಿಯ ವರದಿಯನ್ನು ಪರಿಶೀಲನೆ ಮಾಡಬೇಕಾಗಿದೆ. ನನ್ನ ಮಟ್ಟಿಗೆ ಹೇಳುವುದಾದರೆ, ಇಡಿಯ ಕನ್ನಡ ದೇಶದ ಜನರೆಲ್ಲರೂ ಈ ವರದಿಯನ್ನು ಒಪ್ಪುವುದಕ್ಕೆ ತಯಾರಾಗಿದ್ದಾರೆಯೇ ಎಂದು ಕೇಳಿದರೆ, ತಯಾರಾಗಿಲ್ಲವೆಂದು ಹೇಳಬೇಕಾಗಿದೆ. ಇದರಲ್ಲಿ ಸ್ವಲ್ಪ ಮಾರ್ಪಾಡಾಗಬೇಕು. ಹೈದರಾಬಾದು ಮತ್ತು ಬೊಂಬಾಯಿ ಭಾಗಗಳಲ್ಲಿ ಗೇಣಿದಾರರಿಗೆ ಏನು ಸೌಲಭ್ಯಗಳು ಸಿಕ್ಕಬೇಕೋ ಅವುಗಳನ್ನು ಕಡಮೆ ಮಾಡಿದ್ದಾರೆ; ಇನ್ನು ಕೆಲವರಿಗೆ ವಿಶೇಷವಾದ ಸೌಲಭ್ಯವನ್ನೊದಗಿಸಿದ್ದಾರೆ. ಆದರೂ ಸಮನ್ವಯಮಾಡುವಾಗ ಉಂಟಾಗುವ ವಾತಾವರಣದಲ್ಲಿ ಸ್ವಲ್ಪ ಮಟ್ಟಿಗೆ ಈ ರೀತಿ ಮಾಡಬೇಕಾದ ಅವಶ್ಯಕತೆ ಬರುತ್ತದೆ. ಈ ದೃಷ್ಟಿಯಿಂದ ಅವರು ಏನು ಸಲಹೆ ಮಾಡಿದ್ದಾರೋ ಅದು ಸರಿ ಎಂದು ಒಪ್ಪಿಕೊಂಡರೂ ಕೂಡ, ಇನ್ನೂ ಕೆಲವು ಮಾರ್ಪಾಡುಗಳನ್ನು ಮಾಡುವುದು ಅಗತ್ಯವೆಂದು ನನಗನಿಸುತ್ತದೆ.

ನಮಗೆ ದೊರಕಿರುವ ಅಂಕಿಅಂಶಗಳನ್ನು ನೋಡಿದರೆ ಹೆಚ್ಚಿನ ಭೂಮಿ ಶ್ರೀಮಂತರ ಕೈಯಲ್ಲಿದೆ ಎಂದು ಅರ್ಥವಾಗುತ್ತದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಮಿತ್ರರು ಇದನ್ನು ವಿರೋಧ ಮಾಡಿದವರು. ಅಳಿಯ ಸಂತಾನದ ಕಾನೂನು ಜಾರಿಯಲ್ಲಿರುವ ಕಡೆ ಈ ರೀತಿ ಭೂಸುಧಾರಣೆಯಾದರೆ ಪರಿಸ್ಥಿತಿ ಬಿಗಡಾಯಿಸುತ್ತದೆ ಎಂದು ವಾದಮಾಡಿದರು. Madras Protection of Cultivating Tenants Act, 1955 as amended in 1956 ಪ್ರಕಾರ ಗೇಣಿದಾರರಿಗೆ ಕೆಲವು ಸೌಲಭ್ಯಗಳಿವೆ. ಜಮೀನ್ದಾರರು ಗೇಣಿದಾರರಿಂದ ಜಮೀನನ್ನು ವಾಪಸು ಪಡೆಯಲು ಅನೇಕ ನಿರ್ಬಂಧಗಳಿವೆ. ಜಮೀನ್ದಾರರು ಐದೆಕರೆ ತರೀ ಜಮೀನು ಅಥವಾ ಹದಿನೈದೆಕರೆಗಿಂತ ಹೆಚ್ಚು ಖುಷ್ಕಿ ಜಮೀನನ್ನು ಹೊಂದಿದ್ದರೆ ಗೇಣಿದಾರರಿಂದ ಜಮೀನನ್ನು ವಾಪಸು ಪಡೆಯುವುದಕ್ಕೆ ಅವರಿಗೆ ಅವಕಾಶವಿಲ್ಲ. ಅಲ್ಲದೆ ವ್ಯಕ್ತಿತರಿಗೆ, ಮಾರಾಟ ತೆರಿಗೆಯನ್ನು ಕೊಡುತ್ತಿದ್ದರೆ ಅಂಥವರಿಗೂ ಜಮೀನನ್ನು ವಾಪಸು ಪಡೆಯಲು ಅವಕಾಶವಿಲ್ಲ. ಇದನ್ನು ಈ ಸಮಿತಿಯವರು ಗಮನಕ್ಕೆ ತೆಗೆದುಕೊಂಡಿಲ್ಲವೆಂದು ಕಾಣುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಇದರಿಂದ ಒಂದು ರಿಯಾಯಿತಿ ದೊರೆಯುತ್ತದೆ. ಅಲ್ಲಿನ ಜಮೀನ್ದಾರರ ಪರಿಸ್ಥಿತಿ ಉತ್ತಮವಾಗಲು ಈ ಸಮಿತಿಯವರು ಅವಕಾಶ ಮಾಡಿದ್ದಾರೆ. ಆದಕಾರಣ ಆ ಜಿಲ್ಲೆಯ ಸದಸ್ಯರು ಈ ವರದಿಯನ್ನು ವಿರೋಧಿಸುವುದಕ್ಕೆ ಬದಲು ಕೃತಜ್ಞರಾಗಿರಬೇಕೆಂದು ನನಗನಿಸುತ್ತದೆ. ಸಮಿತಿಯವರು ಗೇಣಿಯ ಪದ್ಧತಿಯನ್ನು ರದ್ದುಮಾಡಬೇಕೆಂದು ಹೊರಟಿದ್ದರೆ ವಿರೋಧವಿಲ್ಲ, ಆದರೆ ಬರಬರುತ್ತಾ ಸ್ವಂತವಾಗಿ ವ್ಯವಸಾಯ ಮಾಡುವ ಮಾಲೀಕರನ್ನು ಕೂಡ ಗೇಣಿದಾರರಾಗಿ ಮಾಡಬೇಕೆಂದು ಹೊರಟಿದ್ದಾರೆ. ಸ್ವಂತವಾಗಿ ವ್ಯವಸಾಯ ಮಾಡಿದರೆ ಅವರು ಹೆಚ್ಚಿನ ಜಮೀನನ್ನು ಪಡೆಯಬಹುದೆಂದು ಅವಕಾಶ ಮಾಡಿದ್ದಾರೆ.

(ಶ್ರೀ ಜಿ. ವೆಂಕಟೇಗೌಡ)

4 P. M.

ಆದರೆ ಅದಕ್ಕೆ ಕೆಲವು ನಿರ್ಬಂಧಗಳನ್ನು ಹಾಕಿದ್ದಾರೆ. ಹಾಗೆ ಇಲ್ಲಿಯೂ ನಿರ್ಬಂಧಗಳನ್ನು ಹಾಕದೆ ಹೋದರೆ ಅನೇಕ ಗೇಣಿದಾರರು ಉಚ್ಚಾಟನೆಯಾಗುವುದಕ್ಕೆ ಅವಕಾಶವಿದೆ. ಪ್ಲಾನಿಂಗ್ ಕಮಿಷನ್ ಅವರು ಇದೇ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಯಾರು ಬೇಸಾಯ ಮಾಡುತ್ತೇವೆಂದು ಮುಂದೆ ಬರುತ್ತಾರೆಯೋ ಅವರಿಗೆ ಭೂಮಿಯನ್ನು ವಾಪಸ್ಸು ಪಡೆಯಲು ಅಧಿಕಾರವಿದೆ. ಆದರೆ ಹಾಗೆ ಭೂಮಿಯನ್ನು ಪಡೆಯುವವರು ಒಂದು ನಿರ್ದಿಷ್ಟ ಕಾಲದೊಳಗೆ ಬರಬೇಕು ಎನ್ನುವ ಅಭಿಪ್ರಾಯವನ್ನು ಯೋಜನಾ ಸಮಿತಿಯವರು ಕೊಟ್ಟಿದ್ದಾರೆ. ಆದರೆ ಜತ್ತಿ ಸಮಿತಿಯವರು ಆ ಅಭಿಪ್ರಾಯವನ್ನು ವ್ಯಕ್ತಮಾಡದೆ ಇರುವುದು ವಿಷಾದಕರವೆಂದು ಹೇಳುತ್ತೇನೆ. ಹತ್ತು ವರ್ಷದ ಮೇಲೆ ನಾನು ಬೇಸಾಯಮಾಡುತ್ತೇನೆ; ನನ್ನ ಭೂಮಿಯನ್ನು ವಾಪಸು ಕೊಡಿಸಿ ಎಂದು ಬರತಕ್ಕ ಅನೇಕ ಮಹನೀಯರಿರಬಹುದು. ಸ್ವಂತವಾಗಿ ಬೇಸಾಯ ಮಾಡುವುದಕ್ಕೆ ಮುಂದೆ ಬರತಕ್ಕ ಜಮೀನ್ದಾರ ಒಂದು ನಿರ್ದಿಷ್ಟವಾದ ಕಾಲದೊಳಗೆ ಹಾಗೆ ಬರಬೇಕು ಮತ್ತು ಭೂಮಿಯನ್ನು ವಾಪಸು ಪಡೆದ ಒಂದು ವರ್ಷದೊಳಗೆ ವ್ಯವಸಾಯಮಾಡದೆ ಇದ್ದರೆ ಆ ಭೂಮಿಯು ಗೇಣಿದಾರರಿಗೇ ವಾಪಸ್ಸು ಹೋಗಬೇಕು ಎಂದು ಒಂದು ಸಲಹೆ ಈ ವರದಿಯಲ್ಲಿರಬೇಕಾಗಿತ್ತು. ಮದರಾಸ್ ಲ್ಯಾಂಡ್ ರೆವೆನ್ಯೂ ಕಮಿಟಿಯವರು ಸಹ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಜತ್ತಿ ಸಮಿತಿಯ ವರದಿಯಲ್ಲಿ ಇಂಥ ಯಾವ ಷರತ್ತನ್ನೂ ಹಾಕದಿರುವುದು ಸರಿಯಲ್ಲವೆಂದು ಸಲಹೆ ಮಾಡುತ್ತೇನೆ.

ಮುಖ್ಯವಾಗಿ ಒಂದಂಶ ಜತ್ತಿಸಮಿತಿಯ ವರದಿಯಲ್ಲಿದೆ. ಅದು ಪರಿಮಿತಿಯನ್ನು ನಿಶ್ಚಯಿಸತಕ್ಕದ್ದು. ಸಮಿತಿಯವರು ನಾಲ್ಕುವರೆ ಕುಟುಂಬ ಹಿಡುವಳಿಯನ್ನು ಒಂದು ಪರಿಮಿತಿಯಾಗಿ ನಿಶ್ಚಯಿಸಿದ್ದಾರೆ. ಆದರೆ ನಾವು ಈಗ ಮಾಡಲಿಕ್ಕೆ ಹೊರಟಿರತಕ್ಕದ್ದು ಭೂಸುಧಾರಣೆಯನ್ನು ಹೆಚ್ಚಾದ ಭೂಮಿ ಒಬ್ಬನಲ್ಲಿ ಇರಕೂಡದು, ಭೂಮಿ ಇರುವುದಕ್ಕೂ ಒಂದು ಪರಿಮಿತಿ ಇರಬೇಕು ಎನ್ನುವ ಉದ್ದೇಶದಿಂದ ಭೂಸುಧಾರಣೆಯನ್ನು ಮಾಡಲು ಹೊರಟಿದ್ದೇವೆ. ಸಮಿತಿಯವರು ಯಾವುದೋ ಕಾರಣವನ್ನು ಕೊಟ್ಟು ಒಬ್ಬನಿಗೆ ಬರತಕ್ಕ ಆದಾಯದ ಮೇಲೆ ಮಾತ್ರ ಪರಿಮಿತಿಯನ್ನು ನಿಶ್ಚಯಿಸುವುದಕ್ಕೆ ಸಾಧ್ಯವೆಂದು ಹೇಳಿದ್ದಾರೆ. ನಾಲ್ಕೂವರೆ ಕುಟುಂಬ ಹಿಡುವಳಿ ಅಥವಾ 5,400 ರೂಪಾಯಿಗಳಿಗಿಂತ ಹೆಚ್ಚಿಗೆ ಆದಾಯ ಬರತಕ್ಕ ಭೂಮಿಯನ್ನು ಒಬ್ಬ ಭೂಮಾಲೀಕ ಹೊಂದಿರಕೂಡದು; ಅದಕ್ಕಿಂತ ಕಡಮೆ ಆದಾಯ ಬರತಕ್ಕ ಭೂಮಿಯ ವಿಸ್ತೀರ್ಣವನ್ನು ಹೊಂದಿರಬಹುದು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದು ಸಮಂಜಸವಾಗಿಲ್ಲವೆಂದು ನನಗನ್ನಿಸುತ್ತದೆ. ಇವೊತ್ತು ಒಬ್ಬ ರೈತನು ಸುಖವಾಗಿ ಜೀವನ ಮಾಡಲು ಎಷ್ಟು ಆದಾಯ ಬರಬೇಕು, ಎಷ್ಟು ಭೂಮಿಯಿಂದ ಈ ಆದಾಯ ಬರಬಹುದು ಎನ್ನುವ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಅದರ ಆಧಾರದ ಮೇಲೆ ಭೂಹಿಡುವಳಿಯ ಪರಿಮಿತಿಯನ್ನು ಗೊತ್ತುಮಾಡಿದ್ದರೆ ಚೆನ್ನಾಗಿತ್ತು ಎಂದು ನನಗನ್ನಿಸುತ್ತದೆ. ಇವೊತ್ತಿನ ದಿವಸ 5,400 ರೂಪಾಯಿ ಆದಾಯ ಬರತಕ್ಕ ಭೂಮಿ ಒಂದು ಪರಿಮಿತಿ ಎಂದರೆ ವರ್ಷೇವರ್ಷೇ ಅದನ್ನು ಕಂಡುಹಿಡಿಯುವ ಕೆಲಸಕ್ಕೆ ಎಷ್ಟು ಖರ್ಚಾಗುತ್ತದೆ; ಮತ್ತು ಗ್ರಾಮಾಂತರ ಪ್ರದೇಶದ ರೈತರಿಗೆ ಎಷ್ಟು ಕಡ್ಡಾಯವಾದ ಪರಿಸ್ಥಿತಿಯುಂಟಾಗುತ್ತದೆ ಮತ್ತು ಅವರು ಎಷ್ಟು ಶೋಷಣೆಗೆ ಗುರಿಯಾಗುತ್ತಾರೆಂದು ನಾನು ಹೇಳಬೇಕಾಗಿಲ್ಲ. ಪ್ಲಾನಿಂಗ್ ಕಮಿಷನ್ ಅವರು ಚೆನ್ನಾಗಿ ಪರಿಶೀಲನೆಮಾಡಿ ಹೇಳಿರುವುದರಲ್ಲಿಯೂ ಸಹ "It is a ceiling on holding and not a ceiling on income" ಎಂದು ಇದೆ. ಆದುದರಿಂದ ಆದಾಯದ ಮೇಲೆ ಲೆಕ್ಕ ಹಾಕಿ ಒಂದು ಪರಿಮಿತಿಯನ್ನು ನಿರ್ಧರಿಸುವುದು ಸರಿಯಲ್ಲ. 25-30 ಎಕರೆ ಜಮೀನನ್ನು ಒಂದು ಪರಿಮಿತಿಯಾಗಿ ನಿರ್ಧರಮಾಡಿ, ಅದೇ ಭೂಮಿಯಲ್ಲಿ ರೈತನಾದವನು ಕಷ್ಟಪಟ್ಟು ಹತ್ತು ಸಾವಿರ ರೂಪಾಯಿ ಸಂಪಾದನೆ ಮಾಡಿದರೆ ಅದರಿಂದ ತೊಂದರೆ ಏನು! ನಮಗೆ ಬೇಕಾಗಿರುವುದು ಹೆಚ್ಚು ಉತ್ಪಾದನೆ, ಹೆಚ್ಚು ಉತ್ಪಾದನೆ ಬರುವ ಹಾಗೆ ಸರ್ಕಾರದವರು ಏರ್ಪಾಡು ಮಾಡಬೇಕು. 5,400 ರೂಪಾಯಿಗಳಿಗಿಂತ ಮೇಲ್ಪಟ್ಟು ಆದಾಯವಿರಬಾರದೆಂದು ನಿರ್ಬಂಧವನ್ನು ಹಾಕಿದರೆ, ಸ್ವಂತ ವ್ಯವಸಾಯ ಮಾಡುವವನು ಸೋಮಾರಿಯಾಗಿ, 5,400 ರೂಪಾಯಿಗಳ ಪರಿಮಿತಿಗಿಂತ ಹೆಚ್ಚಿಗೆ ಆದಾಯವಿದ್ದರೆ ಹೆಚ್ಚು ಜಮೀನನ್ನು ಬಿಟ್ಟುಬಿಡಬೇಕು ಎನ್ನುವ ಉದ್ದೇಶದಿಂದ ಆತನು ಸರಿಯಾಗಿ ಕೆಲಸವನ್ನೇ ಮಾಡುವುದಿಲ್ಲ. ಇದರ ಪರಿಣಾಮವಾಗಿ ಉತ್ಪನ್ನ ಕಡಮೆಯಾಗಲಿಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆಂದು ನನಗನ್ನಿಸುತ್ತದೆ. ಈ ದೃಷ್ಟಿಯಿಂದ ಹಿಡುವಳಿಯ ಮೇಲೆ ಒಂದು ಪರಿಮಿತಿಯನ್ನು ಹಾಕಬೇಕು. ಯಾವ ಲೆಕ್ಕಾಚಾರದ ಮೇಲೆ ಹಣದ ರೂಪದಲ್ಲಿ ಪರಿಮಿತಿಯನ್ನು ಸೂಚಿಸಿದ್ದಾರೆಯೋ ಅದೇ ಆಧಾರದ ಮೇಲೆ ಉತ್ತಮವಾದ, ಸರಳವಾದ ಜೀವನ ನಡೆಸಲು ಎಷ್ಟು ಆದಾಯ ಬೇಕೋ ಅಷ್ಟುಮಟ್ಟಿನ ಆದಾಯ ಬರತಕ್ಕ ಭೂಮಿ ಇಷ್ಟೇ ಇರಬೇಕು ಎಂದು ಹಿಡುವಳಿಯಮೇಲೆ ಪರಿಮಿತಿಯನ್ನು ಹಾಕಬೇಕು. ಆ ಭೂಮಿಯಲ್ಲಿ ಅವನು 5,400 ರೂಪಾಯಿಗಳಷ್ಟು ಅಲ್ಲದಿದ್ದರೆ 50,000 ರೂಪಾಯಿ ಬೇಕಾದರೂ ಸಂಪಾದನೆ ಮಾಡಲಿ. ಇದರಿಂದ ಹೆಚ್ಚು ಉತ್ಪಾದನೆಯೂ ಆಗುವುದಕ್ಕೆ ಅವಕಾಶವಿದೆ. ಆದುದರಿಂದ ಹಿಡುವಳಿಯ ಮೇಲೆ ಪರಿಮಿತಿಯನ್ನು ಹಾಕಬೇಕೇ ಹೊರತು ಆದಾಯದ ಮೇಲೆ ಪರಿಮಿತಿಯನ್ನು ಹಾಕುವುದರಿಂದ ನಾಡಿನ ಪುರೋಭಿವೃದ್ಧಿಯಾಗಲಾರದೆಂದು ಹೇಳಲಿಕ್ಕೆ ತಯಾರಾಗಿದ್ದೇನೆ. ಇವೊತ್ತಿನ ದಿವಸ 30 ಎಕರೆ ಜಮೀನಿನಲ್ಲಿ 5,400 ರೂಪಾಯಿ ಆದಾಯವಿರಬಹುದು. ಮುಂದಿನ ವರ್ಷ ಎಂಟು ಸಾವಿರ ಆಗಬಹುದು. ಆಗ ಸರ್ಕಾರದವರು, ಮೂರು ಸಾವಿರ ರೂಪಾಯಿ ಹೆಚ್ಚಿಗೆ ಸಂಪಾದನೆ ಮಾಡಿದ್ದಾನೆಂದು, ದಾಮಾಷಾ ಪ್ರಕಾರ ಭೂಮಿಯನ್ನು ಅವರಿಂದ ಕಿತ್ತುಕೊಳ್ಳುತ್ತಾರೆಯೇ? ಇಂಥ ಸಂದರ್ಭಗಳಲ್ಲಿ ಏನು ಮಾಡುತ್ತಾರೆ? ಇಂಥ ಕ್ಲಿಷ್ಟ ಸಮಸ್ಯೆಗಳು ಬರುವುದರಿಂದ ಭೂಹಿಡುವಳಿಯ ಪರಿಮಿತಿಯನ್ನು ನಿಗದಿ ಮಾಡುವುದು ಒಳ್ಳೆಯದು. ಇದಕ್ಕಾಗಿ ಭೂಮಿಯನ್ನು ಮೂರು ಭಾಗಮಾಡಿ, standard acres ಎಂದು ಮಾಡಬೇಕು. Dry land, wet land, bagayat land ಎಂಬ ಮೂರು ಭಾಗಗಳಲ್ಲಿ ಕೂಡ first grade, second grade, third grade ಎಂದು ಮಾಡಿ ಇಂಥಿಂಥಾದ್ದಕ್ಕೆ ಇಷ್ಟಿಷ್ಟು ಪರಿಮಿತಿ ಎಂದು ಭೂಹಿಡುವಳಿಯ ಪರಿಮಿತಿಯನ್ನು ನಿಷ್ಕರ್ಷೆಮಾಡಿದರೆ ಒಳ್ಳೆಯದೆಂದು ಅಭಿಪ್ರಾಯಪಡುತ್ತೇನೆ.

ಐದು ಜನವಿರತಕ್ಕ ಕುಟುಂಬಕ್ಕೆ ನಾಲ್ಕುವರೆ ಕುಟುಂಬ ಹಿಡುವಳಿಗಳು, ಆರು ಜನರಿದ್ದರೆ ಒಂಬತ್ತು ಕುಟುಂಬ ಹಿಡುವಳಿಗಳು ಎನ್ನುವ ತತ್ವ ಸರಿಯಾದ್ದು

ದಲ್ಲವೆಂದು ಹೇಳಲಿಕ್ಕೆ ಆಸೆಪಡುತ್ತೇನೆ. ನಮ್ಮಲ್ಲಿರುವ ಜಮೀನು ಬೇರೆ ಕಡೆಗೆ ಹೋಗುತ್ತದೆಂದರೆ ಆಗ ಐದು ಜನರಿರುವ ಕುಟುಂಬದಲ್ಲಿ ಆರನೆಯವರಾಗಿ ಇನ್ನೊಬ್ಬರನ್ನು ಕರೆದುಕೊಂಡುಬಂದು ಕುಟುಂಬದಲ್ಲಿ ಆರು ಜನರಿದ್ದಾರೆಂದು ಒಂಬತ್ತು ಕುಟುಂಬ ಹಿಡುವಳಿಗಳ ಭೂಮಿಯನ್ನು ಪಡೆಯಲು ಅವಕಾಶವಿದೆ. ಈ ರೀತಿ ಮಾಡುವುದು ನಮ್ಮ ಭೂಮಾಲೀಕರಿಗೇನೂ ಅಸಾಧ್ಯವಲ್ಲ. ಈ ದೃಷ್ಟಿಯಿಂದ ಐದು ಜನರಿರುವ ಕುಟುಂಬಕ್ಕೆ ನಾಲ್ಕೂವರೆ ಕುಟುಂಬ ಹಿಡುವಳಿ ಮತ್ತು ಅದಕ್ಕೆ ಮೇಲ್ಪಟ್ಟು ಒಂದು ಕುಟುಂಬದಲ್ಲಿ ಜನರಿದ್ದರೆ ಜನರು ಹೆಚ್ಚಾದಂತೆಲ್ಲ ಒಬ್ಬೊಬ್ಬರಿಗೆ ಇಷ್ಟಿಷ್ಟು ಪರಿಮಿತಿಯ ಜಮೀನಿರಬೇಕೆಂದು ಗೊತ್ತುಮಾಡುವುದು ಸೂಕ್ತವೆಂದು ನನಗನ್ನಿಸುತ್ತದೆ. ಈಗ ಆದಾಯದಮೇಲೆ ಪರಿಮಿತಿಯನ್ನು ಹಾಕಿರುವುದರಿಂದ ಅದರ ಪರಿಣಾಮ ಎಷ್ಟರಮಟ್ಟಿಗೆ ಆಗುತ್ತದೆ ಎನ್ನುವುದನ್ನು ಕೂಲಂಕಷವಾಗಿ ಪರಿಶೀಲನೆಮಾಡಿಲ್ಲವೆಂದು ಹೇಳಬೇಕಾಗಿದೆ. ಇವೊತ್ತಿನ ದಿವಸ ಒಂದು ಎಕರೆ ಖುಷ್ಕಿ ಭೂಮಿಯನ್ನು ತೆಗೆದುಕೊಂಡು ಅದರಲ್ಲಿ ನಾಲ್ಕು ಪಲ್ಲ ರಾಗಿಯನ್ನು ಬೆಳೆಯಬಹುದು ಎಂದು ಇಟ್ಟುಕೊಂಡರೆ, ಅದರಲ್ಲಿ ಅರ್ಧಭಾಗ ಎಂದರೆ ಎರಡು ಪಲ್ಲ ರಾಗಿ ಖರ್ಚಿಗೆ ಹೋದರೆ ಎರಡು ಪಲ್ಲ ರಾಗಿ ನಿವ್ವಳ ಆದಾಯವೆಂದರೆ ಸುಮಾರು 40 ರೂಪಾಯಿಗಳ ಸಂಪಾದನೆಯಾಗುತ್ತದೆ. ಇದರಂತೆ 5,400 ರೂಪಾಯಿಗಳು ಬರಬೇಕಾದರೆ 135 ಎಕರೆ ಜಮೀನನ್ನು ಸ್ವಂತಸಾಗುವಳಿ ಮಾಡುವ ಭೂಮಾಲಿಕನಿಗೆ ಬಿಟ್ಟುಕೊಡಬೇಕು. ಕುಟುಂಬದಲ್ಲಿ ಆರು ಜನರಿದ್ದರೆ 270 ಎಕರೆ ಜಮೀನನ್ನು ಬಿಟ್ಟುಕೊಡಬೇಕು. ಈ ರೀತಿಯಾಗಿ ಭೂಮಿಯನ್ನು ಬಿಟ್ಟರೆ ಭೂಸುಧಾರಣೆಯನ್ನು ಯಾವ ರೀತಿ ಮಾಡುತ್ತಾರೆ? ಭೂಮಿ ಇಲ್ಲದಿರುವವರಿಗೆ ಯಾವ ರೀತಿ ಹಂಚುತ್ತಾರೆ, ಕಾರ್ಯತಃ ಭೂಸುಧಾರಣೆಯನ್ನು ಜಾರಿಗೆ ತರಬೇಕು ಎಂದು ತಯಾರಿಸಿರತಕ್ಕ ವರದಿಯೇ ಎಂದು ಪ್ರಶ್ನೆಮಾಡಬಯಸುತ್ತೇನೆ. ನಿಜವಾಗಿಯೂ ಹೆಚ್ಚಿನ ಭೂಮಿ ಇಲ್ಲದವರಿಗೆ ಹಂಚಬೇಕು ಎನ್ನುವ ದೃಷ್ಟಿಯಿದ್ದರೆ ಆದಾಯದ ಮೇಲೆ ಪರಿಮಿತಿಯನ್ನು ನಿಶ್ಚಯಮಾಡಲಿಕ್ಕೆ ಹೋಗುವುದು ಸೂಕ್ತವಲ್ಲವೆಂದು ತಮ್ಮಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಕೆಲವರು ಇನ್ನೊಂದು ವಾದವನ್ನು ಹೇಳುತ್ತಾರೆ. ಭೂವ್ಯವಸಾಯಕ್ಷೇತ್ರಕ್ಕೆ ಮಾತ್ರ ಪರಿಮಿತಿಯನ್ನು ಹಾಕಿ ಇನ್ನೊಂದು ಕ್ಷೇತ್ರಕ್ಕೆ ಹಾಕದೆ ಇರುವುದರಿಂದ ರಾಜ್ಯಾಂಗ ಶಾಸನಕ್ಕೆ ವಿರೋಧವಾಗುತ್ತದೆ ಎಂದು ಹೇಳಿದ್ದಾರೆ. ನಮ್ಮ ದೇಶದಲ್ಲಿ ನೂರಕ್ಕೆ ಸುಮಾರು 70 ಜನರು ಬೇಸಾಯದಲ್ಲಿ ನಿರತರಾಗಿದ್ದಾರೆ. ಅವರ ಜೀವನಾಧಾರ ವ್ಯವಸಾಯವಾಗಿದೆ. ಆದುದರಿಂದ ವ್ಯವಸಾಯರಂಗದಲ್ಲಿ ಈ ಪರಿಮಿತಿಯನ್ನು ಮೊದಲು ಮಾಡದೆ ಹೋದರೆ ಇತರ ರಂಗಗಳಲ್ಲಿ ಅದನ್ನು ಪಡೆಯಲಿಕ್ಕೆ ಸಾಧ್ಯವಾಗುವುದಿಲ್ಲ. ಹೆಚ್ಚು ಜನ ವ್ಯವಸಾಯದಲ್ಲಿ ನಿರತರಾಗಿರುವುದರಿಂದ ಮೊದಲು ಈ ಕ್ಷೇತ್ರದಲ್ಲಿ ಪ್ರಾರಂಭಮಾಡಿದರೆ, ಕ್ರಮೇಣ ಇತರ ಕ್ಷೇತ್ರಗಳಿಗೂ ಅದನ್ನು ಅನ್ವಯಿಸಬಹುದು. ಇದು ಒಂದು ಮಾರ್ಗದರ್ಶನವಾಗುತ್ತದೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಈ ದೃಷ್ಟಿಯಲ್ಲಿ ಮತ್ತೊಂದು ವಾದವನ್ನು ಮಾಡುತ್ತಾರೆ. ಅಮೆರಿಕದಲ್ಲಿ ಶೇಕಡ 85 ಜನ ಭೂಮಿಯುಳ್ಳವರಿದ್ದರು. ಇವೊತ್ತಿನ ದಿವಸ ಶೇಕಡ ಒಂಬತ್ತು ಜನರಿದ್ದಾರೆ. ಅಲ್ಲಿ ಭೂಮಿಯ ಒಡೆತನ ಕಡಮೆ ಇದೆ. ನಮ್ಮ ದೇಶದಲ್ಲಿಯೂ ಅದೇ ರೀತಿಯಾಗಿ ಏಕೆ ಇರಬಾರದು ಎಂದು ಅಮೆರಿಕ ದೇಶಕ್ಕೂ ನಮ್ಮ ದೇಶಕ್ಕೂ ಹೋಲಿಕೆ ಮಾಡುತ್ತಾರೆ. ಇದು ನನಗಂತೂ ಅರ್ಥವಾಗಲಿಲ್ಲ. ನಮ್ಮ ದೇಶದ ರೈತನ ಸ್ಥಿತಿಗೂ, ಇಲ್ಲಿನ ವಾತಾವರಣಕ್ಕೂ, ಅಲ್ಲಿಯ ರೈತನ ಸ್ಥಿತಿಗೂ, ಅಲ್ಲಿಯ ವಾತಾವರಣಕ್ಕೂ ಬಹಳ ವ್ಯತ್ಯಾಸವಿದೆ. ರಾಷ್ಟ್ರಪ್ರೇಮದಿಂದ ತಮ್ಮ ದೇಶ ಮುಂದೆ ಬರಬೇಕು, ತಮ್ಮ ರಾಷ್ಟ್ರ ಉದ್ಧಾರವಾಗಬೇಕು ಎನ್ನುವ ಉದ್ದೇಶದಿಂದ ದುಡಿಯುತ್ತ ಇರುವಂಥ ಅಮೆರಿಕದ ಜನರೆಲ್ಲಿ? ನಮ್ಮ ಸಮಾಜದಲ್ಲಿ ಒಬ್ಬನನ್ನು ಸುಲಿಗೆ ಮಾಡಿ ತಾನು ದೊಡ್ಡವನಾಗಬೇಕು ಎಂಬ ಸ್ವಾರ್ಥಪರರಾಗಿರತಕ್ಕ ನಮ್ಮ ದೇಶದ ಜನರೆಲ್ಲಿ? ಇವೆರಡನ್ನೂ ಹೋಲಿಕೆಮಾಡಿ ಒಂದು ವಾದವನ್ನು ಹೂಡತಕ್ಕದ್ದು ಸರಿಯಲ್ಲ. ಅಮೆರಿಕದಲ್ಲಿ ಜನರು ನೂತನ ಪದ್ಧತಿಯನ್ನನುಸರಿಸಿ ಯಂತ್ರೋಪಕರಣಗಳ ಮೂಲಕ ವ್ಯವಸಾಯಮಾಡಿ ಹೆಚ್ಚು ಉತ್ಪಾದನೆಮಾಡುತ್ತಿದ್ದಾರೆ. ಅಂಥ ಒಬ್ಬ ಜಮೀನ್ದಾರರು ನಮ್ಮ ದೇಶದಲ್ಲಿದ್ದಾರೆಯೇ? ಎಂದು ಕೇಳುತ್ತೇನೆ. ರಾಷ್ಟ್ರದ ಉತ್ಪಾದನೆಯನ್ನೂ ಜಾಸ್ತಿಮಾಡಬೇಕೆಂಬ ಉದ್ದೇಶದಿಂದ ಯಾವ ಜಮೀನ್ದಾರ ಕೆಲಸವನ್ನೂ ಕೈಗೊಂಡಿದ್ದಾನೆಂದು ತೋರಿಸಲಿ. ಈಚಿನ ವರ್ಷಗಳಲ್ಲಿ ಜಮೀನ್ದಾರರು ಭೂಮಿಯನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಿದ್ದಾರೆ. ಕಾರಣವೇನೆಂದರೆ ಇತರ ರಂಗಗಳಲ್ಲಿ ಅವರು ದುಡ್ಡನ್ನು ಹಾಕಿದರೆ ಅವರಿಗೆ ನೂರಕ್ಕೆ ಹತ್ತರಂತೆ ಆದಾಯ ಬರುವಾಗ ವ್ಯವಸಾಯೋದ್ಯಮದಲ್ಲಿ ಅದಕ್ಕಿಂತ ಹೆಚ್ಚು ಆದಾಯ ಬರುತ್ತದೆ. ಹೆಚ್ಚು ಹೆಚ್ಚಾಗಿ ಭೂಮಿಯನ್ನು ತೆಗೆದುಕೊಂಡು ಲಾಭಸಂಪಾದನೆ ಮಾಡಬೇಕೆಂಬ ಏಕೈಕ ಉದ್ದೇಶದಿಂದ ಮಾತ್ರ ಕೆಲಸ ಮಾಡುತ್ತಿದ್ದಾರೆಯೇ ಹೊರತು ದುಡಿಯತಕ್ಕವರ ಅಥವಾ ಕೂಲಿಕಾರರ ಉತ್ಪನ್ನವನ್ನು ಜಾಸ್ತಿಮಾಡಬೇಕೆಂಬ ಉದ್ದೇಶದಿಂದ ಯಾರೂ ಕೆಲಸಮಾಡುತ್ತಿಲ್ಲವೆಂದು ಹೇಳಿದರೆ ತಪ್ಪಾಗುವುದಿಲ್ಲ. ಈ ವರ್ಗಕ್ಕೆ ಇರುವ ತೊಂದರೆಗಳನ್ನು ತಪ್ಪಿಸಿ ಅವರಿಗೆ ಬೆಂಬಲ ಕೊಡಬೇಕಾದ್ದು ಸರ್ಕಾರದ ಕರ್ತವ್ಯ. ಇವೊತ್ತಿನ ದಿವಸ ಗ್ರಾಮಾಂತರ ಪ್ರದೇಶದಲ್ಲಿ ಶೇಕಡ 67 ಜನ ರೈತ ಮಾಲೀಕರು (peasant proprietorship) ಆಗಿದ್ದಾರೆ. ಇವರಿಗೆ ಬೆಂಬಲಕೊಟ್ಟು ರೈತರಿಗೆ ರಕ್ಷಣೆ ಕೊಡಬೇಕಾದ್ದು ಸರ್ಕಾರದ ಆದ್ಯ ಕರ್ತವ್ಯವೆಂದು ಹೇಳುತ್ತೇನೆ. ಸಾಧಾರಣವಾಗಿ ರೈತರಿಗೆ ಹೆಚ್ಚಿನ ಭೂಮಿ ವರ್ಗಾಯಿಸಲ್ಪಟ್ಟು, ವ್ಯವಸಾಯೋತ್ಪನ್ನ ಜಾಸ್ತಿಯಾಗುವುದಕ್ಕೆ ಅವಕಾಶ ಮಾಡಿಕೊಡಬೇಕು.

ಈ ಪರಿಹಾರದ ದ್ರವ್ಯವನ್ನು ಸಂರಕ್ಷಿತ ಗೇಣಿದಾರರಿಗೆ ನಿರ್ಧರಿಸುವಾಗ ಗೇಣಿ ಮೊಬಲಗಿನ 15ರಷ್ಟು ಮೊಬಲಗು ಎಂಬುದನ್ನು ಯಾವ ಅಂಕಿಅಂಶಗಳ ಆಧಾರದ ಮೇಲೆ ಸಮಿತಿಯವರು ನಿರ್ಧಾರಕ್ಕೆ ಬಂದರು ಎನ್ನುವುದು ವರದಿಯಿಂದ ಗೊತ್ತಾಗುವುದಿಲ್ಲ. ಈ ಸಲಹೆಯನ್ನು ನೀಡುವಾಗ, ಈ ನಿರ್ಧಾರಕ್ಕೆ ಬಂದ ಕಾರಣಗಳನ್ನು ವರದಿಯಲ್ಲಿ ಕಾಣಿಸಬೇಕಾಗಿತ್ತು. ಏಕೆಂದರೆ ಜಮೀನುದಾರರು ಈ ವಿಚಾರದಲ್ಲಿ ಕೋರ್ಟಿಗೆ ಹೋಗುವ ಸಂಭವವಿದೆ. ಬಿಹಾರ್ ಜಮೀನ್‌ದಾರರು ಸುಪ್ರೀಮ್ ಕೋರ್ಟಿನಲ್ಲಿ ಈ ಪರಿಹಾರದ ವಿಷಯದಲ್ಲಿ ಒಂದು ವ್ಯವಹಾರ ಹೂಡಿದ್ದರು, ನಮ್ಮ ರಾಜ್ಯಾಂಗದ ಶಾಸನದಲ್ಲಿ compensation ಎಂಬ ಮಾತು ಮಾತ್ರ ಇದೆ. ಅಡಿಕ್ವೇಟ್ ಕಾಂಪೆನ್ಸೇಷನ್ ಎಂಬ ಮಾತು ಇಲ್ಲ. ಅಮೇರಿಕನ್ ಕಾನ್ಸ್ಟಿಟ್ಯೂಷನ್‌ನಲ್ಲಿ ಈ ಮಾತುಗಳನ್ನು ಉಪಯೋಗಿಸಿದೆ. ಆರ್ಟಿಕಲ್ 31, ಸಬ್‌ಕ್ಲಾಸ್ (2)ರಲ್ಲಿ, ಕಾಂಪೆನ್ಸೇಷನ್ ಎಂದು ಉಪಯೋಗಿಸಿದೆ. ಎಂತಹ ಕಾಂಪೆನ್ಸೇಷನ್?

(ಶ್ರೀ ಜಿ. ವೆಂಕಟೇಗೌಡ)

ನಾಮಕಾವಾಸ್ತೆ ಪ್ರತಿಫಲಕೊಟ್ಟರೆ ಸಾಕೇ? ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿರುವ ಹಾಗೆ ಒಂದು ರೀಸನಬಲ್ ಕಾಂಪೆನ್ಸೇಷನ್ ಆಗಿರಬೇಕು. ನಾವು ಕೊಡುವ ಪರಿಹಾರದ್ರವ್ಯ ರೀಸನಬಲ್ ಎನ್ನುವುದನ್ನು ತೋರಿಸಬೇಕು. ನಾಳೆ ಜಮೀನುದಾರರು ಕೋರ್ಟಿಗೆ ಹೋಗುವ ಅವಕಾಶವಿರಬಾರದು. ಸಮಿತಿಯವರು ತಮ್ಮ ವರದಿಯ 74ನೆಯ ಪುಟದಲ್ಲಿ ಹೀಗೆ ಹೇಳಿದ್ದಾರೆ:

> "For computing the ceiling, the lands standing in the name of the wife of any member of the family should also be taken into consideration, unless such lands constitute her stridhana."

ಇದು ಯಾವ ಒಂದು ನಿರ್ದಿಷ್ಟವಾದ ಕಾಲದ ಹಿಂದೆ ಸ್ತ್ರೀಧನವಾಗಿರಬೇಕು ಎನ್ನುವುದನ್ನು ಹೇಳಿಲ್ಲ. ಈ ಒಂದು ಲ್ಯಾಕುನವನ್ನು ಉಪಯೋಗಿಸಿಕೊಂಡು ಎಷ್ಟೋ ಜನರು ಇಲ್ಲದೆ ಇರತಕ್ಕಂಥ ಸ್ತ್ರೀಧನವನ್ನು ಉಂಟುಮಾಡುವುದಕ್ಕೆ ಅವಕಾಶವಿದೆ. ತಾರೀಖು 1ನೆಯ ಜನವರಿ 1958ರಲ್ಲಿ ಸ್ತ್ರೀಧನವಾಗಿದ್ದಿರಬೇಕು ಎನ್ನುವ ಪದವನ್ನು ಉಪಯೋಗಿಸಿದ್ದರೆ ಚೆನ್ನಾಗಿತ್ತು. ಈ ಸ್ತ್ರೀಧನ 1957ನೆಯ ಇಸವಿ ಕೊನೆಯವರೆಗೆ ಇದ್ದದ್ದು ಎಂದು ಇರಬೇಕಾಗಿತ್ತು, ಆಗ ಇನ್ನು ಮುಂದೆ ಸ್ತ್ರೀಧನ ಮಾಡುವುದಕ್ಕೆ ಅವಕಾಶ ಕೊಟ್ಟ ಹಾಗೆ ಆಗುತ್ತಿರಲಿಲ್ಲ. ಈಗ ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಒಂದುಭಾಗ ಬರುವ ಅವಕಾಶವಿರುತ್ತದೆ. ಆದ್ದರಿಂದ ಸ್ತ್ರೀಧನವನ್ನು ಮಾಡುವ ಅವಕಾಶವಿರುವುದಿಲ್ಲ. ಸ್ತ್ರೀಧನವನ್ನು ಮಾಡುವುದಕ್ಕೆ ಅವಕಾಶ ಕೊಡಬಾರದು. ಅದಕ್ಕೆ ಒಂದು ನಿರ್ದಿಷ್ಟ ಕಾಲವನ್ನು ನಿಗದಿಮಾಡುವುದು ಸೂಕ್ತ. ಒಟ್ಟಿನಲ್ಲಿ ದೊಡ್ಡ ಜಮೀನ್ದಾರರು ಇಲ್ಲವೆಂದು ವರದಿಯಲ್ಲಿ ಹೇಳಿದ್ದಾರೆ. ಆದರೆ ಅವರಿಗೂ ಹಿಡುವಳಿದಾರರಿಗೂ ಇರುವ ಅಂತರವನ್ನು ಯೋಚನೆ ಮಾಡಬೇಕಾಗಿದೆ. ಬಹುಭಾಗದ ಹಿಡುವಳಿದಾರರ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಒಂದು ನೂರು ಎಕರೆಗಳಿಗಿಂತ ಜಾಸ್ತಿ ಇರುವವರು ಐದಾರು ಜನರು ಇದ್ದಾರೆ. ಅವರ ಜಮೀನು ವಿಸ್ತೀರ್ಣ 10.2 ಇದೆ. ಹತ್ತೆಕರೆಗಿಂತ ಜಮೀನು ಕಡಮೆ ಇರುವ ಹಿಡುವಳಿಗಳ ಸಂಖ್ಯೆ ಐದು ಲಕ್ಷ; ಐದು ಎಕರೆಗಿಂತ ಕಡಮೆ ಇರುವ ಹಿಡುವಳಿಗಳ ಸಂಖ್ಯೆ 11,64.334. ಒಟ್ಟಿನಲ್ಲಿ ಐದೆಕರೆಗಳವರೆಗೆ ಒಡೆತನದಲ್ಲಿರುವ ಜಮೀನಿನ ವಿಸ್ತೀರ್ಣ 27,63,591. ಅಂಕಿಅಂಶಗಳನ್ನು ನೋಡಿದರೆ ಬಹುಭಾಗದ ಜಮೀನು ಶ್ರೀಮಂತರ ಕೈಯ್ಯಲ್ಲಿದೆ. ಇದರಲ್ಲಿ ಜೋಡಿ ಮತ್ತು ಇನಾಂ ಭೂಮಿಗಳನ್ನು ಸೇರಿಸಿಲ್ಲ; ಅವುಗಳನ್ನು ಕಡಿಮೆಮಾಡಿಕೊಳ್ಳಬೇಕು.

ಭೂ ಮಾಲೀಕ ಗೇಣಿಯನ್ನು ಪಡೆದುಕೊಂಡದ್ದಕ್ಕೆ ಗೇಣಿದಾರನಿಗೆ ರಶೀದಿಯನ್ನು ಕೊಡುವುದಿಲ್ಲ. ಗೇಣಿ ಕೊಟ್ಟಕೂಡಲೇ ಭೂಮಾಲೀಕ ರಸೀದಿಯನ್ನು ಕೊಡತಕ್ಕಂಥ ಒಂದು ವಿಧಿಯನ್ನು ಈ ಭೂಶಾಸನದಲ್ಲಿ ಸೇರಿಸಿ ರೈತನ ಹಿತರಕ್ಷಣೆಮಾಡಬೇಕು. ನಾವು ಕಾಯಿದೆಮಾಡುತ್ತೇವೆ. ಆದರೆ ಯಾವ ಸುಧಾರಣೆಯೇ ಆಗಲಿ ಯಶಸ್ವಿಯಾಗಬೇಕಾದರೆ ಆಡಳಿತಯಂತ್ರ ಪುರೋಗಾಮಿಯಾದ ದೃಷ್ಟಿಯನ್ನು ಇಟ್ಟುಕೊಂಡಿರಬೇಕು. ಆದ್ದರಿಂದ ಈ ಭೂ ಶಾಸನವನ್ನು ಜಾರಿಗೆತರತಕ್ಕಂಥ ಯಂತ್ರ ಭೂ ಮಾಲೀಕರ ಹಿತವನ್ನು ರಕ್ಷಣೆ ಮಾಡುವ ಯಂತ್ರವಾಗಿರಕೂಡದು. ಯಾವ ಕಾಯಿದೆಯೇ ಆಗಲಿ ಅದನ್ನು ಅಕ್ಷರಶಃ ಜಾರಿಗೆ ತರಬೇಕಾದರೆ ಆಡಳಿತ ಯಂತ್ರಕ್ಕೆ ಪುರೋಗಾಮಿಯಾದ ಮನೋಭಾವನೆ ಇಲ್ಲದಿದ್ದರೆ ಆ ಕಾಯಿದೆ ಯಶಸ್ವಿಯಾಗುವುದಕ್ಕೆ ಸಾಧ್ಯವಿಲ್ಲ. ಈ ಮನೋಭಾವನೆ ಇಲ್ಲದಿದ್ದರೆ ರೈತರ ಹಿತವನ್ನು ಸಾಧಿಸುವ ಬದಲು ಅವರಿಗೆ ಅಹಿತವಾಗುವ ಸಂದರ್ಭ ಬರಬಹುದು. ಈ ಸಲಹೆಗಳನ್ನು ವಿಮರ್ಶೆ ಮಾಡಲಿಕ್ಕೆ ಒಂದು ಲ್ಯಾಂಡ್ ಕಮೀಶನ್ನನ್ನು ಮಾಡಬೇಕು ಎಂದು ವರದಿಯಲ್ಲಿ ಹೇಳಿದ್ದಾರೆ. ಆದರೆ ಎಲ್ಲಾ ಅಂಶಗಳನ್ನು ವಿಮರ್ಶೆಮಾಡುವುದಕ್ಕೆ ಈ ಕಮೀಷನ್ನಿನಿಂದ ಸಾಧ್ಯವಾಗುವುದಿಲ್ಲ. ಸಮಿತಿಯವರು ಇದರ ಕಡೆಗೂ ಹೆಚ್ಚು ಗಮನ ಕೊಟ್ಟಿರುವ ಹಾಗೆ ಕಾಣುವುದಿಲ್ಲ. ಎಷ್ಟೋ ಜನ ಭೂ ಮಾಲೀಕರು ಯಾವ ರೀತಿ ಜಮೀನನ್ನು ಪಡೆದಿದ್ದಾರೆ ಎಂದು ತಿಳಿಯುವುದು ಶಕ್ಯವೇ? ಎಷ್ಟೋಜನ ರೈತರು 200–300 ರೂಪಾಯಿ ಸಾಲ ತೀರಿಸಲು ಸಾಧ್ಯವಿಲ್ಲದೆ ಭೂ ಮಾಲೀಕರಿಗೆ ತಮ್ಮ ತಮ್ಮ ಜಮೀನುಗಳನ್ನು ಬಿಟ್ಟುಕೊಟ್ಟಿದ್ದಾರೆ. ಈಗ ಅದೇ ಜಮೀನಿನ ಬೆಲೆ 30,000 ರೂಪಾಯಿ ಆಗುತ್ತದೆ. ಎಷ್ಟೋ ಭೂ ಮಾಲೀಕರು ಕೋರ್ಟು ಡಿಕ್ರಿ ತೆಗೆದುಕೊಂಡು ರೈತರ ಸ್ವತ್ತನ್ನು ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ. 15 ವರ್ಷದಿಂದ ಭೂಮಿಯ ಫಲವನ್ನು ಅನುಭವಿಸಿದ್ದಾರೆ. ಸಾಲಮಾಡಿದ ರೈತರು ಸಾಲದ ಹಣವನ್ನು ವಾಪಸ್ಸು ಕೊಡುತ್ತೇವೆ ಎಂದು ಮುಂದೆ ಬಂದರೆ ಭೂ ಮಾಲೀಕರು ಆ ಜಮೀನನ್ನು ಹಿಂದಕ್ಕೆ ಬಿಟ್ಟುಕೊಡಬೇಕು. ಹೀಗೆಮಾಡಿದರೆ ರೈತರ ಹಿತರಕ್ಷಣೆ ಆಗುತ್ತದೆ. ಈ ದೃಷ್ಟಿಯಿಂದ ಪುರೋಗಾಮಿ ಸುಧಾರಣೆ ಆಗಬೇಕು. ಜತ್ತಿ ಸಮಿತಿಯವರ ವರದಿಯಿಂದ ಉತ್ತಮವಾದ ಒಂದು ಸುಧಾರಣೆಯಾಗಬೇಕು ಎಂದು ಹೇಳುವವರಲ್ಲಿ ನಾನೂ ಒಬ್ಬ. ಹಾಗೆ ಸುಧಾರಣೆಯನ್ನು ಮಾಡುವಾಗ ಗೇಣಿದಾರರ ಹಿತರಕ್ಷಣೆಯಾಗಬೇಕು, ಜಮೀನುದಾರರು ಕಾಂಪೆನ್‌ಸೇಷನ್ ತೆಗೆದುಕೊಳ್ಳುವುದನ್ನು ಒಪ್ಪಿಕೊಂಡರೆ ಅವರಿಗೆ ಅನ್ಯಾಯವಾಗುವುದಿಲ್ಲ. ಅವರು ಅದೇ ಹಣವನ್ನು ಇನ್ನೊಂದು ರಂಗದಲ್ಲಿ ಉಪಯೋಗಿಸಿಕೊಂಡು ದೇಶಕ್ಕೆ ಸಹಾಯಮಾಡಬಹುದು.

ಶ್ರೀಮತಿ ನಾಗರತ್ನಮ್ಮನವರು ಈ ವರದಿಯನ್ನು ತೀವ್ರವಾಗಿ ವಿರೋಧಿಸುತ್ತ, ಸಮಿತಿಯವರು ಹೆಂಗಸರ ಅಭಿಪ್ರಾಯವನ್ನು ಈ ಸುಧಾರಣೆಯ ವಿಷಯದಲ್ಲಿ ತೆಗೆದುಕೊಳ್ಳಲಿಲ್ಲ ಎಂಬ ಆಪಾದನೆಯನ್ನು ಹೊರಿಸಿದ್ದಾರೆ. ಆದರೆ ಅವರು ಯಾವ ಕುಟುಂಬಕ್ಕೆ ಸೇರಿದವರು ಎನ್ನುವುದನ್ನು ಮರೆತಿದ್ದಾರೆ. ಅವರು ಗೇಣಿದಾರರ ಕುಟುಂಬಕ್ಕೆ ಸೇರಿದವರಲ್ಲ. ಇಂತಹ ಪರಿಸ್ಥಿತಿ ಇರುವಾಗ ಗೇಣಿದಾರರ ಕಷ್ಟ ಏನಿದೆ ಎಂದು ತಿಳಿದುಕೊಂಡಿದ್ದರೆ, ಹೆಂಗಸರ ಕಷ್ಟವನ್ನೂ ತಿಳಿದುಕೊಂಡ ಹಾಗಾಗುತ್ತದೆ.

ವಾಪಸ್ಸು ಪಡೆಯುವ ಸೋಗಿನಲ್ಲಿ ಹೆಚ್ಚು ಹೆಚ್ಚು ಗೇಣೀದಾರರನ್ನು ಉಚ್ಚಾಟನೆಮಾಡುವ ರೀತಿಯಲ್ಲಿ ನಮ್ಮ ಸಮಿತಿಯವರು ಕೊಟ್ಟಿರುವ ವರದಿ ಪರಿಪೂರ್ಣವಾಗಿಲ್ಲ ಎಂದು ನಾನು ಹೇಳಬಯಸುತ್ತೇನೆ. ಬಹುಶಃ ಅವರು ಹೈದರಾಬಾದು ಕರ್ನಾಟಕದ ಗೇಣಿದಾರರನ್ನು ಬಳಸಿಕೊಂಡಿದ್ದಾರೆ. 1951-52ನೇಯ ವರ್ಷದಲ್ಲಿ ಸಾವಿರಾರು ಜನ ಗೇಣೀದಾರರನ್ನು ಹೈದರಾಬಾದ್ ಕರ್ನಾಟಕದಲ್ಲಿ ಉಚ್ಚಾಟನೆ ಮಾಡಿಬಿಟ್ಟು ಜಮೀನು ವಾಪಸು ಪಡೆಯಲಿಕ್ಕೆ ಭೂ ಮಾಲೀಕರಿಗೆ ಒಂದು ಅವಕಾಶ ಕೊಟ್ಟಿದ್ದರಿಂದ ಸುಮಾರು ಶೇಕಡ 57 ಜನ ಗೇಣೀದಾರರು ಉಚ್ಚಾಟನೆ ಮಾಡಲ್ಪಟ್ಟು ಅವರಲ್ಲಿದ್ದಂಥ ಶೇಕಡ 59 ಭಾಗ ಭೂಮಿಯನ್ನು ಅವರಿಂದ

ಜಮೀನ್‌ದಾರರು ಕಿತ್ತುಕೊಂಡರು. ಈ ಒಂದು ಅವಕಾಶವನ್ನು ತಾವು ಮಾಡಿಕೊಡಕೂಡದು. ಸ್ವಂತವಾಗಿ ವ್ಯವಸಾಯ ಮಾಡುತ್ತೇನೆ ಎನ್ನುವ ಸೋಗಿನಲ್ಲಿ ಅನೇಕ ರೀತಿಯಿಂದ ವ್ಯವಹಾರಕ್ಕೆ ಕೈಹಚ್ಚುವ ಪರಿಸ್ಥಿತಿ ಉಂಟು ಮಾಡದೇ ಇರುವುದು ಬಹಳ ಸೂಕ್ತ ಎಂದು ಹೇಳುತ್ತೇನೆ. ಸ್ವಂತವಾಗಿ ವ್ಯವಸಾಯಮಾಡಲಿಕ್ಕೆ ಒಂದು ನಿರ್ದಿಷ್ಟವಾದ ವಿಧಿ, ನಿಯಮ ಇದರೊಳಗೆ ಮಾಡದಿದ್ದರೆ ಇವೊತ್ತಿನ ದಿವಸ ಸ್ವಂತವಾಗಿ ವ್ಯವಸಾಯಮಾಡುತ್ತೇನೆ ಎಂದು ಹೇಳಿ ಇನ್ನೊಬ್ಬರಿಗೆ ಹೆಚ್ಚಿಗೆ ಹಣಕ್ಕೆ ಮಾರುವುದಕ್ಕಾಗಲೀ ಅಥವಾ ಹೆಚ್ಚು ಗೇಣಿಗೆ ಕೊಡುವುದಕ್ಕಾಗಲೀ ಅವಕಾಶವಿದ್ದರೆ, ನಿಜವಾಗಿಯೂ ಯಾವ ಸುಧಾರಣೆಯನ್ನೂ ಮಾಡಿದಂತಾಗುವುದಿಲ್ಲ. ಇವೊತ್ತಿನ ದಿವಸ ಮದರಾಸು ಕನ್ನಡ ಪ್ರದೇಶದಲ್ಲಿ ಯಾವ ಒಂದು ಕಾನೂನು ಜಾರಿಯಲ್ಲಿದೆಯೋ, ಅದು ಕಾರ್ಯತಃ ಜಾರಿಯಲ್ಲಿದ್ದರೂ ಸಹ ರೈತರು ಸಂಪೂರ್ಣವಾಗಿ ಅದರ ಉಪಯೋಗವನ್ನು ಪಡೆಯುತ್ತಾ ಇಲ್ಲ ಎಂದು ಹೇಳಲಿಕ್ಕೆ ಸಿದ್ಧನಿದ್ದೇನೆ. ಏಕೆಂದರೆ ನಮ್ಮ ಪ್ರದೇಶದಲ್ಲಿ ಕಾಯಿದೆ ಇದ್ದರೂ ಕೂಡ ಜಮೀನ್‌ದಾರರು 100ಕ್ಕೆ 60 ಭಾಗ ವಸೂಲುಮಾಡುತ್ತಾ ಇದ್ದಾರೆ. ಅಷ್ಟು ಕೊಡುವುದಿಲ್ಲ ಎಂದರೆ ಮುಂದಿನ ವರ್ಷ ಇನ್ನೊಬ್ಬ ರೈತನಿಗೆ ಕೊಡುತ್ತೇನೆಎಂದು ಹೇಳಿ ಬೆದರಿಕೆ ಹಾಕುತ್ತಾರೆ. ಆದ್ದರಿಂದ ಯಾವ ಕಾನೂನನ್ನೇ ಮಾಡಿದರೂ ಯಶಸ್ವಿಯಾಗಿ ಜಾರಿಯಲ್ಲಿರುವ ಹಾಗೆ ಮಾಡಿದಹೊರತು ಪ್ರಯೋಜನವಿಲ್ಲ. ಆದ್ದರಿಂದ ಜತ್ತಿಯವರ ಈ ವರದಿಯಲ್ಲಿ ನನ್ನ ಈ ಕೆಲವಾರು ಸಲಹೆಗಳನ್ನು ಗಮನಕ್ಕೆ ತೆಗೆದುಕೊಳ್ಳುವುದಾದರೆ ನಾನು ಇದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ ಎಂದು ಹೇಳಿ ನನ್ನ ವಂದನೆಗಳನ್ನು ಅಧ್ಯಕ್ಷರಿಗೆ ಸೂಚಿಸುತ್ತ ಈ ಭಾಷಣವನ್ನು ಮುಗಿಸುತ್ತೇನೆ.

(Sri N. O. Samaji rose).

Mr. SPEAKER.—The Hon'ble Member has taken part on 18-10-1957.

(Sri N. O. Samaji said in Marathi that he had not previously spoken on this subject).

Mr. SPEAKER.—I will examine the records and find out. If the Hon'ble Member has not taken part, I will allow him to speak.

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು).—ಸ್ವಾಮಿ, ಈ ದಿವಸ ನಮ್ಮ ಮುಂದೆ ಇರುವ ಜತ್ತಿ ಸಮಿತಿಯವರ ವರದಿಯನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ನಾನು ಅಂಕಿಅಂಶಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈ ಭೂ ಸುಧಾರಣೆ ನಮ್ಮ ಮೈಸೂರು ರಾಜ್ಯದಲ್ಲಿ ಎಷ್ಟು ಜಾಗ್ರತೆ ಆಗುತ್ತದೆಯೋ ಅಷ್ಟೂ ನಮ್ಮ ರಾಜ್ಯಕ್ಕೆ ಕ್ಷೇಮ ಎಂದು ಹೇಳುತ್ತೇನೆ. ಏಕೆಂದರೆ ನಮ್ಮ ರಾಜ್ಯದಲ್ಲಿ ಹೆಚ್ಚು ಭೂಮಿಯನ್ನು ಹೊಂದಿರತಕ್ಕ ಜನ ಕೇವಲ ಸ್ವಲ್ಪ ಜನ. ಜಮೀನು ಇಲ್ಲದೆ ಪರದಾಡುತ್ತಾ ಇರತಕ್ಕ ಜನಗಳೇ ಬಹಳ ಜಾಸ್ತಿ. ಜವಾಬ್ದಾರಿ ಸರ್ಕಾರ ಬಂದಾಗಿನಿಂದ ಸಮತಾವಾದ ಸಮಾಜವನ್ನು ರಚನೆ ಮಾಡುತ್ತೇವೆ ಎಂದು ಹೇಳುತ್ತಾ ಇರುವ ಕೂಗನ್ನು ಅವರು ಬಹಳವಾಗಿ ನಿರೀಕ್ಷಿಸುತ್ತಾ ಇದ್ದಾರೆ. ಅದು ಎಂದಿಗೆ ಬರುತ್ತದೆ? ಬರುತ್ತದೆಯೋ ಎಂಬ ಶಂಕೆ ಅವರ ಮನಸ್ಸಿನಲ್ಲಿ ಮೂಡಿದೆ. ಅವರು ತುಂಬಾ ಕಾತುರರಾಗಿದ್ದಾರೆ. ನಾವು ಈಗ ಎರಡು ವರ್ಷಗಳ ಹಿಂದೆ ಇನಾಂ ರದ್ದಿಯಾತಿ ಮಸೂದೆಯನ್ನು ಅಂಗೀಕಾರ ಮಾಡಿದ್ದೇವೆ. ಆದರೆ ಈವರೆಗೂ ಯಾವ ಒಬ್ಬ ರೈತನಿಗೂ ಕೂಡ ಇನಾಮ್ ಗ್ರಾಮಗಳಲ್ಲಿ ಒಂದು ಎಕರೆ ಜಮೀನೂ ಸಹ ಹಸ್ತಗತವಾಗಿಲ್ಲ. ಇದು ಬಹಳ ನಿಧಾನವಾಗಿದೆ. ಆ ಕಾನೂನು ಬಂದ ಮೇಲೆ ಅನೇಕ ಜೋಡಿದಾರರು ಕೆಲವು ರೈತರನ್ನು ತಮ್ಮ ವಶಪಡಿಸಿಕೊಂಡು ಬೇಕಾದಷ್ಟು ಜಮೀನನ್ನು ಮಾರಿದ್ದಾರೆ ಎಂಬುದನ್ನು ಈ ಸಭೆಯಲ್ಲಿ ಹೇಳಬೇಕಾಗಿದೆ. ಅನೇಕ ರೈತರು ನಮ್ಮಲ್ಲಿ ಬಂದು ದೂರು ಹೇಳಿದ್ದಾರೆ. ನಾವು ಡೆಪ್ಯುಟಿ ಕಮೀಷನರಿಗೆ ಕಾನೂನು ಪ್ರಕಾರ ಅರ್ಜಿ ಕೊಡಿಸಿದ್ದೇವೆ. ಕೇಸು ಹಾಕಲು ಬಡವರಲ್ಲಿ ದುಡ್ಡಿಲ್ಲ, ಲಾಯರನ್ನು ಇಟ್ಟು ವಾದ ಮಾಡಿಸುವುದಕ್ಕೆ ಅವರಿಂದ ಸಾಧ್ಯವಿಲ್ಲ. ಆದ್ದರಿಂದ ಸರ್ಕಾರದವರು ಒಂದು ಕಾಯಿದೆಯನ್ನು, ಒಂದು ನಿರ್ಣಯವನ್ನು ತರುವಾಗ ಅದನ್ನು ಬಹಳ ಜಾಗ್ರತೆ ಕಾರ್ಯಗತ ಮಾಡುವ ಯೋಚನೆಯನ್ನು ಕೂಡಲೆ ಮಾಡಬೇಕು, ಅಂತಹ ಹುರುಪು ಬರಬೇಕು ಎಂದು ನಾನು ಹೇಳುತ್ತೇನೆ. ಈಗ ನೋಡಿ, ಜತ್ತಿ ಸಮಿತಿಯವರ ವರದಿ ಬಂದಲಾಗಾಯ್ತು ನೋಡುತ್ತಾ ಇದ್ದೇವೆ. ಜಮೀನುದಾರರು ಎಷ್ಟೋ ಗೇಣಿದಾರರಿಂದ ಜಮೀನು ಕಸಿದುಕೊಂಡರು. ಏನಪ್ಪಾ! ಜಮೀನು ಉಳುವುದಕ್ಕೆ ನನ್ನಿಂದ ಆಗುವುದಿಲ್ಲ, ಜಮೀನು ನನಗೆ ಉಳಿಯುವುದಿಲ್ಲ ಏನು ಮಾಡುವುದು ಎಂದು ಹೇಳಿ ಬೇಕಾದಷ್ಟು ಜನ ಜಮೀನು ಬಿಡಿಸಿಕೊಂಡು ಮಾರಾಟ ಮಾಡಿರುವುದು ನನಗೂ, ನಿಮಗೂ ಎಲ್ಲರಿಗೂ ಗೊತ್ತಿದೆ. ಈ ನಮ್ಮ ಸಭೆಯಲ್ಲಿರತಕ್ಕ ಅನೇಕ ಮಾನ್ಯ ಸದಸ್ಯರು, ವಾರ, ಗುತ್ತಿಗೆ ಮಾಡತಕ್ಕ ಗೇಣಿದಾರರ ವಿಷಯದಲ್ಲಿ ಯಾವ ರೀತಿ ನಡೆದುಕೊಂಡಿದ್ದಾರೆ ಎಂಬುದನ್ನು ಸರ್ಕಾರದವರಿಗೆ ತಿಳಿಸಿರುವುದು ನನಗೂ ಗೊತ್ತಾಗಿದೆ. ಸ್ವಾಮಿ, ಒಬ್ಬ ರೈತನಿಗೆ ತನ್ನ ಸಂಸಾರವೆಲ್ಲಾ ಜಮೀನನ್ನು ಗೇಣಿಗೆ ಮಾಡಿಕೊಂಡು ಬರುವ ಫಸಲನಲ್ಲಿ ಒಂದು ಎಕರೆಗೆ 18 ಪಲ್ಲಾ ಕೊಡುವ ಶಕ್ತಿ ಇರುತ್ತದೆಯೋ ? ಹಾಸನ ಜಿಲ್ಲೆಯಲ್ಲಿ ಈ ಸಾರಿ ಹೊಳೇನರಸೀಪುರ ತಾಲ್ಲೂಕಿನ ನಾಲಾ ಬಯಲಿನಲ್ಲಿ ಒಂದು ಎಕರೆ ಗುತ್ತಿಗೆ ಮಾಡಿದರೆ 18 ಪಲ್ಲಾ ಜಮೀನ್‌ದಾರರಿಗೆ ಹೋಗುತ್ತದೆ. 18 ಪಲ್ಲಾ ಗುತ್ತಿಗೆ ಕೊಡಬೇಕು. ಇದು ಶ್ರೀಯುತರಾದ ನರಸಿಂಹೇಗೌಡರು, ಮಲ್ಲಾರಾಧ್ಯರಿಗೂ ಸಹ ಗೊತ್ತು. 18ಪಲ್ಲಾ ಕೊಟ್ಟ ಮೇಲೆ ಅವನಿಗೆ ಏನು ಉಳಿಯುತ್ತದೆ ? ಎಂಬುದನ್ನು ನಾವು ಯೋಚನೆ ಮಾಡಬೇಕು. ಇದನ್ನು ಸಮಿತಿಯವರು ವಿಮರ್ಶೆ ಮಾಡಿಲ್ಲ. ಆದಷ್ಟು ಜಾಗ್ರತೆ ಈ ಗುತ್ತಿಗೆ ಜಮೀನು ಮಾಡತಕ್ಕ ರೈತನಿಗೆ ಪರಿಹಾರ ಒದಗಿಸಬೇಕು. ಅವನ ತಲೆ ಬೋಳಿಸಿ ಹೋಗುತ್ತಾ ಇದೆ. ಈ ಅನ್ಯಾಯವನ್ನು ಜಾಗ್ರತೆ ತಡೆಗಟ್ಟಿ ಗೇಣಿದಾರರಿಗೆ ತುಂಬಾ ಸಹಾಯ ಮಾಡುತ್ತಾರೆಂದು ನಂಬಿರುತ್ತೇನೆ. ನಮ್ಮ ಸರ್ಕಾರದವರು ಮತ್ತು ನಮ್ಮ ಶಾಸನ ಸಭೆಯ ಸದಸ್ಯರು ಈ ವಿಚಾರದಲ್ಲಿ ಏನು ಮಾಡುತ್ತಾರೆಂದು ಬಡವರಾಗಿರತಕ್ಕವರು ಇದಿರು ನೋಡುತ್ತಾ ಇದ್ದಾರೆ. ಆದ್ದರಿಂದ ಈ ವರದಿಯನ್ನು ಪರಿಶೀಲಿಸಿ ಶಾಸನ ಸಭೆಯವರು ಜಾಗ್ರತೆ ಮಸೂದೆಯನ್ನು ತಂದು ಅಂಗೀಕಾರಮಾಡಿ, ಕಾನೂನುಮಾಡಿ ಜಾಗ್ರತೆ ಜಾರಿಗೆ ಕೊಡುವುದು ಒಳ್ಳೆಯದು. ಹೆಚ್ಚಾಗಿ ಜಮೀನ್‌ದಾರರಲ್ಲಿ ಜಮೀನು ಇದ್ದರೆ ಅವರಿಂದ ಜಮೀನನ್ನು ನಿಗದಿಯಾದ ಬೆಲೆಗೆ ಸರ್ಕಾರದವರು ತೆಗೆದುಕೊಂಡು ಜಮೀನು ಇಲ್ಲದವರಿಗೆ ಬಹಳ

(ಶ್ರೀ ಎಚ್. ಕೆ. ಸಿದ್ದಯ್ಯ)

ಜಾಗ್ರತೆ ಕೊಡುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಈಗ ಈ ವರದಿ ಬಂದಲಾಗಾಯ್ತಿನಿಂದ ಇಡಿಯ ಮೈಸೂರು ರಾಜ್ಯದಲ್ಲಿ ಅನೇಕ ಜಮೀನ್ದಾರರು ಮೆಮೋರ್ಯಾಂಡಂಗಳನ್ನು—ಅನೇಕ ಜನ ಸದಸ್ಯರೂ ಸಹ—ಸರ್ಕಾರದವರಿಗೆ ಕಳುಹಿಸಿರುವುದು ತಮಗೆಲ್ಲಾ ಗೊತ್ತೇ ಇದೆ.

[MR. DEPUTY SPEAKER in the Chair.]

ಸ್ವಾಮಿ, ಇವೊತ್ತಿನ ದಿವಸ ವಿಶಾಲ ಮೈಸೂರು ರಾಜ್ಯದಲ್ಲಿ 13-14 ಸಾವಿರ ಜಮೀನುದಾರರು ಇರಬಹುದು. ಎರಡು ಕೋಟಿ ಜನಸಂಖ್ಯೆ ಇರುವ ನಮ್ಮ ರಾಜ್ಯದಲ್ಲಿ ಜಮೀನು ಇಲ್ಲದೆ ನಿರ್ಗತರಾದ ಜನ ಎಷ್ಟೋ ಇದ್ದಾರೆ. ಒಬ್ಬನು ಉಂಡುಟ್ಟು ಸುಖವಾಗಿ ಜೀವನ ಸಾಗಿಸುವುದೂ ಮತ್ತೊಬ್ಬನು ಹೊಟ್ಟೆಗೆ ಅನ್ನವಿಲ್ಲದೆ ಸಾಯುವ ಪರಿಸ್ಥಿತಿ ಇರತಕ್ಕ ಒಂದು ವ್ಯತ್ಯಾಸ ಬಹಳ ಕಾಲದಿಂದ ನಡೆದುಕೊಂಡು ಬಂದಿದೆ. ಇಂಥ ಶೋಚನೀಯ ಪರಿಸ್ಥಿತಿಯನ್ನು ಆದಷ್ಟು ಜಾಗ್ರತೆ ತೆಗೆದು ಹಾಕಬೇಕು. ಜಮೀನುದಾರರ ಹತ್ತಿರ ಬೇಕಾದಷ್ಟು ಜಮೀನು ಇದೆ. ಒಂದು ಸಂಸಾರಕ್ಕೆ ಇಷ್ಟು ಜಮೀನು ಇರಬೇಕೆಂದು ನಿರ್ಧಾರಮಾಡಿ, ಅದಕ್ಕೆ ಮಿಕ್ಕಿದ್ದನ್ನು ಇಲ್ಲದವರಿಗೆ ಸಾಗುವಳಿ ಮಾಡುವುದಕ್ಕೆ ಕೊಟ್ಟುಬಿಡುವಂತೆ ಆದಷ್ಟು ಜಾಗ್ರತೆ ಕಾನೂನು ಮಾಡಬೇಕು. ಈಗಾಗಲೇ ಅನೇಕರು ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಈ ವಿಷಯಕ್ಕೆ ಸಂಬಂಧಪಟ್ಟ ಮಸೂದೆಯು ಸೆಲೆಕ್ಟ್ ಕಮಿಟಿಗೆ ಹೋಗಿ ಪರಿಶೀಲನೆಯಾಗಬಹುದು. ಈ ಕಾನೂನು ಯಾವಾಗ ಜಾರಿಯಲ್ಲಿ ಬರುವುದೋ ಎಂದು ಜನರು ಬಹಳ ಆತುರತೆಯಿಂದ ನಿರೀಕ್ಷಣೆ ಮಾಡುತ್ತಿದ್ದಾರೆ. ಆದುದರಿಂದ ಈ ಕಾನೂನನ್ನು ಆದಷ್ಟು ಜಾಗ್ರತೆ ಈ ಸಭೆಯ ಮುಂದೆ ಮಂಡಿಸಿ, ಪಾಸ್‌ಮಾಡಿ, ಜಾರಿಯಲ್ಲಿ ತರಬೇಕೆಂದು ಒತ್ತಿ ಒತ್ತಿ ಹೇಳಬೇಕಾಗಿದೆ. ಸಮತಾವಾದಿ ಸಮಾಜ ರಚನೆ ಮಾಡುವುದೇ ನಮ್ಮ ಗುರಿ, ನಮ್ಮ ಧ್ಯೇಯವಾಗಿದೆಯೆಂದು ನಮ್ಮ ಕಾಂಗ್ರೆಸ್ ಪಕ್ಷವು ಮೊದಲಿನಿಂದಲೂ ಹೇಳುತ್ತಲೇ ಬಂದಿದೆ. ಆದ ಕಾರಣ ಈ ಕಾನೂನು ತರುವುದಕ್ಕೆ ನಿಧಾನ ಮಾಡಬಾರದೆಂದು ಈ ಸಭೆಯ ಎಲ್ಲ ಸದಸ್ಯರ ಆಶೆಯಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಾವು ನಮ್ಮ ಕ್ಷೇತ್ರದಲ್ಲಿ ಸಂಚಾರಕ್ಕೆ ಹೋದಾಗ ಭೂಸುಧಾರಣೆಯ ಬಗ್ಗೆ ಏನು ಮಾಡಿದ್ದೀರಿ ಎಂದು ಮೊದಲಿಗೆ ನಮಗೆ ಜನರು ಪ್ರಶ್ನೆ ಕೇಳುತ್ತಾರೆ. ಆದ್ದುದರಿಂದ ಆದಷ್ಟು ಜಾಗ್ರತೆ ಇದೇ ಅಧಿವೇಶನದಲ್ಲಿಯೇ ಮಸೂದೆಯನ್ನು ಸಭೆಯ ಮುಂದೆ ತಂದು ಪಾಸ್‌ಮಾಡಿ, ಕಾನೂನು ಜಾರಿಗೆ ಬರುವಂತೆ ಮಾಡಿದರೆ ಒಳ್ಳೆಯದಾಗುತ್ತದೆ. ದುಡ್ಡಿನ ಅಡಚಣೆ ಇದೆ ಎಂದು ಹೇಳಬಾರದು. ಈಗ ವಿಶಾಲ ರಾಜ್ಯವಾಗಿದೆ. ವರಮಾನ ಹೆಚ್ಚಾಗಿದೆ, ದುಡ್ಡಿಲ್ಲ ಎಂದರೆ ನಾಚಿಕೆಯಾಗುತ್ತದೆ. ಏಕೆ ದುಡ್ಡಿಲ್ಲ? ಪಂಚವಾರ್ಷಿಕ ಯೋಜನೆಗಾಗಿ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಒಂದು ವೇಳೆ ನಮ್ಮಲ್ಲಿ ಹಣ ಇಲ್ಲದಿದ್ದರೆ ಸಾಲ ತಂದು ಜಾಗ್ರತೆ ಈ ಕಾನೂನು ಜಾರಿ ಮಾಡೋಣ. ಈ ಕಾನೂನು ಜಾರಿಗೆ ಬರುವುದರಿಂದ ದೇಶದಲ್ಲಿ ಸಂಕಟದಿಂದ ನರಳುತ್ತಿರುವಂಥ ಸಾವಿರಾರು ಜನ ಬಡವರಿಗೆ ತುಂಬಾ ಸಹಾಯವಾಗುತ್ತದೆ. ಇದಕ್ಕಾಗಿ ಸರಕಾರ ಮತ್ತು ನಾವು ಎಲ್ಲರೂ ಕೂಡಿ ಪ್ರಯತ್ನ ಮಾಡಬೇಕು. ಈ ಸಭೆಯಲ್ಲಿ ಕೆಲವು ಮಹಿಳಾ ಸದಸ್ಯರೂ ಇದ್ದಾರೆ. ಅವರು ಹೆಣ್ಣು ಮಕ್ಕಳ ಬಗ್ಗೆ ಸೂಕ್ತ ಸಲಹೆ ಮಾಡುತ್ತಾರೆ. ಮಹಿಳೆಯರ ಸಲುವಾಗಿ ಸೂಕ್ತ ಸಲಹೆಗಳನ್ನು ನಮ್ಮ ಅಕ್ಕತಂಗಿಯರು ಕೊಡಬೇಕು. ಅವರ ಸೂಕ್ತ ಸಲಹೆಗಳಿಗೆ ಗಮನಕೊಟ್ಟು ಈ ಕಾನೂನು ತೀವ್ರವಾಗಿ ಪಾಸಾಗುವಂತೆ ಮಾಡಬೇಕು. ಇನಾಂ ಜಮೀನು ವಿಚಾರವಾಗಿಯೂ ಹೇಳಬೇಕಾಗಿದೆ. ಇನಾಂ ರದ್ದಿಯಾತಿ ಕಾನೂನು ವಿಚಾರವಾಗಿ ಹೇಳುವುದಾದರೆ, ಅಷ್ಟು ಸರಿಯಾಗಿ ಕೆಲಸನಡೆಯುತ್ತಿಲ್ಲ. ಅದನ್ನು ಸರಿಪಡಿಸಬೇಕು. ಎಷ್ಟೋ ಅರ್ಜಿಗಳು ಡೆಪ್ಯುಟಿಕಮೀಷನರ್, ಸಬ್‌ಡಿವಿಜನಲ್ ಆಫೀಸರು ಮತ್ತು ಅಮಲ್ದಾರರ ಕಡೆಗೆ ಬಂದಿವೆ. ಅವಕ್ಕೆಲ್ಲಾ ಒಂದು ಸರಿಯಾದ ರೀತಿಯಲ್ಲಿ ತೀರ್ಮಾನ ದೊರೆಯುತ್ತಿಲ್ಲ. ಆದುದರಿಂದ ಇದನ್ನು ಜಾಗ್ರತೆ ಪರಿಶೀಲನೆಮಾಡಿ, ರೈತರಿಗೆ ಯಾವ ತೊಂದರೆಯುಲ್ಲದ ಹಾಗೆ ತೀರ್ಪು ಮಾಡಬೇಕು. ಇನ್ನು ಕೊನೆಯದಾಗಿ ಆದಷ್ಟು ಜಾಗ್ರತೆ ಒಂದು ಮಸೂದೆಯನ್ನು ಸಭೆಯ ಮುಂದೆ ತಂದು ಪಾಸ್‌ಮಾಡಿ ಕಾನೂನು ಜಾರಿಗೆ ತಂದು ಜಮೀನು ಇಲ್ಲದವರಿಗೆ ಜಮೀನು ಒದಗಿಸಿ ಕೊಟ್ಟು ಅಂಥವರಿಗೆ ಸಹಾಯಮಾಡಿ ಸಮತಾವಾದ ಸಮಾಜ ರಚನೆಯಾಗಿ ದೇಶದಲ್ಲಿ ಶಾಂತಿ ನೆಲೆಸುವಂತಾಗಿ, ಈ ಜತ್ತಿ ಸಮಿತಿಯ ವರದಿಯ ಶಿಫಾರಸ್ಸುಗಳ ಅಂಶಗಳನ್ನು ಆದಷ್ಟು ಜಾಗ್ರತೆ ಕಾರ್ಯಗತವಾಗುವಂತೆ ಮಾಡಬೇಕೆಂದು ಮತ್ತೊಮ್ಮೆ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

[Sri S. P. TALWALKAR (*Raibag*) *spoke in Marathi.*]

ಶ್ರೀ ಬಿ. ಜಿ. ಜೋತ್ (ಸದಲಗ).—ಅಗ್ರಿಕಲ್ಚರಲ್ ಪ್ರೊಡಕ್ಷನ್ ಹೆಚ್ಚಿ ಇಂಡಸ್ಟ್ರಿಯಲ್ ಪ್ರೊಡಕ್ಷನ್‌ಗೆ ಸಮದತಾಗಬೇಕು ಮತ್ತು ಅಗ್ರಿಕಲ್ಚರಲ್ ಪ್ರೊಡಕ್ಷನ್‌ಗೆ ಸಂಬಂಧಪಟ್ಟಿರುವ ಎಲ್ಲಾ ಜನರಿಗೂ ಸೋಷಿಯಲ್ ಜಸ್ಟಿಸ್ ಸಿಕ್ಕಬೇಕು ಮತ್ತು ಎಕನಾಮಿಕ್ ಇಕ್ವಾಲಿಟಿ ಆಗಬೇಕು ಎಂದು ಈ ಎರಡು ವಿಷಯಗಳನ್ನು ಗಮನದಲ್ಲಿಟ್ಟು ನಮ್ಮ ಸರ್ಕಾರದವರು ಶ್ರೀ ಜತ್ತಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕಮಾಡಿದರು. ಆ ಸಮಿತಿಯವರು ಮೈಸೂರು ಸಂಸ್ಥಾನದಲ್ಲೆಲ್ಲಾ ತಿರುಗಿ ಅಂಕಿಅಂಶಗಳನ್ನು ಪರಿಶೀಲನೆ ಮಾಡಿ, ಎಲ್ಲಾ ಪ್ರದೇಶಗಳನ್ನೂ ಅವಲೋಕನಮಾಡಿ ಈ ರೀತಿಯ ಒಂದು ವರದಿಯನ್ನು ತಯಾರಿಸಿದ್ದಾರೆ. ಈ ವರದಿಯ ಪ್ರಕಾರ ಅಗ್ರಿಕಲ್ಚರಲ್ ಪ್ರೊಡಕ್ಷನ್ ಹೇಗೆ ಹೆಚ್ಚುಮಾಡಬೇಕು ಮತ್ತು ಅಗ್ರಿಕಲ್ಚರಲ್ ಪ್ರೊಡಕ್ಷನ್ ಹೆಚ್ಚುಮಾಡುವುದರ ದೆಶೆಯಿಂದ ಸಂಬಂಧಪಟ್ಟ ಎಲ್ಲಾ ಜನರಿಗೂ ಸೋಷಿಯಲ್ ಜಸ್ಟಿಸ್ ಮತ್ತು ಎಕನಾಮಿಕ್ ಇಕ್ವಾಲಿಟಿ ಹೇಗೆ ಒದಗಿಸಬೇಕು ಎಂಬುದಕ್ಕೆ ಎರಡು ಉಪಾಯಗಳನ್ನು ಸೂಚನೆ ಮಾಡಿದ್ದಾರೆ. (1) Elimination of the landlord-tenant relationship and (2) re-distribution of lands to landless. ಈ ಎರಡು ಉಪಾಯಗಳನ್ನು ಸೂಚಿಸಿದ್ದಾರೆ. ನಾವೆಲ್ಲರೂ ಕೂಡ ಈ ವರದಿಯ ಬಗ್ಗೆ ವಿಚಾರ ಮಾಡುವುದಕ್ಕೆ ಮುಂಚೆ ಸ್ವಲ್ಪ ಶಾಂತವಾಗಿ ಈ ಎರಡು ಉಪಾಯಗಳಿಂದ ಆ ಉದ್ದೇಶವು ಸಾಧ್ಯವೋ ಹೇಗೆ? ಎಂಬುದನ್ನು ಪರಿಶೀಲಿಸಬೇಕು. ಉದ್ದೇಶಗಳು ಪೂರ್ಣವಾಗಲು, ಜಗತ್ತಿನಲ್ಲಿರುವ ಸಿದ್ಧಾಂತ ತಮಗೆಲ್ಲರಿಗೂ ಗೊತ್ತಿದೆ.

ಯಾವುದೇ ಒಂದು ಕಾರ್ಯ, ಉದ್ದೇಶ ಸಾಧನೆಯಾಗಬೇಕಾದರೆ ಅವು ಕಾರಣಗಳನ್ನು ಅವಲಂಬಿಸು

ತ್ತವೆ. ಹೇಗೆ ಕಾರಣವೋ ಹಾಗೆ ಕಾರ್ಯ. ಅದಕ್ಕೆ ಸರಿಯಾಗಿ ಮನಸ್ಸಿಟ್ಟು ಕೆಲಸ ಮಾಡುವುದಾದರೆ ಸಾಧಕವಾಗಬಹುದು. ಅವರು ಸೂಚನೆ ಮಾಡಿರುವ ಉಪಾಯದ ಪ್ರಕಾರ 'lands to the landless' ಎಂಬ ಉದ್ಘೋಷಣೆಯಿಂದ ಉದ್ದೇಶ ಸಾಧನೆ ಯಾಗುತ್ತದೆಯೇ, ಆ ನೀತಿಯನ್ನನುಸರಿಸುವುದರಿಂದ ಅದು ಶಕ್ಯವಾದೀತೇ, ಆ ನೀತಿ ನಿರ್ದೋಷವಿದೆಯೋ ಸದೋಷ ಎದೆಯೋ, ಎಂಬುದನ್ನು ನೋಡಬೇಕು. ಜಮೀನಿಲ್ಲದವರಿಗೆಲ್ಲ ಜಮೀನು ಕೊಡುವುದರಿಂದ ಆಹಾರದ ಉತ್ಪಾದನೆ ಹೆಚ್ಚಾಗಬಹುದೇ, ಎಂಬುದನ್ನು ಎಲ್ಲರೂ ಶಾಂತರೀತಿಯಿಂದ ಪರಿಶೀಲಿಸಬೇಕು. ಜಮೀನಿಲ್ಲದವರಿಗೇನೇ ಜಮೀನು ಕೊಡುವುದೆಂದರೆ ಒಂದು ವೇಳೆ ಅವರು ಸಾಕಷ್ಟು ಉತ್ಪನ್ನ ಮಾಡ ಬಹುದು ಅಥವಾ ಬಿಡಬಹುದು. ಮಾಡುತ್ತಾರೆ ಎಂಬುದು ಊಹೆ-ಕಲ್ಪನೆ. ಆದ್ದರಿಂದ lands to the landless ಎಂಬುದು ಅಷ್ಟೊಂದು ಸರಿಹೋಗುವು ದಿಲ್ಲ. ಆದ್ದರಿಂದ ಈ ಘೋಷಣೆಯ ವ್ಯಾಖ್ಯೆಯು ಅತಿ ವ್ಯಾಪ್ತಿದೋಷದಿಂದ ದುಷ್ಟವಾದುದು. ಈ ನೀತಿಯಿಂದ ವ್ಯವಸಾಯ ಬಾಬಿನಲ್ಲಿ ಉತ್ಪತ್ತಿ ಪರಮಾವಧಿಯನ್ನು ಮುಟ್ಟಲು ಸಹಾಯಕವಾಗುವುದಿಲ್ಲ. ಈ ಬಗೆಯ ಉದ್ಘೋಷಣೆ ವ್ಯರ್ಥ ಎಂದು ಹೇಳಬೇಕಾಗಿದೆ. ಇದಕ್ಕೆ ಬದಲು 'Lands to growers' ಎಂದರೆ ಯಾರು ಬೆಳೆಯುತ್ತಾರೋ ಅವರಿಗೆ ಭೂಮಿ ಎಂದು ಒಂದು ವೇಳೆ ಹೇಳಿದ್ದರೆ ಸಂಯುಕ್ತವಾಗುತ್ತಿತ್ತು, ಯುಕ್ತಿ ಯುಕ್ತವಾಗುತ್ತಿತ್ತು. ಆದರೆ ಹೀಗೆ ಮಾಡದೆ land to the landless ಎಂದಿಟ್ಟಿರುವುದರಿಂದ ಮೂಲ ಉದ್ದೇಶ-ಉತ್ಪಾದನೆ ಹೆಚ್ಚಿಸುವುದು ಸಾಧ್ಯವಾಗು ವುದಿಲ್ಲ. ಆದ್ದರಿಂದ ರಿಪೋರ್ಟಿನಲ್ಲಿ ಸೂಚಿಸಿರುವ ಸಾಧನೆಯ ಈ ಭಾಗ ಎಂದರೆ ಎರಡು ಉಪಾಯಗಳ ಪೈಕಿ 2ನೆಯ ಈ ಭಾಗ it stands Invalid. ಇದರಲ್ಲಿ ಇನ್ನೊಂದು ದೋಷವೂ ಇದೆ. ಅದು ಯಾವುದೆಂದರೆ ಭೂಹೀನರ ಆಶೆ ಆಕಾಂಕ್ಷೆಗಳನ್ನು ತೃಪ್ತಿಮಾಡಬೇಕೆಂದಿರುವುದು. To satisfy the aspirations, whose aspirations? The aspirations of landlords. Not to satisfy the aspirations of maximum production but to satisfy the aspirations of the landless. ಉತ್ಪತ್ತಿ ಹೆಚ್ಚಾಗಬೇಕೆಂಬ ಉದ್ದೇಶವಷ್ಟೇ ಇದ್ದಿದ್ದರೆ ಉತ್ತಮ ವಾಗಿತ್ತು. ಆದರೆ ಇದರಲ್ಲಿನ ಆಶಯವೇನೆಂದರೆ, ಯಾರಿಗೆ ಜಮೀನಿಲ್ಲವೋ ಅವರಿಗೆ ಜಮೀನು ಕೊಟ್ಟು ಅವರನ್ನು ತೃಪ್ತಿಪಡಿಸಬೇಕು ಎಂದಿರುವುದರಿಂದ, ಅಷ್ಟು ಮಾತ್ರ ಆಗಬಹುದು. ಆದರೆ ಉತ್ಪತ್ತಿಯಿಂದಿಗೂ ಹೆಚ್ಚಾಗುವುದಿಲ್ಲ. ಆದುದರಿಂದ Lands to the landless ಎನ್ನುವುದಕ್ಕೆ ಬದಲು "lands to growers" ಎಂದಿದ್ದರೆ It would have been more appropriate. "Tiller the owner" or (Land to the tiller) ಎನ್ನುವ ಒಂದು ಉದ್ಘೋಷವೂ ಇದೆ. ಇದೂ ಕೂಡ ನಿರರ್ಥಕ ಹಾಗೂ ನಿರುಪಯೋಗವಾದುದು. Lands to the landless ಎನ್ನುವುದು ಹೇಗೆ ನಿರರ್ಥಕವೋ, ಉಪಯೋಗ ವಾಗುವುದಿಲ್ಲವೋ ಹಾಗೆಯೇ lands to tillers ಎಂಬುದೂ ಹಾಗೆಯೇ. ಇದರಿಂದಲೂ ಯಾವ ಉದ್ದೇಶ ಸಿದ್ಧಿಯಾಗುವುದಿಲ್ಲ. ಏಕೆಂದರೆ, ದುಡಿಯುವವರೆಲ್ಲ ಮಾಲೀಕರು ಎಂದೆನ್ನುವು ದಾದರೆ ಈ ವಿಧಾನಸೌಧವನ್ನು ಕಟ್ಟಿದಂಥ (ಗೊಂಡಿ) ಕೂಲಿ ಜನರೇ ಈ ವಿಧಾನಸೌಧದ ಮಾಲಕರಾಗಬೇಕಾಗುತ್ತದೆ. ಮಾಲಿಕೀ ಹಕ್ಕು ಅವರ ಕಡೆಗೆ ಹೋಗುತ್ತದೆ. ಮೈಸೂರು ಸರಕಾರ ದವರು ಮಾಲೀಕರಾಗಲು ಶಕ್ಯವಿಲ್ಲ. ಈ ವಿಧಾನ ಸೌಧ ಇಮಾರತಿಯನ್ನು ಅವರಿಗೆ ಬಿಟ್ಟುಕೊಡ ಬೇಕಾಗುತ್ತದೆ. ಒಬ್ಬ ದುಡಿಯುವವನು ಉಳು ವವನು, ತನ್ನ ದುಡಿತದಿಂದಲೇ-ಉಳುವತನ ದಿಂದಲೇ, ಇನ್ನೊಬ್ಬನ ಆಸ್ತಿಯ ಮೇಲೆ ಮಾಲಿಕ ನಾಗುವುದಾದರೆ ಇದು ವ್ಯವಹಾರ ನೀತಿಯು ಕ್ರಮವೋ? ಎಷ್ಟು ವಿಚಿತ್ರ ಅವ್ಯವಸ್ಥೆ ಇದು? ಪ್ರತಿಯೊಬ್ಬರೂ ತಂತಮ್ಮ ಮನೆಯಲ್ಲಿ ದುಡಿಯುವುದ ಕ್ಕಾಗಿ ನೇಕಾರರನ್ನು ಇಟ್ಟುಕೊಳ್ಳುತ್ತಾರೆ. ಆ ದುಡಿಯುವ ನೇಕಾರ ಜನರೇ ಮಾಲಕರೋ? ಎಂಥ ಸಂಕರದೋಷವಿದು? ಶಾರೀರಿಕ ದುಡಿತವೇ ಅದರ ಮಾಲೀಕತನವೋ? ಹೀಗಾದರೆ, ಮಾಲಿಕತನವು ಎಂದರೇನು? ಅದು ಎಂಥಾದ್ದು? ಯಾವುದು, ಅವರಿಗೆ ಮುಟ್ಟುವಂಥ ಪರಿಹಾರ ಧನವೆಲ್ಲಿ? ಜಗತ್ತಿ ನಲ್ಲಿ ವ್ಯವಹಾರದ ನೀತಿಯು ಕ್ರಮವು ಯಾವುದು? ಹೀಗಾದರೆ, ವ್ಯವಹಾರವೆಲ್ಲ ತಪ್ಪಿಹೋಗಿ ಎಲ್ಲಿಯೂ ಯಾವುದೂ ಸ್ಥಿರವಾಗಿ ನ್ಯಾಯ ನೀತಿಯಿಂದ ನಡೆಯ ಲಾರದು. ಅಂದ ಮೇಲೆ "Tiller—the owner" ಎಂದೆನ್ನುವುದಾಗಲೀ, ಈ ಪ್ರಕಾರ ಕಾರ್ಯ ರೂಪಕ್ಕೆ ತರುವುದಾಗಲೀ ಯುಕ್ತವಲ್ಲ. "Tiller is the owner ಎನ್ನುವುದು ಪ್ಲಾನಿಂಗ್ ಕಮಿಷನ್ನ ಘೋಷಣೆಯಾಗಲೀ ಯಾರದೇ ಆಗಲಿ ಇದು ನಿರರ್ಥಕ Tiller is the owner ಎನ್ನುವುದನ್ನು ತೆಗೆದು ಹಾಕಬೇಕು. ಇದಕ್ಕೆ ಬದಲಾಗಿ "Grower is the owner" ಎಂದರೆ, ಯಾವನು ಬೆಳೆಸುತ್ತಾನೋ ಅವನು ಮಾಲಿಕ ಎಂದು ಒಂದು ವೇಳೆ ಎಂದರೆ ಯೋಗ್ಯವಾಗಬಹುದು.

ಶ್ರೀ ಎಸ್. ಡಿ. ಕೋಠಾವಳೆ (ಚಿಕ್ಕೋಡಿ).—ಪ್ರತ್ಯಕ್ಷ grower tiller ಆಗಬಹುದು. ಅಥವಾ owner ಆದರೂ ಆಗಬಹುದು. ಅವರು ಹೇಳುತ್ತಿರುವುದು ಅರ್ಥವಾಗುವುದಿಲ್ಲ.

ಶ್ರೀ ಬಿ. ಜಿ. ಖೋತ್.—Tillers (or Tenants) ಒಂದು ಭಾಗ, owner ಒಂದು ಭಾಗ labourer ಒಂದು ಭಾಗ. ಹೀಗೆ ಮೂರು ಭಾಗಗಳು ಬೆಳೆಸುವುದಕ್ಕೆ ಬೇಕು. ಅಂದರೆ, ಹೆಚ್ಚಿಗೆ ಉತ್ಪನ್ನ ಬೆಳೆಸುವುದಕ್ಕೆಬೇಕು. ಅಂದರೆ Tiller is the owner ಎಂದು ಮಾಡಬೇಕೆಂದು ಮಾಡಿದ್ದಾರೆ. ಇದು ಎಷ್ಟು ಅವ್ಯವಹಾರಿಕವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. Tiller is the owner ಎಂದರೆ, ಮೂಲ ಉದ್ದೇಶ ಸಿದ್ಧಿಯಾಗುವುದಿಲ್ಲ. ಹೆಚ್ಚು ಉತ್ಪತ್ತಿಯಾಗುವುದಿಲ್ಲ. ಯಾವನು ಹೆಚ್ಚು ಬೆಳೆಸುತ್ತಾನೋ ಅವನು owner. Grower is the owner, not the tiller.

Sri S. D. KOTHAVALE.—Tiller is also the grower.

ಶ್ರೀ ಬಿ. ಜಿ. ಖೋತ್.—All tillers certainly are not growers. ವ್ಯಾಪಾರ ವ್ಯವಹಾರ ಮಾಡುವವರು ಎಲ್ಲರೂ ಶ್ರೀಮಂತರಲ್ಲ. ಎಲ್ಲರಿಗೂ ಲಾಭವಾಗುವುದಿಲ್ಲ—ಅನೇಕರಿಗೆ ಲುಕ್ಸಾನಾಗಿ ದಿವಾಳಿ ತೆಗೆಯಬೇಕಾಗುತ್ತದೆ.

ಶ್ರೀ ಎಸ್. ಡಿ. ಕೋಠಾವಳೆ.—ಯಾವನು ಉತ್ಪತ್ತಿ ಮಾಡುತ್ತಾನೋ ಅವನು tiller. ಇಲ್ಲದಿದ್ದರೆ, tenant ಆಗುವುದಿಲ್ಲ.

ಶ್ರೀ ಬಿ. ಜಿ. ಖೋತ್.—ಯಾವನು ಕೇವಲ physically ದುಡಿಯುತ್ತಾನೋ ಅವನು ಮಾತ್ರ ಅಲ್ಲ. Physical labour finance and skill ಎಲ್ಲವೂ ಬೇಕು.

ಶ್ರೀ ಆರ್. ಚೆನ್ನಿಗರಾಮಯ್ಯ (ಸ್ಥಳೀಯ ಪ್ರಜಾಧಿಕಾರ ಶಾಖೆಯ ಮಂತ್ರಿಗಳು).—ಇದಕ್ಕೂ skill ಬೇಕೇ?

Sri B. G. KHOT.—There should be some skill-and it is mostly necessary behind the tilling like everything. ಮೊಟ್ಟೆ ಹೊಡೆಯುವುದಕ್ಕಾದರೂ ನೇಗಿಲು ಉಪಯೋಗಿಸುವುದಕ್ಕಾದರೂ skill ಬೇಕು. ಹೀಗೆ Tilling, skill, finance ಇವೆಲ್ಲ ಕೂಡಿ ಸಾಮರಸ್ಯದಿಂದ ಮಾಡಬೇಕು. ಬರಿಯ ಶಾರೀರಿಕವಾಗಿ ದುಡಿತ ಮಾಡುತ್ತೇನೆಂದರೆ ವ್ಯರ್ಥ ನೀತಿಯಾಗುತ್ತದೆ, ನಿರರ್ಥಕ ನೀತಿಯಾಗುತ್ತದೆ. ಮಾಲೀಕ ಮತ್ತು ಗೇಣಿದಾರರ ಸಂಬಂಧವನ್ನು ಕಡಮೆ ಮಾಡಬೇಕು. ಎಲ್ಲರನ್ನೂ ಭೂಮಾಲಿಕರನ್ನಾಗಿ ಮಾಡಬೇಕೆಂದು ಸರ್ಕಾರದ ಉದ್ದೇಶ. ಆದರೆ, ಈ ಇಬ್ಬರೂ ಸೇರಿ ಕೆಲಸಮಾಡಿದರೆ ಕಾರ್ಯ ಎಷ್ಟು ಸಿದ್ಧಿಯಾಗಬಹುದೋ ಅಷ್ಟು ಯಾವ ಒಬ್ಬನಿಂದಲೇ ಮಾತ್ರ ಆಗಲಿಕ್ಕೆ ಶಕ್ಯವಿಲ್ಲ. ಮಾಲೀಕ ಮತ್ತು ಉಳುವವನು ಇಬ್ಬರೂ ಸೇರಿ ಕೆಲಸ ಮಾಡಿದರೆ ಹೆಚ್ಚು ಉತ್ಕೃಷ್ಟವಾಗಿ ಸಾಧ್ಯವಾಗುತ್ತದೆ. ಹಾಗಿಲ್ಲದೆ ಬರಿಯ ಟೆನೆಂಟ್ ಅಥವಾ ಟಿಲ್ಲರ್ ತಾನೊಬ್ಬನೇ ಮಾಡಿದರೆ ಸಾಧ್ಯವಿಲ್ಲ. ಎಲ್ಲ ಸಾಧನ ಸಾಮುಗ್ರಿಗಳು ಯಾವ ಒಬ್ಬನಲ್ಲಿಯೂ ಬಹುತರವಾಗಿ ಇರಲು ಅಷ್ಟೊಂದು ಸಾಧ್ಯವಿಲ್ಲ. ಕೆಲಸ ಉತ್ತಮವಾಗಬೇಕಾದರೆ ಒಬ್ಬರಿಗಿಂತ ಇಬ್ಬರು ಮಾಡುವುದು ಉತ್ತಮ. ಇದು ಜಗತ್ತಿನಲ್ಲಿಯ ವ್ಯವಹಾರ ಸಿದ್ಧಾಂತ. ರೈತನೊಬ್ಬನೇ ಮಾಡಲು ಶಕ್ಯವಿಲ್ಲ. ಇದರಿಂದ Elimination of landlordship ವ್ಯವಹಾರಕ್ಕೆ ಯೋಗ್ಯವಲ್ಲವೆಂದು ಹೇಳಬೇಕಾಗುತ್ತದೆ. Landlord ಇರಬೇಕು; tenant ಇರಬೇಕು. ಟೆನೆಂಟ್ ಅಥವಾ ಗೇಣೀದಾರನ ಹಕ್ಕನ್ನು ರಕ್ಷಣೆ ಮಾಡುವುದಕ್ಕೆ, ಅವನ tenure ನಿಗದಿಮಾಡುವುದಕ್ಕೆ ಕಾನೂನು ಮಾಡಿ, fair rent ಗೊತ್ತುಮಾಡಿ ಅವನ ಹಿತವನ್ನು ಸಂರಕ್ಷಣೆ ಮಾಡಬಹುದು. ಭೂಮಿಯಿಂದ ಅವನನ್ನು ಬದಲಾಯಿಸಬಾರದೆಂದು ಮಾಡುವುದು ಉತ್ತಮ. ಮಾಲೀಕ ಮತ್ತು ರೈತ ಇಬ್ಬರೂ ಸೇರಿ ಸಹಕಾರದಿಂದ ಬೆಳೆಸಬೇಕು. ಇದರಿಂದ ಆಹಾರ ಉತ್ಪತ್ತಿ ನಿಯಮದಿಂದ ಹೆಚ್ಚಾಗುತ್ತದೆ. ಇದು ಒಬ್ಬನಿಂದಲೇ ಶಕ್ಯವಾಗುವುದಿಲ್ಲ. ಒಬ್ಬನು ತಾನೇ ಸ್ವತಃ ಮಾಡುವುದರಿಂದ ಇನ್ನೊಬ್ಬನ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ, ಸಾಧನ ಸಾಮುಗ್ರಿಗಳನ್ನು ಕೊಡಬೇಕಾಗುತ್ತದೆ. ಈ ಹೊರೆಯನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಆದುದರಿಂದ ಟೆನೆಂಟ್ ಲ್ಯಾಂಡ್‌ಲಾರ್ಡ್ ಸಂಬಂಧವನ್ನು ತಪ್ಪಿಸುವ ವ್ಯವಸ್ಥೆ ಅವ್ಯವಹಾರಿಕ ಹಾಗು ಅಯುಕ್ತವೆಂದು ಹೇಳಬೇಕಾಗಿದೆ. No doubt, there should be some restriction upon them. ಸಾಧ್ಯವಿದ್ದಷ್ಟು ಪರಮಾವಧಿ ಉತ್ಪತ್ತಿಯನ್ನು ಜಮೀನಿನಲ್ಲಿ ತೆಗೆಯಬೇಕು; ಇಲ್ಲದಿದ್ದರೆ ಅವನು ಮಾಲಿಕನಾಗುವುದಕ್ಕೆ ಯೋಗ್ಯನಲ್ಲ ಎಂದು ಮಾಡಿದರೆ ಅನುಕೂಲವಾಗುತ್ತದೆ. ಹಾಗಿಲ್ಲದೆ ಉಳುವವನನ್ನೇ ಮಾಲಿಕನನ್ನಾಗಿ ಮಾಡುತ್ತೇವೆಂದರೆ, ಅದು ಅನುಚಿತ. ಕತ್ತೆಯು ಹಾಗೆ ದುಡಿದರೆ ಉತ್ಪತ್ತಿ ಹೆಚ್ಚುತ್ತದೆನ್ನುವುದು ಶುದ್ಧ ತಪ್ಪು ಮತ್ತು ಅಸಂಭವ. ದುಡಿಮೆಯ ಜೊತೆಗೆ skill ಬೇಕು, finance ಬೇಕು. ಎಲ್ಲ ತರದಿಂದ ಶಕ್ತ ಮನುಷ್ಯನಾಗಿದ್ದರೆ ಅವನಿಂದ ಒಕ್ಕಲುತನ ಎಷ್ಟು ಕಡಮೆ ಖರ್ಚಿನಲ್ಲಿ ಸುಂದರ ರೀತಿಯಲ್ಲಿ ಆಗುತ್ತದೆಯೋ ಅಷ್ಟು ಮಟ್ಟಿಗೆ ಅಶಕ್ತ ಮನುಷ್ಯನಿಂದ ಆಗುವುದಿಲ್ಲ. ಮಾಲಿಕ ಮತ್ತು ಉಳುವವನು ಅಥವಾ ಗೇಣಿದಾರ ಇಬ್ಬರೂ ಕೂಡಿ ಮಾಡುವುದರಿಂದ ಉದ್ದೇಶ ಸಿದ್ಧಿ ಸುಲಭವಾಗಿ ನಿಶ್ಚಿತವಾಗಿ ಆಗುತ್ತದೆ. ಕಡಮೆ ಖರ್ಚಿನಿಂದ ಅಲ್ಪ ಪರಿಶ್ರಮದಿಂದ ಆಗುತ್ತದೆ. ಆದುದರಿಂದ ಗೇಣಿದಾರ ಮತ್ತು ಮಾಲೀಕ ಸಂಬಂಧವನ್ನು ತೆಗೆದುಹಾಕುವುದು, ಅಥವಾ ರದ್ದುಗೊಳಿಸುವುದು ಅವ್ಯವಹಾರಿಕವಾಗುತ್ತದೆ. Owner's rights safeguard ಮಾಡಬೇಕು, tenants rights safeguard ಮಾಡಬೇಕು. ರೈತನು fair rent ಕೊಡಬೇಕು. ಬೆಳೆಯನ್ನು ಜಾಸ್ತಿ ತೆಗೆಯಬೇಕೆಂಬ ಉದ್ದೇಶವಿರಬೇಕೆನ್ನುವುದಾದರೆ ಮಾಲೀಕನ ಮೇಲೆ, ಸ್ವಂತ ಬೇಸಾಯಮಾಡುವವನ ಮೇಲೆ ನಿರ್ಬಂಧ ಹಾಕಬೇಕು. ಯಾವ ಯಾವ ಜಮೀನಿನಲ್ಲಿ ಯಾವ ಯಾವ ಬೆಳೆಯನ್ನು ತೆಗೆಯುತ್ತಾರೆಯೋ ಅದನ್ನು ಪ್ರತಿಯೊಂದು ವರ್ಷ ಎಷ್ಟೆಷ್ಟು ಬೆಳೆಯಾಗಿದೆ ಎಂದು 20ವರ್ಷ 40ವರ್ಷಗಳ statistics ತೆಗೆದುಕೊಂಡು ಅದರ ಸರಾಸರಿ ಆಧಾರದ ಮೇಲೆ ಇಂತಿಷ್ಟು ಪ್ರಕಾರ ವರ್ಷದೊಳಗೆ ಆಯಾ ಬೆಳೆಯನ್ನು ಬೆಳೆಸಬೇಕೆಂಬ ನಿರ್ಬಂಧವನ್ನು ಹಾಕಬೇಕು. ಹೀಗೆ ಮಾಡುವಾಗ ಒಂದೆರಡು ನಾಲ್ಕು ವರ್ಷಕಾಲ ರಿಯಾಯಿತಿಯನ್ನು ಕೊಡಬಹುದು. ಹಾಗೆ ಬೆಳೆಸದೆ ಇದ್ದರೆ, restrictions ಅನುಸರಿಸಿ ಬೆಳೆ ತೆಗೆಯಲಿಲ್ಲವೆಂದರೆ ಅವನ ಕಡೆಯಿಂದ ಭೂಮಿಯನ್ನು ತೆಗೆದುಕೊಂಡು ಎರಡನೆಯವರ ಕಡೆಗೆ ಕೊಡಬಹುದು. ಪರಂತು landlord-tenant relationship ತೆಗೆಯುತ್ತೇವೆನ್ನುವುದು ಸಾಧುವಾದುದಲ್ಲ. ನಮ್ಮ ಮನೆಯಲ್ಲಿ ಒಬ್ಬ ಚಾಕರಿ ಮನುಷ್ಯನಿರುತ್ತಾನೆ. ಅವನು ದೈಹಿಕವಾಗಿ ದುಡಿಯುವವನಿರುತ್ತಾನೆ. ಅವನೇ tiller, ಅವನೇ physical labourer. ಯಾವನು physical labour ಹೆಚ್ಚಾಗಿ ಮಾಡುತ್ತಾನೆಯೋ he is supposed to be the tenant, he is supposed to be the tiller and the owner. ಈ ರೀತಿ ನಾವು ನೋಡ ಹೋದರೆ ಎಲ್ಲ ವ್ಯವಹಾರ ರೀತಿ ನೀತಿಗಳಲ್ಲಿ ಸಂಕತರ ದೋಷ ಸಿಕ್ಕಿತವಾಗಿ ಬರುವುದು. ಇಂಥ relations ಎಲ್ಲೆಲ್ಲಿಯೂ ಕಾಣಿಸುತ್ತವೆ. ಅದನ್ನನುಸರಿಸಿ ಒಬ್ಬ ಮಾಲಿಕನಿಗೆ ಒಬ್ಬ tiller ಅಥವಾ tenant ಬೇಕು. ಮಾಲೀಕನಿಗೆ ತಾನೇ ಇದ್ದರೂ ಒಬ್ಬ ನೌಕರಬೇಕಾಗುತ್ತಾನೆ. ಪ್ರತಿಯೊಬ್ಬರಲ್ಲಿಯೂ ಕೂಡ ಮನೆಯೊಳಗೆ ಅವರ ಸಹಾಯದ ವ್ಯವಸ್ಥೆ ಇದೆ. ಒಂದು ಆಫೀಸನ್ನು ತೆಗೆದುಕೊಂಡರೆ ಅಲ್ಲಿ ಒಬ್ಬ ನೌಕರನಿರುತ್ತಾನೆ. ಈ ಸಮಾಜರಚನೆ ಏನಿದೆ ಅದು ಬಹಳ ಅನುಭವಿಕ, ಬಹಳ ಉಪಯುಕ್ತ ಸಮನ್ವಯಕ್ಕೆ ಅಗತ್ಯವಾಗಿದೆ. ಇದನ್ನು ನಾವು ಏಕ್‌ದಂ ರದ್ದುಮಾಡಿ ಹೊಸ ಸ್ವರೂಪವನ್ನು ಕೊಡುತ್ತೇವೆಂದರೆ, ಅದರಿಂದ ಯಾವ ಕಾರ್ಯವೂ ಸಿದ್ಧಿಯಾಗುವುದಿಲ್ಲ. ಆದುದರಿಂದ ಈಗ ತಾಳಿರುವ ಮನೋಭಾವವನ್ನು ಬಿಟ್ಟುಬಿಡಬೇಕು.

ಸರಕಾರದವರು ಕಾಯಿದೆ ಮಾಡುತ್ತಾರೆ. ಆದರೆ ಅದರಿಂದ ಹಳ್ಳಿಯವರಿಗೆ ಬಹಳ ಕಷ್ಟವಾಗುತ್ತದೆ. ಅನೇಕ ದುಃಖಗಳಿಗೆ ಭಾಗಿಗಳಾಗುತ್ತಾರೆ. ಇದನ್ನು ವಿಚಾರಮಾಡಬೇಕು. ಬೊಂಬಾಯಿ ರೆಜಿಸ್ಲೇಚರ್‌ನಲ್ಲಿ 1938 ರಿಂದ 1958ರವರೆಗೂ ನನಗೆ ಬಂದಿರುವ ಅನುಭವವನ್ನು ತಿಳಿಸಬೇಕಾದರೆ, ಅಲ್ಲಿ Tenancy Act introduce ಮಾಡಿದರು. ಅಲ್ಲಿ ಆ ಕಾಯಿದೆ ಯಾವ ರೀತಿಯಲ್ಲಿಯೂ ಫಲಕಾರಿಯಾಗಿಲ್ಲ. ಇದರಿಂದ

rural life ಸರಿಹೋಗಲು ಶಕ್ಯವಿಲ್ಲ. ಇಂಥವುಗಳಿಂದ ಹಳ್ಳಿಯ ಜೀವನವು ಅಭಿವೃದ್ಧಿಗೆ ಬರುವುದಿಲ್ಲ. ಹಳ್ಳಿಯ ಸಮಾಜ ರಚನೆ, ವ್ಯವಹಾರ-ಪರಿಸ್ಥಿತಿ, ಸಾಮಾಜಿಕ ಸ್ಥಿತಿಗತಿಗಳು ಇವು ಒಂದು ರೀತಿಯಲ್ಲಿವೆ. ಒಬ್ಬ ದುಡಿಯುವವನಿದ್ದರೆ ಅವನಿಗೆ ಒಂದು ದರದಲ್ಲಿ ಮಜೂರಿ ಕೊಡುತ್ತೀರಿ. ಇವನಿಗೆ ಕೊಡುವ ಮಜೂರಿ ಬೇಕಾದರೆ ಜಾಸ್ತಿ ಮಾಡಿ; ಆದರೆ ಇವನಿಗೆ ಜಮೀನು ಕೊಟ್ಟು ಅದರಿಂದ ಹೆಚ್ಚು ಉತ್ಪನ್ನವನ್ನು ನಿರೀಕ್ಷೆಮಾಡುವುದು ಸರಿಯಲ್ಲ. ಇದರಿಂದ ಅವರ ಪುರೋಭಿವೃದ್ಧಿಯಾಗುತ್ತದೆನ್ನುವ ಅಭಿಪ್ರಾಯವಿದ್ದರೆ ಅದು ಸರಿಯಲ್ಲ. Production ಹೆಚ್ಚು ಮಾಡಬೇಕೆಂದು ಮಾಲೀಕರ ಮೇಲೆ ನಿರ್ಬಂಧಹಾಕಿ ಜಮೀನ್ದಾರನಿರಲಿ, absentee landlord ಇರಲಿ ಹೆಚ್ಚು ಜಮೀನಿರುವವರು ಯಾರೇ ಇರಲಿ ಅವರು labour classಗೆ ಹೆಚ್ಚು ಪಗಾರ ಕೊಡಲೇಬೇಕು, ಹೆಚ್ಚು ಮಜೂರಿಕೊಟ್ಟು production ಸಹ ಜಾಸ್ತಿ ಮಾಡಿಕೊಳ್ಳಬೇಕು. ಕೆಲಸ ಮಾಡುವವರಿಗೆ ಮಜೂರಿ ಹೆಚ್ಚಿಗೆ ಕೊಡದೆ ತಾನು ಮಾತ್ರ ಸುಖಪಡುತ್ತೇನೆಂದು ಅನ್ನುವುದು ಬಹಳ ಕಾಲ ನಡೆಯಲಾರದು. Successful ಆಗಿ ವ್ಯವಸಾಯಮಾಡಬೇಕು ಎಂದು ಹೇಳಿದರೆ ಇದ್ದದ್ದನ್ನೆಲ್ಲಾ ಇಲ್ಲದಾಗಿ ಮಾಡಿ ಹೊಸದೊಂದು ತ್ರಿಶಂಕುಸೃಷ್ಟಿ ನಿರ್ಮಾಣ ಮಾಡುವ ಹವ್ಯಾಸವನ್ನು ಬಿಡಬೇಕು. ಇದ್ದದ್ದೂ ಹೋಗುವುದಲ್ಲದೆ ಹೊಸದೂ ಸಿದ್ಧಿಯಾಗುವುದಿಲ್ಲ; ಮತ್ತು ನಿಮ್ಮ ಉದ್ದೇಶ ಪೂರ್ತಿಯಾಗುವುದಿಲ್ಲ. Agricultural production ಹೆಚ್ಚು ಆಗಲೇಬೇಕು, ತಾನು ಸುಖದಿಂದಿರಬೇಕು, ಇತರರೂ ಸುಖದಿಂದಿರಬೇಕು. ಎಲ್ಲರೂ ಸುಖದಿಂದಿರಬೇಕಾದರೆ, ಎಲ್ಲಾ ಪರಿಸ್ಥಿತಿಯನ್ನೂ ಯೋಗ್ಯ ರೀತಿಯಲ್ಲಿ ಸಮನ್ವಯ ಮಾಡಿ ಎಲ್ಲರಿಗೂ ಅನುಕೂಲವಾಗುವಂತೆ ಇದ್ದಸ್ಥಿತಿಯಲ್ಲಿಯೇ ಹೊಂದಿಕೊಂಡು ಕೆಲಸ ಮಾಡುವುದು ಒಳ್ಳೆಯದು. ನಮ್ಮ ಮುಂದಿರುವ ಈ ವರದಿಯು tenant ಪಕ್ಷಪಾತಿ report ಎಂದು ಹೇಳುತ್ತೇನೆ. ನನ್ನ impression ಈ ಪ್ರಕಾರ ಇದೆ. ಈ ಮಾತನ್ನು ನಾನು ದೊಡ್ಡ ಜಮೀನ್ದಾರನಿದ್ದೇನೆನ್ನುವ ದೃಷ್ಟಿಯಿಂದ ಹೇಳುತ್ತಿಲ್ಲ. ನಮ್ಮ ಉದ್ದೇಶ ಪೂರ್ತಿಯಾಗಬೇಕಾದರೆ agricultural production ಜಾಸ್ತಿ ಮಾಡುವುದು ಮುಖ್ಯವಾದುದು. 20 ವರ್ಷಗಳಿಂದ ಬೊಂಬಾಯಿನಲ್ಲಿ ಟೆನೆನ್ಸಿ ಕಾಯಿದೆ ಮಾಡಿದ್ದರೂ ಸಹ ಅದು failure ಆಗುತ್ತಿದೆ. ಈ ವರದಿಯಲ್ಲಿ ಸೂಚಿಸಿರುವ ಪ್ರಕಾರ ಮಾಡುವುದರಿಂದ agricultural production ಹೆಚ್ಚಾಗುವುದು ಎಂದು ತಮ್ಮ ಇಚ್ಛೆ ಇದೆ. ಇನ್ನೂ ತನಕ ಹೆಚ್ಚುವರಿ ಅಲ್ಲಿ ಏಕೆ ಆಗಿಲ್ಲ? ಯೋಗ್ಯ ಪರಿಶೀಲನೆಮಾಡಿ ಸಂಶೋಧನೆಮಾಡಿ ಎಂದರೆ ಕೆಲವರು ಅನೇಕ ಕಾರಣಗಳನ್ನು ಕೊಡುತ್ತಾರೆ. ನಮ್ಮ ದೃಷ್ಟಿಯಲ್ಲಿ ಅನೇಕ ಕಾರಣಗಳೊಳಗೆ ನಾನು ಹೇಳುವುದೂ ಒಂದು ಕಾರಣವಾಗಿದೆ. ಜಮೀನಿನ ವಿಷಯದಲ್ಲಿ ಮತ್ತು ಸಾಮಾಜಿಕ ರಚನೆಯ ವಿಷಯದಲ್ಲಿ ಸರ್ಕಾರದವರು ಪುನಃ ಪುನಃ ಕಾಯಿದೆಗಳನ್ನು ಮಾಡುತ್ತಿದ್ದಾರೆ. ಆ ಕಾಯಿದೆಗಳ ದೆಸೆಯಿಂದ agricultural production ಹಿಂದೆ ಬೀಳುತ್ತಿದೆ. ಕಾಯಿದೆಯಿಂದಲೇ ಇದೆಲ್ಲ ಸಾಧ್ಯವಾಗುವುದಿಲ್ಲವೆಂದು ನನ್ನ 40 ವರ್ಷಗಳ ಅನುಭವದಿಂದ ಹೇಳುತ್ತಿದ್ದೇನೆ. ಎಲ್ಲ ಕಡೆಯೂ ಕಾಯಿದೆ ಇದೆ. ಸರ್ವಸುಂದರವಾದ ಕಾಯಿದೆ ಇದೆ, ಅದಕ್ಕೆ ಹಿಂದೂಸ್ತಾನ ಸರ್ಕಾರದಿಂದ ಸಹಾಯವಾಗುತ್ತದೆ ಎನ್ನುವ ಹಾಗಿದ್ದರೆ 20 ವರ್ಷಗಳ ಅವಧಿಯಲ್ಲಿ 1938ರಿಂದ 1958ರ ತನಕ experiment after experiment ಮಾಡಿ ಒಂದನ್ನು ಹಿಂದಕ್ಕೆ ತೆಗೆದುಕೊಂಡು ಬೇರೊಂದನ್ನು ತಂದರೂ ಅದು ಕಾರ್ಯಕಾರಿಯಾಗಿಲ್ಲ. ಅದರಿಂದ ಕಾರ್ಯಸಿದ್ಧಿಯಾಗಿಲ್ಲ. ಈ ಅನುಭವ ಏನು ಹೇಳುತ್ತದೆಂಬುದನ್ನು ವಿಚಾರ ಮಾಡಿದ್ದೀರಾ? ನಾವು ಬೇರೆ Tenancy Act ಮಾಡುತ್ತೇವೆ; Bombay Tenancy Act ಬೇಡ ಎಂದು ಹೇಳುತ್ತೀರಿ. ಇದರಲ್ಲಿ landlord ಮತ್ತು tenant relationship ಈಗ ಏನಿದೆ ಅದನ್ನ ಬದಲಾವಣೆ ಮಾಡುವುದಕ್ಕೆ ಹೋಗಬೇಡಿ.

Grow more food ಎಂಬುದು ನಿಮ್ಮ ಪ್ರಯತ್ನವಾಗಿದೆ. ಹಾಗೆ ಮಾಡಲು ಏನು ಮಾಡಬೇಕೆಂದು ಯೋಜನೆಮಾಡಿ. ಕೇವಲ tenant ಮತ್ತು landlord relationship ತೆಗೆದುಹಾಕಿದರೆ ಎಷ್ಟು ಮಾತ್ರಕ್ಕೂ ಸಮನ್ವಯವಾಗುವುದಿಲ್ಲ. ಯಾವುದೇ ರೀತಿಯ ಕಾಯಿದೆಯನ್ನು ಮಾಡಿದರೂ ಅದು ನಮ್ಮ ಹಳ್ಳಿಯ ಜೀವನಕ್ಕೆ ಹೊಂದುವಂಥಾದ್ದು, ಸಮಾಜ ರಚನೆಗೆ ಅನುಕೂಲ ಇರುವಂಥಾದ್ದು, ಪ್ರೊಡಕ್ಷನ್ ಹೆಚ್ಚುವಂಥಾದ್ದು ಆಗಿರಬೇಕು. Landlord ಮತ್ತು tenant relationship ಈಗಿರುವಂತೆಯೇ ಬಿಟ್ಟು tenantಗೆ ಯಾವ ರೀತಿ ಸಂರಕ್ಷಣೆ ಬೇಕೋ ಆ ರೀತಿ ಕೊಟ್ಟು ಮಾಲೀಕನಿಗೆ ಸಹಿತ ರಕ್ಷಣೆಕೊಟ್ಟು ಜಮೀನಿನಲ್ಲಿ ಇಂತಿಷ್ಟು production ಮಾಡಲೇಬೇಕು; ಇಲ್ಲದಿದ್ದರೆ ಅವರ ಭೂಮಿಯನ್ನು ಕಸಿದುಕೊಳ್ಳುತ್ತೇವೆಂದು ಕಾಯಿದೆಮಾಡಿದರೆ ಅಡ್ಡಿ ಇಲ್ಲ. ಇದರಿಂದ ಎಲ್ಲರಿಗೂ ಸಹ ಉಪಯೋಗವಾದೀತು.

ಆ ಪ್ರಕಾರ ಕಾಯಿದೆ ಮಾಡಿದರೆ ಚಿಂತೆ ಇಲ್ಲ. ಆದರೆ ಸಾಧ್ಯವು-ಸಿದ್ಧಿಯು ಏನನ್ನು ಅವಲಂಬಿಸಿದೆ? ಕಾರಣದ ಮೇಲೆ ಕಾರ್ಯಸಿದ್ಧಿ. ಇದು ಜಗತ್ತಿನಲ್ಲಿ ನಿತ್ಯ. ಗುರಿ ಮತ್ತು ಉಪಾಯ ಎರಡನ್ನೂ ಹೊಂದಿಸುವುದಕ್ಕೆ ಯೋಚನೆಮಾಡಿ. ಆವಾಗ ಉದ್ದೇಶವನ್ನು ಭರ್ತಿಮಾಡುವುದಕ್ಕೆ ಸಾಧ್ಯ. ಇದನ್ನು ವಿಚಾರಮಾಡಿ ನೋಡಿ. ವ್ಯವಹಾರದಲ್ಲಿ, ಸಾಮಾಜಿಕ ವ್ಯವಸ್ಥೆಯಲ್ಲಿ ಇಷ್ಟು ವರ್ಷಮಾಡಿದ ಕಾಯಿದೆಯ ಅನುಭವವನ್ನು, ಇದಕ್ಕೆ ಒರೆ ಹಚ್ಚಿ, ಪರೀಕ್ಷೆಮಾಡಿ, ಚೌಕಾಶಿಮಾಡಿ. ಈ 20 ವರ್ಷಗಳ ಅನುಭವವನ್ನು ನೋಡಿದರೆ, ಇದು ಫೇಲ್ಯೂರ್ ಆಗಿದೆ ಎಂದೆನಿಸುವುದು. ಆದ್ದರಿಂದ ಹೊಸ means ಯಾವ ರೀತಿಯಿಂದ ಅಂಗೀಕಾರ ಮಾಡಬೇಕು ಎನ್ನುವುದನ್ನು ನೋಡಿ. ನಮ್ಮ aims successful ಆಗುತ್ತವೆಯೋ ಎನ್ನುವುದನ್ನು ವಿಚಾರ ಮಾಡಿ.

ಈ ಎರಡು ಸಾಧನ ದೆಸೆಯಿಂದ ಸೀಲಿಂಗ್ ಹಾಕಬೇಕು. ಸೀಲಿಂಗ್ ಬೇಡ ಎಂದು ನಾನು ಅನ್ನುವುದಿಲ್ಲ. ಸೀಲಿಂಗ್ ಇಡಿ. ಆದರೆ ಫ್ಯಾಮಿಲಿ ಹೋಲ್ಡಿಂಗ್‌ಗೆ, ಮೆಜರಿಂಗ್ ರಾಡ್ ನಿರ್ಧರಿಸುವಾಗ, you have taken it as a presumption. ಅದನ್ನು ಹನ್ನೆರಡು ನೂರು ರೂಪಾಯಿ ನೆಟ್ ಇನ್‌ಕಂ ಎಂದು ಪ್ರಿಸ್ಯೂಂ ಮಾಡಿದ್ದೀರಿ. ಸಾಮಾನ್ಯವಾದ ರೀತಿಯಲ್ಲಿ ಲೆಕ್ಕ ಹಾಕಿದರೆ ಒಂದು ವರ್ಷಕ್ಕೆ ಹನ್ನೆರಡು ನೂರು ರೂಪಾಯಿ ಆದಾಯದಂತೆ, ಐದು ಜನರಿರುವ ಒಂದು ಕುಟುಂಬದ ಪರಡೇ ಪರ್‌ಕ್ಯಾಪಿಟ ಇನ್‌ಕಂ ಏನು ಬಿತ್ತು? $10\frac{1}{2}$ ಆಣೆ ಬಿತ್ತು. ನಾವು ಪ್ಲಾನಿಂಗ್ ಕಮಿಷನ್‌ನವರು ಹೇಳಿರುವುದನ್ನು ಕಣ್ಣು ಮುಚ್ಚಿಕೊಂಡು ಅನುಸರಿಸುವುದಕ್ಕಾಗುವುದಿಲ್ಲ. ಲೆಕ್ಕ ಹಾಕಿ ಹನ್ನೆರಡು ನೂರು ರೂಪಾಯಿ ಅಂದರೆ ತಿಂಗಳಿಗೆ ಒಂದು ನೂರು ರೂಪಾಯಿ ಬೇಕು. ಐದು ಮಂದಿಗೆ ಒಂದು ನೂರು ರೂಪಾಯಿ ಬಿತ್ತು ಎಂದರೆ, ಒಬ್ಬ

(SRI B. G. KHOT.)

ಮನುಷ್ಯನಿಗೆ 20 ರೂಪಾಯಿ ಬಿತ್ತು. ಹಾಗೆಂದರೆ, 30 ದಿವಸಕ್ಕೆ 20 ರೂಪಾಯಿ ಬಿತ್ತು. ಒಂದು ದಿವಸಕ್ಕೆ 10 ಆಣೆ ಬಿತ್ತು. ರಾತ್ರಿ ಹಗಲು ಬೆಳಗ್ಗೆ 9-10 ಗಂಟೆಯಿಂದ ದುಡಿದರೆ, ಒಂದು ರೂಪಾಯಿ ಸಹ ಬೀಳುವುದಿಲ್ಲ. ನೀವು ಹೋಗಿ ರೈಲ್ವೆ ಸ್ಟೇಷನ್‌ನಲ್ಲಿ ನೋಡಿ, ಒಬ್ಬ ಹಮಾಲಿ ಒಂದು ದಿವಸಕ್ಕೆ ಮೂರು ನಾಲ್ಕು ರೂಪಾಯಿ ಸಹಜವಾಗಿ ದುಡಿಯುತ್ತಾನೆ. ಈ ಅಂಶವನ್ನು ನೋಡಿದರೆ, ನೀವು ಮೆಜರಿಂಗ್ ರಾಡ್ ಎಂದು ಏನನ್ನು ಹಿಡಿದುಕೊಂಡಿದ್ದೀರೋ, ಅದು ಜೀವನ ಕ್ರಮಕ್ಕೆ ಎಷ್ಟು ಆಘಾತಮಾಡುತ್ತಾ ಇದೆ ಎಂಬುದು ಗೊತ್ತಾಗತ್ತದೆ. ಹತ್ತು ಆಣೆಗೆ ನಮ್ಮ ಕಡೆಯಿಂದ ಭೂಮಿ ಕಸಿದುಕೊಳ್ಳುವುದಕ್ಕೆ ತಯಾರಾಗಿದ್ದೀರಿ. ಲ್ಯಾಂಡ್‌ಲಾರ್ಡ್ಸ್ ಮತ್ತು ಲ್ಯಾಂಡ್ ಓನರ್ಸ್ ಕಡೆಯಿಂದ ಭೂಮಿ ತೆಗೆದುಕೊಳ್ಳುವುದಕ್ಕೆ ತಯಾರಿದ್ದೀರಿ. ಆದರೆ ಅವರಿಗೆ ರಿಟರ್ನ್ ಏನು ಕೊಡುತ್ತೀರಿ? ಎಲ್ಲರಿಗೂ ಸುಖವಾಗಬೇಕೆಂಬ ದೃಷ್ಟಿಯಿಂದ ಈ ಕಾಯಿದೆಯನ್ನು ತೆಗೆದುಕೊಂಡಿದ್ದೀರಿ.

ಈ ಮೆಜರಿಂಗ್ ರಾಡ್‌ನ್ನು ಫ್ಯಾಮಿಲಿ ಹೋಲ್ಡಿಂಗ್ ದೆಶೆಯಿಂದ ನೋಡುತ್ತಿದ್ದೇವೆ. ಬೇಸಿಕ್ ಹೋಲ್ಡಿಂಗ್ ಫ್ಯಾಮಿಲಿ ಹೋಲ್ಡಿಂಗ್‌ನ ಮೂರನೆಯ ಒಂದು ಭಾಗ. ಆವಾಗ ಒಬ್ಬ ಮನುಷ್ಯನಿಗೆ ಒಂದು ದಿವಸಕ್ಕೆ ಮೂರುವರೆ ಆಣೆ ಬೇಸಿಕ್ ಹೋಲ್ಡಿಂಗ್ ಬಿತ್ತು. ಫ್ಯಾಮಿಲಿ ಹೋಲ್ಡಿಂಗ್ 10 ಆಣೆ ಬಿತ್ತು. ಇದರ ಸೀಲಿಂಗ್ ನಾಲ್ಕೂವರೆ ಪಟ್ಟು ಅಂದರೆ ಹೆಚ್ಚು ಹೆಚ್ಚು ಮೂರು ರೂಪಾಯಿ ಆಗುತ್ತದೆ. ಮೂರು ರೂಪಾಯಿಗಳಲ್ಲಿ ಉದರ ನಿರ್ವಾಹ ಮಾಡಬೇಕು, ಇದರಲ್ಲಿ ಮದುವೆ ಮುಂಜಿ ಮಾಡಿರಿ; ಮನೆ ಕಟ್ಟಿಕೊಳ್ಳಿರಿ; ರೋಗ ರುಜಿನಗಳಿಗಾಗಿ ಔಷಧ ಕೊಡಿರಿ; ಹುಡುಗರನ್ನು ಶಾಲೆಗೆ ಕಳುಹಿಸಿ ವಿದ್ಯಾಬುದ್ಧಿ ಕಲಿಸಿರಿ; ಮತ್ತು ಇತರ ಅನೇಕ ನೈಮಿತ್ತಿಕ ಕಾರ್ಯಗಳನ್ನು ಮಾಡಬೇಕು. ವ್ಯವಹಾರದಲ್ಲಿ ಇವುಗಳನ್ನೆಲ್ಲಾ ಮಾಡುವುದು ಸಾಧ್ಯವೇ? ನೀವು ಮಾಡಿಕೊಡಿರಿ. ಎಲ್ಲರಿಗೂ ಮಕ್ಕಳುಮರಿ ಇರುವುದಿಲ್ಲವೇ? ಮಕ್ಕಳು ಮರಿ ಇದ್ದವರು, ಅವರು ನಿತ್ಯ ಜೀವನ ನಡೆಸುವುದು ಹೇಗೆ? ಹುಡುಗರನ್ನು ವಿದ್ಯಾವಂತರನ್ನಾಗಿ ಮಾಡುವುದು ಹೇಗೆ? ಮನೆ ಕಟ್ಟಬೇಕಾದರೆ ದುಡ್ಡು ಎಲ್ಲಿಂದ ದೊರೆಯಬೇಕು? ಮದುವೆ ಮುಂಜಿ ಮಾಡಬೇಕಾದರೆ, ಹಣ-ದುಡ್ಡು ರೂಪಾಯಿ ಖರ್ಚುಮಾಡಬೇಡವೇ? ಹಾಗಾದರೆ ಮದುವೆ ಮುಂಜಿ ಮಾಡಕೂಡದು ಅನ್ನುತ್ತೀರಾ? ಸಂಸಾರ ಮಾಡಕೂಡದು ಅನ್ನುತ್ತೀರಾ? ಎಷ್ಟು ದಿವಸಗಳವರೆಗೆ ಸಂಸಾರ ಮಾಡುತ್ತಿರೋ, ಅಲ್ಲಿಯತನಕ ಈ ಪರಿಸ್ಥಿತಿ ಇದ್ದೇ ಇರುತ್ತದೆ. ಹೀಗೆ, ನಿಮ್ಮ measuring rod ಇದೆಯಲ್ಲಾ ಅದು ವ್ಯವಹಾರ ಶೂನ್ಯವಿದೆ. It is as impractical as anything ವ್ಯಕ್ತಿಶಃ ನಾನು ಈ ಸಂಬಂಧದಲ್ಲಿ ಈ ರೀತಿ ಹೇಳುತ್ತಿಲ್ಲ. ಈ ಕಾಯಿದೆಯನ್ನು ನಾನೇ ಮಾಡಿದ್ದರೂ, ನನ್ನದೂ ತಪ್ಪೇ. ಈ ಆದಾಯದಲ್ಲಿ ಐದು ಮಂದಿ ಸಾಧಾರಣವಾದ ಸಾದಾ ಜೀವನ (simple life) ಸಹ ನಡೆಸುವುದಕ್ಕೆ ಸಾಧ್ಯವೇ? ಹುಡುಗರ ವಿದ್ಯಾಭ್ಯಾಸ, ಮಕ್ಕಳ ಮದುವೆ ಮುಂಜಿ, ಇತ್ಯಾದಿಗಳು ಎಲ್ಲರಿಗೂ ಅನ್ವಯವಾಗುವ ಕೆಲಸಗಳು. ಇವುಗಳನ್ನು ನಡೆಸಲಿಕ್ಕೆ ಏನು ವ್ಯವಸ್ಥೆ ಮಾಡಿಕೊಟ್ಟಿದ್ದೀರಿ?

ನಮಗೆ ಯಾವ ರಿಪೋರ್ಟ್‌ನಲ್ಲಿ, ಯಾವ ಪ್ಲಾನಿಂಗ್‌ನೊಳಗೆ ಈ ವಿಚಾರದಲ್ಲಿ ಯೋಚನೆ ಮಾಡಿದ್ದೀರಿ ಎಂಬುದನ್ನು ಹೇಳಿರಿ; ಮತ್ತು ಇದಕ್ಕನುಸರಿಸಿ ಕಾಯಿದೆ ಮಾಡಿ, ಭೂಮಿಯನ್ನು ಕಸಿದುಕೊಂಡರೆ ಕಸಿದುಕೊಳ್ಳಿರಿ; ಚಿಂತೆ ಇಲ್ಲ. ನಾವು ಸುಖದಿಂದ ಸಾದಾ ಸಾಮಾನ್ಯವಾಗಿ ಜೀವನ ಮಾಡಲಿಕ್ಕೆ ಇರುವ ಸಾಧನ ಮಾರ್ಗವನ್ನು ಹೇಳಿಕೊಡಿ. ಯಾವ ಸಾಧನೆಯನ್ನು ಅಂಗೀಕಾರ ಮಾಡುತ್ತೀರೋ ಅದನ್ನು ನಿರ್ದೋಷದಿಂದ ಜಗತ್ತಿನ ಮುಂದಿಡಿ. ಯಾವ ತರಹದಿಂದಲೂ common simple life lead ಮಾಡುವಾಗ ಆತಂಕ ಬರಬಾರದು. ಆ ಪರಿಸ್ಥಿತಿ ಎಲ್ಲಿಯ ವರೆಗೆ ಇರುವುದಿಲ್ಲವೋ ಅವರೆಗೂ ಈ ಫ್ಯಾಮಿಲಿ ಹೋಲ್ಡಿಂಗ್ ಅಥವಾ ಸೀಲಿಂಗ್ ಕಾಯಿದೆ ಯಶಸ್ವಿಯಾಗಲು ಕಠಿಣವಾಗುತ್ತದೆ ಎಂದು ಹೇಳುತ್ತೇನೆ. ಟೆನೆನ್ಸಿ ಲಾ ಎಂದು ಈಗ ಏನಿದೆ ಅದಕ್ಕನುಸರಿಸಿ ನಡೆಯುತ್ತಿರುವ ಕಾರ್ಯಕ್ರಮ, ಅಥವಾ ತಮ್ಮ ವರದಿಯ ಪ್ರಕಾರ ಪ್ಲಾನಿಂಗ್ ಕಮಿಷನ್ನಿನವರು ಸೂಚಿಸಿರುವಂತೆ ಹೊಸ ಕಾಯಿದೆ ನಡೆಯುವುದಾದರೆ ಇದರಿಂದ ಎಲ್ಲರ ಪರಿಸ್ಥಿತಿಯನ್ನು endanger ಮಾಡುತ್ತೀರಿ. ಹೆಚ್ಚು ಕಷ್ಟ ನಷ್ಟದ ಪರಿಸ್ಥಿತಿಯನ್ನು ಉಂಟುಮಾಡುತ್ತಿದ್ದೀರಿ ಎಂದು ಹೇಳುತ್ತೇನೆ. ಇಂತಹ ಕಾಯಿದೆಯನ್ನು ಮಾಡಬಾರದು. ಯಾವ ವ್ಯಕ್ತಿಗೇ ಆಗಲಿ, ಸುಖ ಸಂತೋಷ ಇರುವಂತಹ ರೀತಿಯಲ್ಲಿ ಕಾಯಿದೆಯನ್ನು ಮಾಡಬೇಕು. ಹಾಗಾಗುವುದಕ್ಕೆ ಇರುವ ಶುಚಿರ್ಭೂತವಾದ ಸಾಧನೆ ಏನಿದೆಯೋ ಅದನ್ನು ಅಂಗೀಕಾರ ಮಾಡಬೇಕು. ಎಲ್ಲ ಭೂಮಿಯೂ ತನಗೆ ಬರಲಿ ಎಂದು ಅಪೇಕ್ಷೆಮಾಡತಕ್ಕ ಜನ ಇದ್ದಾರೆ. ಈಗಿನ ಕಾಲದಲ್ಲಿ ನ್ಯಾಯ, ನೀತಿ ಎಲ್ಲಾ ಹೊರಟುಹೋಗುತ್ತಿದೆ. ತನ್ನ ಗರಜಿಗೆ ಅಂದರೆ ಅವಶ್ಯಕತೆಗೆ ಎಷ್ಟು ಬೇಕೋ ಅಷ್ಟು ಇರಲಿ ಎನ್ನುವ ಜನ ಈಗಿನ ವ್ಯವಹಾರದಲ್ಲಿ ಬಹಳ ಕಡಮೆ. ಕೋಟಿ ರೂಪಾಯಿ ಸಂಪಾದನೆಮಾಡಿದ ಮೇಲೆ ದಶಕೋಟಿ ಯಾವಾಗ ಆದೀತು ಎಂದು ಯೋಚನೆ ಮಾಡತಕ್ಕದ್ದು ಸ್ವಾಭಾವಿಕ. ಆದರೆ ಇದ್ದುದರಲ್ಲಿಯೇ ಸಂತುಷ್ಟವಾಗಿರುವುದು ಮತ್ತು ಸಾಧಾರಣವಾಗಿ ತನ್ನ ಅವಶ್ಯಕತೆಗಿಂತ ಹೆಚ್ಚಿನ ಸಂಪಾದನೆಯನ್ನು ಬಿಡುವುದು ಕಠಿಣ. ಆದಕಾರಣ, ಸಾಮಾನ್ಯವಾಗಿ simple life lead ಮಾಡುವುದಕ್ಕೆ ತಕ್ಕಷ್ಟು ಅವಕಾಶವಿರಬೇಕು. ಒಬ್ಬ ಮನುಷ್ಯ ತನ್ನ ಪರಿಸ್ಥಿತಿಗನುಸಾರವಾಗಿ ಫ್ಯಾಮಿಲಿ ಮೇನ್‌ಟೇನ್ ಮಾಡುವುದಕ್ಕೆ ಎಷ್ಟು ಆವಶ್ಯಕತೆ ಇದೆಯೋ ಅಷ್ಟರಮಟ್ಟಿನ ಬಡ್ಜೆಟ್‌ನ್ನು ಅವನ ಮುಂದಿಡಿ. ಒಂದು ಸೀಲಿಂಗ್ ಹಾಕುವುದಾದರೆ ಆ ಸೀಲಿಂಗ್ ಎಷ್ಟು ಹಾಕಬೇಕೆಂದರೆ with his average labour he could lead an easy life. ಅದಕ್ಕೆ ಎಷ್ಟು ಬೇಕೋ ಅಷ್ಟು ಅವಕಾಶ ಮಾಡಿಕೊಡಿ. ಈ ನನ್ನ ವಿಚಾರಕ್ಕನುಸರಿಸಿ ಈ ಪ್ರಕಾರ ಒಂದು ಕಾಯಿದೆಯನ್ನು ಮಾಡಿದರೆ ಅದು ಯಶಸ್ವಿಯಾಗುತ್ತದೆ. ಪ್ಲಾನಿಂಗ್ ಕಮಿಷನ ಒಂದು ಪಾಲಿಸಿ ಇದೆ. ಈ ಪಾಲಿಸಿ ಪ್ರಕಾರ ಯಾವ ರೀತಿ ಮಾಡಬೇಕೆಂದು ಹೇಳುತ್ತಾರೋ ಆ ರೀತಿ ಮಾಡುತ್ತೇವೆ ಎಂದು ಹೇಳುತ್ತೀರಿ. ಅದು ನಮ್ಮ ರೂರಲ್ ಲೈಫ್‌ಗೆ ಸರಿಹೋಗುವುದಿಲ್ಲ. ನಮ್ಮ ಪರಿಸ್ಥಿತಿ ಹೇಗಿದೆಯೋ ಆ ಪ್ರಕಾರ, ರೂರಲ್ ಲೈಫ್‌ಗೆ ಅನುಸರಿಸಿ ನಿಮ್ಮ ಕಾಯಿದೆ ಇರಬೇಕು. ಇಲ್ಲದೆ ಹೋದ ಪಕ್ಷದಲ್ಲಿ ಅಗ್ರಿಕಲ್ಚರ್ ಈಗಿದ್ದಷ್ಟು ಸಹ ಇರದೇ ಅವ್ಯವಸ್ಥೆಯುಂಟಾಗುತ್ತದೆ. ಏಕೆಂದರೆ ಬೊಂಬಾಯಿ ಸ್ಟೇಟ್‌ನಲ್ಲಿ 20ವರ್ಷಗಳಿಂದ ನಾವು ನೋಡುತ್ತಿದ್ದೇವೆ. Land Reforms ಮಾಡಬೇಕು ಎಂದು ಹೇಳುತ್ತೀರಿ. ಈ ಸುಧಾರಣೆಯನ್ನು ಮಾಡುವ ವಿಷಯದಲ್ಲಿ ನನ್ನ ಮುಖ್ಯ ಆಶಯ ಒಂದೇ ಒಂದು

ಲ್ಯಾಂಡ್ ರಿಫಾರಂ ಎಂದರೆ ಅದು ಯಾವುದು? ಸರ್ಕಾರದವರು ಪ್ರತಿಯೊಬ್ಬ ವ್ಯವಸಾಯ ಮಾಡುವವನಿಗೂ ಅವಶ್ಯವಿದ್ದ ಸಹಾಯ ಮಾಡಬೇಕು; ಅವನಿಗೆ ಏನು ಬೇಕೋ ಅದನ್ನು ಕೊಡಬೇಕು. ಸದ್ಯಕ್ಕೆ ನಮಗೆ ಸುಧಾರಣೆಯ ಕಾಯಿದೆಗಿಂತ ಸಹಾಯಬೇಕು. ಆ ಮಾಡದೇ landlords ನ್ನು eliminate ಮಾಡುತ್ತೇವೆ ಎಂದು ಹೇಳಿ ಸ್ಕೀಂ ತಂದರೆ ಆ ಸ್ಕೀಮು ಯಶಸ್ವಿಯಾಗುವುದಿಲ್ಲ. ಮಾಕ್ಸಿಮಂ ಪ್ರೊಡಕ್ಷನ್‌ಗೆ ಸಹಾಯವಾಗುವುದಿಲ್ಲ. ಈ ಸಹಾಯಗಳು ಅನೇಕ ರೀತಿ ಇವೆ. ಅವು ಹೀಗಿವೆ:—ಮುಖ್ಯವಾಗಿ ಸರಕಾರದವರು ಪುನಃ ಪುನಃ ಹೊಸ ಹೊಸ ಕಾಯಿದೆಗಳನ್ನು ಮಾಡಬಾರದು, ಮಾಲೀಕ ಗೇಣಿದಾರ ಸಖ್ಯ, ಧನ ಮತ್ತು ಇತರ ಸಹಾಯ, ದನಗಳ ಮತ್ತು ಬೆಳೆಗಳ ವಿಮೆ (Insurance), ಬೆಳೆಗಳ ಕಿಮ್ಮತ್ತು ಮತ್ತು ದರಗಳು ದನಗಳ ವಧ ತಪ್ಪಿಸುವುದು, ಮತ್ತು ಬೇರೆ ಬೇರೆ ಸ್ಥಾನಗಳಲ್ಲಿರುವ ಜಮೀನುಗಳನ್ನು ಎಂದರೆ ಒಬ್ಬನ ಹತ್ತಿರ ಹೆಚ್ಚು ಜಮೀನಿದ್ದು ಪೂರ್ವದ ಭಾಗಕ್ಕೆ ಒಂದಷ್ಟು ಪಶ್ಚಿಮ ಭಾಗಕ್ಕೆ ಒಂದಷ್ಟು ಜಮೀನಿದ್ದ ಪಕ್ಷದಲ್ಲಿ ಜಮೀನು ಸಾಗುವಳಿ ಮಾಡುವ ದೃಷ್ಟಿಯಿಂದ ಅವುಗಳನ್ನೆಲ್ಲ, ಶಕ್ಯವಿದ್ದಷ್ಟು ಒಂದೇ ಕಡೆ ತಂದರೆ, ಅಥವಾ ಮಾಡಿಕೊಟ್ಟರೆ ಅನುಕೂಲ. ಆದ್ದರಿಂದ ಅಲ್ಲೊಂದಿಷ್ಟು, ಇಲ್ಲೊಂದಿಷ್ಟು ಜಮೀನು ಇದ್ದ ಭಾಗದಲ್ಲಿ Exchange ಮಾಡಿ ಒಂದೇಕಡೆ ಒಟ್ಟಿಗೆ ಮಾಡಿಕೊಡುವ ವಿಷಯವನ್ನು ಈ ಕಾಯಿದೆ ಮಾಡುವಾಗ ಯೋಚನೆ ಮಾಡಬೇಕು.

Sri U. M. MADAPPA (Chamarajanagar) —Consolidation ಮಾಡಬೇಕು.

Sri B. G. KHOT.—Consolidation is no exchange; that does not concern exchange. ಒಬ್ಬನ ಜಮೀನು ಪಶ್ಚಿಮದ ಕಡೆ ಸ್ವಲ್ಪ, ಇನ್ನೊಬ್ಬರ ಜಮೀನು ಪೂರ್ವದ ಕಡೆ ಸ್ವಲ್ಪ ಇದ್ದಲ್ಲಿ ಅಷ್ಟು ಜಮೀನನ್ನು ಒಂದೇ ಕಡೆಗೆ ಅಕ್ಕಪಕ್ಕದ ಆಯಾ ಜಮೀನಿನ ಮಾಲೀಕರ ಸಮ್ಮತಿಯಿಂದ ಒಟ್ಟುಗೂಡಿಸಿ ಕೊಟ್ಟಿದ್ದೇ ಆದರೆ Consolidation ಆಗಿ ಹೆಚ್ಚು ಆಹಾರ ಉತ್ಪನ್ನ ಮಾಡುವುದಕ್ಕೆ ಸಹಾಯಕವಾಗುತ್ತದೆ. This basic holding is a three anna scheme and the Family holding is a $10\frac{1}{2}$ anna scheme. ಬೇಸಿಕ್ ಹೋಲ್ಡಿಂಗ್ ಮೂರು ಆಣೆ ಸ್ಕೀಮು, ಫಾಮಿಲಿ ಹೋಲ್ಡಿಂಗ್ ಹತ್ತು ಆಣೆ ಸ್ಕೀಮು ಎಂದು ಮಾಡಲಾಗಿದೆ. ಈ ರೀತಿಯಾಗಿ ಭೂಮಿಯನ್ನು ಕಸಿದುಕೊಂಡುಬಿಟ್ಟರೆ ಜನ ಜೀವನ ಸುಖ ಹೇಗೆ ಆಗುವುದು? ಆದಕಾರಣ ಇದನ್ನು ತೆಗೆದು ಹಾಕಬೇಕೆಂದು ನಾನು ಸಲಹೆ ಮಾಡುತ್ತೇನೆ. ನಮ್ಮ ಸ್ಟೇಟಿನಲ್ಲಿ ಎರಡು ಕೋಟಿ ಜನತೆಗೆ ಸಾಕಾಗುವಷ್ಟು ಜಮೀನು ಇದೆಯೇ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಎಲ್ಲಾ ಭೂಮಿಯನ್ನು ಹಂಚಿಕೊಟ್ಟುಬಿಟ್ಟರೆ ಜೀವನದ ಪ್ರಶ್ನೆಯು ಬಿಡಿಸಿದಂತಾಗುತ್ತದೆಯೇ? ಎಂಬುದಕ್ಕೆ ಇಲ್ಲವೆಂದು ಉತ್ತರ ಹೇಳಬೇಕಾಗಿದೆ. ಇಂಥ ಒಂದು ಕೃತ್ರಿಮ ಪರಿಸ್ಥಿತಿಯುಂಟಾಗಿದೆ. ಇನ್ನು ಭೂಮಿಯ ಬಗ್ಗೆ ನ್ಯಾಯ ದೊರಕಿಸಿಕೊಳ್ಳಲು ಸಿವಿಲ್ ಕೋರ್ಟಿಗೆ ಹೋಗುವ ಅವಕಾಶ ಎಲ್ಲರಿಗೂ ಇರಬೇಕು. ಇಬ್ಬರಿಗೂ ಅನುಕೂಲವಾಗುವಂತೆ ಮಾಡಬೇಕು. ನಾನು ಸಲಹೆಯಿತ್ತ ಪ್ರಕಾರ ಎಷ್ಟರ ಮಟ್ಟಿಗೆ ಸುಧಾರಣೆ ಮಾಡಲು ಸಾಧ್ಯವಿದೆಯೋ ಅಷ್ಟರ ಮಟ್ಟಿಗೆ ಮಾಡಬೇಕೆಂದು ನಾನು ಸೂಚಿಸುತ್ತೇನೆ. ಇನ್ನು ಸೀಲಿಂಗ್ ಅಂದರೆ ಹಿಡುವಳಿಯ ಪರಿಮಿತಿಯ ಬಗ್ಗೆ ಒಂದು ಮಾತನ್ನು ಹೇಳಲಚ್ಛಿಸುತ್ತೇನೆ. ಹಿಡುವಳಿಯ ಪರಿಮಿತಿ ಎಷ್ಟು ಯಾವ ರೀತಿ ಇರಬೇಕು ಎಂದರೆ ಪ್ರತಿಯೊಬ್ಬನೂ ಸುಖವಾಗಿ ಜೀವನ ಸಾಗಿಸುವಂತಾಗಬೇಕು. ನವಕರಿ ಮಾಡಲು ಸಹ ಅವಧಿಯ ಪರಿಮಿತಿಯಿದೆ. ಅನಂತರ ನೌಕರನಿಗೆ ಪೆನ್‌ಷನ್ ದೊರೆಯುತ್ತದೆ. ಆದರೆ ರೈತನು ತನ್ನ ಇಡಿಯ ಆಯುಷ್ಯ ವ್ಯವಸಾಯದಲ್ಲಿ ದುಡಿಯಬೇಕಾಗುತ್ತದೆ. ಇಂಥವನ ಮುಖ್ಯ ಆಧಾರವಾಗಿರುವ ಭೂಮಿಯನ್ನು ಕಸಿದುಕೊಂಡರೆ ಆತನು ಜಗತ್ತಿನಲ್ಲಿ ಎಲ್ಲಿಗೆ ಹೋಗಬೇಕು? ಏನನ್ನು ಮಾಡಬೇಕು? ಆದುದರಿಂದ ಇಂಥ ಕಾನೂನು ಮಾಡುವುದರಿಂದ ಯಾರಿಗೂ ಸುಖವಾಗುವುದಿಲ್ಲ. ಇಂಥ ಕಾನೂನನ್ನು ಸರ್ವಥಾ ಮಾಡಬಾರದು. ಒಂದು ಮೂಲ ತತ್ತ್ವವನ್ನು ಸರಿಯಾಗಿ ಇಟ್ಟು ತಾಂತ್ರಿಕ ಸುಧಾರಣೆ ಬೇಕಾದರೆ ಮಾಡಬಹುದು. ಒಟ್ಟಿನಲ್ಲಿ ಮಾಲಿಕ—ಗೇಣೀದಾರ ಇಬ್ಬರಲ್ಲಿಯೂ ಸಖ್ಯವುಳಿದು ಸುಖವಾಗುವಂತೆ ಮತ್ತು ಆಹಾರ ಉತ್ಪಾದನೆ ಹೆಚ್ಚಾಗಲು ಸಹಾಯವಾಗುವಂತೆ ಕಾನೂನನ್ನು ರಚಿಸಬೇಕು. ಹೀಗೆ ಮಾಡುವುದರಿಂದ ಸಾಮಾಜಿಕ ನ್ಯಾಯ ಮತ್ತು ಸಮತೆ ದೊರಕಬಹುದೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

5-35 P.M.

[MR. SPEAKER in the Chair.]

Mr. SPEAKER.—I was under the impression that Sri N. O. Samaji had already taken part in this debate on a previous occasion. I looked into the record. I find there is nothing to suggest that he has actually taken part in the discussions. It has not also been mentioned that Sri N O. Samaji made a speech in Marathi. Simply his name is mentioned and he says that he has not spoken at all. It probably means that he might have asked for one or two questions for clarifications. Since it was in Marathi, only his name must have been mentioned in the proceedings. I believe he has not taken part in the debate and I therefore allow him to speak now.

[**Sri N. O. SAMAJI** (Belgaum II) then made his speech in Marathi.]

Half-an-hour Debate on Question No. 1145 re. the formation of a separate Circle of Posts and Telegraphs in Mysore State.

Sri V. P. DEENADAYALU NAIDU (Cubbonpet).—The discussion which is sought to be raised before the House today arises out of the answer given to Question No. 1145, that is, with regard to the formation of

(SRI V. P. DEENADAYALU NAIDU)

ವಾಗಿರುವ ಭೂಮಿಯನ್ನು ಹಂಚಿದರೆ ಪ್ರತಿಯೊಬ್ಬರಿಗೂ ಒಂದೊಂದು ಎಕರೆ ಬರಬಹುದು. ಅದಕ್ಕಿಂತ ಹೆಚ್ಚಿಗೆ ಬರಲಾರದು. ಅಂದಮೇಲೆ ಎಲ್ಲಿ ಭೂಮಿ ಕಡಮೆ ಇದೆ ಅಲ್ಲಿ ಸಾಧಾರಣವಾಗಿ intensive cultivation ಪದ್ಧತಿ ಬರಲೇಬೇಕು. Intensive cultivation ಮಾಡಿದರೆ ಎಷ್ಟೋ ಜನರಿಗೆ ಭೂಮಿ ಸಿಕ್ಕುವುದಿಲ್ಲ. ಇವರಿಗೆಲ್ಲರಿಗೂ ಉದ್ಯೋಗವನ್ನು ಕಲ್ಪಿಸಬೇಕಾದರೆ ಕೈಗಾರಿಕೆಗಳು ಬೇಕು. ಇವೊತ್ತು ನಮ್ಮಲ್ಲಿ ಕೈಗಾರಿಕೆಗಳು ಹೆಚ್ಚಾಗಿಲ್ಲ. ನಮ್ಮ ದೇಶವನ್ನು ಎರಡನೆ ದೇಶಗಳಿಗೆ ಹೋಲಿಸಿ ನೋಡಿದರೆ urban population ಎರಡನೆಯ ದೇಶಗಳಲ್ಲಿ ಹೆಚ್ಚಾಗಿದೆ. ಹಳ್ಳಿಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನ ಕಡಮೆ. ಇದಕ್ಕಾಗಿ ಎಷ್ಟು ಜನಕ್ಕೆ ನಾವು ಕೈಗಾರಿಕೆಗಳಲ್ಲಿ ಉದ್ಯೋಗವನ್ನು ಕಲ್ಪಿಸುತ್ತೇವೆಯೋ ಅಷ್ಟುಮಟ್ಟಿಗೆ land pressure ಕಡಮೆಯಾಗುತ್ತದೆ. ಎಷ್ಟು ಜನ ನಗರಗಳಿಗೆ ಹೋಗಿ ನೆಲಸುತ್ತಾರೆಯೋ ಅಷ್ಟು ಮಟ್ಟಿಗೆ ಭೂಮಿಯ ಹಂಚಿಕೆಯ ಮೇಲಿನ ಒತ್ತಡ ಕಡಮೆಯಾಗುತ್ತದೆ. ಈ ಸಂದರ್ಭದಲ್ಲಿ ಗ್ರಾಮಾಂತರದ ಮತ್ತು ಪಟ್ಟಣಗಳ ಜನಸಂಖ್ಯೆ ಯಾವ ಯಾವ ದೇಶದಲ್ಲಿ ಎಷ್ಟೆಷ್ಟಿದೆ ಎಂದು ತಮ್ಮ ಗಮನಕ್ಕೆ ತರುತ್ತೇನೆ. ಈಗ ಅಮೆರಿಕಾ ದೇಶವನ್ನು ತೆಗೆದುಕೊಂಡರೆ ಗ್ರಾಮಾಂತರ ಪ್ರದೇಶಗಳಲ್ಲಿ ಶೇಕಡ 33 ಮತ್ತು ನಗರಗಳಲ್ಲಿ ಶೇಕಡ 67 ಜನರಿದ್ದಾರೆ. ಹಾಗೆಯೇ ಇತರ ದೇಶಗಳಲ್ಲಿಯೂ ಇದ್ದಾರೆ.

	ದೇಶಗಳು		ಗ್ರಾಮಾಂತರ ಪ್ರದೇಶ ಶೇಕಡ	ನಗರ ಪ್ರದೇಶ ಶೇಕಡ
1	ಅಮೆರಿಕದ ಸಂಯುಕ್ತ ಸಂಸ್ಥಾನಗಳು		33	67
2	ಜರ್ಮನಿ	...	33	67
3	ಇಂಗ್ಲೆಂಡ್	...	19	81
4	ಸ್ವೀಡನ್	...	68	32
5	ಫ್ರಾನ್ಸ್	...	58	42
6	ಆಸ್ಟ್ರೇಲಿಯಾ	...	55	45
7	ಕೆನಡ	...	38	62
8	ಇಟಲಿ	...	29	71
9	ಜಪಾನ್	...	63	37
10	ಇಂಡಿಯಾ	...	83	17

ನಮ್ಮ ದೇಶದಲ್ಲಿ ಪಟ್ಟಣದಲ್ಲಿರುವ ಜನಸಂಖ್ಯೆ ಬಹಳ ಕಡಮೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರುವ ಜನಸಂಖ್ಯೆ ಜಾಸ್ತಿ ಇದೆ. ಆದುದರಿಂದ ನಮ್ಮಲ್ಲಿ ಕೈಗಾರಿಕೆಗಳು ಜಾಸ್ತಿಯಾದರೆ ಭೂಮಿಯ ಮೇಲೆ ಅವಲಂಬಿಸುವವರ ಸಂಖ್ಯೆ ಕಡಮೆಯಾಗುತ್ತದೆ. ದೇಶದಲ್ಲಿ ಕೈಗಾರಿಕೆಗಳು ಹೆಚ್ಚಾದ ಹೊರತು economic prosperity ಬರುವುದಿಲ್ಲ. Economic prosperity ಬರಬೇಕಾದರೆ ಕೈಗಾರಿಕೆಗಳು ಪ್ರಗತಿಯಾಗಲೇಬೇಕು, agricultural production ಮತ್ತು industrial production ಇವುಗಳಿಗೆ coordination ಬರಲೇ ಬೇಕಾಗುತ್ತದೆ. ಆದಕಾರಣ ಇಂಥ ನೀತಿಯನ್ನು ಸರ್ಕಾರ ಎಲ್ಲಿಯವರೆಗೆ ಅನುಸರಿಸುವುದಿಲ್ಲವೋ, ಅಲ್ಲಿಯವರೆಗೆ ಪ್ರಗತಿಯಾಗುವುದಿಲ್ಲ. ನಮ್ಮಲ್ಲಿ ಆಗುವ ಬೆಳೆಗಳಿಗೂ ಎರಡನೆ ದೇಶದಲ್ಲಿ ಆಗುವ ಬೆಳೆಗಳಿಗೂ ಹೋಲಿಕೆ ಮಾಡಿ ನೋಡಿದರೆ intensive cultivation ಮತ್ತು extensive cultivation ಮಾಡಿದ್ದರಿಂದ ಎಲ್ಲಿ ಉತ್ಪತ್ತಿ ಹೆಚ್ಚಾಗಿ ಬರುತ್ತದೆಂಬ ಅಂಶ ವ್ಯಕ್ತವಾಗುತ್ತದೆ. ಒಂದು ಎಕರೆಗೆ ಎಷ್ಟು ಉತ್ಪತ್ತಿ ಬರುತ್ತದೆಂದು ನೋಡಿದರೆ ಇಂಡಿಯಾ ದೇಶದಲ್ಲಿ 584 ಪೌಂಡ್‌ಗಳು, United Kingdom ನಲ್ಲಿ 2;560 ಪೌಂಡ್‌ಗಳು, ಈಜಿಪ್ಟ್‌ನಲ್ಲಿ 1,743 ಪೌಂಡ್‌ಗಳು, ಫ್ರಾನ್ಸ್ ದೇಶದಲ್ಲಿ 1,704 ಪೌಂಡ್‌ಗಳು ಮತ್ತು ಆಸ್ಟ್ರೇಲಿಯಾದಲ್ಲಿ 10;044 ಪೌಂಡುಗಳು, ಇಷ್ಟು ಉತ್ಪತ್ತಿ ಬರುತ್ತಿದೆ. ನಮ್ಮ ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಗಳು ಏನೇನು ಕೆಲಸಕಾರ್ಯಗಳನ್ನು ಮಾಡಬೇಕು, ನಮ್ಮ ದೇಶದ ಉತ್ಪತ್ತಿ ಇತರ ದೇಶಗಳಲ್ಲಿರುವಂತೆ ಆಗಬೇಕಾದರೆ ಎಷ್ಟು ಕೆಲಸಗಳನ್ನು ದೂಡ ಬೇಕು ಎಂದು ಯೋಚಿಸಿ ಕೆಲಸ ಮಾಡಬೇಕು. ಮತ್ತು ನೀರಾವರಿಯೋಜನೆಯಿಂದ ನಮಗೆ ಲಾಭವಾಗುತ್ತದೆ ಎಂದು ನಾನು ತಮ್ಮ ಗಮನಕ್ಕೆ ತರುತ್ತೇನೆ.

ನಮ್ಮ ದೇಶದಲ್ಲಿ 1,700 ಕ್ಯಾಲೊರಿಗಳಷ್ಟು ಆಹಾರವನ್ನು ತೆಗೆದುಕೊಳ್ಳುತ್ತಿದ್ದರೆ ನ್ಯೂಜಿಲೆಂಡಿನಲ್ಲಿ 3;281 ಕ್ಯಾಲೊರಿಗಳು, ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ 3,428 ಕ್ಯಾಲೊರಿಗಳು ಮತ್ತು ಕೆನಡಾದಲ್ಲಿ 3,062 ಕ್ಯಾಲೊರಿಗಳು ಹೀಗೆ ತೆಗೆದುಕೊಳ್ಳುತ್ತಾರೆ. ಈ ಪ್ರಕಾರವಾಗಿ ನಮ್ಮಲ್ಲಿ ಆಹಾರದ ಕ್ಯಾಲೊರಿಗಳಲ್ಲಿ ಸಹ ಬಹಳ ಕಡಮೆ ಇರಬೇಕಾದರೆ ಆಹಾರೋತ್ಪತ್ತಿ ಜಾಸ್ತಿಯಾಗಬೇಕು ಎಂದು ಹೇಳುತ್ತೇನೆ.

2 P.M.

Sri V. P. DEENADAYALU NAIDU (Cubbonpet).—Mr. Speaker, Sir, I am highly indebted to you for the opportunity given to me to speak which I thought I had lost by now. However, I shall very briefly touch upon the basic idea which, I consider, should pervade the entire Budget. The Finance Minister, in spite of his not being able to be present here, has presented a Budget which, I consider, should be a little more in consonance with the socialistic pattern of society. I just want to ask our Chief Minister and the Treasury Benches as to who is in charge of the portfolio of creating socialistic pattern of society. It is not without a certain amount of seriousness that I put this question, because I would like to make a very clear distinction between the democratic set up and the democratic parliamentary system. For some time now we have been acquainted only with what is called the democratic set up under which Government is for the people, of the people and, what is more important, by the people. I would like that

something that is said by the people should prevail in this House. By Government I mean both the members of the ruling party, as well as the Opposition going hand in hand. Before I venture to define "democratic set up' and how it should be construed, I would like to place certain authorities before the 'Hon'ble House. I felt rather sad and now I feel all the more depressed at certain remarks made by members of the Opposition of this august House. Particularly, the Hon'ble Member Sri Malladradhya who considered himself the President of the Federation of Teachers and who tried to plead for the cause of teachers, while winding up his speech, said: "There may be a moment when the teachers may be called upon to resort to strike." There can never be anything more deplorable than that. It is not a thing which can be spoken of so lightly in an august House like this. I feel sad about it. That is not the method by which we are going to cure any disease. Such utterances must be made with a certain amount of forethought, because just as the Treasury Benches have the onerous task of curing a malady, even the Hon'ble Member Sri Mallaradhya has got an equal responsibility in that behalf. That is not bravado. That is not going to result in anything useful to anybody.

(*Sri Veerappa rose.*)

SRI V. P. DEENADAYALU NAIDU.—(Referring to Sri Veerappa) Are You Sri Mallaradhya? Are you going to advocate for him?

SRI Y. VEERAPPA.—I rise on a point of order, Sir. Sri Naidu is referring to the Hon'ble Member Sri Mallaradhya. After all, he just said that if any relief was not accorded to the poor teachers, they would have to resort to the democratic means of strike. That is what he meant, but Sri Naidu has misconstrued what he said. Sri Naidu thought that Sri Mallaradhya was not a disciplinarian and so on. Is it right on his part to say so?

MR. SPEAKER.—There is absolutely no point of order involved in it. If the Hon'ble Member Sri Mallaradhya is entitled to his views, the Hon'ble Member Sri Deenadayalu Naidu is also entitled to his own views. If the Hon'ble Member Sri Mallaradhya can say something about the teachers and their resort to strike the Hon'ble Member Sri Deenadayalu Naidu has a right to refute what Sri Mallaradhya says in that behalf.

SRI V. P. DEENADAYALU NAIDU.—I am highly grateful to you, Sir. What I was saying was that we were wedded to a policy where the means we would adopt to achieve our ends must be pure and it is not as if we should achieve our ends by any means. Whatever means we adopt must be as pure as the end itself. Therefore, the means of strike by which he wants that the teachers should attain their end is something deplorable. At the same time, we are not in any way minimising the great urgency of meeting the demands of teachers and we must see that they also come up to a standard where they will get every comfort. In this connection, I should like to cite one paragraph from Humayun Kabir's 'Education in India' where it is stated:

> "If at all there is the greatest sacrifice that is to be expected, was expected and was given, it is from the teachers. It has always been forthcoming, and it must come in abundance in these days where things are not so happy as they were."

I would also like to refer to another interesting paragraph which is as follows:

> "While we must on the one hand resist the temptation of condemning wholesale the existing system of education, we must on the other make every effort to detect weaknesses and take effective measures to remedy them. There is no system of education which is free from defect, but this does not mean that defects which are discovered should not be immediately removed. There are some features in the existing system which are directly responsible for

(SRI V. P. DEENADAYALU NAIDU)

maladjustments in the student community and create among a large section a sense of discontent and frustration. Among them, only a few which require immediate attention can be indicated here."

So, in fact, the greatest sacrifice is expected of the teachers. Therefore, for Sri Mallaradhya who has served the Education Department for such a long time loyally to come out with the idea of strike by the teachers for the redressal of their grievances is something which is unthinkable, and which is not conducive to the very atmosphere of this House. That is not a sentiment which should have been mooted in this House. Therefore, I say that such an idea coming as it does from him is something which is very unbecoming and unwarranted.

Secondly, any one who holds the portfolio of Home and Police has the largest measure of attack at any time during any session and he (Home Minister) has had it perhaps in the greatest measure this time. But I only feel, Sir, that a certain amount of restraint was necessary even as a certain amount of adjustment was also necessary. No doubt so much is made of this question of MUNIAMMA It is only an illustration. What I say is, we have got to sit here squarely round the table and solve the issue, and not merely be casting aspersions and creating an atmosphere wherein we cannot solve problems. What I say is that Hon'ble Members have got also an equal responsibility and must share responsibility in solving issues. What I find here happening is: Today, I belong to this party, I advocate certain things. I can never be blind to mistakes committed here. I would be the first person to shake it (mistake) provided we deal with it in a constructive fashion. What I feel is that my friends who participated in this discussion should not be content with merely creating an atmosphere by which we can create scare. What I would like is, that they should react, reflect to public opinion here. That is the burden of my song. That is why I said: let us show a little more understanding in what we call parliamentary democracy. In this respect, Sir, I would only suggest one method with which I think the Hon'ble Speaker must be familiar. This is an idea with which most of our members will agree. I would like that the Hon'ble the Chief Minister and the Minister concerned may kindly think over and give us a solution. In several parts of the State, they have got the Legislators' Day in every month. That means 12 days in a year apart from the Sessions, the Legislators have got a right to have free and exclusive access to the Ministers. Spend one day with them. That means that day is fully kept open for Legislators. They will meet Ministers at the Governmental level with the Departmental Heads, discuss their grievances and come to some solution. Wherever there are difficulties on the side of the Government, Members will be in a position to understand them. Where Members have got certain difficulties they will have to freely exchange their thoughts with the Government. That whole day in that month is spent with the Ministers, and Members can freely ventilate all their grievances. I put this strongly before you today for this reason that most of our question-hours may be minimised by having most of these details thrashed out in personal conversation at such discussions. More than that, Members can have the privilege of having the files at their command. Apart from that, this is a very small matter that Legislators should be able to bear the entire expenditure for that day. I do not think that our Members will grudge it, because they will get the return in a hundred-fold. On that day which is earmarked, we can exchange most of the constructive things, administrative matters, difficulties, everything is thrashed out on that Legislators' Day. I think the Government will seriously consider that aspect. In fact that is an occasion when Government, if at all they have difficulties, must try to understand them. Certain

of these administrative problems can very freely be exchanged and it would also help for smooth running of the Government as well as for smooth implementation of their own schemes. I say this because, Sir, each Member sitting here has got a responsibility for his or her constituency. No doubt Government feels that they have got lavish schemes and five-year plans and several other things. What I say is: every Member when he goes to his constituency, has certain difficulties. These things will be discussed at very close quarters by the Government on that day. Now what is happening is, with a certain amount of reluctance I am saying this, there is a feeling that the Budget that is placed before the House does not ventilate as well as reflect the opinion of certain Members. All this happens because we are not meeting at close quarters and exchange views. It is not deliberate. What I say is that for one thing, the Ministers have no time, they are being held up here and there, in various conferences and symposiums and they find it difficult to spare time. On the other hand, if a day is ear-marked as Legislators' Day, wherein they can spend all the time and discuss all their problems, I think it can well pave the way for smoothly adjusting the differences and solving problems. It minimises the difficulties that we experience on the floor of this House, in ascertaining information, putting questions. Most of these difficulties will certainly be minimised.

SRI H. K. VEERANNA GOWDH (Minister for Public Works).—Is it the idea to meet all the Ministers on one day in a month or individual Ministers by groups according to the needs of the area?

SRI V. P. DEENADAYALU NAIDU.—When Members come out, they will meet the concerned Ministers with whom they will have something to discuss. For instance, I may have to meet Sri. Veeranna Gowdh, Sri. Chenniga-ramaiah and the Chief Minister. That is all. Staying in a City like Bangalore, I may have nothing to do with Sri Rudrappa. I have very little to expect from him. Just meeting three or four Ministers with the concerned Departmental Heads, I am sure will meet my requirements and your requirements of my constituency.

I will just read only one paragraph where it is substantiated:

[*Extract from "REPRESENTATIVE GOVERNMENT IN SOUTH-EAST ASIA," by* EMERSON)

"At the risk of repetition, let it be said again that these are societies which are in revolution and are seeking to find their own way of life between an old world and a new. Furthermore, it must constantly be kept in mind that democracy, which is the heart of the matter of which representative institutions are only the external and political expression is by no means only a type of political structure. Far more significantly it is a state of mind and a basic social pattern enabling men to live together in equality and freedom. It rests upon that elusive but fundamental concept of the dignity of the individual human being, and upon an all-pervading sense that the ordinary man of the street and the village has rights which must be respected and values and interests which must be mirrored in the society of which he forms a part. No single political formula can be set up by which to measure whether or not a society reaches the goals implicit in the democratic creed. Ultimate judgment rests not upon conformity to institutional frameworks which have been established elsewhere, but upon the effective ability of the citizen of high or low estate to make his voice heard and to live in the conviction that the Government of his society is not a remote and alien enterprise but a living process in which he participates on equal terms. These are things of which South-East Asia has known little in the past, and towards which it now strives."

What I say is this, Sir. I only dwell on this one aspect and I will close.

(SRI V. P. DEENADAYALU NAIDU)

What I say is, the Budget that is placed before us, must have a little more closer reflection of the people. That could have been only possible if we have closer contacts. I am sure even the Hon'ble the Chief Minister will not object when I say this. No doubt, we have been moving together, for years and decades. So also Sri H. K. Veeranna Gowdh. But the moment we become Members and Ministers, our contacts become less frequent. Why so? On the other hand, it should have been more and solutions to problems should have been nearer. If I want my requirements to be met, I must have a closer contact. But, what is it we find? There is a certain amount of defect in the entire system. There is one man whom I have heard in this regard and that is Sri S. K. Patil of Bombay. Very recently he gave a statement while handing over his portfolio to another. He stated that there was not co-ordination between department and department. I think he has stated it with all courage and if this be true with regard to Central Government, I must say, it is abundantly true with regard to the State Government because I know of an instance. I had raised on the floor of this House the question of food distribution, the purchase of food articles and suggested that for the security of the State we must have a granary of our own. The Minister in charge, that is, the Revenue Minister, was pleased to tell us that there was no fear whatsoever everything was quite happy and we would meet the situations as and when they arose. Then, I even went further and asked him whether any agreement had been entered into between the Mysore Government and Andhra Government. He stated for the time being there was none. The very next day at the Development Council meeting, I hear, and I am subject to correction, that the Chief Minister felt that the food position was not so very happy. That I consider is a contradiction in terms. This is because we have not that amount of co-ordination. Second illustration is with regard to the Bangalore Medical College. Our Health Minister will be able to say what is happening here and I can vouchsafe that the Medical Department and the Education Department are not moving hand in hand to solve the problems connected with the Bangalore College. I find there have been certain difficulties to work up certain details. Wherever there are difficulties, I would like to state that there must be joint conferences. It has not been possible. Therefore, I would urge that when grievances and demands of the public are mirrored, more co-ordination should be forthcoming in order to solve this problem.

My last point is, for the last ten years Bangalore is having a Corporation. There are certain unconstitutional things that are prevailing here. Disparities with regard to City and Civil areas have not been completely eradicated. When I glanced through this Budget I found there was an idea to make differences in regard to payment of compensation to the City and Civil areas out of the moneys collected under the Vehicles Taxation. It is not a happy measure. It must be got rid of and that distinction should not be kept up. So also with regard to water supply. Somehow, I feel that the blood I am made of is different from the blood of others who live in the City area for which I say Sri H. K. Veeranna Gowdh is the cause. (*Laughter*). Last time in June he assured us that we will have an assured supply of 15 gallons every day. I was really happy and I congratulated him. But, what is happening today? It requires a speedy remedy. When another man living in the City can have a little more water in his blood, why not I? Why should there be this difference? When I heard the speech of Sri K. Hanumanthaiya that Rs. 69 lakhs were set apart for the improvement of water supply, etc., I was really glad. Something was done. Today, it is Rs. 40 lakhs. No doubt, it is a good thing. But, till now we are not anywhere nearer a solution. Till today we have not got the required quantity of water supply. These disparities are unconstitutional and the Government should not wait until somebody raises this problem here. It is for the Minister for

Local Self-Government himself to see to this problem and solve this question immediately.

Then what has happened to the slum clearance work? I dare say that though we are getting income or loans from the Centre and even if the Government of Mysore is prepared to spend the money, we can never spend that money until we have this co-ordination between all the departments.

I just want to bring to the notice of the Government another point. Certain commitments are made in this House by the Government. The Members agitate for certain things and the Government gives an assurance that they will be remedied or at least implemented at a very early date. Take for instance the Entertainments Act. Today, the whole revenue is collected by the Government and after deducting 12½ per cent the amount is paid over to the Corporation. But it is clearly stated in 1952 in this House—proceedings of 1952, page 616 and again reported in 1954 at page 929—

Mr. SPEAKER.—You need not read. There is no time.

Sri V. P. DEENADAYALU NAIDU.—I have given the reference. On two occasions on the floor of this House, the Government have given an assurance that the Entertainments' Tax Act hereafter would be administered by the Local Snlf-Government or, we may say, the Corporation. Even to this day, what is the difficulty in handing over these things? Lastly we have got the Vehicles Taxation Act which has to be uniformly administered along with the Corporation Amendment Act. These are important measures that have been pushed through, which I hope the Government will certainly see that they are administered properly.

I am very happy that the Finance Minister has been able to say that there is Rs. 16 lakhs surplus. No doubt, there is a surplus but it is not a question of one being happy about it. When you think of taxation you must also think of giving relief. I want to know whether the Chief Minister or the Finance Minister is content with having the surplus and giving no relief to the public. It is not the duty of the Finance Minister merely to think of taxation. You have not also contemplated the new Bills that you are going to bring. You should take that also into account and then formulate the Budget. You should not be content with merely showing a surplus budget. It should also be possible in this Budget to give some relief to the people.

*ಶ್ರೀ ಎಸ್. ಶರಣಗೌಡ (ಜೇವರಗಿ).—ಅಧ್ಯಕ್ಷರೇ, ಈ ದಿವಸ ಬಹಳಮಂದಿ ನಮ್ಮ ಗೆಳೆಯರು ಮಾತನಾಡಿದ್ದಾರೆ. ಆದರೂ ಕೂಡ ಕೊನೆಯದಿನ ಎಂದು ತಿಳಿದುಕೊಂಡು ನಾನು ಒಂದೆರಡು ವಿಷಯಗಳನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಈಗ ನಾವು ಸ್ವಾತಂತ್ರ್ಯವನ್ನು ಗಳಿಸಿಕೊಂಡನಂತರ ಪ್ರಜಾಪ್ರಭುತ್ವದ ಮೂಲಸಿದ್ಧಾಂತಕ್ಕೆ ಅನುಗುಣವಾಗಿ ಪಾರ್ಲಿಮೆಂಟರಿ ಸಿಸ್ಟಂ ಸರ್ಕಾರವನ್ನು ಒಪ್ಪಿಕೊಂಡ ಬಳಿಕ ಅದನ್ನು ನಾವು ಆಚರಣೆಯಲ್ಲಿ ತರಬೇಕಾದರೆ ಮೊದಲು ಅದರ ಮುಖ್ಯ ತಳಹದಿ 'ಫೇರ್ ಎಲೆಕ್ಷನ್'. ಈ ಚುನಾವಣೆಯಿಂದ ನಾವು ಇವೊತ್ತಿನ ದಿವಸ ಪಾರ್ಲಿಮೆಂಟರಿ ಸಿಸ್ಟಂ ಸರ್ಕಾರವನ್ನು ಆಚರಣೆಗೆ ತರುತ್ತಿದ್ದೇವೆ. ಈ ವಿಷಯದಲ್ಲಿ ನಾನು ಮುಖ್ಯವಾಗಿ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಚುನಾವಣೆಯಿಂದ ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಶಾಸನ ಸಭೆಗೆ ಮತ್ತು ಲೋಕ ಸಭೆಗೆ ಕಳುಹಿಸುವಾಗ ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ಇರಬೇಕು. ಇವೊತ್ತಿನ ದಿವಸ ನಮ್ಮ ದೇಶ ಎಷ್ಟರಮಟ್ಟಿಗೆ ಒಂದುಗೂಡಿದೆ ಎಂಬುದನ್ನು ಮುಖ್ಯವಾಗಿ ವಿಚಾರ ಮಾಡಬೇಕು. ದೇಶದಲ್ಲಿ ಯಾವರೀತಿಯಿಂದ ಮಹಾಚುನಾವಣೆಗಳನ್ನು ನಡೆಸಿಕೊಂಡು ಬಂದಿದ್ದಾರೆ ಎನ್ನುವುದನ್ನು ನೋಡಬೇಕಾದರೆ ಎಲೆಕ್ಷನ್ ಟ್ರಿಬ್ಯುನಲ್‌ಗೆ ಎಷ್ಟು ಕೇಸುಗಳನ್ನು ಹಾಕಿದ್ದಾರೆ ಎನ್ನುವುದನ್ನು ನಾವು ಸರಿಯಾಗಿ ವಿಚಾರ ಮಾಡಬೇಕಾಗಿದೆ. ಚುನಾವಣೆಗಳು ಆದಮೇಲೆ ಎಲೆಕ್ಷನ್ ಪೆಟಿಷನ್‌ಗಳು ಟ್ರಿಬ್ಯುನಲ್‌ಗೆ ಹೋದಾಗ ಚುನಾವಣೆಗಳಲ್ಲಿ ಎಷ್ಟು ಪ್ರಮಾಣದಿಂದ ಅನ್ಯಾಯವಾಗಿದೆ ಎಂದು ಗೊತ್ತಾಗುತ್ತದೆ. ಈಗಲೂ ಕೂಡ ಹೋದ ವರ್ಷ ಮಾರ್ಚಿ ತಿಂಗಳಿಂದ ಈ ವರ್ಷ ಮಾರ್ಚಿ ತಿಂಗಳ ವರೆಗೆ ಒಂದು ವರ್ಷದ ಅವಧಿಯಲ್ಲಿ ಚುನಾವಣೆಗೆ ವಿರುದ್ಧವಾಗಿ ಹಾಕಿದ ಅರ್ಜಿಗಳನ್ನು ನೋಡಿದ್ದೇನೆ. ಯೋಗ್ಯ ರೀತಿಯಿಂದ ಚುನಾವಣೆ ನಡೆದಿಲ್ಲ ಎನ್ನುವುದು ಈ ದಿವಸ ಕಂಡು ಬರುತ್ತದೆ. ಇವೊತ್ತಿನ ದಿವಸ ಜಾತಿಯ ದೃಷ್ಟಿಯಿಂದ ಬಹಳ ಜನರು ವಿಚಾರ ಮಾಡುತ್ತಿದ್ದಾರೆ. ಜಾತಿಯ ದೃಷ್ಟಿಯಿಂದ ವಿಚಾರ ಮಾಡಿ ಮತಗಳನ್ನು ಹಾಕುವುದು ಸರಿಯಾದದ್ದಲ್ಲ. ಎಲ್ಲರೂ ಆ ರೀತಿ ಮಾಡುತ್ತಿದ್ದಾರೆಂದು ಹೇಳುವುದಿಲ್ಲ. ಹೆಚ್ಚಿಗೆ ಎಲ್ಲರೂ ಈ ರೀತಿ ಮಾಡಿದ್ದಾರೆ. ಆಳುವ ಪಕ್ಷದವರೂ ಸಾಮಾನ್ಯವಾಗಿ ಟಿಕೆಟ್ಟುಗಳನ್ನು ಯಾವ ಕ್ಷೇತ್ರದಲ್ಲಿ ಯಾರಿಗೆ ಕೊಟ್ಟರೆ ಬರಬಹುದು ಎನ್ನುವ ದೃಷ್ಟಿಯಿಂದ ಹಂಚುತ್ತಿದ್ದಾರೆ. ಯಾರು ರೊಕ್ಕ ಹೆಚ್ಚಿಗೆ ಖರ್ಚು ಮಾಡಬಹುದು ಯಾರಿಗೆ ಹೆಚ್ಚು ಪ್ರಮಾಣದಲ್ಲಿ ಮತ ಬರಬಹುದ್

(ಶ್ರೀ ಎಸ್. ಶರಣಗೌಡ)

ಎನ್ನುವುದನ್ನು ನೋಡಿಕೊಂಡು ಕೊಡುತ್ತಿದ್ದಾರೆ. ಈ ರೀತಿ ಹಂಚಿದ ನಂತರ ಆ ಕ್ಷೇತ್ರದ ಜನರು ತಮ್ಮ ತಮ್ಮ ಜಾತಿಯ ದೃಷ್ಟಿಯಿಂದ ವಿಚಾರಮಾಡಿ ಓಟು ಹಾಕುತ್ತಾರೆ, ಹಾಕಿಸುತ್ತಿದ್ದಾರೆ. ಇವೆಲ್ಲಾ ಸರಿಯಾಗಿ ಕಾಣುವುದಿಲ್ಲ. ದೇಶದಲ್ಲಿ ಇರತಕ್ಕ ಜನರು ಚುನಾವಣೆ ನಡೆಸುತ್ತಾ ಇರುವುದು ದೇಶದಲ್ಲಿ ಒಳ್ಳೆಯ ಆಡಳಿತ ಇರಲಿ ಎನ್ನುವ ದೃಷ್ಟಿಯಿಂದ. ಅಂಥ ಆಡಳಿತದ ಮುಖಾಂತರ ನಮ್ಮ ರಾಜ್ಯದ ಗುರಿ ಸಾಧಿಸುವುದಕ್ಕೆ ಪ್ರತಿನಿಧಿಗಳನ್ನು ಕಳುಹಿಸುತ್ತಾ ಇರುವಾಗ, ಯಾವ ಉದ್ದೇಶವನ್ನು ಸರ್ಕಾರದ ಆಡಳಿತದ ಮೂಲಕ ಸಾಧಿಸಿಕೊಳ್ಳಬಹುದೋ ಅದನ್ನು ಸಾಧಿಸಬೇಕಾದರೆ ಯೋಗ್ಯವಾಗಿ ಪ್ರತಿನಿಧಿಗಳು ಕೆಲಸಮಾಡಬೇಕು. ಯೋಗ್ಯ ರೀತಿಯಿಂದ ಕೆಲಸಮಾಡುವುದಕ್ಕೆ ಬದಲು ವ್ಯತಿರಿಕ್ತವಾದ ಬೇರೆ ಬೇರೆ ರೀತಿಯಿಂದ ಕೆಲಸಮಾಡುವುದೇ ಹೆಚ್ಚಾಗುತ್ತಾ ಇದೆ. ಹೋದ ವರ್ಷ ಮಹಾ ಚುನಾವಣೆಯ ಮಧ್ಯೆ ಚುನಾವಣೆಯ ಕಾಲದಲ್ಲಿ ಏನು ನಡೆದಿದೆ ಎಂದು ನೋಡಿದರೆ ಬಹಳ ಕೆಟ್ಟ ರೀತಿಯಿಂದ ನಡೆದಿದೆ ಎಂಬುದು ಎಲ್ಲರೂ ಒಪ್ಪತಕ್ಕ ಮಾತು. ಧರ್ಮದ ಗುರುಗಳನ್ನು ಕೂಡ ಎಳೆಯುತ್ತಿದ್ದಾರೆ. ಇವೊತ್ತಿನ ದಿವಸ ಧರ್ಮದ ಹೆಸರು ಕೂಡ ಅಳಿಯುತ್ತಿದೆ. ಕಾಂಗ್ರೆಸ್ ಸಂಸ್ಥೆಯ ಎರಡು ಎತ್ತುಗಳ ಏನು ಸಿಂಬಲ್ ಇದೆ ಅದರಿಂದ ದೇಶದಲ್ಲಿ ಬಹಳ ಹಾನಿಯಾಗುತ್ತದೆ. ದುರ್ದೈವವಶಾತ್ ಎಲ್ಲಾ ಬಸವಣ್ಣನ ಹೆಸರು ತೋರಿಸಿ ಚುನಾವಣೆಯಲ್ಲಿ ಓಟು ತೆಗೆದುಕೊಳ್ಳುತ್ತಿದ್ದಾರೆ. ಈ ರೀತಿ ಮಾಡುತ್ತಿರುವುದು ಸರಿಯಲ್ಲ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಬಸವಣ್ಣ ಎಲ್ಲರಿಗೂ ದೇವರಲ್ಲ.

ಶ್ರೀ ಎಸ್. ಶರಣಗೌಡ.—ದೇವರನ್ನು ಎತ್ತು ಮಾಡಬಹುದು. ಎತ್ತನ್ನು ದೇವರು ಮಾಡಬಹುದು. ಈ ಪ್ರಕಾರ ನಡೆಯುತ್ತಿದೆ. ಯಾವುದೋ ಹೆಸರು ಹೇಳಿ ಹೆಚ್ಚು ಪ್ರಮಾಣದಿಂದ ಬಹು ಸಂಖ್ಯಾತರಾದವರು ಚುನಾಯಿತರಾಗಿ ಬಂದು ರಾಜ್ಯದ ಆಡಳಿತ ನಡೆಸಬೇಕೆಂದಿದ್ದಾರೆ. ಇದರಿಂದ ಉಳಿದವರಿಗೆ ಧಕ್ಕೆ ಬರುತ್ತದೆ. ಎರಡೆತ್ತಿನ ಜೋಡಿ ಒಂದು ಸಿಂಬಲ್ ಬಿಟ್ಟು ಮುಂದಿನ ಚುನಾವಣೆಯಲ್ಲಿ ಮತ್ತೊಂದು ಸಿಂಬಲ್ ಇಟ್ಟುಕೊಂಡು ಪ್ರಜೆಗಳ ಮುಂದೆ ಹೋಗಿ ಈಗಿನಷ್ಟು ಪ್ರಮಾಣದಲ್ಲಿ ಓಟುಗಳನ್ನು ತೆಗೆದುಕೊಂಡರೆ ಆಗ ನಿಜವಾಗಿ ನಮ್ಮ ತಪ್ಪು ಒಪ್ಪಿಕೊಳ್ಳುತ್ತೇನೆ. ಗುರುಗಳನ್ನು ಎಳೆಯುವುದು, ಮಾನ್ಯ ಮಠ ಸಂಸ್ಥೆಗಳನ್ನು ರಾಜಕೀಯಕ್ಕೆ ಎಳೆಯುವುದು, ಬೇರೆ ಬೇರೆ ದೃಷ್ಟಿಯಿಂದ ತೀರ್ಮಾನ ಮಾಡುವುದು ಶುದ್ಧ ತಪ್ಪು. ಇದು ಆದ ನಂತರ ಇನ್ನೊಂದು ನಮ್ಮ ಸರ್ಕಾರದವರು ನಿಜವಾಗಿಯೂ ಆಫೀಸರ ಜನರಿಗೆ ಹೆಚ್ಚಿಗೆ ಉಪಯೋಗ ಮಾಡುತ್ತಿದ್ದಾರೆ. ಧರ್ಮದ ದೃಷ್ಟಿಯಿಂದ, ಜಾತಿಯ ದೃಷ್ಟಿಯಿಂದ ಕೆಲಸಮಾಡುತ್ತಿದ್ದಾರೆಂದು ಪುಕಾರು ಇದೆ. ಚುನಾವಣೆ ನಡೆಯಬೇಕಾದರೆ ಜನರಿಗೆ ಏನೇನೋ ಭರವಸೆ ಕೊಟ್ಟಿದ್ದಾರೆ. ವತನದಾರರು ನಾಶವಾಗುವುದು ಸರಿ. ಬಹಳ ವರ್ಷಗಳಿಂದಲೂ ಈ ಚಳುವಳಿ ನಡೆಯುತ್ತಿದೆ. ನಮ್ಮ ಹೈದರಾಬಾದು ಪ್ರಾಂತದ ಕಡೆ ವತನುದಾರಿ ಸಿಸ್ಟಂ ಎಂದಿದೆ.

ಶ್ರೀ ವೀರೇಂದ್ರ ಪಾಟೀಲ್ (ಯೋಜನಾ ಶಾಖೆಯ ಉಪ ಮಂತ್ರಿಗಳು).—ಮಾನ್ಯ ಸದಸ್ಯರು ಬರೀ ಎಲೆಕ್ಷನ್ನಿನ ವಿಚಾರವಾಗಿ ಭಾಷಣ ಮಾಡುತ್ತಿರುವಂತಿದೆ.

ಶ್ರೀ ಎಸ್. ಶರಣಗೌಡ.—ಅದು ನಿಜ. ಅದರ ಬಗ್ಗೆ ಹೇಳುತ್ತಿದ್ದೇನೆ ಮತ್ತು ಬಡ್ಜೆಟ್ಟಿನ ವಿಚಾರದ ಬಗ್ಗೆಯೂ ಹೇಳುತ್ತೇನೆ. ತಾವೇನೋ ಮಂತ್ರಿಗಳಾಗಿದ್ದೀರಿ. ತಾವು ಹೇಗೆ ಬೇಕಾದರೂ ಹೇಳಬಹುದು. ಆದುದರಿಂದ ನಾನು ಹೇಳುತ್ತಿರುವುದು ಈ ವತನದಾರಿಗಳನ್ನು ಸಂಪೂರ್ಣವಾಗಿ ನಿರ್ನಾಮ ಮಾಡಬೇಕು. ಇದರಿಂದ ಗೌಡ ಕುಲಕರ್ಣಿಗಳಿಗೆ ಬಹಳ ಅನುಕೂಲವಾಗಿದೆಯೇ ವಿನಾ ಜನಗಳಿಗೆ ಏನೂ ಪ್ರಯೋಜನವಾಗುತ್ತಿಲ್ಲ.

ಅಧ್ಯಕ್ಷರು.—ಸ್ವತಃ ಮಠದ ಸ್ವಾಮಿಗಳೇ (ನಿಮ್ಮಂತಹವರು) ಎಲೆಕ್ಷನ್ನಿಗೆ ನಿಂತರೆ ಏನು ಮಾಡಬೇಕು? (ನಗು)

ಶ್ರೀ ಎಸ್. ಶರಣಗೌಡ.—ನಾನು ಹೇಳಿದಂತೆ ಈ ವತನುದಾರಿಗಳನ್ನು ನಿರ್ಮೂಲ ಮಾಡಬೇಕು. ಇದರಿಂದ ಬಹಳ ಅನ್ಯಾಯವಾಗುತ್ತದೆ, ತೊಂದರೆಯಾಗುತ್ತದೆ ಮತ್ತು ಆಡಳಿತ ನಡೆಸುವುದರಲ್ಲಿ ಬಹಳ ತೊಂದರೆಯಾಗುತ್ತದೆ. ಈಗ ನಮ್ಮ ಹೈದರಾಬಾದು ಕಡೆಯಲ್ಲಿ ಒಂದು ಟೆನೆನ್ಸಿ ಕಾಯಿದೆ ಇದೆ. ನಮ್ಮ ಉತ್ತರ ಕರ್ನಾಟಕದಲ್ಲಿ ಮತ್ತು ಮೈಸೂರಿನ ಭಾಗಗಳಲ್ಲಿ ಹೊಸದಾಗಿ ಬಂದಿರುವ ಜತ್ತಿ ಸಮಿತಿಯ ವರದಿಯಂತೆ ಭೂ ಸುಧಾರಣೆಯನ್ನು ಜಾರಿಗೆ ತರುವುದರಲ್ಲಿದ್ದಾರೆ. ಈಗ ನಮ್ಮ ಹೈದರಾಬಾದ ಕಡೆಯಲ್ಲಿ ಟೆನೆನ್ಸಿ ಆಕ್ಟಿದೆ. ಅದರ ಪ್ರಕಾರ ಖಾಸ್ರಾ ಪತ್ರಿಕಾ ಮತ್ತು ಪಹಣಿ ಪತ್ರಿಕಾ ಎಂದು ತಯಾರು ಮಾಡಿದರು. ಇದು ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳಿಗೂ ಗೊತ್ತಾಗಿದೆ. ಇದರಲ್ಲಿ ಗ್ರಾಮದಲ್ಲಿರುವ ಕುಲಕರ್ಣಿ, ಗೌಡರುಗಳು ಇವರ ಕೈವಾಡವೇ ಜಾಸ್ತಿಯಾಗಿದೆ ಮತ್ತು ಹಳ್ಳಿಗಳಲ್ಲಿರುವ ಪಟೇಲ ಪಟವಾರಿಗಳಿಂದ ಅನೇಕವಾದ ತೊಂದರೆಗಳಾಗುತ್ತಿವೆ. ಈ ಪಟೇಲ, ಪಟವಾರಿಗಳು ಕೊಡುತ್ತಿರುವ ಕಿರುಕುಳಗಳಿಂದ ಜನರ ಉದ್ಧಾರವಾಗುವುದಿಲ್ಲ ಮತ್ತು ಇವರುಗಳು ನಡೆಸುತ್ತಿರುವ ಆಡಳಿತದಿಂದ ಬಹಳವಾದ ಅನ್ಯಾಯಗಳಾಗುತ್ತಿವೆ. ಅದಕ್ಕಾಗಿ ನಾನು ಸೂಚನೆ ಮಾಡುವುದು ತಲಾಟಿ ಸಿಸ್ಟಂ ಎಂದು ಒಂದು ಪದ್ಧತಿಯಿದೆ, ಈ ಪದ್ಧತಿಯನ್ನು ಜಾರಿಗೆ ತಂದರೆ ಎಲ್ಲರಿಗೂ ಒಂದೇ ರೀತಿಯಾದ ಅನುಕೂಲವಾಗುತ್ತದೆ. ಈ ಪಟೇಲ ಪಟವಾರಿಗಳಿಗೂ ಕೂಡ ಥರ್ಡ್ ಗ್ರೇಡು ಕ್ಲಾರ್ಕುಗಳಂತೆ ಸಂಬಳವಿರುವಂತೆ ಮಾಡಬೇಕು. ಹಾಗೆ ಮಾಡಿದರೆ ಅನುಕೂಲವಾಗುತ್ತದೆ.

ಇನ್ನು 'ಅನ್‌ಟಚಬಿಲಿಟಿ' ವಿಚಾರ ಎಂದರೆ, ಅಸ್ಪೃಶ್ಯತಾ ನಿವಾರಣೆ ವಿಚಾರವಾಗಿ ಪ್ರತಿಯೊಬ್ಬರೂ ಸಾಕಷ್ಟು ಮಾತನಾಡಿದ್ದಾರೆ. ಇದರ ವಿಚಾರವಾಗಿ ಸುಮ್ಮನೆ ಮಾತನಾಡುತ್ತಿದ್ದರೆ ಅಸ್ಪೃಶ್ಯತಾ ನಿವಾರಣೆ ಯಾದಂತಾಗುತ್ತದೆಯೇ? ಇಲ್ಲಿಯವರೆಗೂ ನಿಮ್ಮಲ್ಲಿ ಸತ್ತಾ ಬಂದಿರಲಿಲ್ಲ. ಈಗ ನಿಮ್ಮ ಕೈಗೆ ಸತ್ತಾ ಬಂದಿರುವಾಗ ಇನ್ನು ಮುಂದೆ ಹೀಗೆ ಅಲಕ್ಷ್ಯದಿಂದ ಮಾತನಾಡುತ್ತ ಕೂಡುವ ಹಾಗಿಲ್ಲ. ಇಲ್ಲಿಯ ತನಕ ಹೇಗೋ ಒಂದು ರೀತಿಯಿಂದ ಹೋಗುತ್ತಿದ್ದಿರಿ ಮತ್ತು ಅದೇ ರೀತಿಯಿಂದ ನಡೆದುಕೊಂಡು ಇಲ್ಲಿಯ ತನಕ ಬಂದಿತು. ಈಗ ಈ ಸತ್ತೆ ನಿಮ್ಮ ಕೈಗೆ ಬಂದಿರುವಾಗ ನಿಮ್ಮಲ್ಲಿರುವ ಎಲ್ಲ ಶಕ್ತಿಗಳನ್ನೂ ಉಪಯೋಗಿಸಿಕೊಂಡು ಮತ್ತು ಎಲ್ಲರ ಸಹಕಾರಗಳನ್ನೂ ತೆಗೆದುಕೊಂಡು ಯೋಚನೆ ಮಾಡಿ ಇದನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಬೇಕಾದುದು ನಮ್ಮ ಕರ್ತವ್ಯವಾಗಿದೆ. ಇಲ್ಲದಿದ್ದರೆ ಮತ್ತು ಈ ಪ್ರಕಾರದಿಂದ

ಅಲಕ್ಷ್ಯ ಮಾಡುವುದರಿಂದ ಬೇರೆ ಬೇರೆ ಪರದೇಶಗಳಿಂದ ಬಂದ ಧರ್ಮಗಳಿಗೆ ಇವರು ಬಲಿಯಾಗಿ ಇವತ್ತಿನ ದಿವಸ ಒಂದು ಮೈನಾರಿಟಿ ಕಮ್ಯೂನಿಟಿ ಬೆಳೆಯುತ್ತಿದೆ. ಯಾರೋ ಒಬ್ಬ ಟೀಚರು ಶೀಘ್ರದಲ್ಲಿಯೇ ಸರಿಯಾದ ಫಲ ದೊರತಕದಿದ್ದರೆ ಕಮ್ಯೂನಿಸ್ಟು ಆಗುವುದರಲ್ಲಿದ್ದಾರೆ ಎಂದು ಒಬ್ಬ ಮಾನ್ಯ ಸದಸ್ಯರು ಮಾತನಾಡಿದಾಗ ತಿಳಿಸಿದರು. ಅದೇ ಪ್ರಕಾರ ಇಂತಹ ಬಡ ಜನರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳು ಸರಿಯಾಗದಿದ್ದರೆ, ಪರದೇಶದಿಂದ ಬರುತ್ತಿರುವ ಕ್ರಿಶ್ಚಿಯನ್ ಮಿಷನರಿಗಳು ಮಾಡುತ್ತಿರುವ ಪ್ರಚಾರಗಳಿಗೆ ಒಳಗಾಗಿ ಬೇರೆ ಧರ್ಮಗಳಿಗೆ ಪರಿವರ್ತನೆಯಾಗಿ ಮೈನಾರಿಟಿಗಳಾಗುತ್ತಾರೆ. ಇವತ್ತಿನ ದಿವಸ ಮನುಷ್ಯ ದೇಹವನ್ನು ಮಾರಿಕೊಳ್ಳಬಹುದು. ಆದರೆ ಬುದ್ಧಿಯನ್ನು ಯಾರೂ ಮಾರಿಕೊಳ್ಳುವುದಕ್ಕಾಗುವುದಿಲ್ಲ. ಹಾಗೆ ಬುದ್ಧಿಯನ್ನೂ ಮಾರಿಕೊಳ್ಳುವವನು ಸಂಪೂರ್ಣವಾಗಿ ಕೆಡುತ್ತಾನೆ. ಹೀಗೆ ಇವತ್ತಿನ ದಿವಸ ಪ್ರತಿಯೊಬ್ಬ ಮನುಷ್ಯನೂ ಅವನಾಗಿ ಅವನೇ ಹಾಳಾಗಿ ಹೋಗುವಂತಹ ಸ್ಥಿತಿಗೆ ಬರುತ್ತಿದ್ದಾನೆ. ಹೀಗೆ ಆಗಬಾರದು. ಆದುದರಿಂದ ನಾನು ಸೂಚನೆ ಮಾಡುವುದು, ಹರಿಜನರಿಗಾಗಿ ದೊಡ್ಡ ದೊಡ್ಡದಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ದುಡ್ಡನ್ನೇನೋ ಕೊಡುತ್ತಿದ್ದೀರಿ ಮತ್ತು ಬೇಕಾದಷ್ಟು ದುಡ್ಡು ಖರ್ಚಾಗುತ್ತಿದೆ. ಆದರೂ ಕೂಡ ಯಾವ ರೀತಿಯಾದ ಅಸ್ಪೃಶ್ಯತೆಯೂ ನಿವಾರಣೆಯಾದಂತಾಗಲಿಲ್ಲ ಎನ್ನುವುದು ಕಂಡು ಬಂದಿದೆ. ಹೀಗೆ ಇವತ್ತಿನ ದಿವಸ ಬೇರೆ ಬೇರೆಯಾಗಿ ಫಂಡುಗಳನ್ನು ಮಾಡಿಕೊಳ್ಳುವುದು, ಮತ್ತು ಬೇರೆ ಬೇರೆಯಾದ ಮನೆಗಳನ್ನು ಕಟ್ಟಿಸುವುದಕ್ಕೆ ಎಂದು ಹಣವನ್ನು ವೆಚ್ಚ ಮಾಡುವುದು ಸರಿಯಾಗಿರುವುದಿಲ್ಲ. ಇವೆಲ್ಲವನ್ನೂ ಸಾಮೂಹಿಕವಾಗಿ ಎಲ್ಲ ಬಡ ಜನಗಳನ್ನೂ ಒಂದುಗೂಡಿಸಿ ಇದಕ್ಕಾಗಿ ಹಣವನ್ನು ಖರ್ಚು ಮಾಡಿದರೆ ಆಗ ಜನತೆಗೆ ಇದರಿಂದ ಅನುಕೂಲವಾಗುತ್ತದೆ. ಹೀಗೆ ಸಾಮೂಹಿಕವಾಗಿ ಕೆಲಸ ಮಾಡುವುದರಿಂದ ಅಸ್ಪೃಶ್ಯತೆಯನ್ನು ಕ್ರಮವಾಗಿ ಹೋಗಲಾಡಿಸಲು ಸಾಧ್ಯವಾಗುತ್ತದೆ. ಈಗ ಮಾಡಿರುವಂತೆ ಷೆಡ್ಯೂಲು ಕ್ಯಾಸ್ಟ್ ಫಂಡು ಮತ್ತು ಹೌಸಿಂಗಿಗಾಗಿ ಎಂದು ಬೇರೆ ಬೇರೆಯಾಗಿ ಖರ್ಚು ಮಾಡುವುದು ಸರಿಯಾಗಿ ಉಪಯೋಗವಾಗುವುದಿಲ್ಲ. ಈಗ ಮನೆ ಕಟ್ಟುವುದಕ್ಕೆ ಎಂದು ಬೇರೆ, ಕಾಲೋನಿಗಳನ್ನು ಮಾಡಬೇಕೆಂದು ಹೇಳುತ್ತಿದ್ದಾರೆ. ಅಲ್ಲದೆ ಈಗ ಮನೆ ಕಟ್ಟುವುದಕ್ಕಾಗಿ ಎಂದು 300 ರೂಪಾಯಿಗಳನ್ನು ಕೊಡುತ್ತಿದ್ದೀರಿ. ಹೀಗೆ ಕೊಡುವ ಮುನ್ನೂರು ರೂಪಾಯಿಗಳಲ್ಲಿ ಒಂದು ಮನೆಯನ್ನು ಕಟ್ಟುವುದಕ್ಕೆ ಸಾಧ್ಯವೇ ಎನ್ನುವುದನ್ನು ತಾವು ಆಲೋಚನೆ ಮಾಡಬೇಕು. ಈಗ ನೀವು ಕೊಡುವ ಮುನ್ನೂರು ರೂಪಾಯಿಗಳಲ್ಲಿ ಒಂದು ಮೊಳಕಾಲುದ್ದದ ಗೋಡೆಯನ್ನೂ ಕಟ್ಟುವುದಕ್ಕೆ ಆಗುವುದಿಲ್ಲ. ಹೀಗೆ ತಾವು ಕೊಡುವ 300 ರೂಪಾಯಿಗಳು ಯಾವುದಕ್ಕೆ ಕೂಡ ಸಾಲುವುದಿಲ್ಲ. ಹಳ್ಳಿಯ ಕಡೆಯಲ್ಲಿ ಒಂದು ಜೋಪಡಿಯನ್ನು ಕಟ್ಟಲೂ ಸಹ ಈ ಹಣ ಸಾಕಾಗುವುದಿಲ್ಲ. ಹೀಗೆ ಮನೆಗಳಿಗಾಗಿ ಎಂದು 300 ರೂಪಾಯಿಗಳನ್ನು ಕೊಟ್ಟರೆ ಅದು ಹೇಗೆ ಸಾಕಾಗುತ್ತದೆ ತಾವೇ ಆಲೋಚನೆ ಮಾಡಬೇಕು. ಇದಕ್ಕಾಗಿ ನಾನು ಸಲಹೆ ಮಾಡುವುದು: ಹತ್ತಿಪ್ಪತ್ತು ಮನೆಗಳನ್ನು ಯೋಗ್ಯರಾದ ಬಡ ಜನಗಳಿಗೆ ಕಟ್ಟಿಸಿಕೊಟ್ಟರೆ ಅವರಿಗೆ ಅದು ಬಹು ಸಂತೋಷವನ್ನುಂಟು ಮಾಡುತ್ತದೆ. ನಮ್ಮ ಕಡೆ ಮಂತ್ರಿಗಳು ಬಂದಿದ್ದಾಗ ಸಹ ಅಲ್ಪ ಸ್ವಲ್ಪ ಪರಿಹಾರವನ್ನು ಕೊಡುವುದರಿಂದ ಬಡ ಜನಗಳಿಗೆ ಅನುಕೂಲವಾಗುವುದಿಲ್ಲ ಇದನ್ನು ಸೂಕ್ತವಾಗಿ ಬಗೆಹರಿಸಬೇಕಾಗಿದೆ ಎಂದು ಅರಿಕೆ ಮಾಡಿದ್ದೆವು. ಇವತ್ತಿನ ದಿವಸ ಹರಿಜನರು ಈ ರೀತಿಯಾಗಿ ಹೊಸ ಹೊಸ ಧರ್ಮಗಳನ್ನು ಅವಲಂಬನ ಮಾಡುತ್ತಿರುವುದಕ್ಕೆ ಕಾರಣ ನಮ್ಮ ಸರಕಾರದಲ್ಲಿ ಅವರಿಗೆ ಸಾಕಷ್ಟು ಉತ್ತೇಜನ ದೊರೆಯದಿರುವುದೇ ಆಗಿದೆ. ಹೀಗಾಗುವುದು ಅಷ್ಟು ಸರಿಯಾದದ್ದಲ್ಲ ಎಂದು ನಾನು ತಮ್ಮಲ್ಲಿ ಅರಿಕೆ ಮಾಡುತ್ತಿದ್ದೇನೆ.

ಇನ್ನು ನಮ್ಮ ಹೈದರಾಬಾದು ಕಡೆಯಲ್ಲಿ ಆಂಟಿ ಕರಪ್ಷನ್ ಎಂದು ಒಂದು ಕಮಿಷನನ್ನು ನೇಮಕ ಮಾಡಲಾಗಿತ್ತು ಮತ್ತು ಆ ಕಮಿಷನ್ನಿನ ರಿಪೋರ್ಟು ಸಹ ಅಲ್ಲಿದ್ದಾಗ ಬಂದಿದ್ದಿತು. ಅದೇ ರೀತಿಯಾದ ಒಂದು ಕಮಿಷನ್ನು ಬೊಂಬಾಯಿ ಪ್ರಾಂತದಲ್ಲಿಯೂ ಇತ್ತು ಎಂದು ಕೇಳಿದ್ದೆ. ಮೈಸೂರು ಪ್ರಾಂತದಲ್ಲಿ ಇದೆಯೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಮೈಸೂರಿನಲ್ಲಿಯೂ ಇದೆ.

ಶ್ರೀ ಎಸ್. ಶರಣಗೌಡ.—ಇಲ್ಲಿಯೂ ಕೂಡ ಇದೆ. ಆದರೂ ಅದು ಕೂಡ ಸರಿಯಾಗಿ ನಡೆಯುತ್ತಿದೆ ಎನ್ನುವುದು ಬರೀ ಬಾಯಿಯಲ್ಲಿ. ಶುದ್ಧವಾಗಿ ಇದನ್ನು ವಿಚಾರ ಮಾಡಿದರೆ, ಇವತ್ತು ದುಡ್ಡು ಕಡಮೆಯಾದರೆ ಕರಪ್ಷನ್ನು ಬೆಳೆಯುತ್ತದೆ ಎನ್ನುವುದನ್ನು ನಾನು ನಂಬುವುದಿಲ್ಲ. ಇದರ ಬದಲಾಗಿ ಕರಪ್ಷನ್ನು ಬೆಳೆಯುತ್ತಿರುವುದು ಕಾನೂನನ್ನು ಅಡ್ಡ ಹಾದಿಯಿಂದ ನೋಡುತ್ತಿರುವುದರಿಂದ ಮತ್ತು ಕಾನೂನಿಗೆ ವಿರೋಧವಾಗಿ ನಡೆಯುತ್ತಿರುವ ಅಧಿಕಾರಿಗಳಿಂದ ಬೆಳೆಯಲು ಅವಕಾಶವಾಗಿದೆ. ಇನ್ನೂ ಬೇರೆ ಬೇರೆ ರೀತಿಯಿಂದಲೂ ಈ ಕರಪ್ಷನ್ ಎನ್ನುವುದು ನಡೆಯುತ್ತಿದೆ. ನಮ್ಮ ಕಡೆಗಳಲ್ಲಿ ಪಟೇಲ ಪಟವಾರಿಗಳು ಇವರಿಂದ ಹೆಚ್ಚಾಗಿ ಬೆಳೆಯುತ್ತಿದೆ. ಒಂದು ಹೊಲದ ಖಾತೆ ಹೆಸರನ್ನು ಬದಲಾಯಿಸಬೇಕಾದರೆ ಅವನು ಷಿಕ್ಕ ಇಲ್ಲ ಎಂದು ಏನೇನೋ ಹೇಳುತ್ತಾನೆ. ಅಲ್ಲದೆ ಅವನಿಗೆ ಹತ್ತು ರೂಪಾಯಿಗಳನ್ನು ಕೊಟ್ಟರೇನೆ ಅವನು ಈ ಖಾತೆ ಬದಲಾಯಿಸುವ ಕೆಲಸವನ್ನು ಮಾಡುತ್ತಾನೆ. ಅಲ್ಲದೆ ಸುಮ್ಮನೆ ಖಾತೆಯನ್ನು ನೋಡಬೇಕಾದರೆ ಈ ರೀತಿಯಾದ ತೊಂದರೆಗಳನ್ನು ಕೊಡುತ್ತಾನೆ.

ಇದೇ ಪ್ರಕಾರ ಇನ್ನೂ ಎಷ್ಟೋ ಕಡೆಗಳಲ್ಲಿ ಕೂಡ ಲಂಚ ಹೆಚ್ಚಾಗಿದೆ. ಇಲ್ಲಿ ಇನ್ನೊಂದು ಮಾತನ್ನು ಹೇಳಬೇಕಾಗಿದೆ. ಕೋರ್ಟುಗಳಲ್ಲಿ ಎಷ್ಟೋ ಜನ ಲಾಯರುಗಳಿರುತ್ತಾರೆ. ಇಲ್ಲಿಯೂ ಸಹ ಎಷ್ಟೋ ಮಂದಿ ಲಾಯರುಗಳು, ಅಡ್ವೊಕೇಟರುಗಳು ಇದ್ದಾರೆ. ಅವರೆಲ್ಲ ನಾನು ಹೀಗೆ ಹೇಳುವುದನ್ನು ಕ್ಷಮಾ ಮಾಡಬೇಕು ಎಂದು ಕೋರುತ್ತಿದ್ದೇನೆ. ಈ ಲಾಯರುಗಳಿಂದ ನಮ್ಮ ಕರ್ನಾಟಕದಲ್ಲಿ ಈ ಕರಪ್ಷನ್ನನ್ನು ಬಹಳಮಟ್ಟಿಗೆ ಬಂದು ಮಾಡಲಿಕ್ಕೆ ಅನುಕೂಲವಿದೆ. ಅವರು ಮನಸ್ಸು ಮಾಡಿದರೆ ಹೀಗೆ ಬೇಕಾದಷ್ಟು ಮಾಡಬಹುದು. ಆದರೆ ನಮ್ಮ ವಕೀಲರೇ ಮಿಸಲು ತೆಗೆದುಕೊಳ್ಳಬೇಕಾದರೆ, ಈ ಮಿಸಲು, ನೋಡಬೇಕೆಂದು ಒಂದು ಅರ್ಜಿ ಅಲ್ಲಿ ಕೆಲಸ ಮಾಡುವ ಕಾರಕೂನನ ಕೈಲಿ ಕೊಟ್ಟು ಅನಂತರ ಅರ್ಜಿ ಟಿಕೆಟ್ಟನ್ನು ತಂದು ಸರಕಾರಕ್ಕೆ ಈ ರೀತಿಯಾದ ಮಾಮೂಲನ್ನು ಕೊಡುತ್ತಿರುವುದರಿಂದ ಸರಕಾರಕ್ಕೂ ನಷ್ಟವಾಗುತ್ತಿದೆ ಮತ್ತು ಈ ಕಡೆ ರೈತನಿಗೂ ನಷ್ಟವಾಗುತ್ತಿದೆ. ಹೀಗೆ ಮಾಡುವುದು ಸರಿಯಾದುದಲ್ಲ. ಈ ರೀತಿ ಮಿಸಲಿಗಾಗಿ ಮತ್ತು ಇತರ ಖರ್ಚುಗಳಿಗಾಗಿ ಎರಡು ಮೂರು ರೂಪಾಯಿಗಳಷ್ಟು ಖರ್ಚನ್ನು ರೈತನ ಮೇಲೆ ಹಾಕಿ ಹಾಳು ಮಾಡುವುದು ತಪ್ಪು.

(ಶ್ರೀ ಎಸ್. ಶರಣಗೌಡ)

ಈ ಪ್ರಕಾರ ನಾವು ಒಂದು ನಿಯಂತ್ರಣ ಮಾಡಿಕೊಂಡು ಹೋದರೆ ಬಹುದೂರ ಸಾಗಬಹುದು. ಈಗ ನಮ್ಮ 206 ಈ ಸಭಾ ಸದಸ್ಯರುಗಳಲ್ಲಿ ಮತ್ತು 69 ಜನ ವಿಧಾನ ಪರಿಷತ್ತಿನ ಸದಸ್ಯರುಗಳಲ್ಲಿ ಎಷ್ಟೋ ಜನ ವಕೀಲರುಗಳೂ, ಅಡ್ವೋಕೇಟರುಗಳೂ ಇದ್ದಾರೆ. ಕೆಲವರು ಜಿಲ್ಲಾ ಕೋರ್ಟುಗಳಿಗೂ, ಕೆಲವರು ಹೈಕೋರ್ಟಿಗೂ ಹೋಗತಕ್ಕ ಲಾಯರುಗಳಿದ್ದಾರೆ. ಇಂಥವರೆಲ್ಲರೂ ಈ ರೀತಿಯ ಒಂದು ಆಚರಣೆಯನ್ನು ಜಾರಿಗೆ ತಂದರೆ ಲಂಚದ ಹಾವಳಿ ಬಹಳ ಮಟ್ಟಿಗೂ ಕಡಮೆಯಾಗುತ್ತದೆ. ಈ ಪ್ರಕಾರ ಒಂದು ನೇಮವನ್ನು ಆಚರಣೆಗೆ ತರಬೇಕೆಂದು ಸಲಹೆ ಮಾಡುತ್ತೇನೆ. ಈ ವಿಚಾರದಲ್ಲಿ ಮೊದಲು ನಾವು ನಮ್ಮ ಹೃದಯಗಳನ್ನು ಸರಿಮಾಡಿಕೊಳ್ಳಬೇಕು. ಇದೊಂದು ಮಹಾ ರೋಗ. ನಮ್ಮ ಸಮಾಜದಿಂದ ಇದು ಬೇಗ ಹೋಗತಕ್ಕದ್ದಲ್ಲ. ಜನರಲ್ಲಿರುವ ಜಾತಿ ಮತಗಳ ಅಂತಃಕರಣ ಅಷ್ಟು ಬೇಗ ಮಾಯವಾಗುವಂಥಾದ್ದಲ್ಲ. ಆದರೆ ನಾವು ಈ ವಿಚಾರದಲ್ಲಿ ಮಾತು ಕಡಮೆ ಮಾಡಬೇಕು, ಕೆಲಸವನ್ನು ಹೆಚ್ಚು ಮಾಡಬೇಕು. ಈ ಬಗ್ಗೆ ಜವಾಬ್ದಾರಿಯುತರಾದ ಜನರು ತುಂಬ ಶ್ರದ್ಧೆ ವಹಿಸಿ ಕೆಲಸ ಮಾಡಬೇಕಾಗಿದೆ. ಕಾರಣ ಜನರಲ್ಲಿ ಸ್ವಾರ್ಥಿಗಳಾದವರು ಬಹಳವಾಗಿದ್ದಾರೆ. ಅವರು ಗೊತ್ತಿದ್ದರೂ ಕಾನೂನಿಗೆ ವಿರೋಧವಾಗಿ ಲಂಚ ರುಷುವತ್ತುಗಳನ್ನು ಕೊಟ್ಟು ತಮ್ಮ ಸ್ವಾರ್ಥ ಕಾರ್ಯಗಳನ್ನು ನಡೆಸಿಕೊಳ್ಳುತ್ತಾರೆ. ಅಂಥ ಜನರು ಸಮಾಜದಲ್ಲಿನ್ನೂ ಹೆಚ್ಚಾಗಿರುವುದರಿಂದ ಈ ಕೊಳಕು ಅಷ್ಟು ಜಾಗ್ರತೆ ಹೋಗುವುದಿಲ್ಲ. ಆದುದರಿಂದ ಯಾರೋ ಸಾಮಾನ್ಯ ಜನರು ಈ ಕೆಲಸಕ್ಕೆ ಕೈಹಾಕಿದರೆ ಇದು ಅಷ್ಟು ಪರಿಣಾಮಕಾರಿಯಾಗಿ ನಡೆಯಲಾರದು. ಈ ವಿಚಾರದಲ್ಲಿ ವಿದ್ಯಾವಂತರೂ, ಬುದ್ಧಿವಂತರೂ, ಕಾನೂನು ಪರಿಶ್ರಮ ಉಳ್ಳಂಥ ಜನರೂ ಕಾನೂನಿಗೆ ವಿರುದ್ಧವಾಗಿ ಏನೇ ಬರಲಿ, ಯಾವನೊಬ್ಬನಿಗೂ, ಎಷ್ಟೇ ಚಿಕಾಸಿ ಮಾಡಲಿ ಒಂದು ಕಾಸನ್ನೂ ನಾವು ಲಂಚ ಕೊಡುವುದಿಲ್ಲವೆಂಬ ಒಂದು ದೃಢ ಮನೋಸಂಕಲ್ಪವನ್ನು ಬೆಳೆಸಿಕೊಂಡು ಬಂದರೆ ಈ ಕಾರ್ಯ ಸಾಧಿಸಲು ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಇನ್ನು ಪೋಲೀಸ್ ಇಲಾಖೆಯ ವಿಚಾರ ಹೇಳಬೇಕೆಂದರೆ ಇದು ಇನ್ನೂ ಬಹಳ ಕಷ್ಟವಾದದ್ದಿದೆ. ಸರ್ಕಾರದವರು ಈ ಇಲಾಖೆಯ ಬಗ್ಗೆ ಎಷ್ಟೇ ಹೇಳಿದಾಗ್ಯೂ ಈ ಇಲಾಖೆಯಲ್ಲಿ ಲಂಚ ರುಷುವತ್ತುಗಳೂ ಸ್ವೇಚ್ಛಾವರ್ತನೆಗಳೂ ಇನ್ನೂ ಉಳಿದುಕೊಂಡು ಇದ್ದೇ ಇರುತ್ತವೆಂದು ನಿಸ್ಸಂದೇಹವಾಗಿ ಹೇಳಬಹುದು. ಆದರೆ ಇದರಲ್ಲಿ ಮಂತ್ರಿಗಳ ತಪ್ಪಿಲ್ಲ. ಕಾರಣ ಅವರಿಗೆ ಅವರ ಇಲಾಖಾ ಮೊಖ್ತೇಸರರಿಂದ ಬರತಕ್ಕ ರಿಪೋರ್ಟ ಯಾವ ರೀತಿಯಲ್ಲಿರುತ್ತದೋ ಅವರು ಆರೀತಿ ಉತ್ತರ ಹೇಳಿಬಿಡುತ್ತಾರೆ. ಈ ಇಲಾಖೆಯಲ್ಲಿ ಡಿ.ಎಸ್.ಪಿ. ಲಂಚ ತಿನ್ನುವುದಿಲ್ಲ, ಡಿ.ಐ.ಜಿ. ಲಂಚ ತಿನ್ನುವುದಿಲ್ಲ, ಐ.ಜಿ.ಪಿ. ಲಂಚ ತಿನ್ನುವುದಿಲ್ಲ ಎಂದ ಮೇಲೆ ಇನ್ನು ಈ ಇಲಾಖೆಯಲ್ಲಿ ಲಂಚ ತಿನ್ನತಕ್ಕವರು ಯಾರು ಉಳಿದಿದ್ದಾರೆ ! ಅಲ್ಲಿಗೆ ಯಾರೂ ಉಳಿಯಲೇ ಇಲ್ಲ. ಪೋಲೀಸ್ ಇಲಾಖೆಯಲ್ಲಿ ಒಂದು ರೀತಿಯ ಮೆಂಟ್ಯಾಲಿಟಿ ಇದೆ. ಜನರು ಯಾರಾದರೊಬ್ಬ ಪೋಲೀಸ್ ನೌಕರನ ಅಥವಾ ಮೇಲಿನ ಅಧಿಕಾರಿಗಳ ಬಗ್ಗೆ ಲಂಚದ ಆರೋಪಣೆಗಳನ್ನಾಗಲಿ ಅಥವಾ ಬೇರೆ ಯಾವ ಅಕೃತ್ಯಗಳ ಆರೋಪಣೆಯನ್ನಾಗಲಿ ತಿಳಿಸಿದರೆ ಅವರ ಬಗ್ಗೆ ವಿಚಾರಣೆ ನಡೆಸತಕ್ಕ ಪೋಲೀಸ್ ಆಫೀಸರು ತಮ್ಮ ಇಲಾಖೆಯ ನಾಯಕರನ್ನು ಬಿಟ್ಟು ಕೊಡಬಾರದೆಂದು ಅವರ ಸೈಡನ್ನು ವಹಿಸಿಬಿಡುತ್ತಾರೆ. ಇಂಥ ಒಂದು ಮೆಂಟ್ಯಾಲಿಟಿ ಈ ಇಲಾಖೆಯ ಅಧಿಕಾರಿಗಳಲ್ಲಿದೆ. ಲಂಚ ರುಷುವತ್ತುಗಳನ್ನು ತಿನ್ನತಕ್ಕವರು ಅವರು ಯಾರೇ ಆಗಿರಲಿ ಅಂಥವರನ್ನು ನಿರ್ದಾಕ್ಷಿಣ್ಯವಾಗಿ ಕೆಲಸದಿಂದ ಕಿತ್ತುಹಾಕಬೇಕು. ಆದರೆ ಈ ದಿವಸ ಹಾಗೆ ಮಾಡುತ್ತಿಲ್ಲ. ಲಂಚ ತಿನ್ನತಕ್ಕವರ ಬಗ್ಗೆ ಒಂದು ಅಭಿಮಾನ, ಕನಿಕರ ತೋರಿಸತಕ್ಕ ಮನೋಭಾವದಿಂದ ದೇಶದ ಜನರಿಗಾಗುತ್ತಿರುವ ತೊಂದರೆಗಳ ಕಡೆಗೆ ಅವರ ಗಮನ ಅಷ್ಟಾಗಿ ಹೋಗುತ್ತಿಲ್ಲ. ತಮ್ಮ ಇಂಥ ಕೆಟ್ಟ ಚಾಳಿಯ ನೌಕರರ ಮೇಲಿನ ಅಭಿಮಾನಕ್ಕಿಂತಲೂ ದೇಶದ ಹಿತದೃಷ್ಟಿ ಬಹಳ ಶ್ರೇಷ್ಠವಾದದ್ದು. ಆ ಕಡೆಗೆ ಇವರ ಗಮನ ಹೋಗಬೇಕಾಗಿದೆ. ಈ ದಿವಸ ಯಾವುದಾದರೂ ಇಂಥ ಒಂದು ವಿಚಾರಣೆ ನಡೆಯಬೇಕಾಗಿದ್ದರೆ ಮೊದಲು ಆ ಸ್ಥಳಕ್ಕೆ ಸಬ್ ಇನ್ಸ್ಪೆಕ್ಟರ್ ಹೋಗುತ್ತಾನೆ. ಆತನು ಹೋದ ಮಾರನೆಯ ದಿನವೋ ಅಥವಾ ಅದೇ ದಿವಸವೋ ಸ್ವಲ್ಪ ಕಾಲವನ್ನು ತಡೆದು ಇನ್ಸ್ಪೆಕ್ಟರೂ ಆ ಸ್ಥಳಕ್ಕೆ ಹೋಗುತ್ತಾನೆ. ಕಡೆಯಲ್ಲಿ ಡಿ.ಎಸ್.ಪಿ. ಹೋಗುತ್ತಾರೆ. ಹೀಗೆ ಆ ಸ್ಥಳಕ್ಕೆ ಎಲ್ಲರೂ ಹೋಗುತ್ತಾರೆ. ಎಲ್ಲರೂ ವಿಚಾರ ತಿಳಿಯುತ್ತಾರೆ. ಆದರೆ ಇಡೀ ವಿಚಾರಣೆಯ ಸ್ವಾರಸ್ಯವೆಲ್ಲ ಸಬ್ ಇನ್‌ಸ್ಪೆಕ್ಟರು ಮತ್ತು ಇನ್ಸ್ಪೆಕ್ಟರು ಈ ಇಬ್ಬರ ಕೈಚಳಕದಲ್ಲಿರುತ್ತದೆ. ಇವರು ಸೈ ಎಂದುದಕ್ಕೆ ಸಹಿ ಹಾಕಿಸಿಕೊಳ್ಳುತ್ತಾರೆ. ಕಡೆಯಲ್ಲಿ ಏನೂ ತಕ್ಸೀರಾಗಲಿ ಅಂಥಾ ಅಪರಾಧವಾಗಲಿ ನಡೆದಿಲ್ಲವೆಂದು ರಿಪೋರ್ಟ ಮಾಡಿಬಿಡುತ್ತಾರೆ. ಈ ದಿವಸ ನಾವೇನಾದರೂ ಒಬ್ಬ ಪೋಲೀಸ್ ನೌಕರನ ಬಗ್ಗೆ ಒಂದು ಫಿರ್ಯಾದನ್ನು ಕೊಟ್ಟರೆ ಡಿ.ಎಸ್.ಪಿ. ಆಗಲಿ ಅಥವಾ ಐ.ಜಿ.ಪಿ. ಆಗಲಿ ಏನು ಮಾಡುತ್ತಾರೆ ? ಆ ನಮ್ಮ ಫಿರ್ಯಾದನ್ನು "For enquiry and report" ಎಂದು ಬರೆದು ಕೆಳಗಿನ ಅಧಿಕಾರಿಗಳಿಗೆ ಕಳುಹಿಸಿಬಿಡುತ್ತಾರೆ. "Enquiry is made and everything is false". ಎಂಬುದಾಗಿ ನಾವು ಕೊಡತಕ್ಕ ಕಂಪ್ಲೈಂಟ್‌ಗಳ ಬಗ್ಗೆ ಆ ಡಿ.ಎಸ್.ಪಿ. ಅವರು ಏನೋ ಒಂದು ಬರೆದು ಹಾಕಿಬಿಡುತ್ತಾರೆ.

"I have a report from the collector sent from the D.S.P. I cannot say anything about it."

ಈ ರೀತಿ ಆ ಅಧಿಕಾರಿಗಳು ಹೇಳುವಂತೆಯೇ ಇಲ್ಲಿ ಮಾನ್ಯ ಮಂತ್ರಿಗಳೂ ಹೇಳಿಬಿಟ್ಟರೆ ಇನ್ನು ನಾವು ನಮ್ಮ ಕುಂದುಕೊರತೆಗಳನ್ನು ಯಾರಲ್ಲಿ ಹೋಗಿ ಹೇಳಿಕೊಳ್ಳಬೇಕು ? ಹೀಗಾದ ಮೇಲೆ ನಾವಿನ್ನು ಕಂಪ್ಲೈಂಟ್ಸನ್ನು ಹೇಳಿಕೊಂಡಾದರೂ ಏನು ಪ್ರಯೋಜನ ? ನಮ್ಮ ಕಷ್ಟ ನಿಷ್ಠುರಗಳನ್ನು ಕೇಳತಕ್ಕವರೇ ಇಲ್ಲವೆಂದಾಗುವುದು. ಈ ರೀತಿ ದೇಶದಲ್ಲಿ ಕರಪ್ಷನ್, ಜಾತೀಯತೆ, ಪಕ್ಷಪಾತ ಭಾವನೆಗಳಿರುವಾಗ ತಪ್ಪು ಮಾಡದಂತೆ ಯಾರೂ ಇರುವುದಿಲ್ಲ. ಈ ವಿದ್ಯೆಗಳನ್ನು ಯಾರೂ ಅಷ್ಟು ಬೇಗ ಕೈಬಿಡುವುದಿಲ್ಲ. ಈ ವಿದ್ಯೆಗಳಿಗೆ ಎಲ್ಲರೂ ಬಹುಬೇಗ ಬಲಿ ಬೀಳುತ್ತಾರೆ. ಇದೊಂದು ಪಿತ್ರಾರ್ಜಿತವಾದ ಆಸ್ತಿಯಾಗಿ ಬಂದುಬಿಟ್ಟಿದೆ. ವಂಶಪಾರಂಪರ್ಯವಾಗಿ ಅನುಕರಣೆಯಲ್ಲಿ ತಂದಿರುವಂಥ ಈ ಪಿತ್ರಾರ್ಜಿತದ ಆಸ್ತಿ ಒಂದು ಪಾಪದ ಹೊರೆ. ಈ ಪಾಪಕರ್ಮಗಳ ಆಸ್ತಿಯನ್ನು ಏಕಾಏಕಿ ಕಿತ್ತೊಗೆದು ತಕ್ಷಣದಲ್ಲೇ ಒಂದು ಉತ್ತಮ ಜೀವನ ನಡೆಸತಕ್ಕಂಥಾದ್ದು ಅಷ್ಟು ಸುಲಭ ಸಾಧ್ಯವಾದ ಕೆಲಸವಲ್ಲ. ಒಂದು ಹೊಸ ಸಮಾಜವೇ ನಿರ್ಮಾಣವಾಗಬೇಕಾಗಿದೆ. ತಕ್ಷಣಕ್ಕೆ

ಇದು ಸಾಧ್ಯವಿಲ್ಲ. ಇದನ್ನೇನಿದ್ದರೂ ನಾವು ಕ್ರಮ ಕ್ರಮವಾಗಿ ಕಡಮೆ ಮಾಡಿಕೊಳ್ಳುತ್ತಾ ಬರಬೇಕು. ಹೀಗೆ ಮಾಡಿದರೆ ಒಂದಾನೊಂದು ಕಾಲಕ್ಕೆ ಜಾತೀವಾದ, ಲಂಚರುಷುವತ್ತು, ಪಕ್ಷಪಾತ ಭಾವನೆಗಳು ನಿರ್ನಾಮವಾಗುತ್ತವೆ. ಈ ಕಾರ್ಯಸಾಧನೆಗೆ ನಾವು ನಮ್ಮ ಗುರಿಯನ್ನೇ ಬದಲಾಯಿಸಬೇಕು, ಅದನ್ನು ಆಚರಣೆಯಲ್ಲಿ ತರಬೇಕು. ಆದಕಾರಣ ಪೋಲೀಸ್ ಇಲಾಖೆಯಲ್ಲಿ ಈ ದಿವಸ ಲಂಚರುಷುವತ್ತುಗಳು, ಇತರ ಚೌಕಾಸಿ ವಿದ್ಯೆಗಳಿಲ್ಲವೆಂದು ಯಾರೂ ತಿಳಿಯಬಾರದು. ಈ ಬಗ್ಗೆ ಒಂದು ಸರಿಯಾದ ಹತೋಟಿಯಿಡಬೇಕು. ನಾನಿನ್ನೂ ಹೇಳಬೇಕಾದ ವಿಚಾರ ಬಹಳ ಇತ್ತು. ಆದರೆ ಈಗ ವೇಳೆ ಇಲ್ಲದ್ದರಿಂದ ಅವುಗಳನ್ನೆಲ್ಲ ಬಿಟ್ಟುಬಿಟ್ಟಿದ್ದೇನೆ.

3 P.M.

ಹೈದರಾಬಾದ್ ಕರ್ಣಾಟಕದಿಂದ ನಾವು ಬಂದ ಮೇಲೆ ನಮಗೆ ಯಾವಯಾವ ರೀತಿಯ ಅನ್ಯಾಯವಾಗುತ್ತಿದೆಯೆಂದು ಹೇಳುವುದಕ್ಕೆ ನಾನು ನಿಂತಿಲ್ಲ. ಅಂತೂ ಅನ್ಯಾಯವಾಗುತ್ತಿದೆ. ಬೊಂಬಾಯಿ ಕರ್ಣಾಟಕದಿಂದ ಬಂದವರಿಗೆ ನಮಗಿಂತ ಹೆಚ್ಚಿಗೆಯೆಂದು ಹೇಳಬಹುದು; ಯಾವ ರೀತಿಯ ನ್ಯಾಯವೂ ಆಗಿಲ್ಲವೆಂದು ಹೇಳುವುದಿಲ್ಲ. ಆದರೂ ಇಲ್ಲಿ ಒತ್ತಟ್ಟಿಗೆ ಯಾವ ಭಾವನೆಯಿಂದ ಕೂಡಿದ್ದೇವೋ, ಆ ಭಾವನೆಗೆ ಧಕ್ಕೆ ಬರಬಾರದೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ನಾನು ಹೇಳುವುದೇನೆಂದರೆ ಅಲ್ಲಿಂದ ಬಂದಿರತಕ್ಕ ಜನರಿಗೆ ಅಲ್ಲಿ ಯಾವ ತೆರದ ಕಾರ್ಯಕ್ರಮವನ್ನೂ ಕೈಕೊಳ್ಳದೆ ಈ ಹೊತ್ತು ಹೈದರಾಬಾದ್ ಸರ್ಕಾರ ನಮಗೆ ಅನ್ಯಾಯಮಾಡಿದೆಯೆಂದು ನನಗೆ ಗೊತ್ತಿದೆ. ನಮ್ಮ ಮುಖ್ಯ ಮಂತ್ರಿಗಳು ಆಗಾಗ್ಗೆ ಡೆಲ್ಲಿಗೆ ಹೋಗುವಾಗ ಅವರ ಗಮನಕ್ಕೂ ತಂದಿದ್ದೇನೆ. ಆದ್ದರಿಂದ ಅಲ್ಲಿ ಅನ್ಯಾಯವಾಗಿದೆಯೆಂದು ಹೇಳಿ ಇಲ್ಲಿಯೂ ಸುಮ್ಮನೆ ಇರಬೇಕೆಂಬುದು ಸರಿಯಲ್ಲ. ತಟ್ಟಾಗಿ ಬಂದವರನ್ನು ನೀವು ಯೋಗ್ಯರೀತಿಯಿಂದ ನೋಡಿ ಮಾಡಬೇಕು. ನಮಗೆ ಇಷ್ಟು ಬೇಕು, ಅಷ್ಟು ಬೇಕು ಎಂದು ಹೇಳುವುದು ಕಷ್ಟ. ನಮ್ಮಲ್ಲಿ ಈ ಹೊತ್ತಿನ ದಿವಸ ಬಾಕಾಯ ಬಹಳವಾಗಿದೆ. ನ್ಯಾಯವಾಗಿ ನಿಮ್ಮ ಬಾಕಾಯ ಎಷ್ಟಿರಬೇಕೋ ಅಷ್ಟು ವಸೂಲು ಮಾಡಿರಿ. ಆ ಹೊಲವನ್ನೂ ಏಕಸಾಲ್ ಹರಾಜುಮಾಡಿ, ಜನರ ಮೇಲೆ ಉಳಿದ ದುಡ್ಡನ್ನು ವಸೂಲು ಮಾಡಿಕೊಳ್ಳುವುದಕ್ಕೆ ಮಾರ್ಚಿ ತಿಂಗಳಿನಲ್ಲಿ ಹರಾಜುಮಾಡಿ ಯಾರು ಕೊಂಡುಕೊಳ್ಳುತ್ತಾರೋ ಅವರಿಂದ ಹಣ ಡಿಪಾಸಿಟ್ ಮಾಡಿಸಿಕೊಳ್ಳುತ್ತಿದ್ದಾರೆ. ಈ ವಿಚಾರದಲ್ಲಿ ನಾನು ಒಂದು ಸೂಚನೆ ಕೊಡಬಯಸುತ್ತೇನೆ. ಜನರನ್ನು ಆಸ್ತಿಯಿಂದ ದೂರಮಾಡಿದರೆ ಅವರ ಒಕ್ಕಲುತನ ಹೋಗುತ್ತದೆ. ಅವರಿಗೆ ಬೇರೆ ಉದ್ಯೋಗ ಅಥವಾ ನೌಕರಿ ಇಲ್ಲ. ಈ ದೃಷ್ಟಿಯಿಂದ ಅವರನ್ನು ಈ ರೀತಿ ಭಿಕಾರಿಗಳಾಗಿ ಮಾಡುವುದಕ್ಕಿಂತ ಅವರನ್ನೂ ಮನುಷ್ಯರಂತೆ ಕಂಡು ಸಾಲವನ್ನು ವಸೂಲುಮಾಡಿಕೊಳ್ಳಿ. ಮಾರವಾಡಿಗಳಂತೆ ಆಸ್ತಿಯನ್ನು ಜಪ್ತಿಮಾಡುವುದು ಸರಿಯಲ್ಲ. ಬಹಳ ಬಾಕಿ ಉಳಿದಿದ್ದರೆ ಅದು ಸರ್ಕಾರದ ದೋಷ, ಅಷ್ಟೆ. ಆ ಸರ್ಕಾರ ಏನೇನೋ ಮಾಡಿರಬಹುದು. ಅಂದಮಾತ್ರಕ್ಕೆ ಈ ಹೊತ್ತಿನ ದಿವಸ ಒಂದೇ ವರ್ಷ ಎಲ್ಲವನ್ನೂ ವಸೂಲು ಮಾಡಬೇಕೆಂದು ಜಪ್ತಿ ಮಾಡಿಸುವುದರಿಂದ ಆ ಜನರಿಗೆ ಬಹಳ ಅನ್ಯಾಯವಾಗುತ್ತದೆ. ಸರ್ಕಾರದವರು ದಯವಿಟ್ಟು ಸಾವಧಾನದಿಂದ ಇದನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

* ಶ್ರೀ ಎಂ. ಹನುಮಂತಯ್ಯ (ನೆಲಮಂಗಲ-ಅನುಸೂಚಿತ ಜಾತಿಗಳು).—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದಿರುವ 1958-59ನೆಯ ಸಾಲಿನ ಬಡ್ಜೆಟ್ಟನ್ನು ಸ್ವಾಗತಿಸಿ ಕೆಲವು ವಿಷಯಗಳನ್ನು ಕುರಿತು ಮಾತಬೇಕೆಂದಿದ್ದೇನೆ. ನಮ್ಮ ಸಂಸ್ಥಾನದಲ್ಲಿ ಶೇಕಡ 80 ಜನರು ರೈತರಾಗಿದ್ದಾರೆ. ಹೀಗಿರುವಾಗ ಸರ್ಕಾರದವರು ಹಿಂದೆ ಮೂರು ಕೋಟಿ, ಹತ್ತು ಕೋಟಿ ಆದಾಯವಿರುವಾಗ ರೈತರಿಗೆ ಏನೇನು ಅನುಕೂಲ ಸಲ್ಲುತ್ತಿತ್ತು, ಈಗ 60 ಕೋಟಿ ಆದಾಯವಿರುವಾಗ ಏನೇನು ಅನುಕೂಲ ಸಲ್ಲುತ್ತಿದೆಯೆಂಬುದನ್ನು ನೋಡಬೇಕು. ರೈತರಿಗೆ ವ್ಯವಸಾಯ ಮಾಡುವುದಕ್ಕೆ ಮುಖ್ಯವಾಗಿ ಗಾಡಿ, ಎತ್ತು, ಬೀಜ, ಗೊಬ್ಬರ ಬೇಕು. ಈಗಿನ ಪರಿಸ್ಥಿತಿ ಹೇಗಿದೆ ? ಹಿಂದೆ 180 ರೂಪಾಯಿ ಇದ್ದ ಗಾಡಿ ಈಗ 400 ರೂಪಾಯಿ ಆಗಿದೆ. ನೇಗಿಲು 12 ರೂಪಾಯಿ ಇದ್ದದ್ದು 40 ರೂಪಾಯಿ ಆಗಿದೆ. ಅಂಥದರಲ್ಲಿ ನೀವು ರೈತರ ಅನುಕೂಲಕ್ಕಾಗಿ ಇಲ್ಲಿ ಕೊಟ್ಟಿರುವ ಹಣ ಎರಡು ಕೋಟಿ ರೂಪಾಯಿಗಳು ಮಾತ್ರ. 60 ಕೋಟಿ ರೂಪಾಯಿಗಳು ನಮ್ಮ ಆದಾಯವಾಗಿರುವಾಗ ಎರಡು ಕೋಟಿಯೆನ್ನುವುದು ಬಹಳ ಕಡಮೆ. ಹೋದ ಸಾರಿಯೂ ಹೆಚ್ಚಿಗೆ ಕೊಡಬೇಕೆಂದು ನಾನು ಹೇಳಿದ್ದೆ. ಆದರೂ ತಾವು ಕೊಟ್ಟಿಲ್ಲ. ಚುನಾವಣೆಗಳನ್ನು ನಡೆಸುವಾಗ ರೈತರು ದೇಶದ ಬೆನ್ನುಮೂಳೆಯೆಂದು ಹೇಳುತ್ತಿರುತ್ತೇವೆ. ಚುನಾವಣೆ ಮುಗಿದು ಇಲ್ಲಿ ಸ್ಥಾನಗಳನ್ನು ಗಳಿಸಿದಮೇಲೆ ರೈತರನ್ನು ಮರೆತುಬಿಡುತ್ತೇವೆ. ಇದಕ್ಕೆ ಕಾರಣವೇನೋ ಗೊತ್ತಿಲ್ಲ. ವ್ಯವಸಾಯದ ಮಂತ್ರಿಗಳು ಸ್ವತಃ ಜಮೀನ್ದಾರರು, ವ್ಯವಸಾಯಗಾರರು, ರೈತರ ಕಷ್ಟಸುಖಗಳನ್ನು ಅರಿತವರು ಎಂದು ತಿಳಿದಿದ್ದೆವು. ಅಂಥವರೂ ಕೂಡ ಮಂತ್ರಿಪದವಿ ಬಂದಮೇಲೆ ರೈತರನ್ನು ಮರೆತರಲ್ಲಾ ! ರೈತನು ಮಾಡುವ ಕೆಲಸ ಎಂಥಾದ್ದು ! 'ಕೋಟಿ ವಿದ್ಯೆಕ್ಕಿಂತ ಮೇಟಿ ವಿದ್ಯವೇ ಲೇಸು' ಎಂದು ಹೇಳಿ ಕೇಳಿದ್ದೇವೆ. ಅವನು ಬೆಳೆದ ಸಣ್ಣ ಅಕ್ಕಿ ನಾವು ತಿನ್ನುತ್ತೇವೆ ; ದಪ್ಪ ಅಕ್ಕಿ ಅವನು ತಿನ್ನುತ್ತಾನೆ. ಅಂಥವನನ್ನು ನಾವು ಇಷ್ಟು ದೂರೀಕರಿಸಕೂಡದು.

ಇನ್ನು ತೋಟ ತಳವಾರರ ವಿಷಯ ಹೇಳುವುದಾದರೆ 20-25 ವರ್ಷದಿಂದ ನೀವು ಹೇಳುತ್ತಿರುವ ಮಿರಾಸೆ ಅವರಿಗೆ ಸಿಕ್ಕುತ್ತಿಲ್ಲ. ಪಟೇಲ್ ಶ್ಯಾನುಭೋಗರಿಗೆ ಮಾತ್ರ ಬಡ್ಜೆಟ್ಟಿನಲ್ಲಿ ಎಂಟು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ತೋಟಿ ತಳವಾರರುಗಳೇನು ಪಟೇಲರುಗಳಿಗಿಂತ ಅನುಕೂಲಸ್ಥರೇ ? ಏಕೆ ಹೀಗೆ ಅನ್ಯಾಯಮಾಡಿದ್ದೀರಿ ? ತಕ್ಕಡಿ ಮಾತ್ರ ಈ ಸಭೆಯಲ್ಲಿ ಮೇಲೆ ತೂಗು ಹಾಕಿದ್ದೀರಿ ! ಧರ್ಮ ಪರಿಪಾಲನೆ ಮಾಡುತ್ತೇವೆ ಎಂದು ಸರ್ಕಾರದ ಕೆಲಸ ದೇವರ ಕೆಲಸ ಎಂದು ಈ ಭವನದ ಮೇಲೆ ಬರೆಸಿದ್ದೀರಿ. ಧರ್ಮವನ್ನು ಕೈಯಲ್ಲಿಟ್ಟು ತೂಕ ಮಾಡುವಾಗ ತೋಟಿ ತಳವಾರರುಗಳನ್ನೇಕೆ ಮರೆತರೋ ಗೊತ್ತಿಲ್ಲ ! ಎಂಥ ರೆವಿನ್ಯೂ ಮಂತ್ರಿಗಳು ಬಂದರೋ ! ಜಮೀನು ಹುಟ್ಟಿದಾಗಿನಿಂದಲೂ ಯಾರ ಜಮೀನಾಗಿತ್ತೋ ಅವರು ಇಂದು ಆ ಜಮೀನನ್ನು ಯಾರಿಗೂ ಮಾರಕೂಡದೆಂದು ಆಜ್ಞೆ ಮಾಡಿದರು. ಇವರು ಅನೇಕರಿಗೆ ಇದರಿಂದ ತೊಂದರೆಯಾಯಿತು. ಯಾರೂ ಹಿಂದೆ ಮಾಡಿರಲಿಲ್ಲ. ಗೋಹತ್ಯ ಮಾಡಕೂಡದೆಂದು ಸರ್ಕಾರಿ ಆಜ್ಞೆಯಿರುವುದು ಸರ್ಕಾರಕ್ಕೆ ಗೊತ್ತಿದೆ. ಬಸವಣ್ಣನ ಕುಲದವರು ಮಂತ್ರಿಗಳಾದಮೇಲೆ ಗೋಹತ್ಯ ಜಾಸ್ತಿಯಾಯಿತು ! ರಸ್ತೆಯಲ್ಲೇ ದನಗಳನ್ನು ಕತ್ತರಿಸುತ್ತಿರುವಾಗ ಪೋಲೀಸಿನವರಿಗೆ ಹೇಳಿದರೂ 'ನಾವೇನು ಮಾಡೋಣ' ಎಂದು ನಮ್ಮನ್ನೇ ತಮಾಷೆ ಮಾಡುತ್ತಾರೆ. ಶ್ರೀ ಮರಿ

(ಶ್ರೀ ಎಂ. ಹನುಮಂತಯ್ಯ)

ಯಪ್ಪನವರು, ಸಿದ್ದಯ್ಯನವರು ಈ ಶಾಖಾ ಮಂತ್ರಿಗಳಾಗಿದ್ದಾಗ ಹೇಳಿದ ಕೂಡಲೆ ಬಂದೋಬಸ್ತು ಮಾಡುತ್ತಿದ್ದರು. ಈಗ ಏನು ಹೇಳೋಣ? ಅನೇಕರು ಪೋಲೀಸಿನವರೇ ಕುಡಿಯುತ್ತಿದ್ದಾರೆಂದು ಹೇಳಿದ್ದಾರೆ. ಅವರೇನು ಹೇಳಿದರೂ ಗಮನ ಕೊಡುವುದಿಲ್ಲ. ಇನ್ನು ನಮ್ಮನ್ನೇ ತಮಾಷೆ ಮಾಡುತ್ತಾರೆ. ಇಂಥ ಸರ್ಕಾರ ಬಂತಲ್ಲಾ ಎಂದು ಕಣ್ಣೀರು ಬರುತ್ತದೆ. ಭಯವಿಲ್ಲದೆ ಕುಡಿಯುತ್ತಾರೆ. ಕುಡಿಯಕೂಡದೆಂದು ಕಾನೂನು ಮಾಡಿದ್ದಾರೆ; ಆದರೆ, ಆ ಕಾನೂನನ್ನು ಎಲ್ಲಿಟ್ಟಿದ್ದಾರೋ ಗೊತ್ತಿಲ್ಲ. ಇಂಥ ಗೃಹ ಮಂತ್ರಿಗಳು ನಮಗೆ ಬಂದರು !! ಏನನ್ಯಾಯವೋ !! ಕುಡಿಯುವುದು ಇನ್ನೂ ಹೆಚ್ಚಾಯಿತು. ರೋಡಿನಲ್ಲೇ ಕಟುಕರು ದನಗಳನ್ನು ಕಡಿಯುತ್ತಿದ್ದಾರೆ. ಶ್ರೀರಾಮಪುರದಲ್ಲಿ ದಿವಸಕ್ಕೆ ಐದು ದನಗಳನ್ನು ಕಡಿಯುತ್ತಿದ್ದರು. ಹಿಂದೆ ಮರಿಯಪ್ಪನವರು ಮಂತ್ರಿಗಳಾಗಿದ್ದಾಗ ಅಲ್ಲಿಗೇ ಒಂದು ಪೋಲೀಸ್ ಸ್ಟೇಷನ್ ಮಾಡಬೇಕೆಂದು ಮಾಡಿದ್ದರು. ಈಗ ಎಲ್ಲಾ ಅಳಿಸು ! ಆ ಮಹರಾಯ ಹನುಮಂತಯ್ಯನ ಕಾಲದಲ್ಲಿದ್ದ ಬಿಗಿ ಎಲ್ಲಿ ಹೋಯಿತು ? ಇದೇನನ್ಯಾಯ!

ಮೂರನೆಯದಾಗಿ, ಶೇಂದಿ, ಷರಾಬು ಕುಡಿತವನ್ನು ತಪ್ಪಿಸಬೇಕೆಂದು 25 ವರ್ಷಗಳಿಂದ ಕೇಳುತ್ತಿದ್ದೇವೆ. ಹಿಂದಿನ ಸರ್ಕಾರ ಮಾಡಲಿಲ್ಲ. ಕಾಂಗ್ರೆಸ್ ಸರ್ಕಾರ ಬಂತು. ಕೆಲವು ಕಡೆ ಧೈರ್ಯವಾಗಿ ತೆಗೆದರು. ಆ ಕಡೆಗಳಲ್ಲಿ ಬಡವರು ಸುಖವಾಗಿದ್ದಾರೆ. ಈಚೆಗೆ ಬೆಂಗಳೂರು ಡಿಸ್ಟ್ರಿಕ್ಟಿನಲ್ಲೂ ತೆಗೆಯಬೇಕೆಂದು ಹೇಳುತ್ತಿದ್ದೇವೆ. ಆದರೆ, ತೆಗೆದಿಲ್ಲ ಈ ಸರ್ಕಾರ. ಏಕೆ ? ಆದಾಯ ಬರುತ್ತದೆ ಎಂದು. ಕಳ್ಳತನ ಮಾಡಿದರೂ ಆದಾಯ ಬರುತ್ತದೆಯಲ್ಲವೇ ? ದರೋಡೆ ಮಾಡಿದರೂ ಸಂಪಾದನೆಯೇ ? ತುಮಕೂರಿನಲ್ಲಿ ಶೇಂದಿ ಷರಾಬು ಕುಡಿತಕ್ಕೆ ಅವಕಾಶವಿಲ್ಲ. ತುಮಕೂರಿನಿಂದ ಬೆಂಗಳೂರಿಗೆ ಹೋಗುವ ರಸ್ತೆಯಲ್ಲಿ ನಿತ್ಯ ಸಾವಿರಾರು ಮಂದಿ ಬಂದು ಬೆಂಗಳೂರಿನಲ್ಲಿ ಕುಡಿದು ಹೋಗುತ್ತಿದ್ದಾರೆ! ಬೆಂಕಿಯ ಮುಂದೆ ಬೆಣ್ಣೆ ಇಟ್ಟರೆ ಕರಗುವುದಿಲ್ಲವೇ ? ದೇಶದಲ್ಲಿ ಇಂದು ಖೂನಿ ಮಾಡುವವರು ಯಾರು ? ಕುಡುಕರಲ್ಲವೇ ? ನೆಲಮಂಗಲದ ತನಕ ರಸ್ತೆ ನೋಡಿ. ಶೇಂದಿ ಕುಡಿದ ಡ್ರೈವರುಗಳಿಂದ ಹತ್ತಾರು ಲಾರಿ 'ಡ್ಯಾಷ್' ಆಗಿ ಅನಾಹುತಗಳಾಗಿ ಬಿದ್ದಿರುತ್ತವೆ. ಡ್ರೈವರುಗಳೆಲ್ಲ ಕುಡಿಯುತ್ತಾರೆ. ಶೃಂಗೇರಿಯಲ್ಲಿ ಒಂದೇ ಮನೆಯಲ್ಲಿ 8-10 ಜನರನ್ನು ಒಂದೇ ದಿನ ಕೊಲೆ ಮಾಡಿದರು. ಯಾವನೋ ಷರಾಬು ಕುಡಿದ ಮನುಷ್ಯನಲ್ಲವೇ ಇಂಥ ಕೃತ್ಯಕ್ಕೆ ಕೈಹಾಕಿರುವುದು ? ನಿಮಗೆ ಆದಾಯವಿರಬಹುದು. ಆದರೂ ಇಂಥ ಅನಾಹುತಗಳು ನಡೆಯುವುದಕ್ಕೆ ದಾರಿ ಕೊಡುವುದು ಸರಿಯೇ ? ಪೂಜ್ಯ ಗಾಂಧೀಜೀಯವರು ಹಾಕಿಕೊಟ್ಟ 18 ಕಾರ್ಯಕ್ರಮಗಳಲ್ಲಿ ಮೊದಲನೆಯ ಕಾರ್ಯಕ್ರಮ ಶೇಂದಿ ಷರಾಬುಗಳ ಕುಡಿತವನ್ನು ತಪ್ಪಿಸುವುದು. ಆ ಹನುಮಂತಯ್ಯನೇ ಧೀರ, ಅಗಾಧವಾದ ಕೆಲಸವೊಂದನ್ನು ಸಾಧಿಸಿ ಹೆಸರು ಪಡೆದ. ಧೀರ ಆಂಜನೇಯ ಅವನು ! ಆಗ ಅವನು ಏಕೆ ಈ ದೊಡ್ಡ ಭವನವನ್ನು ಕಟ್ಟಿಸಿದನೆಂದು ಆಕ್ಷೇಪಿಸಿದೆವು. ಧೈರ್ಯವಾಗಿ ಅವನು ಕಟ್ಟಿಸಿದ. ಇಂದು ಅದನ್ನೇ ನೋಡಿ ನಾವೆಲ್ಲಾ ನಗುತ್ತೇವೆ, ಸಂತೋಷಪಡುತ್ತೇವೆ. ಆ ಧೀರ ಮಾಡಿದ ಕೆಲಸವೊಂದನ್ನು ನೀವೂ ಮಾಡಿ ಅವನಂತೆ ಹೆಸರು ಪಡೆಯಿರಿ. ಆತ ಈ ಬಿಲ್ಡಿಂಗ್ ಮೇಲೆ ಸರ್ಕಾರದ ಕೆಲಸ ದೇವರ ಕೆಲಸ ಎಂದು ಬರೆಸಿದ್ದ. ಅದನ್ನು ಅಳಿಸಿ ಹಾಕಿಸಿದ್ದೇ ನಿಮ್ಮ ಕೆಲಸ! ಅದಿದ್ದರೆ ನಿಮಗೇನು ತೊಂದರೆಯಾಗುತ್ತಿತ್ತು ? ಅಳಿಸಿ ಹಾಕಿಸಿದ್ದಕ್ಕೇನು ಕಾರಣ? ಈ ಕಟ್ಟಡಕ್ಕೆ ಬರುವವರು, ಸರ್ಕಾರಿ ಕೆಲಸಕ್ಕೆ ಸೇರುವವರು ಸಾವಿರಾರು ಮಂದಿಯಿರುವಾಗ ಒಬ್ಬರಾದರೂ ದೇವರ ಕೆಲಸವೆಂದು ತಿಳಿದು ಕೆಲಸ ನಡೆಸಲಿ ಎಂದಿದ್ದರೆ ಅದನ್ನು ಅಳಿಸಿ ಹಾಕಿಬಿಟ್ಟರಲ್ಲಾ ! ದೇಶದಲ್ಲಿ ಜೂಜು ಜಾಸ್ತಿಯಾಯಿತು. ಅದನ್ನು ನಿಮಗೆ ತಪ್ಪಿಸುವುದಕ್ಕಾಗಲಿಲ್ಲ ! ಕುಡಿತ ಜಾಸ್ತಿಯಾಯಿತು; ಅದನ್ನು ತಪ್ಪಿಸುದಕ್ಕಾಗಲಿಲ್ಲ. ಬಾಗಿಲಿನಲ್ಲಿ ಬರೆದಿದ್ದನ್ನು ತಪ್ಪಿಸುವುದಕ್ಕಾಯಿತು ನಿಮಗೆ! ಇದಕ್ಕಿಂತ ಕಷ್ಟ ಕೆಲಸ ಯಾವುದು ? ಅಧಿಕಾರ ಸಿಕ್ಕಿತೆಂದು ಇನ್ನೊಬ್ಬ ಅಧಿಕಾರದಲ್ಲಿ ಮಾಡಿದುದನ್ನೆಲ್ಲಾ ತುಳಿಯುವುದೇ ? ಇದರಿಂದ ದೇಶ ಸುಖವಾಗಿ ಬಾಳುತ್ತದೆಯೇ? ಯೋಗ್ಯವಂಶದಲ್ಲಿ ಹುಟ್ಟಿದವರು ಮಾಡುವ ಕೆಲಸವಲ್ಲ ಇದು. ಯಾವನೋ ಒಬ್ಬ ಮನುಷ್ಯ ಇಲ್ಲಿ ಆಸ್ಪತ್ರೆ ಕಟ್ಟಿಸಿ ವಿಕ್ಟೋರಿಯಾ ಆಸ್ಪತ್ರೆ ಎಂದು ಬರೆದಿದ್ದಾನೆ. ಅದನ್ನಿಂದು ಅಳಿಸಿದ್ದೀರಾ ? ಹನುಮಂತಯ್ಯ ಬರಸಿದ್ದನ್ನೇಕೆ ಅಳಿಸಬೇಕು ? ಅಧಿಕಾರಕ್ಕೆ ಬಂದಮೇಲೆ ದೇವರ ಮೇಲೆ ಭಕ್ತಿಯಿಟ್ಟು ಕೆಲಸಮಾಡಬೇಕು. ಅದು ಬಿಟ್ಟು ಹೀಗೆ ಮಾಡುವುದು ಒಳ್ಳೆಯವರಿಗೆ ತರವಲ್ಲ, ಒಳ್ಳೆಯ ಮನೆತನದವರಿಗೆ ತಕ್ಕುದಾದ ಕೆಲಸವಲ್ಲ. ಸರ್ಕಾರದ ಕೆಲಸ ದೇವರ ಕೆಲಸವೆಂದು ತಿಳಿದು ಕೆಲಸ ಮಾಡುವವನಿಗೆ ನಿಜವಾಗಿ ಅನುಕೂಲವಾಗುತ್ತದೆ. ಇಂಥ ಕಡೆ ಬಂದಿದ್ದೇವೆ; ಇಲ್ಲಿ ಮಾಡುವ ಕೆಲಸದಿಂದ ನಮಗೆ ಯಶಸ್ಸು ಬರಬೇಕು ಎಂದು ಭಕ್ತಿಯಿಂದ ಎಲ್ಲರೂ ಇಲ್ಲಿ ಕೆಲಸ ಮಾಡಬೇಕು. ಅಂಥಾದರಲ್ಲಿ ಅದನ್ನು ಅಳಿಸಿದರಲ್ಲಾ, ಇದು ನ್ಯಾಯವೇ ? ಅಂದ ಮೇಲೆ ಅಲ್ಲಿ ಮೇಲೆ ಇಟ್ಟಿರುವ 'ಚಿಂತಾಲ್' ಏಕೆ ? ಅದನ್ನೂ ತೆಗೆದು ಹಾಕಿ. ನಿಮ್ಮಿಂದ ನ್ಯಾಯ ಮಾಡುವುದಕ್ಕೆ ಆಗುವುದಿಲ್ಲ. ಅಧಿಕಾರಕ್ಕೆ ಬಂದಮೇಲೆ ಯಾರೇ ಆಗಲಿ, ಸರಿಯಾಗಿ ಕೆಲಸಮಾಡಬೇಕು. ನಾವು ಕೊಟ್ಟ ಅಧಿಕಾರವನ್ನು ತೆಗೆದುಕೊಂಡಿದ್ದೀರಿ. ಜನಾಂಗದ ಹಿತದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ ಭಗವಂತನಲ್ಲಿ ನಂಬಿಕೆಇಟ್ಟು ಕೆಲಸಮಾಡಬೇಕು.

ಸರ್ಕಾರದವರು ಹೋದ ವರ್ಷ 29 ಲಕ್ಷ ರೂಪಾಯಿಗಳನ್ನು ಹರಿಜನರಿಗೆ ಮನೆಗಳನ್ನು ಕಟ್ಟಲಿಕ್ಕೆ ಕೊಟ್ಟಿದ್ದರು. ಈ ವರ್ಷ 11 ಲಕ್ಷ ಮಾತ್ರ ಕೊಟ್ಟಿದ್ದಾರೆ. ಇದು ಧರ್ಮವೇ ? ಇಷ್ಟು ಹಣ ಸಾಕಾಗುತ್ತದೆಯೇ ? ನಲವತ್ತು ಲಕ್ಷ ಜನರಿಗೆ ಈ ಹಣವನ್ನು ಹಂಚಿದರೆ ಪ್ರತಿಯೊಬ್ಬರಿಗೂ ಒಂದು ಊಟ, ಒಂದು ಕಾಫಿಗೆ ಆಗುವಷ್ಟು ಹಣ ಬರುತ್ತದೆ. ಅದರಿಂದ ಮನೆಯನ್ನು ಕಟ್ಟುವುದಕ್ಕೆ ಆಗುತ್ತದೆಯೇ ? ಹರಿಜನರು ಉದ್ಧಾರವಾಗುತ್ತಾರೆಯೇ ? ಬೇರೆ ಕೆಲಸಗಳಿಗೆ ಬೇಕಾದಷ್ಟು ಹಣವನ್ನು ಖರ್ಚುಮಾಡುತ್ತಾರೆ. ಆದರೆ ಹರಿಜನರ ಅಭಿವೃದ್ಧಿಗೆ ಸರಿಯಾಗಿ ಹಣವನ್ನು ಒದಗಿಸುತ್ತಿಲ್ಲ. ಹೀಗಾದರೆ ಹರಿಜನರು ಹೇಗೆ ಉದ್ಧಾರವಾಗುತ್ತಾರೆ? ಸ್ವಾಮಿ, ವಿದ್ಯಾರ್ಥಿವೇತನಗಳಿಗಾಗಿ ನಾಲ್ಕೂವರೆ ಲಕ್ಷ ರೂಪಾಯಿಗಳನ್ನು ಹೋದ ವರ್ಷ ಕೊಟ್ಟಿದ್ದರು. ಈ ವರ್ಷ ಎರಡೂವರೆ ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ದೇವರು ಇವರಿಗೆ ಹೇಗೆ ಬುದ್ಧಿಕೊಡುತ್ತಾನೆಯೋ ? ಅಧಿಕಾರಕ್ಕೆ ಬಂದಮೇಲೆ ಎಲ್ಲವನ್ನೂ ಮರೆಯುತ್ತಾರೆ. ಇಂಥ ಅನ್ಯಾಯಗಳು ನಡೆಯುತ್ತಿವೆಯಲ್ಲಾ ಎಂದು ದುಃಖವಾಗುತ್ತದೆ.

ನಮ್ಮ ಜನಾಂಗದವರಿಗೆ ಇವರು ಕೊಡುತ್ತಿರುವ ಪ್ರಾತಿನಿಧ್ಯವನ್ನು ನೋಡಿದರೆ ನಾಚಿಕೆಯಾಗುತ್ತದೆ. ಒಂದೊಂದು ಕೋಮಿನವರು, ಮಂತ್ರಿಮಂಡಲದಲ್ಲಿ

ಮೂರು ನಾಲ್ಕು ಜನರಿದ್ದಾರೆ. ಆದರೆ ನಮ್ಮ ಕೋಮಿನವರು ಒಬ್ಬರು ಮಾತ್ರ ಇದ್ದಾರೆ. ಇವರು ಎಂಥವರು ಎಂದರೆ ಏನೂ ಮಾತನಾಡದೆ ಸುಮ್ಮನೆ ಇರುವವರು. ಇಂಥವರು ನಮ್ಮ ಕೋಮಿನ ಮಂತ್ರಿಗಳು. ಮಂತ್ರಿಮಂಡಲದಲ್ಲಿ ಇತರ ಜಾತಿಯವರು ಹೆಚ್ಚಾಗಿದ್ದು ನಮ್ಮ ಜಾತಿಯವರು ಒಬ್ಬರೇ ಇರುವಾಗ ಇವರು ಸುಮ್ಮನೆ ಇರುವುದರ ಅರ್ಥವೇನು? ನಮ್ಮ ಕೋಮಿನ ಮಂತ್ರಿಗಳಿಗೆ ಸ್ಥಾನಬೇಕು. ಆದರೆ ಹರಿಜನರ ಕೆಲಸಬೇಕಾಗಿಲ್ಲ. 'ಸರ್ಕಾರದ ಕೆಲಸ ದೇವರ ಕೆಲಸ'ವೆಂದು ಇದ್ದುದನ್ನು ಮಾತ್ರ ಅಳಿಸಿದರು. ಇಂಥ ಕೆಲಸಗಳನ್ನು ಮಾಡುತ್ತಾರೆ. ಜನರಿಗೆ ಅನುಕೂಲವಾಗುವ ಕೆಲಸಗಳನ್ನು ಮಾಡುವುದಿಲ್ಲ.

ಹೋದಸಲ ಅಸೆಂಬ್ಲಿ ಅಧಿವೇಶನ ನಡೆಯುತ್ತಿದ್ದಾಗ ನಾನು ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. ನೆಲಮಂಗಲ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಿವೆ, ಎಷ್ಟು ಗ್ರಾಮಗಳಲ್ಲಿ ಜಮೀನು ಆಕ್ವೈರ್ ಆಗಿದೆ ಮುಂತಾಗಿ ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. ಅದಕ್ಕೆ ಇನ್ನೂ ಜವಾಬು ಬಂದಿಲ್ಲ. ಇವರು ಏನು ಕೆಲಸ ಮಾಡುತ್ತಾರೆ? ನಾನು ಒಂದೂವರೆ ಲಕ್ಷ ಜನಗಳ ಪರವಾಗಿ ಓಟು ತೆಗೆದುಕೊಂಡು ಈ ಸಭೆಯ ಸದಸ್ಯನಾಗಿ ಬಂದಿದ್ದೇನೆ. ನಾನು ಕಳುಹಿಸಿದ್ದ ಪ್ರಶ್ನೆಗೆ ಇವರು ಸುಮಾರು ಒಂದು ವರ್ಷವಾದರೂ ಸಹ ಉತ್ತರವನ್ನು ಕೊಡದೆ ಇದ್ದರೆ ಇವರು ಏನು ಕೆಲಸ ಮಾಡುತ್ತಾರೆ ಎಂದು ತಿಳಿಯೋಣ? ನಾನು ಹಿಂದೆ 20 ವರ್ಷಗಳಕಾಲ ಪ್ರಜಾಪ್ರತಿನಿಧಿ ಸಭೆಯ ಸದಸ್ಯನಾಗಿದ್ದೆ. ಆಗ ಬೇಜವಾಬ್ದಾರಿ ಸರ್ಕಾರ ಇದ್ದಂಥ ಕಾಲ. ಅವರು ಪ್ರಶ್ನೆಗಳಿಗೆ ಹತ್ತು ದಿನಗಳಲ್ಲಿ ಜವಾಬನ್ನು ಕಳುಹಿಸುತ್ತಿದ್ದರು. ಜವಾಬ್ದಾರಿ ಸರ್ಕಾರ ಬಂದಮೇಲೆ ಏಕೆ ಹೀಗೆಲ್ಲ ಮಾಡುತ್ತಾರೆಂದು ಪರಿಶೀಲನೆ ಮಾಡಬೇಕು.

ಸ್ಕಾಲರ್‌ಷಿಪ್ ಕಮಿಟಿಯ ಮುಂದೆ ಸಾವಿರ ಅಪ್ಲಿಕೇಷನ್ ಬರುತ್ತವೆ. ಇವರು ಕೊಟ್ಟಿರುವ ಹಣದಲ್ಲಿ ಎಷ್ಟು ಜನಗಳಿಗೆ ಸ್ಕಾಲರ್‌ಷಿಪ್ ಕೊಡುವುದಕ್ಕಾಗುತ್ತದೆ? ಇರುವ ಹಣವನ್ನು ಹತ್ತು ಜನಗಳಿಗೆ ಕೊಟ್ಟು ಉಳಿದವರಿಂದ ಬಯ್ಯಿಸಿಕೊಳ್ಳಬೇಕು. ಆದುದರಿಂದ ಇನ್ನೂ ಹೆಚ್ಚು ಹಣವನ್ನೊದಗಿಸಬೇಕು.

ಈಗ ಬೆಂಗಳೂರು, ಮೈಸೂರು ಮುಂತಾದ ಕಡೆ ಪಕ್ಕಾ ಕೈಗಾರಿಕೆಗಳನ್ನು ಸ್ಥಾಪಿಸುತ್ತಿದ್ದಾರೆ. ಹಳ್ಳಿಗಳ ಕಡೆ ಕೊಟ್ಟು ಉಪಕಾರಮಾಡಿ ಎಂದರೆ ಮಾಡುತ್ತಿಲ್ಲ. ಹಳ್ಳಿಯನ್ನು ಡಿಳ್ಳಿಯನ್ನಾಗಿ ಮಾಡಬೇಕೆಂದು ಹೇಳುವ ಮಾತುಗಳು ಎಲ್ಲಿ ಹೋದುವೋ ಗೊತ್ತಿಲ್ಲ. ಕೈಗಾರಿಕೆಗಳನ್ನು ಸ್ಥಾಪನೆಮಾಡುವುದರಲ್ಲಿ ಹಳ್ಳಿಯ ಕಡೆ ಗಮನ ಕೊಡಬೇಕು.

ನೆಲಮಂಗಲ ತಾಲ್ಲೂಕು ಹಿಂದುಳಿದ ತಾಲ್ಲೂಕು. ಇಲ್ಲಿ ಒಬ್ಬ ಸ್ಪೆಷಲ್ ರೆವೆನ್ಯೂ ಇನ್ಸ್‌ಪೆಕ್ಟರಿದ್ದಾನೆ. ಅವನು ಮನೆಗಳನ್ನು ಕಟ್ಟುವುದು, ಸಾಮಾನು ಕೊಡುವುದು, ಅಕ್ವಿಜಿಷನ್ ರಿಕಾರ್ಡ್ ನೋಡುವುದು ಈ ಕೆಲಸಗಳನ್ನು ಮಾಡಬೇಕು. ಇವನಿಗೆ ಒಂದು ಕೈ ಇಲ್ಲ. ಯಾವ ಹಳ್ಳಿಗೆ ಹೋಗಬೇಕಾದರೂ ಸೈಕಲ್ಲಿನ ಮೇಲೆ ಹೋಗಬೇಕು. ಇವನು ಎಷ್ಟು ಮಾತ್ರ ಹಳ್ಳಿಗಳಿಗೆ ಹೋಗುವುದಕ್ಕೆ ಸಾಧ್ಯವೆಂಬುದನ್ನು ನೋಡಬೇಕು. ಇವನಿಗೆ ಒಂದು ಕೈ ಇದ್ದರೂ ಕೂಡ ದುಡ್ಡನ್ನು ತೆಗೆದುಕೊಳ್ಳುವಾಗ ಕೈಯಲ್ಲಿ ನೋಟುಗಳನ್ನು ತೆಗೆದುಕೊಂಡು ದುಡ್ಡನ್ನು ಬಾಯಲ್ಲಿ ಹಾಕಿಕೊಳ್ಳುತ್ತಾನೆ. ಹರಿಜನರ ಅಭಿವೃದ್ಧಿಗೆ ಸಂಬಂಧಪಟ್ಟ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಲು ಇರುವ ರೆವೆನ್ಯೂ ಇನ್ಸ್‌ಪೆಕ್ಟರಿಗೆ ಕೈ ಇರುವುದು ಬೇಡವೇ? ಈ ರೆವೆನ್ಯೂ ಇನ್ಸ್‌ಪೆಕ್ಟರನ್ನು ಬೇರೆಕಡೆಗೆ ಕೂಡಲೇ ವರ್ಗಮಾಡಬೇಕು. ನಮ್ಮ ತಾಲ್ಲೂಕಿನ ಕೆಲಸ ಮುಗ್ಗಿಲ್ಕ ಬೀಳಲಿ ಎಂದು ಇಂಥವರನ್ನು ಕೊಟ್ಟಿರಬಹುದು. ಮನೆಕಟ್ಟಲು ಸಾಮಾನುಗಳನ್ನು ಕೇಳಿದರೆ 'ಇವರಲ್ಲಿ ಎಷ್ಟೋ ಸಲ ತಿರುಗಾಡಬೇಕು. ಈ ರೆವೆನ್ಯೂ ಇನ್ಸ್‌ಪೆಕ್ಟರನ್ನು ಒಂದು ವಾರದೊಳಗಾಗಿ ನೆಲಮಂಗಲ ತಾಲ್ಲೂಕಿನಿಂದ ಹೊರಡಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಹೇಳುತ್ತೇನೆ.

ಮನೆಗಳನ್ನು ಕಟ್ಟುವ ಸಾಮಾನನ್ನು ಕೊಡುವುದರಲ್ಲಿ ಮಂಗಳೂರು ಹೆಂಚುಗಳೆಂದು ಹೇಳಿ ಬೇರೆ ಹೆಂಚುಗಳನ್ನು ಕೊಡುತ್ತಾರೆ. 70 ರೂಪಾಯಿ ಬೆಲೆ ಬಾಳುವ ಹೆಂಚನ್ನು 210 ರೂಪಾಯಿಗಳಿಗೆ ಮಾರುತ್ತಾರೆ. ಹೊಸ ಹೆಂಚಿಗೆ ಕಂಟ್ರಾಕ್ಟ್ ಕೊಡುವಾಗ ಯಾವ ಹೆಂಚು ತಂದುಕೊಡುತ್ತಾರೆ, ಎಂಥ ಸಾಮಾನು ಕೊಡುತ್ತಾರೆ, ಎಂದು ನೋಡಬೇಕು ಮರದ ಸಾಮಾನು ಕೊಡುವಾಗ ಆಲದ್ದು ಗೋಣೀದ ಕೊಡಬಹುದು. ಇದನ್ನೂ ನೋಡಬೇಕು. ಹಿಂದೆ ಡಿಸ್ಟ್ರಿಕ್ಟ್ ಕಮಿಟಿ, ತಾಲ್ಲೂಕು ಕಮಿಟಿಗಳಿದ್ದುವು. ಆಗ ಕಮಿಟಿಯ ಸದಸ್ಯರು ಇವೆಲ್ಲವನ್ನೂ ನೋಡಿಕೊಂಡು ಒಳ್ಳೆಯ ಸಾಮಾನನ್ನು ಕೊಡಿಸುತ್ತಿದ್ದೆವು. ಈಗ ಟೆಂಡರ್‌ಗಳನ್ನು ಕರೆದು ಯಾರಿಗೋ ಒಬ್ಬರಿಗೆ ಕೊಟ್ಟಿದ್ದಾರೆ. ಇವರು ಒದಗಿಸುವ ಸಾಮಾನುಗಳು ಸರಿಯಾಗಿವೆಯೋ ಇಲ್ಲವೋ ಎಂಬುದನ್ನು ನೋಡಬೇಕು. ಸರ್ಕಾರದವರು ದಯವಿಟ್ಟು ಇದನ್ನೆಲ್ಲ ನೋಡಿ ಸರಿಯಾದ ಸಾಮಾನುಗಳು ದೊರೆಯುವಂತೆ ಮಾಡಬೇಕು. ನಮ್ಮನ್ನು ಸಮಾಧಾನ ಮಾಡಿದರೆ ಸರ್ಕಾರ ಚೆನ್ನಾಗಿ ನಡೆಯುವ ಹಾಗೆ ಮಾಡುತ್ತೇವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮಿ, ಈ ಮಾನ್ಯ ಸಭೆಯ ಎದುರಿನಲ್ಲಿಟ್ಟಿರುವ ಆಯವ್ಯಯ ಪತ್ರಿಕೆಯ ಸಾಮಾನ್ಯ ಸ್ವರೂಪವನ್ನು ನೋಡಿ. ಆ ಪತ್ರಿಕೆಯ ಸಾಮಾನ್ಯಸ್ವರೂಪಕ್ಕಿಂತ ಆರ್ಥಿಕ ಮಂತ್ರಿಗಳ ಭಾಷಣವನ್ನೂ, ಆ ಭಾಷಣಕ್ಕಿಂತ ಅವರ ಬುದ್ಧಿವಂತಿಕೆಯನ್ನೂ ಹೆಚ್ಚಾಗಿ ಸ್ವಾಗತಿಸುತ್ತೇನೆ.

ಆದರೆ ಕೆಲವು ಸದಸ್ಯರು ಉಳಿತಾಯ ಬಜೆಟ್ಟನ್ನು ಮಾಡಿದ್ದಾರೆಂದು ಸಂತೋಷಗೊಂಡಿದ್ದಾರೆ. ನಿಜವಾಗಿಯೂ ಪ್ರಗತಿಯನ್ನು ಸಾಧಿಸಬೇಕೆನ್ನುವಂಥ ರಾಷ್ಟ್ರದಲ್ಲಿ, ಉಳಿತಾಯ ಪತ್ರಿಕೆಯನ್ನು ಸ್ವಾಗತಿಸುವುದಕ್ಕಿಂತ ಕೊರತೆಯ ಪತ್ರವನ್ನು ಸ್ವಾಗತಿಸುವುದು ಒಳ್ಳೆಯದು. ಉಳಿತಾಯ ಮಾಡುವುದು ಸುಲಭ. ಸಾಲ ಮಾಡುವುದು ಹೆಚ್ಚಿನ ಕಠಿಣ. ಸಾಲ ಮಾಡಿದ ಮೇಲೆ, ಬುದ್ಧಿಯನ್ನು ಬೆಳೆಸತಕ್ಕಂಥ ಕ್ರಿಯಾಶಕ್ತಿ ನಮ್ಮಲ್ಲಿ ಬೆಳೆಯುತ್ತದೆ. ದಿನವೂ ನಾಲ್ಕು ಆಣೆ ದುಡಿದು, ಮೂರು ಆಣೆ ಖರ್ಚು ಮಾಡಿ, ಒಂದು ಆಣೆ ಉಳಿಸಬಹುದು. ಆದರೆ ದಿನವೂ ಹತ್ತು ರೂಪಾಯಿ ದುಡಿದು, ಹನ್ನೊಂದು ರೂಪಾಯಿ ಖರ್ಚು ಮಾಡಿ, ಮುಂದಿನ ಒಂದು ರೂಪಾಯಿ ಹೇಗೆ ಗಳಿಸಬೇಕೆನ್ನುವುದು ನಿಜವಾದ ಬುದ್ಧಿವಂತಿಕೆಯ ಲಕ್ಷಣ. ಈ ಕಾರಣಕ್ಕಾಗಿ ಉಳಿತಾಯವನ್ನು ನಿಶ್ಚಯವಾಗಿಯೂ ಸಂತೋಷಿಸುವುದಿಲ್ಲ.

ಸ್ವಾಮಿ, ಇನ್ನು ಈ ಒಂದು ಸಾಮಾನ್ಯ ಮಾತಿನೊಡನೆ ಕೆಲವು ನನ್ನ ಸೂಚನೆಗಳನ್ನು ಈ ಮೂಲಕ ಹೇಳಬಯಸುತ್ತೇನೆ. ನಮ್ಮ ಸ್ನೇಹಿತರು ಹೇಳುವಂತೆ ಜನಸಾಮಾನ್ಯರು ಯಾವ ಯಾವ ಜಾತಿಯ ಮಂತ್ರಿಗಳು ಎಷ್ಟು ಜನ ಇದ್ದಾರೆ ಎಂದು ನೋಡುವುದಿಲ್ಲ. ಈ ಆಡಳಿತದಲ್ಲಿ ಜನಸಾಮಾನ್ಯರ ಕಲ್ಯಾಣ ಹೆಚ್ಚಾಗಿ ಇದೆಯೋ ಎನ್ನುವುದನ್ನು ನೋಡಬೇಕಾಗಿದೆ.

(ಶ್ರೀ ಎ. ಜೆ. ದೊಡ್ಡಮೇಟಿ)

ನಮ್ಮ ಹೊಸ ರಾಜ್ಯದಲ್ಲಿ ಬೇರೆ ಬೇರೆ ಭಾಗಗಳು ಕೂಡಿವೆ. ಬೇರೆ ಬೇರೆ ಪರಿಸ್ಥಿತಿ ಇದ್ದಂಥ ಬೇರೆ ಬೇರೆ ಭಾಗಗಳು ಕೂಡಿ ಈ ಹೊಸ ರಾಜ್ಯದಲ್ಲಿ, ಕರ್ಣಾಟಕ ರಾಜ್ಯದಲ್ಲಿ, ಕಠಿಣ ಪ್ರಶ್ನೆಗಳನ್ನು ಬಿಡಿಸಲಿಕ್ಕೆ ಕೆಲವು ತೊಂದರೆಗಳಿವೆ. ಆದರೆ ಒಂದು ದೃಢ ಚಿತ್ತದಿಂದ, ನಿರ್ಧಾರವಾದ ಒಂದು ಆಲೋಚನೆ ಮಾಡಿ, ಪ್ರಾರಂಭ ಮಾಡಿದರೆ ಇನ್ನೂ ಹೆಚ್ಚಿಗೆ ಸಾಧಿಸುವುದು ಸಾಧ್ಯ.

ಸಾಮಾನ್ಯವಾಗಿ, ಈ ಆಡಳಿತದಲ್ಲಿ ಮಂದಗತಿ ಇದೆಯೆಂದು ನಾವು ಒಂದು ದೂರು ಕೇಳುತ್ತಾ ಇದ್ದೇವೆ. ಈ ದೂರು ಸಂಪೂರ್ಣವಾಗಿ ಅಕಾರಣ ಎಂದು ಹೇಳುವುದಕ್ಕಾಗುವುದಿಲ್ಲ. ದೂರನ್ನು ರಾಜಕೀಯ ದೃಷ್ಟಿಯಿಂದ ಮಾಡುವ ಜನಾಂಗ ಇದ್ದಾರೆ. ನಿಜವಾದ ಮನಸ್ಸಿನ ಕಳಕಳಿಯಿಂದ, ನಮ್ಮ ರಾಜಕೀಯ ಸುಧಾರಿಸಬೇಕು ಎಂದು ಹೇಳುವ ಜನಾಂಗ ಇದೆಯೆಂದು ಸರ್ಕಾರ ಮರೆಯಬಾರದು.

ಆ ದೃಷ್ಟಿಯಿಂದ ವಿಚಾರ ಮಾಡುವಾಗ ಮೊದಲನೆಯದಾಗಿ ಎಲ್ಲಕ್ಕಿಂತ ನಮ್ಮ ರಾಜ್ಯದಲ್ಲಿ ಲಂಚ ಕೋರತನ ಹೆಚ್ಚಾಗಿದೆಯೇ, ಕಡಮೆಯಾಗಿದೆಯೇ ಎನ್ನುವ ವಿಚಾರ. ಲಂಚಕೋರತನ ಹೆಚ್ಚಾಗಿದೆಯೇ, ಕಡಮೆ ಇದೆಯೇ, ಎಂಬುದು ಒಂದು ಕಮಿಟಿಯನ್ನು ನೇಮಿಸಿ ಅಂಕಿಅಂಶಗಳಿಂದ ಹೇಳುವ ಮಾತಲ್ಲ. ಸಾಮಾನ್ಯವಾಗಿ ನನ್ನಮಟ್ಟಿಗೆ ಹೇಳುವುದಾದರೆ, ನಾನು ಯಾವ ರಾಜಕೀಯ ದೃಷ್ಟಿಯಿಂದಲೂ ವಿಚಾರ ಮಾಡತಕ್ಕಂಥ ಮನುಷ್ಯನಲ್ಲ. ಇದು ಸರ್ಕಾರದವರಿಗೂ ಗೊತ್ತಿರಬೇಕು. ನಿಶ್ಚಯವಾಗಿ ಹೀಗಾಗಲಿಕ್ಕೆ ಕಾರಣವೇನು? ಕಾರಣ ಕೇಳಿದರೆ, ಸರ್ಕಾರದ ಪೈಕಿ ಎಲ್ಲಿಯಾದರೂನೂ ಸಡಿಲ ಬಿದ್ದಿದೆಯೇ ಅಂದರೆ, ಸರ್ಕಾರದ ಸಡಿಲತನ ಅನ್ನುವುದಕ್ಕಿಂತ, ಸರ್ಕಾರ ಶಾಸ್ತ್ರ ಶುದ್ಧವಾದ ಪ್ರಯತ್ನ ಮಾಡಿಲ್ಲ. ಕೇವಲ ಭಾವಾವೇಶದಿಂದ ಲಂಚಕೋರತನ ಜಾಸ್ತಿಯಾಗಿದೆಯೇ ಎಂದು ನೋಡುವುದಕ್ಕಾಗುವುದಿಲ್ಲ. ಲಂಚಕೋರತನದ ಮೇಲೆ ವ್ಯಾಖ್ಯಾನ ಕೊಡುವುದರಿಂದ ಅದು ಹೋಗುವುದಿಲ್ಲ. ಹನ್ನೊಂದು ಹನ್ನೆರಡು ಮಂತ್ರಿಗಳು ಅದರಿಂದ ವಿಮುಕ್ತರಾದರೆ ಲಂಚ ನಿಲ್ಲುವುದಿಲ್ಲ. ಆದರೆ ಅದನ್ನು ನಿಲ್ಲಿಸಲು ಶಾಸ್ತ್ರ ಶುದ್ಧವಾದ ಪ್ರಯತ್ನ ಆಗಲಿಕ್ಕೆಬೇಕು.

ಈ ಪ್ರಯತ್ನದಲ್ಲಿ ಲಂಚವನ್ನು ತಿನ್ನುವುದಕ್ಕೆ ಕೇವಲ ಅಧಿಕಾರಿಗಳನ್ನು ದೂಷಿಸುವುದಿಲ್ಲ. ಸಮಾಜ ಕಾರ್ಯಕರ್ತರು ಎಂದು ಏನು ಹೇಳಿಕೊಳ್ಳುತ್ತಾರೋ, ಅವರ ಕಡೆ ಲಕ್ಷ್ಯ ಇಲ್ಲ, ಲಕ್ಷ್ಯ ಇಡಬೇಕು. ಮುಖ್ಯವಾಗಿ ಹೌಸ್ ಮೆಂಬರ್ ತಿಳಿದುಕೊಳ್ಳಬೇಕು. ಸಮಾಜ ಕಾರ್ಯಕರ್ತರು ಲೆಜಿಸ್ಲೇಟರುಗಳ ಪೈಕಿ ಇರಬಹುದು, ಹೊರಗಿನವರು ಇರಬಹುದು. ಸಮಾಜ ಕಾರ್ಯಕರ್ತರುಗಳಲ್ಲಿ ಎಲ್ಲಿಯವರೆಗೆ ದೋಷವಿದೆ, ಅಲ್ಲಿಯವರೆಗೆ ಲಂಚಕ್ಕೆ ಸದವಕಾಶವಿದೆ ಎಂದು ಸ್ಪಷ್ಟವಾಗಿ ತಿಳಿಯಬೇಕು. ಪ್ರತಿಯೊಂದು ಪಕ್ಷದಲ್ಲಿಯೂ ಇಂತಹ ಸಮಾಜ ಕರ್ತರುಗಳು ಇರುತ್ತಾರೆ. ಇಂಥಹ ಸಮಾಜ ಕರ್ತರುಗಳು ಹೆಚ್ಚದಂತೆ ಪ್ರತಿಪಕ್ಷವೂ ನೋಡಿಕೊಳ್ಳಬೇಕು. ಒಂದು ಸರ್ಕಾರ ಮೂರು ದಿವಸಬಾಳಲಿ ಆರು ವರ್ಷ ಬಾಳಲಿ. ಎಷ್ಟು ದಿವಸ ಅದು ಬಾಳಿತೆಂದು ಕೇಳುವುದಿಲ್ಲ; ಜನ ಅದು ಯಾವ ರೀತಿ ಬಾಳಿತೆಂದು ಹೇಳುತ್ತಾರೆ. ಈ ಲಂಚ ಬೆಳೆಯದ ಹಾಗೆ ನೋಡುವುದು ಮಹತ್ವದ ವಿಷಯ. ಇದನ್ನು ಕಡಮೆ ಮಾಡುವ ದೃಷ್ಟಿಯಿಂದ, ಯಾವ ವ್ಯಕ್ತಿ ಇದಕ್ಕೆ ಒಳಗಾಗಿದ್ದಾನೋ ಅಂಥ ವ್ಯಕ್ತಿಯನ್ನು ಮಂತ್ರಿಗಳು ಅವರ ಸಮೀಪಕ್ಕೆ ಸುಳಿಯದ ಹಾಗೆ ನೋಡಿಕೊಳ್ಳಬೇಕು. ಸಮಾಜ ಕಾರ್ಯಕರ್ತರನ್ನು ಈ ದೃಷ್ಟಿಯಿಂದ ನಾವು ನೋಡಲಿಕ್ಕೆ ಹತ್ತಿದರೆ, ಸರ್ಕಾರದ ಭಯ ಮತ್ತು ಸರ್ಕಾರದ ಪ್ರತಿಷ್ಠೆ ಹೆಚ್ಚಾಗುತ್ತದೆ. ಆ ಭಯ ನಿರ್ಮಾಣವಾಗುತ್ತದೆ. ಅದು ಮೊದಲನೆಯ ಉಪಾಯ. ಆಮೇಲೆ ಎರಡನೆಯದಾಗಿ, ಲಂಚಕೋರತನವೆಂದರೆ dishonesty ಎಂದು ಅರ್ಥವಲ್ಲ; ಕೇವಲ ದುಡ್ಡು ಕೊಡುವುದು, ಓಡಾಡುವುದಲ್ಲ. ವಶೀಲಿಬಾಜಿ ಹೋಗಬೇಕು. ಒಬ್ಬೊಬ್ಬ ಸಮಾಜ ಕಾರ್ಯಕರ್ತರು ನೂರಾರು ಕೆಲಸ ಕಟ್ಟಿಕೊಂಡು ಬೆಂಗಳೂರಿಗೆ ಬರುತ್ತಾರೆ. ಆ ಕಡೆಯಿಂದ ಖರ್ಚು ತೆಗೆದುಕೊಂಡು ಬರುತ್ತಾರೆ. ಒಂದು ಸಮೂನೆ ಮೇಲೆ ನಡೆಯುತ್ತಾರೆ. ನಿಶ್ಚಯವಾಗಿ ಇಂಥ ಸಮಾಜಕರ್ತರು ಯಾರಿದ್ದಾರೆ, ಯಾರ ಮೇಲೆ ಸರ್ಕಾರಕ್ಕೆ ಸಂಶಯ ಬರುತ್ತದೆ, ಅಂಥವರನ್ನು ಮಂತ್ರಿಗಳು ತಮ್ಮ ಮನೆ ಹತ್ತ ಕೊಡಬಾರದು. ಆವಾಗ ಲಂಚ 1/6 ಭಾಗವಾದರೂ ಕಡಮೆಯಾಗುತ್ತದೆ.

ಈ ವಿಷಯದಲ್ಲಿ ಒಂದು ಸಮಿತಿಯನ್ನು ನೇಮಿಸುವುದಕ್ಕೆ ಒಂದು ಯೋಜನೆಯನ್ನು ಕಳುಹಿಸಿದ್ದೇನೆ. ಅದನ್ನು ಮಾಡಿದೆಯೋ ಇಲ್ಲವೋ ಗೊತ್ತಿಲ್ಲ. ಬಹಳ ಸಾವಕಾಶವಾಗಿ ಕಾರ್ಯವಾಗುವುದು ಸ್ವಾಭಾವಿಕವಾಗಿ ಬಿಟ್ಟಿದೆ. ಅದು ಪರೀಕ್ಷಿಸಲ್ಪಟ್ಟಿದೆಯೋ ಅದರ ಬಗ್ಗೆ ಏನು ಮಾಡಿದ್ದೀರಿ ಅಥವಾ ಮಾಡುತ್ತೀರಿ ಎಂಬುದನ್ನು ಹೇಳಿ; ಇಲ್ಲವಾದರೆ ಇಲ್ಲ ಎಂದು ಹೇಳಿ. ಹಾಗೆ ಹೇಳುವ ಮಂತ್ರಿಗಳುಒಬ್ಬರಿದ್ದಾರೆ, ಇಲ್ಲಿ ಕುಳಿತುಕೊಂಡಿದ್ದಾರೆ. ಅದರೆ ಅವರೂ ಕೆಲವು ಸಮಯ ಮರೆಯುತ್ತಾರೆ. ಸರ್ಕಾರಕ್ಕೂ ಸ್ಮರಣಶಕ್ತಿ ಅಭಾವಕ್ಕೂ ಒಂದಕ್ಕೊಂದಕ್ಕೆ ಗೆಳೆತನ ಇದೆ ಎಂದು ಕಾಣುತ್ತದೆ. ಪರಿಸ್ಥಿತಿಯನ್ನು ಪರಿಶೀಲಿಸುವುದಕ್ಕೆ ಒಂದು ಸಣ್ಣ ಸಮಿತಿಯನ್ನು ಮಾಡಬೇಕು.

ಪಾನ ಪ್ರತಿಬಂಧ ಅನ್ನುವುದು ನನಗೇನೂ ಗೊತ್ತಾಗುವುದಿಲ್ಲ. ಕಾಯಿದೆಗಳೆಲ್ಲವನ್ನೂ ಸಮೀಕರಣ ಮಾಡುತ್ತಾ ಇದ್ದೀರಿ. ಅದರಂತೆಯೇ ಪಾನಪ್ರತಿಬಂಧದಲ್ಲಿಯೂ ಏಕರೂಪಧೋರಣೆ ಇರಬೇಕು. ಅದು slow process ಎಂದು ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅದು ತರ್ಕಸಿದ್ಧವಾದ ಮಾತು ಎಂದು ಕಾಣುವುದಿಲ್ಲ. ಬಹಳ ಭಾವನಾಪರವಶರಾಗಿ ಈ ವಿಚಾರವನ್ನು ನೋಡಬಾರದು. ಹಾಗೆ ಮಾಡಿದರೆ ಅನುಸರಿಸುವ ಮಾರ್ಗದಲ್ಲಿ ಕೆಲವು ದೋಷ ಬರುತ್ತದೆ. ಈಗಿನ ನೀತಿಯೆಲ್ಲಾ ಶಿಥಿಲವಾಗಿದೆ, ಅದನ್ನು ಹೋಗಲಾಡಿಸುವುದಕ್ಕೆ ಅವಕಾಶವಿದೆ. ಏಕ ರೀತಿಯ ಧೋರಣೆ ಸಾಧಿಸುವುದಕ್ಕೆ ಸಾಧ್ಯವೇ, ಯಾವ ರೀತಿ ಸಾಧಿಸಬಹುದು ಎಂದು ನಮ್ಮನ್ನೂ, ಅಧಿಕಾರಿಗಳನ್ನೂ, ಬೇಕಾದವರನ್ನೂ ಕೇಳಿ ಸೂಕ್ತ ಮಾರ್ಗವನ್ನನುಸರಿಸುವುದು ಅವಶ್ಯಕ. ಹಿಂದೆ ಆಲ್ ಇಂಡಿಯಾ ಬೇಸಿಸ್ ಮೇಲೆ ಯಶಸ್ವಿಯಾಗಿದೆಯೆಂದು ಠರಾವಾಗಿದೆ. ಅದರ ಪ್ರಕಾರ ಪ್ರಯತ್ನ ಪಟ್ಟಿದ್ದೇವೆ. ಅದರ ಮೇಲೆ ಪ್ರಶ್ನೆಯಿಲ್ಲ. ದಿನದಿನಕ್ಕೆ ಬದಲಾಯಿಸಬಾರದು. ಮದ್ಯಸಾರಾಯಿ ವಿಚಾರ ಹಿಂದೆ ಹೇಳಿದೆ. ಪಾನನಿರೋಧ ಲಂಚಕ್ಕೆ ಹೆಚ್ಚು ಅಸ್ಪದ ಕೊಟ್ಟಿದೆ, ಇನ್ನೂ ಅನೇಕ ರೀತಿಯಲ್ಲಿ ಪರಿಸ್ಥಿತಿ ಕೆಡಲು ಹೆಚ್ಚು ಆಸ್ಪದವಿದೆ, ಒಂದೇ ಮಾತಿನಲ್ಲಿ ಹೇಳುವುದಾದರೆ—ಸರ್ಕಾರದವರು ಕ್ಷಮಿಸಬೇಕು—ದೇವರು ಎಲ್ಲಿದ್ದಾನೆ, ತೋರಿಸು ಅಂದರೆ ಯಾವ ರೀತಿ ನಾವು ಉತ್ತರ ಕೊಡಬಲ್ಲೆವು ? ಎಲ್ಲಿಂದ ತೋರಿಸುವುದು ? ಎಂದು ಹೇಳಬಹುದು. ಅದೇ ರೀತಿ ರಾಜ್ಯದಲ್ಲಿ ಯಾವ ಮೂಲೆಯಲ್ಲಿ ಲಂಚ

ವಿಲ್ಲ, ತೋರಿಸಿ ಅಂದರೆ ದೇವರಿಲ್ಲದಿರುವ ಜಾಗ ತೋರಿಸುವುದಕ್ಕೆ ಹೇಗೆ ಸಾಧ್ಯವಿಲ್ಲವೋ ಹಾಗೆ ಲಂಚ ವಿಲ್ಲದಿರುವ ಜಾಗವನ್ನು ತೋರಿಸುವುದಕ್ಕೂ ಸಾಧ್ಯ ವಿಲ್ಲ. ಆದರೆ ಲಂಚವನ್ನು ನಿರ್ಮೂಲ ಮಾಡಲು ಅಸಾಧ್ಯವೆಂದು ಹೇಳುವುದನ್ನು ನಂಬುವುದಿಲ್ಲ. ಆದರೆ ಶಾಸ್ತ್ರಶುದ್ಧವಾಗಿ ಮತ್ತು ಧೈರ್ಯದಿಂದ ವರ್ತಿಸ ಬೇಕು. ಹಾಗೆ ಮಾಡಿದರೆ ಮಾತ್ರ ನಿರ್ಮೂಲ ಮಾಡಲು ಸಾಧ್ಯ. ಮಾನ್ಯ ಮಿತ್ರರನೇಕರು ಅಂಕಿ ಸಂಖ್ಯೆಗಳನ್ನು ಹೇಳಿದರು. ಆದರೆ ಈ ರಾಜ್ಯವೇನಿದೆ, ಅವಕ್ಕಿರುವ ಅಧಿಕಾರ, ಪೊಟೆನ್ಷಿಯಾಲಟಿ ಒಮ್ಮೆಗೇ ಬೆಳೆಯುವುದಿಲ್ಲ, ಎಲ್ಲವನ್ನೂ ಸಾಧಿಸುವುದಕ್ಕೆ ಮಾರ್ಗ ವುಂಟು. ಅದನ್ನು ಸರಿಯಾಗಿ ಅನುಸಂಸಲು ಖಂಡಿತ ಪ್ರಯತ್ನ ಮಾಡಬೇಕು. ಒಂದು ಸಮಿತಿ ನೇಮಕ ಮಾಡಬೇಕು, ದೇಶದಲ್ಲಿ ಹತ್ತು ಮಂದಿಯಾದರೂ ಒಳ್ಳೆ ಯವರಿದ್ದಾರೆ; ಅಂಥವರನ್ನೇಕೆ ಉಪಯೋಗ ಮಾಡಿ ಕೊಂಡಿಲ್ಲ? — ಮಾಡಿಕೊಳ್ಳುವ ವಿಚಾರವೇ ಇಲ್ಲ. ಅವರನ್ನು ದಯವಿಟ್ಟು ಉಪಯೋಗ ಮಾಡಿಕೊಳ್ಳಿ. ನನಗೆ ಒಂದು ಜಿಲ್ಲೆಯ ಅಧಿಕಾರ ಕೊಡಿ. ಒಂದು ವರ್ಷದಲ್ಲಿ ಲಂಚ ಅರ್ಥಕ್ಕರ್ಥ ನಿಲ್ಲಿಸದೆ ನಿಮಗೆ ಮುಖ ತೋರಿಸುವುದಿಲ್ಲ. ನೀವು ಆ ರೀತಿ ಮಾಡು ವುದಿಲ್ಲ. ನಿಮಗೆ ಸಂಪರ್ಕವಿರುವ ಜನರೇ ಬೇರೆ; ಒಳ್ಳೆಯ ಜನರು ತಾವಾಗಿಯೇ ಬರುವುದಿಲ್ಲ; ಇದನ್ನು ಸರಿಯಾಗಿ ಆಲೋಚಿಸಿತಕ್ಕ ವ್ಯವಸ್ಥೆ ಮಾಡಿ. ಇದೆಲ್ಲಾ ಹೇಳುವುದಕ್ಕೆ ನನಗೆ ಬಹಳ ಸಂತೋಷವಾಗುತ್ತದೆಂದು ತಿಳಿದುಕೊಳ್ಳಬಾರದು, ಬಹಳ ದುಃಖವಾಗುತ್ತದೆ. ಏನು ಮಾಡುವುದು ? ದಿನಂಪ್ರತಿ ಬೈಸಿಕೊಳ್ಳುವವರು ನಾವು. ಅದಕ್ಕೆ ಅವಕಾಶ ಕೊಡದಂತೆ ಲಂಚ ನಿರೋಧದ ಬಗ್ಗೆ ತಕ್ಕ ಕ್ರಮ ಕೈಕೊಳ್ಳಬೇಕು.

ಪಬ್ಲಿಕ್ ವರ್ಕ್ಸ್ ಖಾತೆ ಮಂತ್ರಿಗಳಿಗೆ ಬಹಳ ಸ್ಮರಣ ಶಕ್ತಿಯಿದೆ. ನಮಗೆ ಹೆಚ್ಚು ಉಪಯೋಗವಿರುವ ಖಾತೆಗಳಲ್ಲಿ ಎರಡನೆಯದೆಂದರೆ ಪಬ್ಲಿಕ್ ವರ್ಕ್ಸ್ ಖಾತೆ. ಮಾರ್ಗ ಸೌಕರ್ಯ, ವಿದ್ಯುಚ್ಛಕ್ತಿ ಸೌಕರ್ಯ, ಹೊಂದಿಲ್ಲದ ಭಾಗ ಯಾವುದೆಂದು ಯೋಚಿಸಿ ಅದಕ್ಕೆ ಪ್ರತ್ಯೇಕ ವಿಭಾಗ ಮಾಡಿ ಎಂದು ಹಿಂದೆಯೇ ಹೇಳಿದ್ದೇನೆ. ರಸ್ತೆಯ ವಿಚಾರವನ್ನೂ ಹಿಂದೆಯೇ ಹೇಳಿದ್ದೇನೆ. ಗದಗ್-ಪಾಲಾಬಾದಾಮಿ ರಸ್ತೆ ಕೆಟ್ಟಿದೆ, ಗಾಡಿಗಳು ಅನೇಕ ವೇಳೆ ಸಿಕ್ಕಿಕೊಂಡು ತೊಂದರೆ ಯಾಗಿದೆ. ಆದರೆ ಬಡ್ಜೆಟ್ಟಿನಲ್ಲಿ ಅದರ ಬಗ್ಗೆ ಹಣವಿಲ್ಲ. ಅದನ್ನು ನೋಡುವುದಕ್ಕೆ ಎಂಟು ಮಂದಿ ತಮ್ಮ ಕಡೆಯವರು ಬಂದಿದ್ದರು. ಆದರೂ ಆ ಬಗ್ಗೆ ಹಣ ಬಡ್ಜೆಟ್ಟಿನಲ್ಲಿ ಒದಗಿಸಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ.—ಕೆಲವಕ್ಕೆ ಲಂಪ್ ಸಂ ಪ್ರಾವಿಷನ್ ಇದೆ. ಅಂಥಾದ್ದನ್ನು ಖಂಡಿತ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—ಹೆಚ್ಚಿನ ಹಣ ಹಿಂದುಳಿದ ಪ್ರದೇಶಕ್ಕೆ ಖರ್ಚಾಗಬೇಕು. ಹೈದರಾಬಾದು ಕರ್ನಾಟಕ, ಉತ್ತರ ಕರ್ನಾಟಕ ಈ ಕಡೆಗೆ ಹೆಚ್ಚು ಬೇಕೆಂದು ಹೇಳುವುದಿಲ್ಲ, ಆ ಭಾವನೆಯಿಂದ ವಿಚಾರ ಮಾಡುವುದಿಲ್ಲ. ನನಗೆ ಕೋಲಾರ ಮತ್ತು ಗಜೇಂದ್ರಗಡ್ ಎರಡೂ ಒಂದೇ. ಮೈಸೂರಿನವರೂ, ಭಾರತೀಯರೂ ಎಲ್ಲಾ ಒಂದೇ. ಆಯಾ ಪ್ರದೇಶ ಗಳಲ್ಲಿರುವ ಅನುಕೂಲ ಮತ್ತು ಅನಾನುಕೂಲ ನೋಡಿ ಪರಿಶೀಲಿಸಬೇಕು.

ಕರ್ನಾಟಕ ಎಂದು ಈ ರಾಜ್ಯಕ್ಕೆ ಹೆಸರು ಬರು ವುದು ಅವಶ್ಯಕ. ಇದನ್ನು ಮರೆಯಬಾರದು. ಪ್ರಾದೇಶಿಕ ಭಾವನೆ, ರೀಜನಲ್ ಭಾವನೆ ಹೋಗಬೇಕು. ಕರ್ನಾಟಕವೆಂದು ಮೈಸೂರು ರಾಜ್ಯಕ್ಕೆ ಹೆಸರಿಟ್ಟರೆ ಬಹಳ ಒಳ್ಳೆಯದು ಆ ದೃಷ್ಟಿಯಿಂದ ಸರ್ಕಾರದವರು ಈ ವಿಚಾರ ಪರಿಶೀಲನೆ ಮಾಡಬೇಕು. ಹಿಂದೆ ಈ ಬಗ್ಗೆ ಖಾಸಗಿ ನಿರ್ಣಯ ತರುವಾಗ ಅದು ಸಭೆ ಮುಂದೆ ಬಾರದಿರುವಂತೆ ಮಾಡಲು ಪ್ರಯತ್ನ ನಡೆದಿದೆ. ಒಟ್ಟಿನಲ್ಲಿ ಈ ಸಂಬಂಧವಾದ ಸಂಕಟ ಪಾರಾಗಬೇಕು. ಈ ಪ್ರಶ್ನೆ ಬಿಡುವುದಿಲ್ಲ. ಕರ್ನಾಟಕ ಎಂದು ಈ ರಾಜ್ಯಕ್ಕೆ ಹೆಸರು ಬರಲೇಬೇಕು.

ಕಾರವಾರದ ಕಡೆ ರೈಲ್ವೆ ಸಂಪರ್ಕ ಹೆಚ್ಚಬೇಕು. ಹಾಸನ—ಮಂಗಳೂರು ರೈಲ್ವೆ ಮಾರ್ಗ ಶಿಫಾರ್ಸು ಮಾಡಿದ್ದಾರೆ. ಬೇಗ ಅದು ಕಾರ್ಯಕಾರಿಯಾಗ ಬೇಕು. ಮುಖ್ಯವಾದ ಸ್ಥಳಗಳಿಗೆ ವಿಮಾನ ಸೌಕರ್ಯ ವಾಗಬೇಕು. ಹುಬ್ಬಳ್ಳಿಯಲ್ಲಿ ಒಂದು ವಿಮಾನ ನಿಲ್ದಾಣವಾಗಬೇಕು. ಮುಂಬಯಿ ಸರ್ಕಾರದ ಆಡಳಿತದಲ್ಲಿ ಹುಬ್ಬಳ್ಳಿಯಿದ್ದಾಗ ಅಲ್ಲಿ ವಿಮಾನ ನಿಲ್ದಾಣ ಮಾಡಲು ಏರ್ಪಾಡಾಗಿ ತೊಂದರೆ ಬಂದು ನಿಂತು ಹೋಯಿತು. ಎರಡು ಮೂರು ಲಕ್ಷ ರೂಪಾಯಿಗಳೋ ಏನೋ ಪ್ರಾಂತ ಸರ್ಕಾರ ಕೊಡಬೇಕೆಂದು ಕೇಳಿದ್ದರು. ಏನಾದರೂಮಾಡಿ ಹುಬ್ಬಳ್ಳಿಯಲ್ಲಿ ಒಂದು ವಿಮಾನ ನಿಲ್ದಾಣ ಸ್ಥಾಪಿಸಬೇಕು.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಇಲಾಖೆಯ ಮಂತ್ರಿಗಳು)—ಬೆಳಗಾವಿಗೆಯೇ ಪ್ಲೇನ್ ಇಲ್ಲ. Is it so simple ? ಅಂಥ ಅಗತ್ಯವಿದ್ದರೆ ಕೇಂದ್ರ ಸರ್ಕಾರದವರು ಏರ್ಪಾಡು ಮಾಡುತ್ತಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ಹುಬ್ಬಳ್ಳಿಯಲ್ಲಿ ವಿಮಾನ ನಿಲ್ದಾಣ ಅವಶ್ಯಕವೆಂದು ಒಪ್ಪಿಕೊಂಡಿದ್ದಾಗಿದೆ, ವಿಚಾರ ಮಾಡಿ. ಆದರೆ ಹಣದ ಕೊರತೆಯಿಂದಲೋ ಏನೋ ಅವಕಾಶ ಮಾಡಿಲ್ಲ.

ಶ್ರೀ ಟಿ. ಮರಿಯಪ್ಪ.—ಮುಖ್ಯವಾಗಿ ಜನಗಳಿಗೆ ಏನಾಗಬೇಕೆಂಬುದನ್ನು ಮೊದಲು ಯೋಚನೆ ಮಾಡೋಣ. ಬಾಕಿಯಾದ್ದನ್ನು ಆಮೇಲೆ ಅನುಕೂಲತೆ ನೋಡಿ ಏರ್ಪಾಡು ಮಾಡಬಹುದು. ಪ್ಲೇನ್ ಇದ್ದರೆ ಅಸೆಂಬ್ಲಿಗೆ ಬೇಗ ಬರಬಹುದು ಎಂದು ಮಾನ್ಯ ಸದಸ್ಯರಿಗೆ ಅಭಿಪ್ರಾಯವಿರಬಹುದು.

ಶ್ರೀ ಎ. ಜೆ. ದೊಡ್ಡಮೇಟಿ.—ಸಂತೋಷ. ಹಿಂದುಳಿದ ವರ್ಗದ ಸಲುವಾಗಿ ಒಂದು ಭಾವನೆಯಿದೆಯೆಂದು ಮಾನ್ಯ ಸ್ನೇಹಿತರು ಹೇಳಿದರು. ಹಿಂದುಳಿದ ಭಾಗ ಮತ್ತು ಹಿಂದುಳಿದ ವರ್ಗ—ಇವೆರಡೂ ಒಂದೇ. ವರ್ಗ ಬಹಳ ಮುಖ್ಯ. ಭಾಗ ಎಂಬುದು ಕೆಲವು ಪ್ರದೇಶಗಳಲ್ಲಿರಬಹುದು. ಆದರೆ ರಾಜ್ಯದ ತುಂಬ ವರ್ಗ ಇದೆ. ಆ ದೃಷ್ಟಿಯಿಂದ ಹಣ ಹೆಚ್ಚಾಗಿ ಕೊಟ್ಟರ ಬಹುದು. ಆದರೆ ಕಡ್ಡಾಯವಾದ ಧೋರಣೆಯಿರಬೇಕು. ಸಲಹಾ ಸಮಿತಿಯೆಂಬ ಒಂದು ಸಮಿತಿ ಹಿಂದುಳಿದ ವರ್ಗಕ್ಕಾಗಿ ಇದೆ, ಪಾಲಸಿ ಕಮಿಟಿ ಎಂದು ಅದನ್ನು ಕರೆಯುತ್ತಾರೆ. ಬೇಕಾದ ಕೆಲವರನ್ನು ಅದಕ್ಕೆ ಹಾಕಿಲ್ಲ ದಿರುವುದರಿಂದ ನಿಜವಾಗಿಯೂ ಸ್ವಲ್ಪ ತೊಂದರೆ ಯಿರುವ ಹಾಗೆ ಕಾಣುತ್ತದೆ. ಇಷ್ಟು ಹಣವಿದೆ, ಪ್ಲಾನ್ ಏನು ಬೇಕೋ ಮಾಡಿ ಎಂದು ಮುಕ್ತ ಕಂಠದಿಂದ ಹೇಳಿದರೆ ಜನರಲ್ಲಿರುವ ಸಂಶಯ ಮನೋಭಾವನೆ ಅಳಿಯುತ್ತದೆ. ಅದನ್ನು ಹೋಗಲಾಡಿಸಿ ಜನರಲ್ಲಿ ಧೈರ್ಯವನ್ನುಂಟು ಮಾಡಲು ಶಾಸ್ತ್ರೀಯವಾದ ಒಂದು ಪ್ರಯತ್ನವನ್ನು ಧೈರ್ಯವಾಗಿ ಸರ್ಕಾರ ಕೈಕೊಳ್ಳಬೇಕಾದ ಆವಶ್ಯಕತೆಯಿದೆ. ಮುಂದಿನ ಬಡ್ಜೆಟ್ ಅಧಿವೇಶನದಲ್ಲಿ ಈಗ ಬಂದಿರುವಂಥ ಟೀಕೆ ಗಳಿಗೆ ಅವಕಾಶವಿಲ್ಲದ ಹಾಗೆ ವಿಶೇಷತಃ ಒಳಾಡಳಿತ ಇಲಾಖೆಯಲ್ಲಿರುವ ನ್ಯೂನತೆ ಹೋಗಲಾಡಿಸಿ ಸರಿಯಾದ ವ್ಯವಸ್ಥೆಯಿರುವ ಹಾಗೆ ತಕ್ಕಕ್ರಮ ಕೈಕೊಳ್ಳ

(ಶ್ರೀ ಎ. ಜೆ. ದೊಡ್ಡಮೇಟಿ)

ಬೇಕೆಂದು ಹೇಳಿ ನನ್ನ ಭಾಷಣ ಮುಕ್ತಾಯ ಮಾಡುತ್ತೇನೆ.

*ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಮುಳಬಾಗಿಲು).— ಮಾನ್ಯ ಅಧ್ಯಕ್ಷರೇ, ಇಲ್ಲಿ ಮಂಡಿಸಿರುವ ಬಡ್ಜೆಟ್ಟನ್ನು ಉಳಿತಾಯದ ಬಡ್ಜೆಟ್ಟೆಂದು ನಾನು ಒಪ್ಪುವುದಿಲ್ಲ. ಒಂದೇ ಒಂದು ಸಲಹೆಯನ್ನು ಮಾನ್ಯ ಆರ್ಥಿಕ ಸಚಿವರಲ್ಲಿ ಹೇಳಬಯಸುತ್ತೇನೆ. ನಮ್ಮ ಖರ್ಚಿನ ಬಾಬನ್ನು ಬಹಳ ಕಡಮೆಮಾಡಿಕೊಂಡು ಆದಾಯವನ್ನು ಹೆಚ್ಚುಮಾಡುವುದಕ್ಕಾಗಿ ಮತ್ತು ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲಿಕ್ಕೆ ಆರ್ಥಿಕ ನಿಪುಣರ ವಿಶೇಷ ಸಮಿತಿಯೊಂದನ್ನು ನೇಮಿಸುವುದರಿಂದ ದೇಶದ ಆರ್ಥಿಕ ಸಮಸ್ಯೆಗಳು ಈ ಸಭೆಯ ಮುಂದೆ ಬರಲು ಬಹಳ ಅನುಕೂಲವಾಗುತ್ತದೆ. ಇದರಿಂದ ಸರಕಾರಕ್ಕೂ ಅನುಕೂಲವಾಗುತ್ತದೆ. ಇದು ಬಹಳ ಸುಲಭವಾದ ಸಲಹೆ. ಆರ್ಥಿಕ ಸಚಿವರು ಒಪ್ಪಬಹುದೆಂದು ನಂಬಿದ್ದೇನೆ.

ಸ್ವಾಮಿ, ಸ್ಥಳೀಯ ಸಂಸ್ಥೆಗಳ ವಿಚಾರದಲ್ಲಿ ಮಾನ್ಯ ಸಚಿವರು ಪೌರಸಭೆಗಳಿಗೆ ಸರಕಾರದ ಇತರ ಇಲಾಖೆಗಳಲ್ಲಿರತಕ್ಕ ನೌಕರ ಮಾನೇರುಗಳಿಗೆ ಯಾವರೀತಿಯ ಸಂಬಳ ಸಾರಿಗೆಗಳನ್ನು ಕೊಡುತ್ತಿದ್ದಾರೋ ಅದೇ ರೀತಿಯಾಗಿ ಈ ಪೌರಸಭೆಗಳೂ ಮಾಡಬೇಕೆಂದು ಸರಕಾರದವರು ಒಂದು ಆರ್ಡರು ಕೊಟ್ಟಿದ್ದಾರೆ. ಪೌರಸಭೆಗಳ ಮತ್ತು ಜಿಲ್ಲಾ ಬೋರ್ಡುಗಳ ಪರಿಸ್ಥಿತಿ ತುಂಬ ಹಿಂದುಳಿದಿದೆ. ಈ ಬಗ್ಗೆ ಸಂಸ್ಥಾನದ ಸರಕಾರಕ್ಕೆ ಯಾವ ಮಟ್ಟದಲ್ಲಿ ಪರಿಹಾರ ದೊರಕುತ್ತಿದೆಯೋ ಅದೇ ಮಟ್ಟದಲ್ಲಿ ಸ್ಥಳೀಯ ಸಂಸ್ಥೆಗಳಿಗೂ ಸಹಾಯ ದೊರಕಬೇಕಾದುದು ಅಗತ್ಯ. ಪೌರಸಭೆಗಳಿರುವ ಸ್ಥಿತಿಯನ್ನು ಪರಿಶೀಲಿಸಬೇಕೆಂದು ಹೇಳಿ ಈಗಾಗಲೇ ಎರಡು ವರ್ಷವಾಯಿತು. ಕಳೆದ ವರ್ಷ ಈ ವಿಚಾರವನ್ನು ಸಭೆಯ ಮುಂದೆ ಇಟ್ಟಾಗ ಒಂದು ವಿಶೇಷ ಸಮಿತಿಯನ್ನು ಏರ್ಪಡಿಸಲಾಗಿದೆ. ಮತ್ತು ಈ ಸಮಿತಿಯ ವರದಿಗಾಗಿ ಕಾಯುತ್ತಿದ್ದೇವೆ ಎಂದು ಹೇಳಿದರು. ಪರಿಹಾರವನ್ನು ಯಾವ ಪ್ರಮಾಣದಲ್ಲಿ ನೀಡಬೇಕು ಎನ್ನುವ ಬಗ್ಗೆ ವರದಿಮಾಡಲು ಒಂದು ವರ್ಷದಿಂದಲೂ ಈ ಸಮಿತಿಗೆ ಸಾಧ್ಯವಾಗದಿದ್ದರೆ ಇಂತಹ ಸಮಿತಿಗಳನ್ನು ನೇಮಿಸುವುದಾದರೂ ಏಕೆ ಎಂದು ಹೇಳಬೇಕಾಗಿದೆ. ನಿಜವಾಗಿಯೂ ಪರಿಹಾರವನ್ನು ನೀಡಕೂಡದೆಂಬುದಕ್ಕಾಗಿಯೋ ಅಥವಾ ಸುಮ್ಮನೆ ಕಾಲಹರಣಮಾಡುವುದಕ್ಕಾಗಿಯೋ ಏನೋ ಎಂಬಂತೆ ಈ ರೀತಿಯ ಸಮಿತಿಯನ್ನು ನೇಮಿಸಿದ್ದಾರೆಂದು ಯೋಚಿಸಬೇಕಾಗಿದೆ. ಇದರಿಂದ ಸ್ಥಳೀಯ ಸಂಸ್ಥೆಗಳ ಆಡಳಿತ ಬಹುಬೇಗ ಕುಸಿದು ಬೀಳುತ್ತದೆ ಎಂದು ಹೇಳಬೇಕಾಗಿದೆ. ಪೌರಸಭೆಯ ಆಡಳಿತದಲ್ಲಿರುವ ನೌಕರರು ಹೆಚ್ಚಿಗೆ ಸಂಬಳ ಪಡೆಯದೆ ಈ ಸ್ಥಳೀಯ ಸಂಸ್ಥೆಗಳ ಅಥವಾ ಜಿಲ್ಲಾ ಬೋರ್ಡುಗಳ ಅಧೀನದಲ್ಲಿ ಸೇರಿ ಒಂದಕ್ಕೆರಡರಷ್ಟು ಜೀವನ ವೆಚ್ಚಗಳು ಹೆಚ್ಚಾಗಿರುವ ಈ ಕಾಲದಲ್ಲಿ ನೌಕರಿಯನ್ನು ಮಾಡಬೇಕು ಎನ್ನುವುದು ಕಷ್ಟಸಾಧ್ಯವಾದ ಕೆಲಸ. ದೇಶದಲ್ಲಿ ಇಂದಿರುವ ಉಗ್ರ ಪರಿಸ್ಥಿತಿಯನ್ನು ಗಮನಿಸಿ ಯಾವುದೋ ಅಪೂರ್ಣವಾದ ವಾದವನ್ನು ಮುಂದಿಟ್ಟು ಸರಕಾರ ಈ ಸಂಬಳವನ್ನು ಹೆಚ್ಚಿಗೆ ಮಾಡಲು ಸಾಧ್ಯವಿಲ್ಲ ಎನ್ನುವುದನ್ನು ಪ್ರತಿಯೊಬ್ಬರೂ ಸರಿಯಾಗಿ ಮನದಟ್ಟು ಮಾಡಿಕೊಂಡು ಆಲೋಚನೆ ಮಾಡಬೇಕು. ಪೌರಸಭೆಗಳಿಗಾಗಿ ಸಹಾಯವು ಯಾವ ಪ್ರಕಾರ ದೊರೆಯುತ್ತಿದೆಯೋ ಅದೇ ಪ್ರಕಾರ ಈ ಪೌರಸಭೆಗಳಿಗೆ ಸರಕಾರ ಒದಗಿಸಬೇಕೆಂದು ಸೂಚನೆ ಕೊಡುತ್ತೇನೆ. ಅನೇಕ ಪೌರಸಭೆಗಳಿಂದ, ಜಿಲ್ಲಾ ಬೋರ್ಡುಗಳಿಂದ ವಿದ್ಯಾ ಸಂಸ್ಥೆಗಳ ಕೆಲಸಗಳು ನಡೆಯುತ್ತಿವೆ. ಇವುಗಳ ಸ್ಥಿತಿ ಬಹಳ ಶೋಚನೀಯವಾಗಿದೆ. ಜಿಲ್ಲಾ ಬೋರ್ಡುಗಳ ಆಡಳಿತದಲ್ಲಿರುವ ಹೈಸ್ಕೂಲು ಉಪಾಧ್ಯಾಯರುಗಳಿಗೆ ಸಂಸ್ಥಾನದಲ್ಲಿರುವ ಇತರ ಹೈಸ್ಕೂಲುಗಳ ಉಪಾಧ್ಯಾಯರುಗಳಂತೆಯೇ ಹೆಚ್ಚಿನ ಸಂಬಳ ಕೊಡಬಹುದೆಂದು ಸರಕಾರದವರು ಬಹಳ ಉದಾರವಾದ ಒಂದು ಆರ್ಡರನ್ನೂ ಮಾಡಿದ್ದಾರೆ. ಆದರೆ ಜಿಲ್ಲಾ ಬೋರ್ಡುಗಳ ಆರ್ಥಿಕ ಸ್ಥಿತಿಯು ಚೆನ್ನಾಗಿಲ್ಲವೆಂದು ಅವರುಗಳಿಗೆ ಹೆಚ್ಚಿನ ಸಂಬಳ ದೊರೆಯುವುದಿಲ್ಲ. ಹೀಗೆ ಆರ್ಥಿಕ ಸ್ಥಿತಿ ಸರಿಯಾಗಿಲ್ಲವೆಂದು ಈಗಿರುವ ಪರಿಸ್ಥಿತಿಯಲ್ಲಿ ಈ ನೌಕರ ಮಾನೇರುಗಳು ತೃಪ್ತಿಯಿಂದ ಕೆಲಸ ಮಾಡಲು ಸಾಧ್ಯವೇ ? ಅವರುಗಳು ಕಷ್ಟಪಟ್ಟು ಕೆಲಸ ಮಾಡಿದರೆ ತಾನೇ ಇರುವ ಶಾಲೆಗಳು ಚೆನ್ನಾಗಿ ನಡೆದು ಶಿಕ್ಷಣವನ್ನು ಮುಂದಕ್ಕೆ ತರಲು ಸಾಧ್ಯವಾದೀತು ? ಹೀಗೆ ಶಿಕ್ಷಣ ಮಟ್ಟವನ್ನು ಹೆಚ್ಚಿಸಲು ಮತ್ತು ತೃಪ್ತಿಕರವಾಗಿ ನಡೆಸಲು ಸರಕಾರ ಇವನ್ನೆಲ್ಲ ವಿಚಾರಮಾಡಬೇಕಾಗಿದೆ. ಕೆಲವು ಮುನಿಸಿಪಾಲಿಟಿಗಳು ಅವರ ಆಡಳಿತದಲ್ಲಿರುವ ನೌಕರುಮಾನೇರುಗಳಿಗೆ ಸಂಬಳ ಕೊಡುವ ಸ್ಥಿತಿಯಲ್ಲಿಲ್ಲದಿದ್ದರೂ ಅಂತಹವರು ಈ ಶಿಕ್ಷಣದ ಜವಾಬ್ದಾರಿಯನ್ನು ವಹಿಸಿಕೊಂಡರೆ ವಿದ್ಯಾಭ್ಯಾಸ ಸರಿಯಾಗಿ ನಡೆಯುತ್ತದೆಯೇ ಎನ್ನುವುದಕ್ಕೆ ಸರಕಾರ ಗಮನ ಕೊಡಬೇಕಾದುದು ಅಗತ್ಯ. ಹೀಗೆ ಈ ಶಿಕ್ಷಣದ ಬಾಬನ್ನು ಸ್ಥಳೀಯ ಸಂಸ್ಥೆಗಳು ವಹಿಸಿಕೊಳ್ಳಲು ಸಾಧ್ಯವಿಲ್ಲದಿರುವಾಗ ಅವರು ಈ ವಿದ್ಯಾಭ್ಯಾಸವನ್ನು ನಿರ್ವಹಿಸುವುದು ತುಂಬ ಕಷ್ಟವಾಗುತ್ತದೆ. ಉದಾಹರಣೆಗಾಗಿ ನಮ್ಮ ಶಿಡ್ಲಘಟ್ಟ ತಾಲ್ಲೂಕಿನಲ್ಲಿರುವ ಪೌರಸಭೆಯ ಆಡಳಿತದಲ್ಲಿರುವ ವಿದ್ಯಾಸಂಸ್ಥೆಯಲ್ಲಿ ಸಂಬಳಕೊಡಲು ಸಾಧ್ಯವಿಲ್ಲವೆಂದು ಒಬ್ಬ ಡ್ರಿಲ್ ಇನ್ಸ್ಟ್ರಕ್ಟರನ್ನು ನೇಮಿಸುವುದೇ ಬೇಡ ಎಂದು ಹೇಳಿದ್ದಾರೆ. ಅದೇರೀತಿ ಬಂಗಾರಪೇಟೆಯ ಪುರಸಭೆಯ ಸ್ಕೂಲಿನವರೂ ಹೇಳಿದ್ದಾರೆ. ಹೀಗಾಗುವುದು ಅಲ್ಲಿ ವಿದ್ಯಾಭ್ಯಾಸಂಗ ಮಾಡತಕ್ಕವರ ದೌರ್ಭಾಗ್ಯವೋ ಏನೋ! ಅವರಿಗೆ ಡ್ರಿಲ್‌ನಲ್ಲಿ ಶಿಕ್ಷಣ ಬೇಡವೇ ? ಮುಂದೆ ಅವರ ಆರೋಗ್ಯವನ್ನು ಹೆಚ್ಚಿಸಲು ವ್ಯಾಯಾಮವೇ ಬೇಡವೇ? ಇವನ್ನೆಲ್ಲ ಯೋಚಿಸಿ ಸರಕಾರ ಮುಂದೆ ಬಂದು ಈ ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ನಡೆಯುತ್ತಿರುವ ವಿದ್ಯಾಶಾಲೆಗಳ ಜವಾಬ್ದಾರಿಯೆಲ್ಲವನ್ನೂ ಕೂಡ ಸರಕಾರವೇ ವಹಿಸಿಕೊಳ್ಳುವುದು ಸೂಕ್ತವಾಗಿದೆ ಎಂದು ಈ ಸಂದರ್ಭದಲ್ಲಿ ಸರಕಾರಕ್ಕೆ ಸಲಹೆ ಮಾಡಬೇಕಾಗಿದೆ.

ಮತ್ತೆ ಹರಿಜನರ ಉದ್ಧಾರದ ವಿಚಾರವಾಗಿ ಈಗಾಗಲೇ ಬೇಕಾದಷ್ಟು ಹೇಳಿದ್ದಾರೆ. ಈ ವಿಚಾರದಲ್ಲಿ ಒಂದೇ ಒಂದು ವಿಷಯವನ್ನು ಹೇಳಬೇಕಾಗಿದೆ. ಈ ಹರಿಜನರಿಗಾಗಿ ಏನೋ ಅಲ್ಪಸ್ವಲ್ಪ ಗ್ರ್ಯಾಂಟುಗಳನ್ನು ಸರಕಾರ ದಯಮಾಡಿ ಈಗಲೂ ಕೊಡುತ್ತಿದ್ದಾರೆ. ಆದರೆ ಹೀಗೆ ಕೊಡುವ ಗ್ರಾಂಟುಗಳನ್ನು (Tail end of the year) ವರ್ಷದ ಆಖ್ಯೆರಿನಲ್ಲಿ ಎಂದರೆ ಮಾರ್ಚಿ ತಿಂಗಳ 25 ಅಥವಾ 31ನೆಯ ತಾರೀಖಿನ ವೇಳೆಗೆ final order ಮಾಡುತ್ತಾರೆ. ಹೀಗೆ ಕೊಡುವುದರಿಂದ ಕೊಟ್ಟ ಗ್ರಾಂಟುಗಳಲ್ಲಿ ಅರ್ಧದಷ್ಟುಕೂಡ ಹಣ ಖರ್ಚಾಗದೆ ಎಷ್ಟೋ ಸಂದರ್ಭಗಳಲ್ಲಿ ಲ್ಯಾಪ್ಸ್ ಆಗುತ್ತದೆ. ವರ್ಷದ 364 ದಿನಗಳೂ ಕೆಲಸ ಕಾರ್ಯಗಳಾಗುತ್ತಿದ್ದರೂ ಕೂಡ ಈ ಸಭೆಯ ಎಲ್ಲ ಸದಸ್ಯರೂ ಇಲ್ಲೇ ಇರುವಾಗ ಇಷ್ಟು ರೂಪಾಯಿಗಳ ಬೇಡಿಕೆ ಬಂತು

ಎಂದು ಕೇಳಿದರೆ ಕೊಡ ತ್ತಾರೆ ಮತ್ತು ಅದನ್ನು
ಬೇಗನೆ ಹಂಚಲು ಸಾಧ್ಯವಾಗುತ್ತದೆ. ನಿಜವಾಗಿಯೂ
ದೇಶದ ಹರಿಜನರ ಅಭಿವೃದ್ಧಿಯಾಗಬೇಕಾದರೆ ಮತ್ತು
ಗೌರವ ಬರಬೇಕಾಗಿದ್ದರೆ ಅವರಿಗಾಗಿ ನಿಗದಿಯಾಗಿ
ರುವ ಹಣವನ್ನು ಸಕಾಲದಲ್ಲಿ ಒದಗಿಸಬೇಕಾದುದು
ಅಗತ್ಯ. ಏಕೆ ಹೀಗೆ ಮಾಡುತ್ತಿದ್ದಾರೋ ನನಗಂತೂ
ಅರ್ಥವಾಗುತ್ತಿಲ್ಲ. ಸರಕಾರದವರು ಇದನ್ನು ಗಮನಿ
ಸದೆ ಹೋದರೆ ನಿಜಕ್ಕೂ ಅವಹೇಳನವೆಂದು ಬಹಳ
ವಿಷಾದದಿಂದ ಹೇಳಬೇಕಾಗಿದೆ.

ನೀರಾವರಿ ಕೆಲಸಗಳಿಗಾಗಿ ಹಣವೇನೋ ತ್ವರಿತ
ದಿಂದ ಹೆಚ್ಚಾಗಿ ಖರ್ಚಾಗುತ್ತಿದೆ. ಆದರೆ ಒಂದು
ವ್ಯವಸ್ಥಿತವಾದ ರೀತಿಯಲ್ಲಿ ಖರ್ಚಾಗುತ್ತಿಲ್ಲ, ಅದೇ
ನನ್ನ ಕೊರತೆಯಾಗಿದೆ. ಕೋಲಾರ ಜಿಲ್ಲೆಯಲ್ಲಿ ಶ್ರೀನಿ
ವಾಸಪುರ, ಮುಳಬಾಗಿಲು ತಾಲ್ಲೂಕುಗಳಲ್ಲಿ ಈಗಲೂ
ನೂರಾರು ಕೆರೆಗಳು ದುರಸ್ತಾಗದೆ ಇರುವಂತಹವು
ಇವೆ. ನಿಜವಾಗಿಯೂ ಎಷ್ಟು ಕೆರೆಗಳಿವೆ ಎನ್ನು
ವುದಕ್ಕೆ ಇಲ್ಲಿಯವರೆಗೂ ಲಿಸ್ಟನ್ನು ಕೂಡ ಮಾಡಿಲ್ಲ.
ನಾನೇನೋ ಈಗ ಎಷ್ಟು ಕೆರೆಗಳಿವೆ ಎನ್ನುವುದನ್ನು
ಹೇಳಬಹುದು. ಆದರೆ ಈ ರೀತಿ ಒಂದು
ಲಿಸ್ಟನ್ನು ಈಗಲಾದರೂ ಸರಕಾರ ಮಾಡಿಸಿ ಅವರೇ
ಒಂದು ಕಾಪಿಯನ್ನು ನನಗೆ ಕೊಟ್ಟರೆ ಇದರ ವಿವರ
ಪೂರ್ಣವಾಗಿ ಗೊತ್ತಾಗುತ್ತದೆ. ಇದಕ್ಕಾಗಿ ಸರಿ
ಯಾದ ಯೋಜನೆಗಳನ್ನು ಹಾಕಿಕೊಂಡು ಮಾಡದೇ
ಇರುವುದರಿಂದ ಇಂತಹ ಕೆಲಸಗಳು ವಿಸ್ತಾರವಾಗಿ
ನಡೆಯುವುದಿಲ್ಲ ಮತ್ತು ಎಲ್ಲ ಕೆಲಸಗಳೂ ವ್ಯವಸ್ಥಿತ
ವಾದ ರೀತಿಯಲ್ಲಿ ಯೋಜನೆಯ ಪ್ರಕಾರ ನಡೆಸಲಾಗು
ವುದಿಲ್ಲ. ಇದನ್ನೆಲ್ಲಾ ಮಾನ್ಯ ಮಂತ್ರಿಗಳು ಗಮನಿಸಿ,
ಶ್ರೀನಿವಾಸಪುರ ಮುಳಬಾಗಿಲು ತಾಲ್ಲೂಕುಗಳಲ್ಲಿ
ಹೇರಳವಾಗಿರುವ ಕೆರೆಗಳ ಒಂದು ಪಟ್ಟಿಯನ್ನು ತರಿಸಿ
ಅದರಂತೆ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಕೆಲಸ
ಮಾಡಿಸಬೇಕೆಂದು ನಾನು ಅವರಲ್ಲಿ ಸೂಚಿಸ ಬಯಸು
ತ್ತೇನೆ.

ಇಷ್ಟೇ ಅಲ್ಲ, ಇದೇ ಜಿಲ್ಲೆಯಲ್ಲಿ ಕೆಲವು ತಾಲ್ಲೂಕು
ಗಳಿಗೆ ಹಣದ ಹಂಚಿಕೆ ಸರಿಯಾಗಿಲ್ಲ. 1956-57ನೆಯ
ಸಾಲಿಗೆ ಗೋರಿಬಿದನೂರು ತಾಲ್ಲೂಕಿಗೆ ಎಂದು
ಅಂದಾಜು ಪಟ್ಟಿಯಲ್ಲಿ ಲಕ್ಷಾಂತರ ರೂಪಾಯಿಗಳನ್ನು
ಕೆಲಸಗಳಿಗಾಗಿ ಕೊಟ್ಟು, ಅದೇ ರೀತಿಯ ಕೆಲಸಗಳಿ
ಗಾಗಿ ಬೇರೆ ತಾಲ್ಲೂಕುಗಳಿಗೆ ಸಾವಿರಾರು ರೂಪಾಯಿ
ಗಳಷ್ಟು ಕೂಡ ಕೊಡದೆ ಇರುವುದು ಈ ಪ್ರಜಾಪ್ರಭುತ್ವ
ದಲ್ಲಿ ಯಾವ ನ್ಯಾಯ ? ಇದು ಶುದ್ಧ ಅವಹೇಳನದ
ವಿಷಯ. ಇದನ್ನು ಈಗಲಾದರೂ ಸರಿಪಡಿಸಬೇಕಾ
ದುದು ಅಗತ್ಯ.

ಇನ್ನು ರೋಡ್ ಟ್ರಾನ್ಸ್‌ಪೋರ್ಟು ಡಿಪಾರ್ಟು
ಮೆಂಟಿನ ವಿಷಯ. ಅನೇಕ ಸಂಚಾರ ಮಾರ್ಗಗಳನ್ನು
ಈಗಾಗಲೇ ರಾಷ್ಟ್ರೀಕರಣ ಮಾಡಿದ್ದಾರೆ. ಅದರಂತೆ
ರೋಡು ಟ್ರಾನ್ಸ್‌ಪೋರ್ಟಿನ ಬಸ್ಸುಗಳು ನಡೆಯು
ತ್ತಿವೆ. ಆದರೆ ಖಾಸಗಿಯ ವಾಹನಗಳು ಸರಕಾರಿ
ಬಸ್ಸುಗಳಿಗಿಂತ ಉತ್ತಮವಾಗಿದ್ದರೂ ಅವುಗಳಲ್ಲಿ
ಓವರ್‌ಲೋಡುಗಳನ್ನು ಹಾಕುವ ಹಾಗಿಲ್ಲ. ಆದರೆ
ಸರಕಾರಿ ಬಸ್ಸಿನಲ್ಲಿ ಓವರ್‌ಲೋಡ್ ಎಂದು ಹಾಕು
ವುದಿಲ್ಲ; ಬೇರೆ ರೀತಿಯಿಂದ ಹಾಕುತ್ತಾರೆ ಅಷ್ಟೇ. ಅದರೆ
ಹಾಗೆ ಓವರ್‌ಲೋಡು ಮಾಡಿದ ಹಣ ಸರಕಾರಕ್ಕೆ ಬರು
ತ್ತಿಲ್ಲ ಎಂದು ಯಾರಾದರೂ ಹೇಳಲೇಬಹುದು.
ಇದರ ಜೊತೆಗೆ ಇನ್ನೂ ಹೆಚ್ಚಿಗೆ ರಾಷ್ಟ್ರೀಕರಣ ಮಾಡ
ಬೇಕೆಂದು ಸರಕಾರದವರು ಯೋಚಿಸಿದ್ದಾರೆ. ಮತ್ತು
ಇನ್ನೊಂದು ಉಪಕಾರ ಮಾಡಿದ್ದಾರೆ. ಈಗ
ಮೋಟಾರು ವಾಹನಗಳಿಗೆ ಮೈಲಿಗೆ ಎಂಟು ಕಾಸಿ
ನಂತೆ ಇದ್ದುದನ್ನು ಒಂದಾಣೆಗೆ ಏರಿಸಬೇಕೆಂದು
ಮಾಡಿದ್ದಾರೆ. ಹೀಗೆ ಮೈಲಿಗೆ ಎಂಟು ಕಾಸಿದ್ದು
ದನ್ನು ಒಂದು ಆಣೆಯಂತೆ ಏರಿಸಿದರೆ ಜನಗಳಿಗೆ ಎಷ್ಟರ
ಮಟ್ಟಿನ ತೊಂದರೆಯಾಗುತ್ತದೆ ಎನ್ನುವುದನ್ನು
ಯಾರೂ ಹೇಳಬೇಕಾಗಿಲ್ಲ. ಇದನ್ನು ಸರಕಾರದವರೇ
ಯೋಚನೆ ಮಾಡಬೇಕಾಗಿದೆ.

ಅಂತಹ ಒಂದು ಪರಿಸ್ಥಿತಿಯಲ್ಲಿ ಈಗಿರತಕ್ಕ ಲೈನ್
ಗಳಲ್ಲಿ ಎಷ್ಟೇ ಹೆಚ್ಚಿನ ಬಸ್‌ಗಳನ್ನು ಹಾಕಿದರೂ
ಕೂಡ ಅದೇ ಪರಿಸ್ಥಿತಿ ಉಂಟು. ಓವರ್‌ಲೋಡ್
ತಪ್ಪಿಸಲು ಒಂದು ಆಣೆ ಬೇಕಾದರೂ ಹೆಚ್ಚಿಗೆ ತೆಗೆದು
ಕೊಳ್ಳಿ, ಜನಗಳಿಗೆ ಸುಖ ಉಂಟಾಗಲಿ, ಹೆಚ್ಚಿನ
ಬಸ್‌ಗಳನ್ನು ಹಾಕಿ ಎಂದು ಸಲಹೆ ಮಾಡುತ್ತೇನೆ.
ಇದರ ಜೊತೆಗೆ ಮತ್ತೆ ಹೊಸದಾಗಿ ಕೆಲವು ಲೈನ್
ಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಪ್ರಯತ್ನ
ಪಟ್ಟಿದ್ದೀರಿ, ನಿಮ್ಮ ನಡವಳಿಕೆ ನೋಡಿದರೆ ಇದು
ನಿಜವಾಗಿಯೂ ರಾಷ್ಟ್ರೀಕರಣವೇ ಅಲ್ಲ. ಮೋಟಾರ್
ವೆಹಿಕಲ್ ಆಕ್ಟ್ ಪ್ರಕಾರ ಒಬ್ಬ ಖಾಸಗೀ ಮನುಷ್ಯನಿಗೆ
ಎಷ್ಟು ಸ್ಥಾನಮಾನವುಂಟೋ ಸರ್ಕಾರಿ ಟ್ರಾನ್ಸ್
ಪೋರ್ಟ್ ಡಿಪಾರ್ಟ್‌ಮೆಂಟಿಗೂ ಅಷ್ಟೇ ಸ್ಥಾನ
ಮಾನವೇ ಹೊರತು, ಅವರಿಗೂ ಇವರಿಗೂ ವ್ಯತ್ಯಾಸ
ವಿಲ್ಲ. ಎಂದ ಮೇಲೆ ಕೋಲಾರ ಡಿಸ್ಟ್ರಿಕ್ಟಿನ ಕೆಲವು
ರಸ್ತೆಗಳ ಮೇಲೆ ಖಾಸಗೀಯವರಿಗೆ ಬಸ್ ಪರ್ಮಿಟ್
ರಿನ್ಯೂ ಮಾಡಬೇಡಿ ಎಂದು ಬರೆಯಬೇಕಾದರೆ
ಕಾರಣವೇನಿತ್ತೋ ಗೊತ್ತಿಲ್ಲ. ಸಾಧಾರಣವಾಗಿ
ಖಾಸಗೀ ಜನರು ಬಸ್ ನಡೆಸಬೇಕಾದರೆ ಸಾವಿರಾರು
ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಅದನ್ನು
ರೂಢಿಸಿಕೊಳ್ಳಲು ಅಪಾರವಾದ ಹಣ ಸುರಿಯುತ್ತಾರೆ.
ಸಂಪೂರ್ಣ ರಾಷ್ಟ್ರೀಕರಣ ಮಾಡಿ, ಬಹಳ ಸಂತೋಷ
ಪಡುತ್ತೇನೆ. ಆದರೆ ನಮಗೆ ಅಧಿಕಾರ ಇದೆ ಎಂದು
ಆ ಅಧಿಕಾರವನ್ನು ದುರುಪಯೋಗಪಡಿಸಿ ಪ್ರೈವೇಟ್
ಪರ್ಮಿಟ್ ಹೋಲ್ಡರ್ಸ್‌ಗೆ ಅನ್ಯಾಯ ಮಾಡಬಾರದು
ಎಂಬುದು ನನ್ನ ಸಲಹೆ. ರಾಷ್ಟ್ರೀಕರಣ ಮಾಡಬೇಕಾ
ದರೆ ಮೋಟಾರ್ ವೆಹಿಕಲ್ಸ್ ಆಕ್ಟ್ ಪ್ರಕಾರ
ನೋಟೀಸ್ ಕೊಟ್ಟು, ಪರಿಹಾರಕೊಟ್ಟು, ರಾಷ್ಟ್ರೀ
ಕರಣ ಮಾಡಬಹುದು. ಆ ಯಾವ ಒಂದು ಕ್ರಮ
ವನ್ನೂ ಅನುಸರಿಸದೇ ನಿಮ್ಮ ಅಧಿಕಾರ ಬಲದಿಂದ
ಅವರಿಗೆ ಪರ್ಮಿಟ್ ರಿನ್ಯೂ ಮಾಡಿಸದೇ ಅನ್ಯಾಯ
ಮಾಡುವುದು ಪ್ರಜಾಪ್ರಭುತ್ವದಲ್ಲಿ ಧರ್ಮವಲ್ಲ. ಈ
ರೀತಿ ಮಾಡಬಾರದು. ನ್ಯಾಯವಾದ ದಾರಿಯಲ್ಲಿ
ಎಷ್ಟುಬೇಕಾದರೂ ರಾಷ್ಟ್ರೀಕರಣಮಾಡಿ ಪ್ರಜೆಗಳಿಗೆ
ಅನುಕೂಲ ಮಾಡಿಕೊಡಿ, ಸಂತೋಷಪಡುತ್ತೇನೆ.

ಮತ್ತೊಂದು ವಿಚಾರ. ಪೋಲೀಸ್ ಆಡಳಿತದ
ವಿಚಾರದಲ್ಲಿ ಎಂದೂ ಹೇಳದಷ್ಟು ರೀತಿಯಲ್ಲಿ ಟೀಕೆಗಳ
ಸುರಿಮಳೆ ಆಗಿದೆ. ನನಗೆ ಹೀಗೆ ಅನಿಸುತ್ತದೆ.
ಕಳೆದ ಅಧಿವೇಶನದಲ್ಲಿ ಪ್ರಜಾ ಪ್ರತಿನಿಧಿಗಳು ಹೇಳಿದ
ಪ್ರಕಾರ ಕಲಸ ಕಾರ್ಯಗಳು ನಡೆದಿಲ್ಲ. ತಾವು
ತಮ್ಮ ಜವಾಬ್ದಾರಿಯನ್ನು ಅರಿತಂತೆ ಕಾಣುವುದಿಲ್ಲ.
ಆಗ ಆಡಳಿತದಲ್ಲಿರತಕ್ಕ ಲೋಪದೋಷಗಳನ್ನು
ಸದಸ್ಯರು ಮಾನ್ಯ ಸಚಿವರ ಗಮನಕ್ಕೆ ತಂದರು.
ಸಚಿವರು ಅದನ್ನೆಲ್ಲಾ ಪರಿಶೀಲಿಸುವುದಾಗಿ ಪ್ರಜೆಗಳ
ಪ್ರತಿನಿಧಿಗಳಿಗೆ ಭರವಸೆ ಕೊಟ್ಟರು. ಅದರಂತೆ
ಇಲಾಖೆಯವರಿಗೆ ಎಚ್ಚರಿಕೆ ಕೊಟ್ಟಿದ್ದರೆ ಇವತ್ತು ಈ
ಟೀಕೆಗಳ ಸುರಿಮಳೆಗೆ ಅವಕಾಶವಿರಲಿಲ್ಲ ಎಂಬುದು
ನನ್ನ ಭಾವನೆ. ಇದು ದುರ್ದೈವ. ಕಳೆದ ಅಧಿವೇ
ಶನದಲ್ಲಿ ಮಾನ್ಯ ಸಚಿವರು—ಅವರಿಗೆ ಆತ್ಮ ವಿಶ್ವಾಸ
ಆಗ ಇತ್ತು ಎಂದು ಕಾಣುತ್ತದೆ—ಎಲ್ಲವನ್ನೂ ಸರಿಪಡಿ
ಸುತ್ತೇನೆ ಎಂದು ಹೇಳಿದರು. ಆ ರೀತಿ ಹೇಳುವುದು

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಅವಿವೇಕ, ಸಾಧ್ಯವಿಲ್ಲದ ಮಾತು. ಮೈಸೂರಿನ ಆಡಳಿತದಲ್ಲಿ ಬಹುಮಟ್ಟಿನ ಲೋಪದೋಷ ಇಲ್ಲ, ಎಲ್ಲವೂ ಸರಿಯಾಗಿದೆ ಎಂದು ಹೇಳಿಕೊಳ್ಳುವುದು ಖಂಡಿತವಾಗಿಯೂ ಸರಿಯಲ್ಲ. ಅದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಈಗಲಾದರೂ ಮಾನ್ಯ ಸಚಿವರು ಎಲ್ಲಾ ಟೀಕೆಗಳನ್ನೂ ಆದರದಿಂದ ಬರಮಾಡಿಕೊಂಡು ತಮ್ಮ ಸಿಬ್ಬಂದಿಗೆ ಸರಿಯಾದ ತಿಳಿವಳಿಕೆ ಕೊಡುತ್ತಾರೆ, ಮತ್ತು ಇನ್ನುಮುಂದೆ ಇಂಥ ಟೀಕೆಗಳಿಗೆ ಅವಕಾಶ ಆಗದೇ ಇರಲಿ, ಇದು ನಾಗರಿಕರಾದ ನಮಗೇ ಅಪಚಾರ ಎಂದು ಮನವಿ ಮಾಡಿಕೊಳ್ಳುತ್ತಾ ಇದ್ದೇನೆ.

ಸ್ವಾಮಿ, ಕೋಲಾರ ಜಿಲ್ಲೆಯಲ್ಲಿ ಕ್ಷಾಮದ ಪರಿಸ್ಥಿತಿ ಬಹಳವಾಗಿದೆ. ಸಾಮಾನ್ಯವಾಗಿ ಈ ಕ್ಷಾಮ ಪರಿಸ್ಥಿತಿ ಕೋಲಾರ ಜಿಲ್ಲೆಯಲ್ಲಿ ಎರಡುಮೂರು ವರ್ಷಕ್ಕೊಮ್ಮೆ ಪ್ರಾಪ್ತವಾಗುವುದೇನೂ ಹೊಸದಲ್ಲ. ಸರ್ಕಾರದವರು ದಯಮಾಡಿ ಅನೇಕ ನೀರಾವರಿ ಕೆಲಸ ಮಾಡಿಸುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಈ ಬಗ್ಗೆ ನಮ್ಮ ಮರಾಮತ್ತು ಇಲಾಖೆಯ ಸಚಿವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈಗ ಕೆಲವು ರಿಲೀಫ್ ಕಾಮಗಾರಿಗಳನ್ನು ನಡೆಸಿದ್ದಾರೆ. ಅಲ್ಲಿರ ತಕ್ಕ ವಾಸ್ತವಾಂಶ ಎಂದರೆ ಕುಡಿಯುವ ನೀರಿನ ಅಭಾವ ಬಹಳವಾಗಿದೆ. ಇದನ್ನು ಪರಿಹರಿಸಬೇಕು. ಅಲ್ಲಿ ಬಹಳ ಅನಿಶ್ಚಿತವಾದ ಮಳೆಯ ಪರಿಸ್ಥಿತಿಯಿಂದ ಬೆಳೆಗಳು ಕೆಟ್ಟುಹೋಗಿ ರೈತನ ಕಷ್ಟ ಹೇಳಲಾರ ದಾಗಿದೆ. ಅಂತಹ ಕಡೆಯಲ್ಲಿ ಬೋರ್‌ವೆಲ್ ಹಾಕಿದರೆ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರ ದವರು ಹೆಚ್ಚಿನ ಸಾಲ ಮತ್ತು ಗ್ರಾಂಟ್ ಕೊಟ್ಟು ನೀರಾವರಿ ಬಾವಿಗಳನ್ನು ತೆಗೆಸಲಿಕ್ಕೆ ಉತ್ತೇಜನ ಕೊಡಬೇಕೆಂದು ಹೇಳುತ್ತೇನೆ. ಈಗ ವಿದ್ಯುಚ್ಛಕ್ತಿ ಪಂಪುಗಳನ್ನು ಹಾಕಿಕೊಳ್ಳಲು ಒಂದು ದೊಡ್ಡ ತೊಂದರೆ ಪ್ರಾಪ್ತವಾಗಿದೆ. ಇಲಾಖೆಯವರು ಬಲಿಗ ಪೋಲ್ಸ್ ಸಿಕ್ಕುವುದಿಲ್ಲ ಎಂದು ಹೇಳುತ್ತಾರೆ. ಹಳ್ಳಿಯ ಪಕ್ಕದಲ್ಲೇ ಮೇನ್ ಲೈನು ಹೋಗುತ್ತಿದ್ದರೂ ಸಹ ವಿದ್ಯುಚ್ಛಕ್ತಿ ಸಿಕ್ಕದಂತಾಗಿದೆ. ಇದಕ್ಕೆ ಗಮನಕೊಟ್ಟು ತಕ್ಕ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಸ್ವಾಮಿ, ರೈಲ್ವೆ ವಿಚಾರದಲ್ಲಿ ನಮಗೆ ಬಹಳ ಅನ್ಯಾಯವಾಗುತ್ತಾ ಇದೆ. 1918 ನೇ ಇಸವಿಯಲ್ಲಿ ರೈಲ್ವೆ ಇಲಾಖೆಯವರು ಸರ್ವೆಮಾಡಿ ಶ್ರೀನಿವಾಸಪುರ ತಾಲ್ಲೂಕಿನಲ್ಲಿ 35 ಮೈಲಿ ಪ್ರದೇಶಕ್ಕೆ ರೈಲು ಹಾಕ ಬೇಕೆಂದು ಪ್ರಯತ್ನಪಟ್ಟಿದ್ದರು. ಈಗ 40 ವರ್ಷ ಆಯಿತು. ನಮ್ಮ ಸರ್ಕಾರದವರು ಈ ಕಡೆಗೆ ಸಾಕಷ್ಟು ಗಮನ ಕೊಡುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಸರ್ಕಾರದವರು ಮನಸ್ಸು ಮಾಡಿ ದ್ದರೆ ಖಂಡಿತವಾಗಿಯೂ ಆಗುತ್ತಾ ಇತ್ತು. ಸಹಸ್ರಾರು ಮೈಲಿ ರೈಲ್ವೇ ಮಾರ್ಗಗಳನ್ನು ಮಾಡಿ ಸುತ್ತಾ ಇರುವಾಗ ದಕ್ಷಿಣ ಪ್ರಾಂತ್ಯದಲ್ಲಿ ಇಷ್ಟಾದರೂ ಸೌಕರ್ಯ ಮಾಡಿಕೊಡಬೇಡವೇ? ಇದಕ್ಕೆ ಸರ್ಕಾರ ದವರು ಸಾಕಷ್ಟು ನಿಗಾ ವಹಿಸುತ್ತಿಲ್ಲ ಎಂದು ಅಷ್ಟು ಮಾತ್ರ ಹೇಳುತ್ತೇನೆ.

ರಾಜ್ಯವು ಪುನರ್‌ವಿಂಗಡಣೆ ಆದರೂ ಸಹ ಇನ್ನೂ ಕೊಂಚ ಗಡಿ ಪರಿಸ್ಥಿತಿ ಹದಗೆಟ್ಟೇ ಇದೆ. ನಮ್ಮ ನಿಪ್ಪಾಣಿ ಸ್ನೇಹಿತರು ವಾಕ್ ಔಟ್ ಮಾಡುತ್ತಾರೆ, ನಮ್ಮ ರಾಜ್ಯಕ್ಕೆ ನಾವು ಹೋಗಬೇಕು ಎನ್ನುತ್ತಾರೆ. ಇಷ್ಟವಿಲ್ಲದೆ ಇರುವವರನ್ನು ಇಟ್ಟುಕೊಂಡು ಏನು ಪ್ರಯೋಜನ? ಕುದುರೆಯನ್ನು ನೀರಿನವರೆಗೂ ಕರೆದುಕೊಂಡು ಹೋಗಬಹುದು. ಅದಕ್ಕೆ ಇಷ್ಟವಿಲ್ಲ ದಿದ್ದರೆ ನೀರು ಕುಡಿಸುವುದಕ್ಕೆ ಸಾಧ್ಯವೇ? ಕರ್ನಾ ಟಕ ಪ್ರಾಂತ್ಯದಲ್ಲಿ ಇರಲು ಇಷ್ಟವಿಲ್ಲದೇ ಇರುವವರನ್ನು ಇಲ್ಲಿಗೆ ಎಳೆದುಕೊಂಡು ಬಂದು ಇಲ್ಲೇ ಇರಿ ಎಂದರೆ ಸಾಧ್ಯವಾಗುತ್ತದೆಯೇ? ಖಂಡಿತ ಇಲ್ಲ. ಇದರಿಂದ ನಿರಾಶೆಗೆ ಅವಕಾಶವಾಗುತ್ತದೆ ಎಂದು ಖಂಡಿತ ವಾಗಿಯೂ ಹೇಳುತ್ತೇನೆ. ನಮಗೆ ಬರಬೇಕಾದ ಕಾಸರಗೋಡು, ಹೊಸೂರು ಪ್ರಾಂತ್ಯಗಳೇನಿವೆ ಅಲ್ಲಿನ ಜನರು ನಮ್ಮ ದೇಶಕ್ಕೆ ಬರುವುದಾದರೆ ಅವರನ್ನು ಸಂತೋಷದಿಂದ ಬರಮಾಡಿಕೊಳ್ಳೋಣ. ಮಾನ್ಯ ಮಂತ್ರಿಗಳು ಕಳೆದ 15 ದಿವಸದಲ್ಲಿ ಬೊಂಬಾ ಯಿಗೆ ಹೋಗಿದ್ದರು. ಅಲ್ಲಿ ಏನು ವಿಷಯ ನಡೆಯಿತು ಎಂಬುದನ್ನು ಸಭೆಗೆ ತಿಳಿಸಬೇಕು ಎಂದು ಹೇಳುತ್ತೇನೆ.

ಮೈನಾರಿಟಿ ವಿಚಾರದಲ್ಲಿ ಮಾತನಾಡುತ್ತಾ ಶರಣ ಗೌಡರು ಜಾತೀಯತೆ ಹೋಗುವುದಿಲ್ಲ ಎಂದು ಹೇಳಿ ದರು. ಇದು ಬಹಳ ವಿಷಾದಕರವಾದ ವಿಚಾರ. ನಮ್ಮ ದೇಶ ನೂರಾರು ಜಾತಿಗಳು, ಸಾವಿರಾರು ತತ್ವಗಳು ಇರತಕ್ಕ ದೇಶ. ಪರಕೀಯರು ನಮ್ಮಲ್ಲಿ ಅನೈಕ್ಯತೆಯನ್ನುಂಟುಮಾಡಿ ತಮ್ಮ ರಾಜ್ಯಭಾರವನ್ನು ನಡೆಸಿದರು. ಅಂತಹ ಪರಿಸ್ಥಿತಿ ಈಗ ಸ್ವಲ್ಪ ಸುಧಾ ರಣೆಯಾಗಿ ಎಲ್ಲರ ಪ್ರತಿನಿಧಿಗಳೂ ಇರತಕ್ಕ ಒಂದು ಸರ್ಕಾರ ರಾಜ್ಯಭಾರ ನಡೆಸಿ ಎಲ್ಲರೂ ಕ್ಷೇಮವಾಗಿ ಇರಬೇಕೆಂದು ಪ್ರಯತ್ನ ಮಾಡುತ್ತಿರುವಾಗ ಆ ರೀತಿ ಹೇಳುವುದು ಸರಿಯಾಗುವುದಿಲ್ಲ.

4 P.M.

ಜಾತಿಮತ ಭೇದ ಮಾಡಿಕೊಂಡು ಲಿಂಗಾಯಿತ ಕೋಮು, ಒಕ್ಕಲಿಗ ಕೋಮು ಎಂದು ಹೇಳಿಕೊಂಡು ರಾಜ್ಯಭಾರ ಮಾಡಿದರೆ ನಿಜವಾಗಿ ರಾಜ್ಯ ಉಳಿಯು ತ್ತದೆಯೇ? ದಕ್ಷತೆ ಇರುತ್ತದೆಯೇ? ಶ್ರೀ ಶರಣ ಗೌಡರು ಹೇಳಿದ ಹಾಗೆ ಜಾತಿಗಳು ಎಲ್ಲಾ ಒಂದೇ, ಭಾರತೀಯರೆಲ್ಲರೂ ಅಣ್ಣತಮ್ಮಂದಿರು ಎನ್ನುವ ಭಾವನೆ ಬರಲೇಬೇಕು. ಇಬ್ಬರ ಕಿತ್ತಾಟಕ್ಕೆ ಕಾರಣ ವಾಗಬಾರದು. The greatest evil of democracy is the tyranny of majority. ಅಲ್ಪಸಂಖ್ಯಾತರ ರಕ್ಷಣೆಗೆ ವಿಶೇಷ ಸಮಿತಿ ನೇಮಿಸ ಬೇಕು. ಅಲ್ಪಸಂಖ್ಯಾತ ಕೋಮಿನ ಪ್ರತಿನಿಧಿಗಳನ್ನು ಒಳಗೊಂಡಂಥ ಸಮಿತಿಯನ್ನು ಮಾಡಿ ಅವರ ಹಿತ ರಕ್ಷಣೆ ಮಾಡಿದರೆ ಆಗ ನಿಜವಾಗಿಯೂ ಅನುಕೂಲ ವಾಗುತ್ತದೆ. ಆ ನಿಲುವನ್ನು ಎಲ್ಲರೂ ಸ್ವಾಗತಿಸು ತ್ತಾರೆ. ಕೋಲಾರದಲ್ಲಿ ತೆಲುಗು ಮಾತನಾಡುವವರು ಬಹಳ ಜನ ಇದ್ದಾರೆ. ಅವರ ತೆಲುಗು ಪಾಠಶಾಲೆ ಗಳೇ ಇಲ್ಲ. ಇದು ಬಹಳ ಅನ್ಯಾಯ. ಭಾಷೆಯ ಸಂಸ್ಕೃತಿಗೆ ಬೆಲೆ ಇಲ್ಲದ ಹಾಗಾಗಿದೆ. ಸರ್ಕಾರ ದವರು ಇದನ್ನು ಗಮನಿಸಬೇಕು. ಇನ್ನುಮೇಲಾ ದರೂ ಅಲ್ಪಸಂಖ್ಯಾತರಿಗೆ ರಕ್ಷಣೆಕೊಟ್ಟು ಅನುಕೂಲ ಮಾಡಿಕೊಡಲಿ.

ಶ್ರೀಮತಿ ಚಂಪಾಬಾಯಿ ಭೋಗಲೆ ಪಿರಜಿ (ಹುಕ್ಕೇರಿ—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಈ ಮೈಸೂರು ರಾಜ್ಯಕ್ಕೆ ಮಂಜೂರಾದ ಹಣಕ್ಕೂ, ಹಾಗು ನಮ್ಮ ಹಿಂದುಳಿದ ವರ್ಗಗಳ ಸಲು ವಾಗಿ ಮಂಜೂರಾದ ಹಣಕ್ಕೂ ಬಹಳ ಅಂತರವಿದೆ, ಇಷ್ಟು ಹಣದಿಂದ ನಮ್ಮ ಹಿಂದುಳಿದ ವರ್ಗಗಳ ಸುಧಾರಣೆಯು 100 ಕ್ಕೆ ಐದರಷ್ಟಾದರೂ ಆಗುವುದೇ ಎಂಬುದು ಸಂಶಯದ ಮಾತಾಗಿದೆ. ಇಡೀ ಮೈಸೂರು ರಾಜ್ಯದ ಹಿಂದುಳಿದ ವರ್ಗಗಳ ಗತಿಯಂತೆಯೇ ನಮ್ಮ ಬೆಳಗಾಂ ಜಿಲ್ಲೆಯ ಹರಿಜನರ ಗತಿಯು ಆಗುವುದು. ಮುಂಬೈ ರಾಜ್ಯದಲ್ಲಿ ಇದ್ದಾಗ ನಾವಂತೂ ತೀರ

ದುರ್ಲಕ್ಷಿಸಲ್ಪಟ್ಟಿದ್ದೆವು. ಮತ್ತು ಈಗ ಹೊಸ ಮೈಸೂರು ರಾಜ್ಯದಲ್ಲಿ ಸೇರ್ಪಡೆಯಾದರೂ ಅದೇಗತಿಯಾಗಿದೆ. ಬೆಳಗಾವ್ ಜಿಲ್ಲೆಯಲ್ಲಿ ಹರಿಜನರು ಸುಮಾರು ಮೂರುವರೆ ಲಕ್ಷದಷ್ಟು ಹಾಗು ಹಿಂದುಳಿದ ವರ್ಗದವರು ಸುಮಾರು ಒಂದೂವರೆ ಲಕ್ಷದಷ್ಟು ಇರಬಹುದು. ಅಂದರೆ ಸುಮಾರು ಐದುಲಕ್ಷ ಹಿಂದುಳಿದ ವರ್ಗದವರು ಇದ್ದಾರೆ. ಈ ಹೊತ್ತು ಅವರ ಪರಿಸ್ಥಿತಿಯನ್ನು ನೋಡಿದರೆ ಯಾವ ಕಲ್ಲೆದೆಯ ಮನುಷ್ಯರಿಗೂ ಕನಿಕರ ಬರದೆ ನಿಲ್ಲದು. ಇಂಥಾ ಜನರ ಕಡೆಗೆ ಸರ್ಕಾರ ಬಹಳ ದುರ್ಲಕ್ಷ್ಯದಿಂದಿದೆ. ಈ ಕಾರಣದ ಮೂಲಕವೇ ಚಿಕ್ಕೋಡಿ ತಾಲ್ಲೂಕಿನಲ್ಲಿ ನಾಳೆ ಏಪ್ರಿಲ್ 14 ನೇ ತಾರೀಖಿಗೆ ಹರಿಜನರು ಬೌದ್ಧಧರ್ಮವನ್ನು ಸಾವಿರಗಟ್ಲೆಯಿಂದ ಸ್ವೀಕರಿಸುವವರಿದ್ದಾರೆ. ಆದ್ದರಿಂದ ದುಸ್ತರ ಆರ್ಥಿಕ ಪರಿಸ್ಥಿತಿಯಲ್ಲಿರುವ ಬೆಳಗಾಂ ಜಿಲ್ಲೆಯ ಹಿಂದುಳಿದ ವರ್ಗದವರಿಗೆ ಹೆಚ್ಚಿಗೆ ಹಣ ಮಂಜೂರು ಮಾಡಿ ಅವರ ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆ ಮಾಡುವಿರೆಂದು ಆಶಿಸುವೆನು. ಕೆಳಗಿನ ನನ್ನ ಸೂಚನೆಗಳನ್ನು ಅಮಲಿನಲ್ಲಿ ತರಬೇಕೆಂದು ಇಚ್ಛಿಸುತ್ತೇನೆ.

ಒಂದನೆಯ ಯೋಜನೆ.–ಪ್ರತಿಯೊಂದು ತಾಲ್ಲೂಕಿಗೆ ಔದ್ಯೋಗಿಕ ಶಾಲೆಗಳನ್ನು ತೆರೆಯುವುದು.

ಬೆಳಗಾಂ ಜಿಲ್ಲೆಯಲ್ಲಿ ಹರಿಜನರ ಹೆಚ್ಚಿಗೆ ಜನಸಂಖ್ಯೆಯಿದ್ದ ತಾಲ್ಲೂಕುಗಳೆಂದರೆ (1) ಚಿಕ್ಕೋಡಿ, (2) ಹುಕ್ಕೇರಿ, (3) ರಾಯಭಾಗ, (4) ಅಥಣಿ ಹಾಗೂ (5) ಗೋಕಾಕ. ಈ ಐದು ತಾಲ್ಲೂಕಿನಲ್ಲಿಯ ಹರಿಜನ ಸಂಖ್ಯೆಯು ಸುಮಾರು ಎರಡುಲಕ್ಷವಾಗಬಹುದು. ಅವರ ಆರ್ಥಿಕ ಪರಿಸ್ಥಿತಿಯು ತೀರ ಚಿಂತಾಜನಕವಾಗಿದೆ. ಅವರ ಸಲುವಾಗಿ ಔದ್ಯೋಗಿಕ ಯೋಜನೆಯನ್ನು ಮಾಡಬೇಕು. ಅವರಿಗೆ ಗ್ರಾಮೋದ್ಯೋಗವನ್ನು ಕಲಿಸುವುದರ ಸಲುವಾಗಿ ಪ್ರತಿಯೊಂದು ತಾಲ್ಲೂಕಿನಲ್ಲಿ ಗ್ರಾಮೋದ್ಯೋಗ ಶಾಲೆಗಳನ್ನು ತೆಗೆದು ಅವರಲ್ಲಿಯ ತರುಣ ತರುಣಿಯರಿಗೆ ಶಿಕ್ಷಣ ಕೊಡಬೇಕು. ಗ್ರಾಮೋದ್ಯೋಗಗಳು ಅದರೆ (1) ಅಂಬರ ಚರಕ, (2) ಬಡಗಿತನ, (3) ಕುಂಬಾರತನ (4) ಗಾಡಿತನ, (5) ಸೋಪು ತಯಾರು ಮಾಡುವುದು, (6) ಎಣ್ಣೆ ತೆಗೆಯುವುದು, (7) ಚರ್ಮವನ್ನು ಹದಗೊಳಿಸುವುದು, (8) ಮೃತ ದನಗಳ ಮಾಂಸದಿಂದ ಗೊಬ್ಬರ ತಯಾರು ಮಾಡುವುದು ಮುಂತಾದ ಉದ್ಯೋಗಗಳನ್ನು ಕಲ್ಪಿಸುವುದು.

ಎರಡನೆಯ ಯೋಜನೆ.—ಪ್ರತಿ ಹತ್ತುಸಾವಿರ ಜನಸಂಖ್ಯೆಗೆ ಒಂದು ಔದ್ಯೋಗಿಕ ಸಹಕಾರಿ ಸಂಘವನ್ನು ಸರ್ಕಾರದವರು ಹರಿಜನ ಸದಸ್ಯರ ಹಾಗೂ ಕಾರ್ಯಕರ್ತರ ಮುಖಾಂತರ ಮಾಡುವುದು.

ಏಳು ಮೈಲಿ ಅಂತರದೊಳಗಿನ ಹಳ್ಳಿಗಳಿಗೊಂದು ಗ್ರಾಮೋದ್ಯೋಗ ಸಹಕಾರಿ ಸಂಘವನ್ನು ತೆರೆಯುವಂತೆ ಪ್ರೋತ್ಸಾಹಿಸಿ ಮೇಲ್ಕಾಣಿಸಿದ ಉದ್ಯೋಗಗಳನ್ನು ಬೆಳೆಸಿ ಅವಕ್ಕೆ ಸಾಕಾಗುವಷ್ಟು ಸಾಲ ಹಾಗೂ ಸಬ್‌ಸಿಡಿಗಳನ್ನು ಕೊಡಬೇಕು. ಹತ್ತು ಸಾವಿರ ಹರಿಜನರದೊಂದು ಕೇಂದ್ರ ಮಾಡಿದರೆ ತಾಲ್ಲೂಕಿನಲ್ಲಿ ಸುಮಾರು ಐದು ಕೇಂದ್ರಗಳಾಗಬಹುದು. ಇದರಂತೆ ಐದು ತಾಲ್ಲೂಕುಗಳಲ್ಲಿ ಯೋಜನೆ ಮಾಡಿದರೆ ಅವರ ಆರ್ಥಿಕ ಪರಿಸ್ಥಿತಿಯು ನಿಜವಾಗಿಯೂ ಸುಧಾರಿಸುವುದು.

ಈಗಾಗಲೆ ಪ್ರಯೋಗವೆಂದು ಒಂದು "ಕಸ್ತೂರಿಬಾ ಮಹಿಳಾ ಔದ್ಯೋಗಿಕ ಸಹಕಾರಿ ಸಂಘ ಭೋಜ" ಎಂಬ ಸಂಸ್ಥೆಯನ್ನು ಸ್ಥಾಪಿಸಿದೆ. ಮತ್ತು ಸದರಿ ಸಂಘದಲ್ಲಿ ಮೇಲ್ಕಾಣಿಸಿದ ಯಾವತ್ತು ಉದ್ಯೋಗಗಳನ್ನು ಮಾಡುವುದು ಗೊತ್ತುಮಾಡಿದೆ. ಇಂಥ ಸಂಘಗಳಿಗೆ ಸಾಕಷ್ಟು ಸಾಲ ಹಾಗು ಸಬ್‌ಸಿಡಿ ಕೊಟ್ಟರೆ ಸದರಿ ಸಂಘಗಳ ಮುಖಾಂತರ ಆರ್ಥಿಕ ಉನ್ನತಿ ಆಗದೆ ಇರದು.

ಮೂರನೆಯ ಯೋಜನೆ.—ಹರಿಜನರ ಪುನರ್ವಸಾಹತಿನ ಬಗ್ಗೆ: ಬೆಚರಾಕ ಹಳ್ಳಿಗಳು ಬೆಳಗಾಂ ಜಿಲ್ಲೆ, ಧಾರವಾಡ ಜಿಲ್ಲೆ, ಹಾಗು ಕಾರವಾರ ಜಿಲ್ಲೆಗಳಲ್ಲಿ ಬೇಕಾದಷ್ಟು ಇವೆ. ಹಾಗೂ ಸರ್ಕಾರಿ ಪಡಭೂಮಿಗಳು, ರೆವಿನ್ಯೂ ಫಾರೆಸ್ಟ್ ಭೂಮಿಗಳು, ಖಾಸಗಿ ಮಾಲಕಿ ಪಡಭೂಮಿಗಳು ಇವೆ. ಆ ಭಾಗದಲ್ಲಿಯ ರೈತರಿಗೆ ಸಾಗುವಳಿಗೋಸ್ಕರ ಸರ್ಕಾರಿ ಪಡಭೂಮಿಗಳನ್ನು ಒಬ್ಬೊಬ್ಬರಿಗೆ 20-30 ಎಕರೆ ಕೊಟ್ಟಿದ್ದು ಬರುತ್ತದೆ. ಖಾಸಗಿ ಭೂಮಿಯಿದ್ದವರ ಕಡೆಗೆ ಸರ್ಕಾರಿ ಪಡಭೂಮಿಯಿದ್ದರೆ ಅವರ ಕಡೆಯಿಂದ ತಿರುಗಿ ತೆಗೆದುಕೊಳ್ಳುವುದು. ಒಂದು ವೇಳೆಯರ ದಿದ್ದರೆ ಅವರಿಗೆ ಎಕನಾಮಿಕ್ ಹೋಲ್ಡಿಂಗ್ ಆಗುವ ಹಾಗೆ ಏಳೆಂಟು ಎಕರೆ ಭೂಮಿಯಿಟ್ಟು ಉಳಿದ ಭೂಮಿಯನ್ನು ತಿರುಗಿ ತೆಗೆದುಕೊಂಡು ಹರಿಜನರ ಪುನರ್ವಸಾಹತು ಮಾಡುವವರಿಗೆ ಕೊಡಬೇಕು. ಇಂಥ ಪ್ರಕರಣಗಳು ಬೆಚರಾಕ ಹಳ್ಳಿಗಳಾದ ಸುರಾಪುರ, ಕೇರವಾಡ, ಬೆಂಡವಾಡ, ರಾಮಪುರ, ಬೂರಣಕಿ, ಮುಂತಾದ ಬೆಳಗಾಂಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿಯ ಹಳ್ಳಿಗಳಲ್ಲಿ ಕಂಡುಬರುತ್ತದೆ. ಇಂಥ ಸ್ಥಳಗಳಲ್ಲಿ ಹರಿಜನರು ಬಂದು ನೆಲೆಸಲು ಸಿದ್ಧವಿದ್ದಾರೆ. ಬೆಳಗಾಂ ಜಿಲ್ಲೆ, ಕಾರವಾರ ಜಿಲ್ಲೆ, ಹಾಗು ಧಾರವಾಡ ಜಿಲ್ಲೆಗಳಲ್ಲಿಯ ಮೇಲೆ ಕಾಣಿಸಿದ ಭೂಮಿಗಳಲ್ಲಿ ಸುಮಾರು 20 ಸಾವಿರ ಜನರನ್ನು ತಂದು ಅಲ್ಲಿ ನೆಲಸುವ ಜವಾಬ್ದಾರಿಯನ್ನು ನಾನು ತಕ್ಕೊಂಡು ಈಗಾಗಲೇ ಮುಖ್ಯಮಂತ್ರಿಗಳ ಕಡೆಗೆ ಒಂದು ಸ್ಕೀಮನ್ನು ಇಟ್ಟಿದ್ದೇನೆ. ಆದರೆ ಆ ಜಿಲ್ಲೆಯ ಕಲೆಕ್ಟರರು ಅದರ ಕಡೆಗೆ ಅಷ್ಟೊಂದು ಲಕ್ಷ್ಯ ಕೊಟ್ಟಂತೆ ಕಾಣಿಸುವುದಿಲ್ಲ. ಆದ್ದರಿಂದ ಬೆಳಗಾಂ ಜಿಲ್ಲೆಯ ಕಲೆಕ್ಟರರು, ಧಾರವಾಡ ಜಿಲ್ಲೆಯ ಕಲೆಕ್ಟರರೂ ಹಾಗೂ ಕಾರವಾರ ಜಿಲ್ಲೆಯ ಕಲೆಕ್ಟರರು ತಮ್ಮ ತಮ್ಮ ಜಿಲ್ಲೆಗಳಲ್ಲಿಯ ಮೇಲ್ಕಾಣಿಸಿದಂತೆ (1) ಬೆಚರಾಕ ಹಳ್ಳಿಗಳ ಯಾದಿ (2) ರೆವಿನ್ಯೂ ಫಾರೆಸ್ಟ್ ಭೂಮಿಗಳ ಯಾದಿ, (3) ಸರ್ಕಾರಿ ಪಡಭೂಮಿಗಳಯಾದಿ, (4) ಖಾಸಗಿ ಮಾಲಕಿ ಪಡಭೂಮಿಗಳ ಯಾಧಿ ತಯಾರು ಮಾಡಿ ಅದನ್ನು ಪುನರ್ವಸಾಹತು ಮಾಡಲು ಹರಿಜನರಿಗೆ ಕೊಡಬೇಕು. ಭೂಮಿ ಸಾಗುವಳಿ ಮಾಡುವುದಕ್ಕೆ ಮತ್ತು ಬೀಜ ಗೊಬ್ಬರ ವಗ್ಯೆರೆ ಅರ್ಧ ಸಾಲ ಹಾಗು ಅರ್ಧ ಸಬ್‌ಸಿಡಿ ರೂಪದಿಂದ ಕೊಡಬೇಕು. ಈಗಾಗಲೇ ಬೆಳಗಾಂಜಿಲ್ಲೆ, ಖಾನಾಪುರ ತಾಲ್ಲೂಕಿನಲ್ಲಿಯ ಬೆಚರಾಕ ಹಳ್ಳಿಗಳಲ್ಲಿ ಸುರಾಪುರ, ಕರೀಕಟ್ಟಿ ಗ್ರಾಮಗಳಲ್ಲಿ ಪುನರ್ವಸಾಹತ ಮಾಡಿ ಒಂಭತ್ತು ವರ್ಷಗಳಾದುವು. ಅದು ಯಶಸ್ವಿಯಾದದ್ದು ನೋಡಿ ಅಲ್ಲಿ ಅದರ ಸುತ್ತಮುತ್ತಲೂ ಬೆಳಗಾಂ ಜಿಲ್ಲೆಯಲ್ಲಿ ಬಂದು ನೆಲೆಸಲು ಸುಮಾರು 20 ಸಾವಿರ ಹರಿಜನರು ಸಿದ್ಧರಿದ್ದಾರೆ. ಇಂಥಾ ಯೋಜನೆಯನ್ನು ಮಂಜೂರು ಮಾಡಿ ಹರಿಜನರ ಜೀವನ ಪ್ರಶ್ನೆಯನ್ನು ಏಕೆ ಬಿಡಿಸಬಾರದು?

ನಾಲ್ಕನೆಯ ಯೋಜನೆ.—ತಾಲ್ಲೂಕಿಗೊಂದು ಹರಿಜನರ ಗಂಡು ಮಕ್ಕಳಿಗೆ ಹಾಗೂ ಹೆಣ್ಣು ಮಕ್ಕಳ ಸಲುವಾಗಿ ಒಂದು ಬೋರ್ಡಿಂಗ್ ಹೋಮ್ ಅನ್ನು ಸರ್ಕಾರದವರು ತೆಗೆಯಬೇಕು ಮತ್ತು ಅವರ ಯಾವತ್ತೂ ಪುಸ್ತಕಗಳ ಖರ್ಚನ್ನಾದರೂ ಅವರು ನೋಡಿಕೊಳ್ಳಬೇಕು.

(ಶ್ರೀಮತಿ ಚಂಪಾಬಾಯಿ ಭೋಗಲೆ ಪಿರಜಿ)

ಐದನೆಯ ಯೋಜನೆ.—ಹರಿಜನರ ಮೂರು ವರ್ಷದ ಮಕ್ಕಳಿಂದ ಹಿಡಿದು ಹದಿನೈದು ವರ್ಷದ ಹುಡುಗರವರೆಗೆ ಹಾಲು, ಹಣ್ಣು ವಗೈರೆ ಕೊಡುವ ಬಗ್ಗೆ.

ಈಗಿನ ಕಠಿಣ ಪರಿಸ್ಥಿತಿಯಲ್ಲಿ ಹಿಂದುಳಿದ ವರ್ಗಗಳ ಹುಡುಗರಿಗೆ ಪೌಸ್ಟಿಕ ಆಹಾರವು ಸಿಗದಂತೆ ಆಗಿದೆ. ಇಂದಿನ ಮಕ್ಕಳೇ ನಾಳಿನ ರಾಜ್ಯಕರ್ತರು ಅಂದ ಬಳಿಕ ಅವರ ಸಲುವಾಗಿ ಏನಾದರೊಂದು ವ್ಯವಸ್ಥೆಯಾಗಬೇಕು. ಆದ್ದರಿಂದ ಅವುಗಳಿಗೆ ಕನಿಷ್ಠ ಹಾಲು ಹಾಗೂ ಹಣ್ಣುಗಳ ಅವಶ್ಯಕತೆಯಿದೆ. ಕಾರಣ ಪ್ರತಿಯೊಂದು ಹಳ್ಳಿಗಳಲ್ಲಿಯ ಮೂರು ವರ್ಷದ ಹುಡುಗರನ್ನು ಹಿಡಿದು 15 ವರ್ಷದ ಹುಡುಗರವರೆಗೆ ಹಾಲು, ಹಣ್ಣಿನ ವ್ಯವಸ್ಥೆಯಾಗಬೇಕು.

ಆರನೆಯ ಯೋಜನೆ.—ವತನಿ ಭೂಮಿಗಳು ಎರಡನೆಯವರ ತಾಬೆಯಲ್ಲಿ ಸಾವಕಾರಿ ನೌಕೆಯಿಂದ ಬಿದ್ದದ್ದು ಸರ್ಕಾರದವರು ಅವುಗಳನ್ನು ಬಿಡಿಸಿಕೊಟ್ಟು ಹೆಚ್ಚಿನ ಅವಧಿಯ ಸಾಲ ಮಂಜೂರು ಮಾಡುವುದು. ಹರಿಜನರ ವತನಿ ಭೂಮಿಗಳು ಸಾಲದಲ್ಲಿ ಎರಡನೆಯವರ ತಾಬೆಯಲ್ಲಿದ್ದದು ಎಷ್ಟೋ ಕಡೆಗೆ ಕಂಡು ಬರುತ್ತಿದೆ. ಅಂಥ ಭೂಮಿಗಳ ಮೇಲೆ ಇದ್ದ ಸಾಲದ ಯಾದಿ ತೆಗೆದು ಅದನ್ನು ತೀರಿಸಿ ವತನಿ ಭೂಮಿಗಳ ಮೂಲಿಕರ ಕಡೆಯಿಂದ ಹೆಚ್ಚು ಮುದ್ದತ್ತಿನ ಅಂದರೆ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಅದನ್ನು ವಸೂಲು ಮಾಡಿಕೊಳ್ಳತಕ್ಕದ್ದು. ಮೇಲೆ ಕಾಣಿಸಿದ ಸೂಚನೆಗಳ ಪರಿಶೀಲನೆ ಮಾಡಿ ಇದಕ್ಕೆ ಬೇಕಾಗುವಷ್ಟು ಹಣವನ್ನು ಹೆಚ್ಚಿಗೆ ಮಂಜೂರುಮಾಡಿ ಸದ್ಯದ ಬಡ್ಜೆಟ್ಟಿನಲ್ಲಿ ಸಮಾವೇಶ ಮಾಡಬೇಕಾಗಿ ನನ್ನ ವಿನಂತಿ. ಮತ್ತು ನನ್ನ ಸೂಚನೆಗಳು ಅಮಲಿನಲ್ಲಿ ಬರುವುದೆಂದು ಆಶಿಸುವೆನು. ಈ ಬಡ್ಜೆಟ್ಟನ್ನು ನಮ್ಮ ಮುಂದಿಟ್ಟಿರುವುದಕ್ಕಾಗಿ ವಂದಿಸುತ್ತೇನೆ.

ಶ್ರೀ ಎಂ. ಕೆ. ಬೊಮ್ಮೇಗೌಡ (ಕೃಷ್ಣರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇಟ್ಟಿರತಕ್ಕ ಬಡ್ಜೆಟ್ಟನ್ನು ಸ್ವಾಗತಿಸುತ್ತಾ ನನ್ನ ಎರಡು ಅಭಿಪ್ರಾಯಗಳನ್ನು ಕೊಡಬೇಕೆಂದು ಬಯಸುತ್ತೇನೆ. ಈ ಬಡ್ಜೆಟ್ಟಿನಲ್ಲಿ ಕಂಡು ಬಂದಿರತಕ್ಕ ಸರ್‌ಪ್ಲಸ್‌ಅನ್ನು ನಾನು ಸ್ವಾಗತಿಸುತ್ತಾ ಈ ಬಡ್ಜೆಟ್ಟನ್ನು ತಯಾರು ಮಾಡಿರತಕ್ಕ ಅರ್ಥ ಸಚಿವರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಏಕೆಂದರೆ ಹತ್ತಾರು ವರ್ಷಗಳಿಂದ ನಮ್ಮ ಬಡ್ಜೆಟ್ಟು ಖೋತಾ ಆಗುತ್ತಿತ್ತು. ಈಗ ಅದು ಸರ್‌ಪ್ಲಸ್ ಬಡ್ಜೆಟ್ ಆಗಿದೆ. ನಮ್ಮ ಅರ್ಥ ಸಚಿವರು ಮತ್ತು ಅದಕ್ಕೆ ಸಂಬಂಧಪಟ್ಟವರು ಬಹಳ ಕಷ್ಟಪಟ್ಟು ನಮಗೆ ಸರ್‌ಪ್ಲಸ್ ಬಡ್ಜೆಟ್ ಮಾಡಿ ಒಂದು ಆಶಾದಾಯಕವಾದ ವಿಷಯವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಆದರೆ ಸರ್ಕಾರದಲ್ಲಿ ನಡೆಯತಕ್ಕ ವಿಧಾನ, ಮತ್ತು ರೀತಿ ನೀತಿ ಇವುಗಳ ವಿಷಯದಲ್ಲಿ ನನ್ನ ಮಿತ್ರರನೇಕರು ಒಂದೆರಡು ಸಲಹೆಗಳನ್ನು ಮಾಡಿದ್ದಾರೆ. ಏಕೀಕರಣವಾದ ಮೇಲೆ ಮೂರು-ನಾಲ್ಕು ಹೊಸ ಪ್ರದೇಶಗಳು ಒಂದು ಆಡಳಿತಕ್ಕೆ ಬಂದು ಸೇರಿರುತ್ತವೆ. ಹೀಗೆ ಮೂರು ನಾಲ್ಕು ಭಾಗಗಳ ಅಧಿಕಾರಿಗಳೂ ಮತ್ತು ನೌಕರವರ್ಗದವರುಗಳೂ ಒಂದು ಕಡೆ ಬಂದು ಸೇರಿದ ಮೇಲೆ ಅವರ ಮತ್ತು ಹಳೆಯ ಮೈಸೂರಿನ ಅಧಿಕಾರಿಗಳ ಹಾಗೂ ನೌಕರರ ಸಂಬಳ ಸಾರಿಗೆಗಳಲ್ಲಿ ತುಂಬ ವ್ಯತ್ಯಾಸವಾಗಿ, ಹೆಚ್ಚು ಕಡಮೆಯಾಗಿರುವುದರಿಂದ ಈ ದಿವಸ ಸರ್ಕಾರಿ ನೌಕರ ವರ್ಗದಲ್ಲಿ ಒಂದು ಅತೃಪ್ತಿ ಹುಟ್ಟಿ ಸರ್ಕಾರಿ ಕೆಲಸ ಕಾರ್ಯಗಳನ್ನು ನಡೆಸುವ ಬಗ್ಗೆ ದಕ್ಷತೆ ಬಹಳಮಟ್ಟಿಗೆ ಕಡಮೆಯಾಗಿರುತ್ತೆಂದು ಹೇಳುತ್ತೇನೆ. ಈ ವ್ಯತ್ಯಾಸವನ್ನು ಎಷ್ಟು ಜಾಗ್ರತೆ ಸರಿಪಡಿಸಿದರೆ ಅಷ್ಟು ದೇಶಕ್ಕೆ ಕ್ಷೇಮ ಉಂಟು. ಸರಕಾರದವರು ಎಲ್ಲ ದರ್ಜೆಗಳ ನೌಕರರಿಗೂ ಒಂದು ಯೂನಿಫಾರಂ ಸ್ಕೇಲನ್ನು ಜಾರಿಗೆ ತಂದು ಅವರಲ್ಲಿ ಈದಿವಸ ಉಂಟಾಗಿರತಕ್ಕ ಅತೃಪ್ತಿ ಅಸಮಾಧಾನಗಳನ್ನು ಹೋಗಲಾಡಿಸುವುದಕ್ಕೆ ಪ್ರಯತ್ನಪಡಬೇಕೆಂದು ಹೇಳುತ್ತೇನೆ. ಎಲ್ಲಿಯವರೆಗೆ ಸರ್ಕಾರ ಈ ನ್ಯೂನತೆಯನ್ನು ಸರಿಪಡಿಸುವುದಿಲ್ಲವೋ ಅಲ್ಲಿಯವರೆಗೂ ಸರ್ಕಾರಿ ಕಾರ್ಯ ಕಲಾಪಗಳ ನಡವಳಿಕೆಯಲ್ಲಿ ದಕ್ಷತೆಯ ಶೂನ್ಯತೆ ಹೋಗುವುದಿಲ್ಲವೆಂದು ಹೇಳುತ್ತೇನೆ. ಒಂದೇ ರೂಮಿನಲ್ಲಿ ಅಕ್ಕಪಕ್ಕದಲ್ಲಿ ಕುಳಿತು ಒಂದೇ ಕೆಲಸ ಮಾಡತಕ್ಕ ಇಬ್ಬರು ನೌಕರರಲ್ಲಿ ಒಬ್ಬನಿಗೆ 100–200 ರೂಪಾಯಿಗಳನ್ನು ಕೊಟ್ಟು ಮತ್ತೊಬ್ಬನಿಗೆ 75 ರೂಪಾಯಿಗಳನ್ನು ಕೊಟ್ಟರೆ ಹುಟ್ಟುವಂಥ ಆ ಒಂದು ಮಾನಸಿಕ ರೋಗವನ್ನು ನಿವಾರಣೆ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಸರ್ಕಾರದವರು ಆದಷ್ಟು ಬೇಗ ಒಂದು ಯೂನಿಫಾರಂ ಸಂಬಳದ ಸ್ಕೇಲನ್ನು ಜಾರಿಗೆ ತಂದು ಅವರವರ ಸೀನಿಯಾರಿಟಿಯಂತೆ ಅವರಿಗೆ ಬಡ್ತಿಗಳನ್ನು ನಿರ್ಧರಿಸತಕ್ಕದ್ದು ಬಹಳ ಮುಖ್ಯವಾದ ಕೆಲಸ. ಇದರಿಂದ ದೇಶದಲ್ಲಿ ದಕ್ಷತೆಗೆ ಮತ್ತು ನ್ಯಾಯಕ್ಕೆ ತಾವು ಒಂದು ಅವಕಾಶವನ್ನು ದೊರಕಿಸಿಕೊಟ್ಟ ಹಾಗಾಗುತ್ತದೆ. ನೌಕರವರ್ಗದಲ್ಲಿ ದಕ್ಷತೆಯನ್ನುಳಿಸುವುದಕ್ಕೆ ಇರತಕ್ಕದ್ದು ಇದೊಂದೇ ಮಾರ್ಗ. ಇನ್ನು ಹಳೆಯ ಮೈಸೂರಿನಲ್ಲಿರತಕ್ಕ ಅನೇಕ ಒಂದನೇ ಡಿವಿಜನ್ ಮತ್ತು ಎರಡನೆಯ ಡಿವಿಜನ್ ನೌಕರರಿಗೆ ಇನ್ನೂ ಕನ್‌ಫರ್ಮೇಷನ್ನೇ ಆಗಿಲ್ಲ. ಅವರಿಗೆ ಬೇಗ ಕನ್‌ಫರ್ಮ್ ಮಾಡಿ ಅವರಿಗೆ ದೊರೆಯಬಹುದಾದ ಪ್ರಮೋಷನ್ ಇತ್ಯಾದಿಗಳನ್ನು ಒದಗಿಸಬೇಕೆಂದು ಹೇಳುತ್ತೇನೆ.

ಇನ್ನು ಪಬ್ಲಿಕ್ ವರ್ಕ್ಸ್ ಇಲಾಖೆ ವಿಚಾರ. ಪಬ್ಲಿಕ್ ವರ್ಕ್ಸ್ ಇಲಾಖೆ ಎಂದರೆ ದೇಶದಲ್ಲಿ ಒಂದು ಬಹಳ ಮುಖ್ಯ ಪಾತ್ರವನ್ನು ವಹಿಸಿ ವಹಿವಾಟ ನಡೆಸುವಂಥಾ ಇಲಾಖೆ. ನಮ್ಮ ದೇಶ ಪುನರ್ರಚಿತವಾಗಬೇಕಾಗಿದ್ದರೆ ಈ ಇಲಾಖೆ ಬಹಳ ದಕ್ಷತೆಯಿಂದ ಕೆಲಸ ಮಾಡಬೇಕಾಗಿದೆ. ಆದರೆ ಈಗ ಆ ರೀತಿ ಮಾಡುತ್ತಿಲ್ಲವೆಂದು ಅರ್ಥವಲ್ಲ, ಈಗಲೂ ಮಾಡುತ್ತಿದೆ. ಈ ದಿವಸ ಈ ಇಲಾಖೆಯಲ್ಲಿ ಯಾವುದಾದರೊಂದು ಕಾರ್ಯವನ್ನು ನಡೆಸಬೇಕಾಗಿದ್ದರೆ ಆ ಬಗ್ಗೆ ಟೆಂಡರನ್ನು ಕರೆದು ಆ ಪೈಕಿ ಯಾರು ತೀರಾ ಕಡಮೆ ಮೊಬಲಗಿನಲ್ಲಿ ಕೆಲಸ ನಡೆಸಲು ತಯಾರಾಗಿರುತ್ತೇವೆಂದು ಟೆಂಡರ್ ಹಾಕಿರುತ್ತಾರೋ ಅಂಥವರಿಗೆ ಆ ಕೆಲಸ ಕೊಡತಕ್ಕ ಪದ್ಧತಿ ಇದೆ. ಆದರೆ ಟೆಂಡರ್ ಹಾಕತಕ್ಕ ಜನರು ಆ ಕೆಲಸವನ್ನು ಆದಷ್ಟು ಕಡಮೆ ವೆಚ್ಚದಲ್ಲಿ ಮಾಡಬೇಕೆಂಬ ಉದ್ದೇಶದಿಂದ ಲೋಯೆಸ್ಟ್ ರೇಟನ್ನು ಹಾಕುವುದಿಲ್ಲ. ತನಗೆ ಆ ಕೆಲಸ ಏನಾದರೂ ಆಗಲಿ ಸಿಕ್ಕಲೇಬೇಕೆಂಬ ಉದ್ದೇಶ ಮತ್ತು ಒಂದು ಸ್ವಾರ್ಥ ಸಾಧನೆಯ ದೃಷ್ಟಿಯಿಂದ ಆ ವೆಚ್ಚದಲ್ಲಿ ಆ ಕಾರ್ಯ ನಡೆಸಲು ಸಾಧ್ಯವಿಲ್ಲವೆಂದು ಕಂಡು ಬಂದಿದ್ದಾಗ್ಗೂ ಬೇಕೆಂತಲೇ ಲೋಯೆಸ್ಟ್ ಟೆಂಡರನ್ನು ಹಾಕುತ್ತಾರೆ. ಲಾಭ ಬರದಿದ್ದರೆ ಹೋಗಲಿ, ಗಂಟನ್ನು ಕಳೆದುಕೊಳ್ಳುವುದಕ್ಕೆ ಯಾರು ತಾನೆ ಇಷ್ಟಪಡುತ್ತಾರೆ? ಅದಕ್ಕಾಗಿ ಕಂಟ್ರಾಕ್ಟರುಗಳು ಒಂದು ಮಾರ್ಗವನ್ನು ಗೊತ್ತುಮಾಡಿಕೊಂಡಿದ್ದಾರೆ. ಟೆಂಡರ್ ಹಾಕುವಾಗ ಮತ್ತೊಬ್ಬ ನ್ಯಾಯವಾಗಿ ಕೆಲಸ ಮಾಡತಕ್ಕವನಿಗೆ ದೊರೆಯಲಿದ್ದ ಕೆಲಸವನ್ನು ಏನಾದರೂ ಮಾಡಿ ಸುಳ್ಳೋ ಪೊಳ್ಳೋ ಹೇಳಿ ನಾನು ಇಷ್ಟು ಕಡಮೆ ದರದಲ್ಲೇ ಮಾಡುತ್ತೇನೆಂದು ಮೊದಲು ಕೆಲಸವನ್ನು ಒಪ್ಪಿಕೊಂಡುಬಿಡುತ್ತಾರೆ. ಅನಂತರ ಆದರಲ್ಲಿ

ಇಲಾಖೆಯ ನೌಕರರೊಂದಿಗೆ ಹೊಂದಾವಣಿಕೆಯಾಗಿ ಇಬ್ಬರೂ ಸೇರಿ ಗಂಟನ್ನು ಹೊಡೆದುಬಿಡುತ್ತಾರೆ. ನೆಪಮಾತ್ರಕ್ಕೆ ಅಲ್ಲಿ ಕೆಲಸ ಮಾಡಿದಂತೆ ತೋರಿಸಿ ಬಿಡುತ್ತಾರೆ. ಹೀಗಾಗಿ ಅವರು ನಡೆಸುವಂಥ ಕಾರ್ಯಗಳು ಕೇವಲ ಎರಡು-ಮೂರು ವರ್ಷಗಳಲ್ಲೇ ಹಾಳಾಗಿ ಹೋಗುತ್ತಿವೆ. ಈ ಒಂದು ನ್ಯೂನತೆಯನ್ನು ಹೋಗಲಾಡಿಸಲು ಸರ್ಕಾರಕ್ಕೆ ನನ್ನದೊಂದು ಸಲಹೆ ಯಿದೆ. ಅದೇನೆಂದರೆ—ಈ ದಿವಸ ಈ ಕೆಲಸ ಕಾರ್ಯ ಗಳನ್ನು ಟೆಂಡರ್ ಮೂಲಕ ವ್ಯಕ್ತಿಗಳಿಗೆ ಕೊಡುವು ದನ್ನು ತಪ್ಪಿಸಿ ಯಾವುದಾದರೂ ಒಂದು ಸಹಕಾರ ಸಂಸ್ಥೆಯ ಮೂಲಕ ಇಲ್ಲವೇ ಒಂದು ಸಂಘದ ಮೂಲಕ ನಡೆಸುವಂತೆ ಒಂದು ಏರ್ಪಾಡನ್ನು ಮಾಡಿದರೆ ಬಹಳ ಉತ್ತಮವಾಗಿರುತ್ತದೆಯೆಂದು ನನ್ನ ಸಲಹೆ. ಇದು ನನ್ನ ಅಭಿಪ್ರಾಯ. ವ್ಯಕ್ತಿಗಳಿಗೆ ಕೊಡತಕ್ಕ ವಿಚಾರ ದಲ್ಲಿ ಪೈಪೋಟಿ ಜಾಸ್ತಿ ಇದೆ. ಈ ದಿವಸ ಎಲ್ಲರಂತೆ ನಾವೂ ಕೂಡ ಏನಾದರೊಂದು ಉದ್ಯೋಗ ಮಾಡ ಬೇಕು, ಎಲ್ಲರಂತೆ ನಾವೂ ಕೂಡ ಸುಖವಾಗಿ ಬದುಕ ಬೇಕು ಎನ್ನತಕ್ಕ ಆಸೆ ಆಕಾಂಕ್ಷೆಗಳು ಜನರಲ್ಲಿರತಕ್ಕದ್ದು ಸ್ವಾಭಾವಿಕ. ಈ ಒಂದು ಆಶೋತ್ತರದಿಂದ ಕೆಲಸಗಳು ನಮಗೇ ದೊರೆಯಲಿ ಎಂಬ ಭಾವನೆಯಿಂದ ಲೋಯೆಸ್ಟ್ ಟೆಂಡರುಗಳನ್ನು ಹಾಕುತ್ತಿದ್ದಾರೆ. ಆದರೆ ಹಾಗೆ ಲೋಯೆಸ್ಟ್ ಟೆಂಡರ್ ಹಾಕಿದ್ದಕ್ಕಾಗಿ ತಮ್ಮ ಗಂಟನ್ನು ಕಳೆದುಕೊಂಡು, ಪಾಪರ್ ಆಗುವು ದಕ್ಕೆ ಯಾರಿಗೂ ಇಷ್ಟವಿಲ್ಲ. ಆದರೆ ಸರಿಯಾಗಿ ಕೆಲಸ ಮಾಡುವ ಮತ್ತೊಬ್ಬನಿಗೆ ಇರತಕ್ಕಂಥಾ ಅವ ಕಾಶವನ್ನು ಮಾತ್ರ ತಪ್ಪಿಸುತ್ತಿದ್ದಾರೆ. ಆದುದರಿಂದ ಈ ಕೆಲಸಗಳನ್ನು ಸಂಘ—ಸಂಸ್ಥೆಗಳ ಮೂಲಕ ನಡೆಸ ಬೇಕೆಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನು ನಮ್ಮ ಕ್ಷೇತ್ರದಲ್ಲಿ ಹೇಮಾವತಿ ನದಿ ಹರಿಯು ತ್ತಿದೆ. ಈ ನದಿಗೆ ಮಂದಗೆರೆಯ ಬಳಿ ಅಥವಾ ಅದಕ್ಕೆ ಸಮೀಪದಲ್ಲಿ ಒಂದು ಅಡ್ಡಗಟ್ಟೆಹಾಕಿ ನೀರನ್ನು ವ್ಯವ ಸಾಯಕ್ಕೆ ಒದಗಿಸುವ ಬಗ್ಗೆ ಹೋದ ಸಾಲಿನ ಬಡ್ಜೆಟ್ಟಿ ನಲ್ಲಿ ಹಣವನ್ನೊದಗಿಸಲಾಗಿದ್ದಿತು. ಆದಾಗ್ಯೂ ಸರ ಕಾರ ಆ ಕೆಲಸವನ್ನು ಇದುವರೆಗೂ ಕೈಗೊಂಡಿಲ್ಲ. ಇದಕ್ಕೆ ಕಾರಣವೇನೆಂಬುದು ಗೊತ್ತಾಗಲಿಲ್ಲ. ಹಣ ಒದಗಿಸಿದ್ದರೂ ಈ ಕೆಲಸ ಹೀಗೇಕಾಯಿತು ಎನ್ನು ವುದೇ ಗೊತ್ತಾಗುತ್ತಿಲ್ಲ. ಇಲಾಖೆಯವರದೇನೂ ತೊಂದರೆಯಿಲ್ಲ. ಹಿಂದಿನ ವರ್ಷದ ಬಡ್ಜೆಟ್‌ನಲ್ಲಿ ಒಂಬತ್ತು ಲಕ್ಷ ರೂಪಾಯಿಗಳನ್ನೊದಗಿಸಲಾಗಿದ್ದಿತು. ಆದರೂ ಈ ಕೆಲಸ ಕೈಗೊಂಡಿಲ್ಲ. ಇದು ಬಹಳ ಶೋಚನೀಯವಾದ ವಿಚಾರ. ಆದರೆ ಈ ವರ್ಷವಾ ದರೂ ಅದನ್ನೂ ಕಾರ್ಯಗತ ಮಾಡುವರೆಂದು ನಂಬಿ ದ್ದೇನೆ. ನಮ್ಮ ತಾಲ್ಲೂಕಿನಲ್ಲಿ ಇನ್ನೂ ಎರಡು ಕಾವೇರಿ ಮತ್ತು ಹೇಮಾವತಿ ಎಂಬ ನದಿಗಳು ಹರಿಯು ತ್ತಿವೆ. ಈ ನದಿಗಳು ಈ ತಾಲ್ಲೂಕಿನಲ್ಲಿ ಹರಿದುಹೋಗಿ ಕನ್ನಂಬಾಡಿ ಕಟ್ಟೆಯನ್ನು ಸೇರುತ್ತವೆ. ಕನ್ನಂಬಾಡಿ ಕಟ್ಟೆಯಿಂದ ನೀರು ಮುಳುಗಡೆಯಾಗಿರುವಂಥಾ ಪ್ರದೇಶ ನಮ್ಮ ತಾಲ್ಲೂಕಿಗೆ ಸೇರಿದ್ದು. 34 ಗ್ರಾಮಗಳು ಬೇರೆ ಮುಳುಗಡೆಯಾಗಿವೆ. ಏನೋ ಅವರಿಗೆ ಒಂದು ಕಾಂಪೆನ್‌ಸೇಷನ್ನನ್ನೂ ಕೊಟ್ಟರು. ಆ ದುಡ್ಡನ್ನೆಲ್ಲಾ ಆ ಜನರು ತಿಂದೂ ಉಂಡೂ ಈ ದಿವಸ ಪಾಪರಾಗಿ ದ್ದಾರೆ. ಒಂದಾನೊಂದು ಕಾಲದಲ್ಲಿ ಅವರೆಲ್ಲರೂ ಬಹಳ ವೈಭವದಿಂದ ಮೆರೆಯುತ್ತಿದ್ದಂಥ ಜನ. ಈ ದಿವಸ ಅವರು ಬೀದಿಯ ಭಿಕಾರಿಗಳಾಗಿದ್ದಾರೆ. ಈ ಜನರು ಆ ದಿವಸ ತಮ್ಮ ಕೈಗೆ ಬಂದ ದುಡ್ಡನ್ನು ಯಾವ ರೀತಿ ಉಪಯೋಗಿಸಬೇಕೆಂಬುದು ಗೊತ್ತಿ ಲ್ಲದೆ ಅದನ್ನು ಕಳೆದುಕೊಂಡು ಈ ದಿವಸ ಅವರು ಪಾಪ ರಾಗಿದ್ದಾರೆ, ಭಿಕಾರಿಗಳಾಗಿದ್ದಾರೆ. ಈ ದಿವಸವಾ ದರೂ ಸರ್ಕಾರದವರು ತಮ್ಮ ಮನಸ್ಸು ಮಾಡಿದರೆ ನಮ್ಮಲ್ಲಿ ಹರಿಯತಕ್ಕ ಜೀವ ನದಿಗಳಲ್ಲಿ ಹರಿಯುತ್ತಿರುವ ನೀರನ್ನು ಬಳಸುವಂಥಾ ಒಂದು ಯೋಜನೆಯನ್ನು ಮಾಡಿ ಆ ನಿರ್ಗತಿಕರಾದಂಥಾ ಜನಗಳಿಗೆ ಒಂದು ಅವ ಕಾಶ ಕಲ್ಪಿಸಿಕೊಟ್ಟರೆ, ನೀರನ್ನು ಒದಗಿಸಿಕೊಟ್ಟರೆ ಅವರು ಸುಖವಾಗಿ ಜೀವನ ಮಾಡುವುದಕ್ಕಾದರೂ ಒಂದು ಅವಕಾಶವಾಗುತ್ತದೆ. ಇಂಥಾ ವಿಚಾರಗಳ ಕಡೆ ಸರ್ಕಾರ ಮನಸ್ಸನ್ನು ಮಾಡದೆ ಇರುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತಿದೆ. ಬೇಕಾ ದಷ್ಟು ನೀರಿನ ಸೌಕರ್ಯವಿದೆ, ಜಮೀನಿದೆ. ಇಷ್ಟೆಲ್ಲಾ ಇದ್ದರೂ ಸರಕಾರದವರು ಜನಗಳಿಗೆ ಈ ಭಾಗದಲ್ಲಿ ಒಂದು ಅನುಕೂಲಮಾಡಿಕೊಡಲು ಒಂದು ಚೂರು ಕೂಡ ನಿಗಾ ತೆಗೆದುಕೊಳ್ಳದೆ ಉದಾಸೀನದಿಂದ ಇರು ವಾಗ ನಮ್ಮ ಪಾಲಿಗೆ ಸರ್ಕಾರ ಎನ್ನುವುದು ಇದೆಯೋ ಇಲ್ಲವೋ ಎನ ತಕ್ಕ ಒಂದು ಮನೋಭಾವ ಅವರಲ್ಲಿ ಏಕೆ ಹುಟ್ಟಬಾರದು ? ಆ ಜನರ ಮನಸ್ಸು ಹೀಗೆ ಮಾಡಿದರೆ ದುಃಖ ಪಡುವುದಿಲ್ಲವೇ? ಆದುದರಿಂದ ಸರ್ಕಾರದವರು ಈಗಲಾದರೂ ತಮ್ಮ ಮನಸ್ಸು ಮಾಡಿ ಯಾವ ಯಾವ ಕಡೆಗಳಲ್ಲಿ ಏನೇನು ಜನರಿಗೆ ಅನುಕೂಲವಾಗತಕ್ಕಂಥ ದೇಶಾಭಿವೃದ್ಧಿ ಕಾರ್ಯಗಳನ್ನು ಮಾಡಬಹುದೋ ಅವು ಗಳನ್ನು ನಡೆಸಲು ಒಂದು ಅವಕಾಶ ಕಲ್ಪಿಸಿಕೊಡ ಬೇಕೆಂದು ಹೇಳುತ್ತೇನೆ. ಈ ದಿವಸ ಇರುವಂಥಾ ನಾಲೆಗಳನ್ನು ಇನ್ನೂ ಮುಂದುವರಿಸಿದರೆ ಸಾವಿರಾರು ಎಕರೆ ತರಿಜಮೀನಾಗಿ ಅದರಿಂದ ಅನೇಕರಿಗೆ ಅನು ಕೂಲವಾಗುತ್ತದೆ. ಈ ತೆರನಾದ ಕಾರ್ಯಗಳನ್ನು ಮಾಡಿ ಜನರಿಗೆ ಅನುಕೂಲ ಮಾಡಬೇಕೆಂದು ಹೇಳು ತ್ತೇನೆ.

ಇನ್ನು ರಸ್ತೆ ಸಂಚಾರ ಸೌಲಭ್ಯಗಳ ವಿಚಾರ. 1949ರಲ್ಲಿ ನಮ್ಮಲ್ಲಿ ಚಿನಕುರ್ಳಿ—ಅಕ್ಕಿಹೆಬ್ಬಾಳ-ಮಾರ್ಗ ವಾಗಿ ಕೃಷ್ಣರಾಜಪೇಟೆಗೆ ಒಂದು ರಸ್ತೆಯನ್ನು ಮಾಡಿ ದ್ದಾರೆ. ಈಗ ರೋಡ್ ಫಾರಂ ಆಗಿದೆ. ವರ್ಷೆ ವರ್ಷೆ ಅಲ್ಲ ಮೈಲೇಜ್ ಪ್ರಕಾರ ರಸ್ತೆ ರಿಪೇರಿಗಾಗಿ ತಗ ಲುವ ಛಾರ್ಜನ್ನು ಕೊಡುತ್ತಿದ್ದಾರೆ. ಈ ಬಗ್ಗೆ ಕೇಂದ್ರ ಸರ್ಕಾರದ ಫಂಡ್ ಬೇರೆ ಇದೆ.

[MR. DEPUTY SPEAKER in the Chair]

ಇದುವರೆಗೂ ಇದಕ್ಕೆ ಒಂದು ಚೂರು ಕೆಲಸವನ್ನೂ ಮಾಡದೆ, formation ಆದ ರಸ್ತೆಯಲ್ಲಿ ಖಾಲಿ ಗಾಡಿ ಕೂಡ ಹೋಗುವುದಕ್ಕಾಗದಹಾಗಿದೆ. ಇದನ್ನು ಎಷ್ಟೋ ಸಾರಿ ಸೆಕ್ರೆಟೆರಿಯವರೇ ಚೀಫ್ ಎಂಜಿನಿಯ ರಿಗೆ, ಸೂಪರಿಂಟೆಂಡಿಂಗ್ ಎಂಜಿನಿಯರಿಗೆ ಹೇಳಿದ್ದಾ ಯಿತು. ಆದರೂ ಇದುವರೆಗೂ ಯಾವ ಕೆಲಸಕಾರ್ಯ ವನ್ನೂ ಮಾಡಿಸಿಲ್ಲ. ಇನ್ನಾದರೂ ತಾವು ಅವರಿಗೆ ಸ್ವಲ್ಪ ನಿಗಾ ಕೊಡುವಂತೆ ಹೇಳಬೇಕೆಂದು ಕೇಳಿಕೊ ಳ್ಳುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಯಾವ ರಸ್ತೆ ?

ಶ್ರೀ ಎಂ. ಕೆ. ಬೊಮ್ಮೇಗೌಡ.—ಚಿನಕುರಳಿ-ಅಕ್ಕಿ ಹೆಬ್ಬಾಳು—ಕೃಷ್ಣರಾಜಪೇಟೆ ರಸ್ತೆ.

ಆಮೇಲೆ, ಡಿಪಾರ್ಟ್‌ಮೆಂಟಲ್ ರೋಡು. ಕೃಷ್ಣ ರಾಜಸಾಗರ, ಬೂಬಿನಕೆರೆ, ಮಾಚಿನಕೋಟೆ ಮಾರ್ಗ ವಾಗಿ ಒಂದು ರೋಡ್ ಇದೆ. ಇದು departmental road ಆದರೂ, ಮತ್ತು ರೋಡ್ ಆಗಿ ಹತ್ತಾರು ವರ್ಷಗಳಾಗಿದ್ದರೂ ರಿಪೇರಿಯಿಲ್ಲದೆ ಶಿಥಿಲವಾಗಿದೆ. ಅಧಿಕಾರಿವರ್ಗದವರ ಕೆಲಸ ಬಹಳ ನಿಧಾನವಾಗಿದೆ,

(ಶ್ರೀ ಎಂ. ಕೆ. ಬೊಮ್ಮೇಗೌಡ)

ಕೆಲಸಕಾರ್ಯಗಳನ್ನೇ ಮಾಡುತ್ತಿಲ್ಲ. ಈಗ ಎರಡು ಮೂರು ವರ್ಷಗಳಿಂದಲೂ ಡಿಸ್ಟ್ರಿಕ್ಟ್ ಬೋರ್ಡಿನವರು ಈ ರಸ್ತೆಯನ್ನು ಮಾಡಿ, ಮಾಡಿ, ಎಂದು ಡಿ.ಸಿ.ಯವರಿಗೂ, ಚೀಫ್ ಎಗ್ಸಿಕ್ಯೂಟಿವ್ ಆಫೀಸರಿಗೂ ಹೇಳಿದರೂ ಅವರು ಏನೂ ಮಾಡದೆ ಹಾಗೆಯೇ ಬಿಟ್ಟಿದ್ದಾರೆ. ಅಮೇಲೆ ಇನ್ನೊಂದು ಶ್ರವಣಬೆಳಗೊಳ, ಚನ್ನರಾಯಪಟ್ಟಣ ಮಾರ್ಗವಾಗಿ ಕೃಷ್ಣರಾಜಪೇಟೆಯ ಮೇಲೆ ಹೋಗುವ ರಸ್ತೆ. ಇದುವರೆಗೂ ಇದನ್ನ ಈ ಇಲಾಖೆಯವರು ನೋಡಿಲ್ಲ. ಇದನ್ನುಮಾಡಿದರೆ, ಜನರಿಗೆ ಹೋಗಿಬರುವುದಕ್ಕೆ ಬಹಳ ಅನುಕೂಲವಾಗುತ್ತದೆ. ತಾವು ದಯವಿಟ್ಟು ಮಾಡಿಕೊಡಬೇಕು.

ಇನ್ನೊಂದು ವಿಷಯ. ರೆವಿನ್ಯೂ ಇಲಾಖೆಯಲ್ಲಿ ಈಗ 10-15 ವರ್ಷಗಳ ಹಿಂದೆ ಕಂಟ್ರೋಲ್ ಜಾರಿಗೆ ಬಂದಿದ್ದಾಗ ಎಷ್ಟೋ ಜನಗಳನ್ನು ಎಸ್.ಎಸ್.ಎಲ್.ಸಿ. ಆಗಿಲ್ಲದವರನ್ನು ರೆವಿನ್ಯೂ ಇನ್ಸ್‌ಪೆಕ್ಟರಾಗಿ ತೆಗೆದುಕೊಂಡಿರಿ. 10-15 ವರ್ಷಗಳು ಅವರು ರೆವಿನ್ಯೂ ಇನ್ಸ್‌ಪೆಕ್ಟರುಗಳಾಗಿ ಕೆಲಸ ಮಾಡಿದಮೇಲೆ, ಈಗ ಅವರನ್ನು ಸೆಕೆಂಡ್ ಡಿವಿಜನ್ ಗುಮಾಸ್ತರಾಗಿ revert ಮಾಡಿರುವಿರಿ. ಇದು ಧರ್ಮವೇ ? ನ್ಯಾಯವೇ ? ಈ ಬಗ್ಗೆ ಮನವಿ ರೆವಿನ್ಯೂ ಮಂತ್ರಿಗಳಲ್ಲಿಗೆ ಈಗ ಬಂದಿದೆಯೆಂದು ಕೇಳಿದ್ದೇನೆ. ಮಾನ್ಯಮಂತ್ರಿಗಳು P.S.C. ಯವರಿಗೆ ಕಳುಹಿಸಿಕೊಡುತ್ತೇವೆಂದು ಹೇಳಿದ್ದರು. P.S.C.ಯವರು ತಮ್ಮ ಅಭಿಪ್ರಾಯವನ್ನು ಕೊಡುತ್ತಾ, ಯಾರುಯಾರು ರೆವಿನ್ಯೂ ಇನ್ಸ್‌ಪೆಕ್ಟರಾಗಿ ಕೆಲಸ ಮಾಡಿದ್ದಾರೋ ಅವರನ್ನು ಹಾಗೆಯೇ confirm ಮಾಡಬೇಕೆಂದು ಹೇಳಿದರೂ, ಅದನ್ನು ನೀವು ಅನುಸರಿಸದೆ ಅವರನ್ನು ಸತಾಯಿಸಿ ಕೈಬಿಟ್ಟಿರುತ್ತೀರಿ. ಇದು ಬಹಳ ಅನ್ಯಾಯ. ಅವರುಗಳು revertಆಗಿ ಇಂದು ಮನೆಯಲ್ಲಿದ್ದಾರೆ. ಅವರ ಕಷ್ಟವನ್ನು ಗಮನದಲ್ಲಿಟ್ಟುಕೊಂಡು ಅವರನ್ನು ರೆವಿನ್ಯೂ ಇನ್ಸ್‌ಪೆಕ್ಟರಾಗಿ ಮಾಡಿ ಸಹಾಯಮಾಡಬೇಕೆಂದು ನಾನು ಹೇಳುತ್ತೇನೆ.

ಗೋಮಾಳಗಳ ವಿಷಯದಲ್ಲಿ ಒಂದು ಮಾತು ಹೇಳಬಯಸುತ್ತೇನೆ. ಗೋಮಾಳವೆಂಬುದು ಊರು ಊರಿಗೂ ಅಗತ್ಯವಿದೆ. ದನಕರುಗಳು ಜಾನವಾರುಗಳು ಅಭಿವೃದ್ಧಿಯಾಗಬೇಕೆಂದು ಹೇಳುತ್ತೀರಿ. ಎಣ್ಣೆಹೊಳೆಕೊಪ್ಪಲು, ಚೆಲುಬಸವನಕೊಪ್ಪಲು ನದಿಯ ಹತ್ತಿರವಿರತಕ್ಕ ಸ್ಥಳಗಳು. ದರಖಾಸ್ತಿಗೆ ಅಲ್ಲಿನ ಗೋಮಾಳ ಕೇಳಿದಾಗ, ಕೊಡಕೂಡದೆಂದು ರಿಕಾರ್ಡ್ ಬೆಳೆಸಿದರು, ಅದು ರೆವಿನ್ಯೂ ಕಮಿಷನರಿಗೆ ಹೋದಾಗ ಅವರೂ ಅದನ್ನೇ ಪುರಸ್ಕರಿಸಿದರು. ಆದರೆ ಆ ರೆವಿನ್ಯೂ ಕಮಿಷನರು ಹೋದರು, ಇನ್ನೊಬ್ಬ ರೆವಿನ್ಯೂ ಕಮಿಷನರು ಬಂದರು. ಮತ್ತೆ ಅದೇ ಜಮೀನಿಗೆ, ಹೊಸದಾಗಿ ಬಂದ ರೆವಿನ್ಯೂ ಕಮಿಷನರು ಹಿಂದಿನ ರೆವಿನ್ಯೂ ಕಮಿಷನರು ಮಾಡಿದ ಆರ್ಡರನ್ನಾಗಲಿ, ಆ ಊರಿಗೆ ಗೋಮಾಳದ ಅಗತ್ಯವಿದೆಯೆಂಬುದನ್ನಾಗಲಿ ಪರಿಗಣಿಸದೆ, ಹಿಂದಿನ ತೀರ್ಮಾನವನ್ನು ಬದಿಗೊತ್ತಿ ಆ ಸ್ಥಳವನ್ನು ದರಖಾಸ್ತಿಗೆ ಕೊಡುವುದೆಂದರೆ, ದೇಶದಲ್ಲಿ ಒಂದು ಕಾನೂನು ದೇಶವನ್ನು ಆಳುತ್ತಿದೆಯೇ ಅಥವಾ ಪ್ರತಿಯೊಬ್ಬ ಅಧಿಕಾರಿವರ್ಗದವರೂ ತಮಗೆ ಇಷ್ಟಬಂದಂತೆ ಕಾನೂನು ನಡೆಸಬಹುದೇ ಎನ್ನಿಸುತ್ತದೆ. ಈ ರೀತಿಯಾದರೆ ಪ್ರಜಾಪ್ರಭುತ್ವ ಹಾಳಾಗಿ ಹೋಗುತ್ತದೆ ; ಆಡಳಿತ ನಶಿಸಿಹೋಗುತ್ತದೆ. ಕಾನೂನಿಗೆ ಎಲ್ಲರೂ ಮನ್ನಣೆಕೊಡಬೇಕು. ಅಧಿಕಾರಿಗಳೇ ಕಾನೂನಿಗೆ ಮನ್ನಣೆ ಕೊಡದೆಇದ್ದರೆ ಇನ್ಯಾರು ಕೊಡಬೇಕು ? ಈ ಅಂಶವನ್ನು ತಾವು ದಯವಿಟ್ಟು ಪರಿಶೀಲನೆಮಾಡಬೇಕು. ನಾನು ಹೇಳುವುದು ಬಹು ಚಿಕ್ಕ ವಿಷಯವಾದರೂ, ತಪ್ಪಿನ ದೃಷ್ಟಿಯಿಂದ ನೋಡುವುದಾದರೆ ಬಹು ಮುಖ್ಯವಾದ್ದು. ಕಾನೂನು ಪ್ರಕಾರ ಒಬ್ಬ ರೆವಿನ್ಯೂ ಕಮಿಷನರಿಗೆ ಸರಿಯಲ್ಲವೆಂದು ಕಂಡುಬಂದಮೇಲೆ ಮತ್ತೊಬ್ಬ ರೆವಿನ್ಯೂ ಕಮಿಷನರು ಕೊಡುವುದೆಂದರೆ ಏನನ್ಯಾಯ ?! ಕೇವಲ ಎರಡು ವರ್ಷದ intervalನಲ್ಲಿ ಈ ರೀತಿಯಾದರೆ ಕಾನೂನು ದೇಶವನ್ನು ಆಳುತ್ತಿದೆಯೋ, ಕಾನೂನಿಗೆ ಪ್ರಜಾಪ್ರಭುತ್ವದಲ್ಲಿ ಮನ್ನಣೆಯಿದೆಯೋ ಹೇಳುವುದಕ್ಕಾಗುವುದಿಲ್ಲ. ಅಥವಾ ವೈಯಕ್ತಿಕ ಅಭಿಪ್ರಾಯಕ್ಕೆ ಅವಕಾಶಕೊಡುವುದು ನ್ಯಾಯವೇ ಎಂಬುದನ್ನೆಲ್ಲಾ ಪರಿಶೀಲನೆಮಾಡಿ, ಪ್ರಜಾಪ್ರಭುತ್ವದಲ್ಲಿ favouritism, nepotismಗಳಿಗೆ ಖಂಡಿತ ಅವಕಾಶವಿರದಂತೆ ಮಾಡಿ. ಅದಿದ್ದರೆ, ಇದು ಪ್ರಜಾಪ್ರಭುತ್ವವಲ್ಲ. ಸರ್ಕಾರದವರು ಇದನ್ನೆಲ್ಲಾ ಪರಿಗಣಿಸಿ ನ್ಯಾಯ ದೊರಕಿಸಿಕೊಡುತ್ತೀರೆಂದು ನಂಬಿದ್ದೇನೆ

ಇನ್ನು ಕೋಆಪರೇಷನ್ ವಿಚಾರ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಇವೊತ್ತು ಸಚಿವರುಗಳ ಉತ್ತರ ಇದೆಯೇ ?

Mr. DEPUTY SPEAKER.—I will let you know shortly.

ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಪ್ರತಿದಿವಸವೂ ಹೀಗೆ ಪ್ರೋಗ್ರಾಂಗಳು ಬದಲಾವಣೆಯಾದರೆ ಹೇಗೆ ?

ಶ್ರೀ ಎಂ. ಕೆ. ಬೊಮ್ಮೇಗೌಡ.—ಸಹಕಾರ ಪದ್ಧತಿ ಬಹಳ ಚೆನ್ನಾಗಿ ನಡೆಯಬೇಕು. ಏಕೆಂದರೆ, ಇದು ಪ್ರಜಾಪ್ರಭುತ್ವ. ಪ್ರಜಾಪ್ರಭುತ್ವ ಬಲಗೊಳ್ಳಬೇಕಾದರೆ ಸಹಕಾರ ಪದ್ಧತಿ ನಮ್ಮಲ್ಲಿ ಬಲಗೊಳ್ಳಬೇಕು. ಏಕೀಕರಣವಾದಮೇಲೆ ಈ ಬಾಬಿಗೇ ಪ್ರತ್ಯೇಕ ಒಬ್ಬ ಮಂತ್ರಿಗಳನ್ನು ಇಟ್ಟಿದ್ದರಮೇಲೆ ನನಗನ್ನಿಸಿತು, ಪ್ರಜಾಪ್ರಭುತ್ವ ಇನ್ನುಮೇಲೆ ಅನುಕೂಲವಾಗಿ ಮುಂದುವರಿಯುತ್ತದೆ. ಎಂದು ಸಹಕಾರ ಪದ್ಧತಿ ಸಾಧ್ಯವಾದಮಟ್ಟಿಗೂ ಬಹು ಮುಖ್ಯ ಪಾತ್ರವನ್ನು ಗಳಿಸಿ ಚೆನ್ನಾಗಿ ದೇಶದಲ್ಲಿ ನೆಲೆಗೊಳ್ಳುವಂತಾಗುತ್ತದೆಂದು ನಾನು ತಿಳಿದಿದ್ದೆ. ದುರದೃಷ್ಟವಶಾತ್ ಅದೇನೂ ಆಗಲಿಲ್ಲ. ಈಗ ಈ ಖಾತೆಕೂಡ ಯಾರ ಹತ್ತಿರವಿದೆಯೋ ಗೊತ್ತಿಲ್ಲದಹಾಗಾಗಿದೆ. ಮುಖ್ಯಮಂತ್ರಿಗಳಾಗಿ ಅವರು ಸಾಮಾನ್ಯ ಜನರನ್ನು interview ಮಾಡುವುದಕ್ಕೂ ಆಗುವುದಿಲ್ಲ. ಈಗ ನಮ್ಮಲ್ಲಿ ಸಹಕಾರ ಕ್ಷೇತ್ರದಲ್ಲಿ ಏನಾಗಿದೆ? ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಗೊಬ್ಬರ ಮಾರಾಟವಾಗುತ್ತಿದೆ. ಅಲ್ಲಿಗೆ ಬರತಕ್ಕ ಮೂಟೆಗಳು ಎಲ್ಲಿಂದಲೋ ವ್ಯಾಗನ್ನಲ್ಲಿ ಬರುತ್ತವೆ. ಆದರೆ ವ್ಯಾಗನ್‌ಗಳಲ್ಲಿ ಬಂದರೂ shortage ಇರುತ್ತದೆ. ಈ shortageನ್ನು ಯಾವ ರೀತಿ make up ಮಾಡಬೇಕೋ ಅರ್ಥವಾಗುತ್ತಿಲ್ಲ. ಕೊನೆಗೆ ಬಡ ಸೆಕ್ರೆಟೆರಿಯವರ ಮೇಲೆ, ಗುಮಾಸ್ತರುಗಳ ಮೇಲೆ ಬೀಳುತ್ತಿರುತ್ತದೆ. ಈ shortageಗೆ ಕಂಪೆನಿಯವರು ಜವಾಬ್ದಾರರೇ ಅಥವಾ ಸರ್ಕಾರದವರು ಜವಾಬ್ದಾರರೇ ? ಒಂದೂ ಗೊತ್ತಾಗುತ್ತಿಲ್ಲ. ಇದನ್ನು ಸರ್ಕಾರದವರು ದಯವಿಟ್ಟು ಗೊತ್ತುಮಾಡದಿದ್ದರೆ, ಅಲ್ಲಿ ಕೆಲಸಮಾಡತಕ್ಕ ಯಾವ ಅಧಿಕಾರಿಯೂ ಹುರುಪಿನಿಂದ ಕೆಲಸಮಾಡುವುದಕ್ಕಾಗುವುದಿಲ್ಲ. ಎಲ್ಲಿ shortage ತಮ್ಮಮೇಲೆ ಬೀಳುತ್ತದೋ ಎಂದು ಪ್ರತಿ

(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No (B) 4754
ದಿನಾಂಕ Date............

ಯೊಬ್ಬ ಅಧಿಕಾರಿಯೂ ಹೆದರಿಕೊಂಡೇ ಕೆಲಸಮಾಡು ತ್ತಿರಬೇಕಾಗಿದೆ. ಆದ್ದರಿಂದ ಸರ್ಕಾರದವರು ಈ shortageನ ಮೂಲವನ್ನು ಕಂಡುಹಿಡಿಯಬೇಕೆಂದು ಹೇಳುತ್ತೇನೆ.

ವ್ಯವಸಾಯದ ಇಲಾಖೆಯವರಿಗೆ ಗೊಬ್ಬರ ಬರು ತ್ತದೆ. ಇಲ್ಲಿ ಒಂದು ಸಮಸ್ಯೆಯಾಗಿ ಬಹಳ ನಷ್ಟವಾ ಗುತ್ತಿದೆ. ವ್ಯಾಗನ್ ಬಂದರೆ R. R. ಕೊಟ್ಟಹೊರತು ಸರಕನ್ನು ರಿಲೀಸ್‌ಮಾಡುವುದಿಲ್ಲ. ಅದರಮೇಲೆ ಡೆಮರೇಜ್ ಬೀಳುತ್ತದೆ. ಈಗ ರೈಲ್ವೆ ರಸೀತಿಯು ಬ್ಯಾಂಕಿಗೆ ಹೋಗುತ್ತದೆ. ಅಲ್ಲಿ ಅದನು ಬಿಡಿಸಿ ಕೊಂಡು ನಂತರ ಸರಕನ್ನು ರೈಲ್ವೆಯವರಿಂದ ತರ ಬೇಕಾದರೆ ಡೆಮರೇಜ್ ಬೀಳುತ್ತದೆ. ಆದುದರಿಂದ ರೈಲ್ವೆ ರಸೀತಿಯು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲೀಸಾಗಿ ಕೂಡಲೇ ತಲಪುವಂತೆ ಏರ್ಪಾಡುಮಾಡ ಬೇಕು. ರೈಲ್ವೆ ಸ್ಟೇಷನ್ನಿನಲ್ಲಿ ವ್ಯಾಗನ್ ಬಂದೊಡ ನೆಯೇ ಅದನ್ನು ರಿಲೀಸ್‌ಮಾಡುವುದಕ್ಕೆ ಅನುಕೂಲ ವಾಗಬೇಕು. ಈಗಿರುವ ಪದ್ಧತಿಯೇ ಮುಂದುವರಿ ದರೆ ಬ್ಯಾಂಕಿಗೆ ಒಂದೆರಡು ದಿವಸ ಓಡಾಡಿ ಅಲ್ಲಿಂದ ರೈಲ್ವೆಸ್ಟೇಷನ್ನಿಗೆ ರೈಲ್ವೆ ರಸೀತಿಯನ್ನು ತೆಗೆದು ಕೊಂಡುಹೋಗುವುದರೊಳಗಾಗಿ ಡೆಮರೇಜ್ ಬಿದ್ದು ತೊಂದರೆಯಾಗುತ್ತದೆ. ಪ್ರತಿಸಲ ವ್ಯಾಗನ್ ಬಂದಾ ಗಲೂ ಇದೇರೀತಿ ತೊಂದರೆಯಾಗುತ್ತಿದೆ. ಗೊಬ್ಬರ ವನ್ನು ಮಾರುವಾಗ ಸೊಸೈಟಿಗಳ ಮೂಲಕ ಮಾರಬ ಹುದು. ವೈಯಕ್ತಿಕವಾದ ಮತ್ತು ಖಾಸಗಿಯಾದ ಫರ್ಮ್‌ಗಳಿಗೆ ಇದರಲ್ಲಿ ಉತ್ತೇಜನವನ್ನು ಕೊಡಕೂಡ ದೆಂದು ಎಷ್ಟೋ ಹೇಳುತ್ತಿದ್ದೇವೆ. ಖಾಸಗಿಯವರಿಗೆ ಗೊಬ್ಬರ ಮಾರಲು ಲೈಸೆನ್ಸ್ ಕೊಟ್ಟು ಲಾಭಬಡುಕ ರಿಗೆ ಅವಕಾಶ ಕೊಡಕೂಡದು. ಗೊಬ್ಬರ ಮಾರಲು ಸಹಕಾರಸಂಘಗಳಿಗೆ ಮಾತ್ರ ಕೊಡಬೇಕು ಎಂದು ನಾನು ಸಲಹೆ ಕೊಡುತ್ತಿದ್ದೇನೆ.

ಹರಿಜನರ ಫಂಡ್ ವಿಷಯದಲ್ಲಿ ಹೇಳಬೇಕಾದರೆ, ಇದರಲ್ಲಿ ನೂರು ರೂಪಾಯಿಗೆ ಐವತ್ತು ರೂಪಾಯಿ ಖಂಡಿತವಾಗಿ ಲುಕ್ಸಾನಾಗುತ್ತಿದೆ. ಲುಕ್ಸಾನು ಎಂದರೆ ಇತರರು ತಿಂದುಹಾಕುತ್ತಿದ್ದಾರೆ. ಇದನ್ನು ಯಾವ ರೀತಿ ಸರಿಪಡಿಸಬೇಕು, ಏನುಮಾಡಬೇಕು ಎನ್ನುವುದೇ ಅರ್ಥವಾಗುವುದಿಲ್ಲ. ಸರ್ಕಾರದವರೂ ಯೋಚನೆಮಾಡುವುದಿಲ್ಲ. ಹರಿಜನರಿಗೆ ಎತ್ತುಗಳನ್ನು ಕೊಡುವುದು, ಮನೆಕಟ್ಟಲು ಸಹಾಯಮಾಡುವುದು, ಇಂಥ ಕೆಲಸಗಳಿಗೆ ಈ ಹಣವನ್ನು ವಿನಿಯೋಗಿಸುತ್ತಿ ದ್ದಾರೆ. ಇದರಿಂದ ಏನಾಗುತ್ತಿದೆ ಎಂದರೆ ನನ್ನ ಮನೆ ಯಲ್ಲಿ ಒಬ್ಬ ಹರಿಜನ ಆಳು ಕೆಲಸಮಾಡುತ್ತಿದ್ದರೆ ಅವನ ಹೆಸರಿಗೆ ಎತ್ತುಗಳನ್ನು ತೆಗೆದುಕೊಂಡು ನಾನು ಇಟ್ಟು ಕೊಳ್ಳುತ್ತೇನೆ. ಇಂಥ ಪರಿಸ್ಥಿತಿಯಾಗಬಾರದು. ಇದರಿಂದ ದೇಶ ಉಳಿಯುವುದಿಲ್ಲ; ಉದ್ಧಾರವಾಗು ವುದಿಲ್ಲ. ಈ ಫಂಡಿನ ಹಣವನ್ನೆಲ್ಲ ಹರಿಜನ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ವಿನಿಯೋಗಮಾಡುವುದು ಒಳ್ಳೆಯ ದೆಂದು ನನ್ನ ಅಭಿಪ್ರಾಯ. ಮನೆ ಕಟ್ಟುವುದಕ್ಕೆ ಒಬ್ಬ ಮನುಷ್ಯನಿಗೆ ಮುನ್ನೂರು ರೂಪಾಯಿಗಳನ್ನು ತೆಗೆದುಕೊಂಡು, ಮನೆಕಟ್ಟತಕ್ಕ ಸಾಮರ್ಥ್ಯವಿಲ್ಲದೆ ಹೋದರೆ, ಸಾಮರ್ಥ್ಯ ಬರುವಂಥ ಒಂದು ಚೈತನ್ಯ ವನ್ನು ಗಳಿಸದೆಹೋದರೆ ಏನು ಪ್ರಯೋಜನ? ಈ ರೀತಿಯ ಸಹಾಯದಿಂದ ಸಮಾಜದಲ್ಲಿ ಅಸ್ಪೃಶ್ಯತಾ ನಿವಾರಣೆಯಾಗುವುದಿಲ್ಲ. ನಮ್ಮ ಸಹೋದರರು ಎಷ್ಟೋ ಜನರಿದ್ದಾರೆ. ಅವರಿಗೂ ನಮಗೂ ಭೇದ ವಿಲ್ಲ. ಆದುದರಿಂದ ಅಸ್ಪೃಶ್ಯತಾ ನಿವಾರಣೆಯಾಗ ಬೇಕಾದರೆ ಇಡೀ ಹರಿಜನರನ್ನು ವಿದ್ಯಾವಂತರನ್ನಾಗಿ ಮಾಡಿ, ಪ್ರತಿ ತಾಲ್ಲೂಕು ಮತ್ತು ಹೋಬಳಿ ಹೆಡ್ ಕ್ವಾರ್ಟರುಗಳಲ್ಲಿಯೂ ಹರಿಜನರ ಹಾಸ್ಟಲುಗಳನ್ನು ತೆರೆದು ಹರಿಜನರ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿದರೆ ಸಮಾಜದಲ್ಲಿ ಅಸ್ಪೃಶ್ಯತೆಯು ಅದಷ್ಟಕ್ಕೆ ಅದೇ ಹೋಗುತ್ತದೆ, ಆದ್ದರಿಂದ ಹರಿಜನರನ್ನು ವಿದ್ಯಾವಂತರನ್ನಾಗಿ ಮಾಡಿದರೆ ಸಮಸ್ಯೆ ಪರಿಹಾರ ವಾಗುತ್ತದೆಯೇ ವಿನಾ ಅವರಿಗೆ ನೂರಿನ್ನೂರು ರೂಪಾಯಿಗಳ ಹಣಸಹಾಯ ಮಾಡುವುದು, ಎತ್ತುಗ ಳನ್ನು ಕೊಡುಕೊಡುವುದು ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಶಾಶ್ವತವಾಗಿರುವಂಥ ಕೆಲಸವನ್ನುಮಾಡಿ ಅವರೂ ನಮ್ಮಂತೆಯೇ ಒಂದು ಮಟ್ಟಕ್ಕೆ ಬಂದು ನಿಲ್ಲುವಂತೆಮಾಡಬೇಕು ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕೆ. ಟಿ. ಜಂಬಣ್ಣ (ದಾವಣಗೆರೆ).—ಮಾನ್ಯ ಅಧ್ಯಕ್ಷರೇ, ನಮಗೆ ಸ್ವಾತಂತ್ರ್ಯ ಲಭಿಸಿ ಹತ್ತು ವರ್ಷಗಳಾಗುತ್ತ ಬಂತು. ಈ ಹತ್ತು ವರ್ಷಗಳಲ್ಲಿ ಹತ್ತು ಬಡ್ಜೆಟ್‌ಗಳು ಕಾಂಗ್ರೆಸ್ ಸರ್ಕಾರದಿಂದ ಮಂಡಿಸಲ್ಪಟ್ಟಿವೆ. ಆದರೆ ಈ ಹತ್ತು ವರ್ಷಗಳಲ್ಲಿ ಯಾವ ಸಾಧನೆಯನ್ನು ಮಾಡಿದ್ದಾರೆ, ಎಷ್ಟುಮಟ್ಟಿಗೆ ಮುಂದುವರಿದಿದ್ದಾರೆನ್ನುವ ವಿಷಯವನ್ನು ಹೇಳಬೇ ಕೆಂದರೆ ನಮ್ಮ ಸರ್ಕಾರದವರಿಗೆ ಬಹಳ ಕಷ್ಟವಾಗ ಬಹುದು. ಒಂದು ಜನಾಂಗದ ಆಯುಷ್ಯದಲ್ಲಿ ಹತ್ತು ವರ್ಷ ಸಾಮಾನ್ಯವಾದುದಲ್ಲ. ಪ್ರತಿವರ್ಷವೂ ಬಡ್ಜೆಟ್ ಬರುತ್ತಿದೆ. ಮುಖ್ಯವಾದ ವಿಷಯಗಳಿಗೆ ಸರ್ಕಾರ ಹೆಚ್ಚಾದ ಹಣವನ್ನು ಒದಗಿಸಿಲ್ಲ. ಮುಖ್ಯವಾದ ವಿಷಯಗಳೆಂದರೆ ಮೊದಲನೆಯದು ರೈತನ ಪರಿಸ್ಥಿತಿ ಯನ್ನು ಸುಧಾರಿಸತಕ್ಕದ್ದು, ಎರಡನೆಯದು ಕೂಲಿ ಕಾರರ ಪರಿಸ್ಥಿತಿಯನ್ನು ಸುಧಾರಿಸತಕ್ಕದ್ದು. ಈ ಎರಡು ವಿಷಯಗಳಿಗೆ ಸರ್ಕಾರ ಹೆಚ್ಚಾದ ಹಣವನ್ನು ಮುಡುಪಾಗಿಟ್ಟು, ಈ ಎರಡು ಗುಂಪಿನವರನ್ನು ಸುಧಾರಿಸದೆ ಹೋದಲ್ಲಿ ಯಾವ ಜನಾಂಗಕ್ಕೂ ಕ್ಷೇಮ ವಿಲ್ಲ. ಇದನ್ನು ನಮ್ಮ ಕಾಂಗ್ರೆಸ್ ಸರ್ಕಾರದವರು ಒಪ್ಪಿಕೊಳ್ಳುತ್ತಾರೆ ಮತ್ತು ಅವರ ಚುನಾವಣೆಯ ಪ್ರಚಾರಗಳಲ್ಲಿ ಇವೆರಡನ್ನೂ ಮುಂದೆ ಮಾಡಿ ಓಟು ಗಳನ್ನು ತೆಗೆದುಕೊಳ್ಳುತ್ತಿದ್ದರು. ರೈತನ ಪರಿಸ್ಥಿತಿ ಸುಧಾರಿಸ ಬೇಕು; ಕೂಲಿಕಾರರ ಪರಿಸ್ಥಿತಿ ಸುಧಾರಿಸ ಬೇಕು, ಅಸ್ಪೃಶ್ಯತಾ ನಿವಾರಣೆಯಾಗಬೇಕು ಎಂದು ಹೇಳುತ್ತ ಗಾಂಧೀಜಿಯವರ ಹೆಸರಿನಲ್ಲಿ ವೋಟು ಕೊಡಿ, ನೆಹರೂರವರ ಹೆಸರಿನಲ್ಲಿ ವೋಟುಕೊಡಿ, ಬಸವಣ್ಣನ ಹೆಸರಿನಲ್ಲಿ ವೋಟುಕೊಡಿ ಎಂದು ಹೇಳುವು ದನ್ನು ಮಾತ್ರ ಬಿಟ್ಟಿಲ್ಲ. ಈ ಹತ್ತು ವರ್ಷಗಳಿಂದಲೂ ಈ ಎರಡು ಗುಂಪಿನವರ ಪರಿಸ್ಥಿತಿ ಎಂದಿನಂತೆಯೇ ಇದೆ. ಇವರ ಸ್ಥಿತಿಯನ್ನು ಸುಧಾರಿಸಿದ್ದಾರೆಂಬು ದನ್ನು ಧೈರ್ಯವಾಗಿ ಎಷ್ಟರಮಟ್ಟಿಗೆ ಹೇಳಬಲ್ಲರು ಎಂಬುದು ಗೊತ್ತಿಲ್ಲ. ಗ್ರಾಮಾಂತರಗಳಲ್ಲಿ ನೋಡಿ ದರೆ ನಮ್ಮ ರೈತರ ಪರಿಸ್ಥಿತಿ ಎಳ್ಳಷ್ಟೂ ಸುಧಾರಿಸಿಲ್ಲ. ಇದಕ್ಕೆ ಒಂದೇಒಂದು ಉದಾಹರಣೆಯನ್ನು ಹೇಳು ತ್ತೇನೆ. ಈಗ್ಗೆ ಮೂವತ್ತು-ನಲವತ್ತು ವರ್ಷಗಳ ಹಿಂದೆ ನಾನು ಹುಡುಗನಿದ್ದಾಗ್ಗೆ ಹಳ್ಳಿಗಳಲ್ಲಿ ಹೆಚ್ಚಾಗಿ ತಿರುಗುತ್ತಿದ್ದೆ. ಇತ್ತೀಚೆಗೆ ನಡೆದ ಚುನಾವಣೆಗಳ ಸಮಯದಲ್ಲಿ ಹಳ್ಳಿಗಳಿಗೆ ಹೋದರೆ ಆ ಹಳ್ಳಿಗಳು ಮೂವತ್ತುವರ್ಷಗಳ ಹಿಂದೆ ಇದ್ದ ಸ್ಥಿತಿಗಿಂತ ಹೀನಾ ಯಸ್ಥಿತಿಯಲ್ಲಿದ್ದುವು.

ರೈತನಿಗೆ ಸಾಲವನ್ನೊದಗಿಸುತ್ತೇವೆಂದು ಮೀಡಿ- ಯಂ, ಷಾರ್ಟ್ ಟರ್ಮ್, ಲಾಂಗ್ ಟರ್ಮ್ ಮತ್ತು ತಕಾವಿಸಾಲಗಳು ಮತ್ತು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಿಂದ ಕೊಡತಕ್ಕ ಸಾಲಗಳು, ಈ ಎಲ್ಲ ಅನುಕೂಲಗಳನ್ನೂ ಸರ್ಕಾರದವರು ಎಷ್ಟೋ

(ಶ್ರೀ ಕೆ. ಟಿ. ಜಂಬಣ್ಣ).

ವರ್ಷಗಳಿಂದ ಮಾಡುತ್ತ ಬಂದಿದ್ದಾರೆ. ಆದರೆ ರೈತನ ನಿಜವಾದ ಪರಿಸ್ಥಿತಿ ಸುಧಾರಿಸಿದೆಯೋ ಎಂದರೆ ಎಂದಿಗೂ ಇಲ್ಲ. ನಮ್ಮಕಡೆ ಹಳ್ಳಿಗಳಲ್ಲಿ ತಮ್ಮ ಜಮೀನುಗಳನ್ನು ಬೇರೆಯವರಿಗೆ ಕೊಟ್ಟು, ಪಟ್ಟಣಗಳಿಗೆ ಬಂದು ಕೂಲಿಕಾರರಾಗಿ ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಸೇರುತ್ತಿದ್ದಾರೆ. ಇದು ಸತ್ಯವಾದ, ನಿಜವಾದ ಅಂಶ. ಇದನ್ನು ಯಾವ ರೀತಿ ಪರಿಹಾರ ಮಾಡಬಹುದು ಎಂಬುದು ಸರ್ಕಾರದ ಅರಿವಿಗೆ ಬಂದಿಲ್ಲ. ಏನುಮಾಡಬೇಕು ಎಂದರೆ ರೈತರಿಗೆ ನೇರವಾಗಿ ಸಾಲ ದೊರೆಯುವಂತೆ ವ್ಯವಸ್ಥೆಮಾಡಬೇಕು. ಈಗ ಸಾಲದೊರೆಯಲು ಬಹಳ ಅಡಚಣೆಗಳಿವೆ. ಒಂದು ತಕಾವಿ ಸಾಲಕ್ಕೆ ರೈತನು ತನ್ನ ಮನೆಯನ್ನು ಮಾರುವ ಹಾಗೆ ಮಾಡುತ್ತೀರಿ. ಮತ್ತು ಸಾಲ ದೊರೆಯಬೇಕಾದರೆ ಬಹಳಕಾಲ ಹಿಡಿಯುತ್ತದೆ. ಸಣ್ಣ ಕೈಗಾರಿಕೆಗಳನ್ನೂ ನಡೆಸಲು ಸಾಲ ಕೊಡುತ್ತೀರಿ. ಇದಕ್ಕೆ ಎಂಟು ಅಫೀಸುಗಳನ್ನಿಟ್ಟಿದ್ದೀರಿ. ಬೆಂಗಳೂರಿನಲ್ಲಿ ಡೈರೆಕ್ಟರ ಆಫೀಸು, ಅವರ ಕೆಳಗೆ ಡಿಸ್ಟ್ರಿಕ್ಟ್ ಮಟ್ಟದಲ್ಲಿ ಸೂಪರಿಂಟೆಂಡೆಂಟರ ಆಫೀಸು, ಅವರ ಮೇಲೆ ಎಕ್ಸಿಕ್ಯೂಟಿವ್ ಆಫೀಸರ್, ಅವರ ಕೆಳಗೆ ತಾಲ್ಲೂಕು ಮಟ್ಟದಲ್ಲಿ ಒಬ್ಬ ಸೂಪರ್‌ವೈಸರ್, ಅವರ ಕೆಳಗೆ ಒಬ್ಬ ವಿ.ಪಿ.ಡಿ. ಇನ್ಸ್‌ಪೆಕ್ಟರ್, ಹೀಗೆಲ್ಲ ಇದೆ. ಯಾರಾದರೂ ಸಾಲಕ್ಕೆ ಒಂದು ಅರ್ಜಿಯನ್ನು ಹಾಕಿದರೆ ಒಂದು ಕಡೆ ಎರಡು ತಿಂಗಳು, ಮತ್ತೊಂದು ಕಡೆ ಮೂರು ತಿಂಗಳು ಹೀಗೆ ರಿಕಾರ್ಡನ್ನು ಎಲ್ಲೋ ಒಗೆಯುತ್ತಾರೆ. ಇನ್ನೂ ಕೆಲವು ಆಫೀಸುಗಳಲ್ಲಿ ಎರಡು ಮೂರು ತಿಂಗಳ ಕಾಲ ರಿಕಾರ್ಡನ್ನು ಹಾಗೆಯೇ ಇಟ್ಟಿದ್ದು ಅನಂತರ ಅದರ ಮೇಲೆ ಒಂದು ಕ್ವೆರಿ ಹಾಕುತ್ತಾರೆ. ಇದೆಲ್ಲ ಆಗಿ ಬಂದಮೇಲೆ ಸ್ಕ್ರೂಟಿನಿ ಆಗಬೇಕು ಎಂದು ಹೇಳುತ್ತಾರೆ. ಒಂದು ಸಣ್ಣ ಕೈಗಾರಿಕೆಗೆ ಎಷ್ಟೊಂದು ಆಫೀಸುಗಳು ನಮಗೆ ಬೇಕು. ನಮ್ಮ ಸರ್ಕಾರದವರು ಇನ್ನೂ ಏನುಮಾಡುತ್ತಿದ್ದಾರೆಂದರೆ ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಣವನ್ನೆಲ್ಲ ಇಲಾಖೆಗಳನ್ನು ಬೆಳೆಸುವುದಕ್ಕೆ ಖರ್ಚು ಮಾಡುತ್ತಿದ್ದಾರೆ. ಒಂದೊಂದು ಕಡೆಯೂ ಬೋರ್ಡ್, ಕಮಿಟಿ ಎಂದು ಮಾಡಿ ಎಲ್ಲರನ್ನೂ ಸಮಾಧಾನ ಮಾಡುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಇದು ಈಗಿನ ಕಾಂಗ್ರೆಸ್ ಸರ್ಕಾರದ ಧೋರಣೆಯಾಗಿದೆ.

ಶ್ರೀ ಎಫ್. ಎಚ್. ಮೊಹಸಿನ್.—ತಾವು ಕಾಂಗ್ರೆಸ್ಸಿನಲ್ಲಿದ್ದಾಗ ಹೇಗಿತ್ತು?

ಶ್ರೀ ಕೆ. ಟಿ. ಜಂಬಣ್ಣ.—ನಾನು ಕಾಂಗ್ರೆಸ್ಸಿನಲ್ಲಿದ್ದಾಗಲೂ ಪ್ರತಿಭಟಿಸುತ್ತಿದ್ದೆ. ಈಗಲೂ ಪ್ರತಿಭಟಿಸುತ್ತೇನೆ. ನನ್ನ ರಾಜಕೀಯ ಜೀವಮಾನ ಪ್ರತಿಭಟನೆ. ಮತ್ತು ಹೊಡೆದಾಟಗಳಲ್ಲಿಯೇ ಬಂದು ಹೋಗಿದೆ. ಅದನ್ನು ನೀವು ಪ್ರಶ್ನೆ ಮಾಡುವುದಕ್ಕೆ ದಯವಿಟ್ಟು ಪ್ರಯತ್ನ ಮಾಡಬಾರದೆಂದು ಹೇಳುತ್ತೇನೆ.

ಈಗ ಈ ಬಜೆಟ್ಟಿನಲ್ಲಿ ಒದಗಿಸಿರುವ ಎಷ್ಟು ಹಣ ನೌಕರರಿಗೆ ಖರ್ಚಾಗುತ್ತದೆ? ನಮ್ಮ ಬಜೆಟ್ಟಿನಲ್ಲಿ ಒದಗಿಸಿರುವ ಬಹುಭಾಗ ಹಣ ನಿರುಪಯೋಗವಾಗುತ್ತಿದೆ. ರೈತರ ಮತ್ತು ಕೂಲಿಗಾರರ ವಸತಿಗೋಸ್ಕರ ಏನು ಮಾಡಿದ್ದೀರಿ? ಬೆಂಗಳೂರು ಸುಂದರವಾದ ನಗರ. ಆದರೆ ಅಲ್ಲಿ Slum clearance ಆಗಿಲ್ಲ. ದಾವಣಗೆರೆಯಿಂದ ಬೆಂಗಳೂರಿಗೆ ಬರುವಾಗ ಎರಡು ಪಕ್ಕಗಳಲ್ಲಿಯೂ ಸ್ಲಮ್ಸ್ ನೋಡುತ್ತೇವೆ; ಕಕ್ಕಸು, ಚರಂಡಿ ನೋಡುತ್ತೇವೆ. ಅದರ ನೀರನ್ನೇ ಬಡವರು ಕುಡಿಯುತ್ತಾರೆ. ಇದು ನಮಗೆ ಸಲ್ಲತಕ್ಕದ್ದಲ್ಲ. ನೀವು ಅಧಿಕಾರಕ್ಕೆ ಬಂದು ಹತ್ತುವರ್ಷಗಳಾದರೂ, ಈವರೆಗೂ ಈ ಸ್ಲಮ್ಸ್ ತೆಗೆಯಲು ನಿಮಗೆ ಸಾಧ್ಯವಾಗಿಲ್ಲ. ಬೆಂಗಳೂರು ನಗರದಲ್ಲಿ ಚರಂಡಿಭಾಗದಲ್ಲಿ ಬಿದ್ದಿರುವ ಎಂಜಲೆಲೆಗಳನ್ನು ನಾಯಿಗಳ ಹಾಗೆ ಬಡಜನರು ತಿನ್ನುವುದನ್ನು, ನಾನು ಪ್ರತಿದಿವಸ ನೋಡುತ್ತಾ ಇದ್ದೇನೆ. ಹೋಟೇಲುಗಳ ಹತ್ತಿರ ಎಂಟು-ಹತ್ತು ಜನರು ಸೇರಿಕೊಂಡು ಹೀಗೆ ಮಾಡುತ್ತಿರುತ್ತಾರೆ. ಇದು ನಮ್ಮ ಮಾನವಜನಾಂಗಕ್ಕೆ ಮಾನತರುವ ವಿಷಯವೇ? ಮುಂದುವರಿದ ಮೈಸೂರಿಗೆ ಗೌರವ ತರತಕ್ಕುದಲ್ಲ. ಇದನ್ನು ಯಾರು ನೋಡಿದ್ದಾರೆ? ಎಂಜಲೆಲೆ ತಿನ್ನುವವರು ಮನುಷ್ಯರಲ್ಲವೇ? Slum clearanceಗೆ ಏನು ಪ್ರಾವಿಷನ್ ಮಾಡಿದ್ದೀರಿ?

ಶ್ರೀ ಟಿ. ಮರಿಯಪ್ಪ.—ತಾವು ಯಾವುದಕ್ಕೆ ಹೆಚ್ಚಿಗೆ ಕೊಟ್ಟಿದೆ, ಯಾವುದನ್ನು ಕಡಮೆ ಮಾಡಬೇಕು, ಯಾವುದಕ್ಕೆ ಹೆಚ್ಚಾಗಿ ಕೊಡಬೇಕೆನ್ನುವ ರಚನಾತ್ಮಕ ಸಲಹೆಗಳನ್ನು ಕೊಟ್ಟರೆ, ಗುರ್ತು ಹಾಕಿಕೊಳ್ಳುತ್ತೇನೆ.

ಶ್ರೀ ಕೆ. ಟಿ. ಜಂಬಣ್ಣ.—ಇಲಾಖೆಗಳ ಸಂಖ್ಯೆಯನ್ನು ಕಡಿಮೆಮಾಡಿರಿ. ಹಿಂದೆ ನಮ್ಮ ಸಂಸ್ಥಾನದಲ್ಲಿ ಒಬ್ಬ ದಿವಾನರು ರಾಜ್ಯಭಾರ ಮಾಡುತ್ತಿದ್ದರು. ಹಿಂದೆ ಒಬ್ಬ ಅಧಿಕಾರಿಗಳು ಕೌನ್ಸಿಲರ್ ಆಗಬೇಕಾದರೆ, ಅವರು ಅಮಲ್ದಾರರಾಗಿ, ಅಸಿಸ್ಟೆಂಟ್ ಕಮೀಷನರಾಗಿ, ಡೆಪ್ಯುಟಿ ಕಮೀಷನರಾಗಿ ಕೆಲಸಮಾಡಿ ಆಡಳಿತದ ಅನುಭವವನ್ನು ಪಡೆದಿರುತ್ತಿದ್ದರು. ಈಗ ಕಾಂಗ್ರೆಸಿನವರು ಪ್ಲಾಟ್‌ಫಾರಂನಿಂದ ಮಂತ್ರಿಗಳಾಗಿ ಬಂದುಬಿಡುತ್ತಾರೆ. ಇವರಿಗೆ ಆಡಳಿತದ ಅನುಭವವಿಲ್ಲ. ಆದ್ದರಿಂದ ದಕ್ಷತೆ ತನ್ನಷ್ಟಕ್ಕೆ ತಾನೇ ಇಲ್ಲದಂತಾಗುತ್ತದೆ. ನಮ್ಮ ರಾಜ್ಯಕ್ಕೆ ಒಬ್ಬ ದಿವಾನರು ಸಾಕು. ನೀವು, ಹತ್ತು ಜನ ಮಂತ್ರಿಗಳು ನಮಗೆ ಬೇಕಾಗಿಲ್ಲ. ಮಂತ್ರಿಗಳನ್ನು ತೆಗೆದುಹಾಕಿದರೆ, ಹಣ ಉಳಿತಾಯವಾಗುವುದಲ್ಲದೆ, ಹತ್ತು ಬಂಗಲೆಗಳು ಖಾಲಿ ಆಗುತ್ತವೆ. ಈ ಹತ್ತು ಬಂಗಲೆಗಳು ಖಾಲಿ ಆದರೆ ದುಡ್ಡು ಉಳಿಯುತ್ತದೆ, ಲಕ್ಷಾಂತರ ರೂಪಾಯಿ ಉಳಿತಾಯವಾಗುತ್ತದೆ. ಆಫೀಸಿಗೆ ಮೂರು ಮೈಲಿ ಆಚೆ ಒಂದು ಬಂಗಲೆ ತೆಗೆದುಕೊಂಡಿದ್ದೀರಿ. ವಸತಿಗೆ ಇಷ್ಟು ದೊಡ್ಡದೊಡ್ಡ ಬಂಗಲೆಗಳು ಬೇಕೆ? ನೀವು ನಿಮ್ಮ ಊರಿನಲ್ಲಿ ಎಂತಹ ಮನೆಗಳಲ್ಲಿ ಇದ್ದಿರಿ? ಇಂತಹ ದೊಡ್ಡ ಬಂಗಲೆಗಳಲ್ಲ ಇದ್ದಿರಾ? ಈ ಹತ್ತು ಬಂಗಲೆಗಳನ್ನು ಫರ್‌ನಿಷ್ ಮಾಡಿದ್ದಾರೆ. ಇದು socialistic pattern of society! ಪ್ಯಾಟರ್ನ್‌ಗೆ ಕೈಗಾರಿಕೆಯಲ್ಲಿ ಒಂದು ಅರ್ಥವಿದೆ. ಒಂದು ಇಂಜಿನ್ ಇತ್ಯಾದಿ ಸಾಮಾನುಗಳನ್ನು ತಯಾರುಮಾಡುವಾಗ pattern ಮೌಲ್ಡ್ ಮಾಡಲು ತಯಾರು ಮಾಡುತ್ತಾರೆ. ಗುಡಿಸಲುಗಳಲ್ಲಿ ಇರುವುದಕ್ಕೆ ತಯಾರಿದ್ದೇವೆಂದು ಹೇಳುತ್ತಿದ್ದಿರಿ. ಆದರೂ ನೀವು ಕುಮಾರಕೃಪದ ಅಂಗಳಲ್ಲಿ ಕಂಬಳಿ ಹೊದ್ದುಕೊಂಡು ಮಲಗಿಕೊಳ್ಳಿ ಎಂದು ನಾವು ಒತ್ತಾಯ ಮಾಡುತ್ತಿಲ್ಲ. ನೀವು socialistic pattern of society ಎಂದು ಏನು ಹೇಳುತ್ತೀರೋ, ಅದರಲ್ಲಿರುವ pattern ಎಂಬ ಪದಕ್ಕೆ ಏನು ಅರ್ಥವೋ ಗೊತ್ತಾಗುವುದಿಲ್ಲ. ಕಾರ್ಖಾನೆಗಳಲ್ಲಿ pattern pattern, ಎಂದು ಮಾಡಿರುತ್ತಾರೆ. ಇದು ಯಾವ pattern? ಈಗ ನಡೆಯುತ್ತಿರುವುದು ಅವರ ಸ್ಯಾಂಪಲ್ಲೋ? ಸಮಾಜವನ್ನು ಒಂದು ಸಮತಾಭಾವನೆಯಿಂದ ಕಂಡು, ಬಡವರನ್ನು, ರೈತರನ್ನೂ ಎಷ್ಟರಮಟ್ಟಿಗೆ ಉದ್ಧಾರ ಮಾಡಿದ್ದೀರಿ? ಬೆಳೆ ಉತ್ಪನ್ನ ಹೆಚ್ಚಾಗಿದೆಯೇ? ವ್ಯವ

ಸಾಯ ಇಲಾಖೆಯವರು ಕೊಟ್ಟಿರುವ ಅಂಕಿ ಅಂಶಗಳೆಲ್ಲಾ ಸುಳ್ಳು. ಒಂದಕ್ಕೊಂದಕ್ಕೆ ಹೆಚ್ಚು ಮಾಡಿಕೊಂಡು ಹೋಗಿದ್ದಾರೆ. ವ್ಯವಸಾಯಗಾರರ ಪರಿಸ್ಥಿತಿ ಸುಧಾರಿಸುವುದಕ್ಕೆ ಕೆಲವು ರಚನಾತ್ಮಕ ಸಲಹೆಗಳನ್ನು ಕೊಡುತ್ತೇನೆ. ವ್ಯವಸಾಯಗಾರರಿಗೋಸ್ಕರ ತೆಗೆದಿಟ್ಟಿರತಕ್ಕಂಥ ಹಣ ಬಹಳ ಕಡಮೆ. ಅದನ್ನು ಒಂದಕ್ಕೆ ಹತ್ತರಷ್ಟಾದರೂ ಮಾಡಬೇಕು; ಮತ್ತು ಅದು ಅವರಿಗೆ ನೇರಪ್ಪಾಗಿ ಸಹಾಯ ಸಲ್ಲುವಂತೆ ಮಾಡಬೇಕು. ನೂರೈವತ್ತು ರೂಪಾಯಿಗಳ ಸಾಲಕ್ಕೆ ಅರ್ಜಿ ಹಾಕಿಕೊಂಡರೆ, ಜಮೀನು ಬಿತ್ತನೆ ಅದಮೇಲೆ ಮುಂದಿನವರ್ಷ ಹಣ ರೈತನ ಕೈ ಮುಟ್ಟುತ್ತದೆ; ಯಾವುದಕ್ಕೆ ಖರ್ಚು ಮಾಡುತ್ತೀರೋ ಗೊತ್ತಾಗುವುದಿಲ್ಲ. ಇದನ್ನು ಯಾರೂ ಪರೀಕ್ಷೆಮಾಡಿಲ್ಲ. ತಕ್ಷಣ ಸಾಲ ಒದಗಿಸಬೇಕಾದರೆ ತಾಲ್ಲೂಕು ಲೆವಲ್‌ನಲ್ಲಿ ಬ್ಯಾಂಕ್ ಇರಬೇಕು. ಮೈಸೂರು ಬ್ಯಾಂಕಿಗೆ ಸಾಲಕ್ಕಾಗಿ ಅರ್ಜಿ ಹಾಕಿಕೊಂಡರೆ ಹಣ ಒಂದು ವಾರದೊಳಗೆ ಸಾಲಗಾರನ ಕೈಸೇರುತ್ತದೆ. ಆದರೆ ನಿಮ್ಮ ಈ ಸೊಸೈಟಿ ಪದ್ಧತಿಗಳಲ್ಲಿ ಏನಾಗುತ್ತಲಿದೆ? ಸಾಲಗಾರನಿಗೆ ಯಾವಾಗ ದುಡ್ಡು ಕೈಸೇರುತ್ತಲಿದೆ? ಮೂರು-ನಾಲ್ಕು ತಿಂಗಳಿನಲ್ಲಿ investigation ಮಾಡಿ, ನಾಲ್ಕನೆಯ ತಿಂಗಳಿನಲ್ಲಿ ಲೋನ್ ಸ್ಯಾಂಕ್ಷನ್ ಆಗಿ ಬರುತ್ತವೆ. ಈ ಸೊಸೈಟಿ ಅಧಿಕಾರಿಗಳಿಂದ ಏನು ಕೆಲಸ ತೆಗೆದುಕೊಳ್ಳುತ್ತೀರಿ? ಅವರುಗಳಿಗೆ ಯಾವತರಹದ ಜವಾಬ್ದಾರಿಯೂ ಇಲ್ಲ. ಅಲ್ಲಿರುವ ಪ್ರೆಸಿಡೆಂಟ್ ಮುಂತಾದವರಿಗೆ ಇಷ್ಟು ಆಸ್ತಿ ಇರಬೇಕೆಂದು ಒಂದು ಪ್ರಾಪರ್ಟಿ ಕ್ವಾಲಿಫಿಕೇಷನ್ ಇಟ್ಟು ಅವರಿಗೆ ಹೆಚ್ಚಿನ ಜವಾಬ್ದಾರಿ ಕೊಟ್ಟರೆ ಒಳ್ಳೆಯದು. ಆವಾಗ ಅವರುಗಳಿಗೆ ಜವಾಬ್ದಾರಿ ಇರುತ್ತದೆ. ಇಲ್ಲದೆ ಹೋದರೆ ಅವರುಗಳು ಗುಮಾಸ್ತರುಗಳ, ಅಧಿಕಾರಿಗಳ ಸಂಬಳ ಜಾಸ್ತಿಮಾಡಿಬಿಟ್ಟು ಸಂಬಳ ಹಂಚಿಬಿಡುತ್ತಾರೆ.

ಎನ್.ಇ.ಎಸ್.ನಲ್ಲಿ ಎಷ್ಟು ಪ್ರೋಗ್ರೆಸ್ ಮಾಡಿದ್ದೀರಿ? ದಾವಣಗೆರೆಯಲ್ಲಿ ಒಂದು ಹಳ್ಳಿಯಲ್ಲಿ ಮುನ್ನೂರು ರೂಪಾಯಿಗಳಿಗೆ ಆಗುವ ಭಾವಿಗೆ, ಒಂದು ಒಂದೂವರೆ ಸಾವಿರ ರೂಪಾಯಿಗಳಿಗೆ ಬಿಲ್ಲುಮಾಡಿದೆ. ಷೆಡ್ಯೂಲ್ಡ್ ರೇಟ್‌ಪ್ರಕಾರ ರಸ್ತೆಗಳನ್ನು ಮಾಡುತ್ತಾರೆ. ಆ ರಸ್ತೆಗಳಿಗೆ ಯಾರಾದರೂ ಒಬ್ಬ ಅಧಿಕಾರಿ ಹೋಗಿ ಚೆಕ್ ಮಾಡಿಕೊಂಡು ಬಂದಿದ್ದಾರೆಯೇ? ಹರಿಹರ ತಾಲ್ಲೂಕಿನಲ್ಲಿ ಎನ್. ಇ. ಎಸ್. ನವರು ಎಷ್ಟು ರಸ್ತೆಗಳನ್ನು ಮಾಡಿದ್ದಾರೆ? ಎನ್.ಇ.ಎಸ್.ನವರು ಎಷ್ಟು ಹಣ ಅನ್ಯಾಯವಾಗಿ ಖರ್ಚುಮಾಡುತ್ತಿದ್ದಾರೆ! ಲಕ್ಷಾಂತರ ರೂಪಾಯಿಗಳನ್ನು ಹಾಳುಮಾಡುತ್ತಾರೆ. ಸಿಬ್ಬಂದಿಗೆ ಎರಡು-ಮೂರು ಜೀಪುಗಳು, ಅಧಿಕಾರಿಗಳ ಹಿಂದೆ ಗ್ರಾಮಸೇವಕಿಯರು, ಅವರ ಹಿಂದೆ ಲೇಡಿಡಾಕ್ಟರ್, ಒಂದು ಮೂವಿಂಗ್ ವ್ಯಾನ್ ಎಲ್ಲಾ ಕೊಟ್ಟಿದ್ದಾರೆ. ಈ ರೀತಿ ಏಕೆ ಹಣ ಹಾಳು ಮಾಡುತ್ತೀರಿ? ಏನು ಮಾಡುತ್ತೀರಿ? ಅದು ಕೂಲಿಗಾರರಿಗೆ ನೇರವಾಗಿ ಸಹಾಯವಾಗುವ ಹಾಗೆ ಮಾಡಿರಿ. ಹರಿಹರದಲ್ಲಿ ಈ ಎನ್.ಇ.ಎಸ್. ಬ್ಲಾಕ್ ಕೆಲಸಮಾಡುತ್ತಿರುವುದನ್ನು ನೋಡಿದರೆ, ಅದು ಕಣ್ಣಿಗೆ ಮಣ್ಣುಹಾಕುವ ಕೆಲಸ ಇದ್ದ ಹಾಗೆ ಕಾಣುತ್ತದೆ.

ಶ್ರೀ ಟಿ. ಮರಿಯಪ್ಪ.—ತಾವೇ ಏಕೆ ಕುಳಿತುಕೊಂಡು ಮಾಡಿಸಬಾರದು?

ಶ್ರೀ ಕೆ. ಟಿ. ಜಂಬಣ್ಣ.—ಒಂದು ಮೀಟಿಂಗ್ ಪ್ರೊಸೀಡಿಂಗ್ಸ್‌ನ ಪೇಜಿನಲ್ಲಿ ರಿಕಾರ್ಡ್ ಆಗಿದೆ, ನೋಡಿ. ಮೆಂಬರ್‌ಷಿಪ್ ಕೊಟ್ಟಿದ್ದೀರಿ, ಅಷ್ಟೇ. ಎಗ್ಸಿಕ್ಯೂಟಿವ್ ಪವರ್‌ಕೊಟ್ಟಿಲ್ಲ. Advisory body ಇರುವುದು ಮಣ್ಣು ತಿನ್ನುವುದಕ್ಕೆ. ನಾವು ಏನಾದರೂ ಹೇಳಿದರೆ, ಕೇಳುವವರು ಇಲ್ಲ; ಹಾಗೆಯೇ ಕುಳಿತುಕೊಳ್ಳಬೇಕು. ಪವರ್ ಇದ್ದಿದ್ದರೆ ಜುಟ್ಟು ಹಿಡಿದು ಬಗ್ಗಿಸುತ್ತಾ ಇದ್ದೆವು. ನಮ್ಮನ್ನು ಸಮಾಧಾನ ಮಾಡುವುದಕ್ಕೆ ಈ Advisory bodyಗಳಲ್ಲಿ ಮೆಂಬರ್‌ಷಿಪ್ ಕೊಟ್ಟಿದ್ದೀರಿ. ಪವರ್ ಇಲ್ಲದೆ ಇರತಕ್ಕಂಥ ನಮ್ಮವರನ್ನು ತೆಗೆದುಕೊಂಡು ಮಸಿ ಹಚ್ಚುತ್ತೀರಿ.

ಇನ್ನು ಅಸ್ಪೃಶ್ಯತೆ ನಿವಾರಣೆ ಮಾಡಬೇಕೆಂಬ ಪ್ರಯತ್ನವಿದೆ. ಅಸ್ಪೃಶ್ಯತೆ ಹೋಗಬೇಕಾದರೆ ಸ್ಪೃಶ್ಯರಿರುವ ಜಾಗದಲ್ಲಿ ಅಸ್ಪೃಶ್ಯರಿಗೆ ಮನೆ ಕಟ್ಟಬೇಕು. ನಾನು ದಾವಣಗೆರೆಯಲ್ಲಿ ಪ್ರೆಸಿಡೆಂಟ್ ಆಗಿದ್ದಾಗ ಒಂದು ಕಾಲೋನಿಮಾಡಿ ಅಲ್ಲಿ ಅಸ್ಪೃಶ್ಯರಿಗೆ ವಸತಿ ಏರ್ಪಡಿಸಿ ಅವರ ಸುತ್ತಲೂ ಬ್ರಾಹ್ಮಣರು, ಲಿಂಗಾಯಿತರು ಮತ್ತು ಇತರ ಎಲ್ಲಾ ಮತಸ್ಥರೂ ಇರುವಂತೆ ವ್ಯವಸ್ಥೆ ಮಾಡಲಾಯಿತು. ಹಾಗೆ ಮಾಡಿದರೆ ಅಸ್ಪೃಶ್ಯತೆ ತನ್ನಷ್ಟಕ್ಕೆ ತಾನೇ ಮಾಯವಾಗುವುದು. ಅಸ್ಪೃಶ್ಯರು ಇತರರ ಮಧ್ಯೆ ವಾಸಮಾಡಲು ಅವಕಾಶ ಮಾಡದಿದ್ದರೆ ಅಸ್ಪೃಶ್ಯರೇ ಬೇರೆ ಎಂಬ ಭಾವನೆ ನೀವೇನು ಮಾಡಿದರೂ ನೂರಾರು ವರ್ಷಗಳಾದರೂ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಚನ್ನಿಗರಾಮಯ್ಯನವರು ಹಿಂದೆಯೂ ಮಂತ್ರಿಗಳಾಗಿದ್ದರು, ಈಗಲೂ ಮಂತ್ರಿಗಳಾಗಿದ್ದಾರೆ. ಅವರೂ ಸಹ ಈ ವಿಚಾರದಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಂಡಿಲ್ಲ. ಅಸ್ಪೃಶ್ಯರೇ ಬೇರೆ ಇರಕೂಡದು. ನಾನು ಹೇಳಿದಂತೆ ಮಾಡಿದರೆ ನೂರು ವರ್ಷಗಳಲ್ಲಿ ಸುಧಾರಿಸದಿರುವುದನ್ನು ಐದು ವರ್ಷಗಳಲ್ಲಿ ಸುಧಾರಿಸಬಹುದು. ಈ ದಿವಸ ದಾವಣಗೆರೆಯಲ್ಲಿರುವ ಕಾಲೋನಿ ನೋಡಬಹುದು. ಹಾಗೆ ಮಾಡಿದರೆ ದುಷ್ಟ ಸ್ವಭಾವಗಳು ತಾವೇ ಮಾಯವಾಗುವುವು.

ದಾವಣಗೆರೆಯಲ್ಲಿ ಜಮೀನು ವ್ಯವಸಾಯಮಾಡುವ ರೈತ ಒಂದು ಎಕರೆಗೆ 20 ಮಣ ಹತ್ತಿ ಬೆಳೆಯುತ್ತಾನೆ. ಹಾಗೆಯೇ ಇನ್ನೂ ಕೆಲವು ಬೆಳೆ ಬೆಳೆಯುತ್ತಾನೆ. ಬೇರೆ ಕಡೆಗಳಲ್ಲಿ ಎರಡು ಮಣ ಬೆಳೆಯುತ್ತಾರೆ. ಆದರೆ, ಅವರಿಗೆ ಇರಬೇಕಾದಂಥ ಸಾರಿಗೆ ಸೌಕರ್ಯವಿಲ್ಲ. ಪಟ್ಟಣಗಳಲ್ಲಿ ಯಥೇಷ್ಟವಾಗಿ ಗೊಬ್ಬರ ಸಿಕ್ಕುತ್ತದೆ. ಅದನ್ನು ತೆಗೆದುಕೊಂಡು ಹೋಗಿ ಹಾಕುವುದಕ್ಕೆ ಬಹಳ ಕಷ್ಟವಿದೆ. ಹೋದ ಸಾರಿ ಒಂದು ಬಂಡಿ ಹೂತು ಹೋಯಿತು. ರಸ್ತೆ ಸೌಕರ್ಯ ಚೆನ್ನಾಗಿರಬೇಕು. ಪ್ರಾವಿನ್ಷಿಯಲ್ ರಸ್ತೆಗಳಿಗೆ ಮಾತ್ರ ಟಾರು, ಕಾಂಕ್ರೀಟು ಹೆಚ್ಚಾಗಿ ಮಾಡುತ್ತಿದ್ದಾರೆ, ಇತರ ರಸ್ತೆಗಳಿಗೆ ಸಾಕಷ್ಟು ಗಮನ ಕೊಡುತ್ತಿಲ್ಲ. ಇಲ್ಲಿಯವರೆಗೆ ಈ ಸರ್ಕಾರದವರಿಂದ ಹತ್ತು ಮೈಲಿ ರೈಲು ಹಾಕುವುದಕ್ಕೆ ಸಾಧ್ಯವಾಗಿಲ್ಲ. ಹಳ್ಳಿಗಾಡಿನ ರಸ್ತೆ ಸುಧಾರಣೆಯಾಗಿಲ್ಲ. ಎಲ್ಲೆಲ್ಲಿ ಎಷ್ಟೆಷ್ಟು ಮೈಲಿ ರಸ್ತೆ ಮಾಡಿದ್ದೀರೆಂಬುದಕ್ಕೆ ಲೆಕ್ಕ ಕೊಡಿ, ಒಂದು ರಸ್ತೆ ಎಂಟು ಮೈಲಿ ಮಾಡಿ ಎರಡು ಮೈಲಿಯಷ್ಟು ಮಾಡದೆ 15 ವರ್ಷಗಳಿಂದ ಹಾಗೆಯೇ ಇದೆ. ಇಂಥ ಸಣ್ಣ ಪುಟ್ಟ ಕೆಲಸ ಮಾಡುವುದಕ್ಕೆ ಕೂಡ ನಿಮಗೆ ಸಾಧ್ಯವಾಗುತ್ತಿಲ್ಲ.

ಪಾನನಿರೋಧದ ವಿಷಯದಲ್ಲಿ ಬಹಳ ಜನರು ಅನೇಕ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ನನ್ನ ಮಟ್ಟಿಗೆ ಇರುವ ಅಭಿಪ್ರಾಯ ಹೇಳಿದರೆ ಪಿ. ಎಸ್. ಪಿ. ಯಿಂದ ನನ್ನನ್ನು ಹೊರಗೆ ದಬ್ಬುತ್ತಾರೋ ಏನೋ. ಪಾನನಿರೋಧವೆಂಬುದು ಒಂದು ದೊಡ್ಡ ಮಾರಿ. ಮೊದಲು ನಾನು ಕಾಂಗ್ರೆಸ್ ಪಕ್ಷದಲ್ಲಿದ್ದೆ. ಆಗ ಪಾನ ನಿರೋಧವು ಜಾರಿಗೆ ಬಂತು, ನನಗೆ ಆಗ ದೇವಲೋಕದ ಕಾಮಧೇನು ಸಿಕ್ಕಿದಷ್ಟು ಸಂತೋಷವಾಯಿತು. ನಮ್ಮ ಹಳ್ಳಿಯಲ್ಲಿ ಕುಡಿಯುವವರನ್ನೆಲ್ಲಾ

(ಶ್ರೀ ಕೆ. ಟಿ. ಜಂಬಣ್ಣ).

ಹಿಡಿಸಿದೆ, ಹತ್ತು ವರ್ಷದ ಹುಡುಗರನ್ನೂ, ಹೆಣ್ಣು ಮಕ್ಕಳನ್ನೂ ಜೈಲಿಗೆ ಹಾಕಿಸಿದೆ. ಆಗ ಕುಡಿಯುವವ ರೆಲ್ಲಾ ಸೇರಿ ಜನರನ್ನು ಕರೆದುಕೊಂಡು ಬಂದು, ಕುಡಿ ಯಲು ತಡೆಮಾಡಿದವರನ್ನು ಹೊಡೆದರು. ಆಮೇಲೆ ಯಾರನ್ನೂ ಹಿಡಿಯಬೇಡಿರಿ ಎಂದು ಹೇಳಿದೆ, ಮುಂದೆ ಆ ಹಳ್ಳಿಯವರು ದಾರಿಯಲ್ಲಿ ಬಟ್ಟೆ ಹಿಡಿದು ತೊಂದರೆ ಕೊಟ್ಟರು. ಅಲ್ಲಿಂದಾಚೆಗೆ ಆ ಕಡೆ ಹೋಗುವುದನ್ನೇ ನಿಲ್ಲಿಸಿದೆ. ಆಮೇಲೆ ನನ್ನ ಮನೆಯಲ್ಲೇ ಕಳ್ಳಬಟ್ಟಿ ಇಳಿಸುತ್ತಿದ್ದಾರೆಂದು ತಿಳಿಯಬಂತು. ಒಂದು ದಿವಸ ರಾತ್ರಿ ಎರಡು ಗಂಟೆಗೆ ಹೋಗಿ ನೋಡಿದೆ, ಶಿವಪೂಜೆ ಮಾಡುವ ಕಡೆ, ದನ ಕಟ್ಟುವ ಕಡೆ, ಎರಡು ಕಡೆ ಕಳ್ಳ ಭಟ್ಟಿ ಇಳಿಸುತ್ತಿದ್ದರು. ಹೊಡೆಯಲು ಷುರು ಮಾಡಿ ಹೆದರಿಸಿ ಅವರನ್ನು ಚದುರಿಸಿದೆ. ಬೆಳಿಗ್ಗೆ ಡೆಪ್ಯುಟಿ ಕಮಿಷನರ ಮೀಟಿಂಗ್ ಇದ್ದುದರಿಂದ ಜಾಗ್ರತೆ ಅಲ್ಲಿಗೆ ಹೋಗಬೇಕಾಯಿತು. ಅನಂತರ ಸಾಮಾನು ತೆಗೆದು ಮನೆಗೆ ಬೆಂಕಿ ಹಚ್ಚಿ ಎಂದು ಹೇಳಿದೆ. ದನ ಕಾಯುವ ವರು 15 ದಿವಸಗಳಲ್ಲಿ ಬೆಂಕಿ ಹಚ್ಚಿದರು. ಕಳ್ಳಬಟ್ಟಿ ಸಾರಾಯಿ ಹೆಚ್ಚಿದೆ. ಕೂಲಿಗಾರರಲ್ಲಿ ಪ್ರತಿಯೊಬ್ಬರೂ, ಬಟ್ಟಿಸಾರಾಯಿ ತಯಾರಿಸುವುದರಲ್ಲಿ ನಿರತರಾಗಿದ್ದಾರೆ. ಗಂಡಸರು, ಹೆಂಗಸರು ಎಲ್ಲರೂ ಈ ಕೆಲಸದಲ್ಲಿ ನಿರತ ರಾಗಿದ್ದಾರೆ. ನಮ್ಮ ಹಳ್ಳಿಯಲ್ಲಿ ಮಾತ್ರವಲ್ಲ, ಎಲ್ಲಾ ಕಡೆಯೂ ಈ ಹಾವಳಿ ಹೆಚ್ಚಿದೆ. ಜರಿಕಟ್ಟೆ, ತೋಳ ಹುಣಸಿ, ಕಲ್ಪನಹಳ್ಳಿ, ಕಕ್ಕರಗೊಳ್ಳ ಮುಂತಾದ ಕಡೆ ಒಂದು ವ್ಯಾಗನ್ ಬೇಕಾದರೂ ತಯಾರಿಸುತ್ತಾರೆ, ಇದರಿಂದ ಬೇರೆ ಕೆಲಸಕ್ಕೆ ಕೂಲಿಯವರು ಸಿಕ್ಕುವುದೇ ಕಷ್ಟವಾಗಿದೆ. ಪಾನನಿರೋಧದಿಂದ ಕೂಲಿಗಾರರ ಮತ್ತು ರೈತರ ಜೀವನ ಹಾಳಾಗಿದೆ. ಮೊನ್ನೆ ದಾವ ಣಗೆರೆಯಲ್ಲಿ ಒಂದು ಹಬ್ಬವಾಯಿತು. ಆಗ ಸಾವಿರಾರು ಗ್ಯಾಲನ್ ಅಲ್ಲಿಗೆ ಬರುತ್ತಿತ್ತು. ನಿರೋಧವಿಲ್ಲದಿದ್ದಾಗ ಎಷ್ಟು ಜನ ಕುಡಿಯುತ್ತಿದ್ದರೋ ಅದರ ಹತ್ತರಷ್ಟು ಮಂದಿ ಈಗ ನಿರೋಧ ಜಾರಿಮಾಡಿದ ಮೇಲೆ ಕುಡಿ ಯುತ್ತಿದ್ದಾರೆ. ದಾವಣಗೆರೆ ಮತ್ತು ಹರಿಹರ ಈ ಕಡೆ 500 ಅಂಗಡಿಗಳಲ್ಲಿ ಮದ್ಯ ಮಾರಾಟವಾಗುತ್ತಿದೆ. ನನ್ನ ಹಿಂದೆ ಯಾರನ್ನಾದರೂ ಕಳುಹಿಸಿದರೆ ತೋರಿಸು ತ್ತೇನೆ. ಪೋಲೀಸ್ ಸಹಾಯ ನನಗೆ ಬೇಡ. ಇತ್ತೀ ಚೆಗೆ ಕುಡಿಯದಿರುವವರ ಮೇಲೆ ಅಪಾದನೆ ಹೊರಿಸಿ ಕೇಸು ಹಾಕುವುದು ಹೆಚ್ಚಾಗಿದೆ. ಡಾ॥ ನಾಗೂರ್ ರವರು ಹಿಂದೆಂದೂ ಪಾನನಿರೋಧ ಜಯಪ್ರದವಾಗಿಲ್ಲ, ನೂರು ವರ್ಷವಾದರೂ ಆಗುವುದಿಲ್ಲ, ಸಾವಿರ ವರ್ಷ ವಾದರೂ ಆಗುವುದಿಲ್ಲ ಎಂದು ಹೇಳಿದರು. ಅನೇಕರು ಪಾನನಿರೋಧ ತಮ್ಮ ಕಡೆ ಜಾರಿಗೆಬರಬೇಕೆಂದು ಹೇಳುತ್ತಿದ್ದಾರೆ. ಅವರು ತಮ್ಮ ಊರಿಗೆ ಪಾನ ನಿರೋಧ ಬಂದಾಗ ನಾನು ಹೇಳಿದ ಕಷ್ಟಗಳನ್ನೆಲ್ಲಾ ಅನುಭವಿಸಬೇಕಾಗುತ್ತದೆ. ಹಿಂದೆ ಹೆಂಡ ಕುಡಿಯು ತ್ತಿದ್ದಾಗ ದೇಹಸ್ಥಿತಿ ಅಷ್ಟಾಗಿ ಕೆಡುತ್ತಿರಲಿಲ್ಲ. ಈಗ ಕಳ್ಳಬಟ್ಟಿ ಸಾರಾಯಿ ಕುಡಿಯುವುದರಿಂದ ಆರೋಗ್ಯ ಬಹಳವಾಗಿ ಕೆಡುತ್ತದೆ, ದೇಹವನ್ನು ಸುಡುತ್ತದೆ, 14 ವರ್ಷದ ಒಬ್ಬ ಹೆಣ್ಣು ಮಗಳ ದೇಹ ಪರ್ಫೊರೇ ಟಾಗಿ ಸುಟ್ಟಿದೆ. ಇಂಥ ಪ್ರಕರಣ ಹೆಚ್ಚಾಗಿದೆ. ಕಾಲಾವ ಕಾಶ ಹೆಚ್ಚಾಗಿಲ್ಲದ್ದರಿಂದ ಇಷ್ಟು ಮಾತ್ರ ಹೇಳಿ ಅವ ಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣ ಮುಕ್ತಾಯ ಮಾಡುತ್ತೇನೆ.

5 P.M.

ಅಧ್ಯಕ್ಷರು.—ಈ ದಿವಸ ಸಾಯಂಕಾಲ ಐದು ಘಂಟೆ ಯಿಂದ ಏಳು ಘಂಟೆವರೆಗೂ ಸರ್ಕಾರದ ಪರವಾಗಿ ಉತ್ತರ ಕೊಡಲು ಅವಕಾಶ ಕೊಡೋಣ. ನಾಳೆ ದಿವಸ ನಾವು ಒಂದು ಘಂಟೆಗೆ ಬದಲಾಗಿ 12 ಘಂಟೆಗೆ ಇಲ್ಲಿ ಸಭೆ ಸೇರೋಣ. 12 ಘಂಟೆಯಿಂದ ಒಂದು ಘಂಟೆಯವರೆಗೆ ಪ್ರಶ್ನೋತ್ತರಗಳನ್ನು ಇಟ್ಟುಕೊಂಡು ಅನಂತರಒಂದು ಘಂಟೆಯಿಂದ ಮಧ್ಯಾಹ್ನಮೂರೂವರೆ ಘಂಟೆಯವರೆಗೂ ಸರ್ಕಾರದವರಿಗೆ ಉತ್ತರ ಕೊಡಲು ಅವಕಾಶಕೊಟ್ಟು ಮೂರೂವರೆ ಘಂಟೆಯ ನಂತರ ಡಿಮ್ಯಾಂಡ್ಸ್ ತೆಗೆದುಕೊಳ್ಳೋಣ. ಈ ಪ್ರಕಾರ ಆದರೆ ಆಗಬಹುದಲ್ಲವೇ ?

ಶ್ರೀ ಟಿ. ಮರಿಯಪ್ಪ.—ಅಧ್ಯಕ್ಷರಲ್ಲಿ ಒಂದು ಪ್ರಾರ್ಥನೆ. ಈ ದಿವಸ ಮಂತ್ರಿಗಳು ಉತ್ತರ ಕೊಡು ವುದಕ್ಕೆ ಪ್ರಾರಂಭಿಸಿ ಈ ದಿವಸ ಅರ್ಧ, ನಾಳೆ ಅರ್ಧ ಹೀಗೆ ಕೊಡತಕ್ಕದ್ದು ಅಷ್ಟು ಸರಿಯಾಗಿ ಕಾಣುವುದಿಲ್ಲ. ಆದುದರಿಂದ ಈ ದಿವಸ ಸಂಪೂರ್ಣವಾಗಿ ಸದಸ್ಯರಿಗೆ ಮಾತನಾಡಲು ಅವಕಾಶ ಕೊಟ್ಟು ನಾಳೆ ಪೂರ್ತಿಯಾಗಿ ಮಂತ್ರಿಮಂಡಲಕ್ಕೆ ಉತ್ತರ ಕೊಡಲು ಅವಕಾಶ ಮಾಡಿಕೊಟ್ಟರೆ ಅನುಕೂಲವಾಗಬಹುದೆಂದು ನನ್ನ ಅಭಿಪ್ರಾಯ.

ಅಧ್ಯಕ್ಷರು.—ಸರ್ಕಾರದವರಿಗೆ ನಾಳೆ ಪೂರಾ ದಿನ ವನ್ನು ಉತ್ತರಕೊಡಲು ಬಿಟ್ಟುಕೊಟ್ಟರೆ ಈಗ ಆಫೀಸಿನ ವರು ಮಾಡಿರತಕ್ಕ ಪೂರ್ತಿ ಪ್ರೋಗ್ರಾಮನ್ನೇ ಬದಲಾ ಯಿಸಬೇಕಾಗಿ ಬರುತ್ತದೆ.

ಶ್ರೀ ಟಿ. ಮರಿಯಪ್ಪ.—ಮುಂದಿನ ಅಸೆಂಬ್ಲಿಯ ವೇಳೆಗೆ ಇದನ್ನೆಲ್ಲ ರೆಗ್ಯುಲರೈಸ್ ಮಾಡಿಕೊಳ್ಳೋಣ.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಡಿಮ್ಯಾಂಡ್‌ಗಳ ಮೇಲೆ ನಡೆಯತಕ್ಕ ಚರ್ಚೆಯಲ್ಲಿ ಯಾವುದಾದರೂ ಒಂದೆರಡು ಡಿಮ್ಯಾಂಡ್‌ಗಳ ಚರ್ಚೆ ಯನ್ನು ಬೇಕಾಗಿದ್ದರೆ ಕಡಮೆಮಾಡಿಕೊಂಡು ಈಗ ಆ ಕಾಲವನ್ನು ಈ ಕಾರ್ಯಕ್ಕೆ ಉಪಯೋಗವನ್ನೇಕೆ ಮಾಡಿಕೊಳ್ಳಬಾರದು ? ಇರುವ ಪ್ರೋಗ್ರಾಂ ಹಾಗೆಯೇ ಇದ್ದಹಾಗೆ ಆಗುತ್ತದೆ.

ಅಧ್ಯಕ್ಷರು.—ಈ ದಿವಸ ಇಷ್ಟು ತೀರ್ಮಾನ ಮಾಡೋಣ. ನಾಳೆ 12 ಘಂಟೆಯಿಂದ ಒಂದು ಘಂಟೆಯತನಕ ಪ್ರಶ್ನೋತ್ತರಗಳ ಕಾಲ ಹೋದರೆ ಒಂದು ಘಂಟೆಯಿಂದ 3-30ರ ತನಕ ಸರ್ಕಾರದವರು ಉತ್ತರ ಕೊಡಲಿ. ಅಲ್ಲಿಗೆ ಈ ದಿವಸ ಎರಡು ಘಂಟೆ ಗಳ ಕಾಲ ಮತ್ತು ನಾಳೆ ದಿವಸ ಎರಡೂವರೆ ಘಂಟೆ ಒಟ್ಟು ನಾಲ್ಕೂವರೆ ಘಂಟೆಗಳವರೆಗೂ ಸರ್ಕಾರದವ ರಿಗೆ ಅವಕಾಶಮಾಡಿದಂತಾಗುತ್ತದೆ. ಹಾಗೊಂದು ವೇಳೆ ಇದೂ ಕೂಡ ಸಾಲದೆಂದು ಕಂಡು ಬಂದರೆ ಬಾಕಿ ವಿಚಾರ ನಾಳೆ ನೋಡಿಕೊಳ್ಳೋಣ.

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಕೆಲವು ಡಿಮ್ಯಾಂಡ್‌ಗಳಿಗೆ ಅಲಾಟ್‌ಮಾಡಿರತಕ್ಕ ಕಾಲವನ್ನು ಉಳಿಸಿಕೊಂಡು ಆ ವೇಳೆಯನ್ನು ಬಡ್ಜೆಟ್ ಚರ್ಚೆಗೆ ವಿನಿಯೋಗಮಾಡಿ ಕೊಳ್ಳಲು ಅವಕಾಶವಿಲ್ಲವೇ ?

*ಶ್ರೀಮತಿ ಅನ್ನಪೂರ್ಣಾಬಾಯಿ ರಾಗಟೆ (ಕಲ್ಯಾಣಿ).—ಸಭಾಪತಿಗಳೇ, ಮಾನ್ಯ ದ್ರವ್ಯ ಶಾಖಾ ಸಚಿವರು 1958-59ನೆಯ ಸಾಲಿನ ಬಗ್ಗೆ ನಮ್ಮಮುಂದಿ ಟ್ಟಿರತಕ್ಕ ಬಡ್ಜೆಟ್ಟನ್ನು ನಾನು ಸ್ವಾಗತಿಸುತ್ತ ಸರ್ಕಾರ ದವರಿಗೆ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ.

ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚ ಮಾಡುತ್ತಲಿದೆ. ಆದರೆ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯೇನೂ ಅಷ್ಟರಮಟ್ಟಿಗೆ ಇನ್ನೂ ಆಗಿಲ್ಲ ವೆಂದು ನನಗೆ ಅನಿಸುತ್ತದೆ.

ಮೊದಲನೆಯದಾಗಿ ವಿದ್ಯಾಭ್ಯಾಸವನ್ನು ತೆಗೆದುಕೊಂಡರೆ ನಮ್ಮ ಪ್ರದೇಶದಲ್ಲಿ ಹುಮನಾಬಾದ್ ತಾಲ್ಲೂಕದ ಕಲ್ಯಾಣ ಮತ್ತು ಸುತ್ತಮುತ್ತಲಿನ ಹಳ್ಳಿಗಳ ವಿಚಾರವನ್ನು ಹೇಳಬೇಕಾದರೆ ಸ್ಕೂಲಿದ್ದರೆ ಉಪಾಧ್ಯಾಯರಿಲ್ಲ, ಉಪಾಧ್ಯಾಯರಿದ್ದರೆ ಕಟ್ಟಡಗಳಿಲ್ಲ, ಸಾವಿರಾರು ಜನಸಂಖ್ಯೆ ಇದ್ದಲ್ಲೂ ಕೂಡ ಒಂದು ಪ್ರಾಥಮಿಕ ಶಾಲೆ ಇರುವುದಿಲ್ಲ. ಹೀಗಾಗಿ ನಮ್ಮ ಕಡೆ ಈ ಪ್ರಾಥಮಿಕ ವಿದ್ಯಾಭ್ಯಾಸದ ಶಿಕ್ಷಣ ಕೂಡ ಸರಿಯಾಗಿ ಒಂದು ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿಲ್ಲ. ಪ್ರಾಥಮಿಕ ಶಾಲೆಗಳಲ್ಲಿ ಬೇಸಿಕ್ ಶಿಕ್ಷಣ ನಡೆಯುವ ಹಾಗೆ ವ್ಯವಸ್ಥೆ ಮಾಡಿಸಬೇಕು. ಕಲ್ಯಾಣದಲ್ಲಿ ಈಗ ಒಂದು ಮಿಡಲ್ ಸ್ಕೂಲ್ ಕಂ ಹೈಸ್ಕೂಲಿದೆ. ಅದನ್ನು ಹೈಯರ್ ಸೆಕೆಂಡರಿ ಸ್ಕೂಲನ್ನಾಗಿ ಮಾಡಬೇಕೆಂದು ನಾನು ವಿದ್ಯಾಮಂತ್ರಿಗಳಿಗೆ ಕೇಳಿಕೊಂಡೆ. ಈ ವಿಚಾರವನ್ನು ಸರ್ಕಾರದವರು ತಮ್ಮ ಮನಸ್ಸಿಗೆ ಹಾಕಿಕೊಂಡು ಜಾಗ್ರತೆ ಇದನ್ನು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಹೈಸ್ಕೂಲಿನಲ್ಲಿ ಯಾವ ತರಹದ ವಿದ್ಯಾವಂತರಾದ ಉಪಾಧ್ಯಾಯರಿದ್ದಾರೆಂಬುದನ್ನು ಪರಿಶೀಲನೆ ಮಾಡುವುದಾದರೆ ಕಲ್ಯಾಣದ ಹೈಸ್ಕೂಲಿನಲ್ಲಿ ನಾನ್-ಮೆಟ್ರಿಕ್ ಉಪಾಧ್ಯಾಯರುಗಳಿದ್ದಾರೆ. ಇಂಥ ಉಪಾಧ್ಯಾಯರುಗಳಿದ್ದರೆ ವಿದ್ಯಾರ್ಥಿಗಳು ಹೇಗೆ ಸುಧಾರಿಸಬಲ್ಲರು ?

ಇನ್ನು ಎರಡನೆಯದಾಗಿ ಸ್ವಾಮಿ, ಪಬ್ಲಿಕ್ ವರ್ಕ್ಸ್ ಇಲಾಖೆ ವಿಚಾರ ತೆಗೆದುಕೊಂಡರೆ ಆ ಕಡೆ ಇರತಕ್ಕ ರಸ್ತೆಗಳನ್ನು ನೋಡಿದರೆ ಏಳು ಎಂಟು ವರ್ಷಗಳಿಂದ ಯಾವ ಆಫೀಸರೂ ಹೋಗಲಾರದಂಥ ರಸ್ತೆಗಳು ಅವು. ಹುಮನಾಬಾದಕ್ಕೆ N.E.S. ಬ್ಲಾಕ್ ಬಂದಿದೆ. ಆದರೆ ಅದು ಅಲ್ಲಿ ಸರಿಯಾಗಿ ಕೆಲಸಮಾಡುತ್ತಿಲ್ಲವೆಂದು ನಾನು ಕೇಳಿದೆ. ಮತ್ತೊಂದು ಬಸವಕಲ್ಯಾಣ ಪುರದಿಂದ-ಕಲ್ಯಾಣದ ರಸ್ತೆ. ಇದು 1957ರ ಜನವರಿಯಲ್ಲೇ ಮಂಜೂರಾಗಿತ್ತು. ಆದರೂ ಆ ಕೆಲಸ ಸಹ ಇನ್ನುವರೆಗೆ ಸರಿಯಾಗಿ ನಡೆಯುತ್ತಿಲ್ಲ. ಈ ಕಾರ್ಯ ಏಕೆ, ಏನು ಕಾರಣದಿಂದ ಹೀಗಾಯಿತು ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೂರನೆಯದಾಗಿ, ನೀರಾವರಿ ಯೋಜನೆಯು ಬಹಳ ಮುಖ್ಯವಾದದ್ದು. ಕಾರಣ ಮುಖ್ಯವಾಗಿ ಜನರ ಹಿತರಕ್ಷಣೆಯಾಗುವಂಥ ಕಾರ್ಯ ಇದು. ಕಲ್ಯಾಣದಲ್ಲಿ ತ್ರಿಪುರಾಂತಕೆರೆ ಬಹಳ ದೊಡ್ಡದು. ಈಗ ಈ ಕೆರೆಯಿಂದ ಅನೇಕ ಜನ ಬಡವರಿಗೆ ಅನುಕೂಲವಾಗಿ 300 ಎಕರೆ ವರೆಗೆ ತರಿ ಸಾಗುವಳಿಗೆ ಅನುಕೂಲವಾಗಿರುತ್ತದೆ. ಈ ಕೆರೆಯನ್ನು ದುರಸ್ತಿ ಮಾಡಿದರೆ 500 ಎಕರೆ ಜಮೀನು ನೀರಾವರಿ ಸಾಗುವಳಿಗೆ ಬರಬಹುದು. ಇದೇ ರೀತಿ ಹಿರ್‌ನಾಗಾಂವದಲ್ಲಿ ಇನ್ನೊಂದು ಕೆರೆಯಿದೆ. ಆ ಕೆರೆಯನ್ನೂ ಕೂಡ ದುರಸ್ತಿ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಹಳ್ಳಿಗಳಲ್ಲಿ ಇಳಿದು ನೀರನ್ನು ತುಂಬಿಕೊಳ್ಳುವಂಥ ಭಾವಿಗಳಿರುತ್ತವೆ. ಕುಡಿಯುವುದಕ್ಕೂ ಅದೇ ನೀರು, ಬಟ್ಟೆ ಒಗೆಯಲಿಕ್ಕೂ ಅದೇ ನೀರು, ದನಕರುಗಳು ಕುಡಿಯಲಿಕ್ಕೂ ಅದೇ ನೀರು. ಹೀಗೆಲ್ಲ ಇರತಕ್ಕದ್ದು ಜನರ ಆರೋಗ್ಯಕ್ಕೆ ಎಷ್ಟು ಕೆಡಕನ್ನುಂಟುಮಾಡುತ್ತದೆಯೆಂಬುದನ್ನು ಸರ್ಕಾರದವರು ಗಮನಿಸಬೇಕು. ಈ ದಿವಸ ಕಲ್ಯಾಣದಲ್ಲಿ ಮನೆಗೆ ಯಾರಾದರೂ ದೊಡ್ಡ ಮನುಷ್ಯರು ಬಂದರೆ ಅವರಿಗೆ ಕುಡಿಯಲು ನೀರು ಕೇಳಿದರೆ ನೀರನ್ನು ಕೊಡಲು ತುಂಬ ನಾಚಿಕೆಯಾಗುತ್ತದೆ. ಅಲ್ಲಿ ಕುಡಿಯುವ ಬಾವಿಯ ನೀರು ಬೇವಿನ ಕಷಾಯದಂತಿರುತ್ತದೆ. ಆದುದರಿಂದ ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಕಲ್ಯಾಣಕ್ಕೆ ನಲ್ಲಿಗಳ ಮೂಲಕ ನೀರನ್ನು ಜನರಿಗೆ ಒದಗಿಸತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಹತ್ಯಾಳ, ಖಾನಾಪುರ, ಮುಡಬಿ, ಅಲಗೂಡ ಇತ್ಯಾದಿ ಹಳ್ಳಿಗಳಲ್ಲಿ ಜನರು ಎರಡು ಮೈಲಿ ದೂರದಿಂದ ನೀರನ್ನು ತರುತ್ತಿದ್ದಾರೆ, ಇದೆಲ್ಲ ಹಳ್ಳಿಯ ಜನರ ಸುಖ ದುಃಖಗಳು. ಈ ಕಡೆಗೆ ಸರ್ಕಾರ ಹೆಚ್ಚು ಗಮನಕೊಡಬೇಕೆಂದು ನಾನು ಸರಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ವ್ಯವಸಾಯದ ವಿಷಯ ಹೇಳಬೇಕಾದರೆ ಬಡರೈತರಿಗೆ ಸರಿಯಾಗಿ ಗೊಬ್ಬರ ದೊರಕಿಸಿಕೊಡುವುದು ಮತ್ತು ಅವರಿಗೆ ಬಿತ್ತುವ ಕಾಲಕ್ಕೆ ಒಳ್ಳೆಯ ಬೀಜ ಒದಗಿಸಬೇಕು. ಹೀಗೊಂದು ಅವರಿಗೆ ಉತ್ತಮ ಬೀಜ ದೊರೆಯುತಕ್ಕ ವ್ಯವಸ್ಥೆಯಾಗಬೇಕಾಗಿದೆ. ಬೀಜ ಕೊಡುವುದಾದರೆ ಯಾರಿಗೆ ಅವಶ್ಯವಿದೆಯೋ ಅಂಥವರಿಗೆ ಮಾತ್ರ ಅದು ಸಿಕ್ಕಬೇಕು. ಏಕೆಂದರೆ ಬಡಜನರಿಗೆ ಸಿಕ್ಕುವ ಬದಲು ಅನುಕೂಲಸ್ಥರಿಗೆ ಅದು ಹೋಗಿ ಆ ಧಾನ್ಯಗಳು ಮಾರಾಟಕ್ಕೆ ಹೋಗುತ್ತವೆ. ಹೀಗೆ ರೈತರಿಗೆ ಯಾವುದೇ ಒಂದು ಸಹಾಯ ಕೊಡುವ ವಿಚಾರವಾಗಲಿ ಹಣ ಮಂಜೂರಾದ ಕೂಡಲೆ ಡಿವಿಜನ್ನಿಗೆ ಬಂದ ಹಣವು, ಜಿಲ್ಲೆಗೂ, ಜಿಲ್ಲೆಗೆ ಕೊಟ್ಟ ಹಣವು ತಾಲ್ಲೂಕಿಗೂ ಮುಟ್ಟಿಸಿ ಆ ಹಣದ ಸದುಪಯೋಗವಾಗುವ ಹಾಗೆ ವ್ಯವಸ್ಥೆಯಾಗಬೇಕು.

ಆದಷ್ಟು ಜಾಗ್ರತೆ ಮೇಲೆ ತಿಳಿಸಿದ ವಿಷಯಗಳನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಬಡವರಿಗೆ ಅನುಕೂಲಮಾಡಿಕೊಡುತ್ತಾರೆಂದು ನಂಬಿ, ಈಗ ಅರ್ಥಿಕ ಸಚಿವರು ಮುಂದಿಸಿರುವ ಬಜೆಟ್ಟನ್ನು ಸ್ವಾಗತಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಇನ್ನು ಸರ್ಕಾರದವರು ಉತ್ತರಕೊಡುತ್ತಾರೆ.

*ಶ್ರೀ ಎಚ್. ಕೆ. ವೀರಣ್ಣಗೌಡ.—ಸ್ವಾಮಿ, ಒಂದು ವಾರದ ದೀರ್ಘಕಾಲ ಅನೇಕ ಮಾನ್ಯ ಸದಸ್ಯರು ಸರ್ಕಾರದ ಆಡಳಿತದಬಗ್ಗೆ ಟೀಕೆ ಮಾಡಿದ್ದಾರೆ. ಟೀಕೆಗಳಿಗಿಂತ ಹೆಚ್ಚಾಗಿ ಉಪಯುಕ್ತವಾದ ಸಲಹೆಗಳನ್ನೇ ಮಾಡಿದ್ದಾರೆ. ಹಾಗೂ ನಾನು ವಹಿಸಿಕೊಂಡಿರತಕ್ಕಂಥ ಇಲಾಖೆಗಳ ಸಂಬಂಧವಾಗಿ ಮಾಡಿರತಕ್ಕಂಥ ಟೀಕೆಗಳು ಅಷ್ಟು ಕಟುವಾಗಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕೆ ಸದಸ್ಯರಿಗೆ ನಾನು ಕೃತಜ್ಞನಾಗಿದ್ದೇನೆ. ಸಲಹೆಗಳು ಬಹಳ ಉಪಯುಕ್ತವಾಗಿಯೇ ಇವೆ ಎಂದು ನಾನು ಮನಗಂಡಿದ್ದೇನೆ. ಆ ಬಗ್ಗೆ ಸಹ ನಾನು ಅವರಿಗೆ ತುಂಬ ಕೃತಜ್ಞನಾಗಿದ್ದೇನೆ. ಆದ್ದರಿಂದ ಸಾಮಾನ್ಯವಾಗಿ ಪ್ರತಿಯೊಬ್ಬ ಸದಸ್ಯರೂ ಮಾಡಿದಂಥ ಸಲಹೆಗಳಿಗಾಗಿ ಅವರಿಗೆ ನನ್ನ ವಂದನೆಗಳು; ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟಂತೆ ಮಾಡಿದ ಟೀಕೆಗಳು ಅಥವಾ ಸೂಚಿಸಿರತಕ್ಕಂಥ ಸಲಹೆಗಳಿಗಾಗಿ ವಿವರವಾದಂಥ ಸಮಜಾಯಿಷಿ ಕೊಡಬೇಕಾದಂಥ ಅಗತ್ಯವಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಆದರೂ ಸಹ ಕೆಲವು ಅಂಶಗಳನ್ನು ನಾನು ಅವರಿಗೆ ಈ ಸಭೆಯಲ್ಲಿ ಅರಿಕೆ ಮಾಡಿಕೊಳ್ಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಕಾರಣವಾದರೂ ಇಷ್ಟೆ. ಕೆಲವು ಸದಸ್ಯರು ತಮ್ಮ ಭಾಷಣದ ಭರದಲ್ಲಿ ಅಥವಾ ಈ ಬಜೆಟ್‌ನಲ್ಲಿ ನಮೂದಿಸಿರತಕ್ಕಂಥ ಅಂಕಿ ಅಂಶಗಳಲ್ಲಿ ಯಾವುದೋ ಒಂದೆರಡು ಭಾಗಗಳನ್ನು ನೋಡಿ ಬಾಕಿ ಭಾಗಗಳಲ್ಲಿರತಕ್ಕ ಅಂಶಗಳ ಕಡೆಗೆ ನೋಡದೆ ಮಾಡಿರತಕ್ಕ, ಕೆಲವು ಟೀಕೆಗಳಿವೆ. ಅವುಗಳ ಸಂಬಂಧವಾಗಿ ಉತ್ತರ ಕೊಡುವುದು ಅಗತ್ಯ ಎನ್ನುವ ದೃಷ್ಟಿಯಿಂದ ನಾನು ಸ್ಥೂಲವಾಗಿ ಮಾನ್ಯ ಸದಸ್ಯರು ಸೂಚಿಸಿರತಕ್ಕಂಥ ವಿಷಯಗಳನ್ನು ಕುರಿತು ಎರಡೇ ಎರಡು ಮಾತಿನಲ್ಲಿ ಉತ್ತರ ಮುಗಿಸಲು

(ಶ್ರೀ ಎಚ್. ಕೆ. ವೀರಣ್ಣಗೌಡ.)

ಪ್ರಯತ್ನ ಮಾಡುತ್ತೇನೆ. ಒಂದು ವಾರದಿಂದಲೂ ಅನೇಕ ಸ್ನೇಹಿತರು ಮಾತನಾಡಿರುವಾಗ ಮೊದಲನೆ ದಿನ, ಯಾರು ಎರಡನೆ ದಿನ ಯಾರು ಮಾತನಾಡಿದರು ಎನ್ನುವುದನ್ನು ಹೇಳದೆ ಯಾರು ಯಾರು ಏನೇನು ಹೇಳಿದ್ದಾರೆ ಎನ್ನುವ ಅಂಶಗಳನ್ನು ಸ್ಥೂಲವಾಗಿ ತಿಳಿಸಿ ಸಾಧ್ಯವಾದಮಟ್ಟಿಗೂ ಸಮಜಾಯಿಷಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಾನಾಗಲೇ ಹೇಳಿದಹಾಗೆ ಬಡ್ಜೆಟ್‌ನಲ್ಲಿರತಕ್ಕಂಥ ಅಂಕಿ ಅಂಶಗಳನ್ನು ಪೂರ್ಣವಾಗಿ ನೋಡದೆ ಅಥವಾ ನೋಡುವುದಕ್ಕೆ ಅವಕಾಶವಿಲ್ಲದೆ ಅಥವಾ ಕಾಲವಿಲ್ಲದೆ ಒಂದೆರಡು ಕಡೆ ನೋಡಿ ಮಾಡಿರತಕ್ಕ ಆಕ್ಷೇಪಣೆಗಳು ಹೇಗೆ ಸರಿಯಾದ್ದಲ್ಲ ಎನ್ನುವುದನ್ನು ತೋರಿಸಬೇಕೆನ್ನುವುದೇ ನನ್ನ ಮೊದಲನೆಯ ಉದ್ದೇಶವಾಗಿದೆ. ಶ್ರೀಮಾನ್ ನರಸಿಂಹೇಗೌಡರು ಹಾಸನ, ಬೆಂಗಳೂರು ಮತ್ತು ಮಂಡ್ಯ ಡಿವಿಜನ್, ಮಳವಳ್ಳಿ ಡಿವಿಜನ್‌ಗಳಿಗೆ ತುಂಬ ಉತ್ಪ್ರೇಕ್ಷೆ ಮಾಡಿ ಹಣ ತೋರಿಸಿದ್ದೀರಿ ಎಂದು ಹೇಳಿದರು. ಅದಕ್ಕೆ ಬಡ್ಜೆಟ್‌ನಲ್ಲಿ ಕೆಲವು ಪುಟಗಳನ್ನು ಸಹ ಅವರು ಉದಹರಿಸಿದ್ದಾರೆ. ನಾನು ಕೆಲಸ ಆಗಿರತಕ್ಕದ್ದು ಮತ್ತು ಆಗಬೇಕಾದದ್ದು ಪ್ರತ್ಯೇಕವಾಗಿ ಎಷ್ಟೆಷ್ಟು, ಯಾವಯಾವ ಡಿವಿಜನ್‌ನಲ್ಲಿ ಎಷ್ಟೆಷ್ಟು ಹಣ ಖರ್ಚಾಗಿದೆ ಎಂಬ ವಿವರ ತರಿಸಿದ್ದೇನೆ. ಹೊಸ ರಸ್ತೆಗಳನ್ನು ಮಾಡುವುದಕ್ಕೆ ಹಾಸನ ಡಿವಿಜನ್‌ನಲ್ಲಿ ಒಂದು ಲಕ್ಷ ಹದಿನಾರು ಸಾವಿರ, ಬೆಂಗಳೂರು ಡಿವಿಜನ್‌ನಲ್ಲಿ 30, 500 ರೂಪಾಯಿಗಳು ಮಂಡ್ಯ ಮತ್ತು ಮಳವಳ್ಳಿ ಡಿವಿಜನ್‌ನಲ್ಲಿ 25,000 ರೂಪಾಯಿಗಳನ್ನು ಒದಗಿಸಲಾಗಿದೆ. ಈ ರಸ್ತೆಗಳಿಗೆ ಟಾರ್ ಹಾಕುವುದಕ್ಕೆ ಹಾಸನ ಡಿವಿಜನ್‌ಗೆ 4,78,100 ರೂಪಾಯಿಗಳು, ಬೆಂಗಳೂರು ಡಿವಿಜನ್‌ಗೆ 1,86,700 ರೂಪಾಯಿಗಳು, ಮಂಡ್ಯ ಮತ್ತು ಮಳವಳ್ಳಿ ಡಿವಿಜನ್‌ಗೆ 2,98,500 ರೂಪಾಯಿಗಳು ಇಷ್ಟನ್ನು ಕೊಟ್ಟಿದೆ. ಸೇತುವೆ ಕಟ್ಟುವುದಕ್ಕೆ, ಹಾಸನ ಡಿವಿಜನ್‌ಗೆ 1,50,000 ರೂಪಾಯಿಗಳು, ಬೆಂಗಳೂರು ಡಿವಿಜನ್‌ಗೆ 35,500 ರೂಪಾಯಿಗಳು, ಮಂಡ್ಯ ಮತ್ತು ಮಳವಳ್ಳಿ ಡಿವಿಜನ್‌ಗೆ 20,000 ರೂಪಾಯಿಗಳನ್ನು ಒದಗಿಸಿದೆ. ಇದೂ ಅಲ್ಲದೆ ಹಾಸನ ಡಿಸ್ಟ್ರಿಕ್ಟ್‌ನಲ್ಲಿ ಹೇಮಾವತಿನದಿಗೆ ಮತ್ತು ಯಗಚಿ ಹೊಳೆಗೆ ಸೇತುವೆ ಕಟ್ಟುವುದಕ್ಕೆ 2,51,900 ರೂಪಾಯಿಗಳ ಲಂಪ್‌ಸಂ ಗ್ರಾಂಟ್ ಸೇರಿಸಲಾಗಿದೆ. ಹೀಗೆಯೇ ನೀರಾವರಿ ವಿಚಾರದಲ್ಲಿ ತೆಗೆದುಕೊಂಡುದೇ ಆದರೆ ಐ. ಎನ್. ಇ. ಡಿ., (ನಾನ್ ಕಮರ್ಷಿಯಲ್) ಹೆಡ್‌ನಲ್ಲಿ ಹಾಸನ ಡಿವಿಜನ್‌ಗೆ 30 ಸಾವಿರ, ಬೆಂಗಳೂರು ಡಿವಿಜನ್‌ಗೆ 25 ಸಾವಿರ, ಮಂಡ್ಯ ಮತ್ತು ಮಳವಳ್ಳಿ ಡಿವಿಜನ್‌ಗೆ 64 ಸಾವಿರ ರೂಪಾಯಿಗಳನ್ನು ಒದಗಿಸಲಾಗಿದೆ. ಮತ್ತು ನಾರ್ಮಲ್ ಕೆಲಸಕ್ಕೆ ಹಾಸನ ಡಿವಿಜನ್‌ಗೆ 37 ಸಾವಿರ, ಬೆಂಗಳೂರು ಡಿವಿಜನ್‌ಗೆ 1,40,300 ರೂಪಾಯಿಗಳು ಮಂಡ್ಯ ಮತ್ತು ಮಳವಳ್ಳಿ ಡಿವಿಜನ್‌ಗೆ 1,89,000 ರೂಪಾಯಿಗಳನ್ನು ಒದಗಿಸಿದೆ. ಸಣ್ಣ ನೀರಾವರಿ ಕಾಂಗಾರಿಗಳಿಗೆ ಬೆಂಗಳೂರು ಡಿವಿಜನ್‌ಗೆ 1,10,000 ರೂಪಾಯಿಗಳು ಮಂಡ್ಯ ಮತ್ತು ಮಳವಳ್ಳಿ ಡಿವಿಜನ್‌ಗೆ 85 ಸಾವಿರ ರೂಪಾಯಿಗಳು ಹಾಸನ ಡಿವಿಜನ್‌ಗೆ 50 ಲಕ್ಷ ರೂಪಾಯಿಗಳನ್ನು ತೆಗೆದು ಇಟ್ಟಿದೆ. ಈ ರೀತಿ ಅಗತ್ಯ ಎಷ್ಟಿದೆಯೋ ಅಷ್ಟನ್ನು ಸಹ ಕೊಡುವುದಕ್ಕೆ ಸರ್ಕಾರದವರು ಏರ್ಪಾಡು ಮಾಡಿದ್ದಾರೆ. ಆಗಲೇ ನಾನು ಹೇಳಿದಂತೆ ಕೆಲವುಕಡೆ ಲಂಪ್‌ಸಂ ಗ್ರಾಂಟ್ ಒದಗಿಸಿರುವುದಕ್ಕೆ ಅದರ ವಿವರ ಬಡ್ಜೆಟ್‌ನಲ್ಲಿ ನಮೂದಾಗಿದೆ. ಆದ್ದರಿಂದ ಉತ್ಪ್ರೇಕ್ಷೆಯ ಅಂಕಿ ಅಂಶ ತೋರಿಸಿದ್ದೀರಿ ಎನ್ನುವುದು ಅಷ್ಟು ಸರಿಯಾದದ್ದಲ್ಲ. ಶ್ರೀಮಾನ್ ಸುರಪುರ ಮಲ್ಲಪ್ಪನವರು ಒಂದು ಆಕ್ಷೇಪಣೆ ಮಾಡಿದರು. ಅವರು ಈಗ ಸಭೆಯಲ್ಲಿ ಇಲ್ಲ, ಟೀಕೆಮಾಡಿದವರು ಸಭೆಯಲ್ಲಿದ್ದು ಸರ್ಕಾರದ ಪರವಾಗಿ ಸಮಜಾಯಿಷಿ ಕೇಳಿದರೆ ಅವರ ಮನಸ್ಸಿಗೆ ಸರಿಯಾಗುತ್ತದೆಯೇ ಹೊರತು ಇಲ್ಲದೇ ಇದ್ದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಶ್ರೀಮಾನ್ ಸುರಪುರ ಮಲ್ಲಪ್ಪನವರು ನೌಕರರಿಗೆ ಸ್ವಲ್ಪ ಉತ್ತೇಜನ ಕೊಡಬೇಕೆಂದು ಮತ್ತು ಹೊಸ ಪ್ರಾಂತದಲ್ಲಿ ನೀರಾವರಿಯಲ್ಲಿ ಅಭ್ಯಾಸವಿಲ್ಲದ ಜನರಿಗೆ ಸ್ವಲ್ಪ ಹೆಚ್ಚಿನ ಉತ್ತೇಜನ ಮತ್ತು ಸಹಾಯ ಮಾಡಬೇಕೆಂದು ಸಲಹೆ ಮಾಡಿದ್ದಾರೆ. ಹೀಗೆ ಕೆಲಸಮಾಡತಕ್ಕ ಸಂದರ್ಭದಲ್ಲಿ ಸರ್ಕಾರದವರು ಅದನ್ನು ಮನಗಂಡು ಕೆಲವು ರಿಯಾಯಿತಿಗಳನ್ನು ಕೊಡಲು ಈಗಾಗಲೇ ಆರ್ಡರ್ ಮಾಡಿದ್ದಾರೆ. ಹೊಸದಾಗಿ ನೀರಾವರಿಗೆ ಬರತಕ್ಕ ಪ್ರದೇಶದಲ್ಲಿ ಮುಂಚೆಯೇ ವಾಟರ್ ರೇಟ್ ತೆಗೆದುಕೊಳ್ಳಕೂಡದು ಎಂದು ಮಾಡಿದ್ದಾರೆ. ಇದುವರೆಗೂ ವಿಶ್ವೇಶ್ವರಯ್ಯ ನಾಲಾಕೆಳಗೆ ಮೊದಲನೆವರ್ಷ ¼ ಭಾಗ, ಎರಡನೆಯ ವರ್ಷ ½ ಭಾಗ ಮೂರನೆಯ ವರ್ಷ ಪೂರ್ತಿಯಾಗಿ ವಾಟರ್‌ರೇಟ್ ತೆಗೆದುಕೊಳ್ಳಬೇಕೆಂದು ರೂಲ್ಸ್ ಇನಿತ್ತೋ ಅದೇರೀತಿ ಮೊದಲನೆ ವರ್ಷ ಏನೂ ತೆಗೆದುಕೊಳ್ಳಕೂಡದು, ಎರಡನೆವರ್ಷ ¼ ಭಾಗ, ಮೂರನೆಯವರ್ಷ ½ ಭಾಗ, ನಾಲ್ಕನೆಯ ವರ್ಷ ¾ ಭಾಗ, ಐದನೆಯವರ್ಷ ಪೂರ್ತಿ ತೆಗೆದುಕೊಳ್ಳಬೇಕೆಂದು ರಿಯಾಯಿತಿ ತೋರಿಸಿದ್ದೇವೆ. ಹಾಗೆಯೇ ಆಯಾ ಪ್ರಾಂತ್ಯದಲ್ಲಿ ಯಾವ ಯಾವ ಭಾಗದಲ್ಲಿ ಎಂತೆಂತಹ ಬೆಳೆ ಹಾಕಬೇಕೆಂಬುದನ್ನೂ ತಿಳಿಸಿದ್ದೇವೆ. ಸಾಮಾನ್ಯವಾಗಿ ಪಬ್ಲಿಕ್ ವರ್ಕ್ಸ್ ಇಲಾಖೆಯ ರೂಲ್ಸ್ ಪ್ರಕಾರ ಆಯಾಯ ಸರ್ವೇ ನಂಬರಿನ ಹಿಡುವಳಿದಾರರು ಅವರೇ ನಾಲೆಗಳನ್ನು ಹಾಕಿಕೊಳ್ಳಬೇಕೆಂದು ಇದೆ. ಅಭ್ಯಾಸವಿಲ್ಲದ ಕಡೆ ಉತ್ತೇಜನ ಕೊಡಬೇಕೆಂಬ ದೃಷ್ಟಿಯಿಂದ ಆಯಾಯ ಸರ್ವೇ ನಂಬರಿಗೆ ಮತ್ತು ಹಿಡುವಳಿ ಜಮೀನಿಗೆ ಸರ್ಕಾರದವರೇ ನಾಲೆ ಕೊಡಿಸಿ ಕೊಡಬೇಕೆಂದು ಕೇಳಿಕೊಂಡಿದ್ದರು. ಒಪ್ಪಿಕೊಂಡಿದ್ದೇನೆ. ನಾನು ಹೋದಾಗ ಕೆಲವು ಸ್ನೇಹಿತರು ಹೇಳಿದರು, ಅಲ್ಲಿ ಬತ್ತ ಬೆಳೆಯುವುದು ಎಂದರೆ ಗೊತ್ತೇ ಇಲ್ಲ, ನಾಟಿ ಹಾಕುವುದು ಹೇಗೆ ಎಂಬುದನ್ನು ಅವರು ನೋಡಿಯೇ ಇಲ್ಲ ಎಂದು. ಆದ್ದರಿಂದ ಅಲ್ಲಲ್ಲಿ ಡೆಮಾನ್‌ಸ್ಟ್ರೇಷನ್ ಫಾರಂಗಳನ್ನು ಏರ್ಪಾಡುಮಾಡಿ ಯಾವ ಯಾವ ಪ್ರಾಂತ್ಯದಲ್ಲಿ ಏನೇನು ಬೆಳೆ ಬೆಳೆಯಬೇಕೆನ್ನುವುದನ್ನು ರೈತರಿಗೆ ತೋರಿಸುವುದಕ್ಕೂ ಸಹ ಏರ್ಪಾಡು ಮಾಡಿದೆ.

ಹೀಗೆಯೇ ಇದುವರೆಗೂ ಆಯಾಯ ನೀರಾವರೀ ಅಚ್ಚುಕಟ್ಟಿನಲ್ಲಿ ರಸ್ತೆಗಳನ್ನು ಮಾಡಿರಲಿಲ್ಲ. ವಿಶ್ವೇಶ್ವರಯ್ಯ ನಾಲಾಕೆಳಗೆ ಮಾತ್ರ ಷುಗರ್‌ಕೇನ್‌ಸೆಸ್ ಫಂಡ್‌ನಿಂದ ಹಣ ದೊರಕಿದ್ದರಿಂದ ಆ ಭಾಗದಲ್ಲಿ ಮಾತ್ರ ರಸ್ತೆ ಆಗಿದೆ. ಬಾಕಿ ನಾಲೆಗಳ ಕೆಳಗೆ ಅಂಥ ಒಂದು ಸೌಲಭ್ಯ ಇದುವರೆಗೂ ಕಾಣುತ್ತಿಲ್ಲ. ಹೊಸದಾಗಿ ನೀರಾವರಿಗೆ ಬರತಕ್ಕ ಪ್ರಾಂತ್ಯಗಳಲ್ಲಿ ಅಚ್ಚುಕಟ್ಟಿನ ಜಮೀನಿನಲ್ಲಿ ಗೊಬ್ಬರ, ಗೋಡು ಹೊಡೆಯುವುದಕ್ಕೆ, ದಿನಸಿ ಸಾಗಿಸುವುದಕ್ಕೆ ಅನುಕೂಲವಾದ ರಸ್ತೆಗಳನ್ನು ಸರ್ಕಾರದವರೇ ಮಾಡಿಸಬೇಕೆಂದು ತೀರ್ಮಾನಮಾಡಿದ್ದಾರೆ. ಈ ಅನುಕೂಲಗಳ ಜೊತೆಗೆ ಅಲ್ಪಾವಧಿ ಸಾಲ ಮತ್ತು ದೀರ್ಘಾವಧಿ ಸಾಲ ಈರೀತಿ ಹಣ ಸಹಾಯಮಾಡಬೇಕೆಂದು ಸಹ ಏರ್ಪಾಡು ಮಾಡಿದ್ದೇವೆ. ಹೀಗೆ ನಾನಾ ವಿಧವಾಗಿ ಸಹಾಯಮಾಡಿ ಅಲ್ಲಿನ ಜನಗಳು ನೀರಾವರೀ ವ್ಯವಸಾಯಕ್ಕೆ ಅವರ

ಮನಸ್ಸನ್ನು ಕೊಡಲಿ ಎಂಬ ದೃಷ್ಟಿಯಿಂದ ಸರ್ಕಾರದವರು ಕೆಲಸ ನಡೆಸಿದ್ದಾರೆ ಎಂದು ನಾನು ಸುರಪುರ ಮಲ್ಲಪ್ಪನವರು ಮಾಡಿದಂಥ ಸಲಹೆಗೆ ಸಮಜಾಯಿಷಿ ಕೊಡುತ್ತಾ ಇದ್ದೇನೆ.

ಆಮೇಲೆ ಶ್ರೀ ಎ. ಎಸ್. ಪಾಟೀಲರವರು ಮಲಪ್ರಭಾ ಪ್ರಾಜೆಕ್ಟಿಗಾಗಿ ಏನೂ ಮಾಡಲಿಲ್ಲ ಎಂದು ಹೇಳಿದರು. ಏನೂ ಮಾಡಲಿಲ್ಲ ಎಂದು ಹೇಳುವುದು ಅಷ್ಟು ಸರಿಯಾಗುವುದಿಲ್ಲ. ಮಲಪ್ರಭಾ ಪ್ರಾಜೆಕ್ಟನ್ನು ನಮ್ಮ ಮೈಸೂರಿನ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದೆ. ಅದಕ್ಕಾಗಿ ಇಂಡಿಯಾ ಸರಕಾರದವರನ್ನು ಅನುಮತಿ ಕೊಡಬೇಕೆಂದು ಕೇಳುತ್ತಿದ್ದೇನೆ. ಆದರೆ ಪರದೇಶದಿಂದ ಒದಗಬೇಕಾದ ಹಣದ ವಿನಿಮಯದ ತೊಂದರೆಗಳಿಂದ ಇದನ್ನು ಈಗ ಮುಂದುವರಿಸುವುದಕ್ಕಾಗುವದಿಲ್ಲ ಎಂದು ಹೇಳಿದರು. ಅದಕ್ಕೆ ಪುನಃ ನಮ್ಮ ಸರಕಾರ ಈ ಪ್ರದೇಶಗಳು ಬರಗಾಲಕ್ಕೆ ಈಡಾಗಿ ತೊಂದರೆಗೊಳಗಾಗಿವೆ, ಇದನ್ನು ಈಗಲೇ ತೆಗೆದುಕೊಂಡರೆ ಜನಗಳಿಗೆ ಬಹಳ ಅನುಕೂಲವಾಗುತ್ತದೆ ಎಂದು ಒತ್ತಾಯ ಮಾಡಿದೆ. ನಮ್ಮಲ್ಲಿ ಕೆಲವು ಸಿವಿಲ್ ಇಂಜನಿಯರಿಂಗ್ ವರ್ಕ್ಸ್‌ಗಳಿಗಾಗಿ ಫಾರಿನ್ ಎಕ್ಸ್‌ಚೇಂಜಿನಿಂದ ಸಹಾಯ ಬೇಕಾಗಿಲ್ಲ ಎಂದು ನಾವು ಪುನಃ ಒತ್ತಾಯಪಡಿಸಿ ಸೆಂಟ್ರಲ್ ವಾಟರ್‌ಅಂಡ್ ಪವರ್ ಕಮಿಷನ್ನಿನಿಂದ ಟೆಕ್ನಿಕಲ್ ಅಸಿಸ್ಟೆನ್ಸ್‌ಸ್ಕೀಮಿನಂತೆ ಸಹಾಯವನ್ನು ಒದಗಿಸಬೇಕೆಂದು ಒತ್ತಾಯ ಮಾಡಿದಮೇಲೆ ಈಗ ಆ ಕಾರ್ಯಕ್ರಮಗಳಿಗೆ ಪ್ರಿಲಿಮಿನರಿ ವರ್ಕ್ಸ್‌ಗಾಗಿ ಎಂದರೆ ಪೂರ್ವಭಾವಿಯಾಗಿ ಮಾಡುವ ಕೆಲಸಗಳಿಗಾಗಿ ಹತ್ತು ಸಾವಿರ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ದೊಡ್ಡ ನೀರಾವರಿ ಯೋಜನೆಗಾಗಿ ಸುಮಾರು ಹದಿನೈದು ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿ ಖರ್ಚಾಗುತ್ತದೆ ಮತ್ತು ಇದರ ಉಪಯುಕ್ತತೆ ವಿಚಾರದಲ್ಲಿ ಹಿಂದೆ ಇದ್ದ ಸರಕಾರದವರು ಸರ್ವೆ ಇತ್ಯಾದಿಗಳನ್ನು ಮಾಡಿ ಅವರು ಲೆಕ್ಕ ಕೂಡ ತಯಾರುಮಾಡಿದ್ದಾರೆ. ಇದನ್ನು ಈಗಿನ ಪರಿಸ್ಥಿತಿಗೆ ಅನುಸಾರವಾಗಿ ಸ್ವಲ್ಪ ಬದಲಾವಣೆ ಮಾಡಬೇಕು ಎಂದು ನಮ್ಮ ಸ್ಟೇಟಿನಲ್ಲಿ ಸ್ಟಾಂಡಿಂಗ್ ಟೆಕ್ನಿಕಲ್ ಅಡ್ವೈಸರಿ ಕಮಿಟಿ ಎಂದು ಒಂದು ಕಮಿಟಿ ಮಾಡಿದೆ. ನಿವೃತ್ತರಾಗಿರುವ ಮುಖ್ಯ ಇಂಜನಿಯರುಗಳು ಮತ್ತು ಕೆಲಸದಲ್ಲಿರತಕ್ಕ ಇಂಜನಿಯರುಗಳು ಈ ಕಮಿಟಿಯಲ್ಲಿದ್ದಾರೆ. ಈ ಸಮಿತಿಯವರು ಹೀಗೆ ಲೆಕ್ಕಪತ್ರಗಳನ್ನು ವಿಮರ್ಶೆ ಮಾಡಿ ಅವರು ಒಪ್ಪಿಗೆ ಕೊಟ್ಟಮೇಲೆ ನಾವು ಏನಾದರೂ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಈಗಾಗಲೇ ಮಲಪ್ರಭಾ ಪ್ರಾಜೆಕ್ಟಿನ ಪ್ರಿಲಿಮಿನರಿ ವರ್ಕ್ಸ್‌ನ್ನು ಪ್ರಾರಂಭಮಾಡುವುದಕ್ಕೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಸಾಧ್ಯವಾದಷ್ಟುಮಟ್ಟಿಗೆ ಇದರಿಂದ ಜನಗಳಿಗೆ ನೀರನ್ನು ಒದಗಿಸಿಕೊಡಬೇಕೆನ್ನುವುದೇ ಸರಕಾರದ ಉದ್ದೇಶವಾಗಿದೆ.

ಶ್ರೀ ಡಿ. ಟಿ. ಸೀತಾರಾಮರಾವ್ ಭದ್ರ ಪ್ರಾಜೆಕ್ಟಿನಲ್ಲಿ ಮುಳುಗಡೆಯಾಗಿರತಕ್ಕ ಜಮೀನುಳ್ಳ ರೈತರಿಗೆ ಬಹಳ ಅನಾನುಕೂಲವಾಗಿದೆ; ಮತ್ತು ತೊಂದರೆಯಾಗಿದೆ ಎಂದು ಹೇಳಿದರು ಮತ್ತು ಅಲ್ಲಿ ಮಾಡುತ್ತಿರುವ ಕೆಲಸ ನಿಧಾನವಾಗುತ್ತಿದೆ ಎಂದು ಹೇಳಿದರು. ಈ ವಿಚಾರದಲ್ಲಿ ಡೆಪ್ಯುಟಿ ಕಮಿಷನರಿಂದಲೂ ಈ ರೀತಿಯಾದ ಒಂದು ವರದಿ ಬಂದಿದೆ. ಅದಕ್ಕೋಸ್ಕರ ಅಗತ್ಯವಾಗಿ ಬೇಕಾದ ಹೆಚ್ಚಿನ ಸಿಬ್ಬಂದಿಯನ್ನು ಸರಕಾರದವರು ಮಂಜೂರು ಮಾಡಿದ್ದಾರೆ. ಆ ಸಿಬ್ಬಂದಿಯುವರು ಬಂದಮೇಲೆ ಈ ಕಾರ್ಯವನ್ನು ಇನ್ನೂ ತ್ವರಿತವಾಗಿ ತೆಗೆದುಕೊಳ್ಳುತ್ತೇವೆ.

ಶ್ರೀ ದೂದ್ಯಾನಾಯಕ್ ಅವರು ಸುಳ್ಳು ಬಿಲ್ಲುಗಳನ್ನು ಮಾಡುತ್ತಿದ್ದಾರೆ ಮತ್ತು ತುಂಗಾನದಿ ಯೋಜನೆಯ ಲೆಕ್ಕಗಳನ್ನು ತಪ್ಪಾಗಿ ಬರೆಯುತ್ತಿದ್ದಾರೆ ಎಂದು ತಿಳಿಸಿದರು. ಈ ವಿಚಾರವನ್ನು ಅವರು ತಿಳಿಸಿದಂತೆ ಸರಕಾರ ತೀವ್ರವಾಗಿ ಗಮನಿಸಿ ಆಂಟೀಕರಪ್ಷನ್ ಇಲಾಖೆಯವರಿಗೆ ತಿಳಿಸಿ ಅವರಿಂದ ತನಿಖೆ ಮಾಡಿಸಿ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಇನ್ನು ಬೆಳೆಯಮೇಲೆ ನೀರನ್ನು ಒದಗಿಸಿದುದಕ್ಕಾಗಿ ವಾಟರ್ ರೇಟನ್ನು ತೆಗೆದುಕೊಳ್ಳುವ ವಿಚಾರವನ್ನು ಹೇಳಿದ್ದಾರೆ. ಅದು ಒಂದೊಂದು ಜಾಗದಲ್ಲಿ ಒಂದೊಂದು ರೀತಿಯಾಗಿರುತ್ತದೆ. ಇವನ್ನೆಲ್ಲ ತಿಳಿದುಕೊಂಡು ಒಂದೇ ರೀತಿಯಾಗಿ ವಸೂಲುಮಾಡಬೇಕೆಂದು ಯೋಚನೆ ಮಾಡಲಾಗುತ್ತಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು ಕೆರೆಗಳನ್ನು ದುರಸ್ತು ಮಾಡುವಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕು ಎಂದು ಹೇಳಿದ್ದಾರೆ. ಮುನ್ನೂರರಿಂದ ನಾನೂರು ಎಕರೆಗಳಷ್ಟು ಅಚ್ಚುಕಟ್ಟಿರುವ ದೊಡ್ಡ ಕೆರೆಗಳನ್ನು ಪಿ. ಡಬ್ಲ್ಯು. ಇಲಾಖೆಗೆ ವಹಿಸಿಕೊಳ್ಳುವುದೇನೋ ಸರಿಯಾದುದು. ಅವರು ಹೇಳಿರುವಂತೆ ಈ ಸಲಹೆಯೇನೋ ಸೂಕ್ತವಾದುದ್ದು. ಆದರೆ ಎಲ್ಲ ಕೆರೆಗಳನ್ನೂ ವಹಿಸಿಕೊಂಡರೆ ಅದಕ್ಕೆ ಇರುವ ಖರ್ಚುವೆಚ್ಚಗಳನ್ನೆಲ್ಲ ನೋಡಬೇಕು. ಸರಕಾರದವರು ದೊಡ್ಡ ಕೆರೆಗಳನ್ನೇ ತೆಗೆದುಕೊಳ್ಳಬೇಕೆಂದಿಲ್ಲ. ಇದನ್ನೂ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡುತ್ತಿದ್ದಾರೆ. ರೆವೆನ್ಯೂ ಆಡಳಿತಕ್ಕೆ ಸೇರಿದ ಆಡಳಿತದಲ್ಲೆ ಕೆಲವು ಕೆರೆಗಳಿವೆ. ಅದನ್ನೂ ತೆಗೆದುಕೊಳ್ಳಬೇಕಾಗುತ್ತದೆ. ಇವನ್ನೆಲ್ಲ ಆಲೋಚನೆಮಾಡಿ ಎಲ್ಲೆಲ್ಲಿ ಈ ರೀತಿಯಾದ ಕೆರೆಗಳು ಸರಿಯಾಗಿ ಉಪಯೋಗಕ್ಕೆ ಬರುತ್ತಿಲ್ಲವೋ ಅವುಗಳನ್ನೆಲ್ಲ ಜಾಗ್ರತೆಯಾಗಿ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿದ್ದಾರೆ. ನೀರನ್ನು ಕೊಡುತ್ತಿದ್ದಾರೆ, ಅದಕ್ಕಾಗಿ ವಾಟರ್ ರೇಟನ್ನು ಕೊಡಬೇಕು. ವಾಟರು ರೇಟು ಬೇರೆ, ಎಕರೇಜು ಸೆಸ್ಸು ಬೇರೆ. ವಾಟರ್ ರೇಟಿನ ವಿಷಯವನ್ನು ಪರಿಶೀಲಿಸುವುದಕ್ಕಾಗಿ ಒಂದು ಕಮಿಟಿಯನ್ನು ಏರ್ಪಾಡು ಮಾಡಿದ್ದೇವೆ. ಈಗ ನಮ್ಮ ಮುಂದೆ ಬೇರೆ ಬೇರೆಯಾದ ರೇಟುಗಳಿವೆ. ಇದು ಸರಿಯಾಗಿಲ್ಲ. ಈ ಸಂದರ್ಭದಲ್ಲಿ ಎಲ್ಲ ಭಾಗಗಳಿಗೂ ಅನ್ವಯವಾಗುವಂತೆ ಒಂದು ಅಮೆಂಡಿಂಗು ಆಕ್ಟನ್ನು ಹೊಸದಾಗಿ ಈ ಇರಿಗೇಷನ್ನಿನ ಜಿಲ್ಲೆಗೆ ತಂದು ಈ ಸಭೆಯಲ್ಲಿ ಪಾಸುಮಾಡಬೇಕಾಗಿದೆ. ನೀರಿನ ರೇಟು ಬೇರೆ ಬೇರೆ ಪ್ರಾಂತಗಳಲ್ಲಿ ಬೇರೆ ಬೇರೆಯಾಗಿರುವುದರಿಂದ ಪ್ರತ್ಯೇಕವಾಗಿ ಎಲ್ಲ ವಿಚಾರಗಳನ್ನು ಪರಿಶೀಲಿಸಿ ತೀರ್ಮಾನಗಳನ್ನು ಕೈಗೊಳ್ಳಬೇಕಾಗಿದೆ. ಇದರಿಂದ ಕೆಲಸ ನಿಧಾನವಾಗುತ್ತಿದೆ. ವಾಟರು ರೇಟನ್ನು ಸಾಮಾನ್ಯವಾಗಿ ಬೆಳೆಯ ಮೇಲೆ ಆಯಾ ಪ್ರದೇಶಕ್ಕನುಸಾರವಾಗಿ ಮಾಡುವಾಗ ವ್ಯತ್ಯಾಸವಿರಬಾರದು. ಇದಕ್ಕಾಗಿ ಶೀಘ್ರದಲ್ಲೇ ಇರಿಗೇಷನ್ನು ಆಕ್ಟಿಗೆ ತಿದ್ದುಪಡಿಮಾಡಿ ಅದನ್ನು ತಮ್ಮ ಮುಂದೆ ಅಂಗೀಕಾರಕ್ಕೆ ಇಡುತ್ತೇವೆ. ಹೊಸದಾಗಿ ಆಗುತ್ತಿರುವ ನೀರಾವರಿ ಪ್ರಾಜೆಕ್ಟುಗಳಿಗೆ ವಾಟರ್ ರೇಟನ್ನು ಹಾಕುವುದಿಲ್ಲ. ವಿಶ್ವೇಶ್ವರಯ್ಯ ನಾಲಾ ಕೆಳಗೆ ಎಕ್ರೇಜು ಸೆಸ್ಸುಎಂದಿದೆ. ಅಲ್ಲಿ ಸುಮಾರು ಒಂದರಿಂದ ಮೂರು ರೂಪಾಯಿಗಳವರೆಗೆ ಸೆಸ್ಸನ್ನು ವಸೂಲು ಮಾಡುತ್ತಾರೆ. ಒಂದು ರೂಪಾಯಿಗಿಂತ ಕಡಮೆ ಇರಕೂಡದು ಎಂದು ಆ ಪ್ರಕಾರ ತೆಗೆದು

(ಶ್ರೀ ಎಚ್. ಕೆ. ವೀರಣ್ಣಗೌಡ)

ಕೊಳ್ಳುತ್ತಿದ್ದಾರೆ. ವಾಟರ್ ರೇಟು ಹಾಕುವುದು ಹೊಸ ಪ್ರಾಜೆಕ್ಟುಗಳಿಗೆ ಬರುವುದಿಲ್ಲ. ಹಳೆಯಕೆರೆಗಳಿಗೆ ಕಂದಾಯ ಎಂದು ಹೇಳುತ್ತಾರೆ ತೆಗೆದುಕೊಳ್ಳುವಾಗ ಅದಕ್ಕೆ "ಲೆರಾವು" ಎಂದು ಹೇಳುತ್ತಾರೆ. ಖುಷ್ಕಿ ಕಂದಾಯ, ವಾಟರು ರೇಟು, ತರಿ ಕಂದಾಯ ಮತ್ತು ಏಕರೇಜು ಸೆಸ್ಸು ಎಲ್ಲವನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಸರ್ವೆ ಸೆಟಲುಮೆಂಟು ಆಗುವಾಗ ಖುಷ್ಕಿ ಕಂದಾಯ ಇದ್ದು ತರಿ ಫಸಲನ್ನು ಇಡುತ್ತಿದ್ದರೆ, ತರಿ ಕಂದಾಯ ಕೊಡಬೇಕಾಗುತ್ತದೆ. ಇಲ್ಲದೆ ಹೋದರೆ ಖುಷ್ಕಿ ಕಂದಾಯ ಕೊಡಬೇಕಾಗುತ್ತದೆ. ಅಲ್ಲದೆ ವಾಟರ್ ರೇಟಿನಲ್ಲಿ ವ್ಯತ್ಯಾಸವಿದೆ. ಇಂತಹ ಜಮೀನುಗಳಮೇಲೆ ಸೆಸ್ಸನ್ನು ಹಾಕುತ್ತಾರೆ. ಹೊಸದಾಗಿ ಆಗುವ ಪ್ರಾಜೆಕ್ಟುಗಳಿಗೆ ಈ ಸೆಸ್ಸು ಬೀಳುವುದಿಲ್ಲ. ಮೇಂಟೆನೆನ್ಸು ಮಾತ್ರ ಬೀಳುತ್ತದೆ.

ಶ್ರೀಮಾನ್ ದೂದ್ಯಾನಾಯಕರವರು ಒಂದು ಸಲಹೆ ಮಾಡಿದ್ದಾರೆ. ಸಾಲಂಗ ಹೊಸ ಕೆರೆಯನ್ನು ಸ್ಯಾಂಕ್ಷನ್ನು ಮಾಡಿ ಒಂದು ವರ್ಷವಾದರೂ ಏನನ್ನೂ ಮಾಡಿಲ್ಲ ಎಂದು ಹೇಳಿದ್ದಾರೆ. ಅದು ಇನ್ನೂ ಸ್ಯಾಂಕ್ಷನ್ನು ಆಗಿಲ್ಲ. ಚೀಫ್ ಇಂಜನೀಯರು ಕಳುಹಿಸಬೇಕಾಗಿದೆ. ಚೀಫ್ ಇಂಜನೀಯರು ಕಳುಹಿಸಿದ ಮೇಲೆ ಅದನ್ನು ಸ್ಯಾಂಕ್ಷನ್ನು ಮಾಡಬೇಕಾಗಿದೆ. ಇದರಲ್ಲಿ ಸುಮಾರು ಏಳೂವರೆ ಲಕ್ಷ ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ಅವಕಾಶವಿದೆ.

ಶ್ರೀಮಾನ್ ಮಲ್ಲಾರಾಧ್ಯರು ಅನೇಕ ಉಪಯುಕ್ತ ಸಲಹೆಗಳನ್ನು ಮಾಡುವುದರಜೊತೆಗೆ ಕೆಲವು ವಿವರಗಳನ್ನು ಕೇಳಬಯಸಿದ್ದಾರೆ. ಯಾವ ಶಿರೋನಾಮೆ ಕೆಳಗೆ ಖರ್ಚುಮಾಡುವದೆಂದು ತಿಳಿಸದಿದ್ದರೆ ಟೀಕೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಯಾವ ಯಾವ ಹೆಡ್‌ಕೆಳಗೆ ತೆಗೆದುಕೊಳ್ಳಬೇಕು ಎನ್ನುವುದು ಪೇಜ್ 465, 463, ಅಪೆಂಡಿಕ್ಸ್ (c) ನಲ್ಲಿ ನಮೂದು ಆಗಿದೆ. ಅವರಗಮನವನ್ನು ಅದಕ್ಕೆ ಸೆಳೆಯುತ್ತೇನೆ. ಡಾ॥ ನಾಗೂರ್‌ರವರು ಇರಿಗೇಷನ್ ಕೆಳಗೆ ನೀರು ನಷ್ಟ ಆದರೆ ಯಾರಿಂದ ನಷ್ಟ ಆಗಿದೆಯೋ ಅಂಥಾ ರೈತನಿಂದ ವಸೂಲು ಮಾಡಬೇಕು ಎಂದುಹೇಳಿದ್ದಾರೆ. ಬಹುಶಃ ಸರ್ಕಾರದ ಅಪ್ಪಣೆಯಿಲ್ಲದೆ ನೀರನ್ನು ಉಪಯೋಗಿಸಿಕೊಂಡು ತರೀ ವ್ಯವಸಾಯಮಾಡುವ ರೈತರಿಂದ ತೆಗೆದುಕೊಳ್ಳಬೇಕು ಎಂದರೆ ಅಂಥಾಕಡೆ ಡಬಲ್ ವಾಟರ್ ರೇಟ್ ಈಗಾಗಲೇ ವಸೂಲು ಮಾಡುತ್ತಿದ್ದಾರೆ. ಕೊಟ್ಟೂರು ಬ್ಯಾಂಕ್ ಬೇಗಮಾಡಬೇಕು ಎಂದು ಹೇಳಿದ್ದಾರೆ. 470 (e) ನಲ್ಲಿ ಅನ್ ಸ್ಯಾಂಕ್ಷನ್ಡ್ ವರ್ಕ್ಸ್ ಗೋಸ್ಕರ ಲಂಪ್‌ಸಮ್ ಇದೆ. ಅದರಿಂದ ಮಾಡಿಸಬಹುದು. ಅದರಿಂದ ಇದಕ್ಕೆ 1,30,000 ರೂಪಾಯಿಗಳಿಗೆ ಅಂದಾಜು ಆಗಿದೆ. ಅಂದಾಜನ್ನು ಚೀಫ್ ಇಂಜಿನಿಯರು ಸ್ಕ್ರೂಟಿನೈಜ್ ಮಾಡುತ್ತಿದ್ದಾರೆ. ಶ್ರೀ ಎನ್. ರಾಚಯ್ಯನವರು ಚಿಕ್ಕಹೊಳೆ ಪ್ರಾಜೆಕ್ಟನ್ನು ಕಟ್ಟುವುದನ್ನು ನಿಲ್ಲಿಸಿಬಿಟ್ಟಿದ್ದಾರೆಂದು ಹೇಳಿದ್ದಾರೆ. ಅದನ್ನು ನಿಲ್ಲಿಸಿಲ್ಲ. ಇಪ್ಪತ್ತು ಲಕ್ಷ ರೂಪಾಯಿಗಳಿಗೆ ಮಂಜೂರು ಆಗಿದೆ. ಪೂರ್ವಭಾವಿ ಕೆಲಸ ಷುರುಮಾಡಿದಾಗ ಕೆಲವು ಸಂದರ್ಭದಲ್ಲಿ ಹೀಗೆ ಆಗುತ್ತದೆ. ಅಲ್ಲಿ ಫೌಂಡೇಷನ್ ಇತ್ಯಾದಿ ನೋಡದೆ ಅಂದಾಜು ಮಾಡಿಬಿಟ್ಟಿದ್ದಾರೆ. ಅದನ್ನು ವಿಮರ್ಶೆ ಮಾಡುವುದಕ್ಕೆ ಹೋದಾಗ ಕೆಲವು ಬದಲಾವಣೆಗಳು ಮಾಡಬೇಕಾಯಿತು. ಅದಕ್ಕೋಸ್ಕರ ಇಪ್ಪತ್ತನಾಲ್ಕು ಲಕ್ಷ ರೂಪಾಯಿ ಎಸ್ಟಿಮೇಟ್ ತಿದ್ದುಪಡಿ ಮಾಡಲಾಗಿದೆ. ಪ್ಲಾನಿಂಗ್ ಟೆಕ್ನಿಕಲ್ ಅಡ್ವೈಸರಿ ಕಮಿಟಿಯವರು ಹೋಗಿ ನೋಡಿಕೊಂಡು ಬಂದಿದ್ದಾರೆ. ಅವರು ಹೋದ ಮೇಲೆ ಮತ್ತೆ ಕೆಲವು ಸಲಹೆಗಳನ್ನು ಮಾಡಿದ್ದಾರೆ. ಆ ಸಲಹೆಗಳನ್ನು ಅನುಸರಿಸಿ ಇವೊತ್ತಿನ ಪರಿಸ್ಥಿತಿಗೆ ಅನುಸಾರವಾಗಿ ಎಸ್ಟಿಮೇಟನ್ನು ಅಗತ್ಯ ಇದ್ದರೆ ರಿವೈಸ್ ಮಾಡಿ ಸರ್ಕಾರಕ್ಕೆ ಕಳುಹಿಸಬೇಕು ಎಂದು ಚೀಫ್ ಇಂಜಿನಿಯರಿಗೆ ಬರದಿದ್ದೇವೆ. ಅದರೊಳಗೆ ಈ ವರ್ಷ ಕೆಲಸ ತೆಗೆದುಕೊಂಡು ಪ್ರಿಲಿಮಿನರಿ ವರ್ಕ್ಸ್ ಷುರುಮಾಡಬೇಕೆಂದು ಸ್ಯಾಂಕ್ಷನ್ ಮಾಡಿದ್ದೇವೆ. ಲಿಂಗ್‌ಸೂಗೂರ್ ಹತ್ತಿರ ಒಂದು ಸೇತುವೆ ಆಗಬೇಕು ಎಂದು ಹೇಳಿದ್ದಾರೆ. ಅದನ್ನು ಈ ವರ್ಷದಲ್ಲೇ ತೆಗೆದುಕೊಂಡು ಕೆಲಸಮಾಡುತ್ತೇವೆ ಎಂದು ಭರವಸೆ ಕೊಡುತ್ತೇನೆ. ಶ್ರೀ ಕೂಂದೂರು ರುದ್ರಪ್ಪನವರು ಅವರಕಡೆ ಡಿಸ್ಟ್ರಿಕ್ಟ್ ಬೋರ್ಡ್ ಸೇತುವೆ ಅರ್ಧ ನಿಂತುಹೋಗಿದೆ ಎಂದು ಹೇಳಿದರು. ಅದನ್ನು ಪೂರೈಸುವುದಕ್ಕೆ ಏನು ಕಷ್ಟ ಎಂದು ಕೇಳಿದ್ದೇವೆ. 1946ನೆಯ ಇಸ್ವಿಯಲ್ಲಿ ಇದಕ್ಕೆ 57,000 ರೂಪಾಯಿ ಎಸ್ಟಿಮೇಟ್ ಆಗಿದೆ. ಆ ಕೆಲಸ ಪ್ರಾರಂಭ ಮಾಡಿದಮೇಲೆ ಎಸ್ಟಿಮೇಟ್ ಲಕ್ಷದಮೇಲೆ ಹೋಗಿದೆ. ಹೀಗೆ ಇದು ಹಿಂದಕ್ಕೂ ಮುಂದಕ್ಕೂ ಹೋಗಿ ಹತ್ತು ವರ್ಷ ಕಳೆದಿದೆ. ಈಗ 14,00,040.ಕ್ಕೆ ಎಸ್ಟಿಮೇಟ್ ಆಗಿದೆ. ಅದನ್ನು ಸ್ಕ್ರೂಟಿನೈಜ್ ಮಾಡುತ್ತಿದ್ದಾರೆ. ಚೀಫ್ ಇಂಜಿನಿಯರಿಂದ ಬಂದಕೂಡಲೇ ಕೆಲಸತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಶ್ರೀ ಸುರ್‌ಪೂರ್ ಮಲ್ಲಪ್ಪನವರು ಕಲ್ಲಹಳ್ಳಿ ಸೇತುವೆ ಆಗಬೇಕು ಎಂದು ಹೇಳಿದ್ದಾರೆ. ಇದನ್ನು ಪ್ಲಾನಿನಲ್ಲಿ, ಬಡ್ಜೆಟ್ಟನಲ್ಲಿ ಸೇರಿಸಿಲ್ಲ. ಹೊಸದಾಗಿ ಸಲಹೆ ಬಂದಿದೆ. ಇದನ್ನು ಪರೀಕ್ಷೆಮಾಡಿ ಸರ್ಕಾರಕ್ಕೆ ವರದಿ ಕಳುಹಿಸಬೇಕು ಎಂದು ತಿಳಿಸಲಾಗಿದೆ. ಕೃಷ್ಣಾನದಿಗೆ ಒಂದು ಸೇತುವೆ ಆಗಬೇಕು ಎಂದು ಶ್ರೀ ಬಸನಗೌಡರು ಸಲಹೆ ಮಾಡಿದ್ದಾರೆ. ಇದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೇ ಎಂದು ಕೇಳಿದ್ದಾರೆ. 25 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಇಂಡಿಯಾ ಸರ್ಕಾರದವರು ಸಹಾಯ ಮಾಡಲು ಒಪ್ಪಿಕೊಂಡಿದ್ದಾರೆ. ಇದಕ್ಕೆ 35 ಲಕ್ಷ ರೂಪಾಯಿ ಆದರೂ ಸಹ ಕೆಲಸವನ್ನು ಮೂರು ವರ್ಷಗಳಲ್ಲಿ ಮಾಡಬೇಕು ಎಂದು ಏರ್ಪಾಟಾಗಿದೆ. 1958-59 ರಲ್ಲಿ 50 ಸಾವಿರ, 1959-60 ರಲ್ಲಿ ಎರಡು ಲಕ್ಷ, 1960-61 ರಲ್ಲಿ 1,50,000 ರೂಪಾಯಿಗಳು ಈ ರೀತಿ ಖರ್ಚುಮಾಡಬೇಕು ಎಂದು ಇದ್ದೇವೆ. 21 ಲಕ್ಷ ರೂಪಾಯಿಗಳ ಅಂದಾಜನ್ನು ಇಂಡಿಯಾ ಸರ್ಕಾರಕ್ಕೆ ಕಳುಹಿಸಿ ಒಪ್ಪಿಗೆ ಪಡೆದು ಮುಂದಿನ ವರ್ಷದಿಂದ ಸೇರಿಸಲಾಗುತ್ತದೆ. ಆಸಂದಿ ಹತ್ತಿರ ಸೇತುವೆ ಆಗಬೇಕು ಎಂದು ಶ್ರೀ ರುದ್ರಪ್ಪನವರು ಸಲಹೆ ಮಾಡಿದ್ದಾರೆ. 70 ಸಾವಿರ ರೂಪಾಯಿಗಳಿಗೆ ಎಸ್ಟಿಮೇಟ್ ಆಗಿದೆ, ಅದು ಆಲೋಚನೆಯಲ್ಲಿದೆ. ಶ್ರೀಮತಿ ನಾಗರತ್ನಮ್ಮನವರು ಕಲ್ಲಕಟ್ಟಿಹಳ್ಳಕ್ಕೆ ಅಣೆಕಟ್ಟು ಕಟ್ಟಬೇಕೆಂದು ಸಲಹೆ ಮಾಡಿದ್ದಾರೆ. 1955ನೆಯ ಇಸ್ವಿಯಲ್ಲಿ ಇದನ್ನು ತನಿಖೆ ಮಾಡಿ ನೋಡಿದ್ದಾರೆ, ಕೆಳಗೆ ಇರುವ ವಿಜಯಪುರ ಅಮಾನಿ ಕೆರೆಗೆ ನೀರು ಬರುವುದಕ್ಕೆ ತೊಂದರೆಯಾಗುತ್ತದೆ ಎಂದು ಸಲಹೆ ಬಂತು. ಅದಕ್ಕೋಸ್ಕರ ಅದು ನಿಂತು ಹೋಗಿತ್ತು. ಈಚೆಗೆ ಪುನಃ ಇನ್‌ವೆಸ್ಟಿಗೇಷನ್ ಮಾಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದೆ. ಶ್ರೀ ಪಟ್ಟಣ್ಣನವರು ಒಂದು ಸಲಹೆಮಾಡಿದ್ದಾರೆ. ಆಮೇಲೆ ಆ ವಿಷಯವನ್ನು ಪ್ರತ್ಯೇಕವಾಗಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಅಸಿಸ್ಟೆಂಟ್ ಇಂಜಿನಿಯರ್ ಬೇರೆಯವರ ಹೆಸರಿನಲ್ಲಿ ಕಂಟ್ರಾಕ್ಟು ಮಾಡುತ್ತಾರೆಂದು ಹೇಳಿದ್ದಾರೆ. ಅವರು ಹಿಂದೆ ಒಂದು

ಸಲಹೆಕೊಟ್ಟರು. ತನಿಖೆಮಾಡಿ ಅದು ನಿಜ ಎಂದು ಗೊತ್ತಾಯಿತು. ಅದರಮೇಲೆ ನಾವು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಅದೇ ರೀತಿ ಅರಾಯಿದ ಅವರು ಯಾರು ಎಂದು ತಿಳಿಸಿದರೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ಅವರಿಗೆ ಭರವಸೆ ಕೊಡುತ್ತೇನೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಹೆಸರು ಕೊಡಬೇಕಾದರೆ ಒಂದು ಕಂಡೀಷನ್‌ಮೇಲೆ ಕೊಡುತ್ತೇನೆ. ನನ್ನ ಹೆಸರು ಲೀಕ್ ಮಾಡಕೂಡದು.

ಶ್ರೀ ಟಿ. ಮರಿಯಪ್ಪ.—ಬಹಿರಂಗವಾಗಿ ಹೇಳಿದ್ದೀರಿ.

ಶ್ರೀ ಎಚ್. ಕೆ. ವೀರಣ್ಣಗೌಡ.—ಶ್ರೀ ಬಸನಗೌಡರು ಒಂದು ಸಲಹೆಮಾಡಿದ್ದಾರೆ. ಒಂದು ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟ್ ಬಂಗಲೆ ಇದೆ, ಅಲ್ಲಿಗೆ ಯಾರೂ ಹೋಗುವುದಿಲ್ಲ, ಅದಕ್ಕೆ ಕಾವಲೂ ಉಂಟು, ಖರ್ಚು ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಅದನ್ನು ಹರಾಜು ಹಾಕುವುದು ಸೂಕ್ತ ಎಂದು ಏರ್ಪಾಟು ಮಾಡುತ್ತಿದ್ದೇವೆ. ಶ್ರೀ ರಾಚಯ್ಯನವರು, ಚಾಮರಾಜನಗರದ ಹೈಸ್ಕೂಲು ಬಿದ್ದುಹೋದ ಪ್ರಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದು ಬಹಳ ವ್ಯಸನಕರವಾದ ವಿಚಾರ. ಹೈಸ್ಕೂಲ್ ರೆಕಾರ್ಡ್ ಪ್ರಕಾರ ಹೈಸ್ಕೂಲು ಕಟ್ಟುವಾಗ ಕಾಂಗ್ರೆಸ್ ಸಮಿತಿಯವರು, ಪೌರಸಭೆಯವರು 30 ಸಾವಿರ ರೂಪಾಯಿಗಳನ್ನು ಗ್ರಾಂಟ್ ಕೊಟ್ಟಿದ್ದಾರೆ. ಆಗಲೇ ಕನ್‌ಸ್ಟ್ರಕ್ಷನ್ ಸರಿಯಾಗಿಲ್ಲ, ಕೆಲಸ ಸರಿಯಾಗಿ ನಡೆಯುವುದಿಲ್ಲ ಎಂದು ಅರ್ಜಿ ಬರುತ್ತಿತ್ತು. ಹೇಗೋ ಕೆಲಸ ನಡೆದು ಹೋಯಿತು. ಕಟ್ಟಡ ನಮಗೆ ಬೇಕಿಲ್ಲ ಎಂದು ಹೇಳಿ ಎರಡುವರ್ಷ ಅವರು ಕಟ್ಟಡ ವಹಿಸಿಕೊಳ್ಳಲಿಲ್ಲ, ಹಾಗೂ ಸರ್ಕಾರದವರು ಅವರನ್ನು ವಹಿಸಿಕೊಳ್ಳುವಂತೆ ಮಾಡಿದರು. ಒಂದುದಿನ ಮಳೆ ಬಂದು, ವರಾಂಡ ಬಿದ್ದುಹೋಯಿತು. ಅದು ವ್ಯಸನಕರವಾದ ಮಾತು. ನಾನು ಹೋಗಿ ನೋಡಿದ್ದೇನೆ. ಇಂಜನಿಯರ್ ಖುದ್ದು ಹೋಗಿನೋಡಿ 10-15 ಸಾವಿರ ರೂಪಾಯಿಗಳ ಖರ್ಚಾಗುತ್ತದೆ ಎಂದು ಒಂದು ಅಂದಾಜು ಕಳುಹಿಸಿದ್ದಾರೆ. ಮುಖ್ಯ ಮಂತ್ರಿಗಳೂ ಹೋಗಿ ನೋಡಿಕೊಂಡು ಬಂದಿದ್ದಾರೆ. ಇಂಜಿನಿಯರಿಂಗ್ ಇಲಾಖೆ ಆಫೀಸಿಗೋಸ್ಕರ ಆ ಕಟ್ಟಡವನ್ನು ಇಟ್ಟುಕೊಳ್ಳಲಿ, ನಮ್ಮ ಮಕ್ಕಳನ್ನು ಅಲ್ಲಿಗೆ ಕಳುಹಿಸುವುದಿಲ್ಲ ಎಂದು ಹೇಳುತ್ತಾರೆ. ಪರಿಸ್ಥಿತಿ ಹೀಗಿದೆ. ಈಗ ಸರ್ಕಾರದವರು ಒಂದು ತೀರ್ಮಾನ ಮಾಡಬೇಕಾಗಿದೆ. ಕಟ್ಟಡ ಕಟ್ಟಿಸಿಕೊಡಬೇಕಾದರೆ, ಅದನ್ನು ಕಟ್ಟಿಸಿಕೊಟ್ಟು ಆಮೇಲೆ ಈ ಕಟ್ಟಡವನ್ನು ಯಾವರೀತಿ ಉಪಯೋಗ ಮಾಡಬಹುದು ಎಂಬುದನ್ನು ಆಲೋಚನೆ ಮಾಡಬೇಕು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಯಾರು ಇಂಜನೀಯರು ಇದಕ್ಕೆ ಕಾರಣ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದಕ್ಕೆ ಜವಾಬ್ದಾರರು ಯಾರು ? ಎಂಟು ಹತ್ತು ವರ್ಷದ ಹಿಂದಿನ ಮಾತು ಇದು. Enquiry ಮಾಡಬೇಕೆಂದು ಹೇಳಿ ಮೂರ್ನಾಲ್ಕು ತಿಂಗಳಿನಿಂದಲೂ ಕ್ರಮ ನಡೆಸುತ್ತಿದ್ದೇವೆ. ಅದರ ರಿಪೋರ್ಟ್ ಇನ್ನೂ ಬಂದಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ಅದೇರೀತಿ ಸಂಗೇನಹಳ್ಳಿ ಕೆರೆಯ ವಿಷಯವೇನಾಯಿತು ?

ಶ್ರೀ ಎಚ್. ಕೆ. ವೀರಣ್ಣಗೌಡ.—ತುಪ್ಪದಹಳ್ಳಿ, ಸಂಗೇನಹಳ್ಳಿ ಕೆರೆಗಳ ವಿಚಾರದಲ್ಲಿ ಅನೇಕ ಮಾನ್ಯ ಸ್ನೇಹಿತರಿಗೆ ಗೊತ್ತಿರುವಹಾಗೆ ಒಂದು ಸಮಿತಿ ನೇಮಕ ಮಾಡಿತ್ತು; ಆ ಸಮಿತಿಯವರು ವರದಿ ಕಳುಹಿಸಿದ್ದಾರೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಅದರ ಮೇಲೆ ಆರ್ಡರನ್ನು ನಾಲ್ಕು ವರ್ಷಗಳಿಂದ ಮಾಡಲಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಾಲ್ಕುವರ್ಷ; ನಿಧಾನವಾಯಿತು. ಚೀಫ್ ಎಂಜಿನಿಯರ್ ಆಗಿದ್ದವರಿಗೆ compulsory retirement ಮಾಡಿದೇವೆ. ಇನ್ನು ಬಾಕಿ ಅಸಿಸ್ಟೆಂಟ್ ಎಂಜಿನಿಯರು, ಎಗ್ಸಿಕ್ಯೂಟಿವ್ ಎಂಜಿನಿಯರು ಮತ್ತು ಸಂಬಂಧಪಟ್ಟ ಸಿಬ್ಬಂದಿ ಇವರುಗಳ ವಿಚಾರದಲ್ಲಿ ಯಾರು ಯಾರು ಎಷ್ಟೆಷ್ಟರ ಮಟ್ಟಿಗೆ ಜವಾಬ್ದಾರರು ಎಂಬುದನ್ನು ನೋಡಿ ಮಾಡಬೇಕು. ನಾವೇ ಏಕ್‌ದಂ ಆರ್ಡರ್ ಸಾದರುಮಾಡುವುದಕ್ಕಾಗುವುದಿಲ್ಲ. P.S.C.ಗೆ ಅದು ಹೋಗಬೇಕು. ಪತ್ರವ್ಯವಹಾರ ಮಾಡುತ್ತಾ ಅವರಿವರ ಸಲಹೆ ಕೇಳುವುದರಲ್ಲಿ ಸ್ವಲ್ಪನಿಧಾನವಾಗಿದೆ. ಇನ್ನು ಕೆಲವು ಕಾಲದಲ್ಲೇ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತಪ್ಪು ರುಜುವಾತಾದರೆ ಕೆಲವರ ಮೇಲೆ ರುಜುವಾತಾಗದಿರಬಹುದು—ಎಲ್ಲವನ್ನೂ ನೋಡಿ ಸೂಕ್ತ ಕಾರ್ಯಕ್ರಮ ಕೈಕೊಳ್ಳುತ್ತೇವೆ.

ಶ್ರೀ ಮಲ್ಲಾರಾಧ್ಯರು ಒಂದು ಸಲಹೆಮಾಡಿದ್ದಾರೆ. ವಿದ್ಯುಚ್ಛಕ್ತಿಯ ದರ ಒಂದೇ ರೀತಿ ಇರಬೇಕು ಎಂದು ವಾದಮಾಡಿದ್ದಾರೆ. ಮೈಸೂರು ಸಂಸ್ಥಾನದಲ್ಲಿದ್ದುಕೊಂಡು ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯಿರುವುದು ಕಷ್ಟ. ಹೊಸದಾಗಿ ಮೈಸೂರಿಗೆ ಬಂದ ಭಾಗಗಳಲ್ಲಿ ಹೆಚ್ಚಿಗೇ ದರವಿತ್ತು. ಇದಕ್ಕೆ ಕಾರಣ, ಅಲ್ಲಿ ಕಂಪನಿಗಳು ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುತ್ತಿದ್ದುವು. ಈಗ ವಿದ್ಯುಚ್ಛಕ್ತಿಯ ಆಡಳಿತ ಬೋರ್ಡಿಗೆ ಸೇರಿದೆ. ಇಂಡಿಯಾ ಸರ್ಕಾರದವರೂ ಆದಷ್ಟು ಬೇಗನೆ ಒಂದು ಸಮಿತಿಮಾಡಿ ಎಲ್ಲ ಕಡೆಯಲ್ಲಿಯೂ ಒಂದೇ ದರವನ್ನು ಗೊತ್ತುಮಾಡುವ ವಿಷಯದಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳುವವರಾಗಿದ್ದಾರೆ. ಅನೇಕ ಸ್ನೇಹಿತರು ವ್ಯವಸಾಯಕ್ಕಾಗಿ ವಿದ್ಯುಚ್ಛಕ್ತಿ ಪಂಪುಗಳಿಗೆ ವಿದ್ಯುಚ್ಛಕ್ತಿ ಕೊಡತಕ್ಕ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಶ್ರೀಮಾನ್ ಬೋರಣ್ಣಗೌಡರು, ಡಿ. ಎಚ್. ರುದ್ರಪ್ಪನವರು, ಮಂಜಪ್ಪ ಉಳ್ಳಾಳ್‌ರವರು ಮತ್ತು ಇನ್ನೂ ಇತರರು ಈ ವಿಚಾರದಲ್ಲಿ ಪ್ರಾಮುಖ್ಯವಾಗಿ ಟೀಕೆಮಾಡಿದ್ದಾರೆ. ಬೋರ್ಡ್ ಆಗುವುದಕ್ಕೆ ಮುಂಚಿನಿಂದಲೂ ಅಂದರೆ, ಸರ್ಕಾರದ ಆಡಳಿತದಲ್ಲಿದ್ದಾಗಲೂ ಕೂಡ ವ್ಯವಸಾಯಕ್ಕೆ ವಿದ್ಯುಚ್ಛಕ್ತಿ ಕೊಡುವ ವಿಷಯಕ್ಕೆ ಪ್ರಾಮುಖ್ಯತೆ ಕೊಟ್ಟಿದ್ದರು. ಈಗ ಬೋರ್ಡಿನವರೂ ಅದೇರೀತಿ ಮಾಡಿದ್ದಾರೆ. ನೂರುಜನರಿಂದ ಪೂರ್ತಿಯಾದ ಅರ್ಜಿ ಬರದಿದ್ದರೂ ಅದರಲ್ಲಿ 68 ಜನರ ವಿಷಯದಲ್ಲಿ ರಿಪೋರ್ಟ್ ಬಂದಿದ್ದಲ್ಲಿ ಮಿಕ್ಕ ಕೆಲವರ ದೆಸೆಯಿಂದಾಗಿ ಆ ಪ್ರಾಂತ್ಯಕ್ಕೆ ಆಗುವ ಅನುಕೂಲವನ್ನು ಏಕೆ ತಪ್ಪಿಸುತ್ತೀರಿ ಎಂದು ಕೇಳಿದರು. ಅವರು ಹೇಳುವ ನೀತಿ ಸರಿ. ಆದರೆ ಶ್ರೀಮಾನ್ ಮಂಜಪ್ಪನವರು ಹೇಳಿದ ಹಾಗೆ 100ಕ್ಕೆ 70 ಜನರು ಪೂರ್ತಿಯಾಗಿ ಅರ್ಜಿಕೊಟ್ಟಿರುವುದಿಲ್ಲ. ಶೇಕಡ 25 ಮಂದಿ ಮಾತ್ರ ಕೊಟ್ಟಿರುತ್ತಾರೆ. ಇನ್ನು ಕೆಲವು ಸಂದರ್ಭಗಳಲ್ಲಿ ನೀವು ತಂತಿಹಾಕಿ, ಕಂಬಹಾಕಿ ಬೇಕಾದಷ್ಟು ಪಂಪ್ ತೆಗೆದುಕೊಳ್ಳುವವರಿದ್ದಾರೆ, ಎಂದು ರುಜುಹಾಕಿಸಿ ಕಳುಹಿಸಿಕೊಡುತ್ತಾರೆ. ಆದರೆ ಕೊನೆಯಲ್ಲಿ ಎಲ್ಲವನ್ನೂ ಮಾಡಿದ ಮೇಲೆ ಕೇಳಿದರೆ ಒಬ್ಬರೂ ಹಾಕಿಸಿಕೊಳ್ಳುವುದಿಲ್ಲ. ನಮ್ಮ ಮದ್ದೂರು ತಾಲ್ಲೂಕಿನಲ್ಲೇ ಹೀಗಾಯಿತು. ಅಲ್ಲಿನ ಮಿಲ್ಲಿನವರು ಪವರ್ ಬಂದರೆ ತಮಗೆ ಅನುಕೂಲವಾಗುತ್ತದೆಂದು

(ಶ್ರೀ ಎಚ್. ಕೆ. ವೀರಣ್ಣಗೌಡ)

ಹೇಳಿ ಎಲ್ಲರ ಹತ್ತಿರ ರುಜು ಮಾಡಿಸಿಕೊಂಡು ಬಂದು ಅರ್ಜಿ ಕಳುಹಿಸಿಕೊಟ್ಟಿದ್ದರು. ಅದರ ಮೇಲೆ ಕಂಬ ನೆಟ್ಟು ತಂತಿಹಾಕಿಕೊಟ್ಟು ಪಂಪ್ ಹಾಕಿಸಿಕೊಳ್ಳಿ ಎಂದರೆ ಮಿಲ್ಲಿನವರು ಒಬ್ಬರು ಹೊರತು ಮತ್ತೆ ಯಾರೂ ಮುಂದಕ್ಕೆ ಬರಲಿಲ್ಲ. 18 ಜನ ಪಂಪಿಗೆ ಒಪ್ಪಿಗೆ ಕೊಟ್ಟಿದ್ದರು. 200-300 ಮನೆಯವರೂ ಇದ್ದರು. ಒಬ್ಬರೂ ಮುಂದಕ್ಕೆ ಬರಲಿಲ್ಲ. ಕೊನೆಗೆ ಇಲಾಖೆಯವರು ಹೀಗಾದರೆ ಕಂಬಿ ಕೀಳುತ್ತೇವೆ, ತಂತಿ ಬಿಚ್ಚುತ್ತೇವೆ ಎಂದು ಹೇಳಿದಮೇಲೆ, 'ಇಲ್ಲ, ಇಲ್ಲ' ಎಂದು ಹೇಳಿಕೊಂಡು ಈಗೀಗ ಒಬ್ಬೊಬ್ಬರು ಬರುತ್ತಿದ್ದಾರೆ. ಈ ಪ್ರಕಾರ ನಾವು ಹಾಕಿ ಯಾರೂ ತೆಗೆದುಕೊಳ್ಳದೆ ಹೋದರೆ ಸುಮ್ಮನೆ ಸಾಮಾನು ಹಾಕಿ ಕಾಯುವುದಾಗುತ್ತದೆ ಅಷ್ಟೆ. ಈ ದೃಷ್ಟಿಯಿಂದ, ನೀವು ಮುಂಚೆ ತಯಾರುಮಾಡಿಕೊಂಡು, Completion Report ಕೊಟ್ಟರೆ ಹಾಕಿಕೊಡುತ್ತೇವೆಂದು ತಿಳಿಸಿದೆ.

ಇನ್ನು ಕೆಲವು ಕಡೆ, ಬಲಗಿ ಪೋಲ್ ಹಾಕಿ, ಅದು costly ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಬಲಗಿ ಪೋಲ್ ಸಿಕ್ಕದೆ ಸಿಮೆಂಟ್ ಪೋಲ್ ಹಾಕುತ್ತಿದ್ದಾರೆ. ಇರುವ ಕಷ್ಟ, ಬಲಗಿ ಪೋಲ್ ಕೆಟ್ಟುಹೋಗದ ಹಾಗೆ ಕೊಡುವ ಇಂಜೆಕ್ಷನ್ ಔಷಧಿ ಈಗ ಸಿಕ್ಕುತ್ತಿಲ್ಲ. ಪರದೇಶದಿಂದ ತರಿಸುವುದಕ್ಕೆ Foreign Exchange ಸಿಕ್ಕುವುದಿಲ್ಲ ಎಂದು ಇಂಡಿಯಾ ಸರ್ಕಾರದವರೂ ಹೇಳುತ್ತಿದ್ದಾರೆ. ಈಚೆಗೆ ಪರಿಸ್ಥಿತಿ ಸುಧಾರಿಸಿದೆ. ಮುಖ್ಯವಾಗಿ ತಾಮ್ರದ ತಂತಿ ಪರದೇಶದಿಂದ ಬರಬೇಕು. ಈಚೆಗೆ ಕಲ್ಕತ್ತಾದಲ್ಲಿ 2,000 ಮೈಲಿಯುದ್ದ ಅಲ್ಯೂಮಿನಿಯಂ ತಂತಿ ಸಿಕ್ಕುತ್ತದೆಂದು ಗೊತ್ತಾಗಿದೆ. ಅದನ್ನು ಉಪಯೋಗಿಸಬಹುದೆಂದು ಹೇಳುತ್ತಿದ್ದಾರೆ. ಇದರಿಂದಾಗಿ ಸಾಮಾನಿನ ಅಭಾವ ಅಷ್ಟಿಲ್ಲ. ಮುಖ್ಯವಾಗಿ ಬೋರ್ಡಿನವರು ಕೆಲಸ ಮಾಡಬೇಕು. ಎಲ್ಲೆಲ್ಲಿ ಮಾನ್ಯ ಸದಸ್ಯರು ಸಲಹೆ ಮಾಡಿದ್ದಾರೋ ಅಲ್ಲಿ ಕಾರ್ಯ ಕೈಕೊಳ್ಳಬೇಕೆಂದು ಸರ್ಕಾರದವರು ಅವರಿಗೆ ತಿಳಿಸುತ್ತಾರೆ.

Night shift ತಪ್ಪಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ಎಂದು ಕೇಳಿದರು. ವಿದ್ಯುಚ್ಛಕ್ತಿಯ ಅಭಾವದಿಂದ, ನಿರಾವರಿಗೆ ಬೇಕೆಂದರೆ ಹೀಗಾದರೂ ವ್ಯವಸಾಯಗಾರರು ಉಪಯೋಗಿಸಿಕೊಳ್ಳಲಿ ಎಂದು ಮಾಡಿದ್ದಾರೆ. ಕೆಲವು ಸಂದರ್ಭಗಳಲ್ಲಿ ಇದು ಅನುಕೂಲವಾಗಿ ಕಾಣುತ್ತದೆ, ಶ್ರೀ ರಾಮಯ್ಯನವರಿಗೂ ಇದು ಗೊತ್ತಿದೆ. ರಾತ್ರಿಹೊತ್ತು ಕೆರೆಗೆ ನೀರು ಎತ್ತಿಕೊಂಡು ಮಧ್ಯಾಹ್ನ ನೀರು ಹಾಯಿಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಮೋಟರ್ ತಂದು ಹಾಕಿಕೊಳ್ಳಬೇಕೆಂದು ಮೊದಲು ಮಾಡಿದ್ದರು. ಇದು ತೊಂದರೆಯಾಗುತ್ತದೆಂದು ಹೇಳಿದಮೇಲೆ ಹಾಗೆಯೇ ಬೆಳಗಿನಜಾವ ನಾಲ್ಕು ಘಂಟೆಯಿಂದ ಬೆಳಗ್ಗೆ ಒಂಭತ್ತು ಘಂಟೆಯವರೆಗೆ ಹಾಯಿಸಿಕೊಳ್ಳಬಹುದೆಂದು ಹೇಳಿದ್ದಾರೆ. ಇದು ಸಾಧ್ಯ ಎಂದು ಕಾಣುತ್ತದೆ. ಮೋಟರ್ ವಿಚಾರದಲ್ಲಿ ಮನೆಗೆ ಯಾವರೀತಿ ಹಾಕುತ್ತೇವೆಯೋ ಹಾಗೆ ಬೋರ್ಡ್ ಮೋಟರನ್ನು ಒದಗಿಸಬೇಕೆಂದು ಏರ್ಪಾಡು ಮಾಡಿದೆ.

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ).—ಬೆಳಗಿನಝಾವ ನಾಲ್ಕು ಘಂಟೆಯಿಂದ ಒಂಬತ್ತು ಘಂಟೆಯೆಂದು ಹೇಳುತ್ತೀರಲ್ಲಾ, ಆ ಹೊತ್ತಿಗೆ ಕೂಲಿಯವರು ಸಿಕ್ಕುತ್ತಾರೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹಾಗಾದರೆ ಏನು ಮಾಡಬೇಕು ? ಪರಿಸ್ಥಿತಿ ಹೀಗಿದೆ. ಮುಖ್ಯವಾಗಿ ರೈತರಿಗೆ ಅನುಕೂಲಮಾಡಿಕೊಡಬೇಕು.

ಶ್ರೀಯುತ ಮಲ್ಲಾರಾಧ್ಯರು 121 ಲಕ್ಷರೂಪಾಯಿ ಬಡ್ಡಿ ಹಾಕಿದ್ದೀರಲ್ಲ, ಇದು ಏಕೆ ಏನು ಎಂದು ಸಂದೇಹವನ್ನು ವ್ಯಕ್ತಪಡಿಸಿದ್ದಾರೆ. ವಿದ್ಯುಚ್ಛಕ್ತಿ ಇಲಾಖೆಗೆ ಸೇರಿದ್ದಂಥ Service and maintenance, ಎಂದರೆ ಹೊಸದಾಗಿ ಕಟ್ಟತಕ್ಕ ವಿದ್ಯುತ್ ಕೇಂದ್ರಗಳ ಆಡಳಿತವನ್ನು ಸರ್ಕಾರದವರೇ ಇಟ್ಟುಕೊಂಡಿದ್ದಾರೆ; ಕಟ್ಟಿ ಪೂರೈಸಿ ಎಲ್ಲಿ ವಿದ್ಯುತ್ ಉತ್ಪತ್ತಿಯಾಗುತ್ತಿದೆಯೋ ಅಂಥದನ್ನು, ಜನಗಳಿಗೆ ಬೇರೆ ಬೇರೆ ಕೆಲಸಗಳಿಗೆ ವಿದ್ಯುತ್ತನ್ನು ಒದಗಿಸಿಕೊಡತಕ್ಕದ್ದು, ಹಣ ವಸೂಲ್ಮಾಡತಕ್ಕದ್ದು, ಅವನ್ನು ನಡೆಸಿಕೊಂಡು ಹೋಗತಕ್ಕದ್ದು ಈ ಜವಾಬ್ದಾರಿಗಳು ಏನಿವೆ ಅವನ್ನು ಬೋರ್ಡಿಗೆ ಕೊಟ್ಟಿದ್ದೇವೆ. ಇದರ ಮೇಲೆ ಸರ್ಕಾರದವರು 30,78,88,501 ರೂಪಾಯಿಗಳನ್ನು ಹಾಕಿದ್ದಾರೆಂದು ಅಂದಾಜುಮಾಡಿದೆ. ಇದು final figure ಅಲ್ಲ. ಇನ್ನೂ ಹೆಚ್ಚಾಗಬಹುದೆಂಬ ನಿರೀಕ್ಷೆ ಇದೆ. ಬೋರ್ಡಿಗೆ ವಹಿಸಿರುವುದರ ಮೇಲೆ ಹಾಕಿರುವ ಬಂಡವಾಳವನ್ನು ಪರಿಗಣನೆಗೆ ತೆಗೆದುಕೊಂಡು ಅದರಮೇಲೆ ಶೇಕಡ ನಾಲ್ಕೂವರೆ ಬಡ್ಡಿ ಕೊಡಬೇಕೆಂದು ನಿಗದಿಮಾಡಿದೆ. 31 ಕೋಟಿ ರೂಪಾಯಿಗಳಿಗೆ 121 ಲಕ್ಷ ರೂಪಾಯಿಗಳಷ್ಟು ಬಡ್ಡಿ ಬರುತ್ತದೆ.

ಶ್ರೀಯುತ ಮಲ್ಲಾರಾಧ್ಯರು ಇನ್ನೂ ಒಂದು ಸಂದೇಹವನ್ನು ವ್ಯಕ್ತಪಡಿಸಿದರು. ಈಗ ವಿದ್ಯುತ್ ಉತ್ಪತ್ತಿ ಕೇಂದ್ರಗಳು, ಶರಾವತಿ ವ್ಯಾಲಿ ಪ್ರಾಜೆಕ್ಟ್, ಲಕ್ಕವಳ್ಳಿ ಅಥವ ಭದ್ರ ಪ್ರಾಜೆಕ್ಟ್, ತುಂಗಭದ್ರ ಮತ್ತು ಮುನೀರಾಬಾದಿನಲ್ಲೂ ಇವೆ. ಇಲ್ಲಿ ಕೆಲಸ ನಡೆಯುತ್ತಿದೆ. ಅದಕ್ಕೋಸ್ಕರ ಮೂರು ಕೋಟಿ ರೂಪಾಯಿ ಹಣವನ್ನು ಒದಗಿಸಲಾಗಿದೆ. ಈ ಕೆಲಸಕ್ಕೆ ಹಾಕುವ ಹಣದ ಮೇಲೆ ಬಡ್ಡಿ ಗಿಟ್ಟದ ಹಾಗಾಗುತ್ತದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯ್ಕನಹಳ್ಳಿ).—ಶರಾವತಿ ವ್ಯಾಲಿ ಪ್ರಾಜೆಕ್ಟಿಗೆ ಇದರಲ್ಲಿ ಒದಗಿಸಿದ್ದೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಶರಾವತಿ ವ್ಯಾಲಿ ಪ್ರಾಜೆಕ್ಟಿಗೆ 240 ಕೋಟಿ ರೂಪಾಯಿ ಅಂದಾಜಾಗಿದೆ. ಇದು ಅದಕ್ಕೆ ಸಾಕಾಗುವುದಿಲ್ಲ.

ಶ್ರೀ ಶಂಕರರಾಯರು ಒಂದು ಸಲಹೆ ಮಾಡಿದ್ದಾರೆ. ಅದು ಬಹಳ ಉಪಯುಕ್ತವಾದ ಸಲಹೆ. ಅನೇಕ Projects, nation building activities ನಡೆಯುತ್ತಿವೆ, ಆದರೆ ಸಾಕಷ್ಟು ಪ್ರಚಾರ ಕಾರ್ಯ ನಡೆಯುತ್ತಿಲ್ಲ, ಅದಕ್ಕೆ ಏಕೆ ಏರ್ಪಾಟು ಮಾಡುವುದಿಲ್ಲ ಎಂದು ಹೇಳಿದ್ದಾರೆ. ಸಾಕಷ್ಟು ಪ್ರಚಾರವೆಂದರೆ ಯಾವ Standardನಲ್ಲಿ ಲೆಕ್ಕ ಹಾಕಿದ್ದಾರೆನ್ನುವುದನ್ನು ಹೇಳುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಡಾಕ್ಯುಮೆಂಟರಿ ಫಿಲ್ಮ್ಸ್.

ಶ್ರೀ ಎಚ್. ಕೆ. ವೀರಣ್ಣಗೌಡ.—ಡಾಕ್ಯುಮೆಂಟರಿ ಫಿಲ್ಮ್ಸ್ ಮಾಡಿಲ್ಲವೆಂದು ಕಾಣುತ್ತದೆ. ಪಂಚವಾರ್ಷಿಕ ಯೋಜನೆ ಸಂಬಂಧದಲ್ಲಿ Pamphlets, books, ಮಾಡಿದ್ದಾರೆ. ಪ್ರತಿಯೊಂದು ಪ್ರಾಜೆಕ್ಟ್ ವಿಚಾರದಲ್ಲಿಯೂ ವಿವರವಾದ ಪುಸ್ತಕಗಳನ್ನು ಪ್ರಕಟಿಸಿ, ಹಂಚುತ್ತೇವೆ. ಇನ್‌ಫರ್ಮೇಷನ್ ಬುಲೆಟಿನ್‌ನಲ್ಲಿ ಆಗಾಗ್ಗೆ ಈ ವಿಷಯಗಳ ಬಗ್ಗೆ ಪ್ರಕಟಣೆ ಕೊಡುತ್ತಿದ್ದೇವೆ. ಈಗ ನಮ್ಮ ಸ್ನೇಹಿತರು ಸಲಹೆ ಮಾಡಿದ

ಹಾಗೆ ಫಿಲಂ ತೋರಿಸುವುದನ್ನು ಇನ್ನೂ ಮಾಡಿಲ್ಲ ವೆಂದು ಕಾಣುತ್ತದೆ. ಆ ಸಲಹೆಯನ್ನು ಯೋಚನೆ ಮಾಡಿ ನೋಡಲಾಗುತ್ತದೆ.

ಶ್ರೀಯುತರಾದ ಎಸ್. ಆರ್. ಪಾಟೀಲ್ ಜಿ. ಅಣ್ಣಾ ರಾವ್ ಮತ್ತಿತರರು ಹೈದರಾಬಾದ್ ಕರ್ನಾಟಕ ಭಾಗಕ್ಕೆ ವ್ಯವಸಾಯ ಮತ್ತು ಕೈಗಾರಿಕೆಗಳಿಗೆ ಹೆಚ್ಚಿಗೆ ವಿದ್ಯುತ್ತನ್ನು ಕೊಡಬೇಕೆಂದು ಹೇಳಿದರು. ಮುನಿರಾಬಾದಿನಲ್ಲಿ ಉತ್ಪತ್ತಿ ಆಗತಕ್ಕ ವಿದ್ಯುತ್ ಏನಿದೆ ಅದನ್ನೆಲ್ಲ ಪೂರ್ಣವಾಗಿ ಹೈದರಾಬಾದ್ ಕರ್ನಾಟಕಕ್ಕೆ ಕೊಡಬೇಕೆಂದು ತೀರ್ಮಾನಮಾಡಿದ್ದೇವೆ. ಈಗ ಏನು ಕೊಡುತ್ತಿದ್ದೇವೆ ಅದೆಲ್ಲ ಅಲ್ಲಿ ಬಟವಾಡೆಯಾಗುತ್ತಿದೆ. ಅದಕ್ಕಾಗಿಯೇ ಹಗಲು ಕೆಲವರು, ರಾತ್ರಿ ಕೆಲವರು ಉಪಯೋಗಿಸಿಕೊಳ್ಳಬೇಕು ಎಂದು ಚೌಕಾಸಿ ಮಾಡುತ್ತಿದ್ದೇವೆ. ಹುಬ್ಬಳ್ಳಿ ಕಡೆಯವರು ಹೇಳುವಂತೆ ಚೌಕಸಿಯಲ್ಲ. ಚೌಕಾಸಿ ಎಂದರೆ bargaining ಮತ್ತು ಚೌಕಸಿ ಎಂದರೆ enquiring.

ಟ್ರಾನ್ಸ್‌ಮಿಷನ್ ಲೈನ್ ಪೂರ್ತಿಯಾದ ಕೂಡಲೇ ಮುನಿರಾಬಾದಿನಿಂದ ವಿದ್ಯುತ್ತನ್ನು ಕೊಡಲಾಗುತ್ತದೆ. ಇದಾದಮೇಲೆ Grid system ಏರ್ಪಾಡು ಮಾಡಬೇಕು ಎಂದಿದ್ದೇವೆ. Grid system ಒಪ್ಪಿಕೊಂಡರೆ ಒಂದಕ್ಕೊಂದಕ್ಕೆ ಸಂಬಂಧ ಕಲ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಇದು ಮೈಸೂರು ಸಂಸ್ಥಾನಕ್ಕೆ ಮಾತ್ರವಲ್ಲ, ಇನ್ನೂ ಸ್ವಲ್ಪದೂರ ಹೋಗಿ ಇಡೀ ದಕ್ಷಿಣ ಭಾಗಕ್ಕೆ ಒಂದು ಗ್ರಿಡ್ ಸಿಸ್ಟಂ ಮಾಡಬೇಕೆಂಬುದು ಇಂಡಿಯಾ ಸರ್ಕಾರದವರ ಆಲೋಚನೆಯಲ್ಲಿದೆ.

ಶ್ರೀ ಕೆ. ಕೆಂಚಪ್ಪ.—ನೀರಾವರಿಗೋಸ್ಕರ ವಿದ್ಯುತ್ ಶಕ್ತಿಗೆ ಎಷ್ಟು ದುಡ್ಡು ಖರ್ಚುಮಾಡಿದ್ದೀರಿ? ಎಷ್ಟು ಪಂಪ್‌ಸೆಟ್‌ಗಳನ್ನು ಸರ್ವಿಸ್‌ಗೆ ಕೊಟ್ಟಿದ್ದೀರಿ? ಈ ರೀತಿ ನಡೆಸಿದರೆ ಎಷ್ಟು ವರ್ಷಗಳಲ್ಲಿ ಮೈಸೂರು ಸಂಸ್ಥಾನಕ್ಕೆ ಪೂರೈಕೆಯಾದೀತು ಎಂದು ಹೇಳುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ತಾವು ಒಂದು ಪ್ರಶ್ನೆ ಕಳುಹಿಸಿದರೆ ಉತ್ತರ ತರಿಸಿಕೊಡುತ್ತೇನೆ. ಎಲ್ಲ ಸಮಾಚಾರ ನಿಮಗೆ ತರಿಸಿಕೊಡುತ್ತೇನೆ.

ಶ್ರೀಯುತ ಬಲವಂತರಾವ್ ಅವರು ಕೆಲವು ಸಲಹೆಗಳನ್ನು ಮಾಡಿದ್ದಾರೆ. ಅವರು ಹಿಂದಿಯಲ್ಲಿ ಮಾತನಾಡಿದ್ದರಿಂದ ನನಗೆ ಅರ್ಧಂಬರ್ಧ ಗೊತ್ತಾಯಿತು. ರಸ್ತೆಗಳು, ಸೇತುವೆಗಳು ಇವುಗಳಿಗೆ ಬೇಕಾದಷ್ಟು ಹಣವನ್ನೊದಗಿಸಿಲ್ಲ, ಸರಿಯಾಗಿ ಹಣವನ್ನು ಒದಗಿಸಬೇಕೆಂದು ಸಲಹೆ ಮಾಡಿದರು ಎಂದು ತಿಳಿದುಕೊಂಡಿದ್ದೇನೆ. ಹಣವನ್ನು ಒದಗಿಸುವುದಕ್ಕೆ ಪ್ಲಾನ್ ಪ್ರಕಾರ ಮಾಡುತ್ತೇವೆಂದು ಮಾತ್ರ ಹೇಳಬಲ್ಲೆ. ಅವರು ಹೇಳಿದ್ದು ಪೂರ್ತಿಯಾಗಿ ನನಗೆ ಅರ್ಥವಾಗಲಿಲ್ಲ.

ಶ್ರೀಯುತ ಶಂಕರರಾಯರು ಇನ್ನೊಂದು ಸಲಹೆ ಮಾಡಿದ್ದಾರೆ. Minor irrigation works and pick-upsನಿಂದ ಹೆಚ್ಚು ಪ್ರಯೋಜನವಾಗುತ್ತದೆ; ಬೇಗ ಫಲಕಾರಿಯಾಗುತ್ತದೆಯಾದುದರಿಂದ ಅದಕ್ಕೆ ಗಮನಕೊಡಬೇಕೆಂದು ಹೇಳಿದರು. ಅನೇಕ ಸದಸ್ಯರಿಗೆ ಗೊತ್ತಿರುವಂತೆ ಈ ವರ್ಷ ಮಾರ್ಚಿ ತಿಂಗಳಿನಲ್ಲಿ 30 ಲಕ್ಷ ರೂಪಾಯಿಗಳ ಕಾರ್ಯಕ್ರಮವನ್ನು ಏರ್ಪಾಡು ಮಾಡಿದ್ದೆವು; ಮತ್ತು ಜೂನ್ ಆಖೈರಿನೊಳಗೆ ಇನ್ನೂ 20 ಲಕ್ಷ ರೂಪಾಯಿಗಳನ್ನು ಒದಗಿಸಿದೆವು. ಒಟ್ಟು 50 ಲಕ್ಷ ರೂಪಾಯಿಗಳ ಕೆಲಸಮಾಡಿ ಮುಗಿಸಬೇಕೆಂದಿತ್ತು. 1959ನೆ ಮಾರ್ಚಿ ಆಖೈರಿನೊಳಗೆ 170 ಲಕ್ಷ ರೂಪಾಯಿಗಳ ಕಾರ್ಯಕ್ರಮವನ್ನು ಹಾಕಿದ್ದೇವೆ. 15 ತಿಂಗಳಿನಲ್ಲಿ ಸುಮಾರು ಎರಡು ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ಹಾಕಿ ಅದರ ಪ್ರಕಾರ pick-ups ಮತ್ತು minor irrigation ಕಾರ್ಯಕ್ರಮವನ್ನು ಏರ್ಪಾಡು ಮಾಡಬೇಕು ಎಂದು ಇದ್ದೇವೆ. ಅದಕ್ಕೋಸ್ಕರ ಒಂದು ಸ್ಪೆಷಲ್ ಸರ್ಕಲ್ ಮಾಡಿ, ಸ್ಪೆಷಲ್ ಸಿಬ್ಬಂದಿ, extra staff ಕೊಟ್ಟು ಈ ಕೆಲಸ ನಡೆಯುತ್ತಿದೆ.

ಶ್ರೀಯುತ ವೀರಪ್ಪನವರು, ಶ್ರೀಯುತ ನರಸಿಂಹೇಗೌಡರು ಹೇಳಿದುದನ್ನೇ ಬೇರೆ ಪದಗಳಲ್ಲಿ ಅದೇ ಅರ್ಥ ಬರುವಹಾಗೆ ಹೇಳಿದರು. ತಾಲ್ಲೂಕು ತಾಲ್ಲೂಕಿಗೆ ವ್ಯತ್ಯಾಸ ಮಾಡಿರುವುದು ಸರಿಯಲ್ಲವೆಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಅದನ್ನು ನಿಜವೆಂದು ನಾನು ಒಪ್ಪಿಕೊಳ್ಳುವುದಿಲ್ಲ. ತಮ್ಮ ಮುಂದೆ ಮುಚ್ಚುಮರೆ ಮಾಡಬೇಕೆಂಬ ಉದ್ದೇಶವಿಲ್ಲ. ಎಲ್ಲೆಲ್ಲಿ ಏನೇನು ಅಗತ್ಯವಿದೆಯೋ ಅದನ್ನೆಲ್ಲ ಮಾಡಬೇಕಾದದ್ದು ಸಹಜ. ನಾನು ಆಗಲೇ ಹೇಳಿದಹಾಗೆ ಎರಡು ಕೋಟಿ ರೂಪಾಯಿಗಳನ್ನು ಕೆಲವು ಕೆಲಸಗಳಿಗೆ ಒದಗಿಸಿದ್ದೇವೆ. ಸರ್ಕಾರದ ಗಮನಕ್ಕೆ ಬಂದುದನ್ನು ಮಾಡಿದ್ದೇವೆ. ಎಲ್ಲೆಲ್ಲಿ ಏನೇನು ಆಗಬೇಕು ಎಂಬುದೆಲ್ಲ ಸರ್ಕಾರದವರಿಗೆ ಗೊತ್ತಾಗುವುದಿಲ್ಲ ಮತ್ತು ಅಧಿಕಾರಿಗಳಿಗೂ ಗೊತ್ತಾಗುವುದಿಲ್ಲ. ಈಗ ಎಲ್ಲೆಲ್ಲಿ ಕೆರೆ ರಿಪೇರಿ ಆಗಬೇಕು ಎಂಬುದಕ್ಕೆ ಸರ್ವೆ ಸಿಬ್ಬಂದಿಯನ್ನೂ ನೇಮಕ ಮಾಡಿದ್ದೇವೆ. ಅವರು ಸರ್ವೆ ಮಾಡುತ್ತಿರಬೇಕು; ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸರ್ವೆಮಾಡಿ, ಯಾವ ಯಾವ ಕೆರೆ ರಿಪೇರಿಯಾಗಬೇಕೆಂದು ತಿಳಿಸುತ್ತಾರೆ. ಅದರಮೇಲೆ ಸರ್ಕಾರದ ಮಂಜೂರಾತಿಯನ್ನು ಪಡೆದುಕೊಂಡು ಕೆಲಸವನ್ನು execute ಮಾಡಲು general staff ಎಂದು ಏರ್ಪಾಡು ಮಾಡಿದ್ದೇವೆ. ಅನೇಕ ಕೆರೆಗಳು ರಿಪೇರಿಯಾಗದೆ ಇರುವುದು ನಿಜ. ಅದರಲ್ಲಿ ಉತ್ಪ್ರೇಕ್ಷೆಯಿಲ್ಲ. ಒಂದು ತಾಲ್ಲೂಕಿನಲ್ಲಿ ಕೆಲಸ ಮಾಡಬೇಕು, ಇನ್ನೊಂದು ತಾಲ್ಲೂಕಿನಲ್ಲಿ ಮಾಡಬಾರದು ಎನ್ನುವ ಭಾವನೆ ಇಲ್ಲವೆನ್ನುವುದನ್ನು ತಮ್ಮಲ್ಲಿ ಅರಿಕೆಮಾಡಿ ಕೊಳ್ಳುತ್ತಿದ್ದೇನೆ.

6 P.M.

ಶ್ರೀ ಎಸ್. ಆರ್. ರಾಮಯ್ಯ (ಹೊಸಕೋಟೆ).—ತಾವು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ್ಗೆ ನಾಲ್ಕು ವರ್ಷಗಳ ಕೆಳಗೆ ಒಂದು ಕೆರೆ ರಿಪೇರಿ ವಿಚಾರದಲ್ಲಿ ಭರವಸೆ ಕೊಟ್ಟಿದ್ದಿರಿ. ಇವತ್ತಿನವರೆಗೂ ಆ ಕೆಲಸವಾಗಿಲ್ಲ. ಏನು ಹೇಳುತ್ತೀರಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ನೀವು ಹೇಳಿದ ಕೆರೆ ಇನಾಂಗ್ರಾಮದಲ್ಲಿತ್ತು. ಅದು ಸಿದ್ದಣ್ಣನಹಳ್ಳಿಯಲ್ಲಿದೆ. ಅಲ್ಲಿಯ ಪರಿಸ್ಥಿತಿ ಬಹಳ ಕಷ್ಟಕರವಾಗಿತ್ತು. ಇನಾಂದಾರರು ಊರನ್ನು ಬ್ಯಾಂಕಿಗೆ ಆಧಾರಮಾಡಿದ್ದರು. ಆ ಊರನ್ನು ಬ್ಯಾಂಕಿಗೆ ಹರಾಜು ಹಾಕಿಬಿಟ್ಟಿದ್ದರು. ಬ್ಯಾಂಕಿನವರು ತಮಗೆ ಈ ವಿಚಾರದಲ್ಲಿ ಏನೂ ಸಂಬಂಧವಿಲ್ಲ ಎಂದು ಹೇಳುತ್ತಾ ಕೆರೆ ರಿಪೇರಿ ತಕರಾರಿನಲ್ಲಿಯೇ ನಿಂತು ಹೋಗಿದೆ. ಮೇಲಿನ ಕೆರೆ ಒಡೆದುಹೋಗಿ, ಕೆಳಗಡೆ ಪ್ರದೇಶಗಳಿಗೆ ನೀರು ನುಗ್ಗಿ, ಪ್ರತಿಯೊಂದು ಮನೆಯವರೂ ಮೂರು ಅಡಿ ಕಲ್ಲು ಚಪ್ಪಡಿ ಅಥವ ಮರದ ಹಲಗೆಗಳನ್ನು ಹಾಕಿಕೊಂಡು ನೀರು ಒಳಗೆ ನುಗ್ಗದಂತೆ ನೋಡಿಕೊಳ್ಳಲು ಒದ್ದಾಡಿದ್ದಾರೆ. ನೀರು ನುಗ್ಗುವ ಸಂದರ್ಭದಲ್ಲಿ ಸಣ್ಣ ಹಾಸಿಗೆಗಳನ್ನೂ ದಿಂಬುಗಳನ್ನೂ ತಲೆಯಮೇಲೆ ಹೊತ್ತುಕೊಂಡು ರಾತ್ರಿಯೆಲ್ಲಾ ನಿಂತುಕೊಂಡಿರಬೇಕು. ಬ್ಯಾಂಕಿನವರಿಗೆ ಮತ್ತು ಜೋಡಿದಾರರಿಗೆ

(ಶ್ರೀ ಎಚ್. ಕೆ. ವೀರಣ್ಣಗೌಡ)

ತಕರಾರಿರುವುದರಿಂದ, ಈ ವಿಷಯದ ಕಾಗದಪತ್ರಗಳು ಓಡಾಡುವುದರಲ್ಲಿ ನಿಧಾನವಾಗಿದೆ. ಈ ಕೆರೆಯ ಕೆಲಸವನ್ನು ಮಾಡಿಸಬೇಕಾದದ್ದು ಬಹಳ ಅಗತ್ಯ. ಶ್ರೀ ರಾಮಯ್ಯನವರು ಒತ್ತಾಯ ಮಾಡಲಿ, ಮಾಡದೆ ಬಿಡಲಿ, ಈ ಕೆಲಸವನ್ನು ಮಾಡಿಸಬೇಕಾದ್ದದ್ದು ಅಗತ್ಯವೆಂದು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಲ್. ಎಸ್. ವೆಂಕಾಜಿರಾಯರು ಮತ್ತು ಶ್ರೀ ಮಲ್ಲಾರಾಧ್ಯರು ಮಾತನಾಡುತ್ತಾ ಕೆಲವು ಘನವಾದ ಸಲಹೆಗಳನ್ನು ಕೊಟ್ಟರು. ಶ್ರೀ ಮಲ್ಲಾರಾಧ್ಯರು, ಯಾವ ಕೆಲಸವನ್ನು ಮಾಡುವಾಗಲೂ, ಲಾಭದಾಯಕವಲ್ಲದ ಕೆಲಸಕ್ಕೆ ಹಣಹಾಕಬೇಡಿ, ದೊಡ್ಡ ದೊಡ್ಡ ಕಟ್ಟಡಗಳ ಗೋಜಿಗೆ ಹೋಗಬೇಡಿ ಎಂದು ಹೇಳಿದರು. ಶ್ರೀ ಜಂಬಣ್ಣನವರು ಮಂತ್ರಿಗಳನ್ನು ಪ್ರಶ್ನೆ ಮಾಡಿದರು. ನೀವು ಮಂತ್ರಿಗಳಾಗುವುದಕ್ಕೆ ಮುಂಚೆ ಇಂಥ ಮನೆಗಳಲ್ಲಿ ವಾಸಮಾಡುತ್ತಿದ್ದಿರಾ ಎಂದು. ನಾನು ಒಪ್ಪಿಕೊಳ್ಳುತ್ತೇನೆ, ಇಂಥ ಮನೆಯಲ್ಲಿ ವಾಸ ಮಾಡುತ್ತಿರಲಿಲ್ಲವೆಂದು. ನಮ್ಮಲ್ಲಿ ಅನೇಕರು ಬಹುಶಃ ವೆಂಕಟಪ್ಪನವರ ವಿನಾ ಬಾಕಿಯವರೆಲ್ಲಾ ಇಂಥ ಮನೆಗಳಲ್ಲಿ ವಾಸಮಾಡುತ್ತಿರಲಿಲ್ಲ. ಅವರಿಗೆ ದೇವರು ಕೊಟ್ಟ ಹಾಗೆ ಇದೆ, ಅದಕ್ಕೆ ಅಸೂಯೆ ಪಡಬೇಕಾದದ್ದಿಲ್ಲ. ನಾನು ನಾಡು ಹಂಚಿನ ಮನೆಯಲ್ಲಿ ವಾಸಮಾಡುತ್ತಿದ್ದೆ. ಆಮೇಲೆ ಮಂಗಳೂರು ಹೆಂಚಿನ ಮನೆಯಲ್ಲಿ ವಾಸ ಮಾಡುತ್ತಿದ್ದೆ. ಆದ್ದರಿಂದ ನಮಗೆ ದೊಡ್ಡ ದೊಡ್ಡ ಬಂಗಲೆಗಳು ಬೇಕಾಗಿಲ್ಲ.

ಶ್ರೀ ಜಿ. ಬಿ. ಮಲ್ಲಾರಾಧ್ಯ.—ನಾನು ಈ ವಿಷಯವನ್ನು ಟೀಕೆ ಮಾಡುವ ದೃಷ್ಟಿಯಿಂದ ಹೇಳಲಿಲ್ಲ. ಮಿನಿಸ್ಟರುಗಳು ದೊಡ್ಡ ದೊಡ್ಡ ಮನೆಗಳಲ್ಲಿರುವುದು ಸರಿಯಲ್ಲ ಎಂದು ನಾನು ಹೇಳಲಿಲ್ಲ. ಸರ್ಕಾರದವರು ಲಕ್ಷಾಂತರ ರೂಪಾಯಿ ಮನೆಗಳಿಗೆ ಖರ್ಚು ಮಾಡುತ್ತಾರೆ. 50,000 ರೂಪಾಯಿಗಳನ್ನು ಒಂದು ಕಟ್ಟಡಕ್ಕೆ ಹಾಕಿದರೆ ದೇಶ ಹಾಳಾಗುವುದಿಲ್ಲ. ನನ್ನ ಟೀಕೆ ಇಷ್ಟೆ: ಮನೆಗಳಿಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತೀರಿ; ಆ ಮನೆಗಳಿಗೆ ನೀವು ಹೋಗದೆ ಆಫೀಸರುಗಳನ್ನು ಹೋಗಿ ಎಂದು ಹೇಳುತ್ತೀರಿ. ಅವರೂ ಅದಕ್ಕೆ ಹೋಗದೆ, ಮನೆಗಳಮೇಲೆ ಹಾಕಿರುವ ಹಣಕ್ಕೆ ಶೇಕಡ ನಾಲ್ಕರಷ್ಟು ವರಮಾನವೂ ಕೂಡ ಬರುವುದಿಲ್ಲ. ನಾನು ಹೇಳಿದ್ದು ಈ ರೀತಿ ಮಾಡಬೇಡಿ building programme ಕಡಮೆ ಮಾಡಿ ಎಂದು. ವೈಯಕ್ತಿಕವಾಗಿ ಯಾವ ಮಂತ್ರಿಯ ಮೇಲೂ ನಾನು ಟೀಕೆ ಮಾಡಲಿಲ್ಲ. ನಾನೂ ಸಹ ಚಿಕ್ಕಂದಿನಲ್ಲಿ ವಿದ್ಯಾಭ್ಯಾಸ ಮಾಡುವ ಕಾಲದಲ್ಲಿ, ನಾಡು ಹಂಚಿನ ಮನೆಯಲ್ಲಿಯೇ ಇದ್ದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ಮನೆಗಳನ್ನು ಪೂರ್ತಿಯಾಗಿ ಖಾಲಿ ಬಿಟ್ಟಿಲ್ಲ. ವಿಸಿಟರುಗಳಿಗೆ ತೊಂದರೆಯಾಗುತ್ತದೆಂದು ಮಂತ್ರಿಗಳು ಕೆಲವು ಮನೆಗಳಿಗೆ ಹೋಗಿರಲಿಲ್ಲ. ಆಫೀಸರುಗಳು ಆ ಕಟ್ಟಡಗಳಿಗೇ ಅರ್ಜಿ ಹಾಕಿಕೊಂಡು ಹೋಗಿದ್ದಾರೆ. ಕೊನೆಯ ಪಕ್ಷ ಆರು ಮಂತ್ರಿಗಳಿಗೆ ಮನೆ ಕಟ್ಟುವುದರಿಂದ, ಈಗಿರುವ ಕಟ್ಟಡಗಳು ಖಾಲಿಯಾಗುತ್ತವೆ. ಒಬ್ಬರು ಸದಸ್ಯರು, ಸರ್ಕಾರಿ ಕಚೇರಿಗಳು ಎಷ್ಟು ಬಾಡಿಗೆ ಮನೆಗಳಲ್ಲಿವೆ ಎಂದು ಕೇಳಿದರು. ಇದಕ್ಕೆ ಬೇಕಾದ ಉತ್ತರವನ್ನು ಒಂದು ಇಲಾಖೆಯವರು ಒದಗಿಸುವ ಹಾಗಿಲ್ಲ. ಬೇರೆ ಬೇರೆ ಇಲಾಖೆಗಳಿಂದ ತರಿಸಬೇಕು. ಈ ಸೆಷನ್ ಮುಗಿಯುವುದರೊಳಗೆ ಈ ಅಂಶವನ್ನು ಒದಗಿಸಬೇಕೆಂದಿದ್ದೇನೆ. ವಿಧಾನ ಸೌಧ, ಹಳೆ ಅಠಾರಾಕಚೇರಿ ಇವುಗಳೆಲ್ಲಾ ಭರ್ತಿಯಾಗಿ, ಇನ್ನೂ ಎಷ್ಟೋ ಆಫೀಸುಗಳು ಬಾಡಿಗೆ ಕಟ್ಟಡಗಳಲ್ಲಿವೆ. "ಕುಮಾರ ಕೃಪ"ದಲ್ಲಿ 208 ಜನ ಸದಸ್ಯರೂ ಇರುವುದಕ್ಕಾಗುವುದಿಲ್ಲ. ನಾನು ಹೋಗಿ ನೋಡಿದ್ದೇನೆ. ಅಲ್ಲಿ ಸ್ಥಳಾನುಕೂಲ ಸರಿಯಾಗಿಲ್ಲ. ಸದಸ್ಯರು ಬಡ್ಜೆಟ್ ಸೆಷನ್‌ನಲ್ಲಿಯೇ ವರ್ಷಕ್ಕೆ ಎರಡು–ಎರಡೂವರೆ ತಿಂಗಳು ಬೆಂಗಳೂರಿನಲ್ಲಿ ಇರಬೇಕು, ಇದಲ್ಲದೆ, ಕೆಲವರು 15–20 ದಿವಸ ಮಧ್ಯೆ ಬಂದು ಹೋಗುತ್ತಿರಬೇಕು. ಸಾಮಾನ್ಯವಾಗಿ ಬಹಳ ದೂರದಿಂದ ಬರುವವರಿಗೆ ಅನುಕೂಲ ಕಲ್ಪಿಸಿಕೊಡಬೇಕು. ಶ್ರೀ ಟಿ. ಎಚ್. ಮೂಡಲಗಿರಿಗೌಡರು ಓದುವುದಕ್ಕೆ ಕೂಡ ಅಲ್ಲಿ ಅವಕಾಶವಿಲ್ಲದೆ, ಹರಟೆ ಹೊಡೆಯುವುದರಲ್ಲಿಯೇ ಕಾಲ ಕಳೆಯಬೇಕಾಗಿದೆಯೆಂದು ಹೇಳಿದರು. ಇದೆಲ್ಲಾ ನಿಜವಾದ ಮಾತು. ಒಬ್ಬೊಬ್ಬರಿಗೆ ಒಂದು ರೂಮು, ಅಥವಾ ಇಬ್ಬರಿರುವ ರೂಮುಗಳನ್ನು ಲೆಜಿಸ್ಲೇಟರ್ಸ್ ಕ್ವಾರ್ಟರ್ಸ್‌ನಲ್ಲಿ ಕಟ್ಟಿಸುವುದು ಅನ್‌ಪ್ರೊಡಕ್ಟೀವ್ ಎಂದು ನಾನು ತಿಳಿದುಕೊಂಡಿಲ್ಲ. ಅದನ್ನು ಕಟ್ಟಿಸುವುದು ಅಗತ್ಯ. ಇದಕ್ಕೆ ಹಣ ಖರ್ಚು ಮಾಡಿದರೆ ಹಣ ಪೋಲಾಗುತ್ತಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಮಂತ್ರಿಗಳ ಕ್ವಾರ್ಟರ್ಸ್ ಒಂದಕ್ಕೆ 75 ಸಾವಿರ ರೂಪಾಯಿಗಳ ಎಸ್ಟಿಮೇಟ್ ಕಳುಹಿಸಿದ್ದರು, ಅದನ್ನು 68ಸಾವಿರಕ್ಕೆ ಇಳಿಸಿತು. ಈಗ ಅದು 50 ಸಾವಿರ ರೂಪಾಯಿನಲ್ಲಿ ಆಗಬೇಕು. ನಾನೇ ಪ್ಲಾನ್ ಅಪ್ರೂ ಮಾಡಿದ್ದೇನೆ. ಆರು ಮಂತ್ರಿಗಳ ಕ್ವಾರ್ಟರ್ಸನ್ನು ಕಟ್ಟಿದರೆ ಆರು ಕಟ್ಟಡಗಳು ನಮಗೆ ಸಿಕ್ಕುತ್ತವೆ. ಸದಸ್ಯರಿಗೆ ಸ್ಟೇಟಿನ ಫ್ಯಾಮಿಲಿ ಕ್ವಾರ್ಟರ್ಸಿನ ಅವಶ್ಯಕತೆಯೂ ಇದೆಯೆಂದು ಸರ್ಕಾರದವರು ಭಾವಿಸುತ್ತಾರೆ.

ತುಮಕೂರು ತಾಲ್ಲೂಕು ಹೆಬ್ಬೂರು ಕಾನ್‌ಸ್ಟಿಟ್ಯುಯನ್ಸಿಯ ಶ್ರೀ ನರಸಿಂಹಯ್ಯನವರು ವಿದ್ಯುಚ್ಛಕ್ತಿಯ ದರವನ್ನು ಜಾಸ್ತಿಮಾಡಬಾರದೆಂದು ಸಲಹೆಮಾಡಿದ್ದಾರೆ. ಅದು ಸಾಧ್ಯವಿಲ್ಲವೆಂದು ಕಾಣುತ್ತದೆ ಎಂದು ಬಹಳ ವಿನಯವಾಗಿ ಹೇಳಿಕೊಳ್ಳುತ್ತೇನೆ. ಕಾರಣ ಇಷ್ಟೇ. ಇಂಡಿಯಾ ಸರ್ಕಾರದ ಒಂದು ಕಾನೂನು ಪ್ರಕಾರ ಎಲೆಕ್ಟ್ರಿಸಿಟಿ ಬೋರ್ಡ್ ಎಂಬುದು ರಚನೆಯಾಗಿದೆ. ಶ್ರೀ ಚಂಗಲರಾಯರೆಡ್ಡಿಯವರ ಸರ್ಕಾರ ಬೋರ್ಡ್ ಬೇಡ ಎಂದು ತಳ್ಳಿಕೊಂಡು ಬಂದಿತ್ತು. ಶ್ರೀ ಹನುಮಂತಯ್ಯನವರ ಆಡಳಿತದಲ್ಲಿಯೂ ಸಹ, ಅವರಮೇಲೆ ಒತ್ತಾಯವಿದ್ದರೂ, ಏನೋ ಹೇಳಿಕೊಂಡು ತಳ್ಳಿಹಾಕಿಕೊಂಡು ಬಂದುಬಿಟ್ಟರು. ಹೀಗೆಯೇ ಒಂಭತ್ತು ವರ್ಷ ಬೋರ್ಡಿನ ರಚನೆಯನ್ನು ತಳ್ಳಿಹಾಕಿದ್ದಾಯಿತು. ಈಗ ದಕ್ಷಿಣ ದೇಶದಲ್ಲಿ ಕೇರಳ, ಆಂಧ್ರ ಮತ್ತು ಮೈಸೂರು—ಈ ಮೂರು ಸರ್ಕಾರದವರೂ ಒಪ್ಪಿಕೊಂಡರು. ಎರಡು–ಮೂರು ಸರ್ಕಾರಗಳವರು ಒಪ್ಪಿಕೊಂಡುಬಿಟ್ಟಮೇಲೆ, ನಾವೂ ಸಹ ಬೋರ್ಡ್ ರಚನೆಗೆ ಒಪ್ಪಿಕೊಂಡೆವು. ಬೋರ್ಡ್ ಕಾನೂನಿನಲ್ಲಿ, no loss basis ಮೇಲೆ, ಬೋರ್ಡ್‌ನ್ನು ನಡೆಸಬೇಕೆಂದಿದೆ. Electricity (Supply) Act, 1948 of India ಪ್ರಕಾರ, ಎಲ್ಲಾ ಸ್ಟೇಟ್‌ಗಳಲ್ಲಿಯೂ ಎಲೆಕ್ಟ್ರಿಸಿಟಿ ಬೋರ್ಡ್‌ಗಳನ್ನು ರಚಿಸಬೇಕೆಂದಿದೆ. ಈಗ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು, ಮೂರು ವರ್ಷದಿಂದೀಚೆಗೆ ವಿದ್ಯುಚ್ಛಕ್ತಿ ಇಲಾಖೆಯಿಂದ ಲಾಭ ಬರುತ್ತಿಲ್ಲ, ನಷ್ಟದಿಂದ ಕೆಲಸ ಮಾಡುತ್ತಿದೆ. ಏಕೆಂದರೆ ಸಾಮಾನು ಬೆಲೆ ಹೆಚ್ಚಾಗಿದೆ, ಕೂಲಿ, ಸಂಬಳ ಹೆಚ್ಚಾಗಿದೆ. ವ್ಯವಸಾಯಕ್ಕೆ ಆರು ಕಾಸು, ಇತರ ಕೆಲಸಕ್ಕೆ ಒಂದಾಣೆ ಹೀಗೆ ರಿಯಾಯಿತಿ ದರ ಬೇರೆ ಇರುವುದರಿಂದ ಬೇಕಾದಷ್ಟು ಖರ್ಚು ಹೆಚ್ಚಿರುವುದರಿಂದ ಇಲಾಖೆಯಲ್ಲಿ

ನಷ್ಟವಾಗಿದೆ. ನಷ್ಟವಾಗಕೂಡದೆಂಬ ಉದ್ದೇಶವಿರುವುದರಿಂದ ಸ್ವಲ್ಪ ದರ ಹೆಚ್ಚಬಹುದೆಂದು ಕಾಣುತ್ತದೆ. ಈ ವಿಚಾರ ಬೋರ್ಡಿಗೆ ಸಂಬಂಧಪಟ್ಟಿದೆ. ನಷ್ಟ ತೋರಿಸದೆ ಬೋರ್ಡು ಕೆಲಸ ಮಾಡಬೇಕಾಗಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—30 ಕೋಟಿ ರೂಪಾಯಿಗಳ ಬಂಡವಾಳ ಹಾಕಿರುವಾಗ ಡಿಪ್ರಿಸಿಯೇಷನ್ ತೆಗೆದುಕೊಳ್ಳಬೇಕಾದ ಅಗತ್ಯವಿಲ್ಲವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮಾನ್ಯ ಶೆಟ್ಟರಿಗೆ ಇದೆಲ್ಲಾ ಗೊತ್ತಿದೆ. ಡಿಪ್ರಿಸಿಯೇಷನ್ ಕಳೆಯದೆ ಬೋರ್ಡಿನವರು ಅಷ್ಟು ಜವಾಬ್ದಾರಿ ಒಪ್ಪಿಕೊಳ್ಳುತ್ತಾರೆಯೇ ?

Sri C. K. RAJAIAH SETTY.—It is the Mysore Government who have invested 30 crores. It is we who have to receive and it is not the Board.

ಶ್ರೀ ಎಚ್. ಕೆ. ವೀರಣ್ಣಗೌಡ.—ಇನ್‌ವೆಸ್ಟ್‌ಮೆಂಟ್ ಮೇಲೆ ಬಡ್ಡಿ ಕೊಡುತ್ತಾರೆ.

ಶ್ರೀ ಟಿ. ಹನುಮಯ್ಯ.—ಬೋರ್ಡು ರಚನೆಯಾಗಿರುವುದರಿಂದ ಸರ್ಕಾರಕ್ಕೆ ಖರ್ಚು ಹೆಚ್ಚಿದೆಯೆ ಅಥವಾ ಕಡಮೆಯಾಗಿದೆಯೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹೆಚ್ಚುವ ಪ್ರಶ್ನೆ ಬರುವುದಿಲ್ಲ. ಇಲಾಖೆಯಲ್ಲಿದ್ದ ಸಿಬ್ಬಂದಿಯನ್ನು ಈಗ ಬೋರ್ಡಿಗೆ ವಹಿಸಿದೆ, ನಮ್ಮಲ್ಲಿ ಕೆಲಸ ಮಾಡುತ್ತಿದ್ದವರು ಈಗ ಬೋರ್ಡಿನಲ್ಲಿ ನೌಕರರಾಗಿ ಕೆಲಸ ಮಾಡುತ್ತಾರೆ.

Sri J. B. MALLARADHYA.—I raised the point as to what was the amount of block capital transferred to the Electricity Board. Is it treated as a loan or what is the position ? I would like the Hon'ble the Finance Minister to kindly clarify.

ಶ್ರೀ ಎಚ್. ಕೆ. ವೀರಣ್ಣಗೌಡ.—30 ಕೋಟಿ 70 ಲಕ್ಷ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್. 30 ಲಕ್ಷ ವಾಪಸು ಕೊಟ್ಟಿದ್ದಾರೆ.

Sri J. B. MALLARADHYA.—On that capital invested are you going to get 4½ per cent continuously ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ವರ್ಷ ಅಷ್ಟು ಬರುತ್ತದೆ. ಮುಂದಿನ ವರ್ಷ ಡಿಪ್ರಿಸಿಯೇಷನ್ ಕಳೆದು ಲೆಕ್ಕ ಹಾಕುತ್ತಾರೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಎಲೆಕ್ಟ್ರಿಸಿಟಿ ಬೋರ್ಡು ನಮ್ಮನ್ನು ಕೇಳಿ ದರ ನಿಗದಿ ಮಾಡುತ್ತದೆ, ಹೆಚ್ಚು ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳಿದ್ದಿರಿ. ಈಗ ದರ ಹೆಚ್ಚುತ್ತದೆಂದು ಹೇಳುತ್ತೀರಿ.

ಶ್ರೀ ಎಚ್. ಕೆ. ವೀರಣ್ಣಗೌಡ.—ಸರ್ಕಾರದವರು ಒಪ್ಪದೆ ಏಕ್‌ದಂ ಹೆಚ್ಚಿಸುವುದಕ್ಕಾಗುವುದಿಲ್ಲ. No loss basis ಮೇಲೆ ಕೆಲಸಮಾಡಬೇಕೆಂಬುದನ್ನು ಸರ್ಕಾರ ಕೂಡ ಮರೆಯುವ ಹಾಗಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್ (ಮೈಸೂರು ಸಿಟಿ).—ದರ ಏರಬಹುದೆಂದು ಹೇಳಿದಿರಿ. ಏರದ ಹಾಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಚ್. ಕೆ. ವೀರಣ್ಣಗೌಡ.—ಸರ್ಕಾರಕ್ಕೆ ಬಿಕ್ಕಟ್ಟಿದೆ. No loss basis ಮೇಲೆ ಮಾಡಬೇಕು. ಸರ್ಕಾರ ಪರಿಶೀಲಿಸಿ ತೀರ್ಮಾನ ಮಾಡುತ್ತದೆ. No loss basis ಮೇಲೆ ಕೆಲಸ ಮಾಡಬೇಕೆಂಬುದು ಇದ್ದೇ ಇರುತ್ತದೆ. ಅರ್ಹ್ಯಾಂಡಾಗಿ ಏನೂ ಇಲ್ಲಿ ಕಮಿಟ್ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಈಗ ಕೊಡುವ ಸಲಹೆಯನ್ನು ಸರ್ಕಾರ ವಿಮರ್ಶೆಮಾಡಿ ಸೂಚನೆ ಮಾಡಿರುವ ದರ ಹೆಚ್ಚೆ ಅಥವಾ ಸರಿಯೆ ಎಂದು ನೋಡಿ ಒಪ್ಪಿಕೊಳ್ಳಬೇಕಾಗುತ್ತದೆ. ಖರ್ಚು ಜಾಸ್ತಿ ಅಥವಾ ಕಡಮೆ ಎಂಬ ಪ್ರಶ್ನೆ ಈಗಿಲ್ಲ. ಸರ್ಕಾರದಿಂದ ಸಂಬಳ ಕೊಡುತ್ತಿದ್ದ ಇಲಾಖೆಯನ್ನು ಪೂರ್ಣವಾಗಿ ಬೋರ್ಡಿಗೆ ವಹಿಸಿದೆ. ಆ ಬೋರ್ಡಿನವರು ಸಂಬಳ ಕೊಟ್ಟು ಮೇಂಟೈನ್ ಮಾಡುತ್ತಾರೆ. ಕನ್‌ಸ್ಟ್ರಕ್ಷನ್ ಪ್ರಾಜೆಕ್ಟುಗಳಿಗೆ ಸಿಬ್ಬಂದಿಬೇಕಾದರೆ ತೆಗೆದುಕೊಂಡು ಅದಕ್ಕೆ ಸಂಬಳ ಕೊಡಬೇಕು. ಇನ್ನು ಶ್ರೀ ನರಸಿಂಹಯ್ಯನವರು ಕೆಲವು ಸೂಚನೆ ಮಾಡಿದ್ದಾರೆ. ಮೂರು ವರ್ಷಗಳ ಕೆಳಗೆ ಕೆಲವು ಕೆರೆ ಕೆಲಸ ಮಂಜೂರಾಗಿದ್ದರೂ ಇನ್ನೂ ಕೆಲಸವಾಗಿಲ್ಲ ಎಂದು ಹೇಳಿದ್ದಾರೆ. ಒಂದು ಕೆರೆ ಮಂಜೂರಾಗಿದೆ. ಬಾಕಿ ಎರಡು ಕೆರೆಗಳಿಗೆ ಚೀಫ್ ಇಂಜನಿಯರಿಂದ ಎಸ್ಟಿಮೇಟ್ ಆಗಿ ಸ್ಯಾಂಕ್ಷನಿಯಾಗುತ್ತಿದೆ. ಒಂದು ಕೆರೆಗೆ 11,200 ರೂಪಾಯಿಗಳಿಗೆ ಅಂದಾಜು ಬಂದಿದೆ; ಅದನ್ನು ಮಂಜೂರು ಮಾಡುತ್ತಾರೆ.

ಶ್ರೀ ನರಸಿಂಹಯ್ಯನವರು ಕೆರೆಗೆ ಬರುವ ನೀರು ಹೆಚ್ಚಾಗಿ ಕೆರೆ ಒಡೆಯುತ್ತದೆ, ಕೋಡಿ ಇಳಿಸಬೇಕು ಎಂದು ಹೇಳಿ ಎರಡು ವರ್ಷವಾಯಿತು, ಕೋಡಿ ರಿಪೇರಿ ಮಾಡಿಲ್ಲ ಎಂದು ಹೇಳಿದರು. ಅದನ್ನು ವಿಮರ್ಶೆಮಾಡಿ ರಿಪೇರಿ ಮಾಡುವುದಕ್ಕೂ ಏರಿ ಬಂದೋಬಸ್ತು ಮಾಡುವುದು ವಗೈರೆ ಕೆಲಸ ಕೈಗೊಳ್ಳುವುದಕ್ಕೂ ಏರ್ಪಾಡು ಮಾಡುತ್ತೇವೆ.

ಯುಗಚಿನದಿಗೆ ಸೇತುವೆ ಕಟ್ಟಬೇಕೆಂದು ಹೇಳಿದರು. ಸ್ಥಳದಲ್ಲಿ ಸ್ವಲ್ಪ ಭಿನ್ನಾಭಿಪ್ರಾಯವಿರುವುದರಿಂದ, ಒಬ್ಬೊಬ್ಬರು ಒಂದೊಂದು ಕಡೆ ಆಗಬೇಕೆಂದು ಹೇಳುತ್ತಿರುವುದರಿಂದ ಮಂಜೂರುಮಾಡುವಾಗ ಪುನರ್ವಿಮರ್ಶೆಗೆ ಏರ್ಪಾಡು ಮಾಡಿದೆ. ಅದನ್ನು ಮುಂದೆ ಪ್ರಸ್ತಾಪ ಮಾಡುವಾಗ ಹೇಳುತ್ತೇನೆ. ಈ ವಿಚಾರದಲ್ಲಿ ನಮ್ಮ ಊರ ಹತ್ತಿರ ಆಗಬೇಕು, ನಮಗೆ ಅನುಕೂಲವಾಗಬೇಕು ಎಂದು ಅಷ್ಟಾಗಿ ಪ್ರಾಮುಖ್ಯತೆ ಕೊಡಬಾರದು. ಎಂಜನಿಯರು ಹೇಳುವಕಡೆ ಸೂಕ್ತವಾಗಿ ಏರ್ಪಾಡು ಮಾಡಬೇಕು.

ಶ್ರೀ ವೈ. ವೀರಪ್ಪ.—ಮೊದಲು ಹೋಗಿ ಸ್ಥಳೀಯ ಅಧಿಕಾರಿಗಳು, ಇಂಜನಿಯರುಗಳು ಸ್ಥಳ ಅಜಮಾಯಿಷಿ ಮಾಡಿ, ಬಹಳ ಅಗತ್ಯವಾಗಿದೆ, 10-15 ಹಳ್ಳಿಗಳಿಗೆ ಅನುಕೂಲವಾಗುತ್ತದೆ ಎಂದು ಒಂದು ಕಡೆ ಕಟ್ಟುವ ವಿಚಾರದಲ್ಲಿ ಅಭಿಪ್ರಾಯ ಸೂಚಿಸಿದರು. ಮತ್ತೆ ಅದಕ್ಕೆ ಮೂರು ಮೈಲಿ ದೂರದಲ್ಲಿ ಒಬ್ಬ ವ್ಯಕ್ತಿಗೆ ಅನುಕೂಲ ಮಾಡುವುದಕ್ಕೋ ಏನೋ ಕಟ್ಟಬೇಕೆಂದು ಮೊದಲನ ನಿರ್ಧಾರವನ್ನು ಬದಲಾಯಿಸಿದ್ದಾರೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ವಿಚಾರವನ್ನು ಎಂಜನಿಯರುಗಳಿಗೇ ಬಿಟ್ಟರೆ ಚೆನ್ನಾಗಿರುತ್ತದೆ. ತಮ್ಮಂಥವರು ಬಂದು ಏನೋ ಮಾಡುವುದರಿಂದ ಮುಂದೆ ವ್ಯತ್ಯಾಸವಾಗುತ್ತದೆ.

ಶ್ರೀಮಾನ್ ಕುಂದೂರು ರುದ್ರಪ್ಪನವರು ಚನ್ನಗಿರಿ ತಾಲ್ಲೂಕಿನಲ್ಲಿ ಕೆರೆ ಆಗಬೇಕೆಂದು ಹೇಳಿದರು. ಏಳು ಲಕ್ಷ ಚಿಲ್ಲರೆ ರೂಪಾಯಿಗಳಿಗೆ ಅಂದಾಜು ಮಂಜೂರಾಗಿ ಟೆಂಡರು ಕರೆದಿದ್ದಾರೆ. Tender is under consideration.

ಶ್ರೀ ವೈ. ವೀರಪ್ಪನವರು ಹಳ್ಳಿಮೈಸೂರಿನಿಂದ ಸಾಲಿಗ್ರಾಮಕ್ಕೆ ಒಂದು ರಸ್ತೆ ಮಾಡಬೇಕೆಂದು ಹೇಳಿದರು. ಆ ರಸ್ತೆಯ ನಾಲ್ಕೂವರೆ ಮೈಲಿ ಪ್ರದೇಶ

(ಶ್ರೀ ಎಚ್. ಕೆ. ವೀರಣ್ಣಗೌಡ)

ಮೈಸೂರು ಡಿಸ್ಟ್ರಿಕ್ಟಿನಲ್ಲದೆ, ಬಾಕಿ ಎರಡೂವರೆ ಮೈಲಿ ಹಾಸನ ಜಿಲ್ಲೆಯಲ್ಲಿದೆ. ಹಾಸನ ಜಿಲ್ಲೆಯ ಭಾಗದಲ್ಲಿ ಕೆಲಸವಾಗಿದೆ. ಈ ತಿಂಗಳಿಂದ ಕೆಲವು ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳನ್ನು ಸರ್ಕಾರ ವಹಿಸಿಕೊಳ್ಳಬೇಕೆಂದಿದೆ. ಆಗ ಆ ಉಳಿದಿರುವ ಕೆಲಸ ತೆಗೆದುಕೊಂಡು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಇನ್ನೊಂದು ಕೆರೆ-ಮಾರನಾಯಕನ ಕೆರೆ, ಹುಣಿಸಿನ ಕೆರೆ ವಿಷಯ ಹೇಳುತ್ತಾ 20 ವರ್ಷದಿಂದ ಇದು ಹಾಗೆಯೇ ನಿಂತಿದೆ ಎಂದು ಹೇಳಿದರು. ಈಗ ಇವೇ ಮೊದಲಾಗಿ 18 ಕೆರೆಗಳ ವಿಷಯದಲ್ಲಿ ಎಸ್ಟಿಮೇಟ್ ಮಾಡುತ್ತಿದ್ದಾರೆ. ಹುಣಿಸಿನ ಕೆರೆಯನ್ನು ಎಸ್ಟಿಮೇಟ್ ಮಾಡಿ ಈ ವರ್ಷ ತೆಗೆದುಕೊಳ್ಳುತ್ತಾರೆ.

ಒಬ್ಬ ಸದಸ್ಯರು.—ಹಡಗಲಿ ತಾಲ್ಲೂಕಿಗೆ ತಾವು ಬಂದಾಗ್ಗೆ ನೀವು ನೋಡಿದ ವಿಷಯದ ಬಗ್ಗೆ ಏನು ಮಾಡಿದ್ದಿರಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ಎಲ್ಲಾ ವಿಷಯಗಳಿಗೂ ನಾನು ಇನ್ನೂ ಉತ್ತರ ಕೊಟ್ಟಿಲ್ಲ. ಏನಾದರೂ ಸ್ವಲ್ಪ ಅನುಮಾನ ಸಂದೇಹಕ್ಕೆ ಅವಕಾಶವಿದ್ದುದ್ದಕ್ಕೆ ಮಾತ್ರ ಈಗ ಉತ್ತರ ಕೊಡುತ್ತೇನೆ. ಅಂದ ಮಾತ್ರಕ್ಕೆ ಬಾಕಿ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡಿಲ್ಲವೆಂದು ಭಾವಿಸಕೂಡದು.

ಒಬ್ಬ ಸದಸ್ಯರು.—ಲಕ್ಕವಳ್ಳಿ ರಿಸರ್ವಾಯರ್ ಎಡದಡದ ನಾಲಾ ವಿಚಾರವನ್ನು ಸ್ವಾಮಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ಬಗ್ಗೆ proposalಗಳು ಡಿವಿಜನಲ್ ಕಮಿಷನರಿಗೆ ಬಂದಿವೆ. ಸಿಬ್ಬಂದಿ ಮಂಜೂರಾಗಿದೆಯೆಂದು ಆಗಲೇ ಹೇಳಿದೆ. ತಾವು ಇದ್ದಿರೋ ಇಲ್ಲವೋ ಗೊತ್ತಿಲ್ಲ.

ಶ್ರೀಮತಿ ಲೀಲಾವತಿ ವೆಂಕಟೇಶ್ ಮಾಗಡಿ (ಶಿರಹಟ್ಟಿ).—ತಂಗೋಡು ನಾಲಾ ವಿಚಾರ, ಸ್ವಾಮಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ಯಾವುದು ಅನುಮಾನವಾಗಿದೆ ಅದರ ವಿಷಯವನ್ನು ಕುರಿತು ಮಾತ್ರ ಈಗ ಹೇಳುತ್ತಿದ್ದೇನೆ. ಮಿಕ್ಕ ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಶ್ರೀನಿವಾಸಶೆಟ್ಟಿಯವರು ಇಂಜಿನಿಯರುಗಳಿಗೆ ಗೊತ್ತುಮಾಡಿರುವ ಸಂಬಳ ಬಹಳ ಕಡಮೆಯೆಂದು ಹೇಳಿದರು. ಅವರ ಮಾತನ್ನು ನಾನು ಅಲ್ಲಗಳೆಯುವುದಿಲ್ಲ. ಹಾಲಿ ಇಟ್ಟಿರುವ 120 ರೂಪಾಯಿಗಳು ಬಹಳ ಕಡಮೆ. ಅದನ್ನು ನೋಡಿಯೇ 170 ರೂಪಾಯಿಗಳನ್ನಾದರೂ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಅಣ್ಣಾರಾವ್ ಅವರು ಹೈದರಾಬಾದ್ ಪ್ರಾಂತ್ಯಕ್ಕೆ ಬಡ್ಜೆಟ್ಟಿನಲ್ಲಿ ಹೆಚ್ಚಿಗೆ ಮೊಬಲಗು ಒದಗಿಸಿಲ್ಲವೆಂದು ಹೇಳುತ್ತಾ ಕೋಣನಮುಂಜಿಗೆ ಕೋಳಿ ಕೊಡುವ ವಿಚಾರ ಹೇಳಿದರು. ಇದು ಸ್ವಾರಸ್ಯವಾಗಿದೆ, ನಿಜ. ಆದರೆ ಒಂದು ವಿಷಯ ಅವರಿಗೆ ನಾನು ತಿಳಿಸಬೇಕಾಗಿದೆ. ನಮ್ಮಲ್ಲಿ Lumpsum grants ಎಂದು ಬೇರೆ ಇದೆ. ಆಗತ್ಯವಾದ ಯಾವುದೇ ಕಾರ್ಯವನ್ನು ತೆಗೆದುಕೊಳ್ಳುವುದಕ್ಕೆ Lumpsum grant ನಿಂದ ಕೊಡುವುದಕ್ಕೆ ಅವಕಾಶ ಮಾಡಿದೆ. ತಾವು ಹೇಳಿದ ಹಾಗೆ ಹಳೆಯ ಮೈಸೂರಿಗೆ ಎಷ್ಟು provision ಮಾಡಿದೆಯೋ ಅಷ್ಟನ್ನು ಬೀದರ, ಗುಲ್ಬರ್ಗಗಳಿಗೆ ಮಾಡಿಲ್ಲವೆಂಬುದು ಸರಿಯಲ್ಲ.

ಶ್ರೀ ಅಣ್ಣಾರಾವ್.—ಅಲ್ಲಿ ಹೆಚ್ಚಿಗೆ ಕೊಟ್ಟಿದೆ; ಇಲ್ಲಿ ಅಷ್ಟು ಕೊಟ್ಟಿಲ್ಲ ಎಂದು ಹೇಳಿದ್ದೇನೆ. ರಸ್ತೆಯ ವಿಚಾರದಲ್ಲಿ ಎಷ್ಟು ಮೈಲೇಜ್ ತೆಗೆದುಕೊಂಡಿದ್ದೀರಿ ಎಂದು ನಾನು ಉದಹರಿಸಿದೆ ಅಷ್ಟೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲಾ ವಿದ್ಯುಚ್ಛಕ್ತಿಯ ಉತ್ಪಾದನೆ ಮಾಡಬೇಕೆಂದಿದೆ. ಆದರೆ, ವಿದ್ಯುಚ್ಛಕ್ತಿಯ ಉತ್ಪಾದನೆಯ ವಿಷಯದಲ್ಲಿ ಮುಖ್ಯವಾಗಿ ಇಂಡಿಯಾ ಸರ್ಕಾರದವರ ಒಪ್ಪಿಗೆ ಬೇಕು. ಕಾಳಿನದಿ, ಧಾರಾಪುರ, ಮೇಕೆದಾಟ್ ಇವನ್ನೆಲ್ಲಾ ಮಾಡಬೇಕಾಗಿದೆ. ಸದ್ಯಕ್ಕೆ ತೆಗೆದುಕೊಂಡಿರುವುದು ಆದಮೇಲೆ ಮಿಕ್ಕಿದ್ದನ್ನೂ ತೆಗೆದುಕೊಳ್ಳುತ್ತೇವೆ.

ಶ್ರೀ ದೀನದಯಾಳುನಾಯ್ಡುರವರು ಮಾಡಿದ ಸಲಹೆ ವೈಯಕ್ತಿಕವಾಗಿ ನನಗೆ ಒಪ್ಪಿತು. ಒಂದು ರೆಜಿಸ್ಟ್ರೇಟರ್ಸ್ ಹೋಮ್ ಇದ್ದು ಅಲ್ಲಿ ಏನಾದರೂ ತೀರ್ಮಾನವಾದರೆ ಇಲ್ಲಿಯೂ ಸುಲಭವಾಗಿ ತೀರ್ಮಾನ ಮಾಡಬಹುದು.

ಬೆಂಗಳೂರು ಸಿಟಿ ನೀರು ಸರಬರಾಯಿಯ ವಿಚಾರ ಹೇಳಿದರು. ಈ ಬಗ್ಗೆ ಮೊನ್ನೆ ತಾನೆ ಒಂದು ಹೇಳಿಕೆ ಕೊಟ್ಟಿದೆ. ಇನ್ನೂ ವಿವರವಾಗಿ Statement ಕೊಡುವುದಕ್ಕೆ ಈಗ ಕಾಲಾವಕಾಶವಿಲ್ಲ.

ಶ್ರೀ ಜಿ. ಬಿ. ಮಲ್ಲಾರಾಧ್ಯ.—ಹಿಂದೆ ಬೆಂಗಳೂರಿಗೆ ನೀರು ಸರಬರಾಯಿ ಮಾಡುವ ಬಗ್ಗೆ ಕಾವೇರಿಯಿಂದ ಪೈಪ್ ಮೂಲಕ ತರುವುದಕ್ಕೆ ಬದಲು ಮೇಕೆದಾಟಿನಿಂದ ತರುವುದು ಕೇವಲ 37 ಮೈಲಿಗಳು crowfly ಮಾರ್ಗವಾಗಿ ಆಗುತ್ತದೆಂದು ಯೋಚಿಸಿ 1948ನೆಯ ಇಸವಿಯಲ್ಲೇ ಸರ್ವೆ ಮುಂತಾದುವುಗಳೆಲ್ಲಾ ಆಗಿತ್ತು. About 37 miles as the crow flies. There was a scheme and a survey was undertaken. I think it would be a much better and a much more feasible proposition than the Cauvery scheme.

ಶ್ರೀ ಎಚ್. ಕೆ. ವೀರಣ್ಣಗೌಡ.—ಈಚೀಚೆಗೆ ಈ ವಿಷಯ ಸ್ವಲ್ಪ ಚರ್ಚಾಸ್ಪದವಾಗಿ ಪರಿಣಮಿಸಿದೆ. ನಾನು ಸಂಬಂಧಪಟ್ಟ ಹಳೆಯ ರಿಕಾರ್ಡ್‌ಗಳನ್ನೆಲ್ಲಾ ತರಿಸಿ ನೋಡಿದ್ದೇನೆ. ಎರಡು ಅಭಿಪ್ರಾಯಗಳು ಬಂದಿವೆ. ಮೊದಲನೆಯದು, ಅರ್ಕಾವತಿಯನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳುವುದಾದರೆ ಬೆಂಗಳೂರು ಸಿಟಿಯ 20 ಲಕ್ಷ ಪ್ರಜೆಗಳಿಗೆ ತಲಾ ಒಂದಕ್ಕೆ 20-25 ಗ್ಯಾಲನ್‌ಗಳಷ್ಟು ಕೊಡುವಷ್ಟುಮಟ್ಟಿಗೆ ಏರ್ಪಾಡು ಮಾಡಬಹುದೆಂದು ಒಂದು ಅಭಿಪ್ರಾಯವಿದೆ. ಆದರೆ, ಇದರ ಸಂಬಂಧದಲ್ಲಿ ಒಂದು condition ಇದೆ. ಅರ್ಕಾವತಿ ನದಿಗೆ ನೀರಾವರಿ ಅಣೆಗಟ್ಟುಗಳನ್ನಾವುದನ್ನೂ ಹಾಕಕೂಡದೆಂದು ಹೇಳಿದ್ದಾರೆ. ಅರ್ಕಾವತಿ ನದಿಗೆ ಮೂರು ಕಡೆ ಕಣೆಕಟ್ಟು ಹಾಕಿ ತಿಪ್ಪಗೊಂಡನಹಳ್ಳಿಗೆ ನೀರುತಂದು ಅಲ್ಲಿಂದ ಬೆಂಗಳೂರು ಸಿಟಿಗೆ ನೀರನ್ನು ಎತ್ತಿ ಸರಬರಾಯಿ ಮಾಡಬಹುದೆಂದು ಹೇಳಿದ್ದಾರೆ. ಇದು ಹತ್ತು ಕೋಟಿ ರೂಪಾಯಿಗಳ ಅಂದಾಜು.

ಇನ್ನೊಂದು ಅಂದಾಜು; ಕಾವೇರಿಯ ಉಪನದಿಗಳಲ್ಲೊಂದಾದ ಹೇಮಾವತಿಯಿಂದ ನೀರು ತರತಕ್ಕಂಥಾದ್ದು. ಇದಕ್ಕೆ 75 ಮೈಲಿ ಹೋಗಬೇಕಾಗುತ್ತದೆ. ಆದರೆ ಒಂದು ಅನುಕೂಲ ಇಲ್ಲದೆ. ಹೇಮಾವತಿ ನದಿಯಿಂದ ಯಾವ ಪಂಪೂ ಇಲ್ಲದೆ ತಿಪ್ಪಗೊಂಡನಹಳ್ಳಿಗೆ ನೀರು ಬರುತ್ತದೆ. 270 ಅಡಿಗಳ gravitational forceನಿಂದ ಹೀಗೆ ನೀರು ತರಬಹುದೆಂದು ಇಂಜಿನಿಯರುಗಳು ಹೇಳುತ್ತಾರೆ. ಹೀಗೆ ಮಾಡುವುದಾದರೆ, ಹೇಮಾವತಿ ನದಿಯಿಂದ ನೀರು ಎಷ್ಟು ನಾವು ತೆಗೆದುಕೊಳ್ಳುತ್ತೇವೆಯೋ ಅಷ್ಟುಮಟ್ಟಿಗೆ ನೀರಾವರಿಯಾಗು

ತ್ತಿರುವ ಜಮೀನುಗಳಿಗೆ ನೀರು ತಪ್ಪುತ್ತದೆ. ಇದಲ್ಲದೆ, ಕಾವೇರಿಯಿಂದ ನಾವು ಮದ್ರಾಸ್ ಸರ್ಕಾರಕ್ಕೆ ಬೇರೆ ನೀರು ಕೊಡುವ ಒಪ್ಪಂದವಿದೆ. ಹೀಗಾಗಿ ನಾವು ಯಾವಾಗ ಬೆಂಗಳೂರು ಸಿಟಿಗೆ ಅಲ್ಲಿಂದ ನೀರು ತೆಗೆದುಕೊಳ್ಳುತ್ತೇವೆಯೋ ಆಗ್ಗೆ ಅಲ್ಲಿ ವ್ಯವಸಾಯಕ್ಕೆ ತೊಂದರೆಯಾಗುತ್ತದೆ. ಒಂದಿಷ್ಟು ಜಮೀನು ನೀರಾವರಿಗೆ ಬಂದಂಥಾದ್ದು ಪಾಳು ಬೀಳುತ್ತದೆ.

ಇತ್ತ ಅರ್ಕಾವತಿ ನದಿಯ ವಿಷಯದಲ್ಲಿ ಶ್ರೀ ಕರಿಯಪ್ಪನವರು, ಅದಕ್ಕೆ ಒಂದು ಅಣೆಕಟ್ಟು ಹಾಕಿ ನೀರಾವರಿಗೆ ಏರ್ಪಾಡು ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಅಂತು ಬೆಂಗಳೂರು ಸಿಟಿಗೆ ನೀರು ಸರಬರಾಯಿ ಮಾಡಬೇಕಾದರೆ ಯಾವುದಾದರೊಂದು ಕಡೆ ವ್ಯವಸಾಯಕ್ಕೆ ಇದ್ದ ನೀರಿನ ಅನುಕೂಲವನ್ನು ತಪ್ಪಿಸಬೇಕು. ಅರ್ಕಾವತಿಯಿಂದ ತರುವುದು ಹತ್ತು ಕೋಟಿ ರೂಪಾಯಿನ ಯೋಜನೆ; ಹೇಮಾವತಿಯಿಂದ ತರುವುದು 35-40 ಕೋಟಿ ರೂಪಾಯಿಗಳ ಯೋಜನೆ. ಆದ್ದರಿಂದ ಈಗ 35-40 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಹೇಮಾವತಿಯಿಂದ ನೀರು ತಂದು ಅಲ್ಲಿ ಸಾಗುವಳಿಯಲ್ಲಿರತಕ್ಕ ಜಮೀನುಗಳನ್ನು ಸಾಗುವಳಿಯಿಂದ ತಪ್ಪಿಸುವುದು ಸೂಕ್ತವೇ ಅಥವಾ 10-12 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಅರ್ಕಾವತಿ ನದಿಯ ನೀರನ್ನೇ ಪೂರ್ತಾ ಉಪಯೋಗಿಸಿಕೊಂಡು ಅಲ್ಲಿ ಆಸೆ ಇಟ್ಟುಕೊಂಡಿರುವ ರೈತರಿಗೆ ಇಲ್ಲವೆಂದು ಹೇಳುವುದೇ ಎಂಬುದು ಸ್ವಲ್ಪ ಆಲೋಚನೆ ಮಾಡಬೇಕಾದ ವಿಷಯವಾಗಿದೆ. ಈ ಬಗ್ಗೆ ಇಂಜಿನಿಯರುಗಳ ಒಂದು ಸಮಿತಿಮಾಡಿ ಅವರ ಸಲಹೆಯನ್ನು ಪಡೆಯಬೇಕೆಂದು ಮಾಡಿದ್ದೇವೆ.

ಅಧ್ಯಕ್ಷರು.—ಹೇಮಾವತಿ ನದಿಯಿಂದ ನೀರು ತೆಗೆದುಕೊಂಡರೆ per head ಎಷ್ಟು ಗ್ಯಾಲನ್ ನೀರು ಸರಬರಾಯಿಯಾಗುತ್ತದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—40 ಗ್ಯಾಲನ್‌ಗಳು ದೊರಕಬಹುದೆಂದು ಲೆಕ್ಕ ಹಾಕಿದ್ದಾರೆ. 25 ಗ್ಯಾಲನ್‌ಗಳಿಗೆ ಕಡಮೆ ಇಲ್ಲವೆಂದು ಹೇಳಬಹುದು.

ಅಧ್ಯಕ್ಷರು.—ಅರ್ಕಾವತಿಯಿಂದ ತೆಗೆದುಕೊಂಡರೆ, per head 20 ಗ್ಯಾಲನ್‌ಗಳಿಗಿಂತ ಹೆಚ್ಚಿಗೆ ಕೊಡುವುದಕ್ಕಾಗುವುದಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ಕೊಡುತ್ತಿರುವುದು 13 ಗ್ಯಾಲನ್. 20-25 ಗ್ಯಾಲನ್ ಕೊಟ್ಟರೆ ಎಲ್ಲರಿಗೂ ತೃಪ್ತಿಯಾಗುತ್ತದೆಂದು ನಮ್ಮ ಭಾವನೆ. ಆದ್ದರಿಂದ ಈ ಪ್ರಶ್ನೆ ಇನ್ನೂ ಇತ್ಯರ್ಥವಾಗಿಲ್ಲ. ತಜ್ಞರ ಸಮಿತಿಯವರು ವಿಮರ್ಶೆ ಮಾಡುತ್ತಾ ಇದ್ದಾರೆ.

ಶ್ರೀ ಹನುಮಂತಯ್ಯನವರು ಸ್ವಲ್ಪ ಉದ್ರೇಕಪೂರಿತವಾಗಿ ಮಾತನಾಡಿದರು. "ನೀವು ವ್ಯವಸಾಯಗಾರರ ಮನೆತನದಲ್ಲಿ ಹುಟ್ಟಿದವರಾಗಿ 'ಸರ್ಕಾರದ ಕೆಲಸ ದೇವರ ಕೆಲಸ' ಎನ್ನುವುದನ್ನು ತೆಗೆಸಿಹಾಕಬಾರದಾಗಿತ್ತು" ಎಂದು ಹೇಳಿದರು. ಆ ಪದ ಅವರು ಉಪಯೋಗಿಸಬಾರದಾಗಿತ್ತು ಎಂದು ನನ್ನ ಅಭಿಪ್ರಾಯ. 25 ವರ್ಷಗಳಿಂದ ಈ ಸಭೆಯಲ್ಲಿ ಸದಸ್ಯನಾಗಿ ಬಂದು ಸಾರ್ವಜನಿಕರ ಸೇವೆ ಸಲ್ಲಿಸುತ್ತಾ ಇದ್ದೇನೆ, ಹೇಳುವುದಕ್ಕೆ ಹಕ್ಕಿದೆ ಎಂದು ಹೇಳಿ ಬಾಯಿಗೆ ಬಂದಂತೆ ಮಾತನಾಡುವುದು ಸರಿಯಲ್ಲ. ಅವರು ಹೇಳಿದ್ದನ್ನು ಕೇಳಿ ನಾನು ಬಹಳವಾಗಿ ಮನಸ್ಸಿನಲ್ಲಿ ನೊಂದುಕೊಂಡೆ. ಈ ಸಭೆಯಲ್ಲಿ ಮತ್ತು ಮೇಲಿನ ಸಭೆಯಲ್ಲಿ ಒಂದು ನಿರ್ಣಯ ಬಂತು. ಗಣ್ಯ ವ್ಯಕ್ತಿಗಳ ಅಭಿಪ್ರಾಯ ಏನಾಗಿತ್ತು ಎಂಬುದು ಪತ್ರಿಕೆಯಲ್ಲೆಲ್ಲಾ ಬಂದಿದೆ. ಅದನ್ನೆಲ್ಲಾ ಮತ್ತೆ ಹೇಳಬೇಕಾಗಿಲ್ಲ. ಒಂದು ಸಮಿತಿಯವರು ಕುಳಿತುಕೊಂಡು ಅದಕ್ಕೆ ಖರ್ಚಾಗಿರತಕ್ಕ ಹಣ ಮತ್ತು ಹೊರಗಡೆ ಬಂದಿರತಕ್ಕ ಟೀಕೆ ಇದನ್ನೆಲ್ಲಾ ಪರಿಶೀಲನೆ ಮಾಡಿ 'ಸರ್ಕಾರಿ ಕೆಲಸ ದೇವರ ಕೆಲಸ' ಎಂದು ಇರುವುದು ಸೂಕ್ತವಲ್ಲ, ಅದನ್ನು ತೆಗೆದುಹಾಕಿದರೂ ಅನಾಹುತವಾಗುವುದಿಲ್ಲ ಎಂದು ಅಭಿಪ್ರಾಯಪಟ್ಟರು. ಅದರಂತೆ ಸರ್ಕಾರದವರು ತೀರ್ಮಾನಮಾಡಿ ಕೆಲಸ ಮಾಡಿದ್ದಾರೆ.

ಶ್ರೀ ದೊಡ್ಡಮೇಟಿ ಅವರು ಒಂದು ಸಲಹೆ ಮಾಡಿದ್ದಾರೆ. ಆ ಪ್ರಾಂತ್ಯದಲ್ಲಿ ಮಾರ್ಗ ಸೌಕರ್ಯ ಒಂದು ಸಮಸ್ಯೆ ಆಗಿದೆ, ಆ ವಿಚಾರದಲ್ಲಿ ಗಮನ ಕೊಡುತ್ತಿಲ್ಲ, ವಕೀಲೀಬಾಜಿ ಹೆಚ್ಚಾಗಿದೆ ಎಂದು ಹೇಳಿದರು. ಆ ವಿಚಾರದಲ್ಲಿ ಸರ್ವೇ ಮಾಡಿಸಿ ವಿವರವಾದ ಕಾರ್ಯಕ್ರಮ ಕೈಕೊಳ್ಳುತ್ತೇವೆ ಎಂದು ಹೇಳುತ್ತೇನೆ.

ಬಸವೇಗೌಡರು ಒಂದು ಅಭಿಪ್ರಾಯ ಸೂಚನೆ ಮಾಡಿದ್ದಾರೆ. ಟೆಂಡರ್ಸ್ ಒಪ್ಪಿಕೊಳ್ಳುವುದರಿಂದ ಆಗತಕ್ಕ ಅನಾಹುತ ಏನು ಅನ್ನುವುದು ನಮ್ಮ ಅನುಭವದಲ್ಲೂ ಇವೆ. ಆದರೆ ಬೇರೆ ಮಾರ್ಗವೇ ಇಲ್ಲ. ಲೀಸ್ಟ್ ಟೆಂಡರ್ಸ್ ಒಪ್ಪಿಕೊಳ್ಳದಿದ್ದರೆ ನಿರ್ವಾಹವೇ ಇಲ್ಲ. ನಾನು ಅದನ್ನು ಚರ್ಚೆ ಮಾಡಿದ್ದೇನೆ. ಯಾರೇ ಮಂತ್ರಿಗಳಾಗಲಿ ಮನಸ್ಸು ಬಂದಹಾಗೆ ಆರ್ಡರ್ ಮಾಡುವುದಕ್ಕೆ ಸಾಧ್ಯವಿಲ್ಲ. ಫೈಲ್ ಬಿಲ್ಡ್ ಅಪ್ ಆಗುತ್ತದೆ, ಸೆಕ್ರೆಟೇರಿಯಟ್ ಲೆವಲ್‌ನಲ್ಲಿ ವಿಮರ್ಶೆಗೆ ಬರುತ್ತದೆ, ಅಕೌಂಟೆಂಟ್ ಜನರಲ್ ಇದ್ದಾರೆ, ಫೈನಾನ್ಸ್ ಕಮಿಟಿ ಇದೆ. ಚರ್ಚೆಮಾಡಿ ನೋಡುತ್ತಾರೆ. ಸಾಮಾನ್ಯವಾಗಿ ಕಡಮೆ ಟೆಂಡರ್ ಒಪ್ಪಿಕೊಂಡು, ಆ ರೀತಿ ಕೆಲಸ ಮಾಡದಿದ್ದರೆ ಪೆನಾಲ್ಟಿ ಕ್ಲಾಸ್ ಇದೆ. ಅದರಂತೆ ಕ್ರಮ ಕೈಕೊಳ್ಳಬಹುದು.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ತಾವೇ ಹೇಳಿದ್ದಿರಿ. ಕಂಟ್ರಾಕ್ಟರುಗಳನ್ನು ಲೈಸೆನ್ಸ್‌ಗೆ ಒಳಪಡಿಸಿ.

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ತಾನೆ ಒಪ್ಪಿಗೆ ಕೊಟ್ಟಿದ್ದೇನೆ. ಅನನುಭವಸ್ಥರು, ಮತ್ತು ದುರಾಸೆಯುಳ್ಳವರು ಈ ಕೆಲಸಕ್ಕೆ ನಿರತರಾಗಬಾರದು. ನಮ್ಮ ದೇಶದಲ್ಲಿ ಒಳ್ಳೆಯ ಕಂಟ್ರಾಕ್ಟರುಗಳ ಅವಶ್ಯಕತೆ ಖಂಡಿತ ಇದೆ. ಅವರೂ ಸಹ ಸಭೆ ಸೇರಿ ಅನೇಕ ಸಲಹೆಗಳನ್ನು ಸೂಚಿಸಿ ನಿರ್ಣಯಗಳನ್ನು ಮಾಡಿ ಸರ್ಕಾರದವರಿಗೆ ಕಳುಹಿಸಿದ್ದಾರೆ. ಇದರ ಮುಖ್ಯ ಉದ್ದೇಶವೇನೆಂದರೆ ರಿಜಿಸ್ಟರ್ ಮಾಡುವುದು. ಎ.ಬಿ.ಸಿ. ಎಂದು ಹೇಳಿ ಮೂರುನಾಲ್ಕು ದರ್ಜೆಮಾಡಿ ಇಷ್ಟು ಸಾವಿರ ರೂಪಾಯಿ ಕಂಟ್ರಾಕ್ಟು ಇಂತಹವರಿಗೆ ಕೊಡುವುದು ಎಂದು ಹೇಳಿ ನಿಗದಿ ಮಾಡಬೇಕಾಗುತ್ತದೆ. ಬೊಂಬಾಯಿ ಮತ್ತು ಮದರಾಸಿನಲ್ಲಿ ಇರುವ ಹಾಗೆ ಒಂದು ಷೆಡ್ಯೂಲ್ ಬಿಲ್‌ನಲ್ಲಿ ಬರುತ್ತದೆ. ಆಗ ತಾವು ಹೇಳತಕ್ಕ ತೊಂದರೆ ಪರಿಹರಿಸುವುದಕ್ಕೆ ಸಹಕಾರಿಯಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಜಿ. ಬಿ. ಮಲ್ಲಾರಾಧ್ಯ.—ಕೃಷ್ಣರಾಜಸಾಗರ ಪ್ರಾಜೆಕ್ಟ್ ಏಕೆ ಒಂದು ಪರ್ಸೆಂಟ್ ರಿಟರ್ನ್ ಕೊಡುತ್ತಾ ಇದೆ ಎಂಬುದನ್ನು ನಾನು ರೆಫರ್ ಮಾಡಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಜ್ಞಾಪಕ ಇದೆ. ಅದಕ್ಕೆ ಬಹಳ ಅಂಕಿಅಂಶಗಳಿಗೆ ಹೋಗಬೇಕಾಗುತ್ತದೆ, ಅನೇಕ ಕಾರಣಗಳಿವೆ. ಸ್ಥೂಲವಾಗಿ ನಾನು ಆ ಪ್ರಾಂತ್ಯದಿಂದ ಬಂದಿರುವುದರಿಂದ ನನ್ನ ಅನುಭವದಿಂದ ಹೇಳುತ್ತೇನೆ. ಮೊದಲು ಪ್ರಾರಂಭ ಮಾಡಿದಾಗ, ಇಂಜನಿಯರುಗಳು ಮಾಡಿದ್ದರೂ ಸಹ, ಅನುಭವದಲ್ಲಿ ಅದು ಸ್ವಲ್ಪ ಪುಸ್ತಕದ ಬದನೆಯಕಾಯಿ ಆಗಿರುವ ಹಾಗೆ ಕಾಣುತ್ತದೆ. ನನಗೆ ಜ್ಞಾಪಕವಿರುವ ಹಾಗೆ ನಾನೇ ಒಂದು ಸಾರಿ ಅಲ್ಲಿನ ಜನಗಳನ್ನು

(ಶ್ರೀ ಎಚ್. ಕೆ. ವೀರಣ್ಣಗೌಡ)

ಕರೆದುಕೊಂಡು ಬಂದಿದ್ದೆ. ಬಡ್ಡಿ ಶೇಕಡ ನಾಲ್ಕು ಬರುತ್ತದೆ ಎಂದು ಹೇಳಿದ್ದಾರೆ. ಲಕ್ಷದ 20 ಸಾವಿರ ಎಕರೆ ಸಾಗಿಗೆ ಬರುತ್ತದೆ. 40 ಸಾವಿರ ಎಕರೆ ಕಬ್ಬು, 40 ಸಾವಿರ ಎಕರೆ ಬತ್ತ, 40 ಸಾವಿರ ಎಕರೆ ಖುಷ್ಕೀ ಬೆಳೆಗೆ ನೀರು ಕೊಡಬಹುದು. ಶೇಕಡ ನಾಲ್ಕು ಬಡ್ಡಿ ಬರುತ್ತದೆ ಎಂದು ಹೇಳಿದ್ದಾರೆ. ವಾಸ್ತವಾಂಶ ಏನೆಂದರೆ 12 ತಿಂಗಳಿನಲ್ಲೂ ಕಬ್ಬು ಬೆಳೆಯುವುದಕ್ಕೆ ಆಗುವುದಿಲ್ಲ. ವರ್ಷೇ ವರ್ಷೇ ಬದಲಾಯಿಸುತ್ತಾರೆ. ಆ ರೀತಿ ಮಂಡ್ಯ, ಮದ್ದೂರು, ಮಳವಳ್ಳಿ ಭಾಗದಲ್ಲಿ ಒಂದು ನಿಗದಿ ಇದೆ. ಅಲ್ಲದೆ ಕಬ್ಬು ಬೆಳೆಯಬೇಕಾದರೆ 10-12 ಮೈಲಿಯೊಳಗೆ ಇರಬೇಕು. ಅದಕ್ಕಿಂತ ದೂರದಲ್ಲಿದ್ದರೆ ನೀರು ಕೊಡುವುದಕ್ಕೆ ಆಗುವುದಿಲ್ಲ. ಎಷ್ಟೋ ಕಡೆ tail end landsಗೆ ನೀರು ಬರದೇ ಹಾಕಿದ ಬೆಳೆ ಎಲ್ಲಾ ಕೆಟ್ಟುಹೋಗಿದೆ. ನೀರು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಪುಸ್ತಕದಲ್ಲಿ ಬರೆದಿದ್ದಾರೆಯೇ ಹೊರತು ಕಾರ್ಯರೂಪದಲ್ಲಿ ವ್ಯತ್ಯಾಸವಾಗಿರುವುದರಿಂದ ಅಲ್ಲಿ ಬರತಕ್ಕ ಉತ್ಪನ್ನ ಬಹುಮಟ್ಟಿಗೆ ಕಡಮೆ ಆಗಿದೆ. ಇದು ಸ್ಥೂಲವಾಗಿ ಅಲ್ಲಿನ ಅನುಭವದ ಮೇಲೆ ನಾನು ಹೇಳುವ ಮಾತು. ವಿವರಗಳಿಂದ ಪುಷ್ಟೀಕರಿಸಬೇಕಾದರೆ ಸ್ವಲ್ಪ ಕಾಲ ಬೇಕಾಗುತ್ತದೆ.

ಶ್ರೀಮತಿ ಅನ್ನಪೂರ್ಣಬಾಯಿಯವರು ಕಲ್ಯಾಣಿ ಕೆರೆಯ ವಿಷಯ ಪ್ರಸ್ತಾಪಮಾಡುತ್ತಾ ಅದಕ್ಕೆ ರಿಪೇರಿ ಅಗತ್ಯ ಮತ್ತು ಇನ್ನೂ ಕೆಲವು ಕೆರೆಗಳಿಗೆ ರಿಪೇರಿ ಅಗತ್ಯ ಎಂದು ಹೇಳಿದ್ದಾರೆ. ದ್ವಿತೀಯ ಪಂಚವಾರ್ಷಿಕಯೋಜನೆಯಲ್ಲಿ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಅದಕ್ಕೆ ಈ ವರ್ಷದ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಲಾಗಿದೆ. ಒಂದು ಕಡೆ ಅದರ ಬಗ್ಗೆ ಕೇಂದ್ರ ಸರಕಾರದೊಡನೆ ವ್ಯವಹಾರ ಮಾಡುತ್ತಿದ್ದೇವೆ. ಎಷ್ಟು ಹಣ ಬೇಕು ಎನ್ನುವ ಬಗ್ಗೆ ಟೆಕ್ನಿಕಲ್ ಎನ್‌ಕ್ವೈರಿ ಆಗಬೇಕು. ಇಂಜನೀಯರು ಪ್ಲಾನು ಸ್ಕ್ರೂಟಿನೈಸುಮಾಡಿ ಒಪ್ಪಿಗೆ ಕೊಡಬೇಕು. ಆ ಮೇಲೆ ಸರಕಾರದವರು ಹಣವನ್ನು ಒದಗಿಸಿ ಕೆಲಸವನ್ನು ಪ್ರಾರಂಭಿಸುತ್ತಾರೆ. ಹೀಗೆ ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ. ಇನ್ನು ಒಂದು ಮಾತನ್ನು ತಮ್ಮ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಆರೋಪಮಾಡಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತಿಲ್ಲ. ದೇಶದ ಆಡಳಿತ ನಡೆಸತಕ್ಕವರು ಈ ಸಭೆಯ ಸದಸ್ಯರು. ಸರಕಾರಕ್ಕೆ ದೇಶದ ಆಡಳಿತವನ್ನು ಯಶಸ್ವಿಯಾಗಿ ನಡೆಸುವುದಕ್ಕೆ, ಅಗತ್ಯವಾದ ಕಾನೂನನ್ನು ರಚನೆಮಾಡಿ ಕೊಡುವವರು ಈ ಸಭೆಯವರು. ಇರತಕ್ಕ ಹಣವನ್ನು ಹೇಗೆ ಹಂಚಬೇಕು ಎಂದು ಹೇಳವವರು ಮತ್ತು ಕಾರ್ಯಕ್ರಮವನು ಹಾಕಿಕೊಡತಕ್ಕವರು ಈ ಸಭೆಯ ಸದಸ್ಯರು. ಆಡಳಿತದ ಜವಾಬ್ದಾರಿಯನ್ನು ಈ ಸದಸ್ಯರ ಅನುಮತಿಯ ಪ್ರಕಾರ, ಅವರು ಹಾಕಿಕೊಟ್ಟ ಕಾರ್ಯಕ್ರಮವನ್ನು ಮಂತ್ರಿ ಮಂಡಲದವರು ಕಾರ್ಯಗತ ಮಾಡುತ್ತಾರೆ. ಆ ಕಾರ್ಯವನ್ನೆಲ್ಲ ಜವಾಬ್ದಾರಿಯಿಂದ ಮಾಡಬೇಕು ಎಂದು ಒಂದು ಮಂತ್ರಿಮಂಡಲವನ್ನು ನೇಮಕ ಮಾಡಿದ ಮೇಲೆ ಈಕಾರ್ಯವನ್ನು ಸುಸೂತ್ರವಾಗಿ ನಾವು ಮಾಡಬೇಕು. ಇವೊತ್ತಿನ ದಿವಸ ನಾನಿರಬಹುದು, ಇನ್ನು ಯಾರಾದರೂ ಇರಬಹುದು. ನಿಮ್ಮಿಂದ ನೇಮಕವಾದ ಮಂತ್ರಿ ಮಂಡಲಕ್ಕೆ ಕೆಲಸ ಮಾಡಲು ಅವಕಾಶ ಅವರಿಗೆ ಕೊಡಬೇಕು, ಸ್ವಾತಂತ್ರ್ಯ ಕೊಡತಕ್ಕದ್ದು ಬಹಳ ಅಗತ್ಯ. ನಾನು ಬಹಳ ವ್ಯಸನದಿಂದ ಹೇಳುತ್ತೇನೆ, ಸರ್ಕಾರದ ದಿನಚರಿಯ ಕಾರ್ಯದಲ್ಲಿ ಮಾನ್ಯ ಸಭಾಸದಸ್ಯರಲ್ಲಿ ಕೆಲವರು ಕೈಹಾಕುತ್ತಿದ್ದಾರೆ. ಇದರಿಂದ ಕೆಲಸಕ್ಕೆ ತೊಂದರೆಯಾಗುತ್ತದೆ, ಕೆಲಸ ಬಹಳ ನಿಧಾನವಾಗುತ್ತದೆ. ಶ್ರೀಮಾನ್ ವೈ. ವೀರಪ್ಪನವರು ಹೇಳಿದ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಯಾವುದೋ ಒಂದು ಸೇತುವೆ; ಎರಡು ಮೂರು ಇಂಜನೀಯರುಗಳು ಸ್ಕ್ರೂಟಿನೈಸುಮಾಡಿ ಚೀಫ್ ಇಂಜನೀಯರ ಸ್ಯಾಂಕ್ಷನ್ನು ಆಗಿದ್ದು ಇನ್ನೂ ಪ್ರಾರಂಭವಾಗಿಲ್ಲ ಎಂದು ಹೇಳಿದ್ದಾರೆ. ಅದನ್ನು ನಿರ್ಮಾಣ ಮಾಡುವಕಾಲದಲ್ಲಿ ಮಾನ್ಯ ಸಭೆಯ ಸದಸ್ಯರು ಒಂದು ರೀತಿ ಒತ್ತಾಯವನ್ನು ತಂದು ತಕರಾರು ಮಾಡಿದರೆ ಹೇಗೆ? ಅವರು ಲಕ್ಷಜನಕ್ಕೆ ಒಬ್ಬ ಪ್ರತಿನಿಧಿಯಂತೆ ಈಸಭೆಗೆ ಬಂದಿರುತ್ತಾರೆ. ಅವರ ಮಾತಿಗೆ ವಿರೋಧಮಾಡುವುದಕ್ಕೆ ಸಾಧ್ಯವಿಲ್ಲ. ಆಮೇಲೆ ಸೂಪರಿಂಟೆಂಡಿಂಗ್ ಎಂಜನೀಯರು, ಡೆಪ್ಯುಟೀ ಕಮಿಷನರು ಸೇರಿ ವಿಮರ್ಶೆ ಮಾಡಬೇಕೆಂದು ಸರಕಾರದವರು ಏರ್ಪಾಡು ಮಾಡಿದರೆ ಅವರು ಸಹಾ ಆಕಡೆಗೆ ವಾಲಿಬಿಟ್ಟರು ಎಂದು ಅಭಿಪ್ರಾಯ ಬಂದದ್ದರಿದ ಡಿವಿಜನಲ್ ಕಮಿಷನರು, ಚೀಫ್ ಇಂಜಿನೀಯರು ಇಬ್ಬರೂ ಸೇರಿ ತನಿಖೆಮಾಡಿ ಒಂದು ರಿಪೋರ್ಟು ಕಳುಹಿಸಬೇಕು ಎಂದು ಮಾಡಲಾಯಿತು. ಈಗ ಆ ರಿಪೋರ್ಟು ಬಂದಿದೆ. ಅದರಲ್ಲಿ ಹಿಂದೆ ಡೆಪ್ಯುಟಿ ಕಮಿಷನರವರು ಮತ್ತು ಸೂಪರಿಂಟೆಂಡಿಂಗು ಇಂಜಿನೀಯರು ಏನು ಅಭಿಪ್ರಾಯವನ್ನು ಕೊಟ್ಟಿದ್ದರೋ ಅದೇ ಅಭಿಪ್ರಾಯವನ್ನು ಇವರೂ ಸಹ ಕೊಟ್ಟಿದ್ದಾರೆ. ನಾನು ಮಂತ್ರಿಯಾಗಿ ಬಂದ ಮೇಲೆ ಬಹುಶಃ ಇಂತಹ ಮೂರು ನಾಲ್ಕು ಕೇಸುಗಳು ಬಂದವು, ಇವನ್ನು ಪರಿಶೀಲಿಸಲು ಕಳುಹಿಸಿದ್ದಕ್ಕೆ ಮೊನ್ನೆ ದಿವಸ ಡಿವಿಷನಲ್ ಕಮಿಷನರವರು ರಿಪೋರ್ಟು ಕಳುಹಿಸಿದ್ದಾರೆ. ಇದರಿಂದ ಹೀಗೆ ಒಂದು ವರ್ಷ ಕಾಲಹರಣವಾಯಿತು. ನಿಧಾನವಾದುದಕ್ಕೆ inefficiency ಯಿಂದ ಆಯಿತೆಂದು ಆಕ್ಷೇಪಣೆಗಳನ್ನು ಮಾಡಿದರೆ ಹೇಗೆ? ತಾವು ಕೊಡತಕ್ಕ ಸಲಹೆಗಳಿಗೆ, ಟೀಕೆಗಳಿಗೆ ನಾವು ತಲೆ ಬಾಗಬೇಕು. ಈ ರೀತಿಗಳಲ್ಲಿ ನಮಗೆ ಹೇಗೆ ತೊಂದರೆಗಳಿವೆ ಎಂದು ತೋರಿಸಿಕೊಡಲು ತಮ್ಮ ಮುಂದೆ ಈ ವಿಷಯವನ್ನು ನಿವೇದನೆ ಮಾಡಿಕೊಂಡೆ. ನಾವು ಇಲ್ಲಿಯೇ ಎಷ್ಟು ದಿವಸ ಇರುತ್ತೇವೋ ಗೊತ್ತಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಸದಸ್ಯರು ಕೈ ಹಾಕುತ್ತಾರೆ ಎಂದು ಹೇಳಿದಿರಿ. ಏನಾದರೂ ಅನ್ಯಾಯಗಳಿದ್ದರೆ ತೊಂದರೆಗಳಿದ್ದರೆ ಅವುಗಳನ್ನು ಮಂತ್ರಿಗಳ ಗಮನಕ್ಕೆ ತರುವುದು ತಪ್ಪೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅನ್ಯಾಯ ನಡೆದಿದೆ ಎನ್ನುವುದು ಒಬ್ಬರ ದೃಷ್ಟಿಯಲ್ಲಿ ಇರಬಹುದು. ಚೀಫ್ ಇಂಜನೀಯರು ಒಪ್ಪಿಗೆ ಕೊಟ್ಟು ಆ ಇಲಾಖೆಯ ಟೆಕ್ನಿಕಲ್ ಸ್ಯಾಂಕ್ಷನ್ನು ಆಗಿದ್ದರೂ ಅದರಲ್ಲಿ ಅನ್ಯಾಯವಾಗಿದೆ ಅದನ್ನು ವಿಮರ್ಶೆಮಾಡಬೇಕು ಎಂದು ಹೇಳಿದ್ದರ ಮೇಲೆ ಅದನ್ನು ವಿಮರ್ಶೆಮಾಡಬೇಕಾಗಿ ಬಂದಿದ್ದರಿಂದ ಕಾಲಹರಣವಾಯಿತು. ಅದರಲ್ಲಿ ತಪ್ಪುಗಳಾಗಿವೆ, ಅನ್ಯಾಯವಾಗಿದೆ ಎನ್ನುವುದು ಬೇರೆಮಾತು. ಕಂಟ್ರಾಕ್ಟನ್ನು ಇಂತಹವರಿಗೆ ಕೊಡಬೇಕು ಎಂದು ಹೇಳಿದರೆ ಹೇಗೆ? ಹಾಗೇನಾದರೂ ಅವರಂತೆ ಆಗದಿದ್ದರೆ ಈ ಸಭೆಯಲ್ಲಿ ಪ್ರಶ್ನೆಯ ಮೂಲಕ, ನಿರ್ಣಯದ ಮೂಲಕ ಇಂತಹ ವಿಚಾರಗಳೆಲ್ಲ ಬರುತ್ತವೆ. ಇದೆಲ್ಲ ತಮಗೇ ತಿಳಿದಿದೆ. ಯಾರಿಗೆ ಕಂಟ್ರಾಕ್ಟನ್ನು ಕೊಟ್ಟರೆ ಏನು? ಕೆಲಸವಾಗದಿದ್ದರೆ

ಕೆಲಸ ಆಗಲಿಲ್ಲ ಎಂದು ಆಕ್ಷೇಪಣೆ ಮಾಡಿ; ಅದನ್ನು ಕೇಳೋಣ. ಆದರೆ ಕಂಟ್ರಾಕ್ಟನ್ನು ಇವರಿಗೇ ಕೊಡಬೇಡಿ, ಬೇರೆಯವರಿಗೆ ಕೊಡಿ ಎಂದು influence ಮಾಡಿದರೆ, ಶ್ರೀ ದೊಡ್ಡಮೇಟಿಯವರು ಹೇಳಿದ ರೀತಿಯಲ್ಲಿ "ವಶೀಲಬಾಜಿ" ಮಾಡಿದರೆ ನಮ್ಮನ್ನು ಬಹಳ ಬಿಕ್ಕಟ್ಟಿಗೆ ಸಿಕ್ಕಿಸಿದಂತಾಗುತ್ತದೆ. ಉದಾಹರಣೆಯಾಗಿ ಅಧಿಕಾರಿಗಳನ್ನು ಮೂರುವರ್ಷಕ್ಕೊಮ್ಮೆ ವರ್ಗಮಾಡಬೇಕೆಂದಿದೆ. ಲಂಚಕೋರತನದ ಕಾರಣದಿಂದಲೋ ಅಥವಾ ಇನ್ನಾವ ಕಾರಣದಿಂದಲೋ ಅಧಿಕಾರಿಗಳನ್ನು ಕೆಲವು ವೇಳೆ ಮೂರು ವರ್ಷಗಳೊಳಗೇ ವರ್ಗಮಾಡಬೇಕಾಗುತ್ತದೆ. ಅವರು ದಕ್ಷತೆಯಿಂದ ಕೆಲಸಮಾಡಿದ್ದಾರೆ. ಅವರನ್ನು ಮೂರು ವರ್ಷಕ್ಕೆ ಮೊದಲೇ ವರ್ಗಮಾಡುವುದು ನ್ಯಾಯವಲ್ಲ, ಹೀಗೆ ಮಾಡಿದರೆ ಅನಾನುಕೂಲವಾಗುತ್ತದೆ ಎಂದು ಶಿಫಾರಸುಗಳನ್ನು ಮಾಡುತ್ತಿದ್ದಾರೆ. ಮತ್ತೆ ಕೆಲವರಿಗೆ ಅವರ ಮನೆಯಲ್ಲಿ ಕಾಯಿಲೆ ಇದೆ ಮತ್ತೆ ಅವರ ಮಕ್ಕಳಿಗೆ ಸ್ಕೂಲಿನ ಸೌಕರ್ಯವಿಲ್ಲ ಅದಕ್ಕಾಗಿ ವರ್ಗಮಾಡಿದ್ದನ್ನು ನಿಲ್ಲಿಸಬೇಕೆಂದು ಹೇಳುತ್ತಾರೆ. ಇದರಲ್ಲಿ ಶೇಕಡ 99 ಭಾಗ ನಿಜವಿರಬಹುದು ಅಥವಾ ಇಲ್ಲದೇ ಇರಬಹುದು. ಆದರೂ ಸ್ವಾಮೀ, ಒಂದು ಉದಾಹರಣೆ ಹೇಳುತ್ತೇನೆ. ಒಬ್ಬ ಸಬ್ ಓವರ್‌ಸೀಯರಿಗೆ ಆರನೆಯ ಸಾರಿ ವರ್ಗವಾಗಿದೆ. ಅವರು ಐದುಸಾರಿ ವರ್ಗವಾಗಿದ್ದುದನ್ನು ಹೇಗೋ ಬೇರೆ ಬೇರೆ ರೀತಿಯೂದ influence ಗಳನ್ನು ತಂದು ತಪ್ಪಿಸಿಕೊಂಡಿದ್ದಾರೆ. ಈಗ ಆರನೆಯ ಸಾರಿ ವರ್ಗಮಾಡಿದರೂ ವಶೀಲಬಾಜಿ ಕೆಲಸ ನಡೆದಿದೆ.

ಒಬ್ಬ ಸದಸ್ಯರು.—ವಶೀಲಬಾಜಿ ಮಾಡುತ್ತಾರೆ ಎಂದು ಹೇಳುತ್ತಿದ್ದೀರಿ; ಹಾಗೆ ಮಾಡುತ್ತಿರುವ ಆಫೀಸರ ಮೇಲೆ ಏಕೆ ಕ್ರಮತೆಗೆದುಕೊಳ್ಳಬಾರದು?

ಶ್ರೀ ಹೆಚ್. ಕೆ. ವೀರಣ್ಣಗೌಡ.—ಇನ್ನೊಬ್ಬ ಸಬ್ ಓವರ್‌ಸೀಯರು ಸ್ಥಳವಂದಿಗ, ಅಲ್ಲಿರುವ ಪಾರ್ಟಿಗೆ ಸೇರಿ ತೊಂದರೆಮಾಡುತ್ತಿದ್ದಾನೆ ಎಂದು ದೂರು ಬಂದಿದ್ದರಿಂದ ಚೀಫ್ ಇಂಜನೀಯರು ವರ್ಗಮಾಡಿಸಿದ್ದರೆ ಅದನ್ನು ವಜಾಮಾಡಬೇಕು ಎಂದು ದೊಡ್ಡ ದೊಡ್ಡ ಮನುಷ್ಯರಾದ M.L.C's, and M.L.A's. ಮತ್ತು M.P. ಗಳಿಂದ ಶಿಫಾರಸು ಬಂದಾಗ ನಾನು ಆ ಫೈಲಿನ ಮೇಲೆ ಹೀಗೆ ಬರೆದಿದ್ದೇನೆ.

"If Members of Parliament and Legislature were to interfere in the orders of transfer of a Sub-Overseer, then Government work becomes impossible."

ಇಲ್ಲಿ ಬಂದು ಅಧಿಕಾರಿಗಳಲ್ಲಿ ದಕ್ಷತೆಯಿಲ್ಲ ಮತ್ತು ಅನ್ಯಾಯ ಮಾಡುತ್ತಿದ್ದಾರೆ ಎಂದು ಆಕ್ಷೇಪಣೆ ಮಾಡುತ್ತಾರೆ. ಹೀಗೆ ಮಾಡಿದರೆ ಕಷ್ಟವಾಗುತ್ತದೆ. ಅವರು ಹೇಳಿದಂತೆ ಕೇಳದಿದ್ದರೆ ಅವರಿಗೆ ನಿಷ್ಠೂರವಾಗುತ್ತದೆ. ಅವರು ಹೇಳಿದಂತೆ ಕೇಳಿದರೆ ನಮಗೆ ಆಡಳಿತದಲ್ಲ ಕೆಲಸಮಾಡಲು ಕಷ್ಟವಾಗುತ್ತದೆ. ತಾವು ಹೇಳಿದ ಅಪ್ಪಣೆಯನ್ನು ಪರಿಪಾಲಿಸಬೇಕಾದರೆ ನಮಗೆ ಕೆಲಸಮಾಡಲು ಸ್ವಾತಂತ್ರ್ಯ ಕೊಡಿ; ಎಲ್ಲರೂ ಹೀಗೆ ಮಾಡುತ್ತಾರೆಂದು ಹೇಳುವುದಿಲ್ಲ. ಕೆಲವರು ಈರೀತಿ ಮಾಡುತ್ತಿದ್ದಾರೆ ಎಂದು ವ್ಯಸನದಿಂದ ಹೇಳಬೇಕಾಗಿ ಬಂದಿದೆ. ಹೀಗೆ ಒಬ್ಬ ಅಧಿಕಾರಿಗೆ ಒಂದು ಪನಿಷ್‌ಮೆಂಟನ್ನು ಕೊಡುವಾಗಲೂ ಅವರು ತಪ್ಪನ್ನು ಮಾಡಿಲ್ಲ, ಇದನ್ನು ವಜಾ ಮಾಡಬೇಕು ಎಂದು ಹೇಳುತ್ತಾರೆ. ಅಧಿಕಾರಿಗಳಿಂದ ಆಗದೆ ಹೋದರೆ, ಮಂತ್ರಿಗಳವರೆಗೆ ಡೆಲಿಗೇಷನ್ನು ಹೋಗುತ್ತಾರೆ. ಇದೂ ಅಲ್ಲದೆ ಅಧಿಕಾರಿಗಳಿಗೆ ಇಂಟರೆಸ್ಟೇ ಇಲ್ಲ ಅವರಿಗೆ, ಆದ್ದರಿಂದ ಕೆಲಸಗಳು ಹೀಗಾಗುತ್ತಿದೆ ಎಂದು ಹೇಳುತ್ತಾರೆ. ಆದರೆ ಈ ಅಧಿಕಾರಿಗಳಿಗೆ ಅವರವರ ಯೋಗ್ಯತೆಯನ್ನು ಅನುಸರಿಸಿ ಸಂಬಳ ಕೊಡುತ್ತಿದ್ದೇವೆ. ಎಷ್ಟು ಕೋಟಿ ಖರ್ಚು ಮಾಡುತ್ತಿದ್ದೇವೆ ಎನ್ನುವುದು ಬಡ್ಜೆಟ್ಟಿನಲ್ಲಿ ಕಾಣುತ್ತದೆ. ಅತೃಪ್ತಿಯಿಂದಿರುವವರನ್ನು ಎಂದಿಗೂ ತೃಪ್ತಿಪಡಿಸುವುದಕ್ಕೆ ಆಗುವುದಿಲ್ಲ. ಅಧಿಕಾರಿಗಳ ವಿಚಾರದಲ್ಲಿ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದರೆ ಅದನ್ನು 'ಕಾರ್ಯಗತ ಮಾಡದಿರುವ' ಹಾಗೆ ಕೆಲವರು "ವಶೀಲಬಾಜಿ" ಮಾಡಿದರೆ ನಮಗೆ ಕಷ್ಟವಾಗುತ್ತದೆ ಎನ್ನುವುದನ್ನು ಮಾತ್ರ ಹೇಳುತ್ತೇನೆ.

Sri K. KENCHAPPA.—The Hon'ble Minister should not make sweeping remarks against all the members that they are making an attempt to influence him.

Mr. SPEAKER.—He is not making sweeping remarks.

ಎಚ್. ಕೆ. ವೀರಣ್ಣಗೌಡ. ಕೆಲವರು ಮಾತ್ರ ಎಂದು ಹೇಳಿದೆ.

ಶ್ರೀ ಕೆ. ಕೆಂಚಪ್ಪ.—ಮಂತ್ರಿಗಳಾಗಿರತಕ್ಕವರು ಏಕೆ ಅವರು ಹೇಳಿದುದನ್ನು ಕೇಳುವುದಕ್ಕೆ ಹೋಗಬೇಕು? ಅವರಿಗೆ ಯಾವ ಯೋಗ್ಯತೆಯಿದೆ ಎಂದು ತಿಳಿದುಕೊಳ್ಳಬೇಕು.

ಶ್ರೀ ಎಚ್. ಕೆ. ವೀರಣ್ಣಗೌಡ.—ಯೋಗ್ಯತೆವಿಚಾರ ನಾನು ಹೇಳಲಿಲ್ಲ. ಅಧಿಕಾರಿಗಳ ವಿಚಾರದಲ್ಲಿ ತುಂಬ ಒತ್ತಾಯ ಬರುತ್ತಿದೆ. ಶ್ರೀಮಾನ್ ಕೆಂಚಪ್ಪನವರು ಹೇಳಿದಹಾಗೆ ಮಂತ್ರಿಮಂಡಲದಲ್ಲಿ ಯಾರೂ ದೊಡ್ಡವರಲ್ಲ. ಹಾಗೆ ಯಾವ ದೊಡ್ಡ ಭಾವನೆಯೂ ಇಲ್ಲ. ಇಲ್ಲಿ ಸದಸ್ಯರಾಗಿರುವ ನಮ್ಮ ಜನ ಸರಕಾರವನ್ನು ನಡೆಸಲು ನಮ್ಮನ್ನು ಕೂರಿಸಿದೆ. ವೀರಣ್ಣಗೌಡರು ಸಾಮಾನ್ಯವ್ಯಕ್ತಿ, ಶ್ರೀಮಾನ್ ಚನ್ನಿಗರಾಮಯ್ಯನವರೂ ಸಾಮಾನ್ಯವ್ಯಕ್ತಿ. ಪ್ರೈವೇಟು ಲೈಫ್‌ನಲ್ಲಿ ನಾವೆಲ್ಲರೂ ಸಾಮಾನ್ಯಜನರು; ಕಾನೂನುಬದ್ಧವಾದ ಪ್ರಜಾಪ್ರಭುತ್ವದಲ್ಲಿ, ಒಂದು ಸ್ಥಾನ, ಒಂದು ಗೌರವ, ಒಂದು ಅಧಿಕಾರ ಕೆಲವು ವ್ಯಕ್ತಿಗಳಿಗೆ ಇದೆ. ಇಲ್ಲಿ 50 ಕೋಟಿ ರೂಪಾಯಿಗಳ ಬಡ್ಜೆಟ್ಟನ್ನು ತಮ್ಮ ಮುಂದೆ ಇಟ್ಟು, ನಿಮ್ಮ ಸಲಹೆಕೊಟ್ಟು ಸಹಾಯಮಾಡಿ, ದಾರಿ ತೋರಿಸಿ ಎಂದು ಹೇಳಿದರೆ, ಟೂರು ಹೋಗುತ್ತೀರಿ, ಟಿ.ಏ. ಸಂಪಾದನೆ ಮಾಡುತ್ತೀರಿ, ಹೆಂಗಸರನ್ನು ಕಾರಿನಲ್ಲಿ ಕರೆದುಕೊಂಡು ಹೋಗುತ್ತೀರಿ, ಟಿ.ಬಿ.ಗೆ ಹೋಗಿ ದುಡ್ಡು ಕೊಟ್ಟು ಬರುತ್ತೀರೋ ಇಲ್ಲವೋ ಎಂದು ಹೇಳುತ್ತಾರೆ. ಟಿ.ಬಿ.ಗೆ ದುಡ್ಡು ಕೊಟ್ಟೇ ಬರುತ್ತೇವೆ.

ಟಿ.ಬಿ.ಗಳಿಗೆ ಹೋದರೆ, ಅಲ್ಲಿ ತಂಗತಕ್ಕ ಬಗ್ಗೆ ನಾಲ್ಕಾಣೆಗಳನ್ನೋ ಅಥವಾ ಒಂದೋ ಅಥವಾ ಒಂದೂಕಾಲು ರೂಪಾಯಿಯನ್ನೋ ಕೊಡದೆ ಹಾಗೆ ವಾಪಸ್ಸು ಹೊರಟುಬರತಕ್ಕಂಥ ಮಂತ್ರಿಗಳು ಇನ್ನು ಯಾರಿದ್ದಾರು? ಇದೆಂಥಮಾತು? ಶ್ರೀಮಾನ್ ಕೆಂಚಪ್ಪನವರು ಈಗತಾನೆ ಹೀಗೆ ಮಾಡತಕ್ಕದ್ದು ಮಂತ್ರಿಗಳ ಯೋಗ್ಯತೆಯೇ ಎಂದು ಕೇಳಿದ್ದಾರೆ. ಕಾನೂನು ಬದ್ಧವಾಗಿ ನೀವು ಅಧಿಕಾರ ನೀಡಿರತಕ್ಕ ಈಗ ಸರ್ಕಾರದ ಆಡಳಿತ ನಡೆಸಲು ನಾವು ಒಂದು ಕ್ರಮಬದ್ಧವಾದರೀತಿಯಲ್ಲಿ ಇಲ್ಲಿ ಬಂದು ಕೆಲಸನಡೆಸುತ್ತಿದ್ದೇವೆ. ಈ ಸ್ಥಾನದಲ್ಲಿರತಕ್ಕ ವ್ಯಕ್ತಿಗಳು ಅವರು ಯಾರಾದರೂ ಆಗಿರಬಹುದು. ಆದರೆ ವ್ಯಕ್ತಿಗಳು ಮುಖ್ಯವಲ್ಲ. ಸ್ಥಾನಕ್ಕಾ

(ಶ್ರೀ ಎಚ್. ಕೆ. ವೀರಣ್ಣಗೌಡ)

ದರೂ ನೀವೆಲ್ಲ ಒಂದು ಗೌರವ ಘನತೆಗಳನ್ನು ತೋರಿಸಬೇಕಾದದ್ದು ನ್ಯಾಯ. ಹಾಗೆ ಮಾಡದೆ ಇಂಥ ಒಂದು ಜವಾಬ್ದಾರಿ ಸ್ಥಾನದಲ್ಲಿ ಕುಳಿತಿರತಕ್ಕ ನೀವೇ ನಿಮ್ಮ ಸ್ಥಾನದ ಗೌರವವನ್ನೂ ಕೂಡ ಲೆಕ್ಕಹಾಕದೆ ಮಂತ್ರಿಗಳ ವಿಚಾರದಲ್ಲಿ ಹೀಗೆಲ್ಲ ಅವಹೇಳನ ಮಾಡತಕ್ಕ ರೀತಿಯಲ್ಲಿ, ಅಗೌರವವಾದ ರೀತಿಯಲ್ಲಿ ತುಚ್ಛೀಕರಿಸಿ ನೀವೇ ಆರಿಸಿ ಕೂಡಿಸಿದಂಥ ವ್ಯಕ್ತಿಗಳ ಬಗ್ಗೆ ಮಾತನಾಡತಕ್ಕದ್ದು ಖಂಡಿತ ಸರಿಯಲ್ಲ; ಯೋಗ್ಯವಾದದೂ ಅಲ್ಲ. ಹೀಗೆ ಮಾನ್ಯ ಸದಸ್ಯರುಗಳು ಸರ್ಕಾರವನ್ನು ಒಂದು ಅವಹೇಳನಕ್ಕೆ ಗುರಿಪಡಿಸಿದರೆ, ಸರ್ಕಾರದ ಒಂದು ದಕ್ಷತೆ, ಗೌರವ, ಘನತೆಗಳೆಲ್ಲ ಹಾಳಾಗಿಹೋಗಿ ಪ್ರಜಾರಾಜ್ಯದಲ್ಲಿ ಆಡಳಿತವನ್ನು ಸರಿಯಾಗಿ ಮತ್ತು ದಕ್ಷತೆಯಿಂದ ನಡೆಸಲು, ಮತ್ತು ಸರ್ಕಾರ ಜನರ ಮೇಲೆ ಇಡತಕ್ಕ ಆ ಒಂದು ಬಿಗಿ ಏನಿದೆ ಅದೆಲ್ಲವನ್ನೂ ನೀವೇ ತಪ್ಪಿಸಿ ಹಾಳುಮಾಡಿದಂತಾಗುತ್ತದೆಯೆಂದು ಹೇಳುತ್ತೇನೆ.

ಇನ್ನು ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ನನ್ನ ವಿಚಾರದಲ್ಲಿ ನಾನು ಹಿಂದೆ ಅಧ್ಯಕ್ಷನಾಗಿದ್ದಾಗ ಪಾನನಿರೋಧದ ವಿಚಾರವಾಗಿ ಹೇಳಿದ್ದ ಅಂಶಗಳನ್ನು ಉದ್ಧರಿಸಿ ಕೆಲವು ಮಾತುಗಳನಾಡಿದ್ದಾರೆ. ನಾನು ಹಿಂದೆ 1954 ರಲ್ಲಿ ಪಾನನಿರೋಧ ಸಮಿತಿ ಅಧ್ಯಕ್ಷನಾಗಿದ್ದಾಗ ಮಾಡಿರತಕ್ಕ ಭಾಷಣವನ್ನು ಓದಿ ಆ ದಿವಸ ಆ ರೀತಿಯಾದ ಒಂದು ನೀತಿಯನ್ನು ಪಾನನಿರೋಧದ ಬಗ್ಗೆ ನಾನೇ ಒಪ್ಪಿಕೊಂಡಿದ್ದಾಗ್ಯೂ ಈ ದಿವಸ ಅಧಿಕಾರಕ್ಕೆ ಬಂದು ಇಷ್ಟುದಿನಗಳಾದರೂ ಹಿಂದೆ ತಿಳಿಸಿದ್ದ ಪ್ರಕಾರ ಈ ದಿವಸ ಅದನ್ನು ಕಾರ್ಯಗತ ಮಾಡಲು ಅವಕಾಶವಿದ್ದರೂ ಆ ಕಾರ್ಯವನ್ನಿನ್ನೂ ಮಾಡಲಿಲ್ಲ ಎಂದು ಹೇಳಿದರು. ಅವರಲ್ಲಿ ನಾನೀಗ ಇಷ್ಟುಮಾತ್ರ ಅರಿಕೆ ಮಾಡಿಕೊಳ್ಳುತ್ತೇನೆ. ಹೇಗೆ ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಈ ಸಭೆಗೆ ಒಬ್ಬ ಸದಸ್ಯರೋ ಹಾಗೇ ನಾನೂ ಈ ಸಭೆಗೆ ಒಬ್ಬ ಸದಸ್ಯನಾಗಿದ್ದೇನೆ; ಈ ಸಭೆಯಲ್ಲಿ ನಮ್ಮಿಬ್ಬರ ಸದಸ್ಯತ್ವದಲ್ಲಿ ಏನೂ ವ್ಯತ್ಯಾಸವಿಲ್ಲ. ಆದರೆ ಅವರು ಒಬ್ಬ ದೊಡ್ಡ ವಿದ್ಯಾವಂತರು. ಅವರು M.A., B.L. ಓದಿ ಪಾಸ್ ಮಾಡಿದ್ದಾರೆ. ನಾನಾದರೋ ಒಬ್ಬ ಅಂಡರ್ ಗ್ರ್ಯಾಜುಯೇಟ್.

ಅಧ್ಯಕ್ಷರು.—"ಪಾರ್ಥಾ ಗ್ರ್ಯಾಜುಯೇಟ್" ಎಂದು S.S.L.C. ಪಾಸ್ ಮಾಡದವರಿಗೆ ಹೇಳುತ್ತಾರೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ಅಂಡರ್ ಗ್ರ್ಯಾಜುಯೇಟ್ ಎಂಬ ಶಬ್ದಕ್ಕೆ ಇರತಕ್ಕ ಅರ್ಥ ಅದೇ ಒಂದು ರೀತಿಯಾಗಿರುತ್ತದೆ. ಹಿಂದೆ ಯಾರೋ ಒಬ್ಬರು ಶ್ರೀಮಾನ್ ಮಲ್ಲಾರಾಧ್ಯರವರು ಅಧಿಕಾರದಲ್ಲಿದ್ದಾಗ ಅವರ ಹತ್ತಿರ ಹೋಗಿ ತನ್ನ ಮಗನಿಗೆ ಏನಾದರೂ ಒಂದು ನೌಕರಿ ಕೊಡಬೇಕೆಂದು ಕೇಳಿಕೊಂಡಾಗ 'ನಿಮ್ಮ ಮಗ ಏನು ಪಾಸ್ ಮಾಡಿದ್ದಾನೆ,' ಎಂದು ಕೇಳಿದ್ದಕ್ಕೆ ಆತ 'ನನ್ನ ಮಗ ಅಂಡರ್ ಗ್ರ್ಯಾಜುಯೇಟ್' ಆಗಿದ್ದಾನೆ, ಎಂದು ತಿಳಿಸಲು ಏನು ಇಂಟರ್ ಪಾಸ್ ಮಾಡಿದ್ದಾನೆಯೇ,' ಎಂದು ಕೇಳಿದಕ್ಕೆ, ಆ ಹುಡುಗನ ತಂದೆ ಇಲ್ಲ ಸ್ವಾಮಿ ಇನ್ನೂ "ಅಂಡರ್", ಎಂದು ಹೇಳಿದನಂತೆ. ಹಾಗಾದರೆ S.S.L.C. ಪಾಸ್ ಮಾಡಿದ್ದಾನೆಯೇ ಎಂದು ಕೇಳಲು ಇಲ್ಲ ಸ್ವಾಮಿ "still under" ಎಂದು ಹೇಳಿದನಂತೆ. ಹೋಗಲಿ ಸಾಮಾನ್ಯವಾಗಿ ಎಲ್ಲರೂ ಪಾಸ್ ಮಾಡುವಂಥ ಲೋಯರ್ ಸೆಕೆಂಡರಿ ಪರೀಕ್ಷೆಯನ್ನಾದರೂ ಪಾಸ್ ಮಾಡಿದ್ದಾನೇನು ಎಂದು ಕೇಳಿದ್ದಕ್ಕೆ ಇಲ್ಲ ಸ್ವಾಮಿ "still under" ಎಂತಲೇ ಹೇಳಿದನಂತೆ. ಹೀಗೆಲ್ಲಾ ಇದೆ, ಈ ಅಂಡರ್ ಗ್ರ್ಯಾಜುಯೇಟ್ ವಿದ್ಯಾವಂತರ ವಿಚಾರ! ಈ ವಿಚಾರ ಹಾಗಿರಲಿ ಇನ್ನು ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ವಯಸ್ಸಿನಲ್ಲಿ ನನಗೆ ಚಿರಂಜೀವಿ. ನಾನು ವಯಸ್ಸಿನಲ್ಲಿ ದೊಡ್ಡವನು. ಆದರೆ "ನೀವು ಏಕೆ ಅಲ್ಲಿ ಕುಳಿತಿದ್ದೀರಿ! ಇಲ್ಲಿಗೇಕೆ ಬರಬಾರದು" ಎಂದು ಹೇಳುವುದಾದರೆ ಅದು ಬೇರೆ ಮಾತಾಯಿತು, ಬೇರೆ ವಿಚಾರವೇ ಆಯಿತು. ಆದರೆ ನಾನು ಈ ಅಧಿಕಾರಸ್ಥಾನದಲ್ಲಿ ಕುಳಿತಿರುವುದರಿಂದ ಅವರು ಮುಂದಕ್ಕೆ ಬರುವ ವಿಚಾರದಲ್ಲಿ ನಾನಿಲ್ಲರತಕ್ಕದ್ದೇ ಅವರಿಗೊಂದು ಅಡ್ಡಿ ಆತಂಕವಾಗಿದೆ ಎಂದು ಹೇಳುವುದಾದ್ದರೆ ಅದೂಕೂಡ ಬೇರೆ ವಿಚಾರ. ಅದು ಅಲಾಯಿದೆ ಆಲೋಚನೆಮಾಡಿ ತೀರ್ಮಾನ ಮಾಡಬೇಕಾದಂಥ ವಿಷಯ. ಪ್ರಶ್ನೆಯೇ ಬೇರೆ ಆಯಿತು. ಆದರೆ ಪಾನನಿರೋಧದ ವಿಚಾರದಲ್ಲಿ ಅರ್ಧಂಬರ್ಧ ಜಾರಿಗೆ ತಂದಿರತಕ್ಕದ್ದು ಸರಿಯಾದದ್ದಲ್ಲ ಎಂಬುದನ್ನು ನಾನೂಕೂಡ ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ಯಾರದೂ ಭಿನ್ನಾಭಿಪ್ರಾಯವೇ ಇಲ್ಲ. ಆದರೆ ಈ ವಿಚಾರಗಳನ್ನು ಒಂದೊಂದು ಸ್ಥಾನದಿಂದ ನೋಡಿದರೆ ಒಂದೊಂದು ರೀತಿಯಲ್ಲಿ ಕಾಣುತ್ತದೆ. ನಾನು ಈಗ ಈ ಸಭೆಯಲ್ಲಿ ನಿಂತುಕೊಂಡು ನೋಡಿದರೆ ಇದು ನನಗೆ ಇಲ್ಲೇ ಒಂದು ರೀತಿಯಾಗಿ ಕಾಣಿಸುತ್ತದೆ. ಮಹಡಿ ಮೇಲಕ್ಕೆ ಹೋಗಿ ನೋಡಿದರೆ ಅಲ್ಲೇ ಒಂದು ರೀತಿಯಾಗಿ ಕಾಣಿಸುತ್ತದೆ. ಆಕಾಶಕ್ಕೆ ಹೋಗಿ ನೋಡಿದರೆ ಆಗ ಅದೇ ಒಂದು ರೀತಿಯಲ್ಲಿ ಕಾಣುತ್ತಾ ಇರುತ್ತದೆ. ಹೀಗೆ ನಾನು ಹಿಂದೆ ಅಧ್ಯಕ್ಷಸ್ಥಾನದಲ್ಲಿದ್ದಾಗ ಪಾನನಿರೋಧದ ವಿಷಯವನ್ನು ನೋಡುತ್ತಿದ್ದ ದೃಷ್ಟಿಕೋಣವೇ ಬೇರೆ. ಇಲ್ಲಿ ಅಧಿಕಾರಸ್ಥಾನದಲ್ಲಿ ಕುಳಿತು ಈ ವಿಚಾರವನ್ನು ನೋಡುತ್ತಿರುವ ದೃಷ್ಟಿಕೋಣವೇ ಬೇರೆ. ಆದರೆ ಆಯಾಯಸ್ಥಾನದಲ್ಲಿ ಆಯಾಯ ದೃಷ್ಟಿಕೋಣಗಳಂತೆ ಅಭಿಪ್ರಾಯ ಬದಲಾವಣೆ ಆಗಲೇಬೇಕು. ಈ ದಿವಸ ನಾವು ಅನುಸರಿಸುತ್ತಿರುವ ನೀತಿ ಶ್ರೀ ಪುಟ್ಟಸ್ವಾಮಿಯವರು ಹೇಳುವಂತೆ ಸರಿಯಾಗಿಲ್ಲ. ಆದಾಗ್ಗೂ ಇದನ್ನು ನಾವೀಗ ಮತ್ತೊಂದು ದೃಷ್ಟಿಕೋಣದಿಂದ ನೋಡೋಣ. ಈ ದಿವಸ ದೇಶದಲ್ಲಿ ಕೆಲವರಿಗೆ ಕಳ್ಳಭಟ್ಟಿ ಸಾರಾಯಿ ಕುಡಿದು ಅವರ ಆರೋಗ್ಯ ಕೆಟ್ಟಿರಬಹುದು. ಅಲ್ಲೊಬ್ಬರು ಇಲ್ಲೊಬ್ಬರು ಸತ್ತಿದ್ದರೂ ಸತ್ತಿರಬಹುದು. ಆದರೆ ಹೀಗೆ ಕಳ್ಳ ಭಟ್ಟಿಸಾರಾಯಿ ಕುಡಿದು ಸತ್ತಿರತಕ್ಕವರೆಷ್ಟು ಜನರಿದ್ದಾರು? ಈ ಒಂದು ಪಾನನಿರೋಧ ಪದ್ಧತಿಯಿಂದ ಎಷ್ಟು ಜನರಿಗೆ ಅನುಕೂಲವಾಗಿದೆ, ಎಷ್ಟು ಸಂಸಾರಗಳು ಉದ್ಧಾರವಾಗಿವೆ; ಬಡಬಗ್ಗರಾಗಿದ್ದವರು ಈ ದಿವಸ ಎಷ್ಟು ಅನುಕೂಲಸ್ಥಿತಿಗೆ ಬಂದಿದ್ದಾರೆ ಎಂಬ ವಿಚಾರಗಳನ್ನೂ ಕೂಡ ತಾವೆಲ್ಲರೂ ಲೆಕ್ಕ ಹಾಕಬೇಕು. ಇದರಿಂದ ಆಗತಕ್ಕ ಅನಾನುಕೂಲಕ್ಕಿಂತ ಅನುಕೂಲ ಸಾವಿರ ಪಾಲು ಹೆಚ್ಚಾಗಿದೆ. ಇದನ್ನು ಆದಷ್ಟು ಬೇಗ ದೇಶಾದ್ಯಂತವೂ ಜಾರಿಗೆ ತರಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವೇ ಇಲ್ಲ. ಆದರೆ ನಾನೀಗ ಕುಳಿತಿರುವ ಸ್ಥಾನದಲ್ಲಿ ಈ ಪಾನನಿರೋಧದ ವಿಚಾರದಲ್ಲಿ ಅನುಭವ, ಬುದ್ಧಿ ಮತ್ತು ವಿವೇಕಗಳಿಗೆ ಒಂದು ತಿಕ್ಕಾಟ ನಡೆಯುತ್ತಿದೆ. ಈ ದಿವಸ ನಡೆಯುತ್ತಿರುವ ಪಾನನಿರೋಧ ಪದ್ಧತಿ ಸರಿಯಾಗಿಲ್ಲ, ಇದರಿಂದ ಅನಾನುಕೂಲಗಳು ಹೆಚ್ಚಾಗಿವೆ, 98 ಯು.ಪಿ. ಡಿಗ್ರಿ ಇರತಕ್ಕಂಥ ಕಳ್ಳಭಟ್ಟಿ ಸಾರಾಯನ್ನ ಕುಡಿದರೆ ಜನರು ಸತ್ತೇ ಹೋಗುತ್ತಾರೆ, ಇದರಿಂದ ಸರ್ಕಾರಕ್ಕೆ ಬರತಕ್ಕ ವರಮಾನವೆಲ್ಲ ಹಾಳಾಗಿ ಹೋಗುತ್ತಿದೆ, ಜನರ ಆರೋಗ್ಯ ಕೆಡುತ್ತಿದೆ, ಎಂಬುದಾಗಿ ಅನುಭವ ಹೇಳುತ್ತಿದ್ದರೆ, ಕುಡಿತ ಎನ್ನುವ ಶಬ್ದವನ್ನು ಮುಂದಿನ ತಲೆಮಾರಿಗಾದರೂ ಹೆಸರೇ ಇಲ್ಲದಂತೆ ತಪ್ಪಿಸಿದರೆ ಅವರಿಗಾದರೂ ಒಂದು ದೊಡ್ಡ

ಉಪಕಾರವಾದೀತು, ಅವರಾದರೂ ಸುಖವಾಗಿ ಜೀವನ ಮಾಡುತ್ತಾರೆಂದು ಬುದ್ಧಿ ಹೇಳುತ್ತದೆ. ಈ ಸಂದರ್ಭದಲ್ಲಿ ನಾನು ಒಂದಂಶವನ್ನು ತಮ್ಮೆಲ್ಲರ ಗಮನಕ್ಕೆ ತರಬಿಚ್ಛಿಸುತ್ತೇನೆ. ನಾನು ಜಾತಿಯಲ್ಲಿ ಒಕ್ಕಲಿಗರವನು. ನಮ್ಮಲ್ಲಿ ಮಾಂಸಾಹಾರ ಪದ್ಧತಿ ಜಾರಿಯಲ್ಲಿದೆ. ನಮ್ಮಕಡೆ ಒಬ್ಬ ಒಕ್ಕಲಿಗರ ಜಾತಿಯ ಹುಡುಗನಿಗೆ ಮದುವೆ ಆಯಿತು. ಆ ಮದುವೆ ಸಮಾರಂಭದಲ್ಲಿ ಅಲ್ಲಿ ಮಾಂಸಾಹಾರದಊಟನಡೆದದ್ದನ್ನು ಆ ಹುಡುಗ-ಇಂಟರ್ ಪರೀಕ್ಷೆಯಲ್ಲಿ ಪಾಸಾಗಿದ್ದಂಥವನು ಏನು ಮನುಷ್ಯರೂ ಮಾಂಸ ತಿನ್ನುತ್ತಾರೆಯೇ ಎಂದು ಆಶ್ಚರ್ಯದಿಂದ ಕೇಳಿದ! ಹೀಗೆ ಇಂದಿನ ತಲೆಮಾರಿನಲ್ಲಿ ಕುಡಿತದ ಹೆಸರನ್ನಾದರೂ ತಪ್ಪಿಸೋಣ. ಇದರಿಂದ ಮುಂದಿನ ತಲೆಮಾರಿಗೆ ಈ ಹೆಸರೇ ಗೊತ್ತಿಲ್ಲದಂತಾಗಿ ಅವರಿಗೆ ಒಳ್ಳೆಯದಾದೀತು ಎಂಬ ವಿವೇಕದಿಂದ ಇದನ್ನು ಕ್ರಮಕ್ರಮವಾಗಿ ಮುಂದುವರಿಸಲಾಗುತ್ತಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಆಗಲೂಕೂಡ ತಾವು ಇದೇರೀತಿ ಹೇಳುತ್ತಿದ್ದಿರಿ.

ಶ್ರೀ ಎಚ್. ಕೆ. ವೀರಣ್ಣಗೌಡ.—ಇದರ ಬಗ್ಗೆ ಹಾಕಿಕೊಂಡಿರತಕ್ಕಂಥ ಪಾಲಿಸಿ ಬಹಳ ಬ್ರಾಡ್ ಪಾಲಿಸಿ ಆಗಿದೆ. ಒಂದು ಕಡೆ ಬುದ್ಧಿಗೂ, ಇನ್ನೊಂದು ಕಡೆ ಅನುಭವಕ್ಕೂ ತಿಕ್ಕಾಟ ನಡೆಯುತ್ತಿದೆ. ಇದರ ಬಗ್ಗೆ ಏಕ್‌ದಂ ಹೀಗೆಯೇ ಹೋಗಬೇಕೆಂದರೆ ಅದು ಸಾಧ್ಯವಿಲ್ಲ. ಇಂಥ ಒಂದು ಜಿಜ್ಞಾಸೆ ಈ ನಮ್ಮ ಮೈಸೂರಿನಲ್ಲೇ ಅಲ್ಲ—ಇಡೀ ಹಿಂದೂಸ್ಥಾನದಲ್ಲೆಲ್ಲಾ ಇದೆ. ಈ ವಿಷಯವನ್ನು ತಜ್ಞರು ಇನ್ನೂ ಪರಿಶೀಲನೆ ಮಾಡುತ್ತಿದ್ದಾರೆ. ಆದರೆ ಪಾನನಿರೋಧ ಅಮೆರಿಕಾ ದೇಶದಲ್ಲೇ ಸಕ್‌ಸಸ್ ಆಗಲಿಲ್ಲ. ಇನ್ನು ಇಂಡಿಯಾ ದೇಶದಲ್ಲಿ ಸಕ್‌ಸಸ್ ಎಷ್ಟರಮಟ್ಟಿಗಾದೀತು ಎನ್ನತಕ್ಕ ವಾದ ಬೇರೆಇದೆ. ಆದರೆ ಅಮೆರಿಕಾ ದೇಶದಲ್ಲಿ ಆ ಸಮಾಜದವರ ರೀತಿನೀತಿಗಳೇ ಬೇರೆ. ಆ ಜನಾಂಗ ಈ ಪಾನವನ್ನು ಒಂದು ಅಪಮಾನಕರವಾದುದೆಂದು ಪರಿಗಣಿಸಿಲ್ಲ. ಆದರೆ ಇಂಡಿಯಾ ದೇಶದಲ್ಲಿ ಹಿಂದೂ ಜನಾಂಗದಲ್ಲಿ ಸಮಾಜದ ಬಹುಭಾಗ ಇದಕ್ಕೆ ಬಹಿಷ್ಕಾರ ಹಾಕಿದೆ. ಈ ಕುಡಿತವನ್ನು ಒಂದು ನಿಕೃಷ್ಟಭಾವನೆಯಿಂದ ಸಮಾಜ ಕಾಣುತ್ತಿದೆ. ಆ ದೃಷ್ಟಿಯಿಂದ ನಮ್ಮ ದೇಶದಲ್ಲಿ ಪಾನನಿರೋಧ ಯಶಸ್ವಿಯಾಗಬಹುದೆಂದೂ, ಫಲಕಾರಿ ಆಗಿ ನಡೆಯಬಹುದೆಂದೂ ಈ ಪ್ರಯತ್ನಗಳನ್ನೆಲ್ಲ ನಡೆಸಲಾಗುತ್ತಿದೆ. ಆದುದರಿಂದ ಹಿಂದೆ ನಾನು ಅಧ್ಯಕ್ಷನಾಗಿದ್ದಾಗ ಹೇಳುತ್ತಿದ್ದುದನ್ನು ನಾನು ಮಂತ್ರಿಯಾಗಿ ಬಂದಮೇಲೂ ಜಾರಿಗೆ ತರಲಿಲ್ಲವೆಂದು ಹೇಳಿದ್ದರ ಬಗ್ಗೆ ಇಷ್ಟೆಲ್ಲವನ್ನೂ ಹೇಳಬೇಕಾಯಿತು. ವಿಚಾರಗಳನ್ನು ಒಂದೊಂದು ಸ್ಥಾನದಲ್ಲಿದ್ದಾಗ ಒಂದೊಂದು ದೃಷ್ಟಿಯಿಂದ ನೋಡಬೇಕಾಗುತ್ತದೆ. ಆದರೆ ಈ ಬಗ್ಗೆ ನನ್ನ ಅಭಿಪ್ರಾಯಕ್ಕನುಸಾರವಾಗಿ ಕೆಲಸಮಾಡಲು ಸಾಧ್ಯವಾಗಲಿಲ್ಲ ಎಂದು ನನಗೇನೂ ಮನಸ್ಸು ಅಷ್ಟುರೋಸಿ ಹೋಗಿಲ್ಲ. ನನ್ನ ಮನಸ್ಸಿಗೇನೂ ಅಷ್ಟು ಬೇಜಾರು ಬಂದಿಲ್ಲ. ಆದರೆ ನಾನು ಈ ನನ್ನ ಮಂತ್ರಿಸ್ಥಾನಕ್ಕೆ ರಾಜೀನಾಮೆ ಇತ್ತು ಶ್ರೀಮಾನ್ ಪುಟ್ಟಸ್ವಾಮಿಯವರಿಗೆ ಈ ಸ್ಥಾನವನ್ನು ಬಿಟ್ಟುಕೊಟ್ಟರೆ ಆಗ ಈ ಸಮಸ್ಯೆ ಅಷ್ಟು ಸುಲಭವಾಗಿ ಪರಿಹಾರವಾಗುತ್ತದೆಯೆಂದು ಹೇಳಲು ಸಾಧ್ಯವಿಲ್ಲವೆಂದೂ, ಇದೊಂದು ಅಂಥ ಸರಿಯಾದ ಮಾರ್ಗವೂ ಅಲ್ಲವೆಂದು ನಾನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

7 P.M.

ಶ್ರೀ ಜಿ. ಅಣ್ಣಾರಾವ್.—ಫೈನಾನ್ಷಿಯಲ್ ಕನ್ಸಿಡರೇಷನ್‌ಗೋಸ್ಕರ ಪ್ರೊಹಿಬಿಷನ್ ಪಾಲಿಸಿಯನ್ನು ಸ್ಟೇಜಸ್‌ನಲ್ಲಿ ತರಬೇಕು ಎಂದು ಆಲೋಚನೆಮಾಡಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಬುದ್ಧಿ ಮತ್ತು ಅನುಭವಕ್ಕೆ ವಾದ ನಡೆಯುತ್ತಿದೆ, ಬಿಕ್ಕಟ್ಟು ಇದೆ, ಮುಂದೆ ಹಾಕುವುದಕ್ಕೆ ಸಾಧ್ಯ ಎಂದು ಹೇಳುವಹಾಗೆ ಕಾಣುತ್ತದೆ ......

ಶ್ರೀ ಎಚ್. ಕೆ. ವೀರಣ್ಣಗೌಡ.—ಫೈನಾನ್ಸ್ ವಿಚಾರ ಇದ್ದೇಇದೆ. ಹಾಗೆ ಒಂದು ವೇಳೆ ಇದನ್ನು ತೂಕಹಾಕಿ ಒಳ್ಳೆಯದು ಎಂದು ಹೇಳುವುದಾದರೆ ಎರಡು ಮೂರು ಕೋಟಿ ಉತ್ಪತ್ತಿ ಕೈಬಿಟ್ಟುಹೋದರೂ ಚಿಂತೆಯಿಲ್ಲ. ಮೈಸೂರು ಸಂಸ್ಥಾನಕ್ಕೆ ಅದು ಅಷ್ಟೇನೂ ದೊಡ್ಡದೂ ಅಲ್ಲ, ಹಾಗೆ ಮಾಡಬಹುದು. ತಾವು ಸಲಹೆ ಕೊಟ್ಟಿದ್ದೀರಿ. ಈಗ ವಿಚಾರದಲ್ಲಿ ತೀರ್ಮಾನಕೊಡುತ್ತಾ ಇಲ್ಲ. ನನ್ನ ಮನಸ್ಸಿನಲ್ಲಿರುವ ಭಾವನೆಯನ್ನು ನಿರ್ವಂಚನೆಯಿಂದ ವ್ಯಕ್ತಪಡಿಸುತ್ತಿದ್ದೇನೆ. ಇಷ್ಟು ಹೇಳಿ ಒಂದು ಮಾತನ್ನು ಹೇಳುತ್ತೇನೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಈ ಸಭೆಯಲ್ಲಿ ಹೇಳಿರುವುದಕ್ಕಿಂತ ಬೇರೆ ತೀರ್ಮಾನ ಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅಭಿಪ್ರಾಯವನ್ನು ಸೂಚನೆಮಾಡಿದೆ. ಮಂತ್ರಿಮಂಡಲ ಆಮೇಲೆ ತೀರ್ಮಾನಮಾಡಬೇಕು. ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಏನು ಹೇಳುತ್ತಾರೆ ನೋಡೋಣ. ಶ್ರೀ ಪುಟ್ಟಸ್ವಾಮಿಯವರು ಇನ್ನೊಂದು ವಿಚಾರ ತಂದರು. ಶ್ರೀ ಮರಿಯಪ್ಪನವರು ಪ್ರವಾಸ ಹೋಗುವ ಕಾಲದಲ್ಲಿ ಜನಾಭಿಪ್ರಾಯಕ್ಕೆ ಮನ್ನಣೆ ಕೊಡುತ್ತಾರೆಯೇಎಂದು ಕೇಳಿದರು. ಒಂದು ಸೂಚನೆಯನ್ನು ಅವರ ಜ್ಞಾಪಕಕ್ಕೆ ತರುತ್ತೇನೆ. ಶ್ರೀ ಮರಿಯಪ್ಪನವರೂ ಉತ್ತರಕೊಡುವಾಗ ಆ ವಿಚಾರ ಹೇಳುತ್ತಾರೆ. ಮೈಸೂರು ಸಂಸ್ಥಾನ ಈಗಿನ ಅರ್ಧಭಾಗ ಇರುವಾಗ, ತಿಂಗಳಿಗೆ ನಾಲ್ಕು ಸಾವಿರಕ್ಕಿಂತ ಹೆಚ್ಚಿಗೆ ಇಬ್ಬರು ಮಂತ್ರಿಗಳು ಒಂದೊಂದು ತಿಂಗಳಲ್ಲಿ ಟಿ.ಎ. ತೆಗೆದುಕೊಂಡಿದ್ದುದು ಹೊರಬಿದ್ದಾಗ ಶ್ರೀ ಮರಿಯಪ್ಪನವರು ಹೇಳಿದ ವಾದವನ್ನು ಜ್ಞಾಪಕಕ್ಕೆ ತರುತ್ತೇನೆ. ಈಗ ಎರಡರಷ್ಟು ದೇಶ ಜಾಸ್ತಿಯಾಗಿರುವಾಗ 100ಕ್ಕಿಂತ ಹೆಚ್ಚಿಗೆ ತೆಗೆದುಕೊಳ್ಳದೆ ಇದ್ದಾರೆ.

Sri K. PUTTASWAMY.—On a point of personal explanation. ನಾನು ಇದನ್ನು ಉದಹರಿಸುವುದಕ್ಕೆ ಮೊದಲೇ ಕೆಲವು ಮಾತುಗಳನ್ನು ಹೇಳಿದೆ. ಟಿ. ಎ. ಹೆಚ್ಚಿತು ಎಂದು ನೀವು ಪ್ರವಾಸ ಮಾಡಕೂಡದು ಎನ್ನುವ ಉದ್ದೇಶದಿಂದ ಹೇಳುತ್ತಾ ಇಲ್ಲ. ಯಾರಾದರೂ ಸದಸ್ಯರು ಇದು ಸರಿಯಲ್ಲ ಎಂದು ಹೇಳಿದರೆ ಸದಸ್ಯರುಗಳು ಒತ್ತಾಯಮಾಡುತ್ತಾರೆಎಂದು ಹೇಳಬೇಡಿ.

ಶ್ರೀ ಎಚ್. ಕೆ. ವೀರಣ್ಣಗೌಡ.—ಸದಸ್ಯರುಗಳು ಒತ್ತಾಯಮಾಡುವುದರಲ್ಲಿ ತಪ್ಪುಇಲ್ಲ. ತಾವಾದರೂ ತಮಾಷೆಗೆ ಒತ್ತಾಯಮಾಡುತ್ತಾ ಇಲ್ಲ. ಕಾರ್ಯ ಆಗಬೇಕು. ಆಫೀಸಿನಲ್ಲಿ ಕುಳಿತುಕೊಂಡು ಫೈಲುಗಳನ್ನು ಡಿಸ್‌ಪೋಸ್ ಮಾಡುವುದು ಸುಲಭವಲ್ಲ. ಕಣ್ಣಲ್ಲಿ ಸ್ಥಳಕ್ಕೆ ಹೋಗಿ ನೋಡಿದ ಹೊರತು ಅದು ಅರ್ಥವಾಗುವುದಿಲ್ಲ. ಪ್ರವಾಸ ಹೋಗುವುದರ ಮುಖ್ಯ ಉದ್ದೇಶವೇ ಅದು. ಅನುಭವ ಪಡೆಯುವುದರಲ್ಲಿ ಅನುಕೂಲ ಇದೆ. ಇನ್ನು ಪ್ರವಾಸದ ವಿಚಾರ ಹೆಚ್ಚಿಗೆ ಹೇಳುವುದಿಲ್ಲ. ಒಂದು ಮಾತು ಹೇಳಿ ನನ್ನ ಭಾಷಣ ಮುಗಿಸುತ್ತೇನೆ. ಸ್ವಾಮಿ, ಈಗೇನೋ ಸರ್ಕಾರಿ ಮನೆಗಳಲ್ಲಿ ಮಂತ್ರಿಗಳು ಇರಬಹುದು.

(ಶ್ರೀ ಎಚ್. ಕೆ. ವೀರಣ್ಣಗೌಡ)

ನನ್ನಹಾಗೆ ಸ್ವಂತ ಮನೆಯಲ್ಲಿದ್ದರೆ ಅವರು ಬಾಡಿಗೆ ತೆಗೆದುಕೊಳ್ಳುತ್ತಾರೆ. ಮಂತ್ರಿಗಳು ಹೆಂಡತಿಮಕ್ಕಳನ್ನು ಬೇರೆ ಕಡೆ ಏತಕ್ಕೆ ಬಿಟ್ಟಿರಬೇಕು ಎನ್ನುವ ಅಭಿಪ್ರಾಯದಿಂದ ಎಷ್ಟೋ ಸಲ ಹೆಂಡತಿಮಕ್ಕಳನ್ನು ಪ್ರವಾಸ ಹೋಗುವಾಗ ಜೊತೆಯಲ್ಲೇ ಕರೆದುಕೊಂಡು ಹೋಗುತ್ತಾರೆ.

ಒಬ್ಬ ಸದಸ್ಯರು.—ಕರೆದುಕೊಂಡು ಹೋಗಲೇಬೇಕು. ಖಾಯಿಲೆ ಇದ್ದರೋ?

ಶ್ರೀ ಎಚ್. ಕೆ. ವೀರಣ್ಣಗೌಡ.—ಖಾಯಿಲೆಇದ್ದರೆ ಮನೆಯಲ್ಲಿ ಕುಳಿತಿರಲಿ. ಇಲ್ಲದಿದ್ದರೆ ಕರೆದುಕೊಂಡು ಹೋಗುತ್ತಾರೆ. ಮನಸ್ಸು ನೋಯಿಸಬೇಕೆಂದಾಗಲಿ ಯಾರಾದರೂ ವ್ಯಕ್ತಿಗೆ ಪ್ರತಿಭಟನೆಯನ್ನು ಸೂಚಿಸುವ ಉದ್ದೇಶದಿಂದರಾಗಲಿ ಹೇಳುತ್ತಿಲ್ಲ. ಸ್ವಲ್ಪ ಸ್ವಾತಂತ್ರ್ಯವನ್ನು ಕೊಡಿ, ಅವಕಾಶಕೊಡಿ, ನಮ್ಮಲ್ಲಿ ನಂಬಿಕೆ ಇಡಿ. ವರ್ಗಮಾಡುವ ವಿಚಾರದಲ್ಲಿ ಕೆಲವರಿಗೆ ಅಸಮಾಧಾನ ಉಂಟಾಗಿರಬಹುದು. ಅದನ್ನು ಇಂಜಿನಿಯರುಗಳಿಗೆ ಬಿಡೋಣ; ನೀವು ಬಂದು ವರ್ಗಾವರ್ಗಿ ವಿಚಾರದಲ್ಲಿ ಪ್ರಭಾವ ಬೀರಬೇಡಿ. ನಾನು ಯಾರ ಹೆಸರನ್ನೂ ಹೇಳುವುದಿಲ್ಲ. ನನಗೆ ಸ್ವಾಭಾವಿಕವಾಗಿ ಬಂದಿದೆ. 20 ವರ್ಷದ ಸ್ನೇಹಿತರನ್ನು ಖಂಡಿಸಿ ಮಾತನಾಡಿದ್ದೇನೆ; ಮತ್ತು ಕಾಗದದ ಮೇಲೆ ಬರೆದು ಇಟ್ಟಿದ್ದೇನೆ. ಸ್ವಲ್ಪ ಮನಸ್ಸಿಗೆ ನೋವಾಗುತ್ತದೆ. ಗುರುತು ಪರಿಚಯ ಬೇಡ. ರೂಲ್ಸ್, ಅಧಿಕಾರ ಎಂದುಕೊಂಡು ಬಹಳ ದುರಹಂಕಾರದಿಂದ ಮಾತನಾಡುತ್ತಿದ್ದೇನೆ ಎನ್ನುವುದು ನನ್ನ ಕಿವಿಗೆ ಬಿದ್ದಿದೆ. ಯಾರನ್ನೂ ಆಕ್ಷೇಪಣೆಮಾಡುತ್ತಿಲ್ಲ. ದಾಕ್ಷಿಣ್ಯಕ್ಕೆ ಒಳಗಾಗಿ ಕೆಲಸ ಮಾಡಬಾರದು. ನ್ಯಾಯವಾಗಿ ಮಾಡಬೇಕು ಎಂದು ಇರುವುದರಿಂದ ನಾನು ಆಕ್ಷೇಪಣೆಗೆ ಗುರಿಯಾಗಿದ್ದೇನೆ. ಮಂತ್ರಿಗಳ ಸ್ಥಾನಕ್ಕೆ ಏನು ಗೌರವ ಬೇಕೋ, ಏನು ಮರ್ಯಾದೆ ಬೇಕೋ ಅದನ್ನು ಸಭೆಯವರು ಕಡಮೆ ಮಾಡುವುದಕ್ಕೆ ಪ್ರಯತ್ನಪಟ್ಟರೆ ಯೋಗ್ಯವಾಗುವುದಿಲ್ಲ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜಿ ಎಚ್. ಪುಟ್ಟಣ್ಣ.—ವರ್ಗದ ವಿಚಾರ ಹೇಳಿದಿರಿ, ಆ ವಿಚಾರದಲ್ಲಿ ಒಂದು ವಿಷಯವನ್ನು ತಮ್ಮ ಅವಗಾಹನೆಗೆ ತರಬೇಕೆಂದಿದ್ದೇನೆ. ನಾನು ಟೀಕೆ ಮಾಡುವುದಿಲ್ಲ. ಯಾವ ಆಫೀಸರ್, ಯಾವ ಕ್ಲಾರ್ಕ್, ಯಾವ ಸರ್ಕಾರಿ ನೌಕರರೇ ಆಗಲಿ, ಹೆಂಡತಿಗೆ ಹೆರಿಗೆ ಕಾಲವಾದಾಗ, ಮಕ್ಕಳಿಗೆ ಪರೀಕ್ಷೆಯ ಸಮಯ ಬಂದಾಗ ವರ್ಗಮಾಡಿದ್ದರೆ ಅಂಥಾ ಕೇಸುಗಳನ್ನು ತಮ್ಮ ಗಮನಕ್ಕೆ ತರುವುದು ತಪ್ಪೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದಕ್ಕೆ ಅರಿಕೆ ಮಾಡುವುದು ಇಷ್ಟೇ. ಸಂಬಂಧಪಟ್ಟ ಅಧಿಕಾರಿಗಳು ಇರುತ್ತಾರೆ, ಅವರು ನೋಡಿಕೊಳ್ಳುತ್ತಾರೆ. ಆದರೆ ಸದಸ್ಯರು ಇನ್‌ಪ್ಲೂಯೆನ್ಸ್ ಮಾಡುವುದು ಸರಿಯಲ್ಲ. ನಾನು ಹೀಗೆ ನಿಷ್ಠೂರವಾಗಿ ಮಾತನಾಡುವುದರಿಂದ ಕೆಲವು ಸ್ನೇಹಿತರು ಏನು ಮಾಡುತ್ತಿದ್ದಾರೆಂದರೆ ನನ್ನನ್ನು ಬಿಟ್ಟು ಸೀದಾಹೋಗಿ ಆಫೀಸರನ್ನು ಹಿಡಿಯುತ್ತಾರೆ. ಕಾಲು ಘಂಟೆ ಫೋನು ಹಿಡಿದುಕೊಂಡು "ಈ ಕೇಸಿನ ವಿಷಯದಲ್ಲಿ ನನ್ನ ಒಬ್ಬನದೇ ಶಿಫಾರಸ್ಸು ಇಲ್ಲ, ನಮ್ಮ ಜಿಲ್ಲೆಯಲ್ಲಿರತಕ್ಕ ಎಲ್ಲಾ ಸದಸ್ಯರ ಅಭಿಪ್ರಾಯವೂ ಇದಕ್ಕೆ ಇದೆ, I don't suppose you dare to disoblige us." ಎಂದು ಹೇಳುತ್ತಾರೆ. ಮಾನ್ಯ ಸದಸ್ಯರು ಹೀಗೆಮಾಡಿದರೆ ಅಧಿಕಾರಿಗಳ ಗತಿ ಯೇನು? ಅವರು ಏನು ಮಾಡಬೇಕು? ಜೆನ್ಯೂಯಿನ್ ಕೇಸಸ್ ಇರಬಹುದು. ಅದಕ್ಕೆ ಅಧಿಕಾರಿಗಳು ಇದ್ದಾರೆ. ಅವರ ಹತ್ತಿರ ರೆಪ್ರೆಸೆಂಟ್ ಮಾಡಿಕೊಳ್ಳಲಿ. ಹೀಗೆಲ್ಲಾ ಮಾಡಿದರೆ ನಾಳೆ ಕೆಲಸ ನಿಧಾನವಾಗಬಹುದು. ಆ ರೀತಿ ಅಡ್ಡಿಆತಂಕಗಳು ಬರಬಹುದು. ನಾಳೆ ಚುನಾವಣೆ ಬಂದಾಗ ಓಟುಕೊಡಿ ಎಂದರೆ ಜನರು ಓಟುಕೊಡದೆ ಇರಬಹುದು. ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಮಂತ್ರಿಗಳು ಮೂರು ಡಿಸ್ಟ್ರಿಕ್ಟಿನ ಅಂಕಿಅಂಶಗಳನ್ನು ಮಾತ್ರ ತಿಳಿಸಿದರು. ಎಲ್ಲಾ ಡಿಸ್ಟ್ರಿಕ್ಟುಗಳದನ್ನೂ ತಿಳಿಸಿದರೆ ಸಂತೋಷವಾಗುತ್ತದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಸರಿಯಾಗಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುವ ದೃಷ್ಟಿಯಿಂದ ಇಷ್ಟು ಉದಾಹರಣೆ ಕೊಟ್ಟೆ. ಎಲ್ಲಾ ಡಿಸ್ಟ್ರಿಕ್ಟುಗಳನ್ನೂ ವಿಮರ್ಶೆಮಾಡಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಏಳು ಘಂಟೆಯವರೆಗೆ ರಿಪ್ಲೈ ಎಂದು ಅಪ್ಪಣೆ ಕೊಡಿಸಿದಿರಿ. ಈಗ 7-10 ನಿಮಿಷವಾಯಿತು. ಆದ್ದರಿಂದ ಈಗ ಮುಕ್ತಾಯಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Sri S. NIJALINGAPPA (Chief Minister).—We have no objection. They will have to give us more time.

Sri C. M. POONACHA (Minister for Home and Industries).—We cannot finish it within two hours. We want more time.

Mr. SPEAKER.—So far, excluding the Minister who has taken part, 89 members have taken part in the Budget debate, out of which 54 are Congress Members and 35 are from the Opposition. Out of 35, 12 are from the P.S.P. Looking to the statistical part of it, I find that more than 50 per cent of the Opposition Members and slightly more than 1/3 of the Congress Members have taken part in the Budget debate.

The House now rises and meets tomorrow at 12 NOON.

The House adjourned at Ten Minutes past Seven of the Clock to meet again at Twelve of the Clock on Wednesday, the 9th April 1958.

Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No.(B) 4754
ದಿನಾಂಕ Date........

WD 991—GPB—900—17-9-58.

(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No. 4757
ದಿನಾಂಕ Date..........

MYSORE LEGISLATIVE ASSEMBLY

THIRTY-SECOND DAY.

Wednesday, 9th April 1958.

The House met in the Assembly Hall, Vidhana Soudha, Bangalore, at Twelve of the Clock.

MR. SPEAKER (SRI S. R. KANTHI, B.A., LL.B.) in the Chair.

QUESTIONS AND ANSWERS.

Loan from the Central Government to Private Educational Institutions.

Q.—56. Sri S. KARIAPPA (Virupakshipura).—

Will the Government be pleased to state:—

(*a*) the names of private educational institutions in Bangalore District which have applied for interest-free loan from the Central Government (information for the past three years may be furnished);

(*b*) the amount sanctioned in each case?

A.—Sri V. VENKATAPPA (Minister for Education).—

(*a*) The Government of India scheme for grant of interest-free loans for the construction of hostels under the Second Five-Year Plan has been introduced from the year 1956-57. Since then only two private Educational Institutions in Bangalore District, *viz.*, the Rural Education Society, Kanakapura, and the Rashtreeya Vidyalaya Teachers' College, Bangalore, have applied for loans under the scheme.

(*b*) Nil.

ಶ್ರೀ ಎಸ್. ಕರಿಯಪ್ಪ.—ಈ ಪೈಕಿ ಯಾವುದಾದರೂ ಸಂಸ್ಥೆಗೆ ಈ ಲೋನ್ ಬರತಕ್ಕ ಸಂಭವವುಂಟೇ ?

ಶ್ರೀ ವಿ. ವೆಂಕಟಪ್ಪ.—ಅದನ್ನು ಈಗ ನಾನು ಹೇಗೆ ಹೇಳಲಿ? ಕೇಂದ್ರ ಸರ್ಕಾರದವರು ಹಣಕೊಡುವುದರಮೇಲೆ ಅದು ಹೋಗುತ್ತದೆ.

ಶ್ರೀ ಎಸ್. ಕರಿಯಪ್ಪ.—ಈ ಸ್ಕೀಂನಂತೆ ಸಾಲವನ್ನು ರಾಜ್ಯದ ಇನ್ನಾವುದಾದರೂ ಸಂಸ್ಥೆಗೆ ಕೊಟ್ಟಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವಿ. ವೆಂಕಟಪ್ಪ.—ಕೊಟ್ಟಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಯಾವುದು ?

ಶ್ರೀ ವಿ. ವೆಂಕಟಪ್ಪ.—ದುರ್ಗಾ ಹೈಸ್ಕೂಲು, ಹುಣಸಬಾವಿ, ಮಹಿಳಾ ವಿದ್ಯಾ ಪೀಠ, ಹುಬ್ಬಳ್ಳಿ, ಎಸ್. ಎಸ್. ಟ್ರೈನಿಂಗ್ ಕಾಲೇಜು, ರೆಟಾನ್, ನ್ಯಾಷನಲ್ ಮಲ್ಟಿಪರ್‌ಪಸ್ ಹೈಯರ್ ಸೆಕೆಂಡರಿ ಸ್ಕೂಲು, ಮಲ್ಲಾಡಿಹಳ್ಳಿ; ಇಷ್ಟು ಸಮಾಚಾರ ನನ್ನ ಹತ್ತಿರ ಇದೆ.

ಶ್ರೀ ಎಸ್. ಕರಿಯಪ್ಪ.—ಹಳೆಯ ಮೈಸೂರಿನಲ್ಲಿ ಯಾವುದಕ್ಕೂ ಕೊಟ್ಟಿಲ್ಲವೇ ?

ಶ್ರೀ ವಿ. ವೆಂಕಟಪ್ಪ.—ಮಲ್ಲಾಡಿಹಳ್ಳಿ ಮೈಸೂರಿಗೆ ಸೇರಿದ್ದೇ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಎಷ್ಟು ವರ್ಷದ ಕಂತಿನಮೇಲೆ ಈ ಸಾಲ ಕೊಡುತ್ತಾರೆ ?

ಶ್ರೀ ವಿ. ವೆಂಕಟಪ್ಪ.—20 ವರ್ಷ, 30 ವರ್ಷ ಹೀಗೆ ಇಟ್ಟು ಕೊಂಡಿದ್ದಾರೆ.

Recovery of Arrears of Land Revenue in the State.

Q.—182. Sri V. SRINIVAS SHETTY (Coondapoor).—

Will the Government be pleased to state:—

(*a*) the amount of arrears of land revenue, if any, in the State;

(*b*) since how long it is due and from which Districts;

(*c*) the action taken for recovery of arrears so far?

A.—Sri M. P. PATIL (Minister for Revenue).—

(*a*) Rs. 86,18,000.

(*b*) For details *vide* statement appended.

(*c*) Systematic coercive action is taken for the recovery of arrears under the law.

(SRI M. P. PATIL)

Details of Arrears of Land Revenue.

I. Belgaum Division.

(a) Authorised arrears of Land Revenue.

			Rs.	Rs.	
1.	Belgaum ...	1952—53	86,467		
		1953—54	1,14,567		
		1954—55	1,88,923		
		1955—56	4,278	3,94,235	
2.	Bijapur ...	1952—53	10,65,766		
		1953—54	42,217		
		1954—55	3,23,422		
		1955—56	89,849	15,21,254	
3.	Dharwar ...	1952—53	4,43,449		
		1953—54	57,318		
		1954—55	1,76,394		
		1955—56	1,40,092	8,17,253	
4.	North Kanara ...	...	...		(a) 27,32,742

(b) Unauthorised arrears of Land Revenue.

1.	Belgaum ...	1952—53	1,86,332		
		1953—54	2,109		
		1954—55	2,318		
		1955—56	25,242	2,16,001	
2.	Bijapur ...	1954—55	24,186(*)		
		1955—56	6,430	30,616	
3.	Dharwar ...	1950—51	4,141		
		1952—53	18		
		1953—54	56		
		1954—55	292		
		1955—56	1,755	6,262	
4.	North Kanara ...	1955—56	54	54	(b) 2,52,933
			Total of Belgaum Division	...	29,85,675

(*) Government have granted stay against the recovery. This pertains to the Lokapur Deshgat Judi.

The authorised arrears are those which have been permitted by specific orders of the Collector granting suspension of Land Revenue on account of bad seasons whereas unauthorised arrears are those which have not been paid by the holders of the land though overdue for payment. As regards recovery of the unauthorised arrears, steps are in progress and the Collector of Dharwar has now reported that out of the unauthorised arrears of Rs 6,262 the amount of Rs. 1,721-8-1 has since been recovered and that major coercive measures have been taken to recover the balance.

STATEMENT—*contd.*

II. Gulbarga Division.

			Rs.	Rs.
1.	Gulbarga	...	15,18,061	...
2.	Raichur	...	15,19,463	...
3.	Bidar	...	5,25,219	35,62,743

III. Bangalore Division.

				Rs.	Rs.	Rs.
1.	Bellary	...	1949—50	55	...	...
			1950—51	233	...	...
			1951—52	602	...	...
			1952—53	955	...	...
			1953—54	2,146	...	...
			1954—55	5,237	...	...
			1955—56	7,142	16,370	...
2.	Bangalore	...	...	...	4,82,406	...
3.	Tumkur	...	1938—39	...	...	...
			1952—53	1,26,577	...	...
			1953—54	68,714	...	...
			1954—55	56,050	...	...
			1955—56	63,218	...	...
			1956—57	2,81,088	5,95,677	...
4.	Chitaldrug	...	1952—53	89	...	...
			1953—54	36	...	...
			1954—55	3,167	...	...
			1955—56	13,154	...	...
			1956—57	1,71,085	1,87,531	...
5.	Kolar	...	1946—47	1,197	...	...
			1947—48	1,184	...	...
			1948—49	1,291	...	...
			1949—50	1,315	...	...
			1950—51	1,392	...	...
			1951—52	7,416	...	...
			1952—53	36,423	...	...
			1953—54	42,589	...	...
			1954—55	82,661	...	...
			1955—56	2,00,072	3,75,540	...
						16,57,524

IV. Mysore Division.

				Rs.	Rs.	Rs
1.	Mysore	(*)	1938—39 to 1946—47	378	...	..
			1947—48	255	...	..
			1948—49	262	...	..
			1949—50	289	...	..
	(*) Rs. 42 each year.		1950—51	350	...	..
			1951—52	1,476	...	..
			1952—53	2,050	..	..
			1953—54	5,744	...	..
			1954—55	11,548	...	..
			1955—56	1,84,445	2,06,797	...

(SRI M. P. PATIL)

STATEMENT—*concld.*

			Rs.	Rs.	
2. Mandya	...	1942—43	... 530		
		1943—44	1,762		
		1944—45	2,046		
		1945—46	2,171		
		1946—47	2,142		
		1947—48	2,464		
		1948—49	1,543		
		1949—50	1,869		
		1950—51	2,152		
		1951—52	3,633		
		1952—53	5,936		
		1953—54	10,341		
		1954—55	25,609		
		1955—56	58,706	.. 1,20,904	
3. Shimoga	...	1952—53	2,497		
		1953—54	3,061		
		1954—55	4,447		
		1955—56	5,754	15,759	
4. Hassan	...	1944—45	136		
		1946—47	38		
		1947—48	523		
		1948—49	588		
		1949—50	52		
		1950—51	2,700		
		1951—52	2,733		
		1952—53	7,218		
		1953—54	2,519		
		1954—55	4,440		
		1955—56	9,991	30,938	
5. Chikmagalur	...	1949—50	955		
		1952—53	4,813		
		1953—54	6,092		
		1954—55	10,478		
		1955—56	14,763	37,101	
6. Coorg	...	1955—56	...	559	
7. South Kanara	...	...	...	...	4,12,058

Grand Total of the State : Rs. 86,18,000

SRI V. SRINIVAS SHETTY.—Who are the immediate authorities responsible for the collection of land revenue in the State of Mysore ?

*SRI M. P. PATIL.—The village officers, the Revenue Inspectors and the Tahsildars.

SRI V. SRINIVAS SHETTY.—What are the coersive actions the Government have taken in the matter of collection of land revenue ?

SRI M. P. PATIL.—Sir, there is no difference in the method of collection but the difference is in the circumstances. South Kanara and Coorg are not scarcity areas whereas in many other areas there is scarcity condition. In such areas the collection will go down.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಗುಲ್ಬರ್ಗಾ ಡಿವಿಜನ್‌ನಲ್ಲಿ 35,62,743 ರೂಪಾಯಿ ಬಾಕಿ ಇರುವುದಕ್ಕೆ ಕಾರಣವೇನು ?

* Asterisk indicates that the remarks or speeches have been not been revised by the Member concerned.

ಶ್ರೀ ಎಂ. ಪಿ. ಪಾಟೀಲ್.—ಎರಡು ವರ್ಷದಿಂದ ಅಲ್ಲಿ ಸ್ಕೇರ್ಸಿಟಿ ಇದೆ. ದುಷ್ಕಾಲವಾದ್ದರಿಂದ ವಸೂಲಿ ಕ್ರಮ ಮುಂದಕ್ಕೆ ಹಾಕಲ್ಪಟ್ಟಿದೆ. ಈವರ್ಷ ಅದನ್ನೆಲ್ಲಾ ವಸೂಲು ಮಾಡುತ್ತಾ ಇದ್ದಾರೆ.

Mr. SPEAKER.—In Bombay area there is what is called authorised and unauthorised collection.

ಶ್ರೀ ಎಂ. ಪಿ. ಪಾಟೀಲ್.—ಅದು ಒಂದು ಪ್ರಶ್ನೆ ಬೇರೆ ಇದೆ. ಬೊಂಬಾಯಿ ಕರ್ನಾಟಕದಲ್ಲಿ ಆಥರೈಸ್ಡ್ ಮತ್ತು ಅನ್‌ಆಥರೈಸ್ಡ್ ಸಿಸ್ಟಂ ಇದೆ. ಗುಲ್ಬರ್ಗಾ, ಹಳೇ ಮೈಸೂರು, ಮದರಾಸ್ ಇಲ್ಲೆಲ್ಲಾ ಆಥರೈಸ್ಡ್ ಅರಿಯರ್ಸ್ ಅಂತ ಇಲ್ಲ.

As soon as there are arrears, they are all arrears.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—35,62,743 ರೂಪಾಯಿನಲ್ಲಿ ತಕಾವಿ ಸಾಲ ಸೇರಿದೆಯೋ ?

ಶ್ರೀ ಎಂ. ಪಿ. ಪಾಟೀಲ್.—ಇಲ್ಲ. ಅದೆಲ್ಲಾ ಲ್ಯಾಂಡ್ ರೆವಿನ್ಯೂ.

Sri V. SRINIVAS SHETTY.—What is the difference between authorised and unauthorised revenue ?

Sri M. P. PATIL.—For instance, supposing in Bombay area there is scarcity in a particular part; the collection of land revenue is suspended, and therefore, they will fall into arrears. But, in other areas there is no such thing. As soon as there are arrears, they are treated as arrears. Therefore, it is only a technical matter.

Sri V. SRINIVAS SHETTY.—Is all the arrears due to scarcity conditions ?

Sri M. P. PATIL.—Mainly.

Sri J. B. MALLARADHYA.—What is the percentage of this arrears to the total demand ?

Sri M. P. PATIL.—Sir, the Hon'ble member can himself work out.

Sri J. B. MALLARADHYA.—Sir, I do not know the total demand; how can I work out ? I want to know the total demand and the percentage of this arrears.

Sri M. P. PATIL.—The Hon'ble member can work it out even from the budget figures. If he wants, I will supply for this year.

Sri J. B. MALLARADHYA.—In respect of what amount coersive process is adopted ?

Sri M. P. PATIL.—Sir, it is difficult for me to give these figures. But, generally I said that this is due to scarcity conditions both in Bombay area, Hyderabad Karnatak area. Even in the old Mysore area, on account of the scarcity conditions, the arrears are high.

Sri J. B. MALLARADHYA.—How much of this should be written off ?

Sri M. P. PATIL.—That I cannot say.

Sri J. B. MALLARADHYA.—May I know how much of it will be written off the accounts as irrecoverable ?

Sri M. P. PATIL.—That we cannot say unless it is examined.

ಶ್ರೀ ಎಚ್. ಜಿ. ನರಸಿಂಹೇಗೌಡ.—ರಾಜ್ಯದಲ್ಲಿ ವಸೂಲಾಗಬೇಕಾಗಿರುವ ಒಟ್ಟು ಜಮೀನು ಕಂದಾಯದ ಬಾಕಿ 86,18,000 ರೂಪಾಯಿಗಳೆಂದು ಹೇಳಿದ್ದೀರಿ. ಈ ಮೊಬಲಗಿನಲ್ಲಿ ರೆಮಿಷನ್ ಕೊಡತಕ್ಕ ಹಣವೇನಾದರೂ ಸೇರಿರುತ್ತದೆಯೇ ?

ಶ್ರೀ ಎಂ. ಪಿ. ಪಾಟೀಲ್.—ರೂಲ್ಸು ಪ್ರಕಾರ ಕೊಡಬೇಕಾಗಿದ್ದರೆ ಅದನ್ನು ರೆವಿನ್ಯೂ ಜಿಲ್ಲಾಧಿಕಾರಿಗಳೇ ಕೊಡುತ್ತಾರೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಆ ರೀತಿ ಏನಾದರೂ ರೆಮಿಷನ್ ಬಗ್ಗೆ ಪಟ್ಟಿಮಾಡಿದ್ದೀರಾ ?

ಶ್ರೀ ಎಂ. ಪಿ. ಪಾಟೀಲ್.—ಆ ಬಗ್ಗೆ ಪಟ್ಟಿಯೇನೂ ಮಾಡತಕ್ಕ ಅವಶ್ಯಕತೆ ಇಲ್ಲ. ಅಂಥ ಸಂದರ್ಭಗಳು ಎಲ್ಲೆಲ್ಲಿರುತ್ತವೆಂಬುದನ್ನು ಇಲಾಖೆಯ ಅಧಿಕಾರಿಗಳು ಪರಿಶೀಲನೆಮಾಡಿ ರೂಲ್ಸು ಪ್ರಕಾರ ರೆಮಿಷನ್ ಕೊಡತಕ್ಕದ್ದು ಅಗತ್ಯವೆಂದು ಕಂಡುಬಂದರೆ ಅವರೇ ಹುಕುಂ ಮಾಡುತ್ತಾರೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ತಾವು ಇಲ್ಲಿ 1952-53ನೇ ಸಾಲಿನಲ್ಲಿ ಬಾಕಿ ತೋರಿಸಿರುವ ಪಟ್ಟಿಯಲ್ಲಿ ಸ್ಕೇರ್‌ಸಿಟಿ ಪ್ರದೇಶ ಬಿಟ್ಟುಕೊಂಡು ಉಳಿದ ಪ್ರದೇಶದಲ್ಲಿ ಕಂದಾಯದ ಬಾಕಿ ನಿಂತಿರತಕ್ಕ ಜಮೀನುಗಳನ್ನು ಸರ್ಕಾರದವರು ಅಕ್ವಯರ್‌ಮಾಡಿಕೊಂಡಿಲ್ಲವೇ ?

ಶ್ರೀ ಎಂ. ಪಿ. ಪಾಟೀಲ್.—ಎಲ್ಲೆಲ್ಲಿ ಅಗತ್ಯವಿದೆಯೋ ಅಂಥ ಕಡೆಗಳಲ್ಲಿ ಕಂದಾಯದ ಬಾಕಿಯನ್ನು ವಸೂಲ್ಮಾಡಲು ಕೊಯರ್ಸೀವ್ ಆಕ್ಷನ್ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ಹಣ ವಸೂಲ್ಮಾಡಿದ್ದರೂ ಅದನ್ನು ಸರ್ಕಾರಕ್ಕೆ ಪಾವತಿಮಾಡದಿರುವಂಥ ನಿದರ್ಶನಗಳೇನೂ ಇದರಲ್ಲಿ ಸೇರಿಲ್ಲವೇ ?

ಶ್ರೀ ಎಂ. ಪಿ. ಪಾಟೀಲ್.—ಹಳೇ ಮೈಸೂರಿನಲ್ಲಿ ಅಂಥ ಕೆಲವು ನಿದರ್ಶನಗಳಿವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಬಾಕಿ ನಿಂತಿರತಕ್ಕ ಹಣದಲ್ಲಿ ವಾಟರ್‌ರೇಟ್ ಸಹ ಸೇರಿರುತ್ತದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಕೆಲವು ಸಂದರ್ಭಗಳಲ್ಲಿ ಸೇರಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬಿಜಾಪುರ ಜಿಲ್ಲೆಯಲ್ಲಿ ಕಳೆದ 32 ವರ್ಷಗಳಲ್ಲಿ ಹತ್ತಾವರ್ತಿ ಕ್ಷಾಮ ಬಂದಿದೆ. ಆದ್ದರಿಂದ ಈಗ ನಿಂತಿರತಕ್ಕ ಬಾಕಿ ಎಷ್ಟು ವರ್ಷದ್ದು ? ಕಂದಾಯವನ್ನು ಆ ಜಿಲ್ಲೆಯಲ್ಲಿ ಎಷ್ಟು ವರ್ಷಗಳಿಂದ ಸಸ್ಪೆಂಡ್ ಮಾಡಲಾಗಿದೆ ?

ಶ್ರೀ ಎಂ. ಪಿ. ಪಾಟೀಲ್.—ಇದರಲ್ಲಿ ಹಿಂದಿನ ಬಾಕಿಯೇನೂ ಇಲ್ಲ. ಉತ್ತರದಲ್ಲಿ ತೋರಿಸಿರತಕ್ಕ ವರ್ಷಗಳ ಬಾಕಿ ಮಾತ್ರ ನಿಂತಿದೆ. 1952ಕ್ಕೆ ಹಿಂದಿನ ಬಾಕಿಗಳ್ಯಾವುವೂ ಇಲ್ಲ.

Sri P. G. SIDHANTI.—Is it not a fact that according to Land Revenue Rules, the arrears for 1952-53 have been automatically remitted ?

Sri M. P. PATIL.—I require notice because I will have to make enquiries whether these amounts have been remitted or not.

ಶ್ರೀ ಎಸ್. ಆರ್. ಪಾಟೀಲ್.—ಕಲ್ಬುರ್ಗಿ ಡಿವಿಜನ್ನಿನಲ್ಲಿ ಭೂಕಂದಾಯದ ಬಾಕಿ ಎಷ್ಟೋ ರೈತರಿಂದ ಬಾಕಿ ವಸೂಲಾಗಿದೆ ; ಮತ್ತು ಹಾಗೆ ವಸೂಲಾದ ಹಣದಲ್ಲೂ ಎಷ್ಟೋ ಅಪಹರಿಸಲಾಗಿದೆ. ಅದನ್ನೂ ಸಹ ಇದರಲ್ಲಿ ಸೇರಿಸಲಾಗಿದೆಯೋ ?

ಶ್ರೀ ಎಂ. ಪಿ. ಪಾಟೀಲ್.—ಇಲ್ಲ. ಅಂಥ ನಿದರ್ಶನಗಳು ಸರ್ಕಾರದವರ ಗಮನಕ್ಕೇನೂ ಬಂದಿಲ್ಲ. ಹಾಗೇನ್ನಾದರೂ ಪಟೇಲ್ ಶ್ಯಾನುಬೋಗರು ಅಪಹರಿಸಿದ್ದರೆ ಅಂಥವರಿಂದ ಆ ಹಣವನ್ನು ವಸೂಲ್ಮಾಡಿಕೊಳ್ಳಲಾಗುವುದು.

ಶ್ರೀ ಬಿ. ರಾಚಯ್ಯ.—ಈ ಬಾಕಿ ಮೊಬಲಗಿನಲ್ಲಿ ಕಾಂಟ್ರಿಬ್ಯೂಷನ್ ಮೊಬಲಗೂ ಸೇರಿರುತ್ತದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಇಲ್ಲ. ಕೆಲವುಕಡೆ ವಾಟರ್‌ರೇಟ್ ಮಾತ್ರ ಸೇರಿರುತ್ತದೆ.

ಶ್ರೀ ಇ. ನಾರಾಯಣಗೌಡ.—ಕೋಲಾರ ಜಿಲ್ಲೆಯಲ್ಲಿ ಬಂಗಾರಪೇಟೆ ತಾಲ್ಲೂಕಿನಲ್ಲೂ ಕ್ಷಾಮಪರಿಸ್ಥಿತಿ ಉಂಟಾದಾಗ ಕಂದಾಯವನ್ನು ಸಸ್‌ಪೆಂಡ್ ಮಾಡಿದ್ದರು. ಈಗ ಆ ಬಾಕಿಯನ್ನೆಲ್ಲ ಕಡ್ಡಾಯವಾಗಿ ವಸೂಲ್ಮಾಡಬೇಕೆಂದು ಹೇಳಿದ್ದೀರಾ ?

ಶ್ರೀ ಎಂ. ಪಿ. ಪಾಟೀಲ್.—ತಾವು ಕೇಳುತ್ತಿರುವ ವಿಚಾರ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ದಿವಸ ಹಳೆಯ ಮೈಸೂರಿನಲ್ಲಿಯೂ ಕೂಡ ಈಗ ನಿಂತಿರುವ ಕಂದಾಯ ಬಾಕಿಯಲ್ಲಿ ಅಧಿಕೃತ-ಅನಧಿಕೃತವೆಂದು ವಿಭಾಗ ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಎಂ. ಪಿ. ಪಾಟೀಲ್.—ಆ ವಿಚಾರವನ್ನು ಇನ್ನು ಮುಂದಕ್ಕೆ ಪರಿಶೀಲನೆ ಮಾಡೋಣ.

ಶ್ರೀ ಜಿ. ಎನ್. ಪುಟ್ಟಣ್ಣ.—ಕಂದಾಯದ ಬಾಕಿಗಾಗಿ ಈ ದಿವಸ ಘಡಕ್ಕೆ ಸೇರಿರತಕ್ಕ ಜಮೀನನ್ನು ಆ ಜಮೀನು ಮೊದಲು ಯಾವ ರೈತನಿಗೆ ಸೇರಿತ್ತೋ ಆತನಿಗೇ ಈ ದಿವಸ ಉಳುಮೆ ಮಾಡಲು ಪಟೇಲ್-ಶ್ಯಾನುಭೋಗರು ಅವಕಾಶ ಕೊಟ್ಟು ಅವರಿಂದ ಕಂದಾಯ ವಸೂಲ್ಮಾಡಿಕೊಂಡು ತಿಂದುಹಾಕಿ ಸರ್ಕಾರಕ್ಕೆ ಬರಬೇಕಾದ ವರಮಾನವನ್ನು ತಪ್ಪಿಸಿರತಕ್ಕ ಅಂಶ ತಮ್ಮ ಅವಗಾಹನೆಗೆ ಬಂದಿದೆಯೋ ?

ಶ್ರೀ ಎಂ. ಪಿ. ಪಾಟೀಲ್.—ತಾವು ಅಂಥ ನಿದರ್ಶನಗಳನ್ನು ತಿಳಿಸಿದರೆ ಸರ್ಕಾರದವರು ಇನ್‌ವೆಸ್ಟಿಗೇಟ್ ಮಾಡಿ ಆಕ್ಷನ್ ತೆಗೆದುಕೊಳ್ಳುತ್ತಾರೆ. ಆದರೆ ಇಲ್ಲಿಯವರೆಗೂ ಅಂಥ ಕೇಸುಗಳು ನಮ್ಮ ಗಮನಕ್ಕೆ ಬಂದಿಲ್ಲ.

Facilities to Marathi-speaking pupils in the Government Technical High School at Belgaum.

Q.—764. Sri B. R. SUNTHANKAR (Belgaum City).—

Will the Government be pleased to state :—

(*a*) the number of Marathi and Kannada-speaking pupils that are taking instruction at the Government Technical High School at Belgaum ;

(*b*) the proportion among teachers at this High School whose mother-tongue is either Marathi or Kannada ;

(*c*) whether it is a fact that the question papers set at the annual examination of 1957 of this High School were framed in incorrect and ungrammatical Marathi making them incomprehensible to the examinees ;

(*d*) whether they are aware of the severe criticism levelled against these question papers by the Marathi Press ?

A.—Sri V. VENKATAPPA (Minister for Education).—

(*a*) The number of Marathi and Kannada speaking pupils in the Technical High School at Belgaum is 129 and 110 respectively.

(*b*) Mother-tongue of 2 out of 3 teachers is Marathi. The mother-tongue of the other teacher is Kannada.

(*c*) No.

(*d*) No.

Mr. SPEAKER.—So far as clauses (*c*) and (*d*) are concerned they have been replied when this question had once come up. The Hon'ble Member may therefore put supplementaries on clauses (*a*) and (*b*) which are new.

Sri B. R. SUNTHANKAR.—May I know when they were replied ?

Mr. SPEAKER.—Please ask your friend Sri Samaji.

Sri B. R. SUNTHANKAR.—The information given to clause (*b*) is not correct because according to my information the mother-tongue of all the teachers is Marathi. May I know whether the information given here is based on the information supplied by the head of the institution or

whether the Hon'ble Minister has convinced himself of the true state of affairs ?

Mr. SPEAKER.—The Hon'ble Member cannot say that the reply is not correct. The reply might have been given on the basis of the information Government have. The Hon'ble Member may put a question.

Sri B. R. SUNTHANKAR.—May I know whether the reply to (*b*) is based on the information supplied by the head of the institution or whether the Education Minister has convinced himself of the true state of affairs there ?

Sri V. VENKATAPPA.—That is the information given by the head of the department.

Sri B. R. SUNTHANKAR.—May I know whether the Hon'ble Minister would enquire into the matter again and know the true state of affairs ?

Sri V. VENKATAPPA.—This is not the first time. This is the second time I am getting the information. It is quite correct.

Sri H. V. KOUJALGI.—Is it not a fact that among the Marathi and Kannada speaking people, there are some who know both the languages ?

(*No answer*).

Scrutiny of Estimates of Land Improvement Loans.

Q.—789. Sri G. SIVAPPA (Chitaldrug).—

Will the Government be pleased to state :—

whether they propose to order for the preparation and scrutiny of the estimates by the Engineering Department and the Department of Agriculture free of cost in connection with the Land Improvement loans through the Land Mortgage Co-operative Societies in the State since the present Government Order directing the concerned departments to conduct the investigation, etc., is vague ?

A.—Sri S. NIJALINGAPPA (Chief Minister).—

Government have issued instructions to the Director of Agriculture, Director of Industries and Commerce, the Chief Engineer for Irrigation and Roads and Buildings and Director of Public Health to issue necessary instructions to the subordinates to extend all reasonable help and facilities to the Primary Land Mortgage Co-operative Societies in getting the requisite information. The question of preparation and scrutiny of estimates by the Public Works Department and Agriculture Department free of cost will be examined after obtaining suitable proposals from the officers concerned.

Sri G. SIVAPPA.—May I know—to extend all reasonable help and facilities to the Primary Land Mortgage Bank and co-operative societies in getting reasonable information—whether these directions are carried out by this Department ?

*Sri S. NIJALINGAPPA.—Recently there is some trouble from Chitaldrug District where the Executive Engineer has demanded a centage of three per cent. There has been that trouble going on and Government is considering that question.

Sri G. SIVAPPA.—Is it not a fact that our Chief Minister was pleased to state that a centage of three per cent was demanded—that in addition to the demand of three per cent centage, the progress of the work is slow apart from other *mamuls* ? May I know whether these facts have come to the notice of the Government ?

Sri S. NIJALINGAPPA.—It is the first time that it has been brought to my notice. The Hon'ble Member is the Chairman of the Land Mortgage Bank and he ought to know this. He must be in the know of things because he is in charge of the institution. I want him to give sufficient information to take action.

ಶ್ರೀ ಜಿ. ಶಿವಪ್ಪ.—ಈ ಕಾರಣದಿಂದ ಈ Improvement Loanಗಳನ್ನು ಎರಡನೆಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಎಷ್ಟರ ಮಟ್ಟಿಗೆ ಕೊಡಬೇಕಾಗಿತ್ತೋ ಅಷ್ಟರ ಮಟ್ಟಿಗೆ ಕೊಡುವುದಕ್ಕೆ ಸಾಧ್ಯವಾಗಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೋ ?

ಅಧ್ಯಕ್ಷರು.—ಈ ಕಾರಣ ಎಂದರೆ ಯಾವ ಕಾರಣ ?

Sri G. SIVAPPA.—The scrutiny is to be done by the Department if a loan has to be sanctioned, *i.e.*, scrutiny by the Public Works and Agricultural

(Sri G. Sivappa)

Departments. As they are not doing in time, has it come to the notice of the Government that the Co-operative Bank is not at all fulfilling its obligations in granting the loans ?

Sri S. NIJALINGAPPA.—Now that my friend has brought it to my notice, I will get it examined.

Sri G. DUGGAPPA.—Has it come to the notice of the Government that it is the same case with the District Central Co-operative Banks also ?

Sri S. NIJALINGAPPA.—It has not come to the notice of the Government.

Sri G. DUGGAPPA.—May I know whether the Government is aware that no arrangements have yet been made to scrutinise some of these estimates in connection with the sanction of medium term loans by the District Central Co-operative Banks ?

Mr. SPEAKER.—That is a different thing.

Sri S. NIJALINGAPPA.—It does not arise. Arrangements have been made. If there are any bottlenecks, we are going to remove them.

Grant of land and other facilities to Sri R. Chennigaramaiah at Gowraganahalli.

Q.—814. Sri G. N. PUTTANNA (Tumkur).—

Will the Government be pleased to state:—

(*a*) whether it is a fact that Sri R. Chennigaramaiah was granted six acres of land in the river bed of Suvarnamukhi running through the village limits of Gowraganahalli, Kasaba Hobli, Koratagere Taluk ;

(*b*) whether it is a fact that with the object of increasing the area so granted to Sri Chennigaramaiah that bund has been erected in the middle of the river of Suvarnamukhi at the cost of Government;

(*c*) if so, the amount spent by the Government for increasing the area by about three acres more ;

(*d*) whether they are aware that by erecting such a bund in the middle of the river bed, by diminishing the width of the river and also changing the course of it, the wet lands of Mylarappa, Chikka Thimmiah, Kyathanna, Eranagappam Bullanna, Chikkalingiah, Eramma Inamthi land, Chikkanna, Narasimhachar, Govindappa, Komaraiah, will be submerged by the river ?

A.— Sri H. K. VEERANNA GOWDH (Minister for Public Works).—

(*a*) Yes ; in the year 1942-43.

(*b*) No.

(*c*) and (*d*) Do not arise in view of reply to clause (*b*) above.

Mr. SPEAKER.—This has been replied with references to a question put by Sri Puttanna.

Sri G. N. PUTTANNA.—No, Sir. This is a different village. The ideas are different and this is a different subject altogether. This is quite separate from the other question. This is a separate land.

(*a*) ಪ್ರಶ್ನೆಗೆ ಉತ್ತರ ಕೊಡುತ್ತ "Yes ; in the year 1942-43" ಎಂದು ಹೇಳಿದ್ದೀರಿ. Yes ಎಂದು ಹೇಳಿದ್ದರೇ ಸಾಕಾಗಿತ್ತು ತಾವು ಇಸವಿಯನ್ನೂ ಕೊಟಿದ್ದೀರಿ. ಯಾವ ಉದ್ದೇಶದಿಂದ ಅದನ್ನು ಕೊಟ್ಟಿದ್ದೀರೆಂದು ನನಗೊತ್ತು. ಅದೇನೇ ಇರಲಿ, ಈ ಆರು ಎಕರೆಗಳನ್ನು ಒಂದೇಸಾರಿ ಕೊಟ್ಟಿರಾ ಅಥವಾ ಬೇರೆ ಬೇರೆ ಕಾಲದಲ್ಲಿ ಕೊಟ್ಟಿರಾ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಒಂದೇಸಾರಿ, 1942-43 ನೆಯ ಇಸವಿಯಲ್ಲಿ ಈ ಆರು ಎಕರೆ ಜಮೀನುಗಳನ್ನೂ ಕೊಟ್ಟರು.

ಶ್ರೀ ಜಿ. ಎನ್. ಪುಟ್ಟಣ್ಣ.—ಒಂದನೆಯ ತಾರೀಖು ಮಳೆಬಂದಾಗ ಚೆನ್ನಿಗರಾಮಯ್ಯನವರ ಜಮೀನಿನ ಹತ್ತಿರ ಕೆರೆಯ ಬಂಡು ಒಡೆದು ಹೋಯಿತೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ವಿಷಯವನ್ನು ವಿವರವಾಗಿಹೇಳಿದರೆ ಒಳ್ಳೆಯದೆಂದು ಕಾಣುತ್ತದೆ. ಬಂಡು ಹಾಕಿರುವುದು ಏಳುಮೈಲಿ ದೂರಇದೆ ಚೆನ್ನಿಗರಾಮಯ್ಯನವರಿಗೆ ಕೊಟ್ಟಿರುವ ಆರು ಎಕರೆ ಜಮೀನು ಈ ಏಳು ಮೈಲಿದೂರ ಪ್ರಸರಿಸುವುದಿಲ್ಲ, ನದಿಯ ಪಕ್ಕದಲ್ಲಿರುವ ಜಮೀನುಗಳವರು ಅಲ್ಲಲ್ಲೆ ಕಟ್ಟೆಹಾಕಿಕೊಂಡಿದ್ದರು. ಮೇಲುಗಡೆ ಒಂದು ಕೆರೆ ಒಡೆದುಹೋಗಿ ಪ್ರವಾಹ ಬಂದಾಗ ಏರಿಯಲ್ಲಾ ಮಧ್ಯ ಮಧ್ಯ ಒಡೆದು ಹೋಯಿತು. ಅದರ ಮೇಲೆ ಈ ಏಳುಮೈಲಿ ದೂರದಷ್ಟನ್ನೂ ರಿಪೇರಿಮಾಡಬೇಕೆಂದು ಸರಕಾರದಿಂದ ಈ ಕೆಲಸ ಕೈಕೊಳ್ಳಲಾಯಿತು. ಈ ಭಾಗಕ್ಕೆ ಸೇರಿದ್ದಾಗಿ, ಶ್ರೀ ಚನ್ನಿಗರಾಮಯ್ಯನವರಿಗೆ ಸೇರಿದ್ದ ಜಮೀನಿನಲ್ಲೂ ಸ್ವಲ್ಪ ಭಾಗ ಒಡೆದಿದ್ದು ರಿಪೇರಿಯಾದಂತಾಗಿದೆ, ಅಷ್ಟೆ. ಪ್ರವಾಹ ಬಂದಾಗ ಅನೇಕ ಬಂಡಿಯಷ್ಟು ಮರಳು ಬಂದು ಕಟಾವಿಗೆ ಬಂದ ಬತ್ತದ ಬೆಳೆಯೆಲ್ಲಾ ಮುಚ್ಚಿಹೋಗಿ, ರೈತರೇಕೆಲವರು ಸ್ವಂತ ಲಾಗೋಡಿನಿಂದ ತೆಗೆಸಿಕೊಂಡಿದ್ದರು. ಆದ್ದರಿಂದ ಒಟ್ಟಿನಲ್ಲಿ ಹೇಳುವುದಾದರೆ, ಏರಿಯನ್ನು ಒಬ್ಬರಿಗಾಗಿ ಮಾಡಿದ್ದಲ್ಲ. ಏಳು ಮೈಲಿ ದೂರದ ಏರಿ ಎಲ್ಲರಿಗೂ ಸೇರಿದ್ದಾಗಿದೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಈ ಏಳುಮೈಲಿ ದೂರ ಹಾಕಿರತಕ್ಕ ಏರಿಗೂ ಇದಕ್ಕೂ ಸಂಬಂಧವಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಏಳು ಮೈಲಿ ದೂರ ಹಾಕಿರುವ ಏರಿಯ ಮಧ್ಯ ಇದು ಬರುವುದಿಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಕೆರೆ ಒಡೆದುಹೋದದ್ದರಿಂದ ಅಲ್ಲ, ಅವರ ಜಮೀನಿಗೆ ಏರಿ ಹಾಕಿದ್ದರಿಂದ ಈ ಜಮೀನುಗಳು ಮುಳುಗಡೆಯಾಗಿವೆಯೆಂದುಹೇಳುತ್ತೇನೆ, ಒಪ್ಪುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಒಪ್ಪುವುದಿಲ್ಲ, ಮಾಮೂಲು ಏರಿ ರಿಪೇರಿಯಾಗಿದೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಇದನ್ನು ಅಡಿಟ್ಟಿಗೆ ಹಾಕುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅಗತ್ಯವಿಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಹೀಗೆ ಒಡೆದುಹೋದ ಜಮೀನಿನ ಏರಿಯನ್ನು ಶ್ರೀಮಾನ್ ಚೆನ್ನಿಗರಾಮಯ್ಯನವರಿಂದ ದೂರು ಬಂದಮೇಲೆ ರಿಪೇರಿಮಾಡಿದಿರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಾನೇ ಎರಡು ಮೂರು ಸಾರಿ ಟೂರ್ ಹೋದಾಗ ಅತ್ತಕಡೆಹೋಗಿ ನೋಡಿದೆ ಅಷ್ಟೆ. ಯಾರಿಂದಲೂ ದೂರು ಬರಲಿಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—63,000 ರೂಪಾಯಿಗಳಿಗೆ ಮಾಡಿಸಿದೆವು ಎಂದುಹೇಳಿದಿರಿ. ಈ ಏರಿಯನ್ನು ಯಾವಾಗ ಮಾಡಿಸಿದಿರಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ಬಹಳ ದಿವಸದಿಂದ ಇದೆ. ಅಲ್ಲಿರುವ ಮರಗಳು ಗಿಡಗಳನ್ನು ನೋಡಿದರೆ ಬಹಳ ದಿವಸದ ಹಿಂದೆ ಹಾಕಿದ್ದವೆಂದು ತೋರುತ್ತದೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ತಾವು ಹೇಳಿದಿರಿ, ಹಳೆ ಏರಿ ; ಒಮ್ಮೆ ಒಡೆದು ಹೋಗಿದ್ದುದ್ದನ್ನು ಭರ್ತಿಮಾಡಿದ್ದೆವು ಎಂದು. ಯಾವಾಗ ಮಾಡಿತ್ತು ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಯಾವಾಗ ಎಂದು ಹೇಳಬೇಕಾದರೆ, ತರಿಸಿ ಹೇಳಬೇಕು.

ಶ್ರೀ ಜಿ. ಎಸ್. ಪುಟ್ಟಣ್ಣ.—ಜಮೀನು ಕೊಟ್ಟಾಗ ಅವರು ಮಂತ್ರಿಗಳಾಗಿದ್ದರೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆಗ್ಗೆ ಕಾಂಗ್ರೆಸ್ ಸರಕಾರವೇ ಇರಲಿಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಈ ಆರು ಎಕರೆ ಜಮೀನನ್ನು ಶ್ರೀಮಾನ್ ಚೆನ್ನಿಗರಾಮಯ್ಯನವರಿಗೆ upset price ಗೆ ಕೊಟ್ಟಿತ್ತೆಂದು ಹೇಳಿದಿರಿ. ಆ ಜಮೀನಿಗೆ ಆಗ್ಗೆ ರೂಲ್ಸ್ ಪ್ರಕಾರ ಎಷ್ಟು ಅರ್ಜಿಗಳು ಬಂದಿದ್ದುವು?

ಅಧ್ಯಕ್ಷರು.—ಆ ಪಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

Sri C. J. MUCKANNAPPA.—Were there no applications from other persons for the grant of this land ?

Sri H. K. VEERANNA GOWDH.—This question does not refer to granting of land as such. If the Hon'ble Member wants information on that point, he may put a specific question.

Sri C. J. MUCKANNAPPA.—Part (*a*) of the question specifically refers to grant of land to Sri Chennigaramaiah. My supplementary is whether there were other applicants for the same land.

Sri H. K. VEERANNA GOWDH.—I have no information. If a specific question is asked I will get the information.

ಶ್ರೀ ಜಿ. ಎಸ್. ಪುಟ್ಟಣ್ಣ.—(ಡಿ) ಭಾಗಕ್ಕೆ ಉತ್ತರವಾಗಿ 'do not arise in view of reply to clause (*b*) above' ಎಂದು ಹೇಳಿದ್ದಾರೆ. ಇದು ಅರ್ಥವಾಗುವುದಿಲ್ಲ. ಇದನ್ನು ವಿವರಿಸುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಶ್ರೀ ಚೆನ್ನಿಗರಾಮಯ್ಯನವರ ಜಮೀನಿನ ವಿಸ್ತಾರವನ್ನು ಹೆಚ್ಚಿಸುವ ಉದ್ದೇಶದಿಂದ ಈ ರೀತಿ bund ಹಾಕಿದಾರೆಯೇ ಎಂದು 'ಬಿ' ಭಾಗದಲ್ಲಿ ಕೇಳಿರುವುದಕ್ಕೆ 'ಇಲ್ಲ' ಎಂದು ಹೇಳಿದೆ. 'ಡಿ' ಭಾಗದಲ್ಲಿ ನದಿಯ ಮಧ್ಯಕ್ಕೆ bund ಹಾಕಿ ನದಿಯ ಪಾತ್ರವನ್ನು ಚಿಕ್ಕದು ಮಾಡಿಲ್ಲವೇ ಎಂದು ಕೇಳಿರುವುದಕ್ಕೆ 'ಬಿ' ಭಾಗಕ್ಕೆ ಕೊಟ್ಟಿರುವ ಉತ್ತರವನ್ನು ನೋಡಿದರೆ ಈ ಪ್ರಶ್ನೆ ಉದ್ಭವವಾಗುವುದಿಲ್ಲವೆಂದು ಹೇಳಿದ್ದೇನೆ. ಚೆನ್ನಿಗರಾಮಯ್ಯನವರಿಗೆ ಕೊಟ್ಟಿರುವ ಆರು ಎಕರೆ ಜಮೀನು ಪೋಡ್‌ಆಗಿ, ಸರ್ವೆಆಗಿ ಅದರ ರಿಕಾರ್ಡ್ ಈಚೆಗೆ ಬಂದಿದೆ. ಅದರ ಪ್ರಕಾರ ಐದೂವರೆ ಎಕರೆ ಭೂಮಿ ಮಾತ್ರ ಅಲ್ಲಿದೆ. ಅದರಲ್ಲಿ ಅರ್ಧಎಕರೆ ಖರಾಬು ಕಳೆದರೆ ಐದು ಎಕರೆ ಜಮೀನು ಮಾತ್ರ ಅವರಿಗೆ ಉಳಿದಿದೆ ಎಂದು ನನಗೆ ಬಂದಿರುವ ರಿಪೋರ್ಟಿನಿಂದ ಗೊತ್ತಾಗಿದೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಈ ಕಟ್ಟೆಯನ್ನು ಹಾಕುವಾಗ ಶ್ರೀ ಚೆನ್ನಿಗರಾಮಯ್ಯನವರಿಗೆ ಬುಲ್‌ಡೋಜರನ್ನು ಸರ್ಕಾರದಿಂದ ಕೊಟ್ಟಿದ್ದಿರಲ್ಲವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅವರು ಬಾಡಿಗೆಗೆ ತೆಗೆದುಕೊಂಡಿದ್ದರು. 63 ಸಾವಿರ ರೂಪಾಯಿ ಖರ್ಚುಮಾಡಿ ಬಂಡ್ ರಿಪೇರಿ ಮಾಡಿಸಿದ್ದೇವೆ. ಕಟ್ಟೆ ಮೂರುನಾಲ್ಕು ಕಡೆ ಒಡೆದು ಜಮೀನಿನಲ್ಲಿ ಮರಳು ತುಂಬಿಕೊಂಡು ಬೆಳೆ ನಷ್ಟವಾಗಿತ್ತು. ಜಮೀನಿನಲ್ಲಿ ತುಂಬಿದ್ದ ಮರಳನ್ನು ತೆಗೆದು ಭೂಮಿಯನ್ನು ಹದ ಮಾಡಿಕೊಳ್ಳಲು bull dozer ಬಾಡಿಗೆಗೆ ತೆಗೆದುಕೊಂಡಿದ್ದರು. 63 ಸಾವಿರ ರೂಪಾಯಿಗಳ ಅಂದಾಜು ಏರಿ ಒಡೆದು ಹೋಗಿದ್ದುದನ್ನು ರಿಪೇರಿಮಾಡುವುದಕ್ಕೆ ಮಾತ್ರ.

ಶ್ರೀ ಜಿ. ಎಸ್. ಪುಟ್ಟಣ್ಣ.—ಮಂತ್ರಿಗಳು ಹೇಳತಕ್ಕ ಉತ್ತರ ಸಮಂಜಸವಾಗಿಲ್ಲ. ಅದು ಬೇರೆ bundಗೆ ಸಂಬಂಧಿಸಿದ್ದು.

ಅಧ್ಯಕ್ಷರು.—ತಾವು ಪ್ರಶ್ನೆ ಕೇಳಿ.

ಶ್ರೀ ಜಿ. ಎಸ್. ಪುಟ್ಟಣ್ಣ.—ಹಾಗಿದ್ದಮೇಲೆ ಬುಲ್‌ಡೋಜರಿಗೆ ಎಷ್ಟು ಖರ್ಚಾಗಿದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಬಾಡಿಗೆ ಎಷ್ಟು ಕೊಟ್ಟಿದ್ದಾರೆಂಬುದನ್ನು ತರಿಸಿ ಹೇಳಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಮಂತ್ರಿಗಳು ಅಲ್ಲಿಗೆ ಹೋಗುವುದಕ್ಕೆ ಮುಂಚೆ ಡಿವಿಜನಲ್ ಕಮೀಷನರ್ ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರು ಏರಿ ಒಡೆದುಹೋಗಿದ್ದುದನ್ನು inspect ಮಾಡಿ report ಮಾಡಿರಲಿಲ್ಲವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಬಹುಶಃ ನಾನು ಏರಿ ಒಡೆದುಹೋದಮೇಲೆ ಒಂಬತ್ತು-ಹತ್ತು ದಿನಗಳ ನಂತರ ಅಲ್ಲಿಗೆ ಹೋಗಿದ್ದೆ. ಆಗ ಶ್ರೀ ಕೆ. ತಿಪ್ಪೇರುದ್ರಯ್ಯನವರು ಡಿವಿಜನಲ್ ಕಮಿಷನರ್ ಆಗಿದ್ದರು. ಅವರು ನನ್ನ ಜೊತೆಯಲ್ಲಿದ್ದರು. ಅವರು ನೋಡಿಕೊಂಡು ಬಂದು ರಿಪೋರ್ಟ್ ಕಳುಹಿಸಿದ್ದುದು ನನಗೆ ಗೊತ್ತಿಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಮಂತ್ರಿಗಳು ಯಾವಾಗ ಅಲ್ಲಿಗೆ ಹೋಗಿದ್ದರೆಂಬುದನ್ನು ತಿಳಿಸುತ್ತಾರೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಏರಿ ಒಡೆದು ಹೋದದ್ದು 1956ನೆಯ ಇಸವಿ ನವಂಬರ್ ಮೊದಲ ನೆಯ ತಾರೀಖು. ಏರಿ ಒಡೆದುಹೋದ ಒಂಭತ್ತು-ಹತ್ತು ದಿನಗಳಿಗೆ ನಾನು ಅಲ್ಲಿಗೆ ಹೋಗಿದ್ದೆ.

Scholarships for students of Depressed Class in High and Middle Schools.

Q.—886. Sri B. RACHIAH (Chamarajanagar).—

Will the Government be pleased to state :—

(*a*) the total number of applications received in the old Mysore State for award of D.C. Scholarships for students studying in High and Middle Schools during the past 3 years ;

(*b*) the total amount of scholarships given for the last 3 years ;

(*c*) whether it is not a fact that time and again representations both on the floor of the House as well as outside were made for allotting more grants in the Budget for award of the same ?

A.—Smt. GRACE TUCKER (Deputy Minister for Education).—

(*a*) High Schools—

1953-54	... ...	1,237
1954-55	... ...	1,745
1955-56	... ...	1,979

Middle Schools—

1953-54	... ...	3,898
1954-55	... ...	3,729
1955-56	... ...	4,104

(*b*) High Schools Rs. 42,525 for each of the years. Middle Schools Rs. 36,330 for each of the years.

(*c*) Yes.

Note.—Statistics for the year 1956-57 have yet to be obtained and consolidated. As such figures for the previous three years are now furnished.

Sri B. RACHIAH.—May I know the total number of awards for the three years ?

ಶ್ರೀ ವಿ. ವೆಂಕಟಪ್ಪ (ವಿದ್ಯಾಶಾಖೆಯ ಮಂತ್ರಿಗಳು).—ಅದು ಈ ರೀತಿ ಇದೆ :—

	1953-54	1954-55	1955-56
ಹೈಸ್ಕೂಲು ಬಾಲಕರಿಗೆ	487	487	487
,, ಬಾಲಕಿಯರಿಗೆ	80	80	80
ಮಿಡಲ್ ಸ್ಕೂಲ್ ಬಾಲಕರಿಗೆ	799	799	799
,, ಬಾಲಕಿಯರಿಗೆ	100	100	100
ನ್ಯೂಟೈಪ್ ಮಿಡಲ್ ಸ್ಕೂಲ್	312	312	312

Sri B. RACHIAH.—Whether the Government have provided increased grants ?

Sri V. VENKATAPPA.—Yes, Sir.

Sri B. RACHIAH.—May I know the exact amount ?

ಶ್ರೀ ವಿ. ವೆಂಕಟಪ್ಪ.—ಹೈಸ್ಕೂಲುಗಳಲ್ಲಿ ಹುಡುಗರಿಗೆ 329 ಹೆಚ್ಚಿಗೆ ಮಾಡಿದ್ದೇವೆ. ಒಟ್ಟು 816 ಆಗುತ್ತದೆ. ಹುಡುಗಿಯರಿಗೆ 54 ಹೆಚ್ಚಿಗೆ ಮಾಡಿದ್ದೇವೆ. ಒಟ್ಟು 134 ಆಗಿದೆ. ಮಿಡಲ್‌ಸ್ಕೂಲುಗಳಲ್ಲಿ ಹುಡುಗರಿಗೆ 540 ಹೆಚ್ಚಿಗೆ ಮಾಡಿದ್ದೇವೆ. ಒಟ್ಟು 1,339 ಆಗಿದೆ, ಹುಡುಗಿಯರಿಗೆ 68 ಹೆಚ್ಚಿಗೆ ಮಾಡಿದ್ದೇವೆ, ಒಟ್ಟು 168 ಆಗಿದೆ. ನ್ಯೂ ಟೈಪ್ ಮಿಡಲ್‌ಸ್ಕೂಲುಗಳಲ್ಲಿ 211 ಹೆಚ್ಚಿಗೆ ಮಾಡಿದ್ದೇವೆ, ಒಟ್ಟು 513 ಆಗಿದೆ.

ಶ್ರೀ ಜಿ. ದುಗ್ಗಪ್ಪ.—ಮಾನ್ಯ ಮಂತ್ರಿಗಳು ಹೇಳುತ್ತಿರುವ ಅಂಕಿಅಂಶಗಳು ವಿಶಾಲ ಮೈಸೂರಿಗೆ ಅಲ್ಲವೆ ?

ಶ್ರೀ ವಿ. ವೆಂಕಟಪ್ಪ.—ಅಲ್ಲ, ಹಳೆಯ ಮೈಸೂರಿಗೆ.

ಶ್ರೀ ಮಂಜಪ್ಪ ಉಳ್ಳಾಳ್.—ಯಾವ ರೂಪದಲ್ಲಿ ಇದನ್ನು ಕೊಡಲಾಗುತ್ತದೆ ?

ಶ್ರೀ ವಿ. ವೆಂಕಟಪ್ಪ.—ಹಣದ ರೂಪದಲ್ಲಿ ಕೊಡಲಾಗುತ್ತದೆ.

ಶ್ರೀ ಮಂಜಪ್ಪ ಉಳ್ಳಾಳ್.—ಎಷ್ಟು ಕಂತುಗಳಲ್ಲಿ ಕೊಡಲಾಗುತ್ತದೆ ?

Sri V. VENKATAPPA.—Eight instalments.

ಶ್ರೀ ಬಿ. ರಾಚಯ್ಯ.—ಬಹಳ ಜನ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಲು ಅನುಕೂಲವಾಗುವಂತೆ ಹೆಚ್ಚಿಗೆ ಹಣವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವಿ. ವೆಂಕಟಪ್ಪ.—ಹೋದವರ್ಷ ಹೆಚ್ಚುಮಾಡಿ ಈ ವರ್ಷದ ಬಡ್ಜೆಟ್ಟಿನಲ್ಲಿ ಪ್ರೊವೈಡ್ ಮಾಡಿದ್ದೇವೆ. ಶೇಕಡ 68 ರಷ್ಟು ಹೆಚ್ಚಾಗಿದೆ. ಇನ್ನೂ ಹೆಚ್ಚಿಸುವುದಕ್ಕೆ ಆಗುತ್ತದೆಯೇ ಇಲ್ಲವೇ ಎಂಬುದನ್ನು ನೋಡಬೇಕು.

ಶ್ರೀ ಬಿ. ರಾಚಯ್ಯ.—ವಿಶ್ವವಿದ್ಯಾನಿಲಯದಲ್ಲಿ ಓದುತ್ತಿರತಕ್ಕ ಹರಿಜನ ವಿದ್ಯಾರ್ಥಿಗಳಿಗಾಗಿ ಕೊಡತಕ್ಕ ವಿದ್ಯಾರ್ಥಿವೇತನಗಳ ಬಾಬಿನಲ್ಲಿ ಉಳಿಯುವ ಹಣವನ್ನು ಇಲ್ಲಿಗೆ re-appropriate ಮಾಡಿಕೊಡಬೇಕೆಂದು ಮನವಿಮಾಡಿಕೊಂಡಿರಲಿಲ್ಲವೆ ?

ಶ್ರೀ ವಿ. ವೆಂಕಟಪ್ಪ.—ತಾವು ಸೂಚನೆ ಮಾಡಿದ್ದೀರಿ. ವಿಶ್ವವಿದ್ಯಾನಿಲಯದವರು 25 ಸಾವಿರ ರೂಪಾಯಿಗಳನ್ನು ಮೊದಲು ಕೊಡುತ್ತಿದ್ದರು, ಹೋದವರ್ಷದಿಂದ 30 ಸಾವಿರ ರೂಪಾಯಿ ಕೊಡು-

ತ್ತೇವೆಂದು ಹೇಳಿದ್ದಾರೆ. ಅದು ಖರ್ಚಾಗುತ್ತದೆಯೇ ಇಲ್ಲವೇ ಎಂದು ವಿಚಾರಮಾಡಬೇಕು. ಆದರೆ ಅದನ್ನು ಈ ವರ್ಷವೇ ಉಪಯೋಗಿಸಿಕೊಳ್ಳುವುದಕ್ಕೆ ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ.

Sri Y. MANJAYA SHETTY.—Would this scheme of granting scholarships be introduced in the other integrating areas of the State?

ಶ್ರೀ ವಿ. ವೆಂಕಟಪ್ಪ.—ಹೌದು. ಹಿಂದೆ ಇವರಿಗೆ ಎಷ್ಟು ಕೊಡಲಾಗುತ್ತಿತ್ತೋ ಅದನ್ನು ಶೇಕಡ 68ರಷ್ಟು ಎಲ್ಲ ಕಡೆಯಲ್ಲಿಯೂ ಹೆಚ್ಚುಮಾಡಿದ್ದೇವೆ.

ಶ್ರೀ ಟಿ. ಹನುಮಯ್ಯ.—ಹೋದವರ್ಷ 4½ ಲಕ್ಷ ರೂಪಾಯಿಗಳನ್ನು ಸ್ಕಾಲರ್‌ಷಿಪ್‌ಗಳಿಗಾಗಿ ಕೊಟ್ಟಿದ್ದರು. ಈ ವರ್ಷ 2½ ಲಕ್ಷ ರೂಪಾಯಿ ಮಾತ್ರ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ವಿ. ವೆಂಕಟಪ್ಪ.—ಅವರು ಯಾವ ಅಂಕಿ ನೋಡಿದರೋ ಗೊತ್ತಿಲ್ಲ. ಶೇಕಡ 68ರಷ್ಟು ಹೆಚ್ಚು ಮಾಡಿದ್ದೇವೆ. ಇದರಲ್ಲಿ ಅನುಮಾನವಿಲ್ಲ.

Transfer of land held by Defence Department to State Government.

Q.—1144. Sri V. P. DEENADAYALU NAIDU (Cubbonpet).—

Will the Government be pleased to state:—

(*a*) whether it is not a fact that lands or areas in Bangalore held by the Defence Department, Government of India, were handed over to the Government of Mysore in 1947;

(*b*) whether any negotiations were made with the Government of India for the rest of the lands still held by Government?

A.—Sri C. M. POONACHA (Minister for Home Affairs and Industries).—

(*a*) No.

(*b*) Yes.

Sri V. P. DEENADAYALU NAIDU.—Have the Government in their possession any schedule or survey of the lands that are in the possession of the Government of India which belonged to the State of Mysore?

*Sri C. M. POONACHA.—Perhaps my Hon'ble friend is referring to a notification published on 26th July 1947 wherein the jurisdiction exercised by the Crown Representative in the area known as the Civil and Military Station, Bangalore, was restored to His Highness the Maharaja of Mysore with effect from that date and to that notification a schedule is appended which indicates such of those areas which are reserved for the Defence Department and the railways.

Sri V. P. DEENADAYALU NAIDU.—No doubt, the notification states what is in their possession, but what is the further development or what is the further arrangement made to hand over or re-convey those properties to the Government of Mysore?

Sri C. M. POONACHA.—Under article 295 of the Constitution, such of those lands which were used for Union purposes prior to the coming into force of the Constitution will vest with the Union Government. So, those lands which were reserved for military purpose and were held by the Defence Department prior to the passing of the new Constitution vest with the Defence Department now. So, they will still continue to be so. Therefore, the question of getting back those lands will not arise.

Sri V. P. DEENADAYALU NAIDU.—As the Minister just now pointed out, there is a clear distinction between 1947 and the coming into force of the Constitution. I want to draw the attention of the Government to the agreement in that schedule. Under that agreement, what are the efforts made by the Government of Mysore to take back those lands from the Government of India and under what terms are they still holding those lands?

Sri C. M. POONACHA.—Those lands were held for Union purposes as enumerated in the schedule of the Notification. So, naturally, all those lands and properties which were held and used for Union purpose will still continue to be so used and will vest with the Defence Department. So, that point does not arise.

Sri V. P. DEENADAYALU NAIDU.—May I take it that we have no say in that matter?

Sri C. M. POONACHA.—Certainly not. They vest in the Government of India and they are in their possession.

Sri K. HANUMANTHAIYA.—Arising out of this, what are the specific items which are the subject matter of negotiations?

Sri C. M. POONACHA.—There are a few plots of land in Bangalore which are now with the Defence Department but which do not actually vest with them and negotiations have been started and we have now got back the plot called the Corner House Plot and another area of about 50 acres occupied by the Headquarters, I.A.F. Recruitment Team, will be handed over to the State Government very shortly. We have received information to the effect that they are makingarrangements to move the Head-quarters to transfer those lands back to us.

Sri J. B. MALLARADHYA.—What are the items of property which are permanently committed to be the property of the Government of India and what are the areas or items of properties over which we have still got a right and which we can get back?

Sri C. M. POONACHA.—The schedules A and B are lengthy. I would therefore refer my Hon'ble friend to the notification of this date. Still if he wants them, I will make a copy of the notification available to him.

Sri J. B. MALLARADHYA.—So far as the two items of properties are concerned, one is occupied by the I.A.F. Training Command opposite or behind the Residency. The other item is on the Mahatma Gandhi Road occupied now by the Cricket Ground or what they call the Officers' Mess. These two items of properties are being used by the Government of India. I would like to know what is the kind of commitment the Government of Mysore has entered into in regard to these properties?

Sri C. M. POONACHA.—So far as these two items of properties are concerned, one, namely, the South Parade Plot vests with the Government of India permanently.

Sri J. B. MALLARADHYA.—Have we got any hold on them or are we permanently committed to the Government of India so far as they are concerned?

Sri C. M. POONACHA.—So far as the area occupied by the Headquarters of the I.A.F. next to the Residency is concerned, negotiations have been completed and the Government of India have agreed to transfer them back to us. So far as the Corner House Plot is concerned, that has been agreed to be handed over to us.

Sri K. HANUMANTHAIYA.—That has been handed over during my time.

Sri C. M. POONACHA.—These are the two items of properties which do not find a place in the schedule appended to the notification to which I have already referred and the other items of properties are enumerated in the respective schedules of the notification and they are the permanent properties of the Government of India in the Defence Department. Whether they are properly utilised or not is a matter which is their concern and we have not very much to say about it.

Sri V. P. DEENADAYALU NAIDU.—Now that the Government was pleased to say that these properties vest with the Government of India, at the time of vesting these properties with the Government of India, has the Government of Mysore been compensated in any form by way of exchange of land or by way of money?

Sri C. M. POONACHA.—They belong to the Government of India. These lands were held by the Crown Representative, *i.e.*, the Viceroy and the Governor General and at the time of retrocession they were reserved and subsequently they vested with the Government of India. Till then they were held by the Government of India and they continue to be so.

Oath administered by Chief Minister to the Deputy Ministers.

Q.—1209. Sri U. S. NAYAK (Udipi).—

Will the Government be pleased to state :—

whether it is a fact that the Chief Minister administered the oath of office and secrecy to the three Deputy Ministers?

A.—Sri S. NIJALINGAPPA (Chief Minister).—The Chief Minister administered the oath of secrecy but not the oath of office.

Sri U. S. NAYAK.—Was the oath administered by means of delegated power?

*Sri S. NIJALINGAPPA.—I have got the power to administer the oath.

Sri U. S. NAYAK.—Will the Hon'ble Chief Minister be pleased to say the article of the Constitution under which the oath was administered?

Sri S. NIJALINGAPPA.—I will look into it and tell him.

Sri J. B. MALLARADHYA.—Article 165 empowers oath of secrecy to be administered by the Government. Under what provision of the Constitution can the Chief Minister administer the oath of office or of secrecy to the Deputy Ministers? I would like to know the provision of the Constitution under which this privilege was exercised?

Sri S. NIJALINGAPPA.—I think there are orders to that effect. I will look into the matter and tell him.

Sri C. J. MUCKANNAPPA.—The Chief Minister administered the *Oath of Secrecy*, but not the Oath of Office. May I know the difference between the two, Sir?

Sri S. NIJALINGAPPA.—It is obvious, Sir.

Sri C. J. MUCKANNAPPA.—There was a ruling given by the Chair in the same House, to the effect that the Chief Minister was entitled to administer the Oath of Secrecy. I want to know specifically the difference. What is meant by Oath of Secrecy and what is meant by the Oath of Office?

Sri S. NIJALINGAPPA.—I cannot be expected to give answers to these questions, Sir. It is quite obvious, because he holds the office of a Deputy Minister, it is the Oath of Secrecy. If he is administered the oath of Office, he would be able to participate in the proceedings of both Houses. In regard to this, I can only refer to the very elaborate ruling which the Chair was pleased to give on the 12th July last year.

Sri G. SIVAPPA.—If the Oath of Secrecy is administered, they have responsibility to the extent of being secret in official matters. May we understand that they do not hold any office, ?Sir

Sri S. NIJALINGAPPA.—They do hold the office of Deputy Ministers.

Sri G. VENKATAI GOWDA.—Is it not necessary that they should be administered the Oath of Office, Sir?

Mr. SPEAKER.—On this point, I have given a ruling long back. If the Oath of Office is administered by the Governor, the Deputy Ministers will have the right to sit in both Houses. If it is not so, though they will be called as Deputy Ministers, they will be in the nature of Parliamentary Secretaries. They will sit in the House of which they are members. That is the ruling I have given.

Mr. SPEAKER.—Question No. 1331. Member absent.

Sri G. B. SHANKAR RAO.—Sir, though the Hon'ble Member is not present, if the Chair is pleased to put the question, I would like to put a supplementary.

Mr. SPEAKER.—After all, in every case, I should not be made a scape goat. In very rare cases which are considered to be of very great importance I can do so. Of course, I can understand the Hon'ble Member Sri Shankar Rao considering it very important.

Sri G. B. SHANKAR RAO.—We are all lawyers and we are interested in the profession and therefore, I wanted to put a supplementary.

Mr. SPEAKER.—I was also a practising lawyer. I am a lawyer even now though I do not practise. I do not see that it is of such importance as to merit the intervention of the Chair.

Supply of Medicines, etc., to Government Hospital at Kollegal.

Q.—1440. Smt. KEMPAMMA (Kollegal).—

Will the Government be pleased to state:—

(*a*) the amount provided for the Government Hospital at Kollegal towards purchase of Medicine, etc., after the merger of Kollegal with the New Mysore State;

(*b*) whether it is a fact that the former Madras Government used to

(SMT. KEMPAMMA)

incur a monthly expenditure of Rupees four thousand towards supply of medicine, etc., to the above Hospital;

(c) the amount now spent every month towards supply of medicine, etc., to the above Hospital;

(d) whether they are aware of the difficulties being experienced by the public for want of adequate medical facilities in that place?

A.—Sri R. M. PATIL (Minister for Health).—

(a) Rs. 12,000.

(b) No.

(c) About Rs. 1,670 per mensem.

(d) No specific instance is reported.

ಶ್ರೀಮತಿ ಕೆಂಪಮ್ಮ.–ಮದ್ರಾಸು ಸರ್ಕಾರ ಎಷ್ಟು ಹಣ ಕೊಡುತ್ತಿತ್ತು ?

ಶ್ರೀ ಆರ್. ಎಂ. ಪಾಟೀಲ್.—1955-56ಕ್ಕೆ 17,044 ರೂಪಾಯಿ, 1956-57ಕ್ಕೆ 20,000 ರೂಪಾಯಿ. ಇದನ್ನು ಔಷಧಿಗಳನ್ನು ಕೊಳ್ಳುವುದರ ಸಲುವಾಗಿ ಮಂಜೂರು ಮಾಡಲಾಗಿದೆ.

Sri G. VENKATAI GOWDA.—May I know for what period this sum of Rs. 12,000 is provided?

ಶ್ರೀ ಆರ್. ಎಂ. ಪಾಟೀಲ್.—1957-58ನೆಯ ಸಾಲಿನ ಸಲುವಾಗಿ 12 ಸಾವಿರ ರೂಪಾಯಿ ಬಡ್ಜೆಟ್ಟಿನಲ್ಲಿ ಒದಗಿಸಲಾಗಿತ್ತು.

ಶ್ರೀಮತಿ ಕೆಂಪಮ್ಮ.—12 ಸಾವಿರ ರೂಪಾಯಿಗಳನ್ನು ಒದಗಿಸಲಾಯಿತೆಂದು ಹೇಳಿದೆ. ತಿಂಗಳಿಗೆ 1,670 ರೂಪಾಯಿಗಳೆಂದು ಹೇಳುವಾಗ ಇಷ್ಟು ಕಡಮೆ ಒದಗಿಸಿರುವುದಕ್ಕೆ ಕಾರಣವೇನು ?

ಶ್ರೀ ಆರ್. ಎಂ. ಪಾಟೀಲ್.—ಆ ಆಸ್ಪತ್ರೆ ಹೊಸದಾಗಿ ಮೈಸೂರು ರಾಜ್ಯಕ್ಕೆ ಸೇರಿದ್ದರಿಂದ ಅದರ ಬಗ್ಗೆ ವಿಶೇಷ ಖರ್ಚಿನ ಬಾಬುಗಳು ಗೊತ್ತಿಲ್ಲದೆ ಆ ವರ್ಷ ಆ ಪ್ರಕಾರ ಮಾಡಿದ್ದುಂಟು.

ಶ್ರೀ ಮಂಜಪ್ಪ ಉಲ್ಲಾಳ್.—ಅದೇ ರೀತಿ ಇತರ ಆಸ್ಪತ್ರೆಗಳಿಗೂ ವ್ಯವಸ್ಥೆ ಮಾಡಿದ್ದೀರಾ ?

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಮ ತಿ ಕೆ ೦ ಪ ಮ್ಮ.—ಇನ್ನುಮೇಲೆ ಕ್ರಮ ತೆಗೆದುಕೊಂಡು ಹೆಚ್ಚಿಸುವುದಕ್ಕೆ ಯೋಚನೆಮಾಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಅದರ ಬಗ್ಗೆ ಪ್ರಯತ್ನ ನಡೆದಿದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—'ಅಲಾಟ್.' ಮಾಡುವಾಗ ಸಂಬಂಧಪಟ್ಟ ಮೆಡಿಕಲ್ ಆಫೀಸರನ್ನು ಕೇಳುವುದಿಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ಇಂಡೆಂಟ್ ಬರುತ್ತದೆ. ಅದನ್ನು ಅವರು ಕಳುಹಿಸಲೇಬೇಕು. ಹಣವೆಷ್ಟುಬೇಕು, ಔಷಧಿ ಎಷ್ಟು ಬೇಕು ಎಂಬ ಬಗ್ಗೆ ಅಂದಾಜು ಪಟ್ಟಿ ಕಳುಹಿಸುತ್ತಾರೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಹಾಗೆ ತರಿಸಿಕೊಂಡಮೇಲೆ ಹಣ ಒದಗಿಸಿರುವುದು ಆವಶ್ಯಕತೆಗೆ ಅನುಗುಣವಾಗಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಅಷ್ಟಕ್ಕೆ ಕಳುಹಿಸಿರಬಹುದು.

ಶ್ರೀ ಜಿ. ದುಗ್ಗಪ್ಪ.—ಆ ಆಸ್ಪತ್ರೆಯ ಬಗ್ಗೆ ಔಷಧಿಗಾಗಿ ಎಷ್ಟು ಖರ್ಚಾಗಿದೆ? ಇತರ ಸಾಮಾನು ಒದಗಿಸುವುದಕ್ಕೆ ಎಷ್ಟು ಖರ್ಚಾಗಿದೆ ?

ಶ್ರೀ ಆರ್. ಎಂ. ಪಾಟೀಲ್.—ಅದನ್ನು ತಿಳಿದುಕೊಂಡು ಹೇಳಬೇಕು.

ಶ್ರೀಮತಿ ಲೀಲಾವತಿ ವೆಂಕಟೇಶ್ ಮಾಗಡಿ.—ಮದ್ರಾಸು ಸರ್ಕಾರಕ್ಕೆ ಈ ಆಸ್ಪತ್ರೆ ಸೇರಿದ್ದಾಗ ರೋಗಿಗಳ ಸಂಖ್ಯೆ ಪ್ರತಿತಿಂಗಳೂ ಎಷ್ಟಿತ್ತು ?

ಶ್ರೀ ಆರ್. ಎಂ. ಪಾಟೀಲ್.—ಅದರ ಬಗ್ಗೆ ಮಾಹಿತಿ ಇಲ್ಲ; ತಿಳಿದು ಹೇಳಬೇಕಾಗುತ್ತದೆ.

Promotion to the Post of Director of Medical Services.

Q.–1483. Sri G. VENKATAI GOWDA (Palaiyam) [On behalf of Sri M. C. NARASIMHAN (Kolar Gold Fields)].—

Will the Government be pleased to state:—

(a) whether they have promoted Sri V. R. Naidu as Director of Medical Services;

(b) whether they have taken seniority and ability into consideration while promoting;

(c) whether there are other senior doctors eligible for the said post;

(d) whether any representations have been received in regard to the same?

A.—Sri R. M. PATIL (Minister for Health).—

(a) No.

(b), (c) and (d) Does not arise.

Sri G. VENKATAI GOWDA.—Sir, is it not a fact that the Director of Medical Services now in office is a retired person?

Sri R. M. PATIL.—He is a retired person and he has been re-employed.

Sri G. VENKATAI GOWDA.—What is the term of employment?

Sri R. M. PATIL.—One year 1957-58 till November.

Sri K. PUTTASWAMY.—In answer to (c) you have said it does not arise. May I know, how it does not arise, Sir? Cannot an answer be given to this question?

Sri R. M. PATIL.—In view of the question and the answer furnished to part (b) of the question, which says: 'whether they have taken seniority also

into consideration while promoting' it has been replied that he is not promoted. Therefore the next question does not arise.

Sri G. VENKATAI GOWDA.—When the present Director of Medical Services was re-employed, was there not any other officer who was eligible to be promoted as such ?

Sri R. M. PATIL.—There are some officers. It all depends on circumstances.

Sri G. DUGGAPPA.—May I know, Sir, the names of Doctors who are above Dr. V. R. Naidu according to the seniority list ?

Sri R. M. PATIL.—If my Hon'ble friend wants, I shall supply.

1 P.M.

Sri C. J. MUCKANNAPPA.—May I know under what special circumstances the present Director of Medical Services was given extension ?

Sri R. M. PATIL.—There is no question of extension. He has been re-employed. The whole of the administration had to be re-organised and the present Director was in office. So, his services were required and we had to re-employ him. The question of preparation of Inter-State seniority list was also there. Therefore, we had to take that also into account and re-employ him for one year.

Sri G. DUGGAPPA.—If the Inter-State seniority list has been prepared, then could it not be possible to know from such list the number of doctors who are above Dr. V. R. Naidu or the place of Dr. V. R. Naidu in the list ?

Sri R. M. PATIL.—If the Hon'ble Member wants that information, I shall call for it and supply ?

ಶ್ರೀ ಜಿ. ಎಚ್. ಪುಟ್ಟಣ್ಣ.—ಸ್ವಾಮಿ, reappointment ಮತ್ತು re-employed ಅಂದರೆ ಏನು ? ಅವುಗಳಲ್ಲಿರುವ ವ್ಯತ್ಯಾಸವೇನು ?

Sri R. M. PATIL.—Substantially there is not much difference.

ಶ್ರೀ ಜಿ. ಎಚ್. ಪುಟ್ಟಣ್ಣ.—ಹೊಸದಾಗಿ ನವಕರಿಯಲ್ಲಿ ಸೇರಬೇಕಾದರೆ, 26 ವರ್ಷ ಅಥವಾ 28 ವರ್ಷ ವಯಸ್ಸಿನೊಳಗೆ ಇರಬೇಕೆಂಬ age limit ಇದೆ. ಆದರೆ ಈ age limit ಇಂಥವರಿಗೆ ಅನ್ವಯಿಸುವುದಿಲ್ಲವೇ ?

Sri R. M. PATIL.—This is a different question.

Sri J. P. SARWESH.—How many retired doctors are re-employed ignoring the seniority list ?

Mr. SPEAKER.—That does not arise.

Sri G. VENKATAI GOWDA.—Is it not a fact that the present Director of Medical Services got a promotion to this post after he was re-employed ?

Sri R. M. PATIL.—I do not think that my friend is correct. It is not so.

Sri V. P. DEENADAYALU NAIDU.—Is it the view of the Government that by placing Dr. V. R. Naidu as the Director of Medical Services, the Government would not be in a position to re-organise the Medical Department ?

Sri R. M. PATIL.—The Government has not yet contemplated such a point of view as my friend is now contemplating.

Sri K. PUTTASWAMY.—Are we to presume that there were no competent men in the Medical Department or in the Public Health Department to fill the post of Director of Medical Services when the Government thought of re-employing the present Director ?

Sri R. M. PATIL.—It is not necessary to presume so.

Sri K. PUTTASWAMY.—What was the compelling reason for the Government to re-employ the present Director ?

Sri R. M. PATIL.—I have already stated the reason.

ಶ್ರೀ ಟಿ. ಹನುಮಯ್ಯ.—ಎಷ್ಟು ವರ್ಷಗಳ ಸಲುವಾಗಿ re-employment ಮಾಡಲಾಗಿದೆ ?

ಶ್ರೀ ಆರ್. ಎಂ. ಪಾಟೀಲ್.—ಒಂದು ವರ್ಷ.

ಶ್ರೀ ಟಿ. ಹನುಮಯ್ಯ.—ಒಂದು ವರ್ಷ ಆದಮೇಲೆ ಏನು ಗತಿಯಾಗುವುದು ಸ್ವಾಮಿ ?

ಶ್ರೀ ಆರ್. ಎಂ. ಪಾಟೀಲ್.—ಇದು ವಿಚಾರ ಮಾಡತಕ್ಕ ಪ್ರಶ್ನೆ. ನಾನು ವಿಚಾರಮಾಡುತ್ತೇನೆ. ನೀವೂ ವಿಚಾರ ಮಾಡಬೇಕು.

Sri Y. MANJAYA SHETTY.—May I know whether the Government propose to implement the resolution of the Conference of the Ministers of Health to combine the post of Director of Medical Services and the Director of Public Health into one post ?

Mr. SPEAKER.—That is a different thing altogether.

Sri H. C. LINGA REDDY.—May I know whether such re-employment will cause dissatisfaction and demoralisation among officers in the Department ?

Sri R. M. PATIL.—That is a matter of opinion.

Sri G. DUGGAPPA.—May I know whether this re-employment has come in the way of promotion of other officers?

Sri R. M. PATIL.—No body is affected in this matter. The re-employment of the present officer will not come in the way of other officers getting promotions.

Sri D. ABDUL RASHID.—May I know whether this officer had given an application for being re-employed?

Sri R. M. PATIL.—Government has not received any application.

Sri D. ABDUL RASHID.—When the officer was re-employed was there not any requisition for re-employment?

Sri R. M. PATIL.—This is a matter to be looked into.

Machine burnt at Jog Electric Station.

Q.—1591. Sri S. KARIAPPA (Kanakapura).—

Will the Government be pleased to state:—

(*a*) whether it is a fact that 50,000 K.W. machine was burnt at Jog Electric Station in the month of January last;

(*b*) whether it is also a fact that the rewound machine also met with the same fate?

A.—Sri H. K. VEERANNA GOWDH (Minister for Public Works).—

(*a*) On 24th February, 1957 one 12,000 kw. machine failed due to damage in a few coils of the machine.

(*b*) No.

ಶ್ರೀ ಎಸ್. ಕರಿಯಪ್ಪ.—24ನೇ ಫೆಬ್ರವರಿ 1957 ನೇ ತಾರೀಖಿನ ದಿವಸ ಮೆಷಿನ್ ಫೇಲ್ ಆಯಿತು ಎಂದು ಉತ್ತರದಲ್ಲಿ ಹೇಳಿದೆ. ಅದಕ್ಕೂ ಮುಂಚೆ ಆ ಮೆಷಿನ್ ಏನಾದರೂ ಕೆಟ್ಟಿತ್ತೋ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ಇನ್‌ಫರ್ಮೇಷನ್ ಇಲ್ಲ.

ಶ್ರೀ ಎಸ್. ಕರಿಯಪ್ಪ.—ಡಿಪಾರ್ಟ್‌ಮೆಂಟಿನಿಂದ ರಿವೌಂಡ್ ಮಾಡಲಾಗಿತ್ತೋ ಅಥವಾ ಯಾವುದಾದರೂ ಕಂಪನಿಯವರಿಂದ ಮಾಡಲಾಗಿತ್ತೋ?

ಶ್ರೀ ಎಚ್. ಕೆ. ವೀರಣ್ಣಗೌಡ.—ಡಿಪಾರ್ಟ್‌ಮೆಂಟಿನವರು ಮಾಡಿದ್ದರು.

ಶ್ರೀ ಡಿ. ಟಿ. ಸೀತಾರಾಮರಾವ್.—ಎಷ್ಟು ಲುಕ್ಸಾನು ಆಗಿದೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ರಿವೌಂಡಿಂಗ್ ಮಾಡಿ ಯಂತ್ರವನ್ನು ಪರೀಕ್ಷಿಸಲಾಗುತ್ತಿದೆ.

Sri C. K. RAJAIAH SETTY.—Before getting it rewound, did the Government call for an estimate?

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ಮಾಹಿತಿ ತರಿಸಬೇಕು.

Sri C. K. RAJAIAH SETTY.—What is the reason for this burning?

ಶ್ರೀ ಎಚ್. ಕೆ. ವೀರಣ್ಣಗೌಡ.—ಶಾರ್ಟ್ ಸರ್ಕ್ಯೂಟ್ ಆಗಿರಬಹುದು. ತಕ್ಷಣ ಡಿಸ್‌ಕನೆಕ್ಟ್ ಮಾಡಲಾಯಿತು. ರಿವೌಂಡ್‌ಮಾಡಿ ಅದಷ್ಟು ಪರೀಕ್ಷೆ ಮಾಡುತ್ತಾ ಇದ್ದೇವೆ. ಸರಿಯಾಗಿದೆಂದು ಕಂಡುಬಂದರೆ ಸರ್ವಿಸ್ ತೆಗೆದುಕೊಳ್ಳುತ್ತೇವೆ.

ಶ್ರೀ ಎಫ್. ಎಚ್. ಮೊಹಸಿನ್.—ಕೆಲವೊಂದು ಸುರುಳಿಗಳಿಗೆ ಜಖಂ ಆಗಿದೆಯೆಂದು ಉತ್ತರದಲ್ಲಿ ಹೇಳಿದೆ. ಜಖಂ ಮನುಷ್ಯರಿಗೆ ಆಗುತ್ತದೆ. ಯಂತ್ರಕ್ಕೆ ಹೇಗೆ ಜಖಂ ಆಗುತ್ತದೆ?

ಅಧ್ಯಕ್ಷರು.—ಅದಕ್ಕೂಸಹ ಜಖಂ ಆಗುತ್ತದೆ.

Scales of Pay of Licentiate Medical Practitioners.

Q.—1620. Sri C. S. HULKOTI (Mundargi).—

Will the Government be pleased to state:—

(*a*) the revised scale of pay of L.M.P. qualified Medical Officers serving in the Old Mysore area;

(*b*) the scales of pay of the said officers coming from the four integrated areas?

A.—Sri R. M. PATIL (Minister for Health).—

(*a*) (1) Licentiate Medical Practitioners—Rs. 100-5-140-8-180-10-220.

(2) The Superintendents of Major institutions—Rs. 700-40-900-50-1,000.

(3) Surgeons—Rs. 550-30-700-40-860.

(4) Assistant Surgeons, Grade I—Rs. 250-25-450-30-600.

(5) Assistant Surgeons, Grade II—Rs. 150-10-300.

(*b*) (1) L.C.P.S. (equal to L.M.P.):

(a) Bombay—Rs. 120-8-160-10-300.

(b) Madras—No non-gazetted cadre.

(c) Coorg—Rs. 120-8-160-10-200-EB. 10-300.

(d) Hyderabad—No non-gazetted cadre.

(2) Civil Surgeons:

(a) Bombay—Rs. 350-30-650-45-1,100.

(b) Coorg—Rs. 410-30-590-30-770-40-850.

(c) Hyderabad. H. S.—Rs. 500-30-680-EB. 40-1,000.

(d) Madras—Rs. 450-75/2-750.

(3) Bombay—B.M.S. Class II—Rs. 220-15-400-20-500-25-650.

(4) Coorg—Civil Assistant Surgeons:

Rs. 260-15-440,

Rs. 200-25/2-400,

Rs. 275-25-30-650 (T.B. Specialist.)

(5) Hyderabad—Civil Assistant Surgeons, Class II—Rs. 350-450-25-600 (H.S.)

(6) Madras—Civil Assistant Surgeons, Class II—Rs. 200-25/2-400.

Sri C. S. HULKOTI.—May I take that the Civil Surgeons in Bombay are equal to Superintendents of major institutions in the old Mysore?

Sri R. M. PATIL.—The posts are not equated. So far as duties and pay are concerned they are on the same level.

Sri C. S. HULKOTI.—Have you received any representation to increase the starting pay of Civil Surgeons in the Bombay area?

Sri R. M. PATIL.—The Civil Surgeons of the Bombay area have not approached the Government and there are no representations.

ಶ್ರೀ ಎಚ್. ಜಿ. ನರಸಿಂಹೇಗೌಡ.—ಎಲ್ಲಾ ನೌಕರರ ಸ್ಕೇಲುಗಳನ್ನೂ ಯೂನಿಫಾರಂ ಸ್ಕೇಲುಗಳನ್ನಾಗಿ ಮಾಡುತ್ತೀರಾ ?

Sri R. M. PATIL.—That question has not been considered and the Government have not even contemplated that.

Dr. A. R. KARISIDDAPPA.—Is it not a fact that the L.M.P. doctors are getting only Rs. 75 even though the grade is Rs. 100-5-140-8-180-10-220?

Sri R. M. PATIL.—As local candidates, they get Rs. 75.

Dr. A. R. KARISIDDAPPA.—In the old Mysore Area the L.M.Ps. get only Rs. 100-5-140-8-180-10-220 and in the Bombay area L.C.P.S. get Rs. 120-8-160-10-200-10-300. May I know why there is difference?

Sri R. M. PATIL.—It is apparent. The Government prescribed so.

Sri J. B. MALLARADHYA.—Will the Government take steps to rationalise the scales of pay and if so, how soon?

Sri R. M. PATIL.—It takes some time.

ಶ್ರೀ ಎಂ. ಎಂ. ಪಾಟೀಲ್.—ಎಲ್. ಐ. ಎಂ. ಮೆಡಿಕಲ್ ಆಫೀಸರುಗಳಿಗೆ ಯಾವ ರೀತಿ ಸಂಬಳ ಸಾರಿಗೆಗಳಿವೆ ಎಂಬುದನ್ನು ಇಲ್ಲಿ ಕೊಟ್ಟಿಲ್ಲ. ಅವರ ಸಂಬಳ ಸಾರಿಗೆಯೇನೆಂಬುದನ್ನು ತಿಳಿಸುವುದಕ್ಕಾಗುತ್ತದೆಯೇ?

ಶ್ರೀ ಆರ್. ಎಂ. ಪಾಟೀಲ್.—ಆ ಪ್ರಶ್ನೆ ಕೇಳಲಿಲ್ಲ. ಉತ್ತರ ಕೊಟ್ಟಿಲ್ಲ. ಪ್ರಶ್ನೆ ಕೇಳಿದರೆ ಉತ್ತರಕೊಡಬಹುದು.

Sri G. VENKATAI GOWDA.—Is it not a fact that nurses in the Madras Karnatak area are getting more than the doctors in the old Mysore State?

Sri R. M. PATIL.—That question does not arise, because this is only a definite question as regards L.M.Ps. and also qualified doctors.

Mr. SPEAKER.—Question time is over.

QUESTIONS FOR ANSWERS ON THE DAY

(but not taken up)

Shortage of Accommodation for Government Employees at Arkalgud Taluk Headquarters.

Q.—544. **Sri PUTTE GOWDA** (Arkalgud).—

Will the Government be pleased to state:—

(*a*) whether they are aware of the shortage of accommodation for Government officers and employees at Arkalgud Taluk Headquarters;

(*b*) whether any estimate has been prepared and sanctioned in this regard;

(*c*) if so, the estimated cost thereof;

(*d*) if the estimate has been approved the reasons for failure to start the work;

(*e*) if not, whether they would take immediate steps to provide

(SRI PUTTE GOWDA)

accommodation facilities to Government officials at the above place?

A.— Sri H. K. VEERANNA GOWDH (Minister for Public Works).—

(a) Yes.

(b) No.

(c) & (d) Do not arise.

(e) This will be considered subject to availability of funds.

Seniority of Assistant Controllers of State Accounts Department.

Q.—833. Sri B. BASAVALINGAPPA (Bangalore South—S. C.).—

Will the Government be pleased to state:—

(a) whether any relative seniority of the Assistant Controllers of the State Accounts Department has been disturbed while fixing their ranks in 1955;

(b) the number of cases disturbed?

A.— Sri T. MARIAPPA (Minister for Finance).—

(a) No. In 1955, the tentative promotions of 12 officers made previously were regularised in consultation with the Public Service Commission and their relative ranks in the Cadre of Assistant Controllers fixed.

(b) Do not arise in view of reply to clause (a) above.

Legal Practitioners in the State.

Q.—1331. Sri V. S. PATIL (Belgaum I).—

Will the Government be pleased to state:—

(a) the number of legal practitioners in the State;

(b) the number of them that are practising at headquarters of each district?

A.— Sri B. VAIKUNTA BALIGA (Minister for Labour and Legal Affairs).—

(a) The number of legal practitioners on the rolls as on 25th July 1957 is 4,541.

(b) *Vide* statement appended.

Statement showing the number of legal practitioners practising at the Headquarters of each District.

Sl. No.	Headquarters of District	Number of legal practitioners practising
1	Bangalore	594
2	Tumkur	54
3	Kolar	19
4	Mysore	143
5	Hassan	25
6	Shimoga	22
7	Chitaldrug	16
8	Chickmagalur	9
9	Mandya	112
10	Bellary	74
11	Mercara	26
12	Mangalore	154
13	Gulbarga	53
14	Raichur	46
15	Bidar	37
16	Bijapur	104
17	Dharwar	137
18	Karwar	53
19	Belgaum	223

BUDGET FOR 1958-59—GENERAL DISCUSSION.

(Debate continued.)

*ಶ್ರೀ ಸಿ. ಎಂ. ಪೂಣಚ್ಚ (ಒಳಾಡಳಿತ ಮತ್ತು ಕೈಗಾರಿಕೆಯ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ಬಜೆಟ್ಟನ್ನು ಕುರಿತು ದೀರ್ಘವಾದಂಥ ಚರ್ಚೆ ನಡೆಯಿತು. ಆ ಸಂದರ್ಭದಲ್ಲಿ ಅನೇಕ ಮಾನ್ಯ ಸದಸ್ಯರು ತಮ್ಮ ಸ್ಪಷ್ಟವಾದಂಥ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಆ ಬಗ್ಗೆ ಪೋಲೀಸ್ ಇಲಾಖೆಯ ಮಟ್ಟಿಗೆ ಸ್ವಲ್ಪ ಕಟುತರವಾದ ಟೀಕೆಗಳು ಸಭೆಯಲ್ಲಿ ನಡೆದುವು. ಅವುಗಳನ್ನು ನಾನು ಸಾವಕಾಶವಾಗಿ ಕೇಳಿ ಆ ವಿಷಯದ ಬಗ್ಗೆ ಕೆಲವು ವಿವರಣೆಗಳನ್ನು ಈ ಸಭೆಗೆ ಒಪ್ಪಿಸಬೇಕೆಂದು ನಾನು ಈಗ ಇಲ್ಲಿ ನಿಂತಿದ್ದೇನೆ. ಈ ಮೊದಲೇ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆನಡೆದಾಗ ಕೆಲವು ರೀತಿಯಲ್ಲಿ ಇವೇ ಟೀಕೆಗಳು ವ್ಯಕ್ತವಾದುವು. ಆ ಸಂದರ್ಭದಲ್ಲಿ ನಾನು ಉತ್ತರವನ್ನು ಹೇಳುತ್ತಾ ಮುಖ್ಯವಾಗಿ ಪೋಲೀಸ್ ಇಲಾಖೆಗೆ ಅದರ ಕೆಲಸಕಾರ್ಯಗಳನ್ನು ನಡೆಸುವಂಥಾದ್ದರಲ್ಲಿರತಕ್ಕಂಥ ಅಡಚಣೆಗಳನ್ನು ವಿವರಿಸಿದೆ. ಆ ವಿವರಣೆ ಮಾನ್ಯ ಸದಸ್ಯರಿಗೆ ಬಹುಶಃ ಸಾಕಷ್ಟು ಪ್ರಮಾಣದಲ್ಲಿ ಆಗಲಿಲ್ಲವೆಂದು ನನಗೆ ತಿಳಿಯುತ್ತದೆ. ಸದಸ್ಯರು ಈ ಇಲಾಖೆಯಲ್ಲಿರುವಂಥ ಕೆಲವು ತೊಡಕು, ತೊಂದರೆಗಳನ್ನು ಇನ್ನೂ ಸರಿಯಾದ ರೀತಿಯಲ್ಲಿ ವಿಮರ್ಶೆಮಾಡಿ ತಿಳಿದುಕೊಳ್ಳುವುದಕ್ಕೆ ಆಸ್ಪದವಾಗಲಿಲ್ಲವೆಂಬ ಅಭಿಪ್ರಾಯ ಬಂದದ್ದರಿಂದ ಕೆಲವೊಂದು ವಿಷಯಗಳನ್ನು ಈಗ ಈ ಸಭೆಗೆ ಒಪ್ಪಿಸುತ್ತಿದ್ದೇನೆ.. ಅದೇನೆಂದರೆ, ಹೊಸರಾಜ್ಯ ನಿರ್ಮಾಣವಾದನಂತರ ಪೋಲೀಸ್ ಇಲಾಖೆಗೆ ಬಹಳ ಮಟ್ಟಿನ ಎಡರುತೊಡರುಗಳು ಬಂದು ಐದು ವಿಭಾಗಗಳಲ್ಲಿರುವ ಕಾರ್ಯನೀತಿ, ಆ ಭಾಗಗಳ ಉದ್ಯೋಗಗಳು, ನೌಕರರುಗಳ ವಿಲೀನತೆ, ಪೋಲೀಸ್ ಆಕ್ಟುಗಳು, ಪೋಲೀಸ್ ಮ್ಯಾನ್ಯುಯಲ್‌ಗಳು ಎಲ್ಲವೂ ವ್ಯತ್ಯಾಸವಿದ್ದುದರಿಂದ ಪ್ರತಿಯೊಂದು ಆಕ್ಟನ್ನೂ ಒಂದೊಂದು ಪ್ರದೇಶಕ್ಕೆ ಪ್ರತ್ಯೇಕ ಸ್ವರೂಪದಲ್ಲಿ ಆಚರಣೆಮಾಡಿ, ಎಲ್ಲಾ ಪ್ರಾಂತಗಳ ಕಾನೂನುಗಳನ್ನೂ ರೂಪುಗೊಳಿಸುವ ಹಾಗೆ ವ್ಯವಸ್ಥೆಮಾಡಿ, ಅವುಗಳನ್ನು ಒಂದು ಹತೋಟಿಯಲ್ಲಿ ತರುವಂಥ ಕೆಲಸ ಬಹಳ ಕಷ್ಟದಾಯಕವಾಗಿತ್ತು. ಈ ಕೆಲಸವನ್ನು ಇನ್ನೂ ಪೂರ್ಣಮಾಡುವುದಕ್ಕೆ ಸಾಧ್ಯವಾಗಿಲ್ಲ. ಆದರೂ ಈಗ ಬಹಳ ಮಟ್ಟಿಗೆ ತೊಂದರೆ ತೊಡಕುಗಳನ್ನು ನಾವು ನಿವಾರಿಸಿಕೊಂಡಿದ್ದೇವೆ, ಒಂದು ರೀತಿಯಲ್ಲಿ ಒಂದು ಹಿಡಿತದ ಆಡಳಿತಕ್ಕೆ ಪೋಲೀಸ್ ಇಲಾಖೆ ಬಂದಿದೆ ಎಂದು ಹೇಳುವುದಕ್ಕೆ ನನಗೆ ಸಂತೋಷವಾಗುತ್ತದೆ. ಏತಕ್ಕೆಂದರೆ, ಏಕೀಕೃತವಾದಂಥ ಕಾನೂನುಗಳು, ಪದ್ಧತಿಗಳು, ರೂಲ್ಸ್‌ಗಳು, ಆರ್ಡರುಗಳನ್ನು ಮಾಡುವಂಥ ಕೆಲಸ ಬಹಳ ಕಷ್ಟದಾಯಕವಾಗಿತ್ತು. ಉದಾಹರಣೆಗೆ ಹೇಳುವುದಾದರೆ, ಈಗಿರತಕ್ಕ ಪೋಲೀಸ್ ಮ್ಯಾನ್ಯುಯಲ್‌ಗಳನ್ನೆಲ್ಲಾ ಸೇರಿಸಿ ಸಂಸ್ಥಾನಕ್ಕೆಲ್ಲಾ ಒಂದೇ ಪೋಲೀಸ್ ಮ್ಯಾನ್ಯುಯಲ್ ಮಾಡಬೇಕಾದರೆ, ಪ್ರತಿಯೊಂದು ಭಾಗದ ಪೋಲೀಸ್ ಮ್ಯಾನ್ಯುಯಲ್ಲನ್ನೂ ಪರಿಶೀಲನೆಮಾಡಿ ಅದರ ಮುಖ್ಯಾಂಶಗಳನ್ನೆಲ್ಲಾ ಸರಿಯಾಗಿ ತಿಳಿದುಕೊಂಡು ಒಂದು ಏಕೀಕೃತವಾದ ಪೋಲೀಸ್ ಮ್ಯಾನ್ಯುಯಲ್ ಮಾಡಬೇಕಾಗಿದೆ. ಇವತ್ತು ಅದು ಸಿದ್ಧವಾಗುತ್ತಿದೆ. ಅದು ಇಷ್ಟರಲ್ಲಿಯೇ ಜಾರಿಗೆ ಬರುವುದಾಗಿದೆ. ಅದು ಸಾವಿರ ಪುಟದ ಒಂದು ದೊಡ್ಡ ಗ್ರಂಥ. ಅದಕ್ಕೆ 14 ಅಪೆಂಡಿಸೀಸ್ ಇವೆ. ಬೇಕಾದಷ್ಟು ಪರಿಶಿಷ್ಟಗಳಿವೆ. ಪ್ರತಿಯೊಂದು ಅಂಶವನ್ನೂ ಚೆನ್ನಾಗಿ ವಿಮರ್ಶೆಮಾಡಿ ಒಂದು ಏಕೀಕೃತವಾದ ಪೋಲೀಸ್ ಮ್ಯಾನ್ಯುಯಲ್ ಮಾಡುವಂಥ ಕೆಲಸ ಬಹಳ ಜವಾಬ್ದಾರಿಯುತವಾದುದು. ವಿಶೇಷವಾದ ಕಾಲ ಹಿಡಿಯುತ್ತದೆ. ಈ ವಿಚಾರವನ್ನು ಮಾನ್ಯ ಸದಸ್ಯರು ಸ್ವಲ್ಪಬಿಚ್ಚು ಮನಸ್ಸಿನಿಂದ ಆಲೋಚನೆಮಾಡಬೇಕಾಗಿದೆ. ಅದು ಬಹಳ ಕಷ್ಟಕರವಾದ ಕೆಲಸವೆಂಬುದು ಅವರಿಗೆ ತಿಳಿದಿದೆ. ಆದರೂ ಇದನ್ನು ಬಹಳ ಶೀಘ್ರದಲ್ಲಿಯೇ ಜಾರಿಗೆ ತರುವವರಾಗಿದ್ದೇವೆ. ಪೋಲೀಸ್ ಆಕ್ಟ್, ಹ್ಯಾಬಿಚ್ಯುಯಲ್ ಅಫೆಂಡರ್ಸ್ ಆಕ್ಟ್, ಇವುಗಳನ್ನು ಎಷ್ಟುಮಟ್ಟಿಗೆ ಚರ್ಚೆ ಮಾಡಬೇಕು ಎಂಬುದನ್ನು ಮೊದಲು ಗಮನಿಸಬೇಕು. ಏಕೀಕೃತವಾದ ಪೋಲೀಸ್ ಕಾನೂನುಗಳನ್ನು ಸಮಾವೇಶಗೊಳಿಸಲು ಪೋಲೀಸ್ ಆಕ್ಟ್, ಸಟ್ಟಾ ಮತ್ತು ಗ್ಯಾಂಬ್ಲಿಂಗ್ ಕ್ಲಬ್ಸ್ ಇವುಗಳಮೇಲೆ ಅನೇಕ ಟೀಕೆಗಳು ಬಂದುವು. ಇವುಗಳನ್ನೆಲ್ಲಾ ಏಕೀಕೃತಮಾಡುವಂಥ ಕೆಲಸ ಒಂದು ಉಚ್ಚಮಟ್ಟದಲ್ಲಿರಬೇಕು. ಇದು ತುಂಬ ಪರಿಣತೆಯನ್ನು ಹೊಂದಿ ಅನುಭವಸ್ಥರಾದ ಅಧಿಕಾರಿಗಳುಮಾಡುವಂತಹ ಕೆಲಸ. ಇಂಥಾದ್ದನ್ನು ನೆರವೇರಿಸುವಂಥಾದ್ದು ಬಹಳ ಕಷ್ಟದಾಯಕವಾಯಿತು. ಅದನ್ನು ನಾವು ಒಂದು ರೀತಿಯಲ್ಲಿ ಈಗ ನೆರವೇರಿಸಿದ್ದೇವೆ. ಈಗ ಅನೇಕ ಏಕರೀತಿಯಾದ ಹೊರ ಕಾನೂನುಗಳು ಜಾರಿಗೆ ಬಂದು ಪೋಲೀಸ್ ಆಡಳಿತದ ವ್ಯವಸ್ಥೆ ಇನ್ನೂ ಚೆನ್ನಾಗಿ ನಡೆಯುತ್ತದೆಂದು ನನಗೆ ಭರವಸೆ ಇದೆ. ಏತನ್ಮಧ್ಯೆ ನಮ್ಮ ಮಾನ್ಯ ಆರ್ಥಸಚಿವರು ಕಳೆದ ವರ್ಷ ಬಜೆಟ್ಟನ್ನು ಇಲ್ಲಿ ಮಂಡಿಸಿದಾಗ ನಮ್ಮ ಬಜೆಟ್ಟಿನ ಸ್ವರೂಪ ಒಂದು ತರಹವಾಗಿತ್ತು. ಅಷ್ಟರೊಳಗೆ ದೇಶದಲ್ಲಿದ್ದಂಥ ತೆರಿಗೆ ಕಾನೂನುಗಳನ್ನು ಏಕೀಕೃತಮಾಡಿ ಯೂನಿಫಾರಂ ಟ್ಯಾಕ್ಸೇಷನ್ ಆಫ್ ಲಾಸ್ ಎನ್ನುವಂಥಾದ್ದನ್ನು ರೂಪುಗೊಳಿಸಿ, ಈ ಸಭೆಯ ಮುಂದಿಟ್ಟು ಆದಷ್ಟು ಜಾಗ್ರತೆ ಮಂಜೂರು ಮಾಡಿ, ಅದನ್ನೆಲ್ಲಾ ಒಂದು ಸ್ತಿಮಿತಕ್ಕೆ ತಂದು ಅದನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ನಮ್ಮ ಅನೇಕ ಸಮಸ್ಯೆಗಳನ್ನು ಇಂಡಿಯಾ ಸರ್ಕಾರದ ಮುಂದೆ ಇಟ್ಟೆವು. ಅದಕ್ಕೆ ಬೇಕಾದಷ್ಟು ಹಣಸಹಾಯವನ್ನು ಪಡೆಯುವವರಾಗಿದ್ದೇವೆ. ನಮ್ಮಲ್ಲಿ ಇವತ್ತು ಒಂದು ಬ್ಯಾಲೆನ್ಸ್ಡ್ ಬಜೆಟ್ ಇದೆ. ಮಾನ್ಯ ಸದಸ್ಯರು ಈ ಅಂಕಿ ಅಂಶಗಳ ಜೋಡಣೆ ನೋಡಿ ಸಂಕಲನ ವ್ಯವಕಲನ ಮಾಡಿ ನಾವು ಇದನ್ನೂ ಒಪ್ಪಬಹುದೋ ಎಂಬ ಒಂದು ಶಂಕೆಯನ್ನು ಹೊಂದಿರಬಹುದು, ಆದರೆ ಆ ಮಾತು ಎಷ್ಟು ಸತ್ಯಾಂಶವುಳ್ಳದ್ದಾಗಿದ್ದೆಯೆಂಬುದನ್ನು ಮಾನ್ಯ ಸದಸ್ಯರು ಕಳೆದ ವರ್ಷ ತಮ್ಮ ಭಾಷಣಗಳನ್ನು ಈ ಬಜೆಟ್ ವಿಷಯದ ಮೇಲೆ ಮಾಡಿರುವುದನ್ನು ಎತ್ತಿ ನೋಡಿದರೆ ಚೆನ್ನಾಗಿ ಗೊತ್ತಾಗುತ್ತದೆ. ಖೋತಾ ಬಜೆಟ್ಟನ್ನು ಮಂಡಿಸಿದ್ದಾರೆಂದು ಅನೇಕರು ಟೀಕೆಮಾಡಿದ್ದಾರೆ. ಇವತ್ತು ಸಮತೂಕದ ಬಜೆಟ್ಟನ್ನು ಇಟ್ಟರೂ ಅದರಮೇಲೆಯೂ ತುಂಬ ಟೀಕೆಗಳಿವೆ. ಒಟ್ಟಿನಲ್ಲಿ ಯಾವುದಾದರೂ ಒಂದು ಕಾನೂನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ಬರಬೇಕಾದರೆ, ಅದರಲ್ಲಿಯೂ ಹೊಸದಾಗಿ ರಚಿತವಾದ ಮೈಸೂರು ಸಂಸ್ಥಾನದ ಅಂಕಿ ಅಂಶಗಳನ್ನು ನೋಡುವುದಾದರೆ, ಇಂತಹ ಸಮಯದಲ್ಲಿ ಈ ಕಟುತರವಾದ ಸಮಸ್ಯೆಗಳನ್ನು ಬಗೆಹರಿಸುವುದು ನ್ಯಾಯವಾಗಿಯೂ ಬಹಳ ಕಷ್ಟ. ಅದಕ್ಕಾಗಿಯೇ ತುಂಬ ಅನುಭವವನ್ನು ಹೊಂದಿ ಹೆಚ್ಚಿನ ಜವಾಬ್ದಾರಿಯನ್ನು ಹೊತ್ತು ಆ ವಿಷಯದಲ್ಲಿ ಸಾಮರ್ಥ್ಯವನ್ನುಳ್ಳಂಥ ಆಫೀಸರುಗಳನ್ನು ನಾವು ನೇಮಿಸಿದ್ದು. ಅಲ್ಲದೆ ಇಂತಹ ಕಷ್ಟಕರವಾದ ಕೆಲಸಗಳನ್ನು ಪೂರ್ಣಗೊಳಿಸು

(ಶ್ರೀ ಸಿ. ಎಂ. ಪೂಣಚ್ಚ)

ವುದಕ್ಕೋಸ್ಕರ ಒಂದು ವರ್ಷದ ಅವಧಿಯನ್ನು ಸಹ ಹೆಚ್ಚಿಗೆ ಕೊಟ್ಟಿದ್ದು. ಅದು ಬಹಳ ಅನಿವಾರ್ಯವಾಗಿತ್ತು ಮತ್ತು ಬಹಳ ಅವಶ್ಯಕವಿತ್ತು. ಸರ್ಕಾರದಲ್ಲಿ ರೂಲ್ಸ್ ಗಳನ್ನು, ಕಾಯಿದೆ, ಕಾನೂನುಗಳನ್ನು ಸಮತೂಕದಲ್ಲಿಡದೆ ಮುಂದಿನ ಆಡಳಿತ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ಸಮರ್ಪಕವಾದ ರೀತಿಯಲ್ಲಿ ಎಲ್ಲಾ ವ್ಯವಸ್ಥೆಗಳನ್ನು ಮಾಡಿದ್ದೇ ಆದರೆ, ಮುಂದೆ ಆಡಳಿತವನ್ನು ಸುವ್ಯವಸ್ಥಿತವಾದ ರೀತಿಯಲ್ಲಿ ನಡೆಸುವುದಕ್ಕೆ ಸಾಧ್ಯವಾಗುತ್ತದೆ, ಸುಲಭವಾಗುತ್ತದೆ ಮತ್ತು ಸುಗಮವಾಗುತ್ತದೆ. ಈ ದೃಷ್ಟಿಯಿಂದ ಕೆಲಸಮಾಡುವ ಹಿರಿಯ ಮತ್ತು ಅನುಭವಸ್ಥರಾದ ಅಧಿಕಾರಿಗಳನ್ನು ಇಟ್ಟುಕೊಂಡು ಅನೇಕ ಕೆಲಸಗಳನ್ನು ಪರಿಪೂರ್ಣವಾಗಿ ಮತ್ತು ಸಮರ್ಪಕವಾಗಿ ಮಾಡಿ ಕೊಳ್ಳುತ್ತಿದ್ದೇವೆ. ಅನೇಕ ಕಷ್ಟತರವಾದ ಕೆಲಸಗಳು ಈಗಾಗಲೇ ನೆರವೇರಿವೆ ಎಂದು ನಾನು ಧೈರ್ಯವಾಗಿ ಹೇಳಬಲ್ಲೆ.

ಮುಂದೆ ಇವುಗಳೆಲ್ಲಾ ಕಾರ್ಯರೂಪದಲ್ಲಿ ಬರುವ ಕಾಲಕ್ಕೆ ಪೋಲೀಸ್ ಆಡಳಿತ ಇನ್ನೂ ಹೆಚ್ಚಿನ ವ್ಯವಸ್ಥೆಯಿಂದ ಕೂಡಿ ಹೆಚ್ಚಿನ ಉತ್ಸಾಹದಿಂದ ಇಲ್ಲಿ ಕೆಲಸ ನಡೆಯುತ್ತದೆಯೆಂದು ನಾನು ಧೈರ್ಯವಾಗಿ ಹೇಳಬಲ್ಲೆ. ಈಗಲೂ ಕೂಡ ಪೋಲೀಸಿನವರು ಕೆಲಸಮಾಡಿದಂಥ ವಿಷಯದಲ್ಲಿ ಸ್ವಲ್ಪ ಮಟ್ಟಿಗೆ ಅಂಕಿ ಅಂಶಗಳನ್ನು ನಾವು ಆಲೋಚನೆಮಾಡುವುದಾದರೆ ಕೆಲಸ ಚೆನ್ನಾಗಿ ನಡೆದಿದೆ ಎಂದು ಧೈರ್ಯವಾಗಿ ಹೇಳಬಲ್ಲೆ. ಕೆಲವರು ಹೇಳಿದರು ಪೋಲೀಸ್ ಇಲಾಖೆಯಲ್ಲಿ ಯಾವುದೇ ರೀತಿಯಲ್ಲಿ ಲಂಚಗುಳಿತನ ಇಲ್ಲ, ಯಾವುದೇ ರೀತಿಯಲ್ಲಿ ಅವ್ಯವಸ್ಥೆಯಿಲ್ಲ, ಎಲ್ಲಾ ವ್ಯವಸ್ಥೆಯಿಂದ ಕೂಡಿದೆ ಎಂದು ಮುಂಗಮುಷ್ಟಿ ಹಿಡಿದು ವಾದ ಮಾಡುತ್ತಿದ್ದಾರೆಂದು ಹೇಳಿದರು. ಇಲ್ಲಿ ಹಾಗೆ ಹೇಳಲಿಲ್ಲ, ಕಳೆದ ವರ್ಷವೂ ಕೂಡ ಇದೇ ರೀತಿ ಬಡ್ಜೆಟ್ ಭಾಷಣದಲ್ಲಿ ನಾನು ಉತ್ತರ ಕೊಡುತ್ತಾ ಈ ಮಾತನ್ನು ಹೇಳಿದ್ದೇನೆ. ಪೋಲೀಸ್ ಇಲಾಖೆಯಲ್ಲಿ ಕೆಲವೊಂದು ಮಟ್ಟಿನ ಅವ್ಯವಸ್ಥೆ ಇದೆ. ಅದನ್ನು ಸರಿಪಡಿಸುವಂಥಾದ್ದು ನಮ್ಮ ಮುಖ್ಯವಾದಂತಹ ಉದ್ದೇಶ. ಆದರೆ ಅಂ ಅವ್ಯವಸ್ಥೆಗಳನ್ನು ನಾವು ಟೀಕೆಯ ಸುರಿಮಳೆಯಿಂದ ಸರಿಪಡಿಸುತ್ತೇವೆಂದರೆ ಒಪ್ಪಲಿಕ್ಕಿಲ್ಲ. ಟೀಕೆ ಮಾಡಿ, ಬೇಕಾದಷ್ಟು ಟೀಕೆಮಾಡಿ, ಯಾವ ರೀತಿ ವ್ಯವಸ್ಥೆ ಮಾಡಬೇಕು, ಯಾವ ರೀತಿ ಅದನ್ನು ಸುಲಲಿತವಾಗಿ ನಡೆಸಬೇಕು ಯಾವ ರೀತಿ ಕ್ರಮ ಕೈಗೊಳ್ಳಬೇಕು ಎನ್ನುವ ರೀತಿಗೆ ಒಬ್ಬರಾದರೂ ಕೂಡ ಒಂದು ರಚನಾತ್ಮಕ ಸಲಹೆಯನ್ನಾಗಲೀ ಒಂದು ವ್ಯವಹಾರಿಕ ಅಭಿಪ್ರಾಯವನ್ನಾಗಲೀ ಇಟ್ಟಿಲ್ಲ. ಪ್ರತಿಯೊಂದು ಕಡೆಯೂ ಲಂಚ ಇದೆ, ಪ್ರತಿಯೊಂದು ಕಡೆಯೂ ಶಿಥಿಲತೆ ಇದೆ, ಕೆಲಸ ನಡೆಯುತ್ತಿಲ್ಲ ಎಂದು ಬಹಳ ಮಂದಿ ಹೇಳಿದರು.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ರಚನಾತ್ಮಕ ಸಲಹೆ ಯಾರೂ ಕೊಟ್ಟಿಲ್ಲವೆಂದು ಹೇಳಿದರು. ಈ ರೀತಿ ಮಾಡಬೇಕು ಎಂದು ನಾನೇ ಹೇಳಿದ್ದೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಒಡೆದು ಹೋದ ಮಡಕೆಯನ್ನು ಸರಿಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಸಿ. ಎಂ ಪೂಣಚ್ಚ.—ಏತಕ್ಕೆ ನಾನು ಆ ಮಾತನ್ನು ಹೇಳಿದೆ ಎಂದರೆ, ಇದನ್ನು ಇನ್ನು ಸ್ವಲ್ಪ ಉದಾಹರಣೆಯ ಮೂಲಕ ಹೇಳಬೇಕಾಗುತ್ತದೆ. ಅದು ಏನೆಂದರೆ, ಬಹಳ ಮಾನ್ಯ ಸದಸ್ಯರು ಬಂದು ಎಷ್ಟೋ ವಿಷಯದಲ್ಲಿ ನನ್ನೊಡನೆ ಚರ್ಚೆಮಾಡಿದ್ದಾರೆ. ಎಷ್ಟೋ ವಿಷಯಗಳಲ್ಲಿ ಅವರ ಅಭಿಪ್ರಾಯವನ್ನು ತಿಳಿದುಕೊಂಡಿದ್ದೇನೆ. ಈವರೆಗೆ ಇಲ್ಲಿ ಹೇಳಿದಂಥಾ ಎಷ್ಟೋ ಟೀಕೆಗಳನ್ನು ಯಾರೊಬ್ಬರೂ ಬಂದು ನನಗೆ ಹೇಳಲಿಲ್ಲ. ನಮ್ಮ ಮಿತ್ರರು ಹೇಳಿದಹಾಗೆ, ಸದಸ್ಯರು ಮಾತ್ರ ಬಂದು ಒಬ್ಬ ಸಬ್ ಇನ್ಸ್‌ಪೆಕ್ಟರ ಟ್ರಾನ್ಸ್‌ಫರ್ ನಿಲ್ಲಿಸಬೇಕು. ಇನ್ನೊಂದು ಟ್ರಾನ್ಸ್‌ಫರ್ ಮಾಡಬೇಕು ಎನ್ನುವ ವಿಚಾರದಲ್ಲಿ ಹೇಳಿದರೇ ವಿನಾ ಈ ರೀತಿ ನ್ಯೂನತೆ ಇಂಥಾದ್ದರಲ್ಲಿ ಇದೆ, ಇಂಥಾದ್ದನ್ನು ಸರಿಪಡಿಸಬೇಕು ಎನ್ನುವುದನ್ನು ನನ್ನ ಮುಂದೆ ಹೇಳಲಿಲ್ಲ. ಕೆಲವರು ಹೇಳಿದ್ದಾರೆ. ಹೇಳಿದೊಡನೆಯೇ ತಕ್ಷಣ ನಾವು ಅದಕ್ಕೆ ಬೇಕಾದಂತಹ ಕಾರ್ಯವನ್ನು ತೆಗೆದುಕೊಂಡು ಆ ವಿಷಯವನ್ನು ಪರಿಶೀಲನೆ ಮಾಡಿದ್ದೇವೆ. ಉದಾಹರಣೆಗೆ ಹೇಳುವುದಾದರೆ ನನ್ನ ಮಾನ್ಯ ಮಿತ್ರರಾದಂಥ ಶ್ರೀ ವೆಂಕಟರೆಡ್ಡಿಯವರು ಕೆಲವು ಸಮಯದ ಹಿಂದೆ ಬಂದು ನನಗೆ ಒಂದು ವಿಷಯ ತಿಳಿಸಿದರು.

ಶ್ರೀ ಜಿ. ಶಿವಪ್ಪ (ಚಿತ್ರದುರ್ಗ).—ಏನೂ ಸಲಹೆ ಇಡಲಿಲ್ಲ ಎಂದು ಹೇಳಿದರು. ರಚನಾತ್ಮಕವಾದ ಸಲಹೆಗಳನ್ನು ಅನೇಕ ಜನರು ಮಾಡಿದ್ದಾರೆ; ಸ್ಥಳ ಸನ್ನಿವೇಶ ಹೇಳುವುದಿಲ್ಲ. ಹೇಳತಕ್ಕದ್ದು ಸೂಕ್ತವಲ್ಲ. ಬೇಕಾದಷ್ಟು ಸಲಹೆ ಮಾಡಿದ್ದೇವೆ. ತಾವು ಯಾವುದೂ ಜಾರಿ ಮಾಡಿಲ್ಲ. I am not prepared to disclose the place where we approached him. But I believe it is not necessary to mention the place.

ಶ್ರೀ ಸಿ. ಎಂ. ಪೂಣಚ್ಚ.—ನಾನು ಹೇಳಿದ್ದೇನೆ, ಕೆಲವರು ಹೇಳಿದ್ದಾರೆ ಎಂದು. ಆದರೆ ಬಹುಮಟ್ಟಿಗೆ ನನ್ನ ಜೊತೆಯಲ್ಲಿ ಮಾತುಕತೆಯನ್ನು ಆಡುವಾಗ ಬೇರೆ ವಿಷಯ ಪ್ರಸ್ತಾಪ ಮಾಡಿದರೇ ವಿನಾ ಯಾವ ಯಾವ ನ್ಯೂನತೆಗಳು ಅವರವರ ಸ್ಥಳದಲ್ಲಿ, ಅವರವರ ಊರಿನಲ್ಲಿ ಇವೆ ಎನ್ನುವುದನ್ನು ಮಾತ್ರ ಹೇಳಲಿಲ್ಲ.

ಶ್ರೀ ಜಿ. ದುಗ್ಗಪ್ಪ (ಚಿತ್ರದುರ್ಗ—ಅನುಸೂಚಿತ ಜಾತಿಗಳು).—ತಾವು ಪ್ರವಾಸ ಬಂದಾಗ ಏನೇನು ನಡೆಯುತ್ತದೆ ಎಂಬುದನ್ನು ವಿಶದವಾಗಿ ಮನದಟ್ಟು ಆಗುವ ರೀತಿಯಲ್ಲಿ ಹೇಳಿ ರಚನಾತ್ಮಕ ಸಲಹೆ ಕೊಟ್ಟಿದ್ದೇವೆ. ತಮಗೆ ನೆನಪು ಇರಬಹುದು.

ಶ್ರೀ ಸಿ. ಎಂ. ಪೂಣಚ್ಚ.—ಇಲ್ಲ ಎಂದು ಹೇಳುವುದಿಲ್ಲ. ಮಾನ್ಯ ಶ್ರೀ ವೆಂಕಟರೆಡ್ಡಿಯವರು ಅತಿ ಮುಖ್ಯವಾದ ಕೆಲವು ವಿಷಯಗಳನ್ನು ತಿಳಿಸಿದರು. ಇಂಥ ಕಡೆಯಲ್ಲಿ ಇಂಥ ಕೆಲಸಕಾರ್ಯ ನಡೆಯುತ್ತದೆ, ಭಟ್ಟಿ ಸಾರಾಯಿ ಹೇಳಲಾಗದ ಪ್ರಮಾಣದಲ್ಲಿ ನಡೆಯುತ್ತದೆ, ಇವೊತ್ತು ನನಗೆ ಸಹಾಯಕೊಟ್ಟರೆ ಇವೊತ್ತು ರಾತ್ರಿ ಪರಿಪೂರ್ಣವಾಗಿ ವಿಶದೀಕರಿಸಿ ಸ್ಪಷ್ಟಮಾಡುತ್ತೇನೆ, ಅಲ್ಲಿರುವ ಪೋಲೀಸಿನವರ ಕೈಯ್ಯಿಂದ ಅದನ್ನು ತಡೆಗಟ್ಟಲು ಆಗುವುದಿಲ್ಲ, ಸ್ಪೆಷಲ್ ಪೋಲೀಸ್ ಸಹಾಯ ಕೊಡಬೇಕು ಎಂದು ಹೇಳಿದರು.

Sri K. H. VENKATA REDDY (Gowribidanur).—On a point of order. ಹೆಸರು ಹೇಳಬಾರದು ಎಂದು ತಾವೇ ಹೇಳಿದಿರಿ. ನಾವು ಅವರ ಚಿಕ್ಕಪ್ಪನವರ ಹೆಸರು ಹೇಳಿದರೆ ಎಷ್ಟು ಕೋಪಮಾಡಿಕೊಳ್ಳುತ್ತಾರೆ! ಈಗ ವೆಂಕಟರೆಡ್ಡಿ ಎಂದು ಹೌಸ್‌ನಲ್ಲಿ ಹೇಳುತ್ತಾರೆ.

ಅಧ್ಯಕ್ಷರು.—ಶ್ರೀ ವೆಂಕಟರೆಡ್ಡಿಗಳು ಸೂಚನೆ ಮಾಡಿದರು ಎಂದು ಹೇಳಿದರು.

ಶ್ರೀ ಕೆ. ಎಚ್. ವೆಂಕಟರೆಡ್ಡಿ.—ಒಬ್ಬ ಸದಸ್ಯರು ಎಂದು ಏತಕ್ಕೆ ಹೇಳಲಿಲ್ಲ? ವೆಂಕಟರೆಡ್ಡಿ ಎಂದು ಹೆಸರು ಹೇಳಲು ಕಾರಣವೇನು?

ಶ್ರೀ ಸಿ. ಎಂ. ಪೂಣಚ್ಚ.—ಯಾವ ರೀತಿ ಕೆಲಸ ನಡೆಯುತ್ತದೆ, ಪೋಲೀಸಿನವರ ಮೇಲಿರುವ ಆರೋಪಣೆಗೆ ಯಾವ ರೀತಿಯ ಕೆಲವು ಬೇರೆ ಕಾರಣಗಳ ಕೂಡ ಇವೆ ಎನ್ನುವ ವಿಷಯವನ್ನು ಸ್ಪಷ್ಟ ಮಾಡಲಿಕ್ಕೆ ನಾನು ಮಾನ್ಯ ಸದಸ್ಯರ ಎದುರಿಗೇ ಈಗ ಹೇಳುತ್ತಿದ್ದೇನೆ. ಬಟ್ಟ ಸಾರಾಯಿ ವಿಷಯ ಬಂತು. ನಾವು ಕಾರ್ಯಾಚರಣೆ ಮಾಡುವುದೇ ಇಲ್ಲ ಎಂದು ಸುಮ್ಮನೆ ಪುಕಾರು ಬಂತು. ಮಾನ್ಯ ಸದಸ್ಯರು ಗೌರವ ಸದಸ್ಯರು ಹೇಳಿದರೂ ಕೂಡ ಗಮನಕ್ಕೆ ತೆಗೆದುಕೊಳ್ಳದೆ ಕಾರ್ಯಚ್ಯುತಿ ಆಗುತ್ತಿದೆ ಎಂದು ಸಭೆಯ ಅಭಿಪ್ರಾಯ ಇದೆ. ಅದಕ್ಕೋಸ್ಕರ ಹೇಳುತ್ತಿದ್ದೇನೆ. ಅವರು ಬಂದು ಇಂಥಾದ್ದು ನೋಡಿ ಎಂದು ಹೇಳಿದ ತಕ್ಷಣ ಅವರ ಸಲಹೆ ತೆಗೆದುಕೊಂಡು ಇಷ್ಟೇ ಸಮಯಕ್ಕೆ ಹೋಗಬೇಕು ಎನ್ನುವ ವಿವರಗಳನ್ನು ಪಡೆದುಕೊಂಡು ಇಲ್ಲಿಂದ ಜನರನ್ನು ಕಳುಹಿಸಿದೆವು. ಇಂಥ ಕಡೆ 11 ಘಂಟೆಗೆ ಸೂಚನೆ ಮಾಡುವಾಗ ಹೋಗಿ ಕಾರ್ಯಕ್ರಮ ಮಾಡತಕ್ಕದ್ದು ಎಂದು ಇಲ್ಲಿಂದಲೇ ಕಳುಹಿಸಿದೆವು. ಆಧಾರಯುತವಾಗಿ ಹೇಳುತ್ತೇನೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ (ನಂಜನಗೂಡು).—ಸ್ಟೈರ್‌ಲೆಸ್ ತಮ್ಮ ಇಲಾಖೆಯಲ್ಲಿ ಇದೆಯಲ್ಲವೇ?

Sri C. M. POONACHA.—In that way anything is possible and everything could be doubted. ಅದರಿಂದ ಏನೂ ಪ್ರಯೋಜನವಾಗಿಲ್ಲ. ಅವರು ಹೇಳಿದ ದಿವಸ ಟೈಮಿಗೆ ಸರಿಯಾಗಿ ಇಲ್ಲಿಂದಲೇ ಸ್ಪೆಷಲ್ ಸ್ಕ್ವಾಡ್ ಹೋಗಿತ್ತು. ಏತಕ್ಕೋಸ್ಕರ ಹಾಗೆ ಆಯಿತು? ತಿಳಿಯುವುದಕ್ಕೆ ಪ್ರಯತ್ನ ಮಾಡಿದೆ. ಬಹಳ ಸೋಜಿಗದ ಮಾತು. ಯಾರ ವಿಷಯದಲ್ಲಿ ಅಪಾದನೆಯನ್ನು ಮಾನ್ಯ ಸದಸ್ಯರು ನನ್ನ ಸಮಕ್ಷಮ ಹೇಳಿದರೋ ಅವರೆಲ್ಲಾ ಟೆನೆಂಟ್ಸ್ ಒಡತನದ ಸ್ಥಿತಿಯಲ್ಲಿರುವವರು. ಅವರನ್ನು ಯಾವ ರೀತಿಯಿಂದಲಾದರೂ ಮನೆಯಿಂದ ಹೊರದೂಡಬೇಕೆಂದು ಆಲೋಚಿಸಿ ನಮಗೆ ಪುಕಾರುಕೊಟ್ಟು ನಮ್ಮಿಂದ ಅವರ ಮನೆಯನ್ನು ಜಫ್ತಿ ಮಾಡುವ ಸಲುವಾಗಿ ಹಾಗೆ ಮಾಡಿದರು.

Sri C. J. MUCKANNAPPA (Gubbi).—I rise to a point of order. It is an insinuation against a particular member of this House. If there is any complaint the tenants can go before the Amildar. The police need not go to the rescue of the tenants.

(Several members rose)

Mr. SPEAKER.—Order, order. If any Hon'ble Member wants to raise a point of order, he is free to do so. If Hon'ble Members at the same time raise several points of order, I warn them that is not the way that the Hon'ble Members should behave. I can understand one Hon'ble Member rising up and putting forth his point of view or point of order. But several members standing up and making noise is not in accordance with the dignity of the House.

I request once again that Hon'ble Members should not put such a behaviour which will not be in consonance with the dignity and decorum of the House. So far as the point of order raised by Sri Mukkannappa is concerned, I cannot agree with him, because the Hon'ble Minister is not making any insinuation; he is drawing only an inference.

Sri G. VENKATAI GOWDA (Palaiyam).—May I know whether inferences which affect a member could be drawn?

Mr. SPEAKER.—If the Hon'ble Member can speak against the Hon'ble Minister, the Minister may also make remarks against the member.

ಶ್ರೀ ಸಿ. ಎಂ. ಪೂಣಚ್ಚ.—ಈ ಪ್ರಕಾರವಾಗಿ ಏಕೆ ಇದನ್ನು ಹೇಳುತ್ತಾ ಇದ್ದೇನೆ ಎಂದರೆ ಸಾಧಾರಣವಾದಂಥ ಆಪಾದನೆಗಳನ್ನು ಇಲ್ಲಿ ಮಾಡುತ್ತಾರೆಯಲ್ಲಾ ಇದರಲ್ಲಿ ಹೆಚ್ಚಿನ ಮಟ್ಟಿಗೆ ಸತ್ಯಾಂಶವಿದೆಯೋ ಎಂಬುದನ್ನು ಪರಿಶೀಲನೆಮಾಡಿ ನೋಡುವಾಗ, ನಾನೇ ಖುದ್ದಾಗಿ, ಸ್ವಂತವಾಗಿ ನೋಡಿ, ತಿಳಿದಿದ್ದರಲ್ಲಿ ಇದರಲ್ಲಿ ಹೆಚ್ಚಿನಮಟ್ಟಿಗೆ ಉತ್ಪ್ರೇಕ್ಷೆ ಇರುತ್ತದೆ ಎಂಬುದನ್ನು ಸಭೆಗೆ ತೋರಿಸುತ್ತಾ ಇದ್ದೇನೆ. ಸಾಧಾರಣ ಅರ್ಜಿಗಳು ಬರುತ್ತವೆ, ಅವನ್ನು ಪರಿಶೀಲನೆ ಮಾಡುತ್ತೇವೆ. ಜವಾಬ್ದಾರಿಯುತ ಮಾನ್ಯ ಸದಸ್ಯರು ಹೇಳುವಂಥ ವಿಷಯದಲ್ಲಿ ನಾವು ತಕ್ಷಣ ಕಾರ್ಯಕ್ರಮವನ್ನು ಕೈಕೊಂಡು ಮುಂದೆ ಆ ಕಾರ್ಯಕ್ರಮವನ್ನು ಮುಂದುವರಿಸುವಂಥ ಕಾಲದಲ್ಲಿ ಈ ಪ್ರಕಾರವಾದರೆ ಹೇಗೆ ಈ ಪೋಲೀಸ್ ಇಲಾಖೆ ನಡೆಸಬೇಕು ಎನ್ನುವಂಥಾದ್ದನ್ನು ಸಭೆಗೆ ತೋರಿಸುತ್ತಾ ಇದ್ದೇನೆ. ಏಕೆಂದರೆ ಈ ವಿಷಯದಲ್ಲಿ ಹೇಳಿರುವಂಥ ಮಂಚೇನಹಳ್ಳಿ ಸಬ್ ಇನ್ಸ್‌ಪೆಕ್ಟರ್ ವಿಚಾರವಾಗಿ . . .

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ಮಾನ್ಯ ಸದಸ್ಯರು ಈ ಸಮಾಚಾರ ಕೊಡುವಾಗ ಏಪ್ರಿಲ್ 1ನೆಯ ತಾರೀಖಿನ ದಿವಸ ಕೊಟ್ಟರೇ? ಯಾವಾಗ ಕೊಟ್ಟರು?

(ಸಭೆಯಲ್ಲಿ ನಗು!)

ಶ್ರೀ ಸಿ. ಎಂ. ಪೂಣಚ್ಚ.—ಅದನ್ನು ಅವರನ್ನೇ ಕೇಳಿ! ಏಕೆ ಇದನ್ನು ಹೇಳುತ್ತಾ ಇದ್ದೇನೆ ಎಂದರೆ ಮಂಚೇನಹಳ್ಳಿ ಪೋಲೀಸ್ ಸಬ್ ಇನ್ಸ್‌ಪೆಕ್ಟರನ್ನು ಟ್ರಾನ್ಸ್‌ಫರ್ ಮಾಡಲಿಲ್ಲ ಎಂದು ಕೆಲವು ಸದಸ್ಯರು ಆ ವಿಷಯ ಎತ್ತಿದರು. ಇದೆಲ್ಲಾ ಅದಕ್ಕೆ ಹೊಂದಿಕೊಂಡಿದೆ. ಏಕೆಂದರೆ ಮಂಚೇನಹಳ್ಳಿ ವೆಂಕಟರೆಡ್ಡಿಯವರ ಹಳ್ಳಿ. ಅಲ್ಲಿರುವಂತಹ ಪೋಲೀಸ್ ಇನ್ಸ್‌ಪೆಕ್ಟರ್ ಒಬ್ಬರನ್ನು ಟ್ರಾನ್ಸ್‌ಫರ್ ಮಾಡಲಿಲ್ಲ ಎಂದು ಅವರ ಮೇಲೂ ಕೂಡ ಬೇಕಾದಷ್ಟು ಇಲ್ಲಿ ಪುಕಾರು ಮತ್ತು ಟೀಕೆ ಬಂತು. ಅದಕ್ಕೇ ಹೇಳುತ್ತಾ ಇದ್ದೇನೆ. ಪೋಲೀಸ್ ಆಫೀಸರುಗಳಿಗೆ ಅದರಲ್ಲೂ ಕೆಳಮಟ್ಟದ ಆಫೀಸರುಗಳಿಗೆ ಕೆಲಸ ಮಾಡುವುದಕ್ಕೆ ಎಷ್ಟೋ ಕಷ್ಟ ಇದೆ. ಮುಂಚೇನಹಳ್ಳಿ ಪೋಲೀಸ್ ಇನ್ಸ್‌ಪೆಕ್ಟರ ಮೇಲೆ ಇಷ್ಟು ದೊಡ್ಡ ಪ್ರತಿಭಟನೆ ಬರಬೇಕಾದರೆ ಮತ್ತು ಬಹಳವಾಗಿ ವಿಷಯ ಪ್ರತಿಪಾದಿಸಬೇಕಾದರೆ ಅದು ಏನಿತ್ತು ಎಂಬುದನ್ನು ಆಲೋಚನೆ ಮಾಡಿದೆ. ಸ್ಪಷ್ಟವಾಗಿ ಸಭೆಯ ಮುಂದೆ ವಿಷಯ ಇಡಬೇಕೆಂದು ಹೇಳಿ

(ಶ್ರೀ ಸಿ. ಎಂ. ಪೂಣಚ್ಚ)

ಬಂದಿದ್ದೇನೆ. ಏಕೆಂದರೆ ಬಹುಮಟ್ಟಿಗೆ ಉತ್ಪ್ರೇಕ್ಷೆಯ ಮಾತು ನಡೆಯುತ್ತಾ ಇದೆ, ಬಹುಮಟ್ಟಿಗೆ ನಿರಾಧಾರವಾದ ಟೀಕೆ ನಡೆಯುತ್ತಾ ಇದೆ. ಇದು ಸಲ್ಲದು. ಈ ಪ್ರಕಾರ ಮಾಡುತ್ತಾ ಹೋದರೆ, ತಾವೇ ಹೇಳುತ್ತೀರಿ, ಈ ಸರ್ಕಾರದ ಆಡಳಿತ ಬಿಡಿ, ನಾವು ಆಳುತ್ತೇವೆ ಎಂದು. ತಮಗೂ ಕೂಡ ಆಳುವುದಕ್ಕೆ ಸರ್ಕಾರ ಇರುವುದಿಲ್ಲ ಎಂಬುದನ್ನು ನಾನು ತೋರಿಸುತ್ತಾ ಇದ್ದೇನೆ. ಏಕೆಂದರೆ ಒಬ್ಬರು ಟ್ರ್ಯಾಕ್ಟರ್ ಡ್ರೈವ್ ಮಾಡುತ್ತಾ ಇದ್ದರು, ಅವರಿಗೆ ಲೈಸೆನ್ಸ್ ಇರಲಿಲ್ಲ, ಯಾವಾಗ ಆ ವಿಷಯ ಮಂಚೇನಹಳ್ಳಿ ಪೋಲೀಸ್ ಸಬ್‌ಇನ್ಸ್‌ಪೆಕ್ಟರಿಗೆ ತಿಳಿದುಬಂತೋ ಆಗ ಅವರು ಕ್ರಮ ಜರುಗಿಸಿದರು. ಇಷ್ಟೇ ಸ್ವಾಮಿ ತಪ್ಪು. ಏಕೆ ? ಅವರು ಒಬ್ಬ ಮಾನ್ಯ ಪ್ರಮುಖ ವ್ಯಕ್ತಿಯ ಸಹೋದರರು, ಆ ಊರಲ್ಲಿ ಕಾನೂನು ಜಾರಿಮಾಡಬಾರದು. ಮಾಡಿಬಿಟ್ಟರೆ ಆ ಆಫೀಸರ ಗತಿ ಮುಗಿದು ಹೋಯಿತು. ಈ ಪ್ರಕಾರ ಅಸಹಾಯಕ ಪರಿಸ್ಥಿತಿಯಲ್ಲಿ ನಮ್ಮ ಆಫೀಸರುಗಳನ್ನು ಹಾಕಿ ಬಿಟ್ಟರೆ, ಅದರಲ್ಲೂ ಈ ನಮ್ಮ ಪೋಲೀಸ್ ಇಲಾಖೆಯ ಮೇಲೆ ಈ ಪ್ರಕಾರ ಅಸಹಾಯಕ ಪರಿಸ್ಥಿತಿಯನ್ನು ತಂದುಬಿಟ್ಟರೆ ದೇಶದಲ್ಲಿ ರಕ್ಷಣೆಯ ಮಾತೇ ಇರುವುದಿಲ್ಲ. ಎನ್ನುವಂಥ ವಿಷಯವನ್ನು ಚೆನ್ನಾಗಿ ಸಭೆ ತಿಳಿದುಕೊಳ್ಳಬೇಕು ಎಂಬುದಕ್ಕೆ ಒಂದಲ್ಲ, ಎರಡಲ್ಲ ಬಹಳವಾಗಿ ನಿದರ್ಶನಗಳು ನನ್ನ ಗಮನಕ್ಕೆ ಬಂದಿವೆ. ನ್ಯೂನಾತಿರೇಕಗಳು ಇವೆ, ಇಲ್ಲವೆಂದು ಹೇಳುವಂಥಾದ್ದಲ್ಲ, ಇದು ರಾತ್ರಿ, ಬೆಳಗಾಗುವುದರಲ್ಲಿ ಬಂದದ್ದಲ್ಲ. ಪರಂಪರೆಯಿಂದ ಬಂದಿದೆ. ಬಡ್ಜೆಟ್ ಅಧಿವೇಶನ ಇದು. ಬಡ್ಜೆಟ್ ಇಟ್ಟಿದ್ದೇವೆ. ಇವತ್ತು ಪೋಲೀಸ್ ಇಲಾಖೆ ಶಿಥಿಲವಾಯಿತು ಎನ್ನುವಂಥಾ ಮಾತು, ಎಷ್ಟೋ ವರ್ಷಗಳಿಂದ ನಡೆದುಬರುತ್ತಾ ಇದೆ, ಅದನ್ನು ತಿದ್ದುವಂಥಾ, ಸರಿಪಡಿಸುವಂಥಾ, ವ್ಯವಸ್ಥೆ ಮಾಡುವಂಥಾ ಕೆಲಸ ಬಹಳ ದೊಡ್ಡ ಕೆಲಸ. ಆದರೆ ಈ ಪ್ರಕಾರ ಮಾಡುವಂಥಾದ್ದರಲ್ಲಿ ಸಾರ್ವಜನಿಕರ ಮತ್ತು ಈ ಸಭೆಯ ಸದಸ್ಯರ, ಸರ್ಕಾರದ ಎಲ್ಲರ ಜವಾಬ್ದಾರಿಯೂ ಕೂಡ ಇದೆ ಎಂಬುದನ್ನು ನಾವು ಮೊದಲನೆಯದಾಗಿ ತಿಳಿದುಕೊಳ್ಳಬೇಕು. ಎಷ್ಟೋ ಜನ ಪೋಲೀಸಿನವರು ಇದ್ದಾರೆ, ಅಷ್ಟು ಜನ ಇರುವುದು ಸರಿಯಲ್ಲ ಎಂದು ಕೆಲವರು ಹೇಳಿದ್ದಾರೆ. ಈ ನಮ್ಮ ರಾಜ್ಯದಲ್ಲಿ ಒಟ್ಟು ಕಾನ್ಸ್‌ಟೇಬಲ್ಲೂ ಸೇರಿ ಇಪ್ಪತ್ತುಮೂರು ಸಾವಿರ ಜನ ಪೋಲೀಸ್ ಇಲಾಖೆಯಲ್ಲಿ ಇದ್ದಾರೆ. ಎಂದರೆ ದಾಮಾಷಾ ಲೆಕ್ಕ ಹಾಕಿದರೆ ಒಂಭೈನೂರು ಜನಸಂಖ್ಯೆಗೆ ಒಬ್ಬ ಪೋಲೀಸಿನವನು ಇದ್ದಹಾಗೆ, ಲೆಕ್ಕ ಇದೆ. ಅದರ ಅರ್ಥ ಏನೆಂದರೆ ದೇಶದಲ್ಲಿ ಕಾನೂನನ್ನು ಉಲ್ಲಂಘಿಸುವಂಥ ಜನ ಬಹಳ ಕಡಮೆ. ದೇಶದಲ್ಲಿ ಕಾನೂನನ್ನು ಮಾನ್ಯತೆ ಮಾಡುವಂಥ ಜನ ಬಹಳ ಜನ ಇದ್ದಾರೆ. ನೂರಕ್ಕೆ ಒಬ್ಬರು ಇಬ್ಬರು ಕಾನೂನನ್ನು ಉಲ್ಲಂಘಿಸುವವರು ಇರಬಹುದು. ಹೆಚ್ಚಿನ ಜನ ಕಾನೂನನ್ನು ಅನುಸರಿಸಿ ನಡೆಯುವಂಥ ಜನ. ಅದಕ್ಕೇ ಈ ಜನದ ಬೆಂಬಲವಿರುವಂಥ ಕಾಲದಲ್ಲಿ ಒಂಭೈನೂರು ಜನಸಂಖ್ಯೆಗೆ ಒಬ್ಬ ಪೋಲೀಸಿನವನು ಇದ್ದರೂ ಕೂಡ ನ್ಯಾಯವಾದ ರೀತಿಯಲ್ಲಿ ರಕ್ಷಣೆಯನ್ನು ಒದಗಿಸಬಲ್ಲ ಎಂಬ ಒಂದು ಅಭಿಪ್ರಾಯ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದ ಕೆಲವು ಮಾನ್ಯ ಸದಸ್ಯರೇನು ಈ ಇಲಾಖೆಯಲ್ಲಿ ಒಂದು ದೊಡ್ಡ ರಿಟ್ರೆಂಚ್‌ಮೆಂಟ್ ಮಾಡಬೇಕೆಂದು ಹೇಳಿದ್ದರೋ ಆ ಬಗ್ಗೆ ನಾನೀಗ ಈ ವಿಚಾರಗಳನ್ನೆಲ್ಲ ತಿಳಿಸುತ್ತಿದ್ದೇನೆ. ನಮ್ಮಲ್ಲಿರತಕ್ಕ ಈ ಇಲಾಖೆಯ ನೌಕರರ ಸಂಖ್ಯೆ ಬಹಳ ಕಡಮೆ. ಈ ಇಲಾಖೆಯು ನಡೆಸುತ್ತಿರುವ ಕಾರ್ಯಕ್ರಮಗಳಿಂದ ಜನರಿಗೆ ಒಂದು ಸಹಾಯ ದೊರೆಯತಕ್ಕ ಅಗತ್ಯ ಬಹಳವಾಗಿದೆ. ಆದರೆ ಇದರಲ್ಲಿ ಒಂದು ಮಾತನ್ನು ಹೇಳುವುದಾದರೆ ಈ ಪೋಲೀಸ್ ಇಲಾಖೆಯೊಂದರಿಂದಲೇ ದೇಶದ ಕ್ಷೇಮ ಲಾಭಗಳನ್ನೆಲ್ಲಾ ನೋಡಿಕೊಳ್ಳಲು ಸಾಧ್ಯವಿಲ್ಲ. ಪ್ರಪಂಚದಲ್ಲಿ ಯಾವ ದೇಶದಲ್ಲೂ ಈ ಪೋಲೀಸ್ ಇಲಾಖೆಯೊಂದರಿಂದಲೇ ದೇಶದ ನೆಮ್ಮದಿಯನ್ನು ಸಾಧಿಸಲಿಕ್ಕೆ ಶಕ್ಯವಾಗಿಲ್ಲ. ಆದುದರಿಂದ ಈ ಭಾಗದಲ್ಲಿ ಸಾರ್ವಜನಿಕರ ನೆರವು ಬಹಳ ಅತ್ಯಗತ್ಯ. ದೇಶದ ಮಹಾಜನರ ವಿಶ್ವಾಸ ಮತ್ತು ನೆರವು ಇಲ್ಲದೇ ಹೋದರೆ ಸಾರ್ವಜನಿಕರ ಬೆಂಬಲ ಈ ಇಲಾಖೆಗೆ ಇಲ್ಲದೆ ಹೋದರೆ ಇದು ಏನು ಮಾಡುವುದಕ್ಕೂ ಸಾಧ್ಯವಿಲ್ಲ. ಈ ದಿವಸ ಜನತೆ ಅಂಥ ಒಂದು ಮನೋವೃತ್ತಿಯನ್ನು ಹೊಂದಬೇಕೆಂದು ನಾನು ಹೇಳುತ್ತಿದ್ದೇನೆ. ಆದರೆ ಕೆಲವು ಮಾನ್ಯ ಸದಸ್ಯರು ವಿನಾಕಾರಣ ಈ ಒಂದು ವರ್ಷದಲ್ಲಿ ದೇಶದಲ್ಲಿ ಏನೋ ಆಗಿಬಿಟ್ಟಿದೆ, ಆಡಳಿತ ಶಿಥಿಲವಾಗಿ ಹೋಗಿದೆ, ಸರ್ಕಾರದಲ್ಲಿ ಬಿಗಿ-ಬಿಕ್ಕಟ್ಟುಗಳಿಲ್ಲ ಎಂಬುದಾಗಿ ಅನಾವಶ್ಯಕ ಟೀಕೆಗಳನ್ನು ಮಾಡಿದ್ದಾರೆ. ನಾನು ಪ್ರತಿಯೊಂದು ವಿಚಾರದಲ್ಲೂ ಸಾಕಷ್ಟು ಅಂಕಿ ಅಂಶಗಳನ್ನು ಕೊಟ್ಟು ಸಮಾಧಾನ ಹೇಳಬಲ್ಲೆ. ಅದೆಲ್ಲ ಬಹಳ ಕಷ್ಟಕರವಾದ ಕೆಲಸವಲ್ಲ. ಮಾನ್ಯಸದಸ್ಯರು ಒಪ್ಪಿಕೊಳ್ಳುವಂಥ ಅಂಕಿ ಅಂಶಗಳನ್ನೇ ನಾನು ಕೊಡಬಲ್ಲೆ. ಆದರೆ ಮಾನ್ಯ ಸದಸ್ಯರು ಅಂಥ ಒಂದು ಅನುಮಾನ ಪ್ರಕೃತಿಗಳಿಂದ ಮಾತ್ರ ಅಂಕಿ ಅಂಶಗಳನ್ನು ಕೇಳಬಾರದೆಂದು ಹೇಳುತ್ತೇನೆ. ನನಗೆ ಯಾವ ಅಂಕಿ ಅಂಶಗಳನ್ನು ಒದಗಿಸುವುದಕ್ಕೂ ಕಷ್ಟವಿಲ್ಲ. ನಾವು ವಿನಾಕಾರಣ ದೇಶದಲ್ಲಿರತಕ್ಕ ಜನರನ್ನು ಮರುಳುಗೊಳಿಸುವುದಕ್ಕಾಗಿ ಸಭೆಯ ಮುಂದೆ ಅಂಕಿ ಸಂಖ್ಯೆಗಳಿಂದ ಕೂಡಿದ ಅಂಶಗಳನ್ನಿಡುತ್ತಿಲ್ಲ. ಆದರೆ ಈ ಪೋಲೀಸ್ ಇಲಾಖೆಯು 1957-58ರಲ್ಲಿ ಎಷ್ಟರಮಟ್ಟಿಗೆ ಕೆಲಸ ಕಾರ್ಯಗಳನ್ನ ನಡೆಸಿದೆ; ಮತ್ತು ಈಗ್ಲೂ ನಡೆಸಿಕೊಂಡು ಬರುತ್ತಿದೆಯೆಂಬ ವಿಚಾರದಲ್ಲಿ ಒಂದೆರಡು ಅಂಕಿ ಅಂಶಗಳನ್ನು ತಿಳಿಸುತ್ತೇನೆ. ನಾನೀಗ ಈ ಅಂಶಗಳನ್ನು ಹೇಳುವುದು ಪೋಲೀಸ್ ಇಲಾಖೆಯಲ್ಲಿ ನ್ಯೂನತೆಯೇನೂ ಇಲ್ಲವೇ ಇಲ್ಲ, ಸಡಿಲತೆ ಏನೂ ಇಲ್ಲವೇ ಇಲ್ಲ ಎನ್ನುವುದರ ಬಗ್ಗೆ ಹೇಳುತ್ತಿಲ್ಲ. ಅಲ್ಪ ಸ್ವಲ್ಪ ಇರಬಹುದು. ಆದರೆ ಅದೆಲ್ಲ ಬಹಳಕಾಲದಿಂದಲೂ ಬಂದಿರತಕ್ಕ ಒಂದು ಪದ್ಧತಿ. ನಮ್ಮ ಈ ಪೋಲೀಸ್ ಇಲಾಖೆಯಲ್ಲಿ ಕೆಲಸಕಾರ್ಯಗಳು ಎಷ್ಟರ ಮಟ್ಟಿಗೆ ಇತ್ತೀಚೆಗೆ ನಡೆಸಲ್ಪಡುತ್ತಿವೆಎಂಬ ಬಗ್ಗೆ, ನಾನೀಗ ಸೂಕ್ಷ್ಮವಾಗಿ ಎರಡೇ ಎರಡು ಅಂಶಗಳನ್ನು ತಮ್ಮ ಮುಂದಿಡಲಿಚ್ಛಿಸುತ್ತೇನೆ. 1956ನೆಯ ಸಾಲಿಗೆ ಪೋಲೀಸಿನವರು ಪತ್ತೆಹಚ್ಚಿರುವ ಕೇಸುಗಳ ಸಂಖ್ಯೆ 26,657. ಈ ಅಂಶವನ್ನ ತಿಳಿಯದೆ ಕೆಲವು ಮಾನ್ಯ ಸದಸ್ಯರು ವಿನಾಕಾರಣ ಟೀಕೆ ಮಾಡಿದರೇನು ಫಲ ? 1957ನೇ ಸಾಲಿಗೆ ಪತ್ತೆಹಚ್ಚಿರುವ ಕೇಸುಗಳ ಸಂಖ್ಯೆ 54,829.

ಶ್ರೀ ಜಿ. ಎಚ್. ಪುಟ್ಟಣ್ಣ (ತುಮಕೂರು).—ಈ ಕೇಸುಗಳಲ್ಲಿ ಸಣ್ಣ ಸಣ್ಣ ಕೇಸುಗಳೂ ಸೇರಿವೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಎಲ್ಲಾ ಬಗೆಯ ಕೇಸುಗಳೂ ಸೇರಿರುತ್ತವೆ. 1955-56ರಲ್ಲಿ ಪತ್ತೆ ಹಚ್ಚಿದ ಕೇಸುಗಳ ಸಂಖ್ಯೆ 26,657. ಇದ್ದಂಥಾದ್ದನ್ನು 1956-57ಕ್ಕೆ 54,829ಕ್ಕೆ ಏರಿಸಿದ್ದೇವೆ. ಹೀಗೆ ಒಂದು ವರ್ಷ ಕಾಲದಲ್ಲೇ ಇಷ್ಟೊಂದು ಹೆಚ್ಚು ಸಂಖ್ಯೆಯ

ಕೇಸುಗಳನ್ನು ಪತ್ತೆ ಹಚ್ಚಬೇಕಾಗಿದ್ದರೆ ಈ ಇಲಾಖೆಯಲ್ಲಿ ಈಗ ಯಾರೋ ಅಂಥ ಒಳ್ಳೆ ಕೆಲಸ ಮಾಡತಕ್ಕ ಜನರಿರಬೇಕೆಂದು ಅರ್ಥವಾಗುವುದಿಲ್ಲವೇ ?

ಶ್ರೀ ಜಿ. ಎಚ್. ಪುಟ್ಟಣ್ಣ.—ಈಗ ತಾವು ತಿಳಿಸಿರತಕ್ಕ ಕೇಸುಗಳಲ್ಲಿ ಖೂನಿ ಕೇಸುಗಳ ಸಂಖ್ಯೆಎಷ್ಟು ?

Sri C. M. POONACHA.—I will furnish figures for that also.

ಶ್ರೀ ಎಲ್. ಎಸ್. ವೆಂಕಾಜಿರಾವ್(ಬಸವನಗುಡಿ).—ತಾವು ಈಗ ಪತ್ತೆಹಚ್ಚಿದ ಕೇಸುಗಳ ಸಂಖ್ಯೆ ಮಾತ್ರ ಹೇಳಿದಿರಿ. ರಿಪೋರ್ಟಾದ ಕೇಸುಗಳೆಷ್ಟೆಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಸಿ. ಎಂ. ಪೂಣಚ್ಚ.—ಮಾನ್ಯ ಸದಸ್ಯರು ಸಮಾಧಾನದಿಂದ ಕೇಳಿದರೆ ನಾನು ಪ್ರತಿಯೊಂದು ವಿಚಾರವನ್ನೂ ತಿಳಿಸುವೆನು. ಹೀಗೆಲ್ಲ ಗೊಂದಲ ವೆಬ್ಬಿಸುವುದಾಗಿದ್ದರೆ ಅವರಿಗೆ ಈ ಅಂಕಿ ಅಂಶಗಳ ಆಧಾರ ಸಹಿತವಾದ ವಿಚಾರ ತಿಳಿಯಲು ಇಷ್ಟವಿಲ್ಲದಿದ್ದರೆ ನಾನೇನೂ ಬಲವಂತದಿಂದ ಹೇಳಬೇಕೆಂಬ ಇಚ್ಛೆ ನನಗಿಲ್ಲ. ಆದರೆ ಈ ಅಂಶಗಳನ್ನು ಸಭೆಯ ಮುಂದಿಡತಕ್ಕದ್ದು ನನ್ನ ಕರ್ತವ್ಯ. ಆದುದರಿಂದ ಇಡಬೇಕಾಗಿದೆ.

ಶ್ರೀ ಎ. ಭೀಮಪ್ಪನಾಯಕ್ (ಚಳ್ಳಕೆರೆ).—ಪೋಲೀಸಿಗೆ ದಾಖಲಾದ ಕೇಸುಗಳ ಸಂಖ್ಯೆ ಇಷ್ಟು ಆ ಪೈಕಿ ಪೋಲೀಸಿನವರು ಪತ್ತೆಹಚ್ಚಿದ ಕೇಸುಗಳ ಸಂಖ್ಯೆ ಇಷ್ಟು ಎಂದು ತಿಳಿಸಿದರೆ ಅದಕ್ಕೆ ಅದಕ್ಕೆ ಮಾನ್ಯ ಸದಸ್ಯರು ಒಂದು ಹೋಲಿಕೆಹಾಕಿ ನೋಡಿಕೊಳ್ಳಲು ಅನುಕೂಲವಾಗುತ್ತದೆ. ಆ ರೀತಿ ತಾವು ಸಮಾಧಾನ ಕೊಟ್ಟರೆ ಆಗ ಎದುರು ಪಾರ್ಟಿಯವರು ತಾವು ಹೇಳುತ್ತಿರುವ ವಿಚಾರಗಳೆಲ್ಲ ಸರಿಯಾದವುಗಳೆಂದು ಒಪ್ಪಿಕೊಳ್ಳುತ್ತಾರೆ. ಹಾಗಿಲ್ಲದೆ ಹೋದರೆ ಪೋಲೀಸಿಗೆ ದಾಖಲಾಗಿರತಕ್ಕ ಕೇಸುಗಳ ಸಂಖ್ಯೆ ಕಳೆದ ವರ್ಷದ ಹಿಂದಿನ ವರ್ಷದ ಸಂಖ್ಯೆಗಿಂತ ಡಬ್ಬಲ್‌ಆಗಿದ್ದರೇನು ಮಾಡಬೇಕು ?

Sri C. M. POONACHA.—I have got all the figures. I shall certainly furnish those figures. I was just on the point of saying the number of cases detected.

ಅದನ್ನೆಲ್ಲಾ ನಾನು ತಮಗೆ ವಿವರವಾಗಿ ಒಪ್ಪಿಸುತ್ತೇನೆ. ಪೋಲೀಸ್ ಇಲಾಖೆಯಲ್ಲಿ ಈ ದಿವಸ ಕೆಲಸ ಕಾರ್ಯಗಳು ಯಾವ ರೀತಿಯಲ್ಲಿ ನಡೆಯುತ್ತಿವೆ ಎಂಬ ಬಗ್ಗೆ ಒಂದು ಸೂಕ್ಷ್ಮ ನಿದರ್ಶನ ಕೊಡೋಣವೆಂದು ತಿಳಿಸಲು ಯತ್ನಿಸಿದ್ದೆನು. ಇದೇರೀತಿಯಲ್ಲಿ ಅನೇಕ ಮಾನ್ಯ ಸದಸ್ಯರು ಟೀಕೆ ಮಾಡುತ್ತಿದ್ದಂಥ ಆ ಗ್ಯಾಂಬ್ಲಿಂಗ್ ಮತ್ತು ಸಟ್ಟಾ ಕೇಸುಗಳ ವಿಚಾರದಲ್ಲಿ ಈ ಒಂದು ಅವಧಿಯಲ್ಲಿ ಎಷ್ಟರಮಟ್ಟಿಗೆ ಈ ಪೋಲೀಸ್ ಇಲಾಖೆಯು ಕಾರ್ಯ ನಡೆಸಿದೆ ಎಂಬುದನ್ನು ತಿಳಿಸುವುದಾದರೆ ಕಳೆದ ವರ್ಷ ಒಂದರಲ್ಲೇ 4,684ಕೇಸುಗಳನ್ನು ಹಿಡಿದಿದ್ದಾರೆ. ಈ ವಿಧವಾದ ಕೇಸುಗಳಲ್ಲೂ ಪೋಲೀಸಿನವರು ಬಹಳ ಪರಿಶ್ರಮದಿಂದ ಕೆಲಸ ಮಾಡಿದ್ದಾರೆ. ಈ ವಿಚಾರ ಈ ದಿವಸ ಬೆಂಗಳೂರು ನಗರದ ಸಾರ್ವಜನಿಕರಿಗೇ ಗೊತ್ತಿದೆ. ಈ ಹಿಂದೆ ಬೆಂಗಳೂರು ನಗರದಲ್ಲಿ ಈ ಸಟ್ಟಾ ಗ್ಯಾಂಬ್ಲಿಂಗ್ ನಡೆಯುತ್ತಿತ್ತು ಈಗ ಯಾವ ಪರಿಸ್ಥಿತಿಯಲ್ಲಿದೆ ಇದು ಎಂಬುದನ್ನು ಬೆಂಗಳೂರಿನಲ್ಲಿರತಕ್ಕ ಮಹಾಜನರು ಹೇಳಬೇಕಾಗಿದೆ.

ಶ್ರೀ ಎ. ಭೀಮಪ್ಪನಾಯಕ್.—ಈ ದಿವಸ ಇದು ಓಪನ್ ಆಗಿಯೇ ನಡೆಯುತ್ತಿದೆ. ಹಿಡಿಯುವದು ಕಷ್ಟ. ಚಿತ್ರದುರ್ಗ ಟೌನ್ ಒಂದರಲ್ಲೇ 50 ಕ್ಲಬ್‌ಗಳಿವೆ. ಆ ಕ್ಲಬ್‌ಗಳಲ್ಲೆಲ್ಲಾ ಈ ಗ್ಯಾಂಬ್ಲಿಂಗ್ ನಡೆಯುತ್ತಿದೆ. ಅಲ್ಲೆಲ್ಲ ಓಪನ್‌ಆಗಿಯೇ ನಡೆಯುತ್ತಿದೆ. ಯಾರೂ ಕೇಳತಕ್ಕವರೇ ಇಲ್ಲ !

ಶ್ರೀ ಸಿ. ಎಂ. ಪೂಣಚ್ಚ.—ಈಗಾಗಲೇ ಈ ವಿಚಾರದಲ್ಲಿ ನಾವು ಈ ಗ್ಯಾಂಬ್ಲಿಂಗ್ ಮಟ್ಕಾಹಾಕಲು ಹೊಸದೊಂದು ಕಾನೂನನ್ನು ತಯಾರಿಸಿರುತ್ತೇವೆ, ಸದ್ಯದಲ್ಲೇ ಆ ಮಸೂದೆ ಈ ಸಭೆಯ ಮುಂದೆ ಬರಲಿದೆ. ಆದರೆ ಈಗ ನಡೆಯುತ್ತಿರುವ ವಿಚಾರಗಳನ್ನು ನಾವು ಮನಗಂಡಿಲ್ಲವೆಂದು ತಾವು ಯಾರೂ ಭಾವಿಸಬಾರದು. ಈ ಜೂಜನ್ನು ನಾವು ಕಾನೂನೊಂದಲ್ಲದೆ ಬೇರೊಂದು ಮಾರ್ಗದಿಂದ ತಪ್ಪಿಸಲು ಸಾಧ್ಯವಿಲ್ಲ.

ಶ್ರೀ ಎಲ್. ಎಸ್. ವೆಂಕಾಜಿರಾವ್.—ಗ್ಯಾಂಬ್ಲಿಗಿಗೂ ಸಟ್ಟಾಕ್ಕೂ ವ್ಯತ್ಯಾಸವಿಲ್ಲವೇ ? ಅದೇ ಬೇರೆ. ಇದೇ ಬೇರೆ ಅಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ನಾನೀಗ ಎರಡನ್ನೂ ಸೇರಿಸಿ ಹೇಳುತ್ತಿದ್ದೇನೆ. ಈ ವಿಚಾರಗಳನ್ನೆಲ್ಲ ನಾನೀಗ ಹೇಳಿದ್ದು ಈ ಮೊದಲೇ ತಮ್ಮಲ್ಲಿ ಅರಿಕೆ ಮಾಡಿಕೊಂಡಿರುವಂತೆ ಈ ಒಂದು ವರ್ಷದ ಅವಧಿಯಲ್ಲಿ ನಮ್ಮ ಪೋಲೀಸ್ ಇಲಾಖೆ ಎಷ್ಟರಮಟ್ಟಿಗೆ ಕೆಲಸ ಕಾರ್ಯಗಳನ್ನು ನಡೆಸುತ್ತಿದೆ ಎಂಬುದನ್ನು ತಿಳಿಸಲು ಈ ಅಂಶಗಳನ್ನೆಲ್ಲ ಹೇಳಿದ್ದೇನೆ. ಆದರೆ ಇನ್ನು ಈ ಇಲಾಖೆಯಲ್ಲಿ ಕೆಲಕೆಲವು ನ್ಯೂನತೆಗಳಿವೆ; ಕೊರತೆಗಳಿವೆ. ಅವುಗಳನ್ನು ಸಂಪೂರ್ಣವಾಗಿ ನಿವಾರಣೆ ಮಾಡತಕ್ಕದ್ದು ಅತ್ಯಗತ್ಯ. ಅದು ನಮ್ಮ ಮೇಲೆ ಬಿದ್ದಿರುವ ಜವಾಬ್ದಾರಿ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ರಿಪೋರ್ಟಾದ ಕೇಸುಗಳ ಸಂಖ್ಯೆ ಎಷ್ಟೆಂಬುದನ್ನು ತಾವು ಇಲ್ಲಿಯವರೆಗೂ ತಿಳಿಸಲೇ ಇಲ್ಲ.

Sri C. M. POONACHA.—I will take the earliest occassion to furnish the figures. Whether now or when the demands come up I shall certainly furnish those figures. ಇದರಲ್ಲೇನೂ ಅನುಮಾನವಿಲ್ಲ. ಇನ್ನು ಶ್ರೀವಾಣ್ ಪಡಕೆಯವರೊಂದು ಪ್ರಶ್ನೆ ಹಾಕಿದ್ದಾರೆ. ಬೊಂಬಾಯಿ ಕರ್ಣಾಟಕದಲ್ಲಿ ಖೂನಿ ಖಟ್ಲೆಗಳ ಸಂಖ್ಯೆ ಬಹಳ ಅಧಿಕ ಪ್ರಮಾಣದಲ್ಲೇ ಇದೆ. ಆ ಬಗ್ಗೆ ಅಂಕಿ ಅಂಶಗಳನ್ನು ಶೇಖರಣೆ ಮಾಡುತ್ತಿದ್ದೇವೆ. ಬೆಳಗಾಂ ಜಿಲ್ಲೆಯಲ್ಲೂ ಅಷ್ಟೆ. ಬೆಳಗಾಂ ಜಿಲ್ಲೆಯಲ್ಲಿ 1955-56ನೆಯ ಸಾಲಿನಲ್ಲಿ 154 ಖೂನಿ ಕೇಸುಗಳು ರಿಪೋರ್ಟಾಗಿವೆ. 1956-57 ರಲ್ಲಿ 127 ಕೇಸುಗಳು ರಿಪೋರ್ಟಾಗಿವೆ. 1957-58ಕ್ಕೆ 125 ಕೇಸುಗಳೂ ಅಲ್ಲಿಂದೀಚೆಗೆ ಇಲ್ಲಿಯವರೆಗೂ ಎಂದರೆ ಮಾರ್ಚಿ ಆಖೈರುವರೆಗೆ 26 ಕೇಸುಗಳು ದಾಖಲಾಗಿರುತ್ತವೆ. ಅಲ್ಲಿ ಈ ಪ್ರಕಾರ ಒಂದು ಪರಿಸ್ಥಿತಿಯಿದೆ.

Sri J. P. SARWESH (Serum-S.C.).—Is it a fact that crime and murders in the Hyderabad area are on the increase?

Sri C. M. POONACHA.—I am giving figures. ಬಿಜಾಪುರ ಜಿಲ್ಲೆಯಲ್ಲಿ ರಿಪೋರ್ಟ್‌ಆಗಿರತಕ್ಕ ಖೂನಿ ಕೇಸುಗಳ ಸಂಖ್ಯೆ ಈ ರೀತಿ ಯಾಗಿದೆ. 1954-55ರಲ್ಲಿ 77 ಕೇಸುಗಳು; 1955-56ರಲ್ಲಿ 69 ಕೇಸುಗಳು, 1956-57ಕ್ಕೆ 87 ಕೇಸುಗಳು, ಅಲ್ಲಿಂದೀಚೆಗೆ ಇಲ್ಲಿಯವರೆಗೂ 24 ಕೇಸುಗಳು ರಿಪೋರ್ಟಾಗಿರುತ್ತವೆ.

ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಈ ಪೈಕಿ (ಸಿ) ಮತ್ತು (ಬಿ) ರಿಪೋರ್ಟಾಗಿರತಕ್ಕ ಕೇಸುಗಳ ಸಂಖ್ಯೆ ಎಷ್ಟು ? ರಿಜಿಸ್ಟರ್ ಆಗಿ ಕೋರ್ಟಿಗೆ ಹೋದದ್ದರಲ್ಲಿ ಕನ್‌ವಿಕ್ಷನ್ ಆದ ಕೇಸುಗಳೆಷ್ಟು ; ವಜಾ ಆದ ಕೇಸುಗಳೆಷ್ಟು ತಿಳಿಸುತ್ತೀರಾ ?

ಅಧ್ಯಕ್ಷರು.—ಈ ವಿವರಗಳನ್ನೆಲ್ಲಾ ಡಿಮ್ಯಾಂಡ್ ಬಗ್ಗೆ ಚರ್ಚೆ ಆಗುವ ಕಾಲದಲ್ಲಿ ತಿಳಿಸುತ್ತಾರೆ.

ಶ್ರೀ ಸಿ. ಎಂ. ಪೂಣಚ್ಚ.—ಬಳ್ಳಾರಿ ವಿಚಾರಕ್ಕೆ ಬಂದರೆ ಅಲ್ಲಿ 22ಕೇಸುಗಳು ರಿಪೋರ್ಟಾಗಿವೆ.

Sri C. K. RAJAIAH SETTY.—I want the number of cases reported for the year 1958-59.

Sri C. M. POONACHA.—Only three months have elapsed now. The information is for the calendar year 1957.

Sri C. K. RAJAIAH SETTY.—May I know the number of reported cases for the calendar year 1957 ?

Mr. SPEAKER.—All the information may be furnished later on.

Sri F. H. MOHSIN (Hubli City).—May I know for what purpose ?

Mr. SPEAKER.—The Hon'ble Member will see that the Hon'ble Minister has promised to furnish the information.

ಶ್ರೀ ಸಿ. ಎಂ. ಪೂಣಚ್ಚ.—ನಾನು ಈವರೆಗೆ ಏನು ಹೇಳುತ್ತಿದ್ದೆನೆಂದರೆ ಒಂದೊಂದು ಪ್ರದೇಶದ ಪರಿಸ್ಥಿತಿ ಒಂದೊಂದು ರೀತಿಯಲ್ಲಿದೆ ಎನ್ನುವುದನ್ನು ತಿಳಿಸುತ್ತಿದ್ದೆ. ಹೊಸ ರಾಜ್ಯದ ಹೊಸ ಪ್ರದೇಶದಲ್ಲಿ ವರ್ಷಕ್ಕೆ 100-80 ಖೂನಿ ಕೇಸುಗಳು ರಿಪೋರ್ಟಾಗುತ್ತಿವೆ. ಹಳೆಯ ಮೈಸೂರಿಗೆ ಸೇರಿರತಕ್ಕ ಹಾಸನ, ಚಿಕ್ಕಮಗಳೂರು ಇತ್ಯಾದಿ ಜಿಲ್ಲೆಗಳಲ್ಲಿ ಈ ಖೂನಿ ಕೇಸುಗಳ ಸಂಖ್ಯೆ ಬಹಳ ವಿರಳ. ದಕ್ಷಿಣ ಕನ್ನಡ ಜಿಲ್ಲೆ, ಕೊಡಗೂ ಈ ಪ್ರಾಂತಗಳಲ್ಲೂ ಬಹಳ ಕಡಮೆ, ಆದರೆ ಇದೆಲ್ಲ ಕೇವಲ ನಿನ್ನೆಮೊನ್ನೆಯ ವಿಚಾರಗಳಲ್ಲ. ಇವೆಲ್ಲ ಬಹಳ ಹಿಂದಿನಿಂದಲೂ ಬಂದಂಥವುಗಳು. ಆದರೆ ಇವುಗಳನ್ನೆಲ್ಲ ನಾವು ಯಾವುದಾದರೊಂದು ರೀತಿಯಲ್ಲಿ ಸರಿಪಡಿಸಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಅದಕ್ಕಾಗಿ ಯೋಗ್ಯರಾದಂಥ ಪೋಲೀಸ್ ಅಧಿಕಾರಿಗಳನ್ನೂ ನೌಕರರನ್ನು ಈ ಹೆಚ್ಚು ಕ್ರೈಂಗಳು ರಿಪೋರ್ಟಾಗತಕ್ಕ ಏರಿಯಾಕ್ಕೆ ವರ್ಗಮಾಡುತ್ತಿದ್ದೇವೆ. ಆದರೆ ನಮ್ಮಲ್ಲಿ ಈ ವರ್ಗ ಮಾಡತಕ್ಕ ವಿಚಾರದಲ್ಲಿರುವ ತೊಂದರೆ ಅಷ್ಟಿಷ್ಟಲ್ಲ. ಆದರೆ ಆ ವಿಚಾರಗಳನ್ನೆಲ್ಲ ನಾನೀಗ ಸಭೆಯ ಮುಂದೆ ತಿಳಿಸುವುದಕ್ಕೆ ಅವಕಾಶವಿಲ್ಲ.

ಶ್ರೀ ಎಸ್. ಬಿ. ಪಡಕಿ (ಪರಾಸ್‌ಗಡ).—ಬ್ರಿಟಿಷರು ಆಳುವಾಗ, ಬಹಳ ದಿವಸಗಳಿಂದಲೂ—150 ವರ್ಷಗಳಿಂದಲೂ ಈ ರೀತಿ ಆಗುತ್ತಿತ್ತು ಎಂದು ಹೇಳಿದಿರಿ. ನಮ್ಮ ಸರ್ಕಾರ ಬಂದಮೇಲೆ ಆಗಿದ್ದಲ್ಲ ಅಂದರೆ ಬ್ರಿಟಿಷರ ಕಾಲದಲ್ಲೂ ಹೀಗೆಯೇ ಇತ್ತೆ ?

ಶ್ರೀ ಸಿ. ಎಂ. ಪೂಣಚ್ಚ.—ಆದ್ದರಿಂದ ಇದನ್ನು ವ್ಯವಸ್ಥೆಮಾಡುವ ವಿಷಯ ಬಹಳ ಕಷ್ಟಕರವಾದ್ದು. ಬೊಂಬಾಯಿನಲ್ಲಿ ಒಬ್ಬೊಬ್ಬರು ಇನ್‌ಸ್ಪೆಕ್ಟರು 12–14 ಸ್ಟೇಷನ್ನುಗಳ ಚಾರ್ಜಿನಲ್ಲಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಎರಡು-ಮೂರು ಹೆಚ್ಚೆಂದರೆ ನಾಲ್ಕು ಅಷ್ಟೆ.

ಈ ಕಾರಣದಿಂದ ಪೋಲೀಸ್ ಆಡಳಿತದ ವ್ಯವಸ್ಥೆಯನ್ನು ಒಂದು ಸ್ವರೂಪಕ್ಕೆ ತರುವುದರಲ್ಲಿ ಬಹಳ ಮಟ್ಟಿನ ಕಷ್ಟವಿದೆಯೆಂದು ನಾನು ಈ ಸಭೆಗೆ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಆದರೂ ಈಗ ರಿ-ಆರ್ಗನೈಸೇಷನ್‌ಮಾಡುವ ಕೆಲಸವನ್ನು ಕೈಕೊಂಡಿದ್ದೇವೆ. ಕಮಿಷನ್ ಆಗಲೇ ಬಂದಿದೆ, ಈ ಇಲಾಖೆಯನ್ನು ರಿ-ಆರ್ಗನೈಸ್ ಮಾಡಬೇಕು ಎಂದು. ಈ ಕೆಲಸವನ್ನೇ ನಾವೂ ಕೂಡ ಮಾಡುತ್ತಿದ್ದೇವೆ. ಕಳೆದ 20 ವರ್ಷಗಳ ಹಿಂದೆ Police Reorganisation ಆಗಿತ್ತು. ಈಚೆಗೆ ಆಗಿಲ್ಲ. ಆದ್ದರಿಂದ ಹೆಚ್ಚಿನ ಇನ್‌ಸ್ಪೆಕ್ಟರುಗಳು ಅಲ್ಲಿರತಕ್ಕವರನ್ನು ಇಲ್ಲಿಗೆ ಹಾಕಬಹುದು. ಆದರೆ, ಸಂಖ್ಯೆಯಲ್ಲಿ ವ್ಯತ್ಯಾಸವಿರುವುದಲ್ಲ. Disposition of Police ಮುಂತಾಗಿ ಪ್ರತಿಯೊಂದರಲ್ಲೂ ಭಾಗಭಾಗಕ್ಕೂ ವ್ಯತ್ಯಾಸವಿದೆ. ಈ ಏರುಪೇರುಗಳನ್ನು ತೆಗೆದು ಒಂದೇರೀತಿ ಮಾಡುವುದರಲ್ಲಿ ಈಗ ಅಷ್ಟು ಕೆಲಸಮಾಡಿಲ್ಲವೆಂದೂ, ಆದರೂ ದೈನಂದಿನ ಕೆಲಸವನ್ನು ಈ ಇಲಾಖೆ ಸರಿಯಾಗಿ ಮಾಡುತ್ತಿದೆಯೆಂದೂ ನಾನು ಹೇಳಬಲ್ಲೆ.

ಪ್ರೊಹಿಬಿಷನ್ ವಿಚಾರದಲ್ಲಿ ಒಂದು ಮಾತು. ಪ್ರೊಹಿಬಿಷನ್ನನ್ನು ಯಾವುದಾದರೂ ಸಮರ್ಪಕವಾದ ರೀತಿಯಲ್ಲಿ ನಡೆಸಬೇಕೆಂಬುದೇ ಸರ್ಕಾರದ ಉದ್ದೇಶವಾಗಿದೆ ; ಈ ಮಾನ್ಯ ಸಭೆಯ ಉದ್ದೇಶವೂ ಆಗಿದೆ. ಈ ಬಗ್ಗೆ ಕಳೆದ ಸಾರಿಯೂ ಒಂದು ಸೂಚನೆ ಕೊಟ್ಟಿತ್ತು. ಅದನ್ನು ಪರ್ಯಾಲೋಚನೆಮಾಡಿ ಒಂದು ನಿರ್ಣಯಕ್ಕೆ ಬಂದಿದ್ದಾಗಿದೆ. ಪ್ರೊಹಿಬಿಷನ್ ಸಂಬಂಧದಲ್ಲಿ ಒಂದು ಪ್ರತ್ಯೇಕ ದಳವನ್ನುಮಾಡಿ ಆ ಮೂಲಕ ಇದನ್ನು ಜಾರಿಗೆ ತರಬೇಕೆಂದು ಸರ್ಕಾರ ಪರ್ಯಾಲೋಚನೆ ಮಾಡುತ್ತಿದೆ. ಶೀಘ್ರವಾಗಿ ಈ ಸಂಬಂಧದಲ್ಲಿ ಒಂದು ತೀರ್ಮಾನವನ್ನು ಸರ್ಕಾರದವರು ಕೈಕೊಳ್ಳುತ್ತಾರೆ.

ಇನ್ನು ಮುಖ್ಯವಾಗಿ ಚರ್ಚೆಗೆ ಬಂದಂಥ ಒಂದು ವಿಷಯವೆಂದರೆ ಶ್ರೀಮತಿ ಮುನಿಯಮ್ಮನ ಮರಣಕ್ಕೆ ಸಂಬಂಧಿಸಿದ್ದು. ಈ ಬಗ್ಗೆ ಒಂದು ವಿಸ್ತೃತವಾದ ಹೇಳಿಕೆಯನ್ನು ಕೊಡುವೆನೆಂದು ನಾನು ವಾಗ್ದಾನ ಮಾಡಿದ್ದೆ. ಆದ್ದರಿಂದ ಈಗ ಆ ವಿಷಯದಲ್ಲಿ ಮಾತನಾಡಬೇಕೆಂದಿದ್ದೇನೆ. ಮಿಕ್ಕ ವಿಷಯಗಳ ಮೇಲೆ ಡಿಮ್ಯಾಂಡ್‌ಗಳು ಬಂದಾಗ ಹೇಳುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—ಬಡ್ಜೆಟ್ ಭಾಷಣ ಮಾಡುವಾಗ ಮುನಿಯಮ್ಮನ ವಿಷಯ ತೆಗೆದುಕೊಂಡರಲ್ಲಾ ? While speaking on the Budget, we should not take away the time of the House by speaking on that matter. When the adjournment motion was tabled the Government were not prepared to answer. And now to take away the time of the House by speaking on Muniyamma's case, will not be correct.

Mr. SPEAKER.—Smt. Muniyamma's case had come up before the House. The Advocate-General and the Hon'ble Home Minister have already given a reply. But Muniyamma's case has again appeared very prominently during the present general debate on the Budget.

ಶ್ರೀ ಎ. ಭೀಮಪ್ಪನಾಯಕ್.—ನಾನು ಹೇಳುವುದು ಅದಲ್ಲ. ಒಬ್ಬೊಬ್ಬರ ಚರಿತ್ರೆಯನ್ನೂ ಹೇಳುತ್ತಾ ಮುನಿಯಮ್ಮನ ಕೇಸನ್ನು ಹೇಳುವುದರಿಂದ ಎಲ್ಲರಿಗೂ ಯಾವ ಪ್ರಯೋಜನವೂ ಇಲ್ಲ. Why should you take away much time of the House ?

ಅಧ್ಯಕ್ಷರು.—ಮುನಿಯಮ್ಮನ ವಿಷಯ ಈ ಸಭೆಯಲ್ಲಿ ಮತ್ತೆ ಮತ್ತೆ ಬರುತ್ತಿದೆ. ಅವರು ಅದಕ್ಕೆ ಉತ್ತರಕೊಡಬೇಕಾಗಿದೆ. ಆದ್ದರಿಂದ ಅವರೀಗ ಹೇಳುವವರಾಗಿದ್ದಾರೆ. ಈ ಬಗ್ಗೆ ಹೆಚ್ಚಿಗೆ ಸಮಯ ತೆಗೆದುಕೊಳ್ಳಕೂಡದೆಂಬುದನ್ನು ಲಕ್ಷ್ಯದಲ್ಲಿಟ್ಟು ಅವರು ಹೇಳುತ್ತಾರೆ.

Sri V. SRINIVAS SHETTY (Coondapoor).—Sir, several members have raised the issue. It is only an example of the system. It is not an individual case. Several cases are happening. We would like to know the correct facts. Everything is camouflaged. On this side of the House members want to know the correct facts known to the Government.

ಶ್ರೀ ಸಿ. ಎಂ. ಪೂಣಚ್ಚ.—ಶ್ರೀಮತಿ ಮುನಿಯಮ್ಮನ ಪ್ರಕರಣದಲ್ಲಿ ಬಹಳವಟ್ಟಿಗೆ ತಪ್ಪು ಅಭಿಪ್ರಾಯಗಳು ಪ್ರಸಾರವಾಗಿವೆಯೆಂದು ನಾನು ಪ್ರಥಮತಃ ಹೇಳಬೇಕಾಗಿದೆ. ಏಕೆಂದರೆ ಈ ವಿಷಯದಲ್ಲಿ ಈ ಸಭೆಯಲ್ಲೇ ಅಲ್ಲ ಹೊರಗಡೆಯೂ ಕೂಡ, ಪತ್ರಿಕೆಗಳಲ್ಲೂ ಸಹ ಬಹಳ ಮಟ್ಟಿನ ಅಪಪ್ರಚಾರ ನಡೆದಿದೆ. ಇದರ ನಿಜಾಂಶವೇನೆಂದರೆ, ಫೆಬ್ರುವರಿ ತಾರೀಖು 15ರಲ್ಲಿ ಶ್ರೀಮತಿ ಮುನಿಯಮ್ಮ, ಸರೋಜ ಮತ್ತು ಅವಳ ಗಂಡ ಶ್ರೀರಾಮಪುರದಲ್ಲಿ ಒಂದು ಕಡೆ ಎಲ್ಲರೂ ಕೆಲಸಮಾಡುತ್ತಿದ್ದರು. ಅಲ್ಲಿ ಕೆಲಸಮಾಡುತ್ತಿದ್ದಾಗ ಸರೋಜಳ ಕಿವಿಯಲ್ಲಿದ್ದ ಓಲೆ ಬಿದ್ದುಹೋಯಿತು; ಅಲ್ಲಿ ಕಳೆದುಹೋಯಿತು. ಕೆಲಸ ಬಿಟ್ಟನಂತರ ಸರೋಜಳಿಗೆ ಕಿವಿಯ ಓಲೆ ಬಿದ್ದದ್ದು ಅರಿವಾಯಿತು. ಆಗ ಅವಳು ಮುನಿಯಮ್ಮನು ಅದನ್ನು ತೆಗೆದುಕೊಂಡಿರಬಹುದೆಂದು ಸಂಶಯಪಟ್ಟಳು. ಇದು ಅಲ್ಲಿನ ವಿಷಯ.

ಇತ್ತ ಮುನಿಯಮ್ಮನ ಜೀವನ ನೋಡುವುದಾದರೆ, ಆಕೆ ದೈನಂದಿನ ಕೆಲಸಮಾಡಿ ಜೀವನಮಾಡುವ ಒಂದು ವ್ಯಕ್ತಿ. ಮೂರು ವರ್ಷಕ್ಕೆ ಹಿಂದೆ ಮದುವೆಯಾಗಿತ್ತು. ಮದುವೆಯಾದ ಗಂಡ ಬಿಟ್ಟುಹೋದದ್ದರಿಂದ, ಅವಳ ರಕ್ಷಣೆಗೆ ಯಾರೂ ಇಲ್ಲದೆ ತನ್ನ ತಂಗಿಯ ಜೊತೆಯಲ್ಲಿ ಜೀವನಮಾಡುತ್ತಿದ್ದಳು: ತಂಗಿಯ ಗಂಡ ಇದ್ದ.

ಈ ಪ್ರಕಾರ ಅವಳು ಒಬ್ಬರ ಹಂಗಿನಲ್ಲಿ ಜೀವನ ಮಾಡುತ್ತಿದ್ದಳು. ಹೀಗಿರುವಾಗ ಆ ಕ್ಷಣದಲ್ಲಿ ಏನಾದರೊಂದು ಕಳವು, ಕಾಣೆಯಾಯಿತೆಂದರೂ ಸಾಮಾನ್ಯವಾಗಿ ಸಂಶಯ ಮುನಿಯಮ್ಮನ ಮೇಲೆ ಇರುತ್ತಿತ್ತು. ಈ ರೀತಿಯಾಗಿ ತನ್ನದೇ ಸಮಾಜದಲ್ಲಿ ನಾನಾ ರೀತಿಯಲ್ಲಿ ಕಾಡಲ್ಪಟ್ಟು ತೊಂದರೆಗೊಳಗಾಗಿದ್ದವಳು ಮುನಿಯಮ್ಮ. ಇನ್ನೊಬ್ಬ ಮನುಷ್ಯನ ಹಂಗಿನಲ್ಲಿ ಜೀವನಮಾಡುತ್ತಿದ್ದವಳು. . . .

Sri K. HANUMANTHAIYA (Ramanagaram).—May I rise to a point of order ? I do not know at what stage this case is pending. Anyway, the way in which the Hon'ble Minister is going on speaking shows as if he is before the witness box and not before the House.

Mr. SPEAKER.—I am also watching what the Hon'ble Minister is saying.

Sri K. HANUMANTHAIYA.—Sir, the detailed way in which the Hon'ble Minister is going on making allegations, casting aspersions against Muniyamma, the condition of her living, her character—these remarks are what is called evidence and not what is called justification. Muniyamma is not here, or her character is not concerned.

Mr. SPEAKER.—So far as I am able to understand, Hon'ble Minister is not casting any aspersions.

2 P.M.

Regarding the other point, that the Minister is speaking as if he is in the witness box and not as a member of this House or as a Minister, let us watch in what capacity he is speaking.

Sri K. HANUMANTHAIYA.—Sir, just now the Minister said that Muniamma was being accused for every crime committed in the locality and that her husband had left her and so on. All these are allegations.

Mr. SPEAKER.—That may or may not be the case. He is speaking from the knowledge he possesses. Let us see what he has to say.

Sri V. SRINIVAS SHETTY.—Has Muniyamma any previous convictions ?

Sri C. M. POONACHA.—As far as I am aware, no. I am only referring to the kind of propaganda being carried on here and outside. It is absolutely false. As Hon'ble Members have raised the issue, I would have to go into details of certain facts.

Sri K. HANUMANTHAIYA.—They cannot be facts, because the Minister cannot prove them. The Minister's statement of view is not proof. Proof has to be adduced before a court and when allegations are made against the character of Muniyamma or anyone else, it has to be decided by courts on the basis of evidence, proved documents and otherwise. That is why a Hon'ble Member asked whether there were any previous convictions. Mere statement of the Hon'ble Minister does not amount to proof.

Mr. SPEAKER.—There is no question of proof being produced here. Hon'ble Members simply quote what they know or what they believe to be true. There is no question of anyone proving any point in this House.

Sri K. S. SURYANARAYANA RAO (Mysore City).—At what stage is the investigation of the case just at the moment? When the Speaker had given the ruling it was not *subjudice*. We should be clear as to where we stand.

Mr. SPEAKER.—It is not *sub judice*.

Sri C. M. POONACHA.—It is not *subjudice*, according to the ruling of the Speaker.

Sri J. B. MALLARADHYA.—During question-hour, in answer to a certain question, the Minister was pleased to say that the Government had come to the conclusion that there was no need for an enquiry committee. Would any purpose be served by an elaborate statement like this, on which there is going to be very serious difference of opinion? After all, the Hon'ble Minister's information has been obtained through the officers, but the Members of the Legislature have various other sources of getting information. As against the two, if we weigh them in a balance it may be that the position of the Government will be weakend. It will be much better that the matter is simply set at rest. In fact, it is going to provoke a lot of discussion and cross-examination. I had asked earlier as to how the Governmet came to the conclusion that an enquiry was unnecessary, even before the magisterial investigation under Section 176 had not been concluded. In spite of this fact, the Government have given an answer that they do not propose to set up a committee. That means they have taken a decision even when they were not in possession of all the facts of the case. They could have waited till the enquiry of the Magistrate was over. There are many points involved in the case. I myself wondered as to what the jurisdiction of the Magistrate was in this case. In view of the decision of the Government what useful purpose would be served by making an elaborate statement at this juncture?

Mr. SPEAKER.—I am not concerned with whether the enquiry under section 176 has been concluded or not. I am not concerned with whether it was proper on the part of the Magistrate to go into and investigate the matter under Section 176 of the Cr.P.C. I am not a Court of Law. I am here just to hear the view-point of different members. Since Muniamma's case has been referred to by some of the Hon'ble Members and they made their own remarks, the Hon'ble Minister is also entitled to reply to the best of his knowledge. I have already stated that the source of information of the Hon'ble Minister must be the police department. It cannot be anything else. It is for the members to draw any conclusion they like. Of course, Hon'ble Members may have their own source of information. But then I am not concerned with them. I am only concerned with the freedom of speech in the House and if that freedom of speech can be available to private members, it must also be available to the Minister concerned. To that extent the Hon'ble Minister can make a statement.

Sri B. N. BORANNA GOWDA (Belur).—Sir, this is the third time, the matter has been referred to in this House. Is the Hon'ble Minister going to say anything more than what he has already stated?

Mr. SPEAKER.—That we will see later on. For the third time, Muniamma's case has entered the House. As one Hon'ble Member remarked, the ghost of Muniamma is haunting all of us here and I hope that this will be the last time when she will haunt us. (*Laughter*).

ಶ್ರೀ ಸಿ. ಎಂ. ಪೂಣಚ್ಚ.—ಈ ರೀತಿ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಒಂದೇ ವಿಷಯದ ಮೇಲೆ ವಿಧ ವಿಧವಾದ ಅಭಿಪ್ರಾಯವನ್ನು ವ್ಯಕ್ತಮಾಡಿ ಏನೋ ಒಂದು ಅನ್ಯಾಯವಾಗಿ ಬಿಟ್ಟಿದೆ ಇಂತಹ ಅನ್ಯಾಯ ಗಳು ನಡೆಯಬಾರದಾಗಿತ್ತು ಎನ್ನುವ ಪ್ರಶ್ನೆ ಇಲ್ಲಿ ಬಂದಿದ್ದರಿಂದ ನಾನು ನಿಜವಾದ ವಿದ್ಯಮಾನಗಳೇನು ಎನ್ನುವುದನ್ನು ಹೇಳಬೇಕು ಎನ್ನುವ ದೃಷ್ಟಿಯಿಂದ ಇಲ್ಲಿ ಆ ವಿಷಯಗಳಿಗೆ ಕಾರಣಗಳನ್ನು ಹೇಳಬೇಕಾಗಿದೆ.

15ನೇ ತಾರೀಖಿನನಂತರ ಒಳಗೊಳಗೇ ಇವರಲ್ಲಿ ಸಂಭಾಷಣೆಗಳಾದುವು ಮತ್ತು ಸ್ವಲ್ಪ ಮಾತುಗಳು ನಡೆದವು. ಕೊನೆಯದಾಗಿ ಸರೋಜಳೆಂಬುವಳು ಮುನಿ

ಯಮ್ಮನನ್ನು "ನೀನು ಈ ಒಂದು ದಿನದೊಳಗೆ ಈ ಓಲೆಯನ್ನು ಕೊಡದೆಹೋದರೆ ನಾನು ಪೋಲೀಸಿಗೆ ಫಿರ್ಯಾದು ಮಾಡುತ್ತೇನೆ" ಎಂದು ಹೇಳಿದುದಕ್ಕೆ ಮುನಿಯಮ್ಮನು ಪೋಲೀಸಿಗೆ ಬೇಕಾದರೂ ಹೋಗಿ ಹೇಳಬಹುದು ಅಥವಾ ಇನ್ನೆಲ್ಲಿಗಾದರೂ ಕರೆದುಕೊಂಡು ಹೋಗಿ ಹೇಳಿದರೂ ನಾನು ಏನನ್ನೂ ತೆಗೆದುಕೊಂಡಿಲ್ಲ ಮತ್ತು ಅಪರಾಧವನ್ನು ಮಾಡಿಲ್ಲ ಮತ್ತು ನನಗೇನೂ ಭಯವಿಲ್ಲ ಎಂದು ಹೇಳಿದಳು. ಹಾಗಾದರೆ ಪೋಲೀಸು ಸ್ಟೇಷನ್ನಿಗೆ ಹೋಗಿ ನಾವು ಇದನ್ನು ವಿಚಾರ ಮಾಡೋಣ ಎಂದು ಮಾರನೆಯ ದಿನ ಬೆಳಿಗ್ಗೆ ಪೋಲೀಸು ಸ್ಟೇಷನ್ನಿಗೆ ಹೋಗಿ ಫಿರ್ಯಾದನ್ನು ಕೊಟ್ಟರು. ಈ ಪ್ರಕಾರ ಸಂಭವಿಸಿದ ವಿಚಾರದ ಮೇಲೆ ಈ ಸಭೆಯ ಮಾನ್ಯ ಸದಸ್ಯರಾದ ಡಾಕ್ಟರ್ ಟಿ. ಪಾರ್ಥಸಾರಥಿಯವರು ಹೇಳುತ್ತ ಬಹಳ ಸ್ಪಷ್ಟವಾಗಿ ತಮ್ಮ ಹೇಳಿಕೆಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. 17ನೆಯ ತಾರೀಖು ಮುನಿಯಮ್ಮನನ್ನು ಪೋಲೀಸು ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ರಾತ್ರಿ ಆರು ಗಂಟೆಯಿಂದ ಹನ್ನೊಂದು ಗಂಟೆಯವರೆಗೆ ಪೋಲೀಸು ಸ್ಟೇಷನ್ನಿನಲ್ಲಿ ಇರಿಸಿಕೊಂಡು ಅತ್ಯಾಚಾರ ಮಾಡಿದರೆಂಬ ನಿಜವಲ್ಲದ ಆಧಾರಗಳ ಮೇಲೆ ಈ ರೀತಿಯಾದ ಒಂದು ತಪ್ಪು ಅಪರಾಧವನ್ನು ಮತ್ತು ಅಪಾದನೆಯನ್ನು ಹೊರಿಸಿದ್ದಾರೆ. ಅದರಿಂದ ಸಹಜವಾದ ವಿವರಗಳನೆಲ್ಲ ಕೊಡಬೇಕು ಎನ್ನುವ ಉದ್ದೇಶದಿಂದ ಈ ಸಭೆಗೆ ಕೊಡುತ್ತಿದ್ದೇನೆ. 18ನೆಯ ತಾರೀಖು ಬೆಳಗ್ಗೆ ಎಂಟು ಗಂಟೆಗೆ ಅವರುಗಳು ತಾವಾಗಿಯೇ ಹೋಗಿದ್ದರು. ಸ್ವಲ್ಪ ಮುಂಚಿತವಾಗಿಯೇ ಮುನಿಯಮ್ಮ ಮತ್ತು ಸರೋಜ ಸ್ಟೇಷನ್ನಿಗೆ ಬಂದಿದ್ದರು. ಅನಂತರ ಸರೋಜಮ್ಮನ ಗಂಡ ಕೂಡ ಪೋಲೀಸು ಸ್ಟೇಷನ್ನಿಗೆ ಹೋಗಿ ಎಲ್ಲ ಮಾತನಾಡಿ ಕರೆದುಕೊಂಡು ಹೋಗಿದ್ದಾರೆ. 17ನೆಯ ತಾರೀಖು ಕರೆದುಕೊಂಡು ಹೋಗಿದ್ದರೂಕೂಡ ಪೋಲೀಸು ಸ್ಟೇಷನ್ನಿನ ಡೈರಿಯಲ್ಲಿ ಎಂಟ್ರಿ ಇಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಇದು ತಪ್ಪು. 17ನೆಯ ತಾರೀಖಿನ ದಿವಸ ಶೇಷಾದ್ರಿಪುರಂ ಪೋಲೀಸು ಸ್ಟೇಷನ್ನಿನಲ್ಲಿ ಸಬ್ ಇನ್ಸ್‌ಪೆಕ್ಟರು ರಾತ್ರಿ ಒಂಭತ್ತು ಗಂಟೆಯಿಂದ 12 ಗಂಟೆಯವರೆಗೆ ಒಂದು ಕಳವಿನ ಕೇಸಿನ ಸಂಬಂಧದಲ್ಲಿ ಅಲ್ಲಿಯೇ ಇದ್ದರು ಮತ್ತು ಆ ಕೇಸಿಗೆ ಸಂಬಂಧಪಟ್ಟ ಕೈದಿಗಳನ್ನು ಲಾಕಪ್ಪಿನಲ್ಲಿರಿಸಿಕೊಂಡಿದ್ದರು. ಏಕೆಂದರೆ ಆ ಕೇಸಿನ ಫಿರ್ಯಾದು ಇನ್ನೂ ಪೂರೈಸಿರಲಿಲ್ಲ. ಪರಿಸ್ಥಿತಿ ಹೀಗಿರುವಲ್ಲಿ, ಯಾರೂ ಕೂಡ ಸ್ಟೇಷನ್ನಿನಲ್ಲಿರಲಿಲ್ಲ ಎಂದು ಮಾನ್ಯ ಸದಸ್ಯರು ಹೇಳಿರುವುದು ಸಂಪೂರ್ಣವಾಗಿ ನಿರಾಧಾರವಾದ ಮಾತು.

ಶ್ರೀ ಕೆ. ಹನುಮಂತಯ್ಯ.—ಇವರಿಬ್ಬರನ್ನೂ ಅವರೇ ಸ್ವತಃ ಕರೆದುಕೊಂಡು ಹೋದರೆಂದು ಹೇಳುತ್ತೀರೋ ಅಥವಾ ಮುನಿಯಮ್ಮನೇ ಸ್ವತಃ ಬಂದಳೆಂದು ಹೇಳುತ್ತೀರೋ ?

ಶ್ರೀ ಸಿ. ಎಂ. ಪೂಣಚ್ಚ.—ಸರೋಜಮ್ಮನು ಪೋಲೀಸಿಗೆ ಹೋಗಿ ಪಿರ್ಯಾದು ಮಾಡುತ್ತೇನೆಂದು ಹೇಳಿದಾಗ ಮುನಿಯಮ್ಮನು ತಾನೇ ಬರುತ್ತೇನೆಂದು ಹೇಳಿದ್ದಳು. ಆಮೇಲೆ 18ನೆಯ ತಾರೀಖು ಪೋಲೀಸು ಸ್ಟೇಷನ್ನಿಗೆ ಕರೆದುಕೊಂಡು ಹೋದರು.

(Sri C. J. Muckannappa rose again).

Sri C. M. POONACHA.—I am not prepared to yield. He has interfered too much. The member had so many things to say and he must sit and hear me.

Sri C. J. MUCKANNAPPA.—I rise on a point of order, Sir. I challenge that Muniamma was not taken to the police station on the 17th but she was taken on the 18th morning, because the doctor in the Victoria Hospital showed a certificate dated the 18th. 9-15 A.M. is entered in it and the Magistrate who is holding the enquiry disputed this and the police have accepted it.

Mr. SPEAKER.—There is no point of order involved in it. It is rather very much surprising that a point of information becomes a point of order soon after. It is not fair on the part of any Hon'ble Member to use the floor of the House in order to convert a point of information into a point of order immediately. In my view it is not a good use of the right of a member of this House.

Sri J. H. SHAMSUDDIN (Honawar).—On a point of order, Sir. If an Hon'ble Member misuses his power of eliciting information when the Hon'ble Minister does not yield by rising on a point of order, is the Chair helpless ? Is there any remedy or method by which the Chair can prevent it ?

Mr. SPEAKER.—There are remedies no doubt, but the only remedy I would like to apply is, to order the remarks made by the Hon'ble Member Sri Muckannappa to be erased from the records.

Sri C. J. MUCKANNAPPA.—The medico-legal certificate was issued at 9 A.M. on the 18th. Is that so ?

Sri C. M. POONACHA.—Here I have got a photostat copy and I am going to quote an authority which my Hon'ble friend relies on. Here it is stated that the medical certificate was issued at 2-30 P.M. on the 18th and not at 9 A.M. on that day as stated by the Hon'ble Member Sri Muckannappa. The Hon'ble Member cannot fling a challenge without making verification and without knowing what he is saying on the floor of the House.

Sri J. B. MALLARADHYA.—The Minister is trying to rely on what is published in a newspaper. I would like him to assure us that it was issued

(SRI J. B. MALLARADHYA)

at 2-30 P.M. on the basis of the official document.

Sri C. M. POONACHA.—I wanted to quote from a paper which my Hon'ble friend would very much rely upon.

Sri J. B. MALLARADHYA.—I do not want the Hon'ble Minister to rely on newspaper reports. Why should he not rely on official documents?

Mr. SPEAKER.—In the first place Hon'ble Member should not rely on newspaper reports. Secondly, if he is convinced about the truth of the whole matter that has appeared in the newspaper he can use it. But in no case should newspaper reports as such be quoted here unless an Hon'ble Member believes them to be true.

Dr. T. PARTHASARATHY (Malleswaram).—The conflict is about the time when the certificate was issued. Muniamma stayed in the hospital from 8 A.M. till 2-30 P.M. the same day and she cannot be both in the hospital and in the police station on the same day. It is the wrong statement of the police that is responsible for this confusion. She was taken to the police station on the 17th and I sent her to the hospital. The case diaries were not written on the 17th but were written only on the 18th. If they had been honest, all this confusion would not have arisen.

Sri V. SRINIVAS SHETTY.—Is it not a fact that it is the custom of the police to write up the diary for the previous day's work the next morning and since this whole thing happened on the 17th at 11 A.M. or 12 NOON, as usual the diary was written the next morning?

Sri C. M. POONACHA.—Certainly not. ನಾನು ಏಕೆ ಹೇಳುತ್ತಿದ್ದೇನೆಂದರೆ ಇವರು 18ನೆಯ ತಾರೀಖು ಬೆಳಗ್ಗೆ ಪೋಲೀಸು ಸ್ಟೇಷನ್ನಿಗೆ ಹೋಗಿದ್ದಾರೆ. 18ನೆಯ ತಾರೀಖು ಅಲ್ಲಿಗೆ ಹೋದನಂತರ ಕಿವಿಓಲೆ ಕಳೆದುಕೊಂಡಿದ್ದುದನ್ನು ಮುನಿಯಮ್ಮ ತೆಗೆದುಕೊಂಡಿದ್ದಾಳೆನ್ನುವ ಆಪಾದನೆಯ ಮೇಲೆ ವಿಚಾರಣೆ ನಡೆಯಿತು. ಅವರು ಸಾಧಾರಣ 15 ನಿಮಿಷಗಳು ಮಾತ್ರ ಸ್ಟೇಷನ್ನಿನಲ್ಲಿದ್ದರು

Sri K. HANUMANTHAIYA.—Did they go voluntarily or were they arrested by the police and taken to the police station?

Sri C. M. POONACHA.—They themselves went.

Sri T. SUBRAMANYA (Turuvekere).—I do not want to interrupt, but here is an Hon'ble Member of this House Dr. Parthasarathy who says that according to his knowledge Muniamma was in the hospital on the 18th from morning 8 to afternoon 2-30 and we have no reason to disbelieve him because he is a professional doctor. He also asserts that Muniamma did not go to the police station and that her statement was not recorded. I wish that the Hon'ble Members should allow the Hon'ble Minister to reply to those two points. I also request the Hon'ble Minister not to quote from the paper *Jwalamukhi* as an authority.

Sri C. M. POONACHA.—It is a photostat copy; I am not quoting from it.

Sri T. SUBRAMANYA.—Another point I would like to know from the Hon'ble Minister is, how did the photostat copy go to hands of that editor. Who gave it to him? I want to know whether he got it from the Government quarters or from private quarters. All these will become matter for discussion on the floor of this House if that newspaper is quoted. Therefore, I wish that the Hon'ble Minister avoids embarrassment to himself and to us also.

Mr. SPEAKER.—I have already prevented the Hon'ble Minister from quoting from the newspaper.

Sri A. BHEEMAPPA NAIK.—Have you proceeded against the offender under the Official Secrets Act for having furnished a copy to *Jwalamukhi*? I also request the Hon'ble Minister not to quote from the newspaper.

Mr. SPEAKER.—I have already said that I have prevented the Hon'ble Minister from quoting from the newspaper and there the matter should end.

Dr. T. PARTHASARATHY.—That means the Minister has ample belief on such sources of information and on nobody else.

Mr. SPEAKER.—I have already made it clear that the source of information for the Hon'ble Minister is the police. Whether the information can be believed or not is a matter for the members and for the general public to consider. He cannot get information

from other sources and if he gets, he cannot make use of it here because he cannot have the same belief in it.

Sri J. P. SARWESH.—Let him not ask us to believe that as truth, Sir.

Sri C. M. POONACHA.—Facts will reveal as to what is the actual truth. If they will not believe facts, nobody can help them.

ಹದಿನೆಂಟನೆಯ ತಾರೀಖು ಪೋಲೀಸು ಸ್ಟೇಷನ್ನಿಗೆ ಹೋದನಂತರ ಮುನಿಯಮ್ಮನು ಪ್ರಥಮತಃ ಹೋದಂಥಾದ್ದು ಯಾರ ಹತ್ತಿರ ಎಂದರೆ, ಮಾನ್ಯ ಮಿತ್ರರಾದ ಶ್ರೀ ವಿ. ಆರ್. ನಾಯ್ಡುರವರ ಹತ್ತಿರ. ಅವರ ಹತ್ತಿರ ಇಂಥ ಘಟನೆ ಆಯಿತು ಎಂದು ಹೇಳಿದಾಗ, ಶ್ರೀ ವಿ. ಆರ್. ನಾಯ್ಡುರವರು ಡಾ|| ಪಾರ್ಥಸಾರಥಿಯವರಿಗೆ ಒಂದು ಪತ್ರ ಕೊಟ್ಟರು.

Sri C. J. MUCKANNAPPA.—I rise to a point of order. The name of a person who is not a member of this House should not be used on the floor of this House. How can Sri V. R. Naidu's name be mentioned in this House, Sir? He is not a member of this House.

Mr. SPEAKER.—After all my ruling has not been properly understood by the Hon'ble Member. What I have said is that names of persons who cannot be here in order to make a reply to an insinuation should not be used. I have said that making statements of a character which could be termed as defamation was improper.

ಶ್ರೀ ಸಿ. ಎಂ. ಪೂಣಚ್ಚ.—ಆಮೇಲೆ ಹದಿನೆಂಟನೆಯ ತಾರೀಖು ಬೆಳಿಗ್ಗೆ ಬಹುಶಃ 8 ಅಥವಾ $8\frac{1}{2}$ ಘಂಟೆಗೆ ಮುನಿಯಮ್ಮನವರು ಡಾ|| ಪಾರ್ಥಸಾರಥಿಯವರ ಹತ್ತಿರ ಒಂದು ಮೆಡಿಕಲ್ ಸರ್ಟಿಫಿಕೇಟ್ (ಚೀಟಿ) ತೆಗೆದುಕೊಳ್ಳುವುದಕ್ಕೆ ಹೋದರು. ನಂತರ ತಮಗೆ ಗಾಯಗಳಾಗಿವೆ, ಸರ್ಟಿಫಿಕೇಟು ಬೇಕು ಎಂದು ಡಾ|| ಪಾರ್ಥಸಾರಥಿಯವರನ್ನು ಕೇಳಿದರು. ಡಾ|| ಪಾರ್ಥಸಾರಥಿಯವರು ಒಂದು ಚೀಟಿಯಲ್ಲಿ Patient directed to go to Malleswaram Hospital ಎಂದು ಬರೆದರು. ಈ ಚೀಟಿಯನ್ನು ತೆಗೆದುಕೊಂಡು.........

Sri A. BHEEMAPPA NAIK.—On a point of order, Sir. Can cross-examination be allowed on the floor of this House? When a Minister is making a statement, cross-examination is being carried on.

Mr. SPEAKER.—Order, order. Dr. Parthasarathy, I expect better conduct from you. Please excuse me. Cross-examination cannot be carried on here. At the same time, Hon'ble Member Sri Bheemappa Naik should understand that I am trying to remove such ugly situations as far as possible.

ಶ್ರೀ ಸಿ. ಎಂ. ಪೂಣಚ್ಚ.—ಈ ಚೀಟಿಯನ್ನು ತೆಗೆದುಕೊಂಡು ಮಲ್ಲೇಶ್ವರಂ ಆಸ್ಪತ್ರೆಯ ಲೇಡಿ ಡಾಕ್ಟರಿಗೆ ತೋರಿಸಿ, ನನಗೆ ಸರ್ಟಿಫಿಕೇಟ್ ಬೇಕು ಎಂದು ಮುನಿಯಮ್ಮ ಕೇಳುತ್ತಾರೆ. ಇದು ಏನು ಫಿಟ್‌ನೆಸ್ ಸರ್ಟಿಫಿಕೇಟೋ ಎಂದು ಆ ಡಾಕ್ಟರು ಪ್ರಶ್ನಿಸಿ, ವ್ಯಾಕ್ಸಿನೇಷನ್ ಮಾಡಿಸಿಕೊಳ್ಳಬೇಕು ಎಂದು ಹೇಳುತ್ತಾರೆ. ಅದಕ್ಕೆ ಮುನಿಯಮ್ಮ, ನನಗೆ ನಮ್ಮ ನೇಬರ್, ಪಕ್ಕದ ಮನೆಯವರು ಏಟು ಹೊಡೆದಿರುವುದರಿಂದ ವೂಂಡ್ ಸರ್ಟಿಫಿಕೇಟ್ ಬೇಕು ಎಂದು ಕೇಳುತ್ತಾರೆ. ಅದಕ್ಕೆ ಲೇಡಿ ಡಾಕ್ಟರ್ ಹೇಳುತ್ತಾರೆ: ಮೆಡಿಕಲ್ ಆಫೀಸರ್ ಅಥವಾ ಆರ್. ಎಂ. ಓ. ಹತ್ತಿರ ಕೇಳಿ, ನಾವು ವೂಂಡ್ ಸರ್ಟಿಫಿಕೇಟ್ ಕೊಡುವುದಿಲ್ಲ, ಇಲ್ಲಿ ಮೆಟರ್ನಿಟಿ ಕೇಸಸ್ ಮಾತ್ರ ಟ್ರೀಟ್ ಮಾಡುತ್ತೇವೆ, ಫಿಟ್‌ನೆಸ್ ಸರ್ಟಿಫಿಕೇಟ್ ಕೊಡುತ್ತೇವೆ, ಆದ್ದರಿಂದ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಬೇಕು ಎಂದು. ಆಮೇಲೆ ಮುನಿಯಮ್ಮ ಡಾ|| ಪಾರ್ಥಸಾರಥಿಯವರ ಒಂದು ಪತ್ರ ತೆಗೆದುಕೊಂಡು ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿ ಅಲ್ಲಿ ಆ ಪತ್ರವನ್ನು ತೋರಿಸುತ್ತಾರೆ. ಡಾ|| ಪಾರ್ಥಸಾರಥಿಯವರ ಕಾಗದದಲ್ಲಿ ಏನಿದೆ ಅಂದರೆ: "ಪೇಷಂಟಿಗೆ ಒಂದು ಸರ್ಟಿಫಿಕೇಟ್ ಬೇಕು ಎಂದು ಕಾಣುತ್ತದೆ. ಆಕೆಯನ್ನು ಪರೀಕ್ಷೆಮಾಡಿ ನ್ಯಾಯವಾದಂಥ, "needful action be taken" ಎಂದು ಇದೆ. ವಿಕ್ಟೋರಿಯಾ ಆಸ್ಪತ್ರೆ ಡಾಕ್ಟರು ಪರೀಕ್ಷೆಮಾಡಿದರ . . ಪರೀಕ್ಷೆಮಾಡುವಾಗ ಆಕೆ ಹೇಳಿದಳು: ಪೋಲೀಸರು ಏಟು ಹೊಡೆದಿದ್ದಾರೆ, ಆದ್ದರಿಂದ ನನಗೆ ಈ ಸರ್ಟಿಫಿಕೇಟ್ ಬೇಕು ಎಂದು. ಮುನಿಯಮ್ಮ ಪ್ರಥಮತಃ ಪೋಲೀಸಿನವರಮೇಲೆ ಹೇಳಿದ್ದು ಅಲ್ಲಿ. ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ನನಗೆ ಹೊಡೆದಿದ್ದಾನೆ, ಅದಕ್ಕೋಸ್ಕರ ನನಗೆ ಸರ್ಟಿಫಿಕೇಟ್ ಬೇಕು ಎಂದು ತಿಳಿಸಿದಳು. ಡಾಕ್ಟರು ಪರೀಕ್ಷೆ ಮಾಡಿದರು. ಗಂಡಸು ಡಾಕ್ಟರು ಪರೀಕ್ಷೆ ಮಾಡಿದರು. ಒಂದು ಸರ್ಟಿಫಿಕೇಟ್ ಬರೆದು ಇನ್‌ಪೇಷಂಟ್ ಆಗುವ ಅವಶ್ಯಕತೆ ಇಲ್ಲ ಎಂದು ಹೇಳಿದರು. ಡಾಕ್ಟರು ಕೇಳುತ್ತಾರೆ: ಪೋಲೀಸಿನವರು ಹೊಡೆದಿದ್ದಾರೆ ಎಂದು ಹೇಳುತ್ತೀರಿ. ಲೇಡಿ ಡಾಕ್ಟರು ಏನಾದರೂ ಪರೀಕ್ಷೆಮಾಡಬೇಕಾಗಿದೆಯೆ ಎಂದು. ಅದಕ್ಕೆ ಮುನಿಯಮ್ಮ ಹೇಳುತ್ತಾಳೆ: ಲೇಡಿ ಡಾಕ್ಟರು ಪರೀಕ್ಷೆಮಾಡುವ ಪ್ರಮೇಯವಿಲ್ಲ. ನನಗೆ ಸರ್ಟಿಫಿಕೇಟ್ ಮಾತ್ರ ಬೇಕಾಗಿತ್ತು; ಸರ್ಟಿಫಿಕೇಟ್ ಕೊಡಬೇಕು ಎಂದು. ಡಾ|| ಪಾರ್ಥಸಾರಥಿಯವರು ಕಳುಹಿಸಿದ ಚೀಟಿಯಮೇಲೆ ವಿಕ್ಟೋರಿಯಾ ಆಸ್ಪತ್ರೆಯ ಡಾಕ್ಟರು ಈ ರೀತಿ ಬರೆಯುತ್ತಾರೆ.

"Examined. Minor bruises ಇವೆ. Lady Doctor examine ಮಾಡಬೇಕೇ ಎಂದಾಗ ಬೇಡ ಎಂದು ಹೇಳುತ್ತಾಳೆ.

ಈ ನೋಟ್ ಡಾಕ್ಟರು ಬರೆದು ಆಕೆಯ ಕೈಯಲ್ಲಿ ಕಳುಹಿಸಿದರು.

Sri C. K. RAJAIAH SETTY.—One small information, Sir. When somebody goes to the hospital for a certificate, will there be any entry in the Accidents Register, Sir?

ಶ್ರೀ ಸಿ. ಎಂ. ಪೂಣಚ್ಚ.—ಇದನ್ನು ಈ ಮಾನ್ಯ ಸಭೆ ಗಮನಿಸಬೇಕು. ಡಾ|| ಪಾರ್ಥಸಾರಥಿಯವರು ಪತ್ರವನ್ನು ವಿಕ್ಟೋರಿಯಾ ಆಸ್ಪತ್ರೆ ಡಾಕ್ಟರಿಗೆ ಕಳುಹಿಸಿದರು. ಡಾಕ್ಟರು ಒಡನೆ ಪರೀಕ್ಷೆಮಾಡಿದರು. ಡಾ|| ಪಾರ್ಥಸಾರಥಿಯವರ ಚೀಟಿಯಮೇಲೆ needful action ತೆಗೆದುಕೊಂಡು certificate ಕೊಟ್ಟಿದ್ದಾರೆ. ಈ ಚೀಟಿಯಲ್ಲಿ ತಮ್ಮ ಅಭಿಪ್ರಾಯವೇನು ಎನ್ನುವುದನ್ನು ಡಾಕ್ಟರು ಹೇಳಿ ಅದನ್ನು ಕಳುಹಿಸಿದ್ದಾರೆ. ಇದನ್ನು ಕೊಟ್ಟಿರುವುದು 18ನೆಯ ತಾರೀಖು 2½ ಘಂಟೆಗೆ ಅನಂತರ ಏನೇನೂ ವರ್ತಮಾನವಿಲ್ಲ. ಇಂತಹ ವಿಷಯ ಉದ್ಭವಿಸಬಹುದು ಎಂಬ ಊಹೆಯೂ ಯಾರ ಮನಸ್ಸಿಗೂ ಹೊಳೆಯಲಿಲ್ಲ. ಅಲ್ಲದೆ 21ನೆಯ ತಾರೀಖಿನಲ್ಲಿ ನಮಗೆ ಒಂದು ಅರ್ಜಿ ಬಂತು. ಅದಕ್ಕೆ ಹೆಬ್ಬೆಟ್ಟಿನ ಗುರುತು ಹಾಕಿತ್ತು. Probably it was posted on the 20th. It was posted at Bangalore. ಆ ಅರ್ಜಿಯಲ್ಲಿ ಪೋಲೀಸಿನವರನೇಕರು ಅತ್ಯಾಚಾರ ಮಾಡಿದರು, ಅಲ್ಲದೆ ನನಗೆ ಮಾನಭಂಗ ಮಾಡಿದರು, ಕೇಡು ಮಾಡಿದರು, ಹೊಡೆತ ಹೊಡೆದಿದ್ದಾರೆ, ಇದನ್ನು ಒಡನೆ ಚೆನ್ನಾಗಿ ತನಿಖೆಮಾಡಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ವಿಶದವಾಗಿ ಬರೆದಿದ್ದಾರೆ. ಅದನ್ನೂಕೂಡ ಒಡನೆ ತನಿಖೆ ಮಾಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ವಿಚಾರ ಮಾಡಲಾಯಿತು; ಅಂಥಾದ್ದೇನೂ ನಡೆದಿಲ್ಲವೆಂದು ತಿಳಿಯಬಂತು.

ಆಮೇಲೆ ಶೇಷಾದ್ರಿಪುರದ ಪೋಲೀಸು ಸ್ಟೇಷನ್ ವಿಚಾರ ತಿಳಿದುಕೊಳ್ಳಬೇಕು. ಶೇಷಾದ್ರಿಪುರಂ ಪೋಲೀಸು ಸ್ಟೇಷನ್ ನಮ್ಮ ಪಟ್ಟಣದ ಒಂದು ಮುಖ್ಯ ಸೆಂಟರ್‌ನಲ್ಲಿ ಒಂದು ಬಾಡಿಗೆಮನೆಯಲ್ಲಿದೆ. ಅದು ಪಟ್ಟಣದ ಜನ ನಿಬಿಡವಾದ ಒಂದು ಪ್ರದೇಶದಲ್ಲಿರುವುದು. ಅಲ್ಲಿ ನಾಲ್ಕು ಜನ ಆಫೀಸರುಗಳು ಕೆಲಸಮಾಡುತ್ತಾರೆ. ಕ್ರೈಂ ಬ್ರಾಂಚ್, ಲಾ ಅಂಡ್ ಆರ್ಡರ್ ಬ್ರಾಂಚ್ ಮತ್ತು ಇನ್ನೊಂದು ಇವೆ, ಇನ್ಸ್‌ಪೆಕ್ಟರಿದ್ದಾರೆ, ನಾಲ್ಕು ರೂಮುಗಳಿವೆ, ಪ್ರತಿಯೊಂದು ಕಡೆಯೂ ಆಫೀಸರುಗಳು ಕೆಲಸಮಾಡುತ್ತಿರುತ್ತಾರೆ, ಯಾವ ಸಮಯದಲ್ಲಾದರೂ ಕಡಮೆಯೆಂದರೆ 10-17 ಕಾನ್‌ಸ್ಟೇಬಲ್ಲುಗಳು ಇದ್ದೇ ಇರುತ್ತಾರೆ, ಕೆಲವರು ಬರುತ್ತಲೂ ಹೋಗುತ್ತಲೂ ಇರುತ್ತಾರೆ, ಬಹಳ busy place, ಬಸ್‌ಸ್ಟ್ಯಾಂಡ್ ವಗೈರೆ ಸುತ್ತಾ ಆವರಿಸಿಕೊಂಡಿದೆ. ಅಲ್ಲಿ ಕ್ರೈಂ ಬ್ರಾಂಚ್ ಸಬ್ ಇನ್ಸ್‌ಪೆಕ್ಟರು ಮತ್ತು ಲಾ ಅಂಡ್ ಆರ್ಡರ್ ಬ್ರಾಂಚ್ ಸಬ್ ಇನ್ಸ್‌ಪೆಕ್ಟರು ಇರುತ್ತಾರೆ. ಮಧ್ಯೆ ಒಂದು ಸೆಂಟ್ರಲ್‌ಹಾಲ್ ಇದೆ. ಅಂಥಕಡೆ ಇಂಥ ಒಂದು ಅತ್ಯಾಚಾರ ನಡೆಯುವ ಪ್ರಮೇಯಕೂಡ ಅಸಂಭವ ಎಂದು ಆ ಪೋಲೀಸ್‌ಸ್ಟೇಷನ್ ನೋಡಿದವರೇ ಹೇಳಬಹುದು. It is one of the busiest centres. ಟ್ರಾಫಿಕ್, ಲಾ ಅಂಡ್ ಆರ್ಡರ್, ಕ್ರೈಂ—ಇವುಗಳಿಗೆ ಸಂಬಂಧಪಟ್ಟ ಬ್ರಾಂಚುಗಳು ಬೇರೆ ಇದ್ದು, ಅದಕ್ಕೆ ಸಂಬಂಧಪಟ್ಟ ಕ್ಲಾರ್ಕುಗಳು, ದಫೇದಾರರು ಪರ್ಮನೆಂಟಾಗಿ ಕೆಲಸಮಾಡುತ್ತಿರುತ್ತಾರೆ.

ಡಾ|| ಟಿ. ಪಾರ್ಥಸಾರಥಿ.—24 ಗಂಟೆ ಹೊತ್ತೂ ಮಾಡುತ್ತಲೇ ಇರುತ್ತಾರೆಯೆ?

ಶ್ರೀ ಸಿ. ಎಂ. ಪೂಣಚ್ಚ.—ಆ ದಿವಸ particularly on the 17th ಸಬ್-ಇನ್ಸ್‌ಪೆಕ್ಟರು ರಾತ್ರಿ 12 ಗಂಟೆಯವರೆಗೂ ಇದ್ದರು. ಆಮೇಲೆ ಸಬ್-ಇನ್ಸ್‌ಪೆಕ್ಟರಮೇಲೆ ಅಪಾದನೆ ಹೇಳಿದರು, ಅವರಿಗೆ ಕೆ. ಜಿ. ಎಫ್. ನಲ್ಲಿ ಶಿಕ್ಷೆಆಗಿ ಡಿಮೋಟ್ ಮಾಡಿ ಕಳುಹಿಸಿದ್ದಾರೆ ಎಂದು ಅದನ್ನು ವಿಚಾರಮಾಡಲಾಯಿತು. ಕೋಲಾರದಲ್ಲಿ ಅವರಿರುವಾಗ ಒಂದು ಕೇಸು ಬಂತು. ಕೇಸು ರಿಜಿಸ್ಟರಾಗಲಿಲ್ಲ. ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಹೋಗಿ ಇನ್‌ವೆಸ್ಟಿಗೇಷನ್ ಆಗಿ 176ನೆಯ ಸೆಕ್ಷನ್ ಪ್ರಕಾರ ಮಾಡಬೇಕೆಂದು ಕೋರ್ಟಿಗೆ ಹೋಯಿತು. ಆ ಅಪಾದನೆಯಮೇಲೆ ಆ ಸಬ್-ಇನ್ಸ್‌ಪೆಕ್ಟರನ್ನು ಜವಾಬ್ದಾರರನ್ನಾಗಿ ಮಾಡಿದರು. ನಿಜ. ಹಾಗೆ ಶಿಕ್ಷೆ ಮಾಡಿದಮೇಲೆ ಪುನಃ ಅಪೀಲಿನಲ್ಲಿ ಆ ಶಿಕ್ಷೆ ವಜಾಆದುದರ ಮೇಲೆ ಅವರನ್ನು ಮತ್ತೆ ಸಬ್-ಇನ್ಸ್‌ಪೆಕ್ಟರ್ ಮಾಡಿದರು. ಏಕೆ ಅದನ್ನು ಹೇಳುವುದು ಅಂದರೆ, ಆ ಸಬ್-ಇನ್ಸ್‌ಪೆಕ್ಟರು ಬಹಳ ಭಯಸ್ಥರು, ಒಂದುಸಲ ಶಿಕ್ಷೆ ಅನುಭವಿಸಿರುವುದರಿಂದ, ಮೊನ್ನೆತಾನೆ ಶಿಕ್ಷೆ ಆಗಿದ್ದುದರಿಂದ ಭಯದಿಂದ ಇರುತ್ತಾರೆ. ಒಂದುಸಲ ಪೆಟ್ಟಾಗಿರುವುದರಿಂದ ಅವಿವೇಕದಿಂದ ವರ್ತಿಸುವ ಮನೋಪ್ರವೃತ್ತಿ ಅವರಿಗಿರುವುದು ಸ್ವಲ್ಪ ದುರ್ಲಭ. ಇದನ್ನು ಆಲೋಚನೆಮಾಡಬೇಕು. ಅಲ್ಲದೆ ಸಬ್-ಇನ್ಸ್‌ಪೆಕ್ಟರಮೇಲೆ ಅತ್ಯಾಚಾರಮಾಡಿದರೆಂದು ಪುಕಾರು ಎಲ್ಲೂ ಇಲ್ಲ. ಆ ಸಬ್-ಇನ್ಸ್‌ಪೆಕ್ಟರು ರಾತ್ರಿ 12 ಗಂಟೆಯವರೆಗೂ ಅಲ್ಲಿದ್ದರು. ರಾತ್ರಿ 12 ಗಂಟೆಯವರೆಗೂ ವಿಚಾರಣೆ ನಡೆದಿರುವಾಗ, ಅಲ್ಲಿ ಬೇಕಾದಷ್ಟು ಸಿಬ್ಬಂದಿಯಿರುವಾಗ ಮುನಿಯಮ್ಮನನ್ನು ಕರೆದುಕೊಂಡುಹೋಗಿ ಪ್ರತ್ಯೇಕವಾಗಿ ಅತ್ಯಾಚಾರ ಅಲ್ಲಿ ನಡೆಸಿದರೆಂದು ಹೇಳುವುದು ನಿಜವಾಗಿಯೂ ಸತ್ಯಕ್ಕೆ ಬಹಳ ದೂರವಾದ ವಿಷಯ, ಅಸಾಧ್ಯವಾದ ವಿಷಯ. ಮಾನ್ಯ ಸದಸ್ಯರಿಗೆ ಸ್ವಲ್ಪ ಅರಿವಿದ್ದರೆ, ನಿಧಾನವಾಗಿ ಆಲೋಚಿಸಿದರೆ ಮನವರಿಕೆಯಾಗುತ್ತದೆ. 21ನೆಯ ತಾರೀಖು ಅರ್ಜಿ ಬಂದು ಅದನ್ನು ಪರಿಶೀಲಿಸಲಾಯಿತು. ಪರಿಶೀಲಿಸಿ ನೋಡುವಾಗ ಏನೇನೂ ಆಪಾದನೆಯಲ್ಲಿ ತಿರುಳಿಲ್ಲವೆಂದು ಗೊತ್ತಾಯಿತು, 17ನೆಯ ತಾರೀಖಿನಲ್ಲಿ ಹರಡಿದ ಸುದ್ದಿ ಶುದ್ಧ ಸುಳ್ಳು. ಯಾವ ಉದ್ದೇಶದಿಂದ ಹೀಗೆ ಸುಳ್ಳು ಸುದ್ದಿ ಪ್ರಚಾರ ನಡೆಯಿತೆಂಬುದು ಹೇಳುವುದಕ್ಕೆ ಬರುವುದಿಲ್ಲ.

ಡಾ|| ಟಿ. ಪಾರ್ಥಸಾರಥಿಯವರು ಈ ವಿಷಯದಲ್ಲಿ ಬಹಳ ಆಸಕ್ತಿ ವಹಿಸಿದ್ದಾರೆ, ಕನಿಕರಪಟ್ಟು ಹೆಂಗಸಿನ ಸಂಕಟನೋಡಿ ಮನನೊಂದು ಚೀಟಿ ಕೊಟ್ಟಿದ್ದಾರೆ. ಬಹುಶಃ ಅವರು ಪರೀಕ್ಷೆ ಮಾಡಬಹುದಾಗಿತ್ತು ಎಂದು ಜನರು ಆಡಿಕೊಳ್ಳುತ್ತಿದ್ದಾರೆ. ಏನೋ ಸ್ವಲ್ಪ ಅನುಕೂಲಸ್ಥಿತಿಯಲ್ಲಿ ಇದ್ದಿದ್ದರೆ ಅವರು ಸರಿಯಾಗಿ ಪರೀಕ್ಷೆಮಾಡುತ್ತಿದ್ದರು, ಪಾಪ, ಮುನಿಯಮ್ಮ ಬಡವಳಾದ್ದರಿಂದ ಚೀಟಿಮಾತ್ರ ಕೊಟ್ಟು ಕಳುಹಿಸಿದರೋ ಏನೋ ಎಂದು ಜನ ಅಂದುಕೊಳ್ಳುತ್ತಿದ್ದರು. ಅದು ಹಾಗೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ.

Dr. T. PARTHASARATHY.—It is an allegation against me and it should be expunged.

Sri J. B. MALLARADHYA.—I am one of those families in Bangalore who is under the protection of Dr. Parthasarathy. My Hon'ble friend has built up a hightype of reputation as a Doctor in the whole of Bangalore City. He is known to be the friend of the poor and the rich alike. There are thousands of patients on whom he attends day and night. I know even of instances where he has paid for medicine and food. To make an allegation against such a

ಪ್ರಾಪ್ತಿ ಕ್ರಮಾಂಕ Accession No.(B) 4757
ದಿನಾಂಕ Date..................

person, I am sorry to say that—possibly the Hon'ble Minister is misinformed. I should like the Home Minister to withdraw his remarks. The Doctor's character and professional integrity are of a high order. To make an allegation against such a person is, I think, very inappropriate and we from this side make a strong protest.

Sri G. VENKATAI GOWDA (Palaiyam).—The Hon'ble Minister says that 'other people say'. What other people say is only a hearsay and it should not find a place in on the record.

Sri T. SUBRAMANYA.—I have personally known Dr. T. Parthasarathy. I know his method of practice. I know the number of patients he treats. All that I submit to this House is, the Minister has been very uncharitable in believing a statement which he has heard from others.

Mr. SPEAKER.—So far as the record is concerned, I am sorry I cannot do anything. But I can understand the feelings of the Hon'ble Member including that of the Doctor. I uphold what the Hon'ble Member Sri T. Subramanya has stated just now. That is a very relevant statement and that should be borne in mind by the Hon'ble Minister. Beyond that I cannot help because the statement made by the Hon'ble Minister is not such as to order for its elimination.

Sri J. B. MALLARADHYA.—I request him to at least withdraw it.

ಅಧ್ಯಕ್ಷರು.—ಅದನ್ನು withdraw ಮಾಡುವುದು, ಬಿಡುವುದು ಅವರ ಕರ್ತವ್ಯ, ಅದನ್ನು ನಾನು ಹೇಳಲಾರೆ. ಈಗ protest ಮಾಡಿದ್ದಾರೆ, misinformed ಎಂದು ಹೇಳಿದ್ದಾರೆ, ಅಷ್ಟು ಸಾಕು.

Sri J. B. MALLARADHYA.—I appeal to him.

Sri K. KENCHAPPA (Hiriyur).—I believe that the statement made by the Hon'ble Minister amounts to an insinuation in the sense that when the Minister stated that because Smt. Muniamma happened to be a woman with not sufficient means, the doctor could not have given a certificate. That is how the statement goes to show. That means the doctor who is an Hon'ble Member of this House is not in the habit of helping the poor people and even though the doctor has seen a laudable cause. This amounts to insinuation and has to be removed from the records.

Mr. SPEAKER.—I have given a ruling. ನಾನು ಮಾನ್ಯ ಸದಸ್ಯರು ಹೇಳಿದ್ದನ್ನೆಲ್ಲಾ ಕೇಳಿದ್ದೇನೆ. ಮತ್ತೆ ಯಾರೂ ಪ್ರಶ್ನೆ ಮಾಡಬೇಕಾದ ಅವಶ್ಯಕತೆಯಿಲ್ಲ. ರಿಕಾರ್ಡಾಗಿರುವ ವಿಷಯದ ಬಗ್ಗೆ ಏನು ಮಾಡುವುದಕ್ಕೂ ಸಾಧ್ಯವಿಲ್ಲ. ಶ್ರೀ ಟಿ. ಸುಬ್ರಹ್ಮಣ್ಯರವರು ವಿಚಾರ ಹೇಳಿದ್ದಾರೆ, ಇನ್ನು ಕೆಲವರು ಪ್ರೊಟೆಸ್ಟ್ ಮಾಡಿದ್ದಾರೆ. ಅದಕ್ಕಿಂತ ಹೆಚ್ಚಾಗಿ ಏನೂ ಮಾಡುವುದಕ್ಕಾಗುವುದಿಲ್ಲ. ಮೇಲೆ ಮೇಲೆ ಈರೀತಿ ಅನೇಕರು ಕೇಳುವುದು, ಅದಕ್ಕೆ ಪ್ರತ್ಯುತ್ತರ ಹೇಳುವುದು ಇಲ್ಲಿಗೆ ಬಿಡಬೇಕು.

Dr. T. PARTHASARATHY.—If he is a sportsman, he must yield to me.

Sri C. M. POONACHA.—I am sorry I cannot yield. What I was mentioning was: 21ನೆಯ ತಾರೀಖಿನ ದಿವಸ ಒಂದು ಪಿಟಿಷನ್ ಬಂತು. ಹಾಗು ಅದನ್ನು ವಿಚಾರವಾಡಲಾಯಿತು. 17ನೆಯ ತಾರೀಖಿನ ದಿವಸ ಪೋಲೀಸ್ ಸ್ಟೇಷನ್‌ನಲ್ಲಿ ಯಾವ ರೀತಿ ಕೆಲಸ ನಡೆಯಿತು ಎಂಬುದಕ್ಕೆ ನನ್ನ ಹತ್ತಿರ ದಾಖಲೆ ಇದೆ. ಈ ಆಪಾದನೆ ಸರಿಯಾಗಿಲ್ಲವೆಂದು ವಿಚಾರಣೆ ಮಾಡಿದ ಮೇಲೆ ತಿಳಿಯಬಂತು. 24ನೆಯ ತಾರೀಖಿನವರೆಗೆ ಯಾವುದೇ ತರದ ಮಾತುಗಳೂ ನಡೆಯಲಿಲ್ಲ. ಇಂಥ ಒಂದು ಸಂದರ್ಭವಿರುವಾಗ ನಾನು ಡಾಕ್ಟರ್ ಪಾರ್ಥಸಾರಥಿಯವರನ್ನು ಕೇಳುತ್ತೇನೆ. ಈ ವಿಷಯ ಗಮನಕ್ಕೆ ಬಂದ ನಂತರ 18ನೆಯ ತಾರೀಖಿನಿಂದ 21ನೆಯ ತಾರೀಖಿನವರೆಗೆ ಅವರು ಈ ವಿಷಯ ತಿಳಿದಿದ್ದರು,-ಅವರು ಚೀಟಿ ಕೊಟ್ಟಿದ್ದರು, ಪರಿಶೀಲನೆ ಮಾಡಿದ್ದರು—ಆ ಕಾಲದಲ್ಲಿ ಕ್ರೌರ್ಯ ನಡೆದದ್ದನ್ನು ನನಗೂ ಒಂದು ಮಾತು ಅವರು ತಿಳಿಸಬೇಕಾಗಿತ್ತು. ಇನ್ನೊಂದು ವಿಷಯ ಹೇಳುತ್ತೇನೆ. ಏಕೆಂದರೆ ಆಗ್ಗೆ ಏನೇನೂ ಆಗಿಲ್ಲ. ಇಂಥ ದುಷ್ಟ ಕ್ರೌರ್ಯ ನಡೆದಿದ್ದರೆ ಫೋನ್ ಮುಖಾಂತರವಾಗಲಿ ಅವರು ನನಗೆ ತಿಳಿವಳಿಕೆ ಕೊಟ್ಟಿದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳಲು ಅನುಕೂಲವಾಗುತ್ತಿತ್ತು. 24ನೆಯ ತಾರೀಖಿನ ದಿನ ಜ್ವರ ಹೆಚ್ಚಾಗಿ ಮುನಿಯಮ್ಮ ವಿಕ್ಟೋರಿಯಾ ಆಸ್ಪತ್ರೆಗೆ ಹೋದಳು.

ಡಾ॥ ಟಿ. ಪಾರ್ಥಸಾರಥಿ.—18ನೆಯ ತಾರೀಖಿನ ದಿನ ಆಸ್ಪತ್ರೆಗೆ ಕಳುಹಿಸಿದ ಮೇಲೆ ನನ್ನ ಬಳಿಗೆ ಅವಳು ಮತ್ತೆ ಬರಲೇ ಇಲ್ಲ. ಸರ್ಟಿಫಿಕೇಟ್ ನನಗೆ ಕೊಡಲು ಬರುವುದಿಲ್ಲವೆಂದು ನಾನು ಮ್ಯಾಜಿಸ್ಟ್ರೇಟರ ಮುಂದೆ ಸಹ ಆ ರೀತಿ ಹೇಳಿದ್ದೇನೆ. 28ನೆಯ ತಾರೀಖಿನ ದಿನ ಅಸೆಂಬ್ಲಿಗೆ ಬಂದಾಗ ಅವಳು ಸತ್ತದ್ದು ನನಗೆ ಗೊತ್ತಾಯಿತು. ಮೈಸೂರಿನಲ್ಲಿ ಕಾನೂನಿಗೆ ಅನುಗುಣವಾದ ಆಡಳಿತವಿದೆಯಲ್ಲ ಎಂದು ನಾನು ಮಂತ್ರಿಗಳಿಗೆ ಹೇಳಬೇಕಾದ್ದಿಲ್ಲ ಎಂದುಕೊಂಡು ಹೇಳಲಿಲ್ಲ. ಇನ್ನು ನಾನು ಆಕೆಯನ್ನು ಪರೀಕ್ಷಿಸಿ ಸರ್ಟಿಫಿಕೇಟ್ ಕೊಡುವ ವಿಷಯ. ನಾನು ಪ್ರೈವೇಟ್ ಡಾಕ್ಟರ್ ಆದ್ದರಿಂದ ಕ್ರಿಮಿನಲ್ ಅಸಾಲ್ಟ್ ಸರ್ಟಿಫಿಕೇಟ್ ಕೊಡುವಂತಿಲ್ಲ.

ಶ್ರೀ ಸಿ. ಎಂ. ಪೂಣಚ್ಚ.—ಆ ರೀತಿ ಮೆಡಿಕಲ್ ಸರ್ಟಿಫಿಕೇಟ್ಸ್ ಕೊಡಲು ಬರುವುದಿಲ್ಲ ಎಂಬುದನ್ನು ನಾನೂ ತಿಳಿದುಕೊಂಡಿದ್ದೇನೆ.

Sri V. P. DEENADAYALU NAIDU (Cubbonpet).—I rise to a point of order. Dr. Parthasarathy said just now that while quoting something, he had said the same thing before some Magistrate. The enquiry is not completed. Can we allow such a statement to be made on the floor of the Assembly as to what he said before the Magistrate when the enquiry is not completed ?

Mr. SPEAKER.—I could not understand what the point of order is at all. There is no point of order.

Sri V. P. DEENADAYALU NAIDU.—Can he make such a statement here when the enquiry before the Magistrate is not completed ?

Mr. SPEAKER.—He is not a trial Magistrate; he is not a court at all. That ruling has been given. When he makes an enquiry under section 176 of the Cr.P.C. it is not a court and there is no adjudication involved in that. The Hon'ble Member may refer to it. I do not see any fault.

ಶ್ರೀ ಸಿ. ಎಂ. ಪೂಣಚ್ಚ.—ನಾನು ಈ ಮೊದಲೇ ಹೇಳಿದ ಹಾಗೆ 18ನೆಯ ತಾರೀಖಿನಿಂದ 24ನೆಯ ತಾರೀಖಿನವರೆಗೆ ಏನೇನೂ ವರ್ತಮಾನವಿಲ್ಲ. ಪ್ರಥಮ ದಿವಸದಲ್ಲಿಯೇ ಇಂಥಾ ದುಷ್ಟ ಕಾರ್ಯ ನಡೆದದ್ದೇ ಆಗಿದ್ದರೆ 24ನೆಯ ತಾರೀಖಿನಿಂದ 28ರ ವರೆಗೆ ಏನೇನೂ ವರ್ತಮಾನವಿಲ್ಲ. ಯಾರೂ ಹೇಳಲಿಲ್ಲ. ದುಷ್ಟ ಕಾರ್ಯ ನಡೆದದ್ದನ್ನು ಡಾಕ್ಟರ್ ಪಾರ್ಥಸಾರಥಿಯವರಿಗೆ ಮೊರೆ ಇಟ್ಟದ್ದನ್ನು ಅನಂತರ ಯಾರೂ ಏನೂ ಹೇಳಲಿಲ್ಲ, ಯಾವ ರೀತಿಯ ಮಾತುಕತೆಯೂ ನಡೆಯಲಿಲ್ಲ. ಯಾವ ಆಪಾದನೆಯೂ ಇರಲಿಲ್ಲ. ಡಾಕ್ಟರ್ ಪಾರ್ಥಸಾರಥಿಯವರಿಗೂ ಸಹ ಈ ವಿಷಯ 28ನೆಯ ತಾರೀಖಿನ ದಿನ ತಿಳಿದದ್ದು. 24ನೆಯ ತಾರೀಖಿನ ದಿನ ಜ್ವರ ಬಂದಿದ್ದರಿಂದ ಆಸ್ಪತ್ರೆಗೆ ಹೋಗಲು ಜ್ವರ ಜಾಸ್ತಿ ಇದ್ದುದರಿಂದ indoor patient ಆಗಿರಬೇಕೆಂದು ಡಾಕ್ಟರರ ಸಲಹೆ ಪ್ರಕಾರ ಆಸ್ಪತ್ರೆಯಲ್ಲಿ admit ಮಾಡಿದರು. ಒಬ್ಬ ವಯಸ್ಸಾದ ಹೆಂಗಸು, ಬಹುತರವಾಗಿ ಅವಳ ತಾಯಿಯಾಗಿರಬಹುದು, ಅವಳ ಹತ್ತಿರ ಚಿಕಿತ್ಸೆ ನಡೆದಾಗ ಸಹಾಯ ಮಾಡಲು ವಾರ್ಡಿನಲ್ಲಿದ್ದಳು. 24 ಮತ್ತು 25—ಎರಡೂ ದಿವಸ ಮುನಿಯಮ್ಮನಿಗೆ ಸರಿಯಾಗಿ ಪ್ರಜ್ಞೆ ಇತ್ತು. 102 ರಿಂದ 103ರ ವರೆಗೆ ಜ್ವರ ಏರುತ್ತಾ ಇತ್ತು. ಅವಳ ತಾಯಿಯವರಾಗಲಿ ಮುನಿಯಮ್ಮ ಆಗಲಿ ಈ ಆಪಾದನೆಯ ವಿಷಯದ ಬಗ್ಗೆ ಪಿಟ್ಟೆಂದು ಮಾತನಾಡಲಿಲ್ಲ. 26 ಮತ್ತು 27ನೆಯ ತಾರೀಖಿಗೆ ಜ್ವರ ಜಾಸ್ತಿಯಾಗಿ ಅವಳು ಡಿಲಿರಿಯಸ್ ಕಂಡೀಷನ್‌ನಲ್ಲಿ ಇದ್ದಳು. 28ನೆಯ ತಾರೀಖಿನ ದಿನ ರಾತ್ರಿ ಅವಳು ಮೃತಪಟ್ಟಳು. 28ನೆಯ ತಾರೀಖಿನ ದಿನ ಈ ಸಭೆ ಸೇರುವುದಕ್ಕೆ ಒಂದು ಗಂಟೆ ಮುಂಚಿತವಾಗಿ ಡಾಕ್ಟರ್ ಪಾರ್ಥಸಾರಥಿಯವರು ಒಂದು ಅರ್ಜಿಯನ್ನು ನನಗೆ ಕೊಟ್ಟರು. ಪೋಲೀಸರ ಅತ್ಯಾಚಾರದ ಮೂಲಕ ಮುನಿಯಮ್ಮ ಸತ್ತಿದ್ದಾಳೆಂದು ಹೇಳಿ, ಡಾಕ್ಟರ್ ಪಾರ್ಥಸಾರಥಿಯವರು, 'ಪೋಸ್ಟ್ ಮಾರ್ಟಮ್ ನಡೆಸಬೇಕು, ಜನತೆಯಲ್ಲಿ ಅವಳ ಮರಣದ ವಿಷಯದಲ್ಲಿ ತುಂಬ ಅಸಮಾಧಾನ ಉಂಟಾಗಿದೆ' ಯೆಂದು, ಬಂದು ಹೇಳಿದರು. ನಾನು ತತ್‌ಕ್ಷಣ ಈ ವಿಷಯಕ್ಕೆ ಗಮನ ಕೊಟ್ಟೆ. ಅವರು ಅರ್ಜಿ ಬರೆದು ಕೊಟ್ಟ ಮುಕ್ಕಾಲು ಗಂಟೆಯೊಳಗಾಗಿಯೇ ನಾನು ಇಲ್ಲಿಯೇ ಇರುವಾಗಲೇ ನನಗೆ ವರ್ತಮಾನ ಬಂತು; ಇಂಕ್ವೆಸ್ಟ್ ಮಾಡುತ್ತಾರೆ, ಪೋಸ್ಟ್ ಮಾರ್ಟೆಮ್ ಆಗುತ್ತದೆಂದು ನನಗೆ ತಿಳಿದು ಬಂತು. ಕಾನೂನು ಅನುಸಾರವಾಗಿ ಕ್ರಮ ನಡೆಸುತ್ತಾರೆಂದು ನನಗೆ ಪೋಲೀಸರಿಂದ ವರ್ತಮಾನ ಬಂತು.

Sri K. HANUMANTHAIYA.—May I know from the Minister as to what the doctors say with regard to the cause of death, namely, the name of the disease ?

Sri C. M. POONACHA.—That they have already given in their statement. They say that it is due to *toximia* that is caused by enteric type of fever. That is their report.

Dr. T. PARTHASARATHY.—You may take an expert opinion. If a doctor can diagnose enteric fever even in three days, I shall certainly leave off my profession.

Sri C. M. POONACHA.—He may claim to give an expert opinion because he is in the line. I cannot say; but however, I am basing my argument on the authority of the medical report I have with me and treatment given. ಪೋಸ್ಟ್ ಮಾರ್ಟೆಮ್ ಆಗಬೇಕೆಂದು ಹೇಳಿದರು. ಪೋಸ್ಟ್‌ಮಾರ್ಟೆಮ್ ಎಗ್ಸಾಮಿನೇಷನ್ ಆಗಿದೆ. ಡಾಕ್ಟರು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಅವರು ಒಳ್ಳೆ ಅನುಭವಪಡೆದಂಥಾ ಡಾಕ್ಟರುಗಳು. ನಾನು ಒಂದು ವಿಷಯವನ್ನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ತಿಳಿಯಪಡಿಸುತ್ತೇನೆ. 28ನೆಯ ತಾರೀಖಿನ ದಿನ ಡಾಕ್ಟರ್ ಪಾರ್ಥಸಾರಥಿಯವರು ನನಗೆ ಅರ್ಜಿ ಒಪ್ಪಿಸಿದರು. ಇಂಕ್ವೆಸ್ಟ್ ಮಾಡಬೇಕು, ಪೋಸ್ಟ್ ಮಾರ್ಟೆಮ್ ಮಾಡಬೇಕು, ಪರಿಶೀಲನೆ ಮಾಡಬೇಕು ಎಂದು ನಾನು ತಿಳಿಸಿದೆ. ಏಕೆಂದರೆ ಮನಸ್ಸಿನಲ್ಲಿ ಯಾವುದೇ ತರದ ಸಂಶಯ ಉಳಿಯಬಾರದು. ಸಾಧಾರಣವಾಗಿ 3 ಅಥವಾ 3½ ಗಂಟೆಯ ಸುಮಾರಿಗೆ ಡಾಕ್ಟರ್ ಪಾರ್ಥಸಾರಥಿ, ಮಾನ್ಯ ಮಿತ್ರರಾದ ಜಾರ್ಜ್ ಹೂವರ್ ಮತ್ತು ನರಸಿಂಹನ್—ಇವರು ಆಸ್ಪತ್ರೆಗೆ ಹೋಗಿ ಎಲ್ಲಾ ವಿಷಯ ನೋಡಿದ್ದಾರೆ. ಇಂಕ್ವೆಸ್ಟ್ ಆಗಬೇಕು, ಪೋಸ್ಟ್‌ಮಾರ್ಟೆಮ್ ಆಗಬೇಕು ಎಂದು ಅರ್ಜಿ ಕೊಟ್ಟು, ಅದಕ್ಕೆ ಕ್ರಮ ತೆಗೆದುಕೊಂಡು ಮುಂದುವರಿಸಿ, ಡಾಕ್ಟರ ಏರ್ಪಾಡು ನಡೆದು, ಮ್ಯಾಜಿಸ್ಟ್ರೇಟರ ಏರ್ಪಾಡು ನಡೆದಿರುವಾಗ ಎಲ್ಲ ವಿಷಯವನ್ನೂ ಅವರು ಆ ಸ್ಥಳಕ್ಕೆ ಹೋಗಿ ನೋಡಿದ್ದಾರೆ. ಒಂದೇ ಒಂದು ವಿಷಯದಲ್ಲಿ ನನಗೆ ಸ್ವಲ್ಪ ಮನಸ್ಸಿಗೆ ಸಂಶಯ ಬಂತು. ನಾಲ್ಕು ಗಂಟೆಯ ಸಮಯಕ್ಕೆ ಡಿ.ಎಸ್.ಪಿ. ರೇವಣ್ಣನವರ ಕಡೆಗೆ ಅಲಸೂರಿಗೆ, ಈ ಮೂರು ಜನರೂ ಹೋದರು. ಅವರು "ಇದು ಸಾಧಾರಣವಾದ ವಿಷಯ. ಇದಕ್ಕೆ ಏತಕ್ಕೆ ಪೋಸ್ಟ್‌ಮಾರ್ಟಮ್; ಅವರ ಸಂಬಂಧಿಕರು ಬಹಳ ದುಃಖದಲ್ಲಿದ್ದಾರೆ, ಇದೆಲ್ಲಾ ಆಗಿ

ಮುಗಿಯುವ ಹೊತ್ತಿಗೆ ಶವ ವಾಸನೆ ಬರುತ್ತದೆ. ಪೋಸ್ಟ್ ಮಾರ್ಟಮ್ ಏತಕ್ಕೆ ? ಶವವನ್ನು ಕೊಟ್ಟು ಬಿಡಬಹುದು " ಎಂದು ಹೇಳಿದರು.

ಡಾ॥ ಟಿ. ಪಾರ್ಥಸಾರಥಿ.—ನಾವಲ್ಲ ; ಅವರು ಸಲಹೆ ಕೊಟ್ಟಿದ್ದಾರೆ.

ಒಬ್ಬ ಸದಸ್ಯರು.—ಮೂರು ಜನರೂ ಜೊತೆಯಲ್ಲಿಯೇ ಇದ್ದರು.

ಶ್ರೀ ಸಿ. ಎಂ. ಪೂಣಚ್ಚ.—ಕ್ರಿಮಿನಲ್ ಲಾಯರ್ ಆಗಿರುವ ಸದಸ್ಯರು ಇದ್ದಾರೆ; ಅವರಿಗೇ ಒಪ್ಪಿಸಬೇಕಾಗುತ್ತದೆ. ಈ ವಿಷಯ ಬಹಳ ಮುಖ್ಯವಾದದ್ದು. ಒಂದು ಕಡೆ, ಜನ ಮನಸ್ಸಿನಲ್ಲಿ ಬಹಳ ನೊಂದುಕೊಂಡಿದ್ದಾರೆ; ಪೋಸ್ಟ್‌ಮಾರ್ಟಂ ಆಗಬೇಕು ಎಂದು ಪ್ರಬಲವಾಗಿ ಒತ್ತಾಯ ಮಾಡುವುದು, ಮತ್ತೊಂದು ಕಡೆ ಮಾನ್ಯಮಿತ್ರರು ಮಾತುಕತೆ ಆಡಿ, ಅದೆಲ್ಲಾ ಬೇಡಿ ಎಂದು ಹೇಳುವುದು. ಇದರಲ್ಲಿ ಏನೋ ಅಂತರ್ಯವಿದೆ. ಇದು ಬಹಳ ಚೋದ್ಯ ವಿಷಯ. ಇದನ್ನು ಸಾರ್ವಜನಿಕರು ತಿಳಿಯಬೇಕು. ಏತಕ್ಕೆಂದರೆ ಈ ಪ್ರಕಾರವಾಗಿ ಉದ್ದೇಶಪೂರ್ವಕವಾಗಿ ಪೋಲೀಸಿನವರ ಮೇಲೆ ಆರೋಪಣೆಯನ್ನು ಹೊರಿಸಬೇಕೆಂದು ನಡೆದಿದೆಯೋ ಏನೋ ಎಂದು ನನಗೆ ಸಂಶಯವಾಗಿದೆ. ಪೋಲೀಸ್ ಸೂಪರಿಂಟೆಂಡೆಂಟ್ ಹೇಳುತ್ತಾರೆ. 'ಕೊಡುವುದಕ್ಕೆ ಆಗುವುದಿಲ್ಲ, ಆರ್ಡರ್ಸ್ ಬಂದಿದೆ; ಪೋಸ್ಟ್, ಮಾರ್ಟಮ್ ಎಗ್ಸಾಮಿನೇಷನ್ ಆಗಿ ಮುಗಿದ ಮೇಲೆಯೇ ಶವವನ್ನು ಕೊಡುವುದು ' ಎಂದು.

ಶ್ರೀ ಟಿ. ಸುಬ್ರಮಣ್ಯ.—ಶ್ರೀ ರೇವಣ್ಣನವರು ಯಾವಾಗ ರಿಪೋರ್ಟ್ ಮಾಡಿದ್ದಾರೆ ? ಡಾ॥ ಪಾರ್ಥಸಾರಥಿಯವರು ಮತ್ತು ಹೂವರ್ ಬಂದು ಏತಕ್ಕೋಸ್ಕರ ಪೋಸ್ಟ್‌ಮಾರ್ಟಮ್ ಮಾಡುತ್ತೀರಿ ಎಂದು ಕೇಳಿದರೆನ್ನುವುದನ್ನು ಯಾವಾಗ ರಿಪೋರ್ಟ್ ಮಾಡಿದರು ?

ಶ್ರೀ ಸಿ. ಎಂ. ಪೂಣಚ್ಚ.—ಖಚಿತವಾಗಿದೆ. ಲಿಖಿತ ಮೂಲಕ ಕೊಟ್ಟಿದ್ದಾರೆ, ನೋಡಬೇಕು.

ಡಾ॥ ಟಿ. ಪಾರ್ಥಸಾರಥಿ.—ಪೋಲೀಸಿನವರು ಹರಿಶ್ಚಂದ್ರರೆಂದು ಹೇಳಿದರೆ ಹೇಗೆ ಸಾಧ್ಯ ?

ಶ್ರೀ ಸಿ. ಎಂ. ಪೂಣಚ್ಚ.—ಶ್ರೀ ಹೂವರ್ ಅವರು ಹಾಗೆ ಕೇಳಿದ್ದಾರೆಂದು ಒಪ್ಪಿದ್ದಾರೆ. ನಾನು ಈ ವಿಷಯವನ್ನು ಮಾನ್ಯ ಸಭೆಗೆ ಒಪ್ಪಿಸಿಬಿಡುತ್ತೇನೆ. ಯಾರೊಬ್ಬರ ಮೇಲೆ ಆಕ್ಷೇಪಣೆಯನ್ನು ಹೇಳುವ ಹಾಗಿಲ್ಲ. ಇಷ್ಟೊಂದು ಪ್ರಚೋದನೆಯನ್ನು ಉದ್ರೇಕ ರೂಪದಲ್ಲಿ ಹೊರಡಿಸಿ, ಅನಂತರ ಈ ಪ್ರಕಾರ ವಿದ್ಯಮಾನಗಳು ಸಭಾ ಸದಸ್ಯರಿಂದ ನಡೆಯಬೇಕಾದರೆ, ನನಗೆ ದುಃಖವಾಗುತ್ತದೆ. ಏತಕ್ಕೆಂದರೆ ಇದು ಪ್ರತಿಯೊಬ್ಬರ ಮನಸ್ಸನ್ನೂ ಕೆರಳಿಸಿದೆ. ಈ ವಿಷಯವನ್ನು ಬಹಳ ಶಾಂತತೆಯಿಂದ ಪ್ರಶಾಂತತೆಯಿಂದ ಆಲೋಚನೆ ಮಾಡಬೇಕು. ನನಗೆ ಮನಸ್ಸಿನಲ್ಲಿ ದುಃಖ ಇದೆ. ಏನೋ ಒಂದು ತರಹ ನಡೆದಿದೆ. ಪೋಲೀಸ್ ಸೂಪರಿಂಟೆಂಡೆಂಟ್‌ರು ಬಹುಶಃ ಶವ ಕೊಟ್ಟಿದ್ದರೆ ಏನು ಆಗಬಹುದಾಗಿತ್ತು ?

Sri T. SUBRAMANYA.—Before the Hon'ble Minister proceeds, there is a point of difference and it is this. The Hon'ble Minister said that Sri Revanna, District Superintendent of Police, wrote to him. On what date he wrote is not clear. I would like to request the Hon'ble Minister to search for that letter. It must be in that file. My information is that Sri Revanna wrote to the Minister or the authority concerned immediately. Therefore, it would be helpful for us to come to certain conclusions and definite conclusions if the letter is found out and read out to us.

Sri C. M. POONACHA.—I do not have the letter. But I have information on record. That particular point is not disputed.

ಆಮೇಲೆ ನಾಲ್ಕು ಗಂಟೆಯಮೇಲೆ ಶ್ರೀ ರೇವಣ್ಣನವರಲ್ಲಿಗೆ ಮೂವರು ಮಾನ್ಯ ಸದಸ್ಯರು ಹೋದರು.

ಡಾ॥ ಟಿ. ಪಾರ್ಥಸಾರಥಿ.— ಪೋಸ್ಟ್‌ಮಾರ್ಟಮ್ ಮಾಡಿ ಎಂದು ಹೇಳುವುದಕ್ಕೆ ಹೋಗಿದ್ದರು. ಈ ತರಹ ತಲೆಕೆಳಕು ಮಾಡುತ್ತಾರೆಂದು ನಂಬಿರಲಿಲ್ಲ. ನಾನು ಖಚಿತವಾಗಿ ಹೇಳುತ್ತೇನೆ, ಆ ತರಹ ವ್ಯವಹಾರ ಮಾಡಿಲ್ಲ.

ಶ್ರೀ ಸಿ. ಎಂ. ಪೂಣಚ್ಚ.—ನೀವು ಏತಕ್ಕೆ ಹೋದಿರಿ ?

ಡಾ॥ ಟಿ. ಪಾರ್ಥಸಾರಥಿ.— ಪೋಸ್ಟ್‌ಮಾರ್ಟಮ್ ಮಾಡಿ ಎಂದು ಹೇಳಿದ್ದಕ್ಕೆ. ತಾವೇ ಹೇಳಿದಿರಿ, ' ಡಿ.ಎಸ್.ಪಿ. ಕಾಂಟ್ಯಾಕ್ಟ್ ಮಾಡಿ' ಎಂದು.

Sri N. G. NARASIMHE GOWDA.—I raise a point of order.

Mr. SPEAKER.—You may raise a point of order. It may or may not be a point of order.

ಒಬ್ಬರು ಮಾತನಾಡುವ ಹೊತ್ತಿಗೆ ಇನ್ನೊಬ್ಬರು ಎದ್ದುಬಿಟ್ಟರೆ ಕನ್‌ಫ್ಯೂಷನ್ ಆಗುತ್ತದೆ. ಅವರು ಕುಳಿತಮೇಲೆ ಪಾಯಿಂಟ್ ಆಫ್ ಆರ್ಡರ್ ಆಗಲಿ.

ಶ್ರೀ ಎನ್. ಜಿ. ನರಸಿಂಹೇಗೌಡ.—ಈಗತಾನೆ, ಮಾನ್ಯ ಮಂತ್ರಿಗಳು ಪೋಸ್ಟ್‌ಮಾರ್ಟೆಂ ವಿಷಯದಲ್ಲಿ ಮೆಡಿಕಲ್ ಒಪಿನಿಯನ್ ಏನೆಂಬುದನ್ನು ಹೇಳಿದರು. ಈಗ ಮಂತ್ರಿಗಳು ಹೇಳುವ ರೀತಿಯಲ್ಲಿ ಆ ಮೆಡಿಕಲ್ ಒಪಿನಿಯನ್ ಪ್ರಕಾರ ಈ ಕೇಸು ಮರ್ಡರ್ ಆಗುವುದಿಲ್ಲ. ಮರ್ಡರ್ ಆಗದೆ ಇರುವುದರಿಂದ ಯಾವ ಆಧಾರದ ಮೇಲೆ, ಕ್ರಿಮಿನಲ್ ಕೋಡಿನ ಯಾವ ಸೆಕ್ಷನ್ ಪ್ರಕಾರ, ಎನ್‌ಕ್ವೈರಿ ಮಾಡುವುದಕ್ಕೆ ಅಧಿಕಾರ ಕೊಟ್ಟರು ?

ಅಧ್ಯಕ್ಷರು.—ಈಗ ನಮ್ಮ ಮುಂದೆ ಯಾವುದಾದರೂ ಪಾಯಿಂಟ್ - ಆಫ್ ಆರ್ಡರ್ ಎತ್ತಬೇಕಾದರೆ ಅದು ಸಂಬಂಧಿಸಿದ ವಿಷಯದ ಮೇಲೆ ಇರಬೇಕು. ಈ ತರಹ ಪಾಯಿಂಟ್ ಆಫ್ ಆರ್ಡರ್ ಎತ್ತಿದರೆ ಸ್ವಲ್ಪ ಸೀರಿಯಸ್ ನೋಟೀಸ್ ತೆಗೆದುಕೊಳ್ಳಬೇಕಾಗುತ್ತದೆ. ಏನೋ ಒಂದು ವಿಷಯವನ್ನು ಕೇಳುವುದು ಇದ್ದರೆ ಅದು ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲ.

Sri K. PUTTASWAMY (Mysore).—Usually points of order are raised with reference to rules of procedure. Now I find points of order are raised somehow and anyhow and the time of the House is taken.

Mr. SPEAKER.—Points of order are raised with reference to certain subjects and certain matters which are going on here. I want the Hon'ble Members not to waste the time of the House like this and if they do it, I will have to take serious notice of it.

ಶ್ರೀ ಜಿ. ಎನ್. ಪುಟ್ಟಣ್ಣ.—ಡಿ.ಎಸ್. ಪಿ. ಗೋ ಮೇಲ್ಪಟ್ಟ ಅಧಿಕಾರಿಗಳಿಗೋ ಪೋಸ್ಟ್‌ಮಾರ್ಟಮ್ ಮಾಡಬೇಕು ಎಂದು ತಾವು ಹೇಳಿದಿರಿ ಎಂದು ಹೇಳಿದಂತೆ ಜ್ಞಾಪಕವಿದೆ. ಹಾಗಿದ್ದಮೇಲೆ ಅವರು ಈ ಮೆಂಬರುಗಳನ್ನು ಏತಕ್ಕೆ obey ಮಾಡಬೇಕು ?

ಶ್ರೀ ಸಿ. ಎಂ. ಪೂಣಚ್ಚ.—ಬಹುಶಃ obey ಮಾಡಿ ಬಿಟ್ಟಿದ್ದರೆ ಪರಿಸ್ಥಿತಿ ಏನು ಆಗುತ್ತಿತ್ತು ? ಶವವನ್ನು ತೆಗೆದುಕೊಂಡು ಹೋಗಿ ದಫನ್ ಮಾಡಿದ್ದರೆ ಏನಾಗು ತ್ತಿತ್ತು ಎಂದು ನನ್ನಲ್ಲಿ ಪ್ರಶ್ನೆ ಹಾಕಿಕೊಂಡು ಆಲೋ ಚನೆ ಮಾಡುತ್ತಾ ಇರುವುದು. ಡಿ.ಎಸ್.ಪಿ. ಕಾರ್ಯ ಕ್ರಮ ತೆಗೆದುಕೊಳ್ಳುವಂತೆ ಎಲ್ಲಾ ಆರ್ಡರ್ ಆಗಿರು ವುದು ಪ್ರತಿಯೊಬ್ಬರಿಗೂ ಗೊತ್ತಿದೆ. ಮೂರು ಜನ ಗಳು ಹೋಗಿರುವುದು ಈ ವಿಷಯದಲ್ಲಿ ನನಗೆ ಸಂಶಯ ಇದೆ. ನನಗಂತೂ ಸತ್ಯಾಂಶವನ್ನು ಬಯಲಿಗೆ ತರ ಬೇಕು ಎನ್ನುವ ದೃಷ್ಟಿಯಿಂದ ಇದು ಮಾಡಿದ್ದಲ್ಲ. ಯಾವುದಾದರೂ ಒಂದು ದೃಷ್ಟಿಯಿಂದ ಸಮಯವನ್ನು ಉಪಯೋಗಿಸಿ ಯಾವುದಾದರೂ ರೀತಿಯಲ್ಲಿ ಪೋಲಿಸಿ ನವರ ಮೇಲೆ ಆರೋಪಣೆಯನ್ನು ಹೊರಿಸಬೇಕು ಎಂದು ಮಾಡಿದಂಥ ವಿಷಯ ಎಂದು ತಿಳಿದುಕೊಂಡಿದ್ದೇನೆ.

3 P.M.

ಖಂಡಿತವಾಗಿ ಯಾವುದೇ ರುಜುವಾತು ತೆಗೆದು ಕೊಂಡರೂ, ಯಾವುದೇ ದಾಖಲು ತೆಗೆದು ಕೊಂಡರೂ, ಪ್ರತಿಯೊಂದರಲ್ಲೂ ಸ್ಪಷ್ಟವಾಗಿ ಕಾಣುತ್ತದೆ, ಇದನ್ನು ಕೆಲವರು ಉದ್ದೇಶಪೂರ್ವಕವಾಗಿ ಪೋಲೀ ಸಿನವರ ಮೇಲೆ ಆಪಾದನೆ ಹೊರಿಸಬೇಕೆಂಬ ದೃಷ್ಟಿ ಯಿಂದ ಮಾಡಿದ್ದಾರೆ ಎಂದು. ಆ ದೃಷ್ಟಿಯಿಂದ ಸರ್ಕಾ ರದವರು ಬಹಳ ವ್ಯಸನಪಟ್ಟಿದ್ದಾರೆ. ಇದು ಹೇಗೆ ಬೆಳೆದು ಬಂದಿದೆ ಮತ್ತು ಯಾವರೀತಿ ಇಷ್ಟು ಪ್ರಚಾರಕ್ಕೆ ಬಂದಿದೆ ಎಂಬುದನ್ನು ತಿಳಿಯುವುದೇ ಕಷ್ಟವಾಗಿದೆ. ಮಾನ್ಯಸದಸ್ಯರು ಯಾವ ರೀತಿ ಇಲಾಖೆಯನ್ನೇ ದೂರಿ ದರು ಎಂಬ ವ್ಯಥೆ ನನಗೆ ಬಹಳವಾಗಿದೆ. ಸರ್ಕಾರದಲ್ಲಿ ಅಂಥಾದ್ದು ನಡೆಯಲಿಲ್ಲ. ಕೆಲವುವೇಳೆ ಏನಾದರೂ ಪೋಲೀಸಿನವರ ಮೇಲೆ ಆಪಾದನೆಗಳು ಬಂದುದರ ಸಲುವಾಗಿ ಅಂತಹ ಜನಗಳ ಮೇಲೆ ಎಷ್ಟೋಸಾರಿ ಸೂಕ್ತಕ್ರಮವನ್ನು ತೆಗೆದುಕೊಂಡಿದ್ದೇವೆ. ಹಿರಿಯ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮ ತೆಗೆದು ಕೊಳ್ಳುವುದಕ್ಕೆ ಸರ್ಕಾರ ಎಂದೂ ಹಿಂಜರಿದಿಲ್ಲ. ಇಲ್ಲದೇ ಇದ್ದುದನ್ನೆಲ್ಲಾ ಹೇಳಿ, ಇದನ್ನು ಇನ್ನೂ ದೀರ್ಘವಾಗಿ ವಿಚಾರಣೆ ಮಾಡಬೇಕೆಂದು ಹೇಳುವುದು ಬಹಳ ವ್ಯಸನಕರವಾದ ಸಂಗತಿ. ಇದನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ನಾನು ಮುಂಚಿತವಾ ಗಿಯೇ ಎಲ್ಲಾ ವಿಷಯಗಳನ್ನೂ ಸಭೆಯ ಮುಂದಿಡ ಬೇಕೆಂಬ ಉದ್ದೇಶವುಳ್ಳವನಾಗಿದ್ದೆ. ಆದರೆ ಕೆಲವು ನಿಬಂಧನೆಗಳಿಂದ ಮತ್ತು ಕೆಲವು ನಿಯಮಾವಳಿಗಳಿಂದ ಆ ವಿಷಯದಲ್ಲಿ ಮತ್ತೆ ಪುನಃ ಸ್ಪೀಕರ್ ಅವರ ರೂಲಿಂಗ್ ಆಗಬೇಕೆಂಬ ದೃಷ್ಟಿಯಿಂದ, ಈ ವಿಚಾರದ ಚರ್ಚೆಯನ್ನು ಮುಂದೆಹಾಕಲಾಯಿತು. ನಿಜವಾಗಿ ಮಾನ್ಯ ಸದಸ್ಯ ರಿಗೆ ನಾನು ದೈನ್ಯದಿಂದ ಹೇಳುತ್ತಿದ್ದೇನೆ. ಈ ವಿಷ ಯದಲ್ಲಿ ಅಂತಹ ಅಕ್ರಮ, ಅಂತಹ ದೌರ್ಜನ್ಯ, ಅಂತಹ ದುಷ್ಟಕಾರ್ಯ ಯಾವುದೂ ನಡೆದಿಲ್ಲ. ಮಾನ್ಯ ಶ್ರೀಮಾನ್ ಹನುಮಂತಯ್ಯನವರು ಈ ವಿಚಾರವನ್ನು ಚೆನ್ನಾಗಿ ಪರಿಶೀಲನೆ ಮಾಡಬೇಕು ಎಂದು ಹೇಳು ತ್ತಾರೆ.

ಒಬ್ಬ ಸದಸ್ಯರು.—ಇಲ್ಲದಿದ್ದರೆ, ಮುನಿಯಮ್ಮನ ಆತ್ಮ ತಮ್ಮನ್ನೇನಾದರೂ ಮಾಡೀತು !

ಶ್ರೀ ಸಿ. ಎಂ. ಪೂಣಚ್ಚ.—ನಾನು ಈ ವಿಚಾರದಲ್ಲಿ ಪ್ರತಿಯೊಂದು ಅಂಶವನ್ನೂ ಎಳ್ಳಷ್ಟು ಬಿಡದೆ ಆಲೋ ಚನೆಮಾಡಿದ್ದೇನೆ.

Sri K. HANUMANTHAIYA.—May I explain the matter ? Hon'ble Minister is under the impression that all of us are making personal allegation against him. I have a little experience of the administration. If he takes over all the responsibility of the Police Department from the Constable to the I.G., it is a responsibility which he cannot digest and which cannot be shouldered by anybody. Hon'ble Members of this House are asking for an impartial judiciary enquiry. The point is, the Police Department is under fire and if he depends upon the Department, it will not help to come to any conclusion. It is not he who is subject to the allegation. Therefore, all his speeches, very sincerely made, I grant, will not satisfy. It is that impartial judgment, where police will not sit in judgment but somebody else, which will satisfy your conscience as well as ours.

ಶ್ರೀ ಸಿ. ಎಂ. ಪೂಣಚ್ಚ.—ಈ ವಿಷಯದಲ್ಲಿ ಪೋಲೀಸ್ ಜುಡಿಷಿಯಲ್ ಎಙ್ಕ್ವೈರಿಗೆ ಏನಾದರೂ ಒಂದು ತರಹ ಆಧಾರ ಬೇಕು. ಆಧಾರವಿಲ್ಲದೆ ಸುಮ್ಮನೆ ಆರೋಪಣೆ ಹೊರಿಸುವುದಕ್ಕೋಸ್ಕರ ಜುಡಿಷಿಯಲ್ ಎಙ್ಕ್ವೈರಿಗೆ ಹೋಗಬೇಕೆಂದು ಹೇಳಿದರೆ, ಅದರಲ್ಲಿ ತಿರುಳಿಲ್ಲ. ತಾವೆಲ್ಲರೂ ಅನುಭವವುಳ್ಳವರು. ಅಂಥಾದ್ದಕ್ಕೆ ಸಾಧ್ಯ ಕೊಡಕೂಡದು.

ಒಬ್ಬ ಸದಸ್ಯರು.—ಇಲ್ಲೇನಾದರೂ ಪ್ರೈಮಾಫೇಸಿ ಕೇಸಿರಬೇಕು.

Sri K. HANUMANTHAIYA.—There is. Please listen to us patiently. I asked, what was the name of the disease from which Muniamma died. You said it was enteric fever. Dr. Parthasarathy immediately stated that it was impossible in the medical history for any doctor to prove that a person could die within three days or diagnose within three days. That is a serious statement. It is enough for you to think over whether this should not be investigated.

ಶ್ರೀ ಸಿ. ಎಂ. ಪೂಣಚ್ಚ.—ಈ ವಿಷಯದಲ್ಲಿ ನಾವು ವೈದ್ಯಕೀಯ ಸಲಹೆಯನ್ನು ಸಾಕಷ್ಟು ತೆಗೆದುಕೊಂಡಿ ದ್ದೇವೆ ಮತ್ತು ಡಾ|| ಪಾರ್ಥಸಾರಥಿಯವರದೇ ಕಡೆ

ಯಮಾತಲ್ಲ. ಈ ವಿಷಯವನ್ನು ಮೆಡಿಕಲ್‌ನಲ್ಲಿ ವಿಶೇಷ ಅನುಭವವಿದ್ದು, ಇಂತಹ ವಿಚಾರಗಳನ್ನು ಚೆನ್ನಾಗಿ ಅರಿತಂಥ ತಜ್ಞರು ಪರೀಕ್ಷಿಸಿ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆದ್ದರಿಂದ ಡಾ|| ಪಾರ್ಥಸಾರಥಿಯವರು ಹೇಳಿದ್ದನ್ನು ಅವರು ಒಪ್ಪುವುದಿಲ್ಲ. ಡಾ|| ಪಾರ್ಥಸಾರಥಿಯವರು, ತಜ್ಞರ ಅಭಿಪ್ರಾಯವನ್ನು "ಇಂಪಾಸಿಬಲ್" ಎಂದು ಅವರ ಅನುಭವದಿಂದ ಹೇಳಿಕೊಳ್ಳಬಹುದು. ಆದರೆ ಬೇರೆ ವಿಧದಲ್ಲಿ ಅದು ಅಲ್ಲ. ಇಂತಹ ಮರಣಗಳು ಕಾಯಿಲೆಗನುಗುಣವಾಗಿ ಸಂಭವಿಸಿವೆ. ಇವತ್ತೂ ನಡೆಯುತ್ತಿದೆ.

ಡಾ|| ಟಿ. ಪಾರ್ಥಸಾರಥಿ.—ನಾನು ಮರಣದ ವಿಚಾರ ಹೇಳಲಿಲ್ಲ. ಎಕ್ಸ್‌ಪ್ಲೈರಿ ಆಗಿದ್ದು ಕಾಯಿಲೆ ವಿಷಯವೇ ಎಂದು ಹೇಳಿದ್ದು.

ಶ್ರೀ ಸಿ. ಎಂ. ಪೂಣಚ್ಚ.—ಈ ವಿಷಯದಲ್ಲಿ ಪರಿಪೂರ್ಣವಾದ ಸಲಹೆಯನ್ನು ತಜ್ಞರಿಂದ ಹೊಂದಿದ್ದೇವೆ. ಇದರಲ್ಲಿ ಏನೂ ಸಂಶಯವಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಆಸ್ಪತ್ರೆಗೆ ಸೇರಿದಾಗ ಜ್ವರ ಬಂದು ಎಷ್ಟು ದಿವಸಗಳಾಗಿದ್ದುವು? ಡಾಕ್ಟರು ಹೇಳಿದ ಹಾಗೆ 3 ದಿನಗಳು ಆಗಿದ್ದರೆ 'ಎಂಟರಿಕ್ ಫೀವರ್' ಎಂಬುದನ್ನು ಮೂರುದಿನಗಳೊಳಗೆ ಗುಣಮಾಡುವುಕ್ಕಾಗುವುದಿಲ್ಲ. ಅಂದಮೇಲೆ ಜ್ವರ ಬಂದು ಮೂರುದಿನಗಳ ಮೇಲೆ ಆಸ್ಪತ್ರೆಗೆ ಹೋಗಿರಬಹುದು. ಇದರಿಂದ ಆಸ್ಪತ್ರೆಗೆ ಹೋದುದು, ಜ್ವರಬಂದುದು, ಎಲ್ಲವನ್ನೂ ಅವರ ಹಿಸ್ಟರಿ ಷೀಟನ್ನು ನೋಡಿದರೆ ಚೆನ್ನಾಗಿ ಗೊತ್ತಾಗುತ್ತದೆ.

ಶ್ರೀ ಸಿ. ಎಂ. ಪೂಣಚ್ಚ.—ಅದೂ ಇದೆ. ಅದರಲ್ಲಿ ವಿಷಯಗಳು ವಿಶದವಾಗಿವೆ. ನಾನು ಈ ವಿಚಾರವನ್ನು ಶೀಘ್ರವಾಗಿ ಕೊನೆಗಾಣಿಸಬೇಕಾಗಿದೆ, ಯಾಕೆಂದರೆ ಈ ವಿಚಾರದ ಬಗ್ಗೆ ಬಹಳ ಸಮಯವನ್ನು ತೆಗೆದುಕೊಂಡಿದ್ದೇನೆ. ಈ ವಿಷಯಗಳನ್ನು ಸ್ವಲ್ಪ ಸರಿಯಾಗಿ ಪರಿಶೀಲನೆ ಮಾಡೋಣ. ಈಗಾಗಲೇ ಎಲ್ಲಾ ವಿಧದಲ್ಲೂ ಇದನ್ನು ಪರಿಶೀಲನೆ ಮಾಡಿದ್ದೇವೆ. ಮತ್ತೆ ಎಗ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟರ ಸ್ಟೇಟ್‌ಮೆಂಟನ್ನು ರಿಕಾರ್ಡ್ ಮಾಡಿದ್ದೇವೆ. ಅವರು ಪೋಲೀಸ್ ರಿಪೋರ್ಟಿಗಾಗಲಿ, ಮಲ್ಲೇಶ್ವರಂ ಆಸ್ಪತ್ರೆಯ ಲೇಡಿ ಡಾಕ್ಟರ್ ರಿಪೋರ್ಟಿಗಾಗಲಿ ಮನಸ್ಸು ಕೊಟ್ಟವರಲ್ಲ. ಅವರು ಇವರ‍್ಯಾರಿಗೂ ಸಂಬಂಧಪಟ್ಟವರಲ್ಲ; ಈ ಕೇಸಿನಲ್ಲಿ ಆಸಕ್ತಿವುಳ್ಳವರೂ ಅಲ್ಲ. ಅಲ್ಲದೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ನಮ್ಮ ಡಾಕ್ಟರುಗಳಿಗೆ ಪೋಲೀಸಿನವರ ಮೇಲೆ ಬಂದಿರುವ ಅಪಾದನೆಯನ್ನು ಮುಚ್ಚಬೇಕೆಂಬ ಉದ್ದೇಶವಿಲ್ಲ. ಇಷ್ಟೇ ಅಲ್ಲದೆ ಅವತ್ತು ಶ್ರೀಮತಿ ಸರೋಜಮ್ಮ ಎಂಬಾಕೆ, ಮುನಿಯಮ್ಮನನ್ನು ಕರೆದುಕೊಂಡು ಹೋದವರು ಊರಿನಲ್ಲಿ ಎರಡು ದಿವಸಗಳು ಮಾತ್ರ ಇದ್ದರು. ಅನಂತರ ಯಾರೋ ಕೆಲವರು ಅವರನ್ನು ನೀವು ಹೊರಟುಹೋಗಿ, ನೀವು ಈಗ ಇಲ್ಲಿ ಇರುವಂಥಾದ್ದು ಸರಿಯಾಗಿಲ್ಲ, ಪೋಲೀಸಿನವರು ಬಂದು ನಿಮ್ಮನ್ನು ಹಿಡಿದುಕೊಂಡು ಹೋಗುತ್ತಾರೆಂಬ ಭಯವನ್ನು ಹಿಡಿಸಿದರು; ಆಗ ಆಕೆ ಮತ್ತು ಆಕೆಯ ತಾಯಿ ಇಬ್ಬರೂ ಊರುಬಿಟ್ಟು ಹೋದರು; ಅವರನ್ನು ಹುಡುಕುವುದೇ ಆಮೇಲೆ ಒಂದು ದೊಡ್ಡ ಪ್ರಯಾಸವಾಯಿತು. ದೇವರ ದಯದಿಂದ ಅವರಿಬ್ಬರ ಸ್ಟೇಟ್‌ಮೆಂಟ್ ಸಹ ದೊರೆಯಿತು. ನಿಜವಾಗಿ ಸಾಕ್ಷಿ ಮತ್ತು ರುಜುವಾತು ಪರಿಪೂರ್ಣವಾಗಿದೆ. ಎಲ್ಲವೂ ನಿರಾಧಾರವಾದ ಆರೋಪಣೆ. ಎಲ್ಲವನ್ನೂ ಸ್ಪಷ್ಟಪಡಿಸಿದೇನೆ. ಇದು ಬಹಳ ವ್ಯಸನದ ಸಂಗತಿ. ಈ ಸಭೆ ಇಷ್ಟು ಸಮಯವನ್ನು ತೆಗೆದುಕೊಳ್ಳಬಾರದಾಗಿತ್ತು. ಅನಾವಶ್ಯಕವಾಗಿ ಜನರು ಇದದ್ದು ಉದ್ರೇಕಗೊಳಿಸಿ ಪೋಲೀಸಿನವರ ಮೇಲೆ ಅನಾವಶ್ಯಕವಾದ ಆರೋಪಣೆಯನ್ನು ಹೊರಿಸಿ ಈ ಪ್ರಕರಣವನ್ನುಂಟು ಮಾಡಿದುದಕ್ಕೋಸ್ಕರ ನಾನು ತುಂಬ ವ್ಯಸನಪಡುತ್ತಿದ್ದೇನೆ. ಇದಕ್ಕಾಗಿ ಡಾ|| ಪಾರ್ಥಸಾರಥಿಯವರು ಸ್ವಲ್ಪ ಕ್ಷಮಿಸಬೇಕು. ಇದರಲ್ಲಿ ಆಧಾರವೇನಿದೆ ಎಂಬುದನ್ನು ತಮ್ಮ ತಮ್ಮಲ್ಲೇ ತಿಳಿದುಕೊಳ್ಳಬೇಕು. ಇದನ್ನು ಹಟ್ಟಿಗೆ ಕೆರಳಿಸಬೇಡಿ ಎಂದು ಬೇಡುತ್ತೇನೆ. ಈ ಸಭೆಯಲ್ಲಿ ಇಂತಹ ವಿಷಯಗಳನ್ನು ಪರಿಶೀಲಿಸುವಾಗ ಸ್ವಲ್ಪ ತಿಳಿಮನಸ್ಸಿನಿಂದ ವಿಚಾರಮಾಡಬೇಕು. ಇದು ಬಹಳ ಜವಾಬ್ದಾರಿಯ ಕೆಲಸ. ಸುಮ್ಮನೆ ಪೋಲೀಸಿನವರ ಮೇಲೆ ಆರೋಪಣೆ ಹೊರಿಸಿ, ಪೋಲೀಸಿನವರದೇ ತಪ್ಪು ಎಂದು ಹೇಳುವುದರಲ್ಲಿ ಏನೂ ತಿರುಳಿಲ್ಲ ಮತ್ತು ಅದರಿಂದ ಯಾವೊಂದು ದೊಡ್ಡ ಗೌರವವೂ ಸಿಕ್ಕುವುದಿಲ್ಲ.

ಡಾ|| ಟಿ. ಪಾರ್ಥಸಾರಥಿ.—ಆರೋಪಣೆಯನ್ನು ಯಾರು ಹೊರಿಸಿರುವವರು?

ಶ್ರೀ ಸಿ. ಎಂ. ಪೂಣಚ್ಚ.—ಇನ್ನು ಕೆಲವು ಬೇರೆ ವಿಷಯಗಳನ್ನು ಮಾನ್ಯ ಸದಸ್ಯರು ತಿಳಿಸಿದರು. ಶ್ರೀ ಪುಟ್ಟರಾಮಯ್ಯನವರು ಚನ್ನಪಟ್ಟಣದ ಕೇಸನ್ನು ಕುರಿತು, ಆರ‍್ಮುಗಂ ಅವರು ಕೋಲಾರದ ಚಿನ್ನದ ಗಣಿಯಲ್ಲಿ ಚಿನ್ನ ಕಳವು ಆಗುತ್ತಿದೆ ಎಂಬ ವಿಷಯವನ್ನು ಕುರಿತು ಹೇಳಿದ್ದಾರೆ. ಸೂಕ್ಷ್ಮವಾಗಿ ಹೇಳುವುದಾದರೆ ಚನ್ನಪಟ್ಟಣದ ಕೇಸ್‌ನಲ್ಲಿ ನಾವು ಕೈ ಹಾಕುವಂತಹ ವಿಷಯ ಇಲ್ಲ. ಅದು ಟೆನೆನ್ಸಿ ಕೇಸು. ಅದರಲ್ಲಿ ಮೊದಲು ಒಂದು ತರಹ ತೀರ್ಮಾನವಾಯಿತು. ಆ ಮೇಲೆ ಅಪೀಲ್‌ನಲ್ಲಿ ಇನ್ನೊಂದು ತರಹ ತಿರ್ಮಾನವಾಯಿತು. ರೆವಿನ್ಯು ಬೋರ್ಡ್‌ನಲ್ಲಿ ಒಂದು ತರಹ ತೀರ್ಮಾನ ಆಯಿತು; ಅದರ ಮೇಲೆ ರಿಟ್‌ಪೆಟಿಷನ್ ಹೈಕೋರ್ಟಿಗೆ ಹೋಗಿ, ಹೈಕೋರ್ಟಿನವರು ಸ್ಟೇ ಆರ್ಡರ್ ಕೊಟ್ಟಿದ್ದಾರೆ. ಈ ಸ್ಥಿತಿಯಲ್ಲಿ ಆ ಕೇಸು ಇದೆ. ತನ್ಮಧ್ಯ ಏನಾಗಿದೆ ಎಂದರೆ ಸ್ಟೇ ಆರ್ಡರ್ ಇರುವಾಗ ಬೇರೆ ಒಂದು ಪಕ್ಷದವರು ಅಲ್ಲಿ ಹೋಗಿ ಪ್ರವೇಶ ಮಾಡಲಿಕ್ಕೆ ಪ್ರಯತ್ನಪಟ್ಟಾಗ ಘರ್ಷಣೆ ಆಯಿತು. ಆದ್ದರಿಂದ ಪೋಲೀಸ್‌ನವರು 145ನೆಯ ಸೆಕ್ಷನ್ ಪ್ರಯೋಗ ಮಾಡುವುದಕ್ಕೆ ಕ್ರಮ ತೆಗೆದುಕೊಂಡರು. ಈಗ ಸಿವಿಲ್ ಕೋರ್ಟ್‌ನಲ್ಲಿ ಪೋಲೀಸ್‌ನವರು ಕೇಸುಹಾಕಿದ್ದಾರೆ ಎಂದು ಯಾವರೀತಿ ಹೇಳಿದರೋ ಗೊತ್ತಾಗುವುದಿಲ್ಲ. ಇದು ಸಿವಿಲ್ ವ್ಯಾಜ್ಯ, ಕೋರ್ಟಿನಲ್ಲಿ ತೀರ್ಮಾನ ಮಾಡುವಂಥ ಅನೇಕ ವಿಷಯಗಳಿವೆ. ಈ ವಿಷಯದಲ್ಲಿ ಪ್ರತ್ಯೇಕವಾಗಿ ಯಾವ ರೀತಿಯ ಅಪಾದನೆ ಇದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆರ‍್ಮುಗಂ ಅವರು ಕೋಲಾರದ ಚಿನ್ನದಗಣಿಯಲ್ಲಿ ಪಿಲ್‌ಫರಿಂಗ್ ಬಹಳವಾಗಿ ಆಗುತ್ತಾ ಇದೆ ಎಂದು ಹೇಳಿದರು. ಈ ವರ್ಷದಲ್ಲಿ 71 ಕೇಸುಗಳನ್ನು 3-4 ತಿಂಗಳಿನಲ್ಲಿ ಹಿಡಿದಿದೆ. ಅನೇಕರಿಗೆ ಸಜಾ ಕೂಡ ಆಗಿದೆ.

Sri C. M. ARUMUGHAM (Kolar Gold Fields).—What is the value of gold?

Sri C. M. POONACHA.—I can say pilferring is to the tune of Rs. 2,500, all put together.

Sri C. M. ARUMUGHAM.—If the Hon'ble Minister can yield a little, I would like to explain. Some paper managed by an Excise contractor has mentioned about this affair. But I may bring to the notice of the Hon'ble Minister that last year there was a case of gold smuggling to the extent of

(SRI C. M. ARUMUGHAM)

Rs. 70,000 in Nandydroog. I speak on facts.

Mr. SPEAKER.—What do you mean by 'a paper of an excise contractor'?

Sri C. M. ARUMUGHAM.—Because I do not know the name of the paper.

Mr. SPEAKER.—It does not mean that there is no name. It is not fair to the paper.

Sri C. M. ARUMUGHAM.—Excuse me, Sir. I do not know Kannada. It is a Kannada paper managed by the excise contractor of the Government.

Mr. SPEAKER.—After all we must be very fair. If the member has something to say against the paper in this respect he is welcome. But then he should not go on saying something which is not fair.

Sri C. M. ARUMUGHAM.—I do not know. Somebody said that it is managed by an excise contractor (*Laughter*).

Some MEMBERS.—Why do you believe it?

Sri C. M. ARUMUGHAM.—When members of the Legislature say that, I have to believe it. In fact I am proud to say that after nationalisation gold smuggling is reduced.

Sri T. D. MARANNA (Magadi).—On a point of order, Sir. He is making a speech.

Sri C. M. ARUMUGHAM.—Sir, it has become his habit to raise points of order, and all that. (*Laughter*) I do not want to waste time. The Hon'ble Home Minister has said that time is wasted on Muniamma's case. Theer is a specific case of gold smuggling to the extent of Rs. 70,000. I do not know what has happened to that. I am going to speak on that when the demand under "Industries" comes up and reply to the excise contractor's paper on that day.

Mr. SPEAKER.—Yes.

ಶ್ರೀ ಸಿ. ಎಂ. ಪೂಣಚ್ಚ.—ಪ್ರಖರವಾದ ಟೀಕೆ ಏಳು ದಿವಸ ಸತತವಾಗಿ ನಡೆದಿರುವಾಗ 1—1½ ತಾಸ ಆದರೂ ನನಗೆ ಬೇಕಾಗುತ್ತದೆ. ಇಷ್ಟು ಮಾನ್ಯ ಸಭೆಗೆ ಒಪ್ಪಿಸಬಲ್ಲೆ. ಏನೆಂದರೆ ಕೆಲವು ನ್ಯೂನತೆಗಳು ಇವೆ. ಪೋಲಿಸ್ ಇಲಾಖೆಯಲ್ಲಿ ಅನೇಕ ರೀತಿಯಲ್ಲಿ ಸುಧಾರಣೆ ನಡೆಯಬೇಕಾಗುತ್ತದೆ. ಅದು ನಿಜ; ಒಪ್ಪುತ್ತೇನೆ. ಅವು ಇವತ್ತು ಬಂದಂಥವು ಅಲ್ಲ. ಪರಂಪರೆಯಿಂದ ಬೆಳೆದು ಬಂದಿವೆ. ಅವನ್ನು ಸರಿಪಡಿಸುವಂತಹ ಜವಾಬ್ದಾರಿ ಸರ್ಕಾರದ್ದೂ, ತಮ್ಮದೂ ಸರಿತೂಕದ್ದು. ಇದನ್ನರಿತು ತಮ್ಮ ಟೀಕೆಯನ್ನು ತಾವು ಸರಿಪಡಿಸಿ. ಇನ್ನುಮುಂದೆ ತಾವು ಒಂದು ಪತ್ರ ಬರೆಯಿರಿ; ಇಂತಹ ಪೋಲೀಸ್ ಆಫೀಸರು ಇಂತಿಂತಹ ಕೆಲಸ ಮಾಡಿದ್ದಾರೆ ಎಂದು ತಿಳಿಸಿ. ಈ ಟೀಕೆಗಳು ಪತ್ರಿಕೆಯಲ್ಲಿ ಬಿಚ್ಚಿಟ್ಟು ಇಲ್ಲಿ ಬಂದು ಬಿಚ್ಚುವ ವಸ್ತು ಅಲ್ಲ. ಆದ್ದರಿಂದ ಇಂಥಾದ್ದು ನಡೆಯುತ್ತಿದೆ ಎಂದು ಹೇಳಿ ನನ್ನ ಅವಗಾಹನೆಗೆ ತಂದರೆ ಖಂಡಿತವಾಗಿಯೂ ಒಡನೆಯೇ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಇನ್ನೊಂದು ವಿಷಯ. ತಾವು ಸ್ವಲ್ಪ ಸತ್ಯಾಂಶವನ್ನು ಮರೆಮಾಚದೆ ನಮಗೆ ತಿಳಿಸಿ ಮತ್ತು ಸತ್ಯಾಂಶ ಇರುವಂಥ ವಿಚಾರ ಇದ್ದರೆ ತಿಳಿಸಿ. ಖಂಡಿತವಾಗಿಯೂ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಪೋಲೀಸ್ ಇಲಾಖೆಯಲ್ಲಿ ಇವತ್ತು ಸರಿಯಾದಂಥ ಒಂದು ನಿಯಮ ರೂಢಿಗೆ ಬರದಿದ್ದರೆ, ಅಲ್ಲಿ ಸರಿಯಾದ ಕಾರ್ಯಕ್ರಮ ನಡೆಯದೇ ಹೋದರೆ, ನಾನಾ ತರಹ ಅವ್ಯವಸ್ಥೆಗಳು ಮತ್ತು ನಾನಾ ತರಹ ತಪ್ಪುನಡವಳಿಕೆಗಳು ಇದ್ದರೆ, ರಾಷ್ಟ್ರಕ್ಕೆ ಏನೂ ಪ್ರಯೋಜನ ಆಗಲಿಕ್ಕಿಲ್ಲ. ದೇಶಕ್ಕೆ ಬಹಳ ಸಂಕಟವಾಗುತ್ತದೆ. ಆದ್ದರಿಂದ ಮುಖ್ಯವಾದಂಥ ವಿಷಯ, ನಮ್ಮೆಲ್ಲರ ಮನಸ್ಸನ್ನು ಬಹಳವಾಗಿ ಕಲಕುವಂತಹ ವಿಷಯ ಇದು. ಈ ಪೋಲೀಸ್ ಇಲಾಖೆ ವ್ಯವಸ್ಥಿತವಾಗಿ ನಡೆಯಬೇಕು. ಇದರಲ್ಲಿ ವ್ಯಕ್ತಿಗಳ ಪ್ರಶ್ನೆಯಿಲ್ಲ. ದೇಶದ ಹಿತದೃಷ್ಟಿಯಿಂದ, ಜನರಿಗೆ ರಕ್ಷಣೆ ಒದಗಿಸುವಂಥ ದೃಷ್ಟಿಯಿಂದ ತಮ್ಮ ಸಲಹೆಗಳನ್ನು ಪರಿಪೂರ್ಣವಾಗಿ ಪರಿಶೀಲನೆಮಾಡಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಅದಕ್ಕೆ ತಾವೂ ಸಹಾಯ ಮಾಡಬೇಕು. ಸ್ಪಷ್ಟವಾದ ರೀತಿಯಲ್ಲಿ ನಿರ್ದಿಷ್ಟವಾಗಿ ಯಾವ ವಿಷಯ ತಮ್ಮ ದೃಷ್ಟಿಗೆ ಬಂದಿದೆ, ಅದನ್ನು ಒಡನೆಯೇ ತಿಳಿಸಿದರೆ ಸರ್ಕಾರ ತುಂಬ ಋಣಿಯಾಗಿರುತ್ತದೆ, ಮುಂದಿನ ಕೆಲಸಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಕೊನೆಗಾಣಿಸುತ್ತೇನೆ.

Some MEMBERS.—Let us rise for tea.

Mr. SPEAKER.—The House will now adjourn for recess and meet after half an hour.

The House adjourned at Twenty Minutes past Three of the Clock and re-assembled at Ftfty Minutes past Three of the Clock.

[MR. SPEAKER in the Chair]

ಶ್ರೀ ಎಚ್. ಎಸ್. ರುದ್ರಪ್ಪ (ವ್ಯವಸಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗ ಏಳು ದಿವಸಗಳಕಾಲ ಚರ್ಚೆ ನಡೆದಿರತಕ್ಕ ಸಂಬಂಧದಲ್ಲಿ ನನ್ನ ಪೋರ್ಟ್‌ಫೋಲಿಯೋವಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ನಾನೀಗ ಜವಾಬು ಕೊಡಬೇಕಾಗಿದೆ. ನನ್ನ ಖಾತೆಯವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ಬಹಳ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಆದುದರಿಂದ ನಾನೀಗ ಅವರುಗಳಿಗೆಲ್ಲ ನನ್ನ ಪರವಾಗಿಯೂ

ಮತ್ತು ಸರ್ಕಾರದವರ ಪರವಾಗಿಯೂ ವಂದನೆಗಳನ್ನರ್ಪಿಸುತ್ತೇನೆ.

ಮೊದಲನೆಯದಾಗಿ ಅರಣ್ಯ ಶಾಖೆಯ ವಿಚಾರ: ಈ ಬಾಬಿನಲ್ಲಿ ಸರ್ಕಾರಕ್ಕೆ ಬರಬೇಕಾಗಿದ್ದಂಥ ಆದಾಯದಲ್ಲಿ ಬಹಳ ಕಡಮೆಯಾಗಿದೆಯೆಂದು ಅನೇಕರು ಹೇಳಿರುತ್ತಾರೆ. ಆದರೆ ಅವರೆಲ್ಲರಲ್ಲೂ ನಾನೀಗ ಒಂದು ವಿಷಯವನ್ನು ಅರಿಕೆಮಾಡಿಕೊಳ್ಳುತ್ತೇನೆ. ಹಿಂದೆ ನಮ್ಮ ಹಳೆಯ ಮೈಸೂರಿದ್ದಾಗ ಈ ಅರಣ್ಯ ನಮಗೆ ಬಹಳ ದೊಡ್ಡದಾಗಿ ಕಾಣಿಸುತ್ತಿತ್ತು. ಆದರೆ ಉತ್ಪತ್ತಿ ಬಹಳ ಕಡಮೆಯಾಗಿತ್ತು. ಆದರೆ ಇತ್ತೀಚೆಗೆ ಹೊಸ ಮೈಸೂರು ರಾಜ್ಯಸ್ಥಾಪನೆ ಆದಮೇಲೆ ನಮಗೆ ಬಂದಿರತಕ್ಕ ಪ್ರದೇಶಗಳಲ್ಲಿ ಬಹಳ ಉತ್ತಮವಾದ ಅರಣ್ಯವಿವೆ. ಅದರಿಂದ ನಮಗೆ ಇನ್ನು ಮುಂದೆ ಹೆಚ್ಚು ವರಮಾನ ಬರತಕ್ಕಂಥ ಅವಕಾಶವಿದೆ. ಆದಾಗ್ಯೂ ಅರಣ್ಯ ಖಾತೆಯ ಉತ್ಪತ್ತಿಯಲ್ಲಿ 1957-58ನೇ ಸಾಲಿನ ಆದಾಯದ ಅಂದಾಜಿಗಿಂತ ಸುಮಾರು ಒಂದು ಕೋಟಿ ರೂಪಾಯಿ ಜಾಸ್ತಿ ಆಗಿರುತ್ತದೆ. ನಮ್ಮಲ್ಲಿ ಈ ಮರಗಳನ್ನು ನೂರಾರು ವರ್ಷಗಳಿಂದ ಸಾಕುವುದಕ್ಕೆ ಬದಲಾಗಿ ಅವುಗಳನ್ನು ಒಂದೇ ಸಮನಾಗಿ ಕಡತಲೆ ಮಾಡುತ್ತಲೇ ಬಂದಿದ್ದೇವೆ. ಈಗ ಈ ಬಾಬನಲ್ಲಿ ಹೊಸದಾಗಿ ಮರಗಳನ್ನು ಬೆಳಸತಕ್ಕ ಪದ್ಧತಿಯನ್ನು ಒಂದು ಹೊಸ ಸಿಸ್ಟಂಪ್ರಕಾರ ನಡೆಸಬೇಕೆಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಆದರೆ ಇಲ್ಲಿಯತನಕ ನಾವು ಅರಣ್ಯದಲ್ಲಿರತಕ್ಕ ಮರಗಳನ್ನು ಒಂದೇ ಸಮನಾಗಿ ಕಡತಲೆ ಮಾಡುತ್ತ ಬಂದುದರಿಂದ ನಾವು ದೇಶಾಭಿವೃದ್ಧಿಯ ದೃಷ್ಟಿಯಿಂದ ಈ ಅರಣ್ಯವನ್ನು ಎಷ್ಟರ ಮಟ್ಟಿಗೆ ಉಳಿಸಿಕೊಳ್ಳಬೇಕಾಗಿತ್ತೋ ಅಷ್ಟರಮಟ್ಟಿಗೆ ಉಳಿಸಿಕೊಂಡು ಬರಲು ಸಾಧ್ಯವಾಗಲಿಲ್ಲ. ಹೀಗಾಗಿ ಈ ದಿವಸ ಬೆಂಗಳೂರು, ತುಮಕೂರು, ಕೋಲಾರ ಇತ್ಯಾದಿ ಜಿಲ್ಲೆಗಳಲ್ಲಿದ್ದ ಅಡವಿಯೆಲ್ಲಾ ನಾಶವಾಗಿ ಹೋಗಿದೆ. ಹೀಗೆಲ್ಲ ನಮ್ಮ ದೇಶದಲ್ಲಿ ಕಾಡುಗಳು ನಾಶವಾಗಿ ಹೋಗುತ್ತಿರುವುದರಿಂದ ನಾವು ಈ ದಿವಸ ನಾಟಾ ಕೂಡ ಪರದೇಶದಿಂದ ತರಿಸಬೇಕಾಗಿದೆ. ನಮಗೀಗ ಬರಿ ಆಹಾರ ಸಾಮಗ್ರಿಗಳೊಂದನ್ನೇ ಅಲ್ಲದೆ ನಾಟಾ ಸಹ ಪರದೇಶದಿಂದ ತರಿಸತಕ್ಕಂಥ ಅಗತ್ಯ ಉಂಟಾಗಿದೆ. ಇದೊಂದು ಖಂಡಿತವಾಗಿಯೂ ಬಹಳ ಶೋಚನೀಯವಾದಂಥ ಪರಿಸ್ಥಿತಿ ನನಗೆ ಈ ಬಾಬಿನಲ್ಲಿ ಎಷ್ಟೋ ವಿಚಾರಗಳು ಗೊತ್ತಿರಲಿಲ್ಲ. ಆದರೆ ನಾನು ಈ ಹಿಂದೆ ಷಿಲ್ಲಾಂಗಿನಲ್ಲಿ ನಡೆದಂಥ ಒಂದು ಫಾರೆಸ್ಟ್ ಕಾನ್ಫರೆನ್ಸಿಗೆ ಹೋಗಿದ್ದೆನು. ಆ ಕಾನ್ಫರೆನ್ಸಿನಲ್ಲಿ ನನಗೆ ಅನೇಕ ಆಶ್ಚರ್ಯಕರವಾದಂಥ ವಿಚಾರಗಳು ತಿಳಿದುಬಂದವು. ನಾವೀಗಾಗಲೇ ಅನೇಕ ವರ್ಷಗಳಿಂದ ವಿಶೇಷವಾಗಿ ಹಣವನ್ನ ಪರದೇಶಕ್ಕೆ ಈ ಮರಗಳನ್ನ ತರಿಸಿಕೊಳ್ಳತಕ್ಕ ಬಗ್ಗೆ ಕಳುಹಿಸುತ್ತಿದ್ದೇವೆಂಬ ದಾಗಿ ತಿಳಿದು ಬಂತು. ಈ ದಿವಸ ಈ ನಾಟಾ ಸಾಮಾನನ್ನು ಬರ್ಮ, ಸಿಲೋನ್, ಇಂಡೋನೇಷಿಯಾ ಇತ್ಯಾದಿ ದೇಶಗಳಿಂದ ತರಿಸಿಕೊಳ್ಳುತ್ತಿದ್ದೇವೆ. ಇದು ಹೀಗೆಯೇ ಮುಂದುವರಿದಲ್ಲಿ ನಾವು ನಮ್ಮ ಅರಣ್ಯ ಬಾಬಿನಿಂದ ಬರತಕ್ಕ ಉತ್ಪತ್ತಿಯನ್ನೆಲ್ಲಾ ಕಳೆದುಕೊಳ್ಳುವುದೇ ಅಲ್ಲದೆ ನಮಗೆ ಮನೆಕಟ್ಟತಕ್ಕ ಸಾಮಾನುಗಳು, ರೈತರಿಗೆ ಬೇಕಾಗುವಂಥ ಮರಮುಟ್ಟುಗಳೂ ಕೂಡ ದೊರೆಯಬೇಕಾದರೆ ಬಹಳ ತೊಂದರೆ ಉಂಟಾಗಬಹುದೆಂದು ತೋರುತ್ತದೆ.

ಶ್ರೀ ಕುಂದೂರು ರುದ್ರಪ್ಪ (ಚೆನ್ನಗಿರಿ).—ಈ ಹಿಂದೆ ಸರ್ಕಾರದವರು ರೈತರಿಗೆ ಬೇಕಾದಂಥ ಉಪಕರಣದ ಬಗ್ಗೆ ಆಯಾಯ ತಾಲ್ಲೂಕು ಕಸಬೆಗಳಲ್ಲಿ ಡಿಪೋಗಳನ್ನು ಓಪನ್ ಮಾಡಿ ಅವುಗಳಿಂದ ಸರಬರಾಯಿ ಮಾಡುತ್ತೇವೆಂದು ಹೇಳಿದ್ದರು. ಆ ಒಂದು ಭರವಸೆ ಈ ದಿವಸ ಏನಾಯಿತು?

ಶ್ರೀ ಎಚ್. ಎಸ್. ರುದ್ರಪ್ಪ.—ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರಗಳೆಲ್ಲ ನಿಜ. ಆರೀತಿ ರೈತರಿಗೊಂದು ಉಪಕಾರಮಾಡಬೇಕೆಂಬ ವಿಚಾರದಲ್ಲಿ ನಮಗೂ ಬಹಳ ಒಂದು ಹಿರಿದಾದ ಆಸೆಯಿದೆ. ಆದರೆ ಅದನ್ನು ಜಾರಿಗೆ ತರತಕ್ಕ ವಿಚಾರದಲ್ಲಿ ಬಹಳ ಕಷ್ಟವಿದೆ. ಇತ್ತೀಚೆಗೆ ನಾನು ನಮ್ಮ ಇಲಾಖೆಗೆ ರೈತರಿಗೆ ಬೇಕಾಗುವಂಥ ಸಲಕರಣೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಬೇಕೆಂದು ಈಗಾಗಲೇ ತಿಳಿಸಿದ್ದೇನೆ. ಮುಖ್ಯವಾಗಿ ಜನರು ಮರಗಳನ್ನು ಬೆಳಸಬೇಕು. ಆದರೆ ನಾವು ಈ ದಿವಸ ರೈತರಿಗೆ ಈ ಉಪಕರಣಗಳನ್ನು ಒದಗಿಸಲು ಅಲ್ಲಲ್ಲಿ ಡಿಪೋಗಳನ್ನು ತೆರೆಯತಕ್ಕ ವಿಚಾರದ ಬಗ್ಗೆ ಹೇಳಬೇಕೆಂದರೆ ಮೂಗಿಗಿಂತ ಮೂಗುತಿ ಭಾರ ಎಂದು ಹೇಳುವಂತಾಗುತ್ತದೆ. ಎಂದರೆ ಶರೀರಕ್ಕಿಂತಲೂ ತಲೆದಪ್ಪ ಎಂದು ಹೇಳಿದಹಾಗೆ ಆಗುತ್ತದೆ. ಡಿಪೋಗಳನ್ನು ತೆರದರೆ ಅಲ್ಲಿ ಸಾಮಾನುಗಳು ಕಳವಾಗುವುದು ಒಂದು ವಿಚಾರವಲ್ಲದೆ ಕಾವಲುಗಾರನಿಗೆ ಬೇರೆ ಸಂಬಳ ಕೊಡಬೇಕಾಗಿದೆ. ಈ ಖರ್ಚುಗಳನ್ನೆಲ್ಲ ಲೆಕ್ಕಹಿಡಿದರೆ ನಾವು ಮಾರಾಟ ಮಾಡತಕ್ಕ ಸಾಮಾನುಗಳ ಬೆಲೆಗಿಂತ ಈ ಖರ್ಚುವೆಚ್ಚಗಳೇ ಜಾಸ್ತಿಯಾಗಿರುತ್ತದೆ. ಹೀಗಾಗಿ ನಾವು ಮಾರತಕ್ಕ ಸಾಮಾನುಗಳ ಬೆಲೆ ಬಹಳ ಕಡಮೆ ಆಗುತ್ತದೆ. ಆದುದರಿಂದ ಈ ವಿಚಾರದಲ್ಲಿ ಒಂದು ಸೂಕ್ತವಾದ ಏರ್ಪಾಡನ್ನು ಜಾಗ್ರತೆ ಜಾರಿಗೆ ತಂದು ಸಾಮಾನುಗಳನ್ನು ಆದಷ್ಟು ಬೇಗ ರೈತರಿಗೆ ದೊರೆಯುತಕ್ಕ ಏರ್ಪಾಡನ್ನು ಮಾಡುತ್ತೇವೆ.

ಶ್ರೀ ಕುಂದೂರು ರುದ್ರಪ್ಪ.—ಸ್ವಾಮಿ, ಈಗತಾನೆ ಮಂತ್ರಿಗಳು ಮೂಗಿಂತ ಮೂಗುತಿ ಭಾರ ಎಂದು ಹೇಳಿದ್ದನ್ನು ನೋಡಿದರೆ ಸರ್ಕಾರದವರಿಗೆ ರೈತರ ವಿಚಾರದಲ್ಲಿ ಸಹಾನುಭೂತಿ ಇಲ್ಲವೆಂದಾಯಿತು. ಈ ದಿವಸ ಒಂದು ಗಾಡಿಗೆ 300-400 ರೂಪಾಯಿಗಳ ಬೆಲೆಯಾಗಿದೆ. ರೈತನಿಗೆ ವ್ಯವಸಾಯಕ್ಕೆ ಬೇಕಾದ ನೊಗ, ನೇಗಿಲು, ಕುಂಟೆ, ರಂಟೆ ಇತ್ಯಾದಿಗಳಿಗೆ ಮರಮುಟ್ಟುಗಳು ಸಿಕ್ಕುತ್ತಿಲ್ಲ, ರೈತರೆಲ್ಲ ಹಾಳಾಗಿ ಹೋಗುತ್ತಿದ್ದಾರೆ, ಜಿರಾಯ್ತು ದಿನೇದಿನೇ ಕಡಮೆಯಾಗುತ್ತಿದೆ.

ಶ್ರೀ ಎಚ್. ಎಸ್. ರುದ್ರಪ್ಪ.—ಈಗ ಈ ಸಾಮಾನುಗಳನ್ನೆಲ್ಲ ಒಂದು ನ್ಯಾಯವಾದ ಬೆಲೆಗೆ ಸೊಸೈಟಿಗಳ ಮೂಲಕ ಒದಗಿಸತಕ್ಕಂಥ ಒಂದು ಏರ್ಪಾಡನ್ನು ಜಾರಿಗೆತರಬೇಕೆಂದು ಮಾಡಿದ್ದೇವೆ. ಇದು ಬಹಳ ಸೂಕ್ತವಾದಂಥ ಮಾರ್ಗವೆಂದು ತೀರ್ಮಾನಮಾಡಿರುತ್ತೇವೆ. ಈ ಬಗ್ಗೆ ಆಗಲೆ ಸರ್ಕಾರಿ ಆಜ್ಞೆ ಹೊರಟಿದೆ. ಅದು ಸದ್ಯದಲ್ಲಿ ಜಾರಿಗೆ ಬರಲಿದೆ. ಆದರೆ ಹೀಗೆ ಮಾಡದೆ ನಾವೇ ಸರ್ಕಾರದ ಪರವಾಗಿ ಡಿಪೋಗಳನ್ನು ತೆರೆದರೆ ಅದಕ್ಕೆಲ್ಲ ಶಿಬ್ಬಂದಿ ವೆಚ್ಚ ಹೆಚ್ಚಾಗುತ್ತದೆ. ಆದ್ದರಿಂದ ನಾವು ಈ ದಿವಸ ಗೊಬ್ಬರ, ಬಿತ್ತನೆ ಬೀಜ ಇತ್ಯಾದಿಗಳನ್ನೆಲ್ಲ ಯಾವ ರೀತಿ ವಿಲೇವಾರಿಮಾಡುತ್ತಿದ್ದೇವೋ ಹಾಗೆ ಈ ಉಪಕರಣಗಳನ್ನೂ ಒದಗಿಸಬೇಕೆಂದು ಒಂದು ಏರ್ಪಾಡು ಮಾಡಿದ್ದೇವೆ. ಅದು ಸೊಸೈಟಿಗಳ ಮೂಲಕ ಜಾರಿಗೆ ಬರುತ್ತದೆ.

ಶ್ರೀ ಡಿ. ಮೂಕಪ್ಪ (ಸಾಗರ).—ಸೊಸೈಟಿಗಳಿಗೆ ಅಷ್ಟೊಂದು ಹಣದ ವರಮಾನವೆಲ್ಲದೆ?

ಶ್ರೀ ಎಚ್. ಎಸ್. ರುದ್ರಪ್ಪ.—ನಾವು ಆ ಸೊಸೈಟಿಗಳಿಗೆಲ್ಲ ಲಕ್ಷಾಂತರ ರೂಪಾಯಿಗಳನ್ನು ಸಾಲ ಕೊಡತಕ್ಕ ಬಗ್ಗೆ ಒದಗಿಸಿದ್ದೇವೆ. ಆ ಬಗ್ಗೆ ಏನು ಏರ್ಪಾಡುಗಳನ್ನು ಬೇಕಾದರೂ ಮಾಡಲು ಸಿದ್ಧವಾಗಿದ್ದೇವೆ. ಆದುದರಿಂದ ಇಂಥ ವ್ಯವಹಾರವನ್ನೆಲ್ಲ ಸರ್ಕಾರ ತಾನೇ ನಡೆಸುವುದಕ್ಕಿಂತ ಖಾಸಗಿ ಸಂಸ್ಥೆಗಳ ಮೂಲಕ ನಡೆಸತಕ್ಕದ್ದು ಒಳ್ಳೆಯದೆಂದು ತಿಳಿದು ಬಂದಿದೆ. ಈ ಬಗ್ಗೆ ನಾವು ಬುಕ್ ಅಡ್ಜೆಸ್ಟ್‌ಮೆಂಟ್ ಬೇಕಾದರೂ ಮಾಡಿಕೊಳ್ಳಬಹುದು.

ಶ್ರೀ ಎಂ. ಹನುಮಂತಯ್ಯ (ನೆಲಮಂಗಲ).—ಈ ದಿವಸ ನಮಗೆ ಮುಖ್ಯವಾಗಿ ಬಂದಿರತಕ್ಕ ತೊಂದರೆ ಎಲ್ಲ ಬಂಡಿಮರದ ಪಟ್ಟಿ, ಹಾರೇ ಕಾಲು. ಈ ತ್ಯಾಗದ ಸಾಮಾನುಗಳ ಅಗತ್ಯ ಹೆಚ್ಚಾಗಿದೆ. ನಮಗೆ ಬೇರೆ ಮರದ ಸಾಮಾನುಗಳನ್ನೇನೂ ತಾವು ಒದಗಿಸಬೇಕಾಗಿಲ್ಲ.

4 P.M.

ಶ್ರೀ ಎಚ್. ಎಸ್. ರುದ್ರಪ್ಪ.—ಈಗ ಸೊಸೈಟಿಗಳಿವೆ. ಅಲ್ಲಿ ತೇಗದ ಮರ, ಬಂಡಿಪಟ್ಟೆ ಮುಂತಾದುವುಗಳ ಧಾರಣೆಯನ್ನು ಕಡಿಮೆ ಮಾಡಿ ಮಾರಬೇಕೆಂದು ಹೇಳಿದ್ದೇವೆ.

ಶ್ರೀ ಎಂ. ಹನುಮಂತಯ್ಯ.—ಮನೆಗೆ, ಗಾಡಿಗೆ ಬೇಕಾಗುವ ಸಾಮಾನುಗಳ ಬೆಲೆಗಳನ್ನು ಕಡಮೆಮಾಡಿ ಎಂದು ಹತ್ತು ವರ್ಷಗಳಿಂದ ಹೇಳುತ್ತಿದ್ದೇವೆ. ಆದರೂ ಮಾಡದಿರುವುದಕ್ಕೆ ಕಾರಣವೇನು?

ಶ್ರೀ ಎಚ್. ಎಸ್. ರುಧ್ರಪ್ಪ.—ಗಾಡಿಗೆ ಬೇಕಾಗುವ ಸಾಮಾನಿಗೆ ಕಡಮೆ ಮಾಡಿದ್ದೇವೆ.

ಶ್ರೀ ಎಂ. ಹನುಮಂತಯ್ಯ.—ಈಗ ಒಂದು ಜೊತೆ ಪಟ್ಟಿಗೆ 60ರೂಪಾಯಿಗಳನ್ನು ತೆಗೆದು ಕೊಳ್ಳುವುದಕ್ಕೆ ಕಾರಣವೇನು?

ಶ್ರೀ ಎಚ್. ಎಸ್. ರುದ್ರಪ್ಪ.—ಕಬ್ಬಿಣದ ಧಾರಣೆ ಜಾಸ್ತಿಯಾಗಿದೆ. ಧಾರಣೆ ವಾಸಿಗಳು ಜಾಸ್ತಿಯಾಗಿರುವುದಕ್ಕೆ ನಾವೂ ನೀವೂ ಎಲ್ಲರೂ ಕಾರಣರು. ಅರಣ್ಯದ ಉತ್ಪತ್ತಿಯ ಬಗ್ಗೆ ಹೇಳುವುದಾದರೆ ಈಗ ಅದನ್ನು ಬಹಳ ಮಟ್ಟಿಗೆ ಜಾಸ್ತಿ ಮಾಡಿದ್ದೇವೆ. 1957-58ನೆಯ ಬಡ್ಜೆಟ್ಟಿನಲ್ಲಿ 3,30,91,000 ರೂಪಾಯಿಗಳ ವರಮಾನ ಬರಬಹುದೆಂದು ಹೇಳಿತ್ತು. ಅದು ಈಚೆಗೆ ನೋಡಿದ್ದರಲ್ಲಿ 3.66,87,000 ಆಗುತ್ತದೆಂದು ಹೇಳಿದ್ದಾರೆ. ಅಲ್ಲಿಗೆ, ರಿವೈಸ್ ಎಸ್ಟಿಮೇಟಿಗಿಂತ ಹೆಚ್ಚಾಗಿ ಉತ್ಪತ್ತಿ ಬಂದಿರುತ್ತದೆ. ಆದ್ದರಿಂದ ಒಟ್ಟಿನಲ್ಲಿ ವರಮಾನವನ್ನು ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಮಾತ್ರ ತಮ್ಮಲ್ಲಿ ಅರಿಕೆ ಮಾಡಿಕೊಳ್ಳ ಬಯಸುತ್ತೇನೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಿಮ್ಮ working expenses ಶೇಕಡ 45 ರಷ್ಟಾಗಿದೆಯಲ್ಲಾ. ವರಮಾನ ಕಡಿಮೆಯಾಯಿತೆಂದು ಹೇಳುತ್ತಿಲ್ಲ. ವರಮಾನದ ಅರ್ಧಕ್ಕರ್ಧ ನಿಮ್ಮ ಖರ್ಚೇ ಆಗುತ್ತಿದೆಯಲ್ಲಾ!

ಶ್ರೀ ಎಚ್. ಎಸ್. ರುದ್ರಪ್ಪ.—Expense ಶೇಕಡ 45ರ ರಷ್ಟಾಗುವುದಿಲ್ಲ. ಶೇಕಡ 35-40 ರಷ್ಟು ಮಾತ್ರ ಆಗಬಹುದು. ಪ್ಲಾಂಟೇಷನ್ ಮುಂತಾದುವುಗಳನ್ನು ಮಾಡುವುದಿದೆ. ಇದನ್ನೆಲ್ಲಾ Working Expense ಎಂದು ಭಾವಿಸುವುದು ತಪ್ಪು. ನಿಖರವಾಗಿ ಎಷ್ಟು ಖರ್ಚಾಗುತ್ತಿದೆಯೆಂದು ಡಿಮ್ಯಾಂಡ್‌ಗಳ ಚರ್ಚೆಯ ಸಂಬಂಧದಲ್ಲಿ ಹೇಳುತ್ತೇನೆ.

ಈಗ ಪ್ಲಾಂಟೇಷನ್ ಬಹಳ ಕಡಮೆಯಾಗಿದೆಯೆಂದು ಮಾನ್ಯ ಸದಸ್ಯರು ಹೇಳಿದರು. ಇದು ಸ್ವಲ್ಪಮಟ್ಟಿಗೆ ಒಪ್ಪತಕ್ಕ ಮಾತು. ಕಾಡುಗಳೆಲ್ಲಾ ಅರಣ್ಯ ಇಲಾಖೆಗೆ ಸೇರಿವೆಯೆಂದು ಕೆಲವರ ಭಾವನೆಯಾಗಿದೆ. ನಮಗಿರತಕ್ಕ ರಿಸರ್ವ್ ಫಾರೆಸ್ಟ್‌ಗಳು ಬಹಳ ಕಡಮೆ. ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳು, ವಿಲೇಜ್ ಫಾರೆಸ್ಟ್‌ಗಳು— ಫಾರೆಸ್ಟ್ ಇಲಾಖೆಯಲ್ಲಿ ಎಷ್ಟು ಜಮೀನಿದೆಯೋ ಅದಕ್ಕಿಂತ ಹೆಚ್ಚಿಗೆ ರೆವಿನ್ಯೂ ಇಲಾಖೆಗೆ ಇದೆ. ರೆವಿನ್ಯೂ ಮಂತ್ರಿಗಳಿಗೆ ನಾನು ಪದೇ ಪದೇ ಹೇಳುತ್ತಿದ್ದೇನೆ—ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳನ್ನು ನೋಡಿಕೊಳ್ಳುವವರಿಲ್ಲ. ಅವುಗಳಲ್ಲಿರುವ ಮರಗಳನ್ನು ಕತ್ತರಿಸುವುದಕ್ಕೆ ಲೈಸೆನ್ಸ್ ಕೊಡುವವರು ಮಾತ್ರ ಇರುತ್ತಾರೆ. ಇದರಿಂದಾಗಿ ನಾವು ಅಲ್ಲಿಂದ ಏನು ಉತ್ಪತ್ತಿಯನ್ನು ನಿರೀಕ್ಷಣೆ ಮಾಡುತ್ತಿದ್ದೇವೋ ಅದು ಬರುವುದಿಲ್ಲ. ರೆವಿನ್ಯೂ ಇಲಾಖೆಯವರೇನೋ ಲೈಸೆನ್ಸ್ ಕೊಟ್ಟುಬಿಡುತ್ತಾರೆ. ಲೈಸೆನ್ಸ್ ತೆಗೆದುಕೊಂಡವರು ಪಕ್ಕದಲ್ಲಿರುವ ಸರ್ಕಾರಿ ಕಾಡಿನಿಂದ ಮರ ತಂದು ಮಾರುತ್ತಿರುತ್ತಾರೆ. ಹೀಗಾಗಿ ಪ್ರೈವೇಟ್ ಫಾರೆಸ್ಟ್‌ನಿಂದ ತರುತ್ತಿದ್ದಾರೆಂದು ಏನು ಭಾವಿಸುತ್ತಿದ್ದೇವೋ ಅವೆಲ್ಲಾ ಸರ್ಕಾರದ ಕಾಡಿನಿಂದಲೇ ತರುವುದಾಗಿದೆ. ಇದನ್ನು ಯಾವರೀತಿ ಹತೋಟಿ ಮಾಡಬೇಕೆಂಬುದೇ ಕಷ್ಟವಾಗಿದೆ.

ಮಾನ್ಯ ಸದಸ್ಯರು M.R.P. ಲೈಸೆನ್ಸ್ ಕೊಡುವ ವಿಷಯ ಹೇಳಿದರು. M.R.P. ರೂಲ್ಸ್ ಪ್ರಕಾರ ಕೊಡುವ ಲೈಸೆನ್ಸ್‌ನಲ್ಲಿ ಮನೆಯನ್ನು ಕಟ್ಟಿದ್ದರೆ ನಾನು ಸಂತೋಷಪಡುತ್ತಿದ್ದೆ, ಆದರೆ, ಅದು ಆಗುತ್ತಿಲ್ಲ. ಅದನ್ನೆಲ್ಲಾ ತೆಗೆದುಕೊಂಡು ಕೆಲವರು ಹೋಗ್ಗಿ ಮಾರುತ್ತಿದ್ದಾರೆ.

ಶ್ರೀ ಕುಂದೂರು ರುದ್ರಪ್ಪ.—ಈ ವಿಚಾರ ಬಂದಾಗ ಒಂದು ಮಾತು ಹೇಳಬೇಕಾಗಿದೆ. ತಾವು ಹೇಳಿದಿರಿ, 50 ಮನೆಗಳನ್ನು ಕೂಡ ಅವರು ಕಟ್ಟಿಲ್ಲ ಎಂದು. 90 ಜನಗಳೂ ಹೀಗೆ ಬ್ಲಾಕ್ ಮಾರ್ಕೆಟ್ ಮಾಡಿದ ಮೇಲೆ ಸರ್ಕಾರಿ ಆರ್ಡರ್ ಪ್ರಕಾರ ಅವರ ಆಸ್ತಿಗಳನ್ನೇಕೆ ಮುಟ್ಟುಗೋಲು ಹಾಕಿಕೊಳ್ಳಕೂಡದು?

ಶ್ರೀ ಎಚ್. ಎಸ್. ರುದ್ರಪ್ಪ.—ಕಾನೂನಿನಲ್ಲಿ ಶಿಕ್ಷೆ ಮಾಡುವುದಕ್ಕೆ ಅವಕಾಶವಿಲ್ಲ. ಮುಂದೆ ಅದನ್ನು ಸರಿಮಾಡಬೇಕು. ಅದ್ದರಿಂದಲೇ ಈಗ M.R.P. ರೂಲ್ಸ್ ಪ್ರಕಾರ ಕೊಡಬೇಡಿ ಎಂದು ಸದ್ಯಕ್ಕೆ ನಿಲ್ಲಿಸಿದ್ದೇವೆ. ನಮ್ಮ ದೇಶದಲ್ಲಿ ಹುಲ್ಲಿನ ಮನೆಗಳು ವಿಶೇಷವಾಗಿವೆ. ಹುಲ್ಲಿನ ಮನೆಗಳು ಇರಕೂಡದೆಂಬುದೇ ನಮ್ಮ ಉದ್ದೇಶ. ಬೆಂಕಿಯಿಂದ ಬಹಳ ಅನಾಹುತಗಳು ಮಲೆನಾಡಿನಲ್ಲಿ ಆಗುತ್ತಿವೆ. ಅದ್ದರಿಂದ ಸಾಧ್ಯವಾದಷ್ಟು ಬೇಗನೆ ಹುಲ್ಲಿನ ಮನೆಗಳನ್ನು ತೆಗೆದು ಹೆಂಚಿನ ಮನೆಗಳನ್ನು ಹಾಕಬೇಕೆಂಬುದೇ ನಮ್ಮ ಅಭಿಲಾಷೆ. ಆದರೆ, ಕೆಲವರು ಅವಕಾಶ ಕೊಟ್ಟರೆ ವಿಧಾನ ಸೌಧದ ನಾಟಾಗಳೆಲ್ಲವನ್ನೂ ಒಂದೇ ಮನೆಗೆ ಹಾಕುತ್ತಾರೆ. ಆದ್ದರಿಂದ ನಾಟಾವನ್ನು ಕೂಡ ರೇಷನ್ ಮಾಡಬೇಕ . ಈ ದೃಷ್ಟಿಯಿಂದ ನಾವು ನಮ್ಮ ಅರಣ್ಯ ಸಂಪತ್ತನ್ನು ಎಚ್ಚರಿಕೆಯಿಂದ ಕಾಪಾಡ ಬೇಕಾಗಿದೆ. ಅರಣ್ಯ ಇಲಾಖೆ ಇನ್ಯಾವುದಾದರೂ ಇಲಾಖೆಯಂತಲ್ಲ. ದುಡ್ಡು ಖರ್ಚು ಮಾಡಿದರೆ, ನಾಲಾ ಮತ್ತು ಕೆರೆಗಳ ಬೆಳೆಗಳಂತೆ, ಜಾಗ್ರುತೆ ಬೆಳೆಸಬಹುದು ಎಂದು ಹೇಳುವುದಕ್ಕಾಗುವುದಿಲ್ಲ. ಇಂದು Plantation ಮಾಡಿದರೆ, ಒಂದು ತೇಗದ ಮರ ಉಪಯೋಗಕ್ಕೆ ಬರಬೇಕಾದರೆ 60-70 ವರ್ಷ ಆಗುತ್ತದೆ. ಅದ್ದರಿಂದ ಮರಗಳನ್ನು ದುರುಪಯೋಗ ಮಾಡಕೂಡದು ಮತ್ತು ಅದನ್ನು ಶೇಖರಿಸಿ 100 ವರ್ಷ ಇರುವ ಹಾಗೆ ಒಂದು wroking plan ಮಾಡಬೇಕೆಂದು ನಾನು ಹೇಳುತ್ತೇನೆ. ತೇಗದ ಹಾಗೆಯೇ ನಮ್ಮಲ್ಲಿ ಬಿದಿರು ಬಹಳ

ಲುಕ್ಸಾನಾಗುತ್ತಿದೆ. ಅದ್ದರಿಂದ ಬಿದಿರಿನಿಂದ ಮನೆಯನ್ನು ಕಟ್ಟಿ, ತೇಗವೇ ಬೇಕೆಂದು ಹೇಳಬೇಡಿ ಎಂದು ಹೇಳುತ್ತಿದ್ದೇವೆ. ಬೊಂಬನ್ನು treat ಮಾಡಿ ಅದು ಬಂದೋಬಸ್ತಾಗುವಂತೆ ಮಾಡಿಸಿ ಜನರಿಗೆ ರಿಯಾಯಿತಿ ದರದಲ್ಲಿ ಕೊಡಬೇಕೆಂದು ಮಾಡಿದ್ದೇವೆ. ಇದಕ್ಕಾಗಿ ಒಂದು plantಗೆ ಕೂಡ ತರಿಸಬೇಕೆಂಬ ಯೋಚನೆ ಮಾಡಿದ್ದೇವೆ. ಈಗ ಕಾಡುಗಳಲ್ಲಿ ಎಷ್ಟೋ ಬೊಂಬು ವ್ಯಥಾ ಸುಟ್ಟುಹೋಗುತ್ತಿದೆ. ಹೀಗೆ ನಷ್ಟವಾಗುವುದನ್ನು ತಪ್ಪಿಸಿ ಅನೇಕರು ಹೇಳಿದ ಹಾಗೆ ಉಪಯೋಗಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎ. ಆರ್. ಬದರೀನಾರಾಯಣ್ (ತೀರ್ಥಹಳ್ಳಿ).—ತಾವು ಹೇಳಿದಿರಿ, ಎಂ. ಆರ್. ಪಿ. ರೂಲ್ಸ್ ಪ್ರಕಾರ ಕೊಟ್ಟ ನಾಟಾಗಳನ್ನು ದುರುಪಯೋಗ ಮಾಡುತ್ತಿದ್ದಾರೆಂದು ಹೇಳಿ ಅದನ್ನು ಕೊಡುವುದನ್ನು ನಿಲ್ಲಿಸಿದ್ದೇವೆ ಎಂದು. ದುರುಪಯೋಗ ಮಾಡಿದವರನ್ನು ಶಿಕ್ಷೆ ಮಾಡಬೇಕೇ ಹೊರತು, ಯಾವ ಉದ್ದೇಶದಿಂದ ಲೈಸೆನ್ಸ್ ಕೊಡುತ್ತಿದ್ದೀರೋ ಅದನ್ನು ತಪ್ಪಿಸುವುದು ನ್ಯಾಯವಲ್ಲವೆಂದು ನಾನು ಹೇಳಬಯಸುತ್ತೇನೆ.

ಶ್ರೀ ಎಚ್. ಎಸ್. ರುದ್ರಪ್ಪ.—ಅವರ ಹಿತದೃಷ್ಟಿಯಿಂದಲೇ ಈ ರೀತಿ ಮಾಡಿದೆ. ಈ ರೀತಿ ಕಡತಲೆಯಾಗುತ್ತಿದ್ದರೆ, ಮನೆಕಟ್ಟುವುದಕ್ಕೆ ಮರ ಸಹ ಇರುವುದಿಲ್ಲ. ಈ ರೀತಿ ಜನರಿಗೆ ಕೊಡುವುದನ್ನು ಬಿಟ್ಟುಬಿಡಿ, ನೀವೇ ತಂದು ಡಿಪೋ ಇಟ್ಟು ಮಾರಿರಿ ಎಂದು ಜನರೂ ಕೂಡ ಹೇಳುತ್ತಿದ್ದಾರೆ. ಅದರ ಮೇಲೆ ಮಾಡಿದೆ.

ಇನ್ನು ಪ್ಲಾಂಟೇಷನ್ ಮಾಡುವ ವಿಚಾರ ಹೇಳುವುದಾದರೆ, ಅದನ್ನು ಇನ್ನೂ ಹೆಚ್ಚಿಗೆ ಮಾಡಬೇಕೆಂಬುದನ್ನು ನಾನು ಒಪ್ಪುತ್ತೇನೆ. ಈ ಬಡ್ಜೆಟ್ಟಿನಲ್ಲಿ ಇಟ್ಟಿರುವುದು ಕಡಮೆಯೆಂದು ಮಾನ್ಯ ಸದಸ್ಯರು ಹೇಳಿದರು. ಪ್ಲಾಂಟೇಷನ್‌ಗಳಲ್ಲಿ ರೆಗ್ಯುಲರ್ ಆಗಿರುವುದು, ರೆಗ್ಯುಲರಾಗಿಲ್ಲದಿರುವುದು ಎಲ್ಲವನ್ನೂ ಸೇರಿಸಿದರೆ ಬಹಳ ಕಡಮೆಯೆಂದೇ ಕಾಣುತ್ತದೆ. ಈ ವರ್ಷ 10,000 ಮಾಡಿದ್ದೇವೆ. ಇದು ಸಾಲದು. ಇದನ್ನು ಹೆಚ್ಚಿಗೆ ಮಾಡುವುದರ ಅವಶ್ಯಕತೆಯಿದೆಯೆಂದು ಒಪ್ಪುತ್ತೇನೆ.

ಅನೇಕರು ಸೌದೆಯ ವಿಷಯ ಹೇಳಿದರು. ಎಲ್ಲರಿಗೂ ಅಡಿಗೆ ಮಾಡುವುದಕ್ಕೆ ಸೌದೆ ಬೇಕು. ಪ್ರತಿ ದಿವಸವೂ ಈ ಸಮಸ್ಯೆ ಉಲ್ಬಣಿಸುತ್ತಿದೆ. ಈ ದೃಷ್ಟಿಯಿಂದ ಅನೇಕ ಖಾಸಗಿ ಮನುಷ್ಯರಿಗೆ ನಾವು ಹೇಳುತ್ತಿದ್ದೇವೆ; 'ನಾವು ಸೊಸಿ ಮುಫತ್ತಾಗಿ ಕೊಡುತ್ತೇವೆ, ಈ ಅವಕಾಶವನ್ನು ಉಪಯೋಗಿಸಿಕೊಳ್ಳಿ,' ಎಂದು. ಆದರೂ ಜನರು, ನಾವು ಯಾವ ಪ್ರಮಾಣದಲ್ಲಿ ಅಪೇಕ್ಷಿಸುತ್ತೇವೆಯೋ ಅಷ್ಟು ಪ್ರಮಾಣದಲ್ಲಿ ಮುಂದೆ ಬರುತ್ತಿಲ್ಲ. ಮಾನ್ಯ ಸದಸ್ಯರು ಮನಸ್ಸು ಮಾಡಿದರೆ ಈ ವಿಷಯದಲ್ಲಿ ಹೆಚ್ಚು ಸಾಧಿಸಬಹುದೆಂದು ಕಾಣುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಹೊಸಕೋಟೆ ತಾಲ್ಲೂಕಿಗೆ ಹದಿನೈದು ಮೈಲಿ ದೂರದಲ್ಲಿ ಎಂದರೆ ಹೊಸಕೋಟೆಯಲ್ಲಿ ಕಾಸುರೀನಾ ಪ್ಲಾಂಟೇಷನ್ನನ್ನು ಮಾಡಲಾಗಿತ್ತು. ಅಲ್ಲಿ ಟ್ರಾಕ್ಟರುಗಳನ್ನು ಉಪಯೋಗಿಸಿ ಸುಮಾರು ಆರು ಸಾವಿರದಿಂದ ಒಂಭತ್ತು ಸಾವಿರದವರೆಗೆ ಖರ್ಚು ಮಾಡಿ ಒಂದು ಸಾವಿರಕ್ಕೆ ಮೇಲ್ಪಟ್ಟು ಸರ್ವೆ ಮರಗಳನ್ನು ಬೆಳೆಯಬೇಕೆಂದು ಇದ್ದುದನ್ನು ಏಕೆ ನಿಲ್ಲಿಸಿಬಿಟ್ಟರು?

ಶ್ರೀ ಹೆಚ್. ಎಸ್. ರುದ್ರಪ್ಪ.—ಅದನ್ನು ನಿಲ್ಲಿಸಿಲ್ಲ. ಈಗ ಬೇರೆ ರೀತಿಯಿಂದ ಅಲ್ಲಿ ಕೆಲಸ ನಡೆಯುತ್ತಿದೆ. ಹೊರದೇಶದಿಂದ ಬಂದ ತಜ್ಞರು ಈಗ ಮಾಡುತ್ತಿರುವ ವಿಧಾನದಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕೆಂದು ಮಾಡಿದ್ದಾರೆ. ಅದರಂತೆ ಮಾಡಿದರೆ ಈಗ ಮಾಡುತ್ತಿರುವುದಕ್ಕಿಂತ ಸ್ವಲ್ಪ ಹೆಚ್ಚಿನ ಉಪಯೋಗಗಳು ಇದರಿಂದ ದೊರಕುತ್ತವೆ ಮತ್ತು ಚೆನ್ನಾಗಿ ಆಗುತ್ತದೆ. ಎನ್ನುವ ದೃಷ್ಟಿಯಿಂದ ಈ ಕೆಲಸವನ್ನು ಮಾಡಲಾಗುತ್ತಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಬೆಂಗಳೂರಿನಲ್ಲಿ ಕೋಲ್ ಗ್ಯಾಸಿನ ಸಿಸ್ಟಂನ್ನು ಇಂಟ್ರೊಡ್ಯೂಸ್ ಮಾಡಿ ಸೌದೆ ಅಭಾವವನ್ನು ಕಡಮೆ ಮಾಡಬಹುದಲ್ಲವೇ?

ಶ್ರೀ ಹೆಚ್. ಎಸ್. ರುದ್ರಪ್ಪ.—ಕಡಮೆ ಮಾಡಬಹುದು.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಮಾನ್ಯ ಸದಸ್ಯರು ಈ ರೀತಿಯಾಗಿ ಮಧ್ಯದಲ್ಲಿ ಪ್ರಶ್ನೆಗಳನ್ನು ಕೇಳುವುದು ಸರಿಯಾಗಿರುವುದಿಲ್ಲ. ಮಂತ್ರಿಗಳು ಹೇಳುವುದನ್ನೆಲ್ಲ ಪೂರ್ತಿಯಾಗಿ ಹೇಳಲಿ, ಅನಂತರ ಯಾವದಾದರೂ ಒಂದು ಪ್ರಶ್ನೆಯನ್ನು ಕೇಳಬೇಕಾದರೆ ಆಗ ಕೇಳಬಹುದು. ಅದು ಸರಿ ಹೋಗುತ್ತದೆ. ಹೀಗೆ ಮಧ್ಯದಲ್ಲಿ ಪ್ರಶ್ನೆಗಳನ್ನು ಕೇಳಿದರೆ ಮಂತ್ರಿಗಳು ಒಂದು ರೀತಿಯಾಗಿ ಎಲ್ಲವನ್ನೂ ಹೇಳುತ್ತ ಬರುತ್ತಿರುವುದರಿಂದ ಕೆಲವು ವೇಳೆ ಏನನ್ನೋ ಹೇಳದೆ ಮರೆತು ಹೋಗಿ ಬಿಡಬಹುದು. ಅಲ್ಲದೆ ಈ ತರಹದ ಒಂದು ವ್ಯವಸ್ಥೆಯಿಲ್ಲದೆ ಸುಮ್ಮನೆ ಪ್ರಶ್ನೆಯನ್ನೇ ಕೇಳುತ್ತಹೋದರೆ ಸುಮ್ಮನೆ ಕಾಲ ವ್ಯರ್ಥವಾಗಿ ಖರ್ಚಾಗುತ್ತದೆ. ಆದುದರಿಂದ ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದು ಮಂತ್ರಿಗಳು ಪೂರ್ತಿಯಾಗಿ ಉತ್ತರಗಳನ್ನು ಕೊಟ್ಟನಂತರ ಯಾವುದಾದರೂ ಪ್ರಶ್ನೆಯನ್ನು ಕೇಳತಕ್ಕ ಸಂಪ್ರದಾಯವನ್ನು ಇಟ್ಟುಕೊಳ್ಳುವುದು ಸೂಕ್ತವಾಗಿದೆ ಎಂದು.

ಅಧ್ಯಕ್ಷರು.—ನಾನು ಮಾನ್ಯ ಮಂತ್ರಿಗಳಲ್ಲಿ ಒಂದು ವಿಚಾರವನ್ನು ಹೇಳಬೇಕಾಗಿದೆ. ತಾವು ಉತ್ತರವನ್ನು ಹೇಳುತ್ತ ಹೋದರೆ ಅವರು ಪ್ರಶ್ನೆ ಕೇಳುತ್ತ ಹೋಗುತ್ತಾರೆ. ತಾವು ಹೀಗೆ ಯೂಟ್ ಬ್ಯಾಕ್ಸ್, ಮಾಡುವುದರಿಂದ ನಿಮಗೂ ತೊಂದರೆಯಾಗುತ್ತದೆ. ತಾವೇ ಹೀಗೆ ಮಾಡಿದರೆ ನಾನು ಏನೂ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಹೆಚ್. ಎಸ್. ರುದ್ರಪ್ಪ.—ಶ್ರೀಮಾನ್ ಹನುಮಯ್ಯನವರು ತಂಗಡಿ ಚಕ್ಕೆ ವಿಚಾರವಾಗಿ ಹೇಳಿದರು. ಇದನ್ನು ಫಾರೆಸ್ಟಿನ ಇಲಾಖೆಯವರು ಹರಾಜು ಮಾಡುತ್ತಿದ್ದಾರೆ. ಹೀಗೆ ಹರಾಜು ಮಾಡುವುದನ್ನು ಹರಿಜನರಿಗೆ ಮತ್ತು ಇದರಿಂದಲೇ ಕೆಲಸ ಮಾಡತಕ್ಕವರಿಗೆ ಈ ತಂಗಡಿ ಚಕ್ಕೆಯನ್ನು ಕೊಟ್ಟರೆ ಅನುಕೂಲವಾಗುತ್ತದೆ ಎಂದು ಹೇಳಿದರು. ಆದರೆ ಸರಕಾರ ವೇನೋ ಕೊಡಬಹುದು. ಆದರೆ ಇದರ ಜವಾಬ್ದಾರಿಯನ್ನು ಯಾರಾದರೂ ವಹಿಸಿಕೊಂಡರೆ ಹರಾಜಿನ ರೇಟಿಗಿಂತ ಒಂದು ರೀತಿಯಾದ ಅವರೇಜು ರೇಟಿಗೆ ಬೇಕಾದರೂ ಕೊಡಲು ತಯಾರಿದ್ದೇವೆ. ಹಾಗೆ ಯಾರಾದರೂ ಮುಂದೆ ಬಂದರೆ ಕೊಡುವುದಕ್ಕೆ ಸಿದ್ಧರಾಗಿದ್ದೇವೆ.

ಶ್ರೀ ಟಿ. ಹನುಮಯ್ಯ.—ಥ್ಯಾಂಕ್ಸ್.

ಶ್ರೀ ಹೆಚ್. ಎಸ್. ರುದ್ರಪ್ಪ.—ಇನ್ನು ಕೆಲವರು ಮಾನ್ಯ ಸದಸ್ಯರು ಪಶುವೈದ್ಯ ಇಲಾಖೆಗೆ ಸರಬರಾಜು ಕಡಮೆಯಾಗಿದೆ, ಹೊಸದಾಗಿ ಬಂದಿರುವ ಬಾಂಬೆ ಕರ್ಣಾಟಕ ಏರಿಯಾದಲ್ಲಿ ಬಹಳ ಕಡಮೆಯಾಗಿದೆ, ಸ್ವಲ್ಪ ಜಾಸ್ತಿ ಕೊಡಬೇಕು ಎಂದು ಹೇಳಿದ್ದಾರೆ. ಇನ್ನೂ ಅನೇಕ ಸದಸ್ಯರು, ಶ್ರೀಮಾನ್ ಸಿದ್ಧಾಂತಿಗಳವರು ಮತ್ತು ಇನ್ನೂ ಇಬ್ಬರು ಮೂವರು ಈ ವಿಚಾರವನ್ನು ಹೇಳಿದ್ದಾರೆ ಮತ್ತು ಶ್ರೀಮಾನ್ ಸುರಪೂರ್‌ರವರೂ ಹೇಳಿದ್ದಾರೆ. ಅವರು ಹೇಳಿರುವ ಸಲಹೆಗಳನ್ನೂ ಗಮನದಲ್ಲಿಟ್ಟುಕೊಂಡಿದ್ದೇವೆ. ಹೋದ

(ಶ್ರೀ ಎಚ್. ಎಸ್. ರುದ್ರಪ್ಪ)

ವರ್ಷದ ಪಾಂಚವಾರ್ಷಿಕ ಯೋಜನೆಯಲ್ಲಿ ಇಷ್ಟು ಮಾಡಬೇಕು ಎಂದು ಯೋಚನೆ ಮಾಡಿದ್ದೆವು. ಅಲ್ಲದೆ ಈಗಿನ ಲೆಕ್ಕಗಳನ್ನು ತೆಗೆದುಕೊಂಡರೆ ಇದಕ್ಕಾಗಿ ಪಾಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿರುವುದು ಬಹಳ ಕಡಮೆಯಾಗಿದೆ. ಅದನ್ನು ಸ್ವಲ್ಪ ಹೆಚ್ಚು ಮಾಡುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ. ಈಗ ನಮ್ಮಲ್ಲಿ ಇದಕ್ಕಾಗಿ ಟೆಕ್ನಿಕಲ್ ಪರ್ಸನಲ್ ಇಲ್ಲದೆ ಬಹಳ ತೊಂದರೆಯಾಗಿದೆ. ಇದಕ್ಕಾಗಿ ಈಗ ಈ ಇಲಾಖೆಯಲ್ಲಿರುವ ಕೆಲವು ಸ್ಟಾಕುಮೆನ್ನುಗಳಿಗೆ ಟ್ರೇನಿಂಗನ್ನು ಕೊಡಲಾಗುತ್ತಿದೆ. ಮತ್ತು ಈಗ ಎಲ್ಲೆಲ್ಲಿ ಆ ಪಶುವೈದ್ಯ ಶಾಲೆಗಳಿಲ್ಲವೋ ಅಲ್ಲೆಲ್ಲ ಕೊಡುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ. ಮತ್ತು ಇದಕ್ಕಾಗಿ ಕಟ್ಟಡಗಳು ಬೇಕಾಗುತ್ತದೆ. ಎಷ್ಟೋ ಕಡೆ ಕಟ್ಟಡಗಳನ್ನು ಕೂಡ ಕೊಡುತ್ತೇವೆಂದು ಜನ ಮುಂದೆ ಬರುತ್ತಿದ್ದಾರೆ. ಇದರಲ್ಲಿ ಏನೂ ಸಂದೇಹವಿಲ್ಲ. ಆದರಿಂದ ಎಲ್ಲೆಲ್ಲಿ ಸೂಕ್ತವಾದ ಸ್ಥಳಗಳಿದೆಯೋ ಅಲ್ಲೆಲ್ಲ ಈ ರೀತಿಯಾದ ಆಸ್ಪತ್ರೆಗಳನ್ನು ಸ್ಥಾಪನೆ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ.

ಎರಡನೆಯದು ಬಹು ಮುಖ್ಯವಾದುದು. ಈ ಆಹಾರದ ಸಮಸ್ಯೆ. ಇದು ಬಹಳ ಮುಖ್ಯವಾದುದು ಎಂದು ಹೇಳುವುದೇ ಅನಾವಶ್ಯಕ ಎಂದು ತೋರುತ್ತದೆ. ಏಕೆಂದರೆ ಈ ಆಹಾರದ ಸಮಸ್ಯೆ ಪ್ರತಿಯೊಬ್ಬರ ಮನಸ್ಸನ್ನೂ ಕೆರಳಿಸುವಂತಹ ಸಮಸ್ಯೆ. ಇದು ಮೈಸೂರು ದೇಶದ ಸಮಸ್ಯೆಯೊಂದೇ ಅಲ್ಲ. ಇಂಡಿಯಾ ದೇಶದ ಸಮಸ್ಯೆಯೂ ಆಗಿದೆ. ಇದನ್ನು ಏಕೆ ಹೇಳುತ್ತೇನೆಂದರೆ ನಾವು ಹೆಚ್ಚಿಗೆ ಬೆಳೆದಿದ್ದೇವೆ ಎಂದು ತಿಳಿದುಕೊಂಡು ಅಂಕಿ ಸಂಖ್ಯೆಗಳನ್ನು ಕೊಟ್ಟರೆ ಮಾನ್ಯ ಸದಸ್ಯರು ಒಪ್ಪುವುದಿಲ್ಲ. ನಮ್ಮ ದೇಶದಲ್ಲಿ ಕಂಟ್ರೋಲು ಮಾಡಿದಾಗ ಹೆಚ್ಚಿಗೆ ಬೆಳೆಯಾಗುತ್ತಿಲ್ಲ ಎಂದು ಹೊರಗಡೆಯಿಂದ ತರಿಸಿಕೊಳ್ಳುತ್ತಿದ್ದುದು ಇದರಿಂದ ಗೊತ್ತಾಗುತ್ತದೆ. ಈಗ ಆ ರೀತಿ ಒಂದು ನಿರ್ಬಂಧವಿಲ್ಲದೆ ಇರುವುದರಿಂದ ಈ ರೀತಿಯಾದ ಅನುಮಾನಕ್ಕೆ ಕಾರಣವಾಗಿದೆ. ಯಾವಾಗಲೂ ಅಂಕಿ ಸಂಖ್ಯೆಗಳನ್ನು ತೆಗೆದುಕೊಂಡು ಯಾರನ್ನು ಸಂತೋಷಪಡಿಸುವುದಕ್ಕಾಗಲಿ ಅಥವಾ ವಂಚನೆ ಮಾಡುವುದಕ್ಕಾಗಲಿ ಎಂದು ಮಾತನಾಡುವುದು ತಪ್ಪು. ಮೇಲಾಗಿ ಅಂಕಿ ಸಂಖ್ಯೆಗಳನ್ನು ತೆಗೆದುಕೊಳ್ಳುವುದು ಇಂಡಿಯಾ ಸರಕಾರದವರು. ನಮಗಿಂತ ಅವರಿಗೆ ಹೆಚ್ಚಿನ ಆಸಕ್ತಿಯಿದೆ. ಇಂಡಿಯಾ ಸರಕಾರದವರು ಇಲ್ಲಿ ಜಾಸ್ತಿಯಾಗಿದೆ ಎಂದು ತಿಳಿದರೆ ಅದನ್ನು ತನಿಖೆ ಮಾಡುತ್ತಾರೆ. ಇಲ್ಲಿನ ಆಹಾರದ ಪರಿಸ್ಥಿತಿ ಹೇಳಿದೆ ಎನ್ನುವುದು ತಮಗೆಲ್ಲ ಗೊತ್ತಿದೆ. ಸುಮಾರು 50ನೆಯ ಇಸವಿಯಿಂದ ಆ ಆಹಾರವನ್ನು ಹೊರಗಿನಿಂದ ತರಿಸುತ್ತಿದ್ದಾರೆ. 1951-52ನೆಯ ಸಾಲಿನಲ್ಲಿ 214ಕೋಟಿ ರೂಪಾಯಿಗಳ ಆಹಾರ ಪದಾರ್ಥಗಳನ್ನು ಹೊರಗಿನಿಂದ ತರಿಸಿದ್ದಾರೆ. ಮೊದಲನೇ ಪಾಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚಿನ ಖರ್ಚನ್ನು ಮಾಡಬೇಕೆಂದಿತ್ತು. ಬಹುಶಃ ಅಷ್ಟು ಖರ್ಚು ಮಾಡುವುದಕ್ಕಾಗಲಿಲ್ಲ. ದೇಶದಲ್ಲಿ ಆಹಾರವನ್ನು ಒದಗಿಸಬೇಕು ಎಂದು 1951-52ನೆಯ ಸಾಲಿನಿಂದಲೂ ಹೇಳುತ್ತ ಬಂದಿದ್ದಾರೆ. 1955ನೆಯ ಸಾಲಿನಲ್ಲಿ ಸುಮಾರು 35ಕೋಟಿ ರೂಪಾಯಿಗಳಷ್ಟು ಆಹಾರವನ್ನು ಮಾತ್ರ ತರಿಸಿದರು. ಅಲ್ಲದೆ ಹೆಚ್ಚಿನ ಆಹಾರವನ್ನು ಬೆಳೆಯುವುದಕ್ಕೆ ಸಕಾಲದಲ್ಲಿ ಮಳೆಯೂ ಬಂದದ್ದರಿಂದ ಒಳ್ಳೆಯ ಬೆಳೆಯಾಯಿತು. ಆದರೆ 1956ನೆಯ ಜನವರಿ ವೇಳೆಗೆ ಆಹಾರ ಪದಾರ್ಥಗಳು ಚೆನ್ನಾಗಿ ಬೆಳೆದುದರಿಂದ ದೇಶದಲ್ಲಿ ಆಹಾರ ಪದಾರ್ಥಗಳ ಧಾರಣೆ ಬಿದ್ದು ಹೋಯಿತು. ಇದು ಮಾನ್ಯ ಸದಸ್ಯರೆಲ್ಲರಿಗೂ ತಿಳಿದಿರುವ ವಿಚಾರ. ಬೇಕಾದರೆ ಈ ಸಭೆಯ ಪ್ರೊಸೀಡಿಂಗ್ಸನ್ನು ಬೇಕಾದರೂ ತೆಗೆಸಿ ನೋಡಿದರೆ ತಮಗೇ ಎಲ್ಲ ಗೊತ್ತಾಗುತ್ತದೆ. ಆಗ ನಿಮ್ಮಗಳೆಲ್ಲರಿಂದಲೂ ಈ ಆಹಾರ ಪದಾರ್ಥಗಳನ್ನು ಕಳುಹಿಸುವುದಕ್ಕೆ ಪರ್ಮಿಟ್ಟುಗಳನ್ನು ಕೊಡಬೇಕೆಂಬ ಕೂಗು ಎಲ್ಲೆಲ್ಲಿಯೂ ಹರಡಿತು. ಹಾಗೆಯೇ ಅಲ್ಪ ಸ್ವಲ್ಪ ಕಳುಹಿಸುವುದಕ್ಕೆ ಪರ್ಮಿಷನ್ನನ್ನು ಕೂಡ ಕೊಡಲಾಯಿತು. ಇದನ್ನೆಲ್ಲ ಏಕೆ ಹೇಳುತ್ತಿದ್ದೇನೆಂದರೆ, ನಮ್ಮ ದೇಶದ ಪರಿಸ್ಥಿತಿ ಹೇಗಿದೆ ಎನ್ನುವುದನ್ನು ತಿಳಿಸುವುದಕ್ಕೋಸ್ಕರ. ನಮ್ಮ ಮೈಸೂರು ದೇಶದಲ್ಲಿ ನೂರಕ್ಕೆ 92 ಪಾಲು ಮಳೆಯ ನೀರನ್ನು ಅನುಸರಿಸಿಕೊಂಡು ಬೆಳೆಯನ್ನು ಮಾಡುವುದೇ ಹೆಚ್ಚು. ಆದರೆ ಇಂಡಿಯಾ ದೇಶದಲ್ಲಿ ನೂರಕ್ಕೆ 80ರಿಂದ 90 ಭಾಗದಷ್ಟು ಜಮೀನುಗಳಿಗೆ ವಾಟರ್ ಸಪ್ಲೈ ಸರಿಯಾಗಿದ್ದರೆ ಬೆಳೆ ಚೆನ್ನಾಗಿ ಆಗುತ್ತದೆ. ಇಲ್ಲದೆ ಇದ್ದರೆ ಬೆಳೆ ಚೆನ್ನಾಗಿ ಆಗುವುದಿಲ್ಲ. 1954-55 ಮತ್ತು 1955-56ರಲ್ಲಿ ಸಾಕಷ್ಟು ಮಳೆಯಾಯಿತು. ಬೆಳೆಯೂ ಆಯಿತು. 1956ನೆಯ ಇಸವಿಯಲ್ಲಿ ಬೆಳೆ ಹೆಚ್ಚಾದುದರಿಂದ ಧಾರಣವಾಸಿಗಳೂ ಸ್ವಲ್ಪ ಇಳಿದವು. ಆದರೆ ಹೊರಗಡೆಗೆ ಕಳುಹಿಸಲು ಅವಕಾಶವಾದ್ದರಿಂದ ಮತ್ತೆ ಧಾರಣೆಗಳು ಏರಿದವು. 1956ನೆಯ ಇಸವಿ ಸೆಪ್ಟಂಬರು ವೇಳೆಗೆ ಮಳೆಯೇ ಬಾರದ್ದರಿಂದ ಅಭಾವ ಬಂದಿತು. 1957-58ರಿಂದ ಇಂಡಿಯಾ ಸರಕಾರದಿಂದ ನಮ್ಮ ಸರಕಾರಕ್ಕೆ ಸ್ವಲ್ಪ ಸಹಾಯ ಕೂಡ ದೊರಕಿತು. ಈ ರೀತಿಯ ಆಹಾರದ ಅಭಾವವು ಬಿಜಾಪುರ, ಧಾರವಾಡ, ಗುಲ್ಬರ್ಗ ಮತ್ತು ರಾಯಚೂರು ಈ ಕಡೆಗಳಲ್ಲಿ ಕಂಡುಬಂದಿತು. ಈ ವರ್ಷ ಎಂದರೆ 1957ನೆಯ ಸಾಲಿನಲ್ಲಿ ಹಳೆಯ ಮೈಸೂರಿನಲ್ಲಿ ಕೋಲಾರ, ತುಮಕೂರಿನ ಕೆಲವು ಭಾಗಗಳಲ್ಲಿ ಮತ್ತು ಇನ್ನು ಕೆಲವು ಕಡೆಗಳಲ್ಲಿ ಈ ಆಹಾರದ ಅಭಾವದಿಂದ ತೊಂದರೆಯಾಯಿತು. ಹೀಗೆ ನಮ್ಮ ದೇಶದಲ್ಲಿ ನೂರಕ್ಕೆ 92ಭಾಗ ನೀರಾವರಿ ಸೌಕರ್ಯಗಳಿಲ್ಲದಿರುವುದರಿಂದ ಮಳೆಯನ್ನೇ ಅವಲಂಬಿಸಿರುವುದರಿಂದ ಬೆಳೆಯ ಲೆಕ್ಕಾಚಾರವೂ ಕಡಮೆಯಾಗುತ್ತದೆ. 1957ನೆಯ ಇಸವಿಯಲ್ಲಿ ಮಳೆಯ ಅಭಾವದಿಂದ ದೇಶದಲ್ಲಿ ಬೆಳೆಯ ಅಭಾವವೂ ಆಯಿತು.

ಉತ್ತರ (ಯುನೈಟೆಡ್) ಪ್ರದೇಶ, ಬಿಹಾರ, ಬಂಗಾಳ, ಮತ್ತು ನಮ್ಮ ದೇಶದಲ್ಲಿ ಹೀಗಾಗಿರುವುದರಿಂದ ಈ ದೇಶದಲ್ಲಿ ಅಭಾವ ಕಾಣಬಹುದು. ವ್ಯವಸಾಯದಲ್ಲಿ ಅಭಿವೃದ್ಧಿ ಮಾಡುತ್ತೇವೆ, ಹೆಚ್ಚಿಗೆ ಆಹಾರ ಉತ್ಪನ್ನ ಮಾಡುತ್ತೇವೆಂದು ಹೇಳುತ್ತ ಬಂದರೂ ಸಹ ಅದು ಸಾಧ್ಯವೇ ಎನ್ನುವ ಅನುಮಾನ ಬಂತು. ನಮಗೂ ಅನುಮಾನ ಬಂದಿದೆ. ಎಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟಿದ್ದೇವೆ ಅಲ್ಲಿ ಸ್ವಲ್ಪ ಪ್ರೋಗ್ರೆಸ್ ನಿಧಾನವಾಗಿದೆ, ನಿರೀಕ್ಷಣೆ ಮಾಡಿದಷ್ಟು ಅಭಿವೃದ್ಧಿಯಾಗಿಲ್ಲ. ತುಂಗಭದ್ರ ಯೋಜನೆಗೆ 60 ಕೋಟಿ ರೂಪಾಯಿ ಖರ್ಚು ಮಾಡಿ, ಸಾಗುವಳಿ ಮಾಡಿ ಆಹಾರೋತ್ಪತ್ತಿ ಮಾಡುತ್ತೇವೆ ಎಂದು ಹೇಳುತ್ತಿದ್ದರೂ ಅಷ್ಟಾಗಿಲ್ಲ. ದೊಡ್ಡ ದೊಡ್ಡ ಯೋಜನೆಗಳಲ್ಲಿ ತೊಂದರೆಯಾಗಿದೆ. ಬಾಕಿ ಕಡೆ ಚೆನ್ನಾಗಿ ನಡೆದಿದೆ. ಎಲ್ಲ ಕಡೆಗಳಲ್ಲಿಯೂ ಎಷ್ಟು ಚೆನ್ನಾಗಿ ವ್ಯವಸಾಯಾಭಿವೃದ್ಧಿಯಾಗಬೇಕೆಂದು ಯೋಚಿಸಿತ್ತೋ ಅಷ್ಟು ಚೆನ್ನಾಗಿ ನಡೆಯಲಿಲ್ಲವೆಂದು ನಮಗೆ ನೋವಾಗುತ್ತಿದೆ. ನಾವು ನಿರೀಕ್ಷಿಸಿದಷ್ಟು ಬೆಳೆ ಬರುತ್ತದೆಂದು ಹೇಳಲು ಸಾಧ್ಯವಿಲ್ಲ. ಫಸಲು ಮನೆಗೆ ಬರುವವರೆಗೂ ಎಷ್ಟು ಬರುತ್ತದೆಂದು ಲೆಕ್ಕ ಹಾಕಿ ಹೇಳುವುದಕ್ಕೆ ಯಾರಿಗೂ ಆಗುವುದಿಲ್ಲ. ಬತ್ತು

ವುದರಲ್ಲಿ ತೊಂದರೆಯಾಗಿ, ಬೆಳೆಯಲ್ಲಿ ತೊಂದರೆಯಾಗಿ, ಮಳೆ ಹೆಚ್ಚಿಗೆ ಬಂದು ಅಥವಾ ಕ್ರಿಮಿಕೀಟಗಳಿಂದ ತೊಂದರೆಯಾಗಿ ಫಸಲು ಕಡಮೆ ಬರಬಹುದು. ಆದುದರಿಂದ ಇಷ್ಟೇ ಬೆಳೆ ಬರುತ್ತದೆಂದು ಲೆಕ್ಕ ಹಾಕು ವುದಕ್ಕಾಗುವುದಿಲ್ಲ. ವ್ಯವಸಾಯ ಅಭಿವೃದ್ಧಿಯಾಗಿ ಬೆಳೆಯಾದರೆ, ಆ ಪ್ರಕಾರ ಲೆಕ್ಕ ಹಾಕಿದರೆ ನಮ್ಮ ದೇಶ self-sufficient ಆಗಿಲ್ಲವೆಂದು ಹೇಳುವುದಕ್ಕೆ ಆಗುವು ದಿಲ್ಲ. ಒಂದು ವರ್ಷ ಮಳೆ ಬರುವುದಿಲ್ಲವೆಂದರೂ ನಮ್ಮ ದೇಶ ಆಹಾರದಲ್ಲಿ self-sufficient ಆಗಿದೆ ಎಂದು ಲೆಕ್ಕ ತೆಗೆದುಕೊಳ್ಳುವಂತೆ ಇರಬೇಕಾದದ್ದು ನ್ಯಾಯವಾದುದು. ಇದಕ್ಕೆ ಹೆಚ್ಚು ತೀವ್ರವಾದ ಕ್ರಮ ವನ್ನು ತೆಗೆದುಕೊಳ್ಳಬೇಕು ಎಂಬುದು ಪ್ರಾಮುಖ್ಯ ವಾದುದು ಎಂದು ನಮ್ಮ ದೇಶದ ಪ್ರಧಾನ ಮಂತ್ರಿ ಗಳು ಹೇಳುತ್ತಿದ್ದಾರೆ. ಅವರಿಗಿರತಕ್ಕ ತೀಕ್ಷ್ಣತೆ ನಮ್ಮಲ್ಲಿಲ್ಲ. ಆದುದರಿಂದ ಈ ತೊಂದರೆಯಾಗಿದೆ. ಇಷ್ಟು ಹೇಳಿ ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಈ ವರ್ಷ ಏನೇನು ಮಾಡುತ್ತೇವೆಂದು ತಮಗೆಲ್ಲ ತಿಳಿಸ ಬೇಕಾದದ್ದು ನಮ್ಮ ಕರ್ತವ್ಯ. ಅದಕ್ಕೋಸ್ಕರ grow more food campaignನಲ್ಲಿ ಏನೇನು ಮಾಡು ತ್ತೇವೆಂಬುದನ್ನು pamphlets ಮೂಲಕ ತಿಳಿಸಿ ದ್ದೇವೆ. ಈ ಸಲವೂ ಅದೇ ರೀತಿ ಮಾಡಬೇಕೆಂದು ತಿಳಿಸಿದ್ದೇವೆ. ಇದರಿಂದ ಯಾವ ರೀತಿ ವ್ಯವಸಾಯಾಭಿ ವೃದ್ಧಿಆಗುತ್ತದೆಂಬುದು ತಿಳಿಯುತ್ತದೆ. ನಮ್ಮ ದೇಶ ದಲ್ಲಿ commercial crops ಹೆಚ್ಚಿಗೆ ಆಗುತ್ತಿದೆ. ಇದಕ್ಕೆ ಹೆಚ್ಚಿಗೆ ಗಮನ ಕೊಡಬೇಕು. ದುಡ್ಡಿನ ಬೆಳೆಯನ್ನು ಅನಾದರಣೆ ಮಾಡುವುದಕ್ಕಾಗುವುದಿಲ್ಲ. ತೆಂಗು; ಅಡಿಕೆ, ಹತ್ತಿ, ಸೇಂಗಾ ಮುಂತಾದ commercial crops ಇವೆ. ಹತ್ತಿ, ಸೇಂಗಾ ಬಹಳ ಚೆನ್ನಾಗಿ ಬೆಳೆಯುವುದಕ್ಕೆ ಅನುಕೂಲವಿದೆ. Commercial crops ವಿಷಯದಲ್ಲಿಯೂ ಹೆಚ್ಚಿಗೆ ಮುತುವರ್ಜಿ ವಹಿಸಬೇಕಾಗಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಮೈಸೂರು ದೇಶದ ಮ್ಯಾಪುಗಳ ಒಂದು ಪುಸ್ತಕವನ್ನು ಕೊಟ್ಟಿದ್ದಾರೆ. ಅದರಲ್ಲಿರುವ ಅಂಕಿಅಂಶಗಳನ್ನು ನೋಡಿದರೆ net area sown (in thousands of acres) 24,422 Mysore State Map. The net area sown is 24,422 thousand acres. Total food grown 22,74,200 thousand acres.

How absurd these figures are and you give it in cold print—page 11 of the Mysore State in Map.

The net area sown is more than the total area under food and non-food crops (page 16).

ಶ್ರೀ ಎಚ್. ಎಸ್. ರುದ್ರಪ್ಪ.—ಅದನ್ನು ವೇರಿಫೈ ಮಾಡಿ ನಾಳೆ ಹೇಳುತ್ತೇನೆ.

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಒಂದೇ ಒಂದು ವಿಷಯವಿದೆ. From the point of utility, how do you compare big irrigation projects with the small irrigation projects?

ಶ್ರೀ ಎಚ್. ಎಸ್. ರುದ್ರಪ್ಪ.—Small and medium irrigation ಪ್ರಾಜೆಕ್ಟ್‌ಗಳಿಂದ ಅನು ಕೂಲತೆಗಳು ಜಾಸ್ತಿ ಇವೆ. ಅದನ್ನು ಮಾಡಬೇಕೆಂದು ಇಂಡಿಯಾ ಸರ್ಕಾರದವರು ತೀರ್ಮಾನಿಸಿ ಈಗಾಗಲೇ ಅದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದಾರೆ. ನಿನ್ನೆ ತಾನೇ ಮಾನ್ಯ ವೀರಣ್ಣಗೌಡರು ಹೇಳಿದ್ದಾರೆ, ಸ್ಪೆಷಲ್ ಸಬ್‌ಡಿವಿಜನ್ ಮಾಡಿ ಈ ಬಗ್ಗೆ ಕಾರ್ಯಕ್ರಮ ನಡೆಸುತ್ತಿದ್ದೇವೆಂದು ಇದರಲ್ಲಿ ಪ್ರೋಗ್ರೆಸ್ ನಿಧಾನ ವಾಗಿ ಕಾಣಬಹುದು. ನಾವು ಸ್ವಲ್ಪ ಕಾಲ ಕಾದು ನೋಡಬೇಕು. ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಿಂದ ತಕ್ಷಣದಲ್ಲಿ ಪ್ರಯೋಜನವಾಗುವುದಿಲ್ಲವೆಂಬುದನ್ನು ಅರಿತೇ 1957-58ರಲ್ಲಿ ಇಂಡಿಯಾ ಸರ್ಕಾರದವರು ಸಣ್ಣ ಮತ್ತು ಮೀಡಿಯಂ ಕಾಮಗಾರಿಗಳಿಗೆ ಹೆಚ್ಚು ದುಡ್ಡನ್ನು ಒದಗಿಸಿದ್ದಾರೆ. ನಾವು ಒಂದೆರಡು ವರ್ಷ ಕಾದು ನೋಡಬೇಕಾಗಿದೆ.

ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿ ದ್ದಾರೆ. ಕಾಲಾವಕಾಶವಿಲ್ಲದಿದ್ದರಿಂದ ಎಲ್ಲವನ್ನೂ ಪ್ರಸ್ತಾಪ ಮಾಡಬೇಕೆಂಬ ಆಸೆ ಇದ್ದರೂ ಸಾಧ್ಯವಿಲ್ಲ. ಆದರೂ ಎಷ್ಟು ಸಾಧ್ಯವೋ ಅಷ್ಟನ್ನು ತಿಳಿಸುತ್ತೇನೆ. ಹೆಚ್ಚಿಗೆ ಉತ್ಪತ್ತಿ ಮಾಡಬೇಕಾದರೆ ಭೂಮಿಯನ್ನು ಉಳಬೇಕು. ಭೂಮಿಯನ್ನು ನೀರಾವರಿಗೆ ಅನುಕೂಲ ವಾಗುವಂತೆ ಮಾಡಬೇಕಾದರೆ ಭೂಮಿಯನ್ನು ಸಮ ಮಾಡುವುದು, ಹೆಚ್ಚಿಗೆ ಭೂಮಿಯನ್ನು ವ್ಯವಸಾಯ ಯೋಗ್ಯವಾದುದನ್ನಾಗಿ ಮಾಡುವುದು ಮುಖ್ಯವಾ ದುದು. ಇದಕ್ಕೆ ಟ್ರಾಕ್ಟರ್ ಮತ್ತು ಬುಲ್‌ಡೋಜರ್ ಸರ್ವಿಸ್ ಇದೆ. ಇದರ ಬಗ್ಗೆ ಬಹಳ ಜನ ಸ್ನೇಹಿತರು ಮಾತನಾಡಿದ್ದಾರೆ. ಇದರದು ಒಂದು ಕಥೆ. ಇದು 1946-47ರಲ್ಲಿ ಪ್ರಾರಂಭವಾಯಿತು. ಮೆಷಿನರಿ ಹೊಸದು. ಅದಕ್ಕೆ ಸರಿಯಾದ ಮೆಕಾನಿಕ್ಸ್ ಇರಲಿಲ್ಲ ಮತ್ತು ಅದನ್ನು ನಡೆಸತಕ್ಕವರು ಇಲ್ಲದೆ ತೊಂದರೆ ಯಾಗಿ ಟ್ರಾಕ್ಟರ್ ಮತ್ತು ಬುಲ್‌ಡೋಜರುಗಳಿಂದ ಲುಕ್ಸಾನಾಯಿತು. ಆದರೆ ನಮ್ಮ ಜನರು ಇದರ ಸಹಾಯ ಬೇಕೆಂದು ಕೇಳುತ್ತಿರುವುದರಿಂದ ಸರ್ಕಾರ ದವರು ಇವು ಇರಲೇ ತೀರಬೇಕು ಎಂದು ಮಾಡಿರುವು ದರಿಂದ ಹಳೆಯುದನ್ನೇ ರಿಪೇರಿ ಮಾಡಿಸಿದ್ದೇವೆ. ಹೊಸ ಯಂತ್ರಗಳನ್ನು ತರಿಸಿದರೆ ಮತ್ತಷ್ಟು ಲುಕ್ಸಾನಾಗ ಬಹುದು ಎನ್ನುವ ದೃಷ್ಟಿಯಿಂದ ಟ್ರಾಕ್ಟರುಗಳನ್ನು ಕೊಳ್ಳಲು ಮುಂದೆ ಬರುವವರಿಗೆ ಸಹಾಯವನ್ನು ಕೊಡುತ್ತೇವೆ.

ಶ್ರೀ ಕುಂದೂರು ರುದ್ರಪ್ಪ.—ಟ್ರಾಕ್ಟರಿನಿಂದ ರೈತರು ಅಭಿವೃದ್ಧಿಯಾಗಬಹುದು ಎಂದು ಯೋಚನೆ ಮಾಡಿದ್ದಿರಿ. ಸರ್ಕಾರಕ್ಕೆ 30 ಲಕ್ಷ ರೂಪಾಯಿ ನಷ್ಟ ವಾದ ಮೇಲೆ ಈ ರೀತಿ ಮಾಡಿದ್ದೀರಿ. ಇಂಡಿಯಾ ಸರ್ಕಾರದಿಂದ ಕೊಡುವ ಗ್ರಾಂಟ್ lapse ಆಗುತ್ತದೆ. ಚನ್ನಗಿರಿ ತಾಲ್ಲೂಕು ಹೊಸಹಳ್ಳಿ ಗ್ರಾಮದಲ್ಲಿ ಒಂದು oil centre ಮಾಡಬೇಕೆಂದು ಸರ್ಕಾರ ನಾಲ್ಕು ಲಕ್ಷ ರೂಪಾಯಿ ಕೊಟ್ಟಿದೆ. ಇದುವರೆಗೂ ಕಾರ್ಯರೂಪಕ್ಕೆ ಬರಲಿಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ.—ಅದಕ್ಕೆ ನಾನು ಜವಾಬು ಹೇಳುತ್ತೇನೆ. ಟ್ರಾಕ್ಟರ್ ಮತ್ತು ಬುಲ್ ಡೋಜರ್‌ನಿಂದ ಬಹಳ ಲುಕ್ಸಾನಾಗಿ ಈಗ ಬುದ್ಧಿ ವಂತರಾಗಿದ್ದೇವೆ. ಹೊಸದಾಗಿ ಟ್ರಾಕ್ಟರ್ ತೆಗೆದು ಕೊಂಡು ವ್ಯವಸಾಯ ಮಾಡುತ್ತಾ ಇರುವವರು ಚೆನ್ನಾಗಿ ಅಭಿವೃದ್ಧಿ ಹೊಂದುತ್ತಿದ್ದಾರೆ. ಈಗ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಅದು ಒಂದೇ ಕೆಲಸಕ್ಕಲ್ಲ, ನಾನಾ ಕೆಲಸಗಳಿಗೆ ಉಪಯೋಗಿಸಲು ಸಾಧ್ಯವಿರುವುದರಿಂದ ಈಗ ಹೆಚ್ಚಿಗೆ ಡಿಮಾಂಡ್ ಬರು ತ್ತಿದೆ. ಇದಕ್ಕಾಗಿ ಮೊದಲು ಐದು ಲಕ್ಷ ಮಂಜೂ ರಾಗಿತ್ತು. ಮತ್ತೆ ಐದು ಲಕ್ಷ ಬೇಕೆಂದು ಕೇಳಿದ್ದೇವೆ, ಕೊಟ್ಟಿದ್ದಾರೆ. ಟ್ರಾಕ್ಟರನ್ನು ಕೇಳಿರುವವರೆಲ್ಲ ದಡ್ಡ ರಲ್ಲ, ಬುದ್ಧಿವಂತರು. ಅವರಿಗೆಲ್ಲ ಇನ್ನೂ ಟ್ರಾಕ್ಟರ್ ಗಳನ್ನು ಒದಗಿಸಲಿಕ್ಕೆ ಆಗಿಲ್ಲ. 30 ಟ್ರಾಕ್ಟರ್ ಬೇಕೆಂದು ಕೇಳಿದ್ದೇವೆ. ಬಂದ ಕೂಡಲೇ ಒದಗಿಸು

(ಶ್ರೀ ಹೆಚ್. ಎಸ್. ರುದ್ರಪ್ಪ)

ತ್ತೇವೆ. ಟ್ರಾಕ್ಟರುಗಳನ್ನು ಜನಗಳಿಗೆ ಒದಗಿಸತಕ್ಕದ್ದು ನಮ್ಮ ಜವಾಬ್ದಾರಿ. ಯಾರು ಚೆನ್ನಾಗಿ ಯಶಸ್ವಿಯಾಗಿ ಕೆಲಸ ಮಾಡುತ್ತಾರೋ ಅವರಿಗೆ ಕೊಡಬೇಕೆಂದು ಮಾಡಿದ್ದೇವೆ. ಆಮೇಲೆ ಶ್ರೀ ರುದ್ರಪ್ಪನವರು ಒಂದು ವಿಷಯ ಹೇಳಿದರು. ಹೊಸಹಳ್ಳಿ ಫಾರಂ ಇಂಡಿಯಾ ಸರ್ಕಾರದವರು ಮಾಡಬೇಕೆಂದು ಹೇಳಿದರು. ಆ ಚರಿತ್ರೆ ನಿಮಗೆ ಹೇಳಬಾರದು. ನಾನು ಬಂದ ಮೇಲೆ ಪಂಚವಾರ್ಷಿಕ ಯೋಜನೆಯ ಎರಡನೆಯ ವರ್ಷದಲ್ಲಿ 99 ಸ್ಕೀಮ್‌ಗಳನ್ನು ಕಳುಹಿಸಿದೆ. ಅಲ್ಲಿಗೆ ಇಲ್ಲಿಗೆ ಓಡಾಡಿ, ಇಂಡಿಯಾ ಸರ್ಕಾರದವರನ್ನು ಕಂಡು 55 ಸ್ಕೀಮ್‌ಗಳು ಸ್ಯಾಂಕ್ಷನ್ ಆಗಿವೆ; ಇದೂ ಒಂದು ಸ್ಕೀಮ್. ಏಕೆ ನಿಧಾನವಾಗಿದೆ ಎಂದರೆ, ಅವರು ಹೇಳುವ ಬೇಸಿಸ್ ಮೇಲೆ ವರ್ಕ್ ಮಾಡಿ ಫೈನಾಷಿಯಲ್ ಸ್ಯಾಂಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ. ದುಡ್ಡು ಇಲ್ಲ, ರಿಕರಿಂಗ್ ಮತ್ತು ನಾನ್-ರಿಕರಿಂಗ್ ಎಕ್ಸ್‌ಪೆಂಡಿಚರ್ ಕೊಡುವುದಕ್ಕಾಗುವುದಿಲ್ಲ ಎನ್ನುವ ಅಂಶ ಬಂದಿತು. ಪುನಃ ನಾವು ಬರೆಯಬೇಕಾಯಿತು. 99 ಸ್ಕೀಮ್‌ಗಳಲ್ಲಿ, 55 ಸ್ಕೀಮ್‌ಗಳನ್ನು ಅವರಿಂದ ಸ್ಯಾಂಕ್ಷನ್ ಪಡೆಯುವುದಕ್ಕೆ ಬಹಳ ಕಷ್ಟಪಟ್ಟಿದ್ದೇವೆ. ಅದರಲ್ಲಿ ಇದೂ ಒಂದು ಸ್ಕೀಮ್ ಸ್ಯಾಂಕ್ಷನ್ ಆಗಿದೆ. ಈ ಜಮೀನನ್ನು ಬೇರೆಯವರು ಅಕ್ರಮದಿಂದ ಸಾಗು ಮಾಡುತ್ತಿದ್ದಾರೆ ಸರ್ಕಾರ ಜಮೀನನ್ನು ಪಡೆಯುವುದಕ್ಕೆ, ಸರ್ಕಾರದವರಿಂದಲೂ ಆಗಿಲ್ಲ, ಇವರಿಂದಲೂ ಆಗಿಲ್ಲ ಆದ್ದರಿಂದ ಈ ವರ್ಷವೇ ಪ್ರಾರಂಭ ಮಾಡಬೇಕೆಂದಿದ್ದೇವೆ. ಸ್ಯಾಂಕ್ಷನ್ ಆಗಿದೆ ಅದನ್ನು ಪ್ರಯತ್ನ ಮಾಡಿ, ಶ್ರೀ ರುದ್ರಪ್ಪನವರೂ ಸಹಾಯ ಮಾಡಿ ಆ ಜಮೀನನ್ನು ಕೊಡಿಸಿ ಕೊಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇವೆ.

ಒಬ್ಬ ಸದಸ್ಯರು.—ಹೊಸಹಳ್ಳಿ ವಿಚಾರ ಹೇಳಿದಿರಿ. ಕತ್ತಲಗೆರೆ ವಿಚಾರ ಹೇಳಿ.

ಶ್ರೀ ಎಚ್. ಎಸ್. ರುದ್ರಪ್ಪ.—ಅನೇಕ ಮಾನ್ಯ ಸದಸ್ಯರು ಬಹಳ ಕಡಮೆ ದರದಲ್ಲಿ ಬಾಡಿಗೆ ಕೊಡಬೇಕೆಂದು ಹೇಳಿದರು. ಶ್ರೀ ನರಸಿಂಹಯ್ಯನವರು ಎಷ್ಟು ಲುಕ್ಸಾನು ಮಾಡಿಕೊಳ್ಳುತ್ತೀರಿ ಎಂದು ಕೇಳಿದರು. ಸಾರ್ವಜನಿಕರ ಹಣವನ್ನು ಲುಕ್ಸಾನು ಮಾಡಿಕೊಳ್ಳತಕ್ಕಂಥಾದ್ದು ಸೂಕ್ತವಾದುದಲ್ಲ. ಆ ದೃಷ್ಟಿಯಿಂದ no profit, no loss basis ಮೇಲೆ ಕೆಲಸ ಮಾಡಬೇಕು ಎಂದು ನಾನು ಬಂದಮೇಲೆ ಮಾಡಿದ್ದೇನೆ. ಅದನ್ನೇ ಬಿಟ್ಟು ಬಿಟ್ಟು ಮಾಡಬೇಕು ಎಂದು ಹೇಳಿದರೆ ನಮಗೆ ಕಷ್ಟ ಬರುತ್ತದೆ. ಸ್ಪೇರ್ ಪಾರ್ಟ್ಸ್, ಮಿಷಿನರಿ, ರಿಪೇರಿ ಮುಂತಾದುವುಗಳನ್ನು ಸರ್ಕಾರದವರು ವಹಿಸಬೇಕು. ಇವತ್ತು ಎಷ್ಟು ಚೆನ್ನಾಗಿ ಕೆಲಸ ಮಾಡಬೇಕೋ ಅಷ್ಟು ಚೆನ್ನಾಗಿ ಮಾಡುತ್ತಾ ಇಲ್ಲ. ವಾರಕ್ಕೆ ಒಂದು ಸಾರಿ ರಿಪೋರ್ಟ್ಸ್ ತರಿಸುತ್ತಿದ್ದೇವೆ.

ಬುಲ್‌ಡೋಜರ್ ರೇಟ್ ಕಡಿಮೆ ಮಾಡುವುದು ಸೂಕ್ತವಲ್ಲ. ಅದರಿಂದ ದೊಡ್ಡ ದೊಡ್ಡವರು ಕೆಲಸ ಮಾಡಿಸಿಕೊಳ್ಳುತ್ತಾರೆ. ಸಣ್ಣ ಸಣ್ಣವರು ಉಪಯೋಗಿಸುವುದಿಲ್ಲ. ಟ್ರಾಕ್ಟರುಗಳನ್ನು ಉಪಯೋಗಿಸಿಕೊಂಡು ಅವರು ಕೆಲಸವಮಾಡಿಸಿಕೊಳ್ಳುವ ಅವಶ್ಯಕತೆ ಇದೆ. ಅವರಿಗೆ ಮಾತ್ರ ತಾವು ಏನು ಹೇಳಿದಿರೋ ಅದನ್ನು ಗಮನದಲ್ಲಿ ಇಟ್ಟುಕೊಂಡು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಹದಿನೈದು ರೂಪಾಯಿಗೆ ಜಾಸ್ತಿ ಮೀರಿರಬಾರದು;

ಶ್ರೀ ಎಚ್. ಎಸ್. ರುದ್ರಪ್ಪ.—ತಮ್ಮ ಮುಂದೆ ಸಲಹೆ ಇಡುತ್ತೇನೆ. ಬಹಳ ಲುಕ್ಸಾನು ಆಗಬಾರದು. ಇಂಡಿಯಾ ಸರ್ಕಾರದವರು ಒಪ್ಪಬೇಕು. ತಾವು ಕೊಟ್ಟಿರುವ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಟ್ರಾಕ್ಟರ್ ರೇಟ್ ಎಷ್ಟು ಕಡಮೆ ಮಾಡಬೇಕೋ, ಅಷ್ಟೂ ಮಾಡುತ್ತೇನೆ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಬೊಂಬಾಯಿ ಕರ್ಣಾಟಕದಲ್ಲಿ, ಹೈದರಾಬಾದು ಕರ್ಣಾಟಕದಲ್ಲಿ ಜನಗಳಲ್ಲಿ ದುಡ್ಡು ಇರುವುದಿಲ್ಲ, ತಕಾವಿ ಲೋನ್ ಕೊಟ್ಟು ರಿಕವರೀ ಮಾಡಿಕೊಳ್ಳಿ ಎಂದು ಹೇಳಿದರು. ಅದು ನ್ಯಾಯವಾದುದು. ಬಡವರಲ್ಲಿ ದುಡ್ಡು ಇರುವುದಿಲ್ಲ. ಸಾಲವನ್ನು ಕೊಟ್ಟು ಕಂತುಗಳಲ್ಲಿ ವಸೂಲು ಮಾಡತಕ್ಕದ್ದು ಸೂಕ್ತವಾದುದು ಎಂದು ನಾವು ಅಭಿಪ್ರಾಯ ಪಟ್ಟೆವು. ಮಾನ್ಯ ರೆವಿನ್ಯೂ ಮಂತ್ರಿಗಳು ಒಪ್ಪಿಕೊಂಡು, ಬೊಂಬಾಯಿ ಮತ್ತು ಹೈದರಾಬಾದು ಕರ್ಣಾಟಕದಲ್ಲಿ ಜಾರಿಗೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಮೈಸೂರು ದೇಶದಲ್ಲೆಲ್ಲಾ ಅವಶ್ಯಕವಾಗಿ ಜಾರಿಗೆ ತರತಕ್ಕದ್ದು ಒಳ್ಳೆಯದು. ಬಡವರಲ್ಲಿ ಅನೇಕ ಸಲ ದುಡ್ಡಿರುವುದಿಲ್ಲ. ಆ ದೃಷ್ಟಿಯಿಂದ ಇದನ್ನು ಜಾರಿಗೆ ಕೊಡುವುದಕ್ಕೆ ಮಾನ್ಯ ರೆವಿನ್ಯೂ ಮಿನಿಸ್ಟರ್ ಅವರು ಒಪ್ಪಿದ್ದಾರೆ.

ಅನೇಕ ಸದಸ್ಯರು ಟ್ರಾಕ್ಟರುಗಳು ಚೆನ್ನಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿದರು. ನಾನು ಬಂದಾಗಿನಿಂದ ನೋಡಿದೆ. ಜನಗಳಿಂದ ಇವುಗಳಿಗೆ ಡಿಮ್ಯಾಂಡ್ ಇರುತ್ತದೆ. ಹೈದರಾಬಾದು ಕರ್ಣಾಟಕ ಮತ್ತು ಬೊಂಬಾಯಿ ಕರ್ಣಾಟಕದಿಂದ ಬಂದ ಆಸ್ತಿ ಮುರಿದಿರುವುವು; ಮತ್ತು ಸಮುಕಲಾಗಿರುವುವು ಒಂದೂ ಕೆಲಸಮಾಡತಕ್ಕಂಥ ಸ್ಥಿತಿಯಲ್ಲಿ ಇಲ್ಲ. ಮೈಸೂರಿನಲ್ಲಿ ಸಹ ಹತ್ತು ಹನ್ನೆರಡು ಟ್ರಾಕ್ಟರುಗಳು, ನಾಲ್ಕೈದು ಬುಲ್‌ಡೋಜರ್‌ಗಳು ಇದ್ದುವು. ನಾನು ಬಂದಮೇಲೆ ಗ್ರೋ ಮೋರ್ ಫುಡ್ ಸ್ಕೀಮಿ ಗೋಸ್ಕರ ಕ್ಯಾಬಿನೆಟ್ಟಿನಲ್ಲಿ ಹಣ ಮಂಜೂರು ಮಾಡಿದೆ; ಆರ್ಥಿಕಮಂತ್ರಿಗಳೂ, ಶ್ರೀ ವೀರಣ್ಣಗೌಡರೂ ಮತ್ತು ರೆವಿನ್ಯೂ ಮಂತ್ರಿಗಳೂ ಇದ್ದರು. ಪ್ರಯತ್ನಮಾಡಿ ಅವರನ್ನು ಒಪ್ಪಿಸಿ ಇದರ ರಿಪೇರಿಗೆ ದುಡ್ಡನ್ನು ಒದಗಿಸಿರುತ್ತದೆ. ಇವತ್ತು ನಲವತ್ತೈದು ಟ್ರಾಕ್ಟರುಗಳು ಮೂವತ್ತೆರಡು ಬುಲ್‌ಡೋಜರುಗಳು ಕೆಲಸಮಾಡುತ್ತಿವೆ. ಇನ್ನೂ ಉಳಿದುವವನ್ನು ಏನು ಮಾಡಬೇಕು ಎಂದು ಪರಿಶೀಲನೆ ಮಾಡಿಸುತ್ತಾ ಇದ್ದೇವೆ. ಬುಲ್‌ಡೋಜರುಗಳನ್ನು ರಿಪೇರಿ ಮಾಡಿಸಲೇ ಬೇಕಾಗುತ್ತದೆ. ಹೊಸದಾಗಿ ಬುಲ್‌ಡೋಜರ್ ತರಿಸುವುದಕ್ಕಾಗುವುದಿಲ್ಲ. ಐದು ಸಾವಿರ ರೂಪಾಯಿ ಒಳಗೆ ದುಡ್ಡು ಖರ್ಚುಮಾಡಿ ಟ್ರಾಕ್ಟರು ರಿಪೇರಿ ಮಾಡಬಹುದು, ಅದಕ್ಕೆ ಜಾಸ್ತಿಯಾದುದನ್ನು ಮಾಡಬಾರದೆಂದು ತೀರ್ಮಾನಮಾಡಿದ್ದೇವೆ. ಎಂಜನೀಯರ ಅಭಿಪ್ರಾಯವನ್ನು ತೆಗೆದುಕೊಂಡಿದ್ದೇವೆ. ಐವತ್ತನಾಲ್ಕು ಟ್ರಾಕ್ಟರುಗಳನ್ನು ರಿಪೇರಿಮಾಡುತ್ತಾ ಇದ್ದೇವೆ. ಹೋದ ವರ್ಷ 1,733 ಎಕರೆ ಟ್ರಾಕ್ಟರಿನಿಂದ ಸಾಗುವಳಿಗೆ ಬಂದಿತು, ಈ ವರ್ಷ 3,255 ಎಕರೆ ಸಾಗುವಳಿ ಆಗಿದೆ. ಈಗ ಇನ್ನೂ ಕಾಲ ಬಹಳ ಇದೆ. ಆದ್ದರಿಂದ ಹೆಚ್ಚಿಗೆ ಇದರಿಂದ ಉಪಯೋಗ ಪಡೆದಿದ್ದೇವೆ. ಇನ್ನು ಮೇಲೆ ಇನ್ನೂ ಹೆಚ್ಚಿಗೆ ಉಪಯೋಗವನ್ನು ತೆಗೆದುಕೊಳ್ಳಬೇಕು. ಇಷ್ಟು ಮಾತ್ರ ಹೇಳುತ್ತೇನೆ. ಬುಲ್‌ಡೋಜರ್‌ಗಳನ್ನು ಹೋದ ವರ್ಷ 11,108 ಘಂಟೆ ಓಡಿಸಿತ್ತು. ಬಹುಶಃ ಈ ವರ್ಷ ಡಿಸೆಂಬರ್ ಒಳಗೆ 15,428 ಘಂಟೆ ಕೆಲಸಮಾಡಿದೆ.

ನಾವು ರಿಪೋರ್ಟ್ ತರಿಸಿ ಉತ್ಪತ್ತಿ ಜಾಸ್ತಿಯಾಗಿದೆಯೆ ಇಲ್ಲವೆ ಎಂದು ನೋಡುತ್ತೇವೆ. ಆ ದೃಷ್ಟಿಯಿಂದ ಎಷ್ಟು ಚೆನ್ನಾಗಿ ಕೆಲಸಮಾಡಬೇಕೋ ಅಷ್ಟು ಚೆನ್ನಾಗಿ ಮಾಡಿಲ್ಲ ಎಂದು ನಮಗೆ ಅನ್ನಿಸುತ್ತದೆ. ಟ್ರಾಕ್ಟರು ಕೆಲಸ ಮಾಡುವ ವಿಷಯದಲ್ಲಿ ಸ್ವಲ್ಪ ತೊಂದರೆಯಾಗಿದ್ದರೆ ಅದಕ್ಕೆ ಅನೇಕ ಕಾರಣಗಳಿವೆ. ಡಿಸ್ಟ್ರಿಕ್ಟ್ ಅಗ್ರಿಕಲ್‌ಚರಲ್ ಆಫೀಸರು, ಡೆಪ್ಯುಟಿ ಡೈರೆಕ್ಟರು, ಡೈರೆಕ್ಟರು, ಇವರ ಮೂಲಕ ನಮಗೆ ಕಾಗದ ಬರುವುದು ಹೊತ್ತಾಗುತ್ತದೆ. ಆದ್ದರಿಂದ ಅಧಿಕಾರಿಗಳಿಗೆ ಏನು ಸೂಚನೆ ಕೊಟ್ಟಿದ್ದೇವೆ ಅಂದರೆ ನೀವು : ಒಂದು ಸ್ಥಳಕ್ಕೆ ಹೋದಕೂಡಲೇ ಅಲ್ಲಿರತಕ್ಕಂಥ ಮಾನ್ಯ ಸದಸ್ಯರನ್ನು ತುರ್ತಾಗಿ ನೋಡಬೇಕು ಎಂದು ಹೇಳಿದ್ದೇವೆ. ಅವರನ್ನು ನೋಡಿ ಖುದ್ದಾಗಿ ಬರೆದರೆ ಕೆಲಸ ನೇರವಾಗಿ ಆಗುತ್ತದೆ. ಇಷ್ಟು ಸಲಹೆಯನ್ನು ಕೊಟ್ಟಿದ್ದೇವೆ ಎಂದು ತಮ್ಮ ಅವಗಾಹನೆಗೆ ತಂದಿದ್ದೇನೆ.

ಒಳ್ಳೆಯ ಬೀಜವನ್ನು ಒದಗಿಸಬೇಕು ಎಂದು ಹೇಳಿದ್ದಾರೆ. ವ್ಯವಸಾಯ ಉತ್ಪನ್ನ ಜಾಸ್ತಿಯಾಗಬೇಕಾದರೆ ಒಳ್ಳೆಯ ಬೀಜ ಒದಗಿಸಬೇಕಾದುದು ಸ್ವಾಭಾವಿಕ. ಬೇಸಾಯಕ್ಕೆ ಇದಕ್ಕೆ ಮೊದಲನೆ ಸ್ಥಾನ ಕೊಡಲೇಬೇಕು, ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಸ್ವಲ್ಪ ಪ್ರಾಮುಖ್ಯತೆ ಕೊಟ್ಟಿದ್ದೇವೆ. ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ 56 ಸೀಡ್ ಫಾರಂಗಳನ್ನು ಮಾಡಬೇಕು ಎಂದು ಇದ್ದೇವೆ. ಇದು ಸಾಲದು ಎಂದು ಅನೇಕ ಮಾನ್ಯ ಸದಸ್ಯರು ಹೇಳಿದರು. ಪ್ರತಿಯೊಂದು ತಾಲ್ಲೂಕಿಗೂ ಬಿತ್ತನೆ ಬೀಜದ ಫಾರಂ ಇರಬೇಕು ಎಂದು ಹೇಳಿದರು. ಇದು ಸೂಕ್ತವಾದ ಸಲಹೆ. ಆಯಾ ತಾಲ್ಲೂಕಿನ ವಾತಾವರಣ, ಆಯಾ ತಾಲ್ಲೂಕಿನ ಮಳೆ ಇವುಗಳನ್ನು ನೋಡಿ ಆಯಾ ತಾಲ್ಲೂಕಿಗೆ ಅನುಕೂಲವಾಗುವಂಥ ಸಸಿಯನ್ನು ಹಾಕಬೇಕು. ಮಂಡ್ಯದಲ್ಲಿ ಹಾಕಿದ್ದು ಶಿವಮೊಗ್ಗದಲ್ಲಿ ಹಾಕುವುದಕ್ಕಾಗುವುದಿಲ್ಲ. ಒಂದು ಕಡೆ 200 ಇಂಚು ಮಳೆಯಾದರೆ ಇನ್ನೊಂದು ಕಡೆ 25 ಇಂಚು ಆಗುತ್ತದೆ. ಅಲ್ಲಿಯ ಭತ್ತ ಇಲ್ಲಿ ಆಗುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀ ಹನುಮಂತಪ್ಪನವರು ಹೇಳಿದರು. ಪ್ರತಿಯೊಂದು ತಾಲ್ಲೂಕಿಗೂ ಒಂದು ಸೀಡ್ ಫಾರಂ ಇರಬೇಕು ಎಂದು. ಈಗಿನ ಸಂದರ್ಭದಲ್ಲಿ ನಾವು 56 ಸೀಡ್ ಫಾರಂಗೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅದೂ ಸಾಲದು. ಅದನ್ನು ಜಾಸ್ತಿ ಮಾಡಬೇಕು ಎಂದು ಕಾರ್ಯಕ್ರಮ ಹಾಕಿದ್ದೇವೆ. ಬಹುಶಃ ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಸಾಧ್ಯವಾದಷ್ಟು, ನೂರನ್ನಾದರೂ ಮಾಡಬೇಕು ಎಂಬ ತೀರ್ಮಾನಕ್ಕೆ ಬಂದಿದ್ದೇವೆ.

ಆಮೇಲೆ ಫರ್ಟಿಲೈಸರ್ಸ್ ಬಗ್ಗೆ ಅನೇಕ ಮಾನ್ಯ ಸದಸ್ಯರು ಹೇಳಿದರು. ಭಾರತ ಸರ್ಕಾರದವರು ಹೇಳಿರುವ ಹಾಗೆ ಸಬ್‌ಸಿಡಿ ಕೊಟ್ಟು ಗೊಬ್ಬರ ಉಪಯೋಗಿಸಿ ಎಂದು ಪ್ರಚಾರ ಮಾಡಿದೆವು. ಈಗ ಏನಾಗಿದೆ ಎಂದರೆ ಗೊಬ್ಬರ ಕೊಡಲಿಕ್ಕೆ ಶಕ್ಯವಿಲ್ಲ. ಮೊದಲು ಸಿಂದ್ರಿ ಫ್ಯಾಕ್ಟರಿಯಿಂದ ತಯಾರಾಗುತ್ತಿದ್ದಂಥ ಗೊಬ್ಬರವನ್ನು ಉಪಯೋಗಿಸುತ್ತಾ ಇರಲಿಲ್ಲ. ಆದರೆ ಈಗ ಒಂದಕ್ಕೆ ಹತ್ತರಷ್ಟು ಡಿಮ್ಯಾಂಡ್ ಆಗಿದೆ.

ಒಬ್ಬ ಸದಸ್ಯರು.—ಅದು ಎಲ್ಲಾ ಸರಿ. ಬ್ಲಾಕ್ ಮಾರ್ಕೆಟ್ ಪರ್‌ಮಿಟ್‌ಹೋಲ್ಡರ್ಸ್‌ಗೆ ಕೊಡದೆ ಸೊಸೈಟಿಗಳಿಗೆ ಕೊಡುವಂತೆ ಮಾಡಿದರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಎಚ್. ಎಸ್. ರುದ್ರಪ್ಪ.—ಹೋದವರ್ಷ ನಾವು 21 ಸಾವಿರ ಟನ್ ಹಂಚಿದ್ದೇವೆ. ಡಿಸೆಂಬರ್‌ವರೆಗೆ 26 ಸಾವಿರ ಟನ್ ಹಂಚಿದ್ದೇವೆ. ಇನ್ನು ಮೇಲೆ ಇನ್ನೂ ಹೆಚ್ಚು ಡಿಮ್ಯಾಂಡ್ ಬರುತ್ತದೆ. ಇಂಡಿಯಾ ಸರ್ಕಾರವನ್ನು ಕೇಳಿದಾಗ ಸೇಕಡ 45 ಭಾಗ ಒದಗಿಸುವುದಕ್ಕೆ ಸಾಧ್ಯ, ಹೆಚ್ಚಾಗಿ ಒದಗಿಸಲು ಫಾರಿನ್ ಎಕ್ಸ್‌ಚೇಂಜ್ ತೊಂದರೆಯಿದೆ, ಒದಗುವುದರಲ್ಲಿ ಸರಿಮಾಡಿಕೊಳ್ಳಬೇಕು ಎಂದು ಹೇಳಿದರು. ಈಗ ಎಕ್ಸ್‌ಚೇಂಜ್ ಸುಲಭವಾಗಿದೆ, ಸ್ವಲ್ಪ ಹೆಚ್ಚಾಗಿ ಒದಗಿಸಬೇಕು ಎಂದು ಮತ್ತೆ ಒತ್ತಾಯ ಮಾಡಿದ ಮೇಲೆ ಸ್ವಲ್ಪ ಜಾಸ್ತಿ ಮಾಡಬಹುದೆಂದು ಕಾಣುತ್ತದೆ. ಆದ್ದರಿಂದ ಎಷ್ಟು ಗೊಬ್ಬರ ಒದಗಿಸಬೇಕೆಂದು ಕೇಳಿದ್ದಾರೋ ಅಷ್ಟನ್ನು ಒದಗಿಸುವುದಕ್ಕೆ ಆಗುತ್ತೋ ಇಲ್ಲವೋ ಎಂಬ ಸಂದೇಹವಿದೆ. ಕಮರ್ಷಿಯಲ್ ಕ್ರಾಪ್ಸ್ ಬೆಳೆಯುವುದಕ್ಕೆ ಹೆಚ್ಚಾಗಿ ಉಪಯೋಗಿಸಿದ್ದಾರೆ. ಅದು ಒಳ್ಳೆಯದೇ, ದೇಶಕ್ಕೆ ಸಂಪತ್ತು ಬರತಕ್ಕದ್ದು. ಪ್ರೈವೇಟ್ ಏಜೆನ್ಸಿಗಳಿಗೆ ಇದನ್ನು ಕೊಡಬಾರದೆಂದು ಮಾನ್ಯ ಸದಸ್ಯರು ಹೇಳಿದರು. ಈಗ ಪ್ರತಿಯೊಂದು ಸೊಸೈಟಿಗಳಿಗೂ ಕೊಡಬೇಕೆಂದು ಮಾಡಿದ್ದೇವೆ. ಸರ್ಕಾರದ ಮೂಲಕ ಬರುವುದನ್ನು ಖಾಸಗಿ ಏಜೆನ್ಸಿಗೆ ಕೊಟ್ಟಿಲ್ಲ. ಗೊತ್ತಿಲ್ಲದೆ ಕೊಟ್ಟಿರುವುದನ್ನು ವಜಾಮಾಡಿದ್ದಾರೆ. ಮೈಸೂರುದೇಶದಲ್ಲಿ ಸೊಸೈಟಿಗಳ ಮೂಲಕ ಕೊಡಬೇಕು. ಸೊಸೈಟಿ ಇಲ್ಲದಿರುವ ಕಡೆ ಇಲಾಖೆಯ ಮೂಲಕ ಕೊಡಬೇಕು ಎಂದು ವ್ಯವಸ್ಥೆ ಮಾಡಿದೆ. ಆದ್ದರಿಂದ ಪ್ರೈವೇಟ್ ಏಜೆನ್ಸಿ ಇಲ್ಲ. ಸೂಪರ್ ಫಾಸ್ಫೇಟ್ ಅಂಥಾದ್ದನ್ನು ಕೆಲವು ಪ್ರೈವೇಟ್ ಕಂಪೆನಿಗಳಿಗೆ ಕೊಡುತ್ತೇವೆ. ಇದನ್ನು ನಿರ್ಬಂಧ ಮಾಡುವುದಕ್ಕೆ ಸಾಧ್ಯವಿಲ್ಲ. ಸರ್ಕಾರದ ಮೂಲಕ ಬರುವುದನ್ನು ಖಾಸಗಿಯವರಿಗೆ ಕೊಡುವುದಿಲ್ಲ.

Sri G. N. PUTTANNA.—I rise to a point of order. The Hon'ble the Leader of the House said that after the Minister replie, Hon'ble Members might put questions and get answers. We respect it. But in the meanwhile when I requested, I was not given a chance while other members were given chances to put questions and they were answered.

ಅಧ್ಯಕ್ಷರು.—ಅವರು ಈಲ್ಡ್ ಆಗುವುದೂ ಬಿಡುವುದೂ ಅವರ ಇಚ್ಛೆ. ಅದಕ್ಕೆ ನಾನೇನು ಮಾಡಲಿ?

Sri G. N. PUTTANNA.—The ruling is not given.

Sri S. NIJALINGAPPA.—It is an appeal to the members.

Sri G. N. PUTTANNA.—That is also my appeal to the Leader of the House and also to the Chair.

ಶ್ರೀ ಎಚ್. ಎಸ್. ರುದ್ರಪ್ಪ.—ಇರಿಗೇಷನ್ ವೆಲ್ಸ್ ಮತ್ತು ಮೈನರ್ ಇರಿಗೇಷನ್ ವಿಚಾರ ಪ್ರಸ್ತಾಪಿಸಲ್ಪಟ್ಟಿದೆ. ಬೊಂಬಾಯಿ ಕರ್ನಾಟಕ ಮತ್ತು ಹೈದರಾಬಾದು ಕರ್ನಾಟಕ ಪ್ರದೇಶಗಳ ಸದಸ್ಯರು, ಶ್ರೀ ಕೆಂಚಪ್ಪನವರು ಮುಂತಾದವರು ಕೆಲವರು ಈ ವಿಚಾರ ಪ್ರಸ್ತಾಪಿಸಿದ್ದಾರೆ. ಬಾವಿಗಳ ಕೆಲಸ ಬಹಳ ಮುಖ್ಯವೆಂದು ಕಾಣುತ್ತದೆ. ಅದು ಕೆರೆ ಕಟ್ಟೆಗಳಿಗಿಂತ ಬಹಳ ಮುಖ್ಯವಾದುದು. ಸಾರ್ವಜನಿಕರ ಹಣ ಕೆರೆ, ಕೊಳಗಳಿಗೆ, ಅವುಗಳ ರಿಪೇರಿಗೆ ಬಹಳವಾಗಿ ಖರ್ಚಾಗುತ್ತದೆ. ಆದ್ದರಿಂದ ಬಾವಿ ನೀರು ಎಲ್ಲಿ ಮೇಲಿದೆಯೋ ಅಲ್ಲೆಲ್ಲಾ ಬಾವಿಗಳನ್ನು ತೆಗೆಯುವುದು ಬಹಳ ಸೂಕ್ತವಾದುದು. ಆ ದೃಷ್ಟಿಯಿಂದ ಇದಕ್ಕಾಗಿ ಎರಡ

(ಶ್ರೀ ಹೆಚ್. ಎಸ್. ರುದ್ರಪ್ಪ)

ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚು ಹಣ ಒದಗಿಸಿದೆ. ಆದರೆ ನಿರೀಕ್ಷೆ ಮಾಡಿರುವಷ್ಟು ಬಾವಿಗಳಾಗಿಲ್ಲ. ಸಬ್ಸಿಡಿ ನಿಲ್ಲಿಸಿದ್ದರಿಂದ ಬಾವಿಗಳು ಹೆಚ್ಚಾಗಿ ಆಗಿಲ್ಲವೆಂದು ತೋರುತ್ತದೆ. ನಾನು ಅನೇಕ ಕಡೆಹೋಗಿ ವಿಚಾರಮಾಡಿದಾಗ ಕೊಡುವ ಹಣ ಸಾಲದು, ಹೆಚ್ಚಿಸಬೇಕು ಎಂದು ಗೊತ್ತಾಯಿತು. ಇಂಡಿಯಾ ಸರ್ಕಾರದೊಡನೆ ಮತ್ತು ಸಂಬಂಧಪಟ್ಟ ಮಂತ್ರಿಗಳೊಡನೆ ಚರ್ಚಿಸಿ, ಅಗ್ರಿಕಲ್ಚರಲ್ ಮಿನಿಸ್ಟರ್ಸ್ ಕಾನ್ಫರೆನ್ಸ್‌ನಲ್ಲಿ ಈ ವಿಚಾರ ಹೇಳಿದಾಗ ಮೈಸೂರು ದೇಶದಲ್ಲೇ ಹೆಚ್ಚಾಗಿ ಬಾವಿ ತೆಗೆಯುವುದು, ಬಾಕಿಕಡೆ ಅಷ್ಟಾಗಿ ಕಾಣುವುದಿಲ್ಲ, ಆದ್ದರಿಂದ ಸಬ್ಸಿಡಿ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಪ್ರಬಲವಾಗಿ ಪ್ರಯತ್ನಮಾಡಿದಮೇಲೆ 250 ರೂಪಾಯಿಗಳಲ್ಲಿ 125 ರೂಪಾಯಿ ನಮ್ಮ ಸರ್ಕಾರ ಕೊಡುವಂತೆಯೂ ಬಾಕಿಯಾದದ್ದನ್ನು ಇಂಡಿಯಾ ಸರ್ಕಾರ ಕೊಡುವಂತೆಯೂ ಒಪ್ಪಿದ್ದಾರೆ. 750 ರೂಪಾಯಿ ಸಾಲ ಕೊಡುವುದು ಸಾಲದು, ಜಾಸ್ತಿ ಮಾಡಬೇಕು. ಅನೇಕ ಕಡೆ ಬಾವಿ ಆಗಬೇಕಾದರೆ ಒಂದು ಸಾವಿರ ರೂಪಾಯಿ ಬೇಕಾಗುತ್ತದೆ, ಕೆಲವು ಕಡೆ ಎರಡು ಮೂರು ಸಾವಿರ ರೂಪಾಯಿ ಬೇಕಾಗುತ್ತದೆ, ಆದ್ದರಿಂದ ಜಾಸ್ತಿ ಮಾಡಬೇಕು ಎಂದು ಕೇಳಿದ್ದೇವೆ. ಮೊನ್ನೆತಾನೆ 20 ದಿವಸಗಳ ಕೆಳಗೆ ಒತ್ತಾಯಮಾಡಿದ್ದೇವೆ. ಇನ್ನೂ ಅವರು ಆರ್ಡರು ಕಳುಹಿಸಿಲ್ಲ. ಯಾವರೀತಿ ನೋಡಲಿ, ಬಾವಿ ಪೂರ್ಣವಾಗಿ ತೆಗೆಯುವವರೆಗೆ ಹಣ ಕೊಟ್ಟರೆ ಅನುಕೂಲವಾಗುತ್ತದೆ ಎಂದು ಇಂಡಿಯಾ ಸರ್ಕಾರಕ್ಕೆ ತಿಳಿಸಿದ್ದೇವೆ. ಬಹುಶಃ ಅವರು ಒಪ್ಪಬಹುದೆಂದು ಕಾಣುತ್ತದೆ. ಮೊದಲು ಒಂದುರೀತಿ ಒಪ್ಪಿದ್ದರು. ಆಮೇಲೆ ಸಬ್ಸಿಡಿ ಕೊಡುವುದಕ್ಕಿಂತ ಸಾಲ ಕೊಡಿ, ಸಬ್ಸಿಡಿ ಕೊಟ್ಟಾಗ ಹಣ ದುರುಪಯೋಗವಾಗಿದೆ, ಹಳೆಯಬಾವಿ ತೆಗೆದು ಬಾವಿ ತೆಗೆದಿದ್ದೇವೆಂದು ಹಿಂದೆ ಹೇಳಿದ್ದಾರೆ, ಆದ್ದರಿಂದ ಒಪ್ಪಲು ಸಾಧ್ಯವಿಲ್ಲ ಎಂದು ಇಂಡಿಯಾ ಸರ್ಕಾರದವರು ಹೇಳಿದರು. ಹೀಗೆ ಕಾರಣಾಂತರಗಳಿಂದ ಬಾವಿ ತೆಗೆಯುವುದು ಸ್ವಲ್ಪ ವಿಧಾನವಾಗಿದೆ. ಕೆಲವು ಕಡೆ ಸಾಲ ಕೊಡುವಾಗ ಜಮೀನಿನ ಬೆಲೆ ಬಹಳ ಕಡಿಮೆಯಾಗಿ ನಿಗದಿ ಮಾಡಿದ್ದಾರೆ; ಹೈದರಾಬಾದ್ ಕರ್ನಾಟಕದ ಕಡೆ ಹಾಗಾಗಿದೆ; ಒಂದು ರೂಪಾಯಿ ಕಂದಾಯವಿದ್ದರೆ 50 ರೂಪಾಯಿ ಬೆಲೆ ಕಟ್ಟಿದ್ದಾರೆ. ಹೀಗೆ ಕಾರಣಾಂತರದಿಂದ ಕಡಮೆ ಬೆಲೆ ನಿಗದಿಮಾಡಿದ್ದಾರೆ. ಚರ್ಚೆಮಾಡಿದಾಗ ಅದು ಕಡಮೆಯೆಂದು ಕಂಡುಬಂತು; ಮಾರ್ಕೆಟ್ ವ್ಯಾಲ್ಯೂಗಿಂತ ಅದು ಕಡಮೆ, ಅದನ್ನು ಜಾಸ್ತಿ ಮಾಡುವುದಕ್ಕೆ ಕಾರ್ಯಕ್ರಮವಿದೆ. ಹಣ ಹೆಚ್ಚು ಒದಗಿಸಬೇಕೆಂಬ ದೃಷ್ಟಿಯಿಂದ ರೂಲ್ಸ್ ಬದಲಾವಣೆ ಮಾಡಿದ್ದಾರೆ; ಆರ್ಡರ್ ಇಷ್ಯೂ ಆಗಿದೆ. ಹೆಚ್ಚು ಹಣ ಕೊಡುವುದಕ್ಕೆ ಈ ರೀತಿ ಪ್ರಯತ್ನವಿದೆ. 25 ಎಕರೆ ಇರುವವರಿಗೆ 500 ರೂಪಾಯಿ ಮೇಲ್ಪಟ್ಟು ಹಣ ಬರುತ್ತಿರಲಿಲ್ಲ. ಈಗ ವ್ಯಾಲ್ಯುಯೇಷನ್ ಆಫ್ ಲ್ಯಾಂಡ್ ಜಾಸ್ತಿಮಾಡಿ ಕೊಡುವುದಕ್ಕೆ ಆರ್ಡರು ಮಾಡಿದೆ; ಇರುವ ತೊಂದರೆ ಕಡಮೆಯಾಗಬಹುದು.

ವಿದ್ಯುಚ್ಛಕ್ತಿಯನ್ನು ಕೆಲವು ಕಡೆಗಳಿಗೆ ಒದಗಿಸಿಲ್ಲವೆಂದು ಶ್ರೀ ಕೆಂಚಪ್ಪನವರು ಮತ್ತು ಇತರ ಸದಸ್ಯರು ಹೇಳಿದರು. ಅವರಿಗಿರುವ ಆಸೆ ನಮಗೂ ಇದೆ. ನಮ್ಮ ಕಾರ್ಯಕ್ರಮದ ಪ್ರಕಾರ 1,100 ಬಾವಿಗಳಿಗೆ ಪ್ರತಿ ವರ್ಷ ವಿದ್ಯುಚ್ಛಕ್ತಿ ಕೊಡಬೇಕೆಂದು ಪಂಚವಾರ್ಷಿಕ ಯೋಜನೆಯಲ್ಲಿ ನಮೂದಿಸಿತ್ತು. ಹಾಗಿರುವಾಗ 1,200 ಚಿಲ್ಲರೆ ಬಾವಿಗಳಿಗೆ ಒಂದೇ ವರ್ಷದಲ್ಲಿ ವಿದ್ಯುಚ್ಛಕ್ತಿ ಕೊಟ್ಟಿದ್ದೇವೆ. ಈ ಸಂಬಂಧವಾದ ವರದಿ ನಮಗೆ ಪ್ರತಿವಾರವೂ ಬರುತ್ತದೆ. ಹೆಚ್ಚು ಬತ್ತ ಬೆಳೆಯಬೇಕೆಂದು ಇಂಡಿಯಾ ಸರ್ಕಾರದವರು ಒಂದು ಯೋಜನೆ ಮಾಡಿದ್ದಾರೆ. ಜಪಾನ್ ಮಾದರಿ ಬತ್ತ ಬೆಳೆಯುವುದರಿಂದ ಹೆಚ್ಚು ಬತ್ತ ಬೆಳೆಯಬಹುದೆಂದು ಗೊತ್ತಾಗಿದೆ. ಆದ್ದರಿಂದ 1956-57ನೆಯ ಸಾಲಿನಲ್ಲಿ ಒಂದು ಲಕ್ಷ ಎಕರೆಗಳಲ್ಲೂ ಮತ್ತು 1957-58ನೆಯ ಸಾಲಿನಲ್ಲಿ ಎರಡು ಲಕ್ಷ 30 ಸಾವಿರ ಎಕರೆಗಳಲ್ಲೂ ಜಪಾನ್ ಮಾದರಿ ಬತ್ತ ಬೆಳೆಯಲಾಯಿತು, ಪ್ರತಿಯೊಂದು ವರ್ಷವೂ ಒಂದೊಂದು ಲಕ್ಷ ಎಕರೆಗಳ ಹೆಚ್ಚು ಪ್ರದೇಶದಲ್ಲಿ ಜಪಾನ್ ಮೆಥಡ್ ಪ್ರಕಾರ ಬತ್ತ ಬೆಳೆಯಬೇಕೆಂದಿದ್ದೇವೆ. ಜಪಾನ್ ಮೆಥಡ್ ಪ್ರಕಾರ ಸಾಧಾರಣವಾಗಿ ಹಾಕುವ ಗೊಬ್ಬರದ ಎರಡರಷ್ಟು ಹಾಕಬೇಕಾಗುತ್ತದೆಂಬ ತಪ್ಪು ಭಾವನೆಯಿದೆ. ಅದನ್ನು ಹೋಗಲಾಡಿಸಲು ಒಂದೇ ಸಮವಾಗಿ ಗೊಬ್ಬರ ಹಾಕಿ ಒಂದೇ ತರಹ ಭೂಮಿಯಲ್ಲಿ ಅರ್ಧ ಎಕರೆಯಲ್ಲಿ ಜಪಾನ್ ಮೆಥಡ್ ಪ್ರಕಾರ, ಇನ್ನರ್ಧ ಎಕರೆಯಲ್ಲಿ ನಮ್ಮ ಕಡೆ ಮಾಮೂಲಾಗಿ ಬೆಳೆಯುವ ಪ್ರಕಾರ ಬತ್ತ ಬೆಳೆಯಲಾಯಿತು. ಆಗ ಜಪಾನ್ ಮೆಥಡ್ ಪ್ರಕಾರ ಎರಡರಷ್ಟು ಉತ್ಪತ್ತಿ ಬಂತು. ಸಾಮಾನ್ಯವಾಗಿ ಹಾಕುವ ಪ್ರಮಾಣದ ಎರಡರಷ್ಟು ಗೊಬ್ಬರ ಹಾಕಿದರೆ ಇನ್ನೂ ಹೆಚ್ಚು ಉತ್ಪತ್ತಿ ಬರುತ್ತದೆ. ಅದನ್ನು ನಾವು ನೋಡಿದ್ದೇವೆ. ಈ ಕಾರಣದಿಂದ ಜಪಾನ್ ಮೆಥಡ್ ಆಫ್ ಪ್ಯಾಡಿ ಗ್ರೋಯಿಂಗ್ ಬಹಳ ಸೂಕ್ತ, ಅದನ್ನು ಜಾರಿಗೆ ತರಬೇಕು, ಎಲ್ಲರೂ ಈ ವಿಚಾರದಲ್ಲಿ ಸಹಕರಿಸಬೇಕು ಎಂದು ಅರಿಕೆಮಾಡಿಕೊಳ್ಳುತ್ತೇನೆ. ದೇಶದಲ್ಲಿ ಬಡತನ ಮತ್ತು ಆಹಾರದ ಸಮಸ್ಯೆ ಇರುವುದಕ್ಕೆ ಜನ ಉದಾಸೀನದಿಂದಿರುವುದೇ ಕಾರಣ. ಅನೇಕ ಮಾನ್ಯ ಸದಸ್ಯರು ಜಪಾನ್ ಮೆಥಡ್ನಿಂದ ಉತ್ಪತ್ತಿ ಹೆಚ್ಚಾಗಿ ಬರುತ್ತದೆಂಬುದನ್ನು ಮನಗಂಡಿದ್ದಾರೆ. ಅನೇಕ ಕಡೆ ಆ ರೀತಿಮಾಡಿ ನೋಡಿದ್ದಾರೆ. ಒಬ್ಬ ಒಂದು ಲೆಖ್ಖ ಕಳುಹಿಸಿದ್ದಾನೆ. ತಪ್ಪು ಲೆಖ್ಖ ಕಳುಹಿಸಿಲ್ಲ. ಮೈಮುರಿದು ಕೆಲಸ ಮಾಡಿದ್ದರಿಂದ 350-400 ರೂಪಾಯಿ ನಿವ್ವಳ ಲಾಭಗಳಿಸಿದ್ದಾನೆ. ಸುತ್ತಮುತ್ತ ಇರುವವರು ಅಷ್ಟು ಹೆಚ್ಚು ಉತ್ಪತ್ತಿ ಏತಕ್ಕೆ ಮಾಡಿಲ್ಲ! ನಮ್ಮಲ್ಲಿ ಉದಾಸೀನ ಮನೋಭಾವ ಇದೆ. ಜಪಾನೀಸ್ ಮೆಥೆಡ್ ಆಫ್ ಪ್ಯಾಡಿಯಿಂದ ನಮ್ಮ ದೇಶದಲ್ಲಿ ಇರತಕ್ಕ ಆಹಾರ ಸಮಸ್ಯೆ ಪೂರ್ತಿ ಬಗೆಹರಿಯುತ್ತದೆಂದು ಕಾಣುತ್ತದೆ. ಅದರಿಂದ ಎಕರೆಗೆ ಐದು ಆರು ಪಲ್ಲ ಜಾಸ್ತಿ ಬೆಳೆಯಬಹುದು. ಹಾಗೆ ಬೆಳೆದರೆ ಆಹಾರ ಸಮಸ್ಯೆ ಬಗೆಹರಿಯುತ್ತದೆ. ಅದಕ್ಕೆ ತಾವುಗಳೆಲ್ಲ ಸಹಾಯ ಮಾಡಬೇಕು ಎಂದು ಹೇಳುತ್ತೇನೆ. ಕಾಂಪೋಸ್ಟ್ ಮಾಡುವುದು ಒಳ್ಳೆಯದು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಪಟ್ಟಣಗಳಲ್ಲಿ ಕಾಂಪೋಸ್ಟ್ ಮಾಡುತ್ತಿದ್ದೇವೆ. ಹಳ್ಳಿಗಳಲ್ಲಿ ಆಗುತ್ತಾ ಇಲ್ಲ. ಜಾತ್ರೆಗಳೂ, ಸಮ್ಮೇಳನಗಳೂ ಎಲ್ಲೆಲ್ಲಿ ನಡೆಯುತ್ತಿವೆಯೋ ಅಲ್ಲೆಲ್ಲಾ ಪ್ರಚಾರ ನಡೆಯುತ್ತಿದೆ. ಆದರೆ ಯಾತಕ್ಕೋ ನಮ್ಮ ಕಿವಿಗೆ ಅದು ಹಿಡಿಸಲಿಲ್ಲ. ಮಹಾತ್ಮಗಾಂಧಿಯವರು 25 ವರ್ಷಗಳ ಹಿಂದೆಯೇ ಪ್ರಚಾರ ಮಾಡಿದರು. ಇಂಥಾ ಗುಂಡಿಗಳನ್ನು ತೆಗೆಯುವುದಕ್ಕೆ ಸರ್ಕಾರದವರು ದುಡ್ಡು ಕೊಟ್ಟರು. ಅನೇಕ ತಜ್ಞರು ಇದು ಒಳ್ಳೆಯದೆಂದು ಹೇಳುತ್ತಾರೆ. ಜಪಾನ್, ಚೈನಾದಲ್ಲಿ ಯಾವರೀತಿ ಮಾಡುತ್ತಾರೋ ಆ ರೀತಿ ಮನ್ಯೂರ್ ತಯಾರಿಸಬೇ

ಕೆಂದು ಎಷ್ಟು ಹೇಳಿದರೂ, ಎಷ್ಟು ಪ್ರೋತ್ಸಾಹ ಕೊಟ್ಟರೂ ಆಗುತ್ತಾ ಇಲ್ಲ. ಎರಡು ಸಾವಿರ ಪಂಚಾಯಿತಿ ಜನ ಇರುವ ಹಳ್ಳಿಗಳಲ್ಲಿ ಎರಡು ಸಾವಿರ ರೂಪಾಯಿಗಳನ್ನು ಕೊಟ್ಟು ಬೇಕಾದ ಕಡೆ ಕಕ್ಕಸು ಕಟ್ಟುವುದಕ್ಕೆ ಏರ್ಪಾಡು ಮಾಡಿದ್ದೇವೆ. ನಾವು ಇನ್ನೂ ಏನು ಬೇಕಾದರೂ ಮಾಡುತ್ತೇವೆ. ಆದರೆ ತಾವೂ ನಾವೂ ಸೇರಿ ಈ ಕೆಲಸ ಮಾಡಿದರೆ ಆಗುತ್ತದೆ. ಡಿಪಾರ್ಟ್‌ಮೆಂಟಿನವರೇ ಮಾಡುತ್ತಾರೆ. ಅದರಿಂದ ಆಹಾರದ ಸಮಸ್ಯೆ ಬಗೆಹರಿಯುತ್ತದೆ ಎಂದರೆ ಆಗುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—N.E.S. ಬ್ಲಾಕ್‌ನಲ್ಲಿ ಮಾಡಿದ್ದೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಕೆಲವು ಕಡೆ ಮಾಡಿದ್ದೇವೆ. ಪೂರ್ತಿಮಾಡಿಲ್ಲ. ಅವರ ಮೂಲಕ ಸಹ ಪ್ರಯತ್ನ ಮಾಡುತ್ತಿದ್ದೇವೆ. ಈಗ ಮುನಿಸಿಪಾಲಿಟಿಯವರು ಕಂಪೋಸ್ಟ್ ಸಾಗಿಸಲು ಟ್ರಾನ್ಸ್‌ಪೋರ್ಟ್ ಸಹಾಯಕೊಡುತ್ತಿದ್ದಾರೆ. ಅವರಿಗೆ ಅದಕ್ಕಾಗಿ ಲಾರಿ ಮತ್ತು ಏನೇನು ಬೇಕೋ ಅವುಗಳನ್ನು ಕೊಂಡುಕೊಳ್ಳಲು ಅವರಿಗೆ ಸರ್ಕಾರದವರು ಸಾಲವನ್ನು ಕೊಡುತ್ತಾರೆ. ಕೆಲವರು ಉಪಯೋಗಿಸಿಕೊಂಡಿದ್ದಾರೆ. ಇನ್ನು ಕೆಲವು ಮುನಿಸಿಪಾಲಿಟಿಗಳಿಂದ ಬೇಡಿಕೆಗಳು ಬಂದಿವೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಇನ್ನೂ ಅನೇಕ ವಿಷಯಗಳನ್ನು ಹೇಳುವುದಕ್ಕೆ ಆಗಿಲ್ಲ. ಐದು ಘಂಟೆ ಆಗಿದೆ. ಅನೇಕ ಸ್ನೇಹಿತರು ಮಾತನಾಡುವವರು ಇದ್ದಾರೆ. ಆದ್ದರಿಂದ ಈಗ ಇನ್ನು ಹೆಚ್ಚಿಗೆ ಹೇಳದೆ, ಮುಂದೆ ಡಿಮ್ಯಾಂಡು ಬಂದಾಗ ಉಳಿದಿರತಕ್ಕ ವಿಷಯಗಳನ್ನು ತಮ್ಮ ಮುಂದೆ ಇಡುತ್ತೇನೆ.

ಶ್ರೀ ಕಂಬಳಿಯವರು ಸಕ್ಕರೆ ಕಾರ್ಖಾನೆಯ ವಿಷಯ ಮಾತನಾಡಿದರು. ಇತರರು ಪದೇ ಪದೇ ಇದನ್ನು ಒತ್ತಾಯಮಾಡಿದರು. ರೈತರ ಹಿತದೃಷ್ಟಿಯಿಂದ ಮಾಡಬೇಕು ಎಂದು ಬರೆದಿದ್ದೇವೆ. ಏನೇನು ಕಾರ್ಯಕ್ರಮ ಹಾಕಿದ್ದೇವೋ ಅದನ್ನು ಪುನಃ ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಎಷ್ಟು ಜಾಗ್ರತೆ ಮಾಡಬೇಕೋ ಅಷ್ಟು ಬೇಗ ಪ್ರಾರಂಭಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ತೆಂಗು, ಗೇರುಬೀಜ, ಅಡಿಕೆ ಇವುಗಳಿಗೆ ರಿಸರ್ಚ್ ಸ್ಟೇಷನ್ ಪ್ರಾರಂಭಮಾಡಬೇಕು ಎಂದು ಹೇಳಿದ್ದಾರೆ. ಎರಡನೆಯ ಪಾಂಚವಾರ್ಷಿಕ ಯೋಜನೆಯಿಂದ ನಮ್ಮ ದೇಶಕ್ಕೆ ಸೌಲಭ್ಯ ಇರುವಷ್ಟು ಬೇರೆ ಯಾವ ದೇಶಕ್ಕೂ ಇಲ್ಲ. ನಮ್ಮ ದೇಶದಲ್ಲಿ ಕಮರ್ಷಿಯಲ್ ಕ್ರಾಪ್ಸ್‌ಗೆ ಬಹಳ ಸೌಕರ್ಯವಿದೆ. ಈದೃಷ್ಟಿಯಿಂದ ಅದನ್ನೆಲ್ಲಾ ಪೂರ್ತಿ ಉಪಯೋಗಿಸಿಕೊಳ್ಳುವುದಕ್ಕೆ ಎರಡನೆಯ ಪಾಂಚವಾರ್ಷಿಕ ಯೋಜನೆ ಮಾಡಿದ್ದಾರೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಕ್ಯಾಷ್ಯೂನಟ್‌ಗೆ ಏನು ಮಾಡಿದ್ದೀರಿ ?

ಶ್ರೀ ಎಚ್. ಎಸ್. ರುದ್ರಪ್ಪ.—ಇರತಕ್ಕ ಜಮೀನನ್ನು ರೂಲ್ಸ್ ಪ್ರಕಾರ ಕೊಡುತ್ತಿದ್ದೇವೆ. ಕ್ಯಾಷ್ಯೂನಟ್ ರಿಸರ್ಚ್ ಫಾರಂಮಾಡಿ ಎಷ್ಟು ಸಾಧ್ಯವೋ ಅಷ್ಟನ್ನೂ ಮಾಡುತ್ತೇವೆ. ಒಂದು ಲಕ್ಷ ಎಕರೆಯಲ್ಲಿ ಇದನ್ನು ಬೆಳಸಬೇಕು ಎಂದು ಅಂದಾಜು ಮಾಡಿದ್ದೇವೆ. ಫಾರೆಸ್ಟ್ ಇಲಾಖೆಯಲ್ಲಿ ಹತ್ತು ಸಾವಿರ ಎಕರೆ ಪ್ಲಾನ್‌ಟೇಷನ್ ಮಾಡಬೇಕು ಎಂದು ಇದ್ದೇವೆ. ಜಮೀನು ಬೇಕಾದಷ್ಟು ಇರುವ ದೃಷ್ಟಿಯಿಂದ ಖಾಸಗಿ ಜನರಿಗೆ ಅನುಕೂಲ ಮಾಡಿದ್ದೇವೆ. ಕೆಲವು ವಿಷಯಗಳನ್ನು ಮಾತ್ರ ಹೇಳಿದ್ದೇನೆ. ಇನ್ನು ಕೆಲವು ವಿಷಯಗಳನ್ನ ಹೇಳುವುದಕ್ಕೆ ಆಗಲಿಲ್ಲ. ತಮ್ಮ ಕ್ಷಮೆಬೇಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ (ಸ್ಥಳೀಯ ಪ್ರಜಾಧಿಕಾರ ಸಂಸ್ಥೆಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ನನಗೆ ಸಂಬಂಧಪಟ್ಟ ಇಲಾಖೆಗಳ ವಿಚಾರದಲ್ಲಿ ಮಾನ್ಯ ಸದಸ್ಯರು ಕೆಲವು ಉಪಯುಕ್ತವಾದ ಸಲಹೆಗಳನ್ನು ಮಾಡಿದ್ದಾರೆ; ಮತ್ತು ಈ ಲೋಕಲ್ ಸೆಲ್ಫ್ ಗೌರ್ನ್ಮೆಂಟ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಇಂತಕ್ಕ ಕೆಲವು ನ್ಯೂನತೆಗಳನ್ನು ಇಲ್ಲಿ ಹೇಳಿದ್ದಾರೆ. ಆ ನ್ಯೂನತೆಗಳು ವಾಸ್ತವವಾಗಿರೋಣದ್ದರಿಂದ ಅನೇಕ ನ್ಯೂನತೆಗಗಳನ್ನು ಮಾರ್ಪಾಡು ಮಾಡಲು ಒಪ್ಪಿಕೊಂಡಿದ್ದೇವೆ. ಅದು ಎಲ್ಲರಿಗೂ ಗೊತ್ತಿರುವ ವಿಚಾರ, ನನಗೆ ಸಂಬಂಧಪಟ್ಟ ಇಲಾಖೆಗಳಲ್ಲಿ ಬಹಳ ಪ್ರಾಮುಖ್ಯವಾಗಿ ಬರತಕ್ಕ ವಿಷಯ ಡಿಪ್ರೆಸ್ ಕ್ಲಾಸ್ ಎಮಿಲಿಯೋರೇಷನ್ ಫಂಡು. ಅದು ಬಹಳಮಟ್ಟಿಗೆ ಕಡಮೆಯಾಗಿದೆ, ಸಕಾಲದಲ್ಲಿ ಅದು ಉಪಯೋಗವಾಗುತ್ತಾ ಇಲ್ಲ, ಕೆಲವು ರೆಕಾರ್ಡ್‌ಗಳು ಬಹಳ ಡಿಲೆ ಆಗುತ್ತಿವೆ, ಸಾಕಾದಷ್ಟು ಕಾಲದಲ್ಲಿ ಅಕ್ವಿಸಿಷನ್ ರೆಕಾರ್ಡ್ ಫೈನಲ್ ಆಗುತ್ತಾ ಇಲ್ಲ, ಮುನಿಸಿಪಲ್ ಆಫೀಸುಗಳಲ್ಲಿ ಕೆಲವು ರೆಕಾರ್ಡ್ ಜಾಗ್ರತೆ ಫೈನಲ್ ಆಗುವುದಿಲ್ಲ, ವಾಟರ್ ಡ್ರೈನೇಜ್ ಇತ್ಯಾದಿ ವಿಚಾರಗಳನ್ನು ಅನೇಕ ಸದಸ್ಯರುಗಳು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಮಾನ್ಯ ಸದಸ್ಯರು ಹೇಳಿರುವ ಅನೇಕ ವಿಷಯಗಳನ್ನು ಒಪ್ಪಬೇಕಾಗಿದೆ. ಬಸವಲಿಂಗಪ್ಪನವರು ಮಾತನಾಡುವಾಗ ಡಿಪ್ರೆಸ್ಡ್ ಕ್ಲಾಸ್ ಸೆಮಿನಾರ್ ಎಂದು ಕೆಂಗೇರಿಯಲ್ಲಿ ಒಂದು ಸೆಮಿನಾರ್ ಆಯಿತು, ಅಲ್ಲಿ ಕೆಲವು ರೆಕಮೆಂಡೇಷನ್ ಮಾಡಿ ಕಳುಹಿಸಿ ಕೊಟ್ಟರು, ಅವನ್ನು ಏನು ಮಾಡಿದರು ಎನ್ನುವ ವಿಚಾರ ಗೊತ್ತಿಲ್ಲ ಎಂದು ಹೇಳಿದರು. ಕೆಂಗೇರಿಯಲ್ಲಿ ಆದ ಸೆಮಿನಾರ್‌ನಲ್ಲಿ 105 ರೇಕಮೆಂಡೇಷನ್ಸ್ ಒಳಗೊಂಡ ಒಂದು ರಿಪೋರ್ಟನ್ನು ಕಳುಹಿಸಿ ಕೊಟ್ಟಿದ್ದಾರೆ. ಅವುಗಳಲ್ಲಿ ಬಹುಭಾಗ ಈಗ ಜಾರಿಯಲ್ಲಿ ಇವೆ ಮತ್ತು ನಡೆಸತಕ್ಕ ರೆಕಮೆಂಡೇಷನ್ ಆಗಿವೆ. ಬಹುಮಟ್ಟಿಗೆ ಅವುಗಳನ್ನು ಜಾರಿಗೆ ಕೊಟ್ಟಿದೆ. ಹರಿಜನರ ಕಾಲೋನಿ ಪ್ರತ್ಯೇಕವಾಗಿ ಇರುವುದು ಸರಿಯಲ್ಲ, ಆದ್ದರಿಂದ ಕಾಮನ್ ಕಾಲೋನಿ ಇರುವುದಕ್ಕೆ ಸರ್ವ ಪ್ರಯತ್ನ ಮಾಡಬೇಕು ಎನ್ನುವುದು ಒಂದು ರೆಕಮೆಂಡೇಷನ್. ಅದು ಬಹಳ ಸುಲಭವಾದ ಕಾರ್ಯವಲ್ಲ ಎಂದು ತಮಗೆಲ್ಲರಿಗೂ ಗೊತ್ತಿರುವ ವಿಷಯ. ಆ ದಾರಿಯಲ್ಲಿ ನಾವು ಈಗ ಷುರು ಮಾಡಿದ್ದೇವೆ. ಅನೇಕ ಕಡೆಗಳಲ್ಲಿ ಸೈಟ್‌ಕೊಡುವ ಕಾಲದಲ್ಲಿ ಪ್ರತ್ಯೇಕವಾದ ಕೇರಿಮಾಡುವ ಕಾಲದಲ್ಲಿ ಎಲ್ಲರೂ ಜೊತೆಯಲ್ಲಿ ವಾಸಮಾಡುವ ರೀತಿಯಲ್ಲಿ ಎಲ್ಲರೂ ಜೊತೆಯಲ್ಲಿ ವಾಸಮಾಡುವ ರೀತಿಯಲ್ಲಿ ಕಾಮನ್ ಎಕ್ಸ್‌ಟೆನ್‌ಷನ್ ಮಾಡಬೇಕು ಎಂದು ಅನೇಕ ಕಡೆಗಳಲ್ಲಿ ಹೇಳುತ್ತಿದ್ದೇವೆ. ಕೆಲವು ಕಡೆ ಶುರು ಮಾಡಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಸಾಮೇನಹಳ್ಳಿ ಗ್ರಾಮದಲ್ಲಿ ಸವರ್ಣ ಹಿಂದೂಗಳು ಹರಿಜನರ ಜೊತೆಯಲ್ಲಿ ತಾವೇ ವಾಸ ಮಾಡುತ್ತಿದ್ದಾರೆ; ಕಾಮನ್‌ವೆಲ್ ನೀರು ತಗೆದುಕೊಳ್ಳುತ್ತಿದ್ದಾರೆ. ಈಗಾಗಲೇ ಬಾವಿ ತೆಗೆಸಿದ್ದಾರೆ. ಸೈಟುಗಳನ್ನು ಸಮಾನವಾಗಿ ಹಂಚಿದ್ದಾರೆ. ಸವರ್ಣ ಹಿಂದೂ ಸಹೋದರರೊಬ್ಬರು ಹರಿಜನರಿಗೆ ಆರು ಎಕರೆ ಜಮೀನನ್ನು ಮುಫತ್ತಾಗಿ ಕೊಟ್ಟಿದ್ದಾರೆ. ಈ ರೀತಿ ಸವರ್ಣ ಹಿಂದೂಗಳೂ ಮತ್ತು ಹರಿಜನರೂ ಇಲ್ಲಿಯವರೆಗೂ ಒಂದೇ ಕಮ್ಯೂನಿಟಿ ಪ್ರಾರಂಭ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ಈ ರೀತಿಯಾಗಿ ಸಾಧ್ಯವಾದಮಟ್ಟಿಗೆ ಎಲ್ಲಾ ಅನುಕೂಲಗಳನ್ನೂ ಮಾಡಿಕೊಡುವುದಕ್ಕೆ ಪ್ರಯತ್ನ ಪಡುತ್ತೇವೆ. ಕೆಲವು ಕಡೆ

(ಶ್ರೀ ಆರ್. ಚೆನ್ನಿಗರಾಮಯ್ಯ)

ಕಷ್ಟವಾಗುತ್ತದೆ. ಸೋಷಿಯಲ್ ರಿಫಾರಂ ಅಷ್ಟು ಸುಲಭವಾಗಿ ಆಗುವುದಿಲ್ಲ. ಸ್ವಲ್ಪ ಕಾಲ ಬೇಕು. ಶ್ರೀ ಬಸವಲಿಂಗಪ್ಪನವರೂ, ಶ್ರೀ ಹನುಮಂತಪ್ಪನವರೂ ಮತ್ತು ಶ್ರೀ ಮುನಿಯಪ್ಪನವರೂ ಈ ವರ್ಷ ನಿಮ್ಮ ಪಂಗಡದವರಿಗೆ ಕೊಟ್ಟಿರುವ ಹಣವನ್ನು ಬಜೆಟ್ಟಿನಲ್ಲಿ ಸರ್ಕಾರದವರು ಬಹಳ ಕಡಮೆ ಮಾಡಿದ್ದಾರೆಂದು ಹೇಳಿದರು. ಹಿಂದಿನ ವರ್ಷ 29 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೆವು. ಈಗ 20 ಲಕ್ಷ ರೂಪಾಯಿಗಳಿಗೆ ಇಳಿಸಿದ್ದಾರೆ. ಶ್ರೀ ಹನುಮಂತಪ್ಪನವರು 11 ಲಕ್ಷ ರೂಪಾಯಿಗಳಿಗೆ ಇಳಿಸಿದ್ದಾರೆಂದು ಹೇಳಿದರು. ಹಿಂದಿನ ಬಜೆಟ್ಟಿನಲ್ಲಿ ಈ ಬಾಬಿಗೆ 19 ಲಕ್ಷ ರೂಪಾಯಿಗಳನ್ನು ಕೊಟ್ಟಿತ್ತು. ಅದರ ಮೇಲೆ 19 ಲಕ್ಷ ರೂಪಾಪಾಯಿಗಳು ಬಹಳ ಕಡಿಮೆಯೆಂದು ಕೇಂದ್ರ ಸರ್ಕಾರದಿಂದ ಇನ್ನೂ ಹೆಚ್ಚಾಗಿ ಹಣಸಹಾಯಬೇಕೆಂದು ಕೇಳಿದೆವು. ಅವರು ಬಹಳ ಉದಾರವಾಗಿ 10-12 ಲಕ್ಷ ರೂಪಾಯಿಗಳನ್ನು ಕೊಟ್ಟರು. ಒಟ್ಟಿಗೆ ಸುಮಾರು 29 ಲಕ್ಷ ರೂಪಾಯಿಗಳನ್ನು ಹಿಂದಿನ ವರ್ಷ ಕೊಟ್ಟಿದ್ದೇನೋ ನಿಜ. ಈ ವರ್ಷದ ಬಜೆಟ್ಟಿನಲ್ಲಿ ನಾವು ದ್ವಿತೀಯ ಪಾಂಚವಾರ್ಷಿಕ ಯೋಜನೆಯ ಪ್ರಕಾರ ಸುಮಾರು 60 ಲಕ್ಷಕ್ಕೆ ಈ ಬಾಬಿಗೆ ಖರ್ಚು ಮಾಡುವುದಕ್ಕೋಸ್ಕರ ಒಂದು ಅಂದಾಜನ್ನು ಹಾಕಿದ್ದೆವು. ಆದರೆ ಪ್ಲಾನಿಂಗ್ ಕಮೀಷನ್ನಿನವರು ಎಲ್ಲಾ ಇಲಾಖೆಗಳಿಗೂ ಸ್ವಲ್ಪ ಸ್ವಲ್ಪ ಖೋತಾ ಮಾಡಿದ್ದಾರೆ. ಅದೇರೀತಿಯಾಗಿ ಈ ಬಾಬಿನಲ್ಲೂ ಖೋತಾಮಾಡಿ ಒಟ್ಟು 47 ಲಕ್ಷಕ್ಕೆ ಇಳಿಸಿದ್ದಾರೆ. ಈ ಸಂದರ್ಭದಲ್ಲಿ 22 ಲಕ್ಷವನ್ನು ಈ ವರ್ಷ ಈ ಬಾಬಿಗೆ ಖರ್ಚುಮಾಡಬೇಕೆಂದು ತಿಳಿಸಿದ್ದಾರೆ.

ಶ್ರೀ ಎಂ. ಹನುಮಂತಯ್ಯ.—ಈ 22 ಲಕ್ಷ ರೂಪಾಯಿಗಳನ್ನು ಮೈಸೂರು ಸರ್ಕಾರದವರು ಕೊಟ್ಟಿದ್ದಾರೆಯೋ ಎಂದು ನನ್ನ ಪ್ರಶ್ನೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಈ ಬಜೆಟ್ ವಿಷಯದ ಮೇಲೆ ಮಾತನಾಡುತ್ತಿದ್ದೇವೆ. ಮೈಸೂರು, ಕೇಂದ್ರ ಸರ್ಕಾರ ಎಂದು ಪ್ರತ್ಯೇಕ ಪ್ರತ್ಯೇಕವಾಗಿ ಮಾಡಲಿಲ್ಲ. ಮೈಸೂರು ಸರ್ಕಾರದವರು ಹಿಂದೆ 11 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಹೇಳಿದರು. ಹಿಂದೆ 19 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಹಳೆಯ ಮೈಸೂರಿಗೆ ಎಂದು ಸರ್ಕಾರದವರು ನಿಮ್ಮ ವರ್ಗದವರಿಗಾಗಿ ಮನೆಗಳನ್ನು ಕಟ್ಟಲು 19 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಇತ್ತೀಚೆಗೆ ಭಾವಿ, ಮನೆಗಳು, ಕಮ್ಯೂನಿಟಿ ಸೆಂಟರುಗಳು ಮತ್ತು ಎಕನಾಮಿಕ್ ಕೇಡರ್—ಇವೆಲ್ಲಕ್ಕೂ ಜಾಸ್ತಿ ಮಾಡಿದ್ದಾರೆ. ಅದಕ್ಕಾಗಿ 47 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರಲ್ಲಿ $\frac{1}{2}$ ಭಾಗ ಮೈಸೂರು ಸರ್ಕಾರದವರದು, ಇನ್ನುಳಿದ $\frac{1}{2}$ ಭಾಗ ಕೇಂದ್ರ ಸರ್ಕಾರದವರದು. ಆದ್ದರಿಂದ ಶ್ರೀ ಹನುಮಂತಪ್ಪನವರು ಹೇಳಿದಹಾಗೆ 11 ಲಕ್ಷ ರೂಪಾಯಿಗಳು ಮೈಸೂರು ಸರ್ಕಾರದವರದು ಆಗುವುದಿಲ್ಲವೆಂಬುದನ್ನು ಅವರು ಯೋಚನೆಮಾಡಬೇಕು. ಅವರು 22 ಲಕ್ಷ ರೂಪಾಯಿಗಳನ್ನು ಒದಗಿಸಿರುವುದು ಬಹಳ ಕಡಮೆ. 29 ಲಕ್ಷ ರೂಪಾಯಿಗಳನ್ನೊದಗಿಸಬೇಕು ಎಂದು ಅವರು ಕೇಳಬೇಕು. ವಿಶಾಲ ಮೈಸೂರು ಆಗಿರುವುದರಿಂದ ಮನಸ್ಸು ವಿಶಾಲವಾಗಿರಬೇಕು; ದುಡ್ಡನ್ನೂ ಸಹ ನಾವು ವಿಶಾಲಗೊಳಿಸುವುದಕ್ಕೆ ಪ್ರಯತ್ನಪಡಬೇಕು. ಈಗ 19 ಲಕ್ಷ ಇದ್ದುದು 29 ಲಕ್ಷವಾಯಿತು. 29 ಲಕ್ಷದಿಂದ ಪ್ಲಾನಿಂಗ್ ಕಮಿಷನ್ನಿನವರ ಸಲಹೆಯಂತೆ 22 ಲಕ್ಷಕ್ಕಿಳಿದಿದೆ. ಈಗ ಅದು ಬಹಳ ಕಡಮೆ. ನಮಗೆ ಇನ್ನೂ ಜಾಸ್ತಿ ಬೇಕು ಎಂದು ಕೇಳೋಣ. ಅವರು ಖಂಡಿತವಾಗಿ ಹೆಚ್ಚಿಸುತ್ತಾರೆಂಬ ಭರವಸೆಯನ್ನು ನಾನು ಕೊಡುತ್ತೇನೆ. ಹಿಂದಿನ ವರ್ಷವೂ ಇದೇರೀತಿ ಹೆಚ್ಚಿಸಿದರು. ನನ್ನ ಮಾನ್ಯ ಸ್ನೇಹಿತರು ಹೇಳಿದಹಾಗೆ ನಾನಾ ಕಾರಣಗಳಿಂದ 22 ಲಕ್ಷಕ್ಕೆ ಇಳಿಸಿದ್ದಾರೆ. ಅದನ್ನು ಜಾಸ್ತಿಮಾಡುವ ಅವಕಾಶವಿದೆಯೆಂಬ ಭರವಸೆಯನ್ನು ನಾನು ಕೊಡಬಲ್ಲೆ. ಆ ಒಂದು ನಂಬಿಕೆಯಿಂದ ನಾವು ಮುಂದುವರಿಯಬಹುದು. ಈ ವಿಷಯದ ಮೇಲೆ ಇನ್ನು ಹೆಚ್ಚಿಗೆ ಮಾತನಾಡುವುದು ಪ್ರಯೋಜನವಿಲ್ಲ.

ಶ್ರೀ ಎಲ್. ಎಸ್. ವೆಂಕಾಜಿರಾವ್. (ಬಸವನಗುಡಿ).—ಕಮ್ಯೂನಿಟಿ ಸೆಂಟರುಗಳನು ಮಾಡುವುದಕ್ಕೋಸ್ಕರವೇ ಹೆಚ್ಚು ಹಣ ಬೇಕೆಂದು ಕೇಳಿರುವುದು.

ಶ್ರೀ ಆರ್. ಚೆನ್ನಿಗರಾಮಯ್ಯ.—ಒಳ್ಳೆಯದು. ಈ ಸಂದರ್ಭದಲ್ಲಿ ಮಾನ್ಯ ಶ್ರೀ ಹನುಮಂತಯ್ಯನವರು ತಮ್ಮ ಉಜ್ವಲ ಭಾಷಣದ ಆರ್ಭಟದಲ್ಲಿ ನೆಲಮಂಗಲದ ಒಬ್ಬ ಸ್ಪೆಷಲ್ ರೆವಿನ್ಯೂ ಇನ್‌ಸ್ಪೆಕ್ಟರಿಗೆ ಒಂದು ಕೈಯೇ ಇಲ್ಲ, ಕೆಲಸಮಾಡುವುದಿಲ್ಲ, ಮೊದಲು ಟ್ರಾನ್ಸ್‌ಫರ್ ಮಾಡಿ ಎಂದು ಹೇಳಿದರು. ಅದನ್ನೆಲ್ಲಾ ಕೂಲಂಕಷವಾಗಿ ವಿಚಾರಿಸದಮೇಲೆ ನಿಜಾಂಶ ತಿಳಿಯಿತು. ರೆವಿನ್ಯೂ ಇನ್‌ಸ್ಪೆಕ್ಟರ್ ಒಂದೇ ಕೈಯ್ಯಿಂದ ಚೆನ್ನಾಗಿ ಕೆಲಸಮಾಡುತ್ತಿದ್ದಾರೆ. ಏನೂ ದೂರುಗಳು ಅವರ ಮೇಲೆ ಬಂದಿಲ್ಲ. ಹಾಗೆ ಒಂದುವೇಳೆ ಆತನ ಕೈಲಿ ಕೆಲಸವಾಗದಿದ್ದರೆ ಮೇಲಿನ ಅಧಿಕಾರಿಗಳು ಅವನ ಮೇಲೆ ಒಂದು ದೂರನ್ನು ಕೊಡುತ್ತಿದ್ದರು. ಅದು ಏನೂ ಕಾಣಲಿಲ್ಲ.

ಒಬ್ಬ ಸದಸ್ಯರು.—ಎರಡು ಕೈ ಇಲ್ಲದಿದ್ದರೂ ಬೈಸಿಕಲ್ ಬಿಡಬಹುದು.

ಶ್ರೀ ಆರ್. ಚೆನ್ನಿಗರಾಮಯ್ಯ.—ಒಂದು ಕೈ ಇಲ್ಲದವರು ಸರ್ಕಾರದ ಕೆಲಸದಲ್ಲಿರಕೂಡದು ಎಂದು ಯಾವ ಕಾನೂನಿನಲ್ಲಿಯೂ ಇಲ್ಲ. ಆದ್ದರಿಂದ ಶ್ರೀ ಹನುಮಂತಯ್ಯನವರು ಹೇಳಿದಹಾಗೆ ಅಲ್ಲಿನ ರೆವಿನ್ಯೂ ಇನ್‌ಸ್ಪೆಕ್ಟರನ್ನು ಆ ಒಂದು ಕಾರಣದಿಂದಲೇ ತೆಗೆದುಹಾಕುವುದಕ್ಕಾಗುವುದಿಲ್ಲ. ಈಗಾಗಲೇ ಮೂರು ನಾಲ್ಕು ಜನ ರೆವಿನ್ಯೂ ಇನ್‌ಸ್ಪೆಕ್ಟರುಗಳು ಕೆಲಸದಿಂದ ವಜಾ ಆಗಿದ್ದಾರೆ. ಅಂತಹವರ ಮೇಲೆ ದೂರುಗಳೇನಾದರೂ ಇದ್ದರೆ, ಆ ದೂರುಗಳನ್ನು ಎಫಿಷಿಯನ್ಸಿ ಆಡಿಟ್ ಶಾಖೆಯವರು ಚೆನ್ನಾಗಿ ತನಿಖೆಮಾಡಿ ಸರ್ಕಾರಕ್ಕೆ ವರದಿಮಾಡುತ್ತಾರೆ. ಒಂದುವೇಳೆ ಅವರ ಕೈಯಲ್ಲಿ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲದೇಹೋದರೆ, ಅವರ ಕೈಯಲ್ಲಿ ಈ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ವರದಿಮಾಡುತ್ತಾರೆ. ಆಗ ಸರ್ಕಾರದವರು ಅವರನ್ನು ಬದಲಾಯಿಸಬೇಕಾಗಿಬರುತ್ತದೆ.

ಶ್ರೀ ಎಂ. ಹನುಮಂತಯ್ಯ.—ನಾನು ಹೇಳುವುದು ಅವರನ್ನು ವಜಾಮಾಡಿ ಎಂದಲ್ಲ. ಅವರ ಕೈಯಲ್ಲಾಗುವ ಕೆಲಸವನ್ನು ಕೊಡಿ ಎಂದು.

ಶ್ರೀ ಆರ್. ಚೆನ್ನಿಗರಾಮಯ್ಯ.—ಮಾನ್ಯ ಸದಸ್ಯರ ಅಭಿಪ್ರಾಯವನ್ನು ಸಂಬಂಧಪಟ್ಟ ಅಧಿಕಾರಿಗಳಲ್ಲಿ ವಿಚಾರಮಾಡಿ, ಅವರ ಕೈಯಲ್ಲಿ ಈಗ ಕೊಟ್ಟಿರುವ ಕೆಲಸವಾಗದಿದ್ದರೆ, ಆ ವಿಷಯವನ್ನು ಯೋಚನೆ ಮಾಡಬಹುದು. ಅದು ಮಾನ್ಯ ಸದಸ್ಯರ ಒಂದು ಸಲಹೆ.

ಅವರು ಇನ್ನೂ ಒಂದು ವಿಷಯವನ್ನು ಹೇಳಿದರು: ನಿಮ್ಮ ಪಂಗಡದವರಿಗೆ ಗ್ರ್ಯಾಂಟನ್ನು, ಈ ವರ್ಷ ಕಡಮೆಯಾಗಿ ಒದಗಿಸಿದ್ದೀರಿ ಎಂದು. ನಾನು ಅವರೂ

ಇಬ್ಬರೂ ಹಳಬರು. 25 ವರ್ಷಗಳಿಂದ ಪರಿಚಯಸ್ಥರು. ಆದರೂ ಇನ್ನೂ ಕಣ್ಣುಮುಚ್ಚಿಕೊಂಡೇ ಕುಳಿತಿದ್ದಾರೆ. ಅವರಿಗೆ ಕೆಲಸಬಿಟ್ಟುಬರುವುದಕ್ಕೆ ಎಲ್ಲೋ ಇಷ್ಟವಿಲ್ಲವೆಂದು ಕಾಣುತ್ತದೆ. ಅಧಿಕಾರದ ಮೇಲೆ ಬಹಳ ಆಸೆಯಿದೆ ಎಂದು ಉದ್ರೇಕಗೊಂಡು ನನ್ನ ಮೇಲೆ ಹೇಳಿದರು. ಅಲ್ಲದೆ ಗುದ್ದಾಟವಾಡುವ ರೀತಿಯಲ್ಲಿ ಮಾತನಾಡಿಬಿಟ್ಟರು. ಅದರಿಂದ ಏನೂ ಪ್ರಯೋಜನವಿಲ್ಲ.

ಶ್ರೀ ಎಂ. ಹನುಮಂತಯ್ಯ.—ನಾನು ಈ ಸಂದರ್ಭದಲ್ಲಿ ಹೆಚ್ಚು ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು.—ಈ ರೀತಿ ಮಂತ್ರಿಗಳು ಉತ್ತರ ಕೊಡುತ್ತಿರುವಾಗ ಮಧ್ಯೆ ಮಧ್ಯೆ ಪ್ರವೇಶಿಸಿ ಮಾತನಾಡುವುದು ಸಭೆಗೆ ತುಂಬ ಅಗೌರವವಾಗುತ್ತದೆ. ಒಂದೇಸಾರಿ ಏನು ಹೇಳಬೇಕೋ ಅವನ್ನು ಹೇಳಿಬಿಡಿ. ತಾವು ಏನಾದರೂ ಕೇಳುವ ಅಂಶಗಳಿದ್ದರೆ ಕೇಳಿ. ತಾವು ಎಷ್ಟೋ ವರ್ಷಗಳಿಂದ ಅಸೆಂಬ್ಲಿಯಲ್ಲಿ ಇದ್ದೀರಿ. ನೀವೇ ಈ ರೀತಿ ಮಾಡುವುದು ಸರಿಯಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯ.—ಶ್ರೀಮತಿ ಬಸವ ರಾಜೇಶ್ವರಿಯವರು ಹರಿಜನರಿಗೆ ಕೊಡುವ ಗ್ರಾಂಟು ಬಹಳ ಕಡಮೆ ಎಂದು ಹೇಳಿದರು. 300 ರೂಪಾಯಿಗಳಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಆಗುವುದಿಲ್ಲ ಇನ್ನೂ ಜಾಸ್ತಿ ಮಾಡಬೇಕೆಂದು ಸಲಹೆಕೊಟ್ಟರು. ಅದೇ ರೀತಿಯಾಗಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಆ ಪ್ರಕಾರ ಈ ಮೊಬಲಗನ್ನು ಜಾಸ್ತಿಮಾಡಬೇಕಾದ ಅವಶ್ಯಕತೆಯೇನೋ ಇದೆ. 300 ರೂಪಾಯಿಗಳನ್ನು ಅವರಿಗೆ ಗ್ರಾಂಟುರೂಪವಾಗಿ ಕೊಡುತ್ತಿರುವುದು ಸಾಲದು ಎಂಬ ಅಂಶವನ್ನು ಯೋಚನೆ ಮಾಡಿದ್ದೇವೆ. ಆ ವಿಷಯವನ್ನು ಕುರಿತು ಮುಖ್ಯ ಮಂತ್ರಿಗಳು ಅವರ ಭಾಷಣದಲ್ಲಿ ಉತ್ತರಹೇಳುತ್ತಾರೆ. ಕೊಡತಕ್ಕಂಥ ಗ್ರಾಂಟನ್ನು ವರ್ಷದ ಕೊನೆಗೆ ಕೊಡಲಾಗುತ್ತದೆ. ಆದರೆ ಹಾಗೆ ಮಾಡದೆ ಆದಷ್ಟು ಬೇಗನೆ ಕೊಡಬೇಕು ಎಂದು ಶ್ರೀ ಬಿ. ರುದ್ರಯ್ಯನವರು ಹೇಳಿದ್ದಾರೆ. ಹಿಂದೆ ಎರಡುಸಾರಿ ಆರೀತಿ ಕೊಡಬೇಕಾಗಿ ಬಂತು. ಅದರಿಂದ ವಿಳಂಬವಾಯಿತು. ಈ ವರ್ಷ ಬಹುಮಟ್ಟಿಗೆ ಕೊಟ್ಟಿರತಕ್ಕ ಹಣವೆಲ್ಲ ಖರ್ಚಾಗುತ್ತದೆ. ಬೇಗನೆ ಕೊಡುವ ಹಾಗೆ ಮಾಡಲಾಗಿದೆ. ಆದುದರಿಂದ ಹಣ ಈ ವರ್ಷ lapse ಆಗಬಹುದೆಂಬ ಭಯಕ್ಕೆ ಅವಕಾಶವಿಲ್ಲ ಎಂದು ನಾನು ತಿಳಿಸುತ್ತೇನೆ. ಈಗಾಗಲೇ Vote on Account ಪಾಸ್ ಆಗಿರುವುದರಿಂದ ಈ ವರ್ಷ ಬೇಗನೆ ಹಂಚುವದಕ್ಕೆ ಆರ್ಡರ್ ಮಾಡಿದ್ದೇವೆ. ಆ ರೀತಿ ಹಂಚಿಬಿಡುತ್ತೇವೆ. ಅಂಥ ಆಪಾದನೆಗೆ ಇನ್ನು ಅವಕಾಶವಿಲ್ಲವೆಂದು ಹೇಳುತ್ತೇನೆ.

ಇನ್ನು ಶ್ರೀ ರೇವಣಸಿದ್ದಪ್ಪನವರು ಟೆಂಡರ್ ಕಾಲ್‌ಫಾರ್ ಮಾಡದೇ ಕೆಲಸ ಮಾಡುತ್ತೇವೆಂದು ಹೇಳಿದ್ದಾರೆ. ಈ ಆಪಾದನೆ ಬಂದಿದೆ. ಇದನ್ನು ಸರಿಪಡಿಸುತ್ತೇವೆ. ಇನ್ನು ಮನೆಕಟ್ಟುವದಕ್ಕೆ ಕೊಡಬೇಕಾದ ಹಣದ ವಿಚಾರ. ಪ್ರತಿಯೊಂದು ಜಿಲ್ಲೆಯ ಜನಸಂಖ್ಯೆಯ ಪ್ರಮಾಣದಮೇಲೆ ಇದನ್ನ ಹಂಚಿದ್ದಾರೆ. ಈಗ ಹೊಸರಾಜ್ಯವಾಗಿದೆ. ಬೊಂಬಾಯಿ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಮದ್ರಾಸ್ ಕರ್ನಾಟಕ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿಸತಕ್ಕ ಒಂದು ಸ್ಕೀಮ್ ಇರಲಿಲ್ಲ. ಹಳೆಯ ಮೈಸೂರಿನಲ್ಲಿ ಈ ಸ್ಕೀಮ್ ಇತ್ತು. ಹೊಸದಾಗಿ ಬಂದ ಪ್ರದೇಶದಲ್ಲಿ ಈ ಸ್ಕೀಮಿನ ವ್ಯವಸ್ಥೆ ಅಲ್ಲಿಯ ಜನರಿಗೆ ಗೊತ್ತಿರಲಿಲ್ಲ. ಈ ಹೊಸ ಪ್ರದೇಶದಲ್ಲಿ ಸ್ಪೆಷಲ್ ರೆವೆನ್ಯೂ ಇನ್‌ಸ್ಪೆಕ್ಟರ್ ಇದಿರಲಿಲ್ಲ. ಈಗ ಈ ಎಲ್ಲ ಏರ್ಪಾಡು ಮಾಡುತ್ತಿದ್ದೇವೆ. ಮೊಟ್ಟಮೊದಲನೆಯದಾಗಿ ಈ ವರ್ಷ ಮನೆ ಕಟ್ಟತಕ್ಕಂಥ ಗ್ರಾಂಟನ್ನು ಕೊಡುವದರಿಂದ ಹೆಚ್ಚಾಗಿ ಖರ್ಚುಮಾಡಲು ಆಗುವದಿಲ್ಲವೆಂದು ಸ್ವಲ್ಪ ಕಡಮೆ ಹಣ ಕೊಟ್ಟಿದ್ದೇವೆ. ಬಹುಮಟ್ಟಿಗೆ ಈ ವರ್ಷದ ಅನುಭವ ತಿಳಿದುಕೊಂಡು ಮುಂದೆ ಹೆಚ್ಚಿಗೆ ಹಣ ಕೊಡುತ್ತೇವೆ.

ಸಾಮಾನುಗಳನ್ನು ಒದಗಿಸುವದರಬದಲು ಹಣ ಕೊಡಬೇಕೆಂಬ ಈ ಒಂದು ವಾದ ಬಹಳ ದಿವಸದಿಂದಲೂ ಇದೆ. ಕೆಲವರು ಸಾಮಾನುಗಳನ್ನೇ ಕೊಡಬೇಕು, cash ಹಣ ಬೇಡ ಎಂದೂ ಹೇಳುವುದುಂಟು. ನಮಗೆ ಬಂದಿರುವ ಅನುಭವದಿಂದ ಹಣ ಕೊಟ್ಟಿದ್ದನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂಬುದು ಗೊತ್ತಾಗಿದೆ. ಶಿವಮೊಗ್ಗಾ ಅರಣ್ಯದಲ್ಲಿಯ ಒಳ್ಳೆ ಮರವನ್ನು ತರಿಸಿ ಬಾಗಿಲು ಕಿಟಕಿಗಳನ್ನು ತಯಾರುಮಾಡುವುದಕ್ಕೆ ಕಂಟ್ರಾಕ್ಟ್ ಕೊಡುತ್ತೇವೆ. ¾ ರಷ್ಟು ಸಾಮಾನುಗಳನ್ನು ¼ ರಷ್ಟು ಅಂದರೆ ಶೇಕಡಾ 25 ರಷ್ಟನ್ನು ಕ್ಯಾಷ್ ಕೊಡಬೇಕು ಎಂಬುದಕ್ಕೆ ಸದಸ್ಯರು ಒಪ್ಪಿದ್ದಾರೆ.

ಶ್ರೀ ಲಿಂಗಾರೆಡ್ಡಿಯವರು ಹರಿಜನರಿಗೆ ಹಂಚತಕ್ಕ ಹಣದ ವಿಚಾರದಲ್ಲಿ ಬಹುಶಃ ಹಳೆಯ ಸರ್ಕ್ಯುಲರ್ ಆಧಾರದಮೇಲೆ ಆರೀತಿ ಹೇಳಿದ್ದಾರೆ ಎಂದು ಕಾಣುತ್ತದೆ. ಆದರೆ ಈ ವರ್ಷ ಹಣ ಹಂಚುವುದಕ್ಕೆ ಒಂದು ಯೋಜನೆ ಮಾಡಿದ್ದೇವೆ. ಐದು ಜನರನ್ನೊಳಗೊಂಡ ಒಂದು ಸಣ್ಣ ಕಮಿಟಿ ಮಾಡಲಾಗುವುದು, ಅದರಲ್ಲಿ M.L.A. ಗಳು ಸಹ ಇರುತ್ತಾರೆ. ಈ ರೀತಿಯಾಗಿ ಐದು ಜನರನ್ನೊಳಗೊಂಡ ಒಂದು ಕಮಿಟಿ ಮಾಡಿ ಹಣ ಹಂಚಬೇಕು ಎಂದು ಮಾಡಿದ್ದೇವೆ. ಇನ್ನು ಶ್ರೀ ಎಚ್. ಕೆ. ಸಿದ್ದಯ್ಯನವರು ಹೇಳಿದ ವಿಷಯ ವಾದ ವಿವಾದ ಪ್ರಶ್ನೆಯಾಗಿದೆ. ಇದೊಂದು All India Pattern Scheme ಆಗಿದೆ. ಆದರೂ ಸಹ ಈ ವರ್ಷ ಸಂತೋಷವಾಗಿ ಇನ್ನೂ ಹೆಚ್ಚಿಗೆ ಹಣ ಕೊಡುತ್ತೇವೆಂದು ಹೇಳಬಯಸುತ್ತೇನೆ. ಇನ್ನು ಮರಗಳ ವಿಚಾರವಾಗಿ ಅನ್ಯಾಯವಾಗುತ್ತದೆ, ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ ಈ ಕೆಲಸ ಮಾಡಿಸುವುದು ಬೇಡ ಎಂದು ಕೆಲವರು ಹೇಳುತ್ತಾರೆ. ಯಾಕೆಂದರೆ ನಂಬಿಕೆಯಿಂದ ಈ ಕೆಲಸ ಮಾಡಬೇಕಾಗುತ್ತದೆ. ಫಾರೆಸ್ಟ್ ಡಿಪಾರ್ಟ್‌ಮೆಂಟಿನಿಂದ ಕಿಟಕಿ ಬಾಗಿಲು ಮಾಡಿಸುವುದಕ್ಕೆ ಶಿವಮೊಗ್ಗಾದಿಂದ ಕಟ್ಟಿಗೆ ತರಿಸುತ್ತೇವೆ. ಡೆಪ್ಯುಟಿ ಕಮೀಷನರವರು ಟೆಂಡರು ಕರೆದು ಈ ಕೆಲಸ ಕೊಡುತ್ತಾರೆ. ಆದರೆ ಈಗ ಒಂದು ಕಮಿಟಿ ಮಾಡಬೇಕೆಂದು ಅಭಿಪ್ರಾಯ ಇಟ್ಟುಕೊಂಡಿದ್ದೇವೆ. ಈ ವಿಚಾರದಲ್ಲಿ ಯಾವದೇ ತರದ ಲೋಪವಿಲ್ಲವೆಂದು ನಾನು ಹೇಳುವುದಿಲ್ಲ. ಇದನ್ನು ಸರಿಪಡಿಸಲು ಎಲ್ಲರೂ ಪ್ರಯತ್ನಮಾಡಬೇಕಾಗಿದೆ.

ಇನ್ನು ಶ್ರೀಮತಿ ರುಕ್ಮಿಣಿಯಮ್ಮನವರು ಹರಿಜನರಿಗೆ ಕುಡಿಯುವ ನೀರಿನ ಭಾವಿಗಳ ಬಗ್ಗೆ ಸಾಕಷ್ಟು ಹಣ ಮಂಜೂರ್ ಮಾಡಬೇಕೆಂದು ಸೂಚನೆ ಕೊಟ್ಟಿದ್ದಾರೆ. ಎಲ್ಲಾ ಕೆಲಸಗಳೂ ಒಂದೇ ವರ್ಷದಲ್ಲಿ ಹೇಗೆ ಮಾಡಲು ಆಗುತ್ತದೆ ? ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲಲ್ಲಿ ಹಣ ಒದಗಿಸಿದ್ದೇವೆ. ಹೋದ ವರ್ಷ 19 ಲಕ್ಷ ರೂಪಾಯಿ, ಹಳೇ ಮೈಸೂರಿಗಾಗಿ ಬಜೆಟ್‌ನಲ್ಲಿ ಷೆಡ್ಯೂಲ್ ಕ್ಯಾಸ್ಟ್ ಜನರಿಗಾಗಿ ಹಣ ಕೊಟ್ಟಿತ್ತು. ಹೊಸ ಮೈಸೂರು ರಾಜ್ಯ ರಚನೆಯಾದಮೇಲೆ ನಾವೆಲ್ಲರೂ ಒಂದೇ ಎಂದು ಭಾವಿಸಿ ಈ ಹಣವನ್ನು ಎಲ್ಲ ಪ್ರದೇಶದಲ್ಲಿಯೂ ಹಂಚಿದ್ದೇವೆ

ಮತ್ತೆ 12 ಲಕ್ಷ ರೂಪಾಯಿ ಬಂದದ್ದನ್ನು ತಿರುಗಿ ಹಂಚಿದ್ದೇವೆ. ಆದ್ದರಿಂದ ವ್ಯತ್ಯಾಸ ಮಾಡುವುದಿಲ್ಲ. ಸ್ವಲ್ಪ ವಿಳಂಬವಾಗುತ್ತದೆ. ಜನವರಿಯಲ್ಲಿ ಬಂತು

(ಶ್ರೀ ಆರ್. ಚೆನ್ನಿಗರಾಮಯ್ಯ)

ಫೆಬ್ರುವರಿಯಲ್ಲಿ ಹಂಚಿದೆವು. ಬಾವಿಗಳ ವಿಚಾರದಲ್ಲೂ ಸಹ ಯಾವ ತೊಂದರೆಯೂ ಇಲ್ಲ. ರೂರಲ್ ಡೆವಲಪ್ ಮೆಂಟ್ ಸ್ಕೀಂನಲ್ಲಿ ಬಾವಿಗಳಿಗೆ ಗ್ರ್ಯಾಂಟ್ ಇದೆ. ಹರಿಜನರಿಗೆ ಪ್ರತ್ಯೇಕವಾಗಿ ಕೊಡಬೇಕು............

(Sri TALWALKAR in Marathi.)

ಶ್ರೀ ಆರ್. ಚೆನ್ನಿಗರಾಮಯ್ಯ.—ತಾವು ನನಗೆ ಹೇಳಿದ್ದು ಗೊತ್ತಾಗಲಿಲ್ಲ 'ಮ್ಯಾಕ್ಯಾಕರೂ' ! (ಸಭೆಯಲ್ಲಿ ನಗು !)

ಶ್ರೀ ಡಿ. ಟಿ. ಸೀತಾರಾಮರಾವ್ (ಭದ್ರಾವತಿ).—ಮಾನ್ಯ ಮಿತ್ರರು ಏನು ಹೇಳಿದರೋ ನಮಗೆ ತಿಳಿಯಲಿಲ್ಲ. ಸಚಿವರು 'ಮ್ಯಾಕ್ಯಾಕರೂ' ಎಂದು ಹೇಳುತ್ತಾರೆ. ಹೀಗಾದರೆ ಹೇಗೆ ?

ಅಧ್ಯಕ್ಷರು.—ನಿಮಗೆ ತಿಳಿಯಲಿಲ್ಲ ಎಂದರೆ ನಾನು ಒಪ್ಪುವುದಿಲ್ಲ. 'ಹರಿಜನರು ಎನ್ನುತ್ತಾರೆ ; ಅದು ಯಾವ ಡಿಕ್ಷನರಿಯಲ್ಲೂ ಇಲ್ಲ ಎಲ್ಲಿಂದ ಬಂತು' ಎಂದು ಕೇಳುತ್ತಾರೆ. ಅದಕ್ಕೆ ನಾನು ಉತ್ತರ ಹೇಳಿದ್ದೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಅಕ್ವಿಸಿಷನ್ ವಿಚಾರದಲ್ಲಿ ಬಹಳ ವಿಳಂಬವಾಗುತ್ತದೆ ಎಂದು ಹೇಳಿದರು. ಮಾನ್ಯ ಸದಸ್ಯರಿಗೆ ಒಂದು ಅಂಕಿ ಅಂಶ ತಿಳಿಸುತ್ತೇನೆ. ಒಂದನೆ ನವಂಬರ್ 1956 ರಿಂದ ಮೂವತ್ತೊಂದನೆ ಮಾರ್ಚಿ 1958 ರ ವರೆಗೆ 885 ಅಕ್ವಿಸಿಷನ್ ಕೇಸುಗಳನ್ನು ನಡೆಸಿದ್ದೇವೆ. ಅದರಲ್ಲಿ 231 ಫೈನಲ್ ನೋಟಿಫಿಕೇಷನ್ ಆಗಿದೆ. 196 ನೋಟಿಫಿಕೇಷನ್ ಆಗುವುದರಲ್ಲಿದೆ, ಬಾಕಿಯುವುಗಳ ವಿಚಾರದಲ್ಲಿ ನಾರ್ಮಲ್ ಪ್ರೊಸೀಡಿಂಗ್ಸ್ ನಡೆಯುತ್ತಿವೆ. 1955-56 ರಲ್ಲಿ 105 ಕೇಸುಗಳ ವಿಷಯದಲ್ಲಿ ಫೈನಲ್ ನೋಟಿಫಿಕೇಷನ್ ಆಗಿದೆ. ಈ ವರ್ಷದಲ್ಲಿ 427 ಕೇಸುಗಳು ಆಗಿವೆ. ಆದ್ದರಿಂದ ನಿದಾನವಾಗುತ್ತಿಲ್ಲ, ಹಿಂದಿನ ವರ್ಷಗಳಿಗಿಂತ ಡಬ್ಬಲ್, ಟ್ರಿಬ್ಬಲ್ ಆಗಿದೆ ಎಂದು ಅಷ್ಟು ಮಾತ್ರ ತಿಳಿಸುತ್ತೇನೆ.

ಶ್ರೀ ಎ. ಮುನಿಯಪ್ಪ (ಚಿಕ್ಕಬಳ್ಳಾಪುರ—ಅನುಸೂಚಿತ ಜಾತಿಗಳು).—ಆರ್ಡರ್ ಆಗಿದೆ, ಪೊಸಿಷನ್ ಕೊಟ್ಟಿದ್ದೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ ಒಂದೆರಡು ಕಡೆಗಳಲ್ಲಿ ಪೊಸಿಷನ್ ಕೊಟ್ಟಿಲ್ಲ ಎಂಬ ಅಂಶ ಗೊತ್ತಿದೆ, ನಾನಾ ಕಾರಣಗಳಿಂದ ಪೊಸಿಷನ್ ಕೊಟ್ಟಿಲ್ಲ. ನಿಧಾನವಾಗಿದೆ. ಅಲ್ಲಿರತಕ್ಕ ಜಮೀನ್‌ದಾರರ ಪರಾಕ್ರಮದಿಂದಲೋ, ಪಾಳೆಯಗಾರತನದಿಂದಲೋ ಪೊಸಿಷನ್ ಕೊಡುವುದಕ್ಕೆ ಆಗಿಲ್ಲ. ಅದಕ್ಕೆ ತಕ್ಕ ಕಾರ್ಯಕ್ರಮ ಕೈಕೊಂಡಿದ್ದೇವೆ. ಆ ರೀತಿ ಯಾವುದೋ ಒಂದೆರಡು ಕೇಸು ಇದೆ. ಎಲ್ಲಾ ಕಡೆಯಲ್ಲೂ ಆಗಿಲ್ಲ.

ಶ್ರೀ ಎ. ಮುನಿಯಪ್ಪ.—ಹೈಕೋರ್ಟ್ ತೀರ್ಮಾನವಾಗಿ ಸರ್ಕಾರದವರು ಆರ್ಡರ್ ಹೊರಡಿಸಿದ್ದರೂ ಆ ಹಳ್ಳಿಯಲ್ಲಿರತಕ್ಕ ಒಬ್ಬ ಚೇರ್ಮನ್‌ರು ಸರ್ಕಾರದ ಆರ್ಡರ್ ಜಾರಿಗೆ ಕೊಡುತ್ತಿಲ್ಲ ಎಂದ ಮೇಲೆ ಸರ್ಕಾರ ಏಕೆ ಇರಬೇಕೆಂಬುದು ನನ್ನ ಪ್ರಶ್ನೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ದಯವಿಟ್ಟು ಯಾವ ಹಳ್ಳಿಯಲ್ಲಿ ಚೇರ್ಮನ್‌ರು ಆರೀತಿ ಮಾಡಿದ್ದಾರೆ ಎಂಬುದನ್ನು ನನ್ನ ಗಮನಕ್ಕೆ ತಂದರೆ ತಕ್ಕ ಏರ್ಪಾಡು ಮಾಡುತ್ತೇನೆ.

ಶ್ರೀ ಎ. ಮುನಿಯಪ್ಪ.—ಚಿಂತಾಮಣಿ ತಾಲ್ಲೂಕು, ತಿಮ್ಮಸಂದ್ರ.

ಶ್ರೀ ಆರ್. ಚೆನ್ನಿಗರಾಮಯ್ಯ.—ಅದಕ್ಕೆ ತಕ್ಕ ಏರ್ಪಾಡುಮಾಡಿದ್ದೇವೆ, ನನಗೆ ಗೊತ್ತಿದೆ. ಒಂದನೆಯ ನವಂಬರ್ 1955 ರಿಂದ ಒಂದನೆಯ ನವಂಬರ್ 1956 ರವರೆಗೆ ಮುನಿಸಿಪಾಲಿಟಿಗಳಲ್ಲಿ 36 ಅಕ್ವಿಸಿಷನ್ ಕೇಸುಗಳು ಆಗಿದೆ. ಒಂದನೆಯ ನವಂಬರ್ 1956 ರಿಂದ ಒಂದನೆಯ ನವಂಬರ್ 1957ರ ವರೆಗೆ ಆ ವರ್ಷದಲ್ಲಿ 99 ಕೇಸುಗಳು ಆಗಿವೆ. ಆದ್ದರಿಂದ ತಾವೇ ಲೆಕ್ಕಹಾಕಿಕೊಳ್ಳಿ. ಹಿಂದಿನ ವರ್ಷದ ಲೆಕ್ಕ ಕೊಟ್ಟಿದ್ದೇನೆ. ಈಚೆಗೆ ಮಾರ್ಚಿ ಏಪ್ರಿಲ್ ತಿಂಗಳಿನಲ್ಲಿ ಇನ್ನೂ ಜಾಸ್ತಿ ಆಗಿದೆ. ಬಹಳ ವಿಳಂಬವಾಗಿಲ್ಲ, ಆದಷ್ಟು ಬೇಗ ಆಗುತ್ತದೆ ಎಂದಿಷ್ಟು ಮಾತ್ರ ಹೇಳುತ್ತೇನೆ.

ಶ್ರೀಮಾನ್ ಮೊಹಿಸಿನ್ ಅವರು ಹುಬ್ಬಳಿಗೆ ಸಂಬಂಧಪಟ್ಟಂತೆ ವಾಟರ್ ಸಪ್ಲೈ ವಿಚಾರದಲ್ಲಿ ಬಹಳ ಉದಾಸಿನ ಮಾಡಿದ್ದಾರೆ ಎಂದು ಹೇಳಿದರು. ಹಣ ಮಂಜೂರಾಗಿದೆ, ನಾನಾ ಕಾರಣಗಳಿಂದ ಆ ಕೆಲಸ ವಿಳಂಬವಾಗುತ್ತಿದೆ. ಅದೇ ರೀತಿ ಸ್ಲಂಕ್ಲಿಯರೆನ್ಸ್ ಸ್ಕೀಂ ಹುಬ್ಬಳ್ಳಿಗೆ ಮಂಜೂರಾಗಿದೆ, ಎರಡು ಲಕ್ಷ ರೂಪಾಯಿ ಮಂಜೂರಾಗಿದೆ. ಅಲ್ಲದೆ ಟೌನ್ ಇಂಪ್ರೂವ್‌ಮೆಂಟ್ ಗ್ರ್ಯಾಂಟ್ ಎಂದು ಹೇಳಿ 30 ಸಾವಿರ ರೂಪಾಯಿಗಳನ್ನು ಹಿಂದಿನ ವರ್ಷ ಕೊಟ್ಟಿದ್ದೇವೆ. ಶ್ರೀಮಾನ್ ದೀನದಯಾಳು ನಾಯ್ಡು ಅವರು ಸ್ಲಂ ಕ್ಲಿಯರೆನ್ಸ್ ವಿಚಾರದಲ್ಲಿ ಅನುಮಾನ ವ್ಯಕ್ತಪಡಿಸಿದರು. ಅಕ್ಟ್ ಜಾರಿಗೆ ತಂದಿಲ್ಲ ಎಂದು ಹೇಳಿದರು. ಡ್ರಾಫ್ಟ್ ಆಗುತ್ತಾ ಇದೆ. ಈ ಸೆಷನ್ನಿನಲ್ಲೇ ಬಿಲ್ ತರಬೇಕೆಂದು ನಮಗೆ ಆಸೆಯಿದೆ. ಖಂಡಿತವಾಗಿಯೂ ತರುತ್ತೇವೆ. ಪಾಸ್ ಮಾಡಿಯೇ ಮಾಡಬೇಕು, ಅದು ಬಹಳ ಅವಶ್ಯಕವಾದ ವಿಚಾರ.

Sri F. H. MOHSIN (Hubli city).—What is the amount to be given to the Hubli Municipality for slum clearance ?

ಶ್ರೀ ಆರ್. ಚೆನ್ನಿಗರಾಮಯ್ಯ.—ಹುಬ್ಬಳ್ಳಿ ಮುನಿಸಿಪಾಲಿಟಿಗೆ 79,700 ರೂಪಾಯಿ ಈಗಾಗಲೇ ಕೊಟ್ಟಿದೆ. ಅಲ್ಲಿಗೆ ಮಂಜೂರಾಗಿರುವುದು ಮಂಚಗಳ್ಳಿ ಪ್ರಾಜೆಕ್ಟಿಗೆ 59,400 ರೂಪಾಯಿ. ವಿರಾಪುರ ಪ್ರಾಜೆಕ್ಟಿಗೆ ಒಂದು ಲಕ್ಷ ರೂಪಾಯಿ. ಅದರಲ್ಲಿ ಶೇಕಡ 50 ಗ್ರ್ಯಾಂಟು, ಶೇಕಡ 50 ಲೋನು. ಈ ಪ್ರಕಾರ ಹುಬ್ಬಳ್ಳಿ ಮುನಿಸಿಪಾಲಿಟಿಗೆ ಕೊಟ್ಟಿದೆ.

ಲೀಲಾವತಿ ಮಾಗಡಿ ಅವರು ಡಿಸ್ಟ್ರಿಕ್ಟ್ ಮತ್ತು ಲೋಕಲ್ ಬೋರ್ಡ್ ರಸ್ತೆಗಳ ವಿಷಯ ಹೇಳಿದರು. ಆಯಾಯಾ ಡಿಸ್ಟ್ರಿಕ್ಟ್‌ನಲ್ಲಿರತಕ್ಕ ಐ. ವಿ. ಸಿ. ರಸ್ತೆಗಳನ್ನು ಮೇನ್‌ಟೇನ್ ಮಾಡುವುದರಲ್ಲಿ ಬಹಳ ಉದಾಸೀನ ಮಾಡಿದ್ದಾರೆ, ಯಾವುದನ್ನೂ ಸುಲಲಿತವಾಗಿ ಮೇನ್‌ಟೇನ್ ಮಾಡುತ್ತಿಲ್ಲ ಎಂದು ಹೇಳಿದರು. ಒಂದೊಂದಾಗಿ ಡಿಸ್ಟ್ರಿಕ್ ಬೋರ್ಡ್ ರಸ್ತೆಯನ್ನು ಅದು ನಿಜ. ಅದಕ್ಕೆ ಪಿ. ಡಬ್ಲ್ಯು. ಡಿ. ಅವರು ತೆಗೆದುಕೊಂಡಹಾಗೆ ಐ. ವಿ. ಸಿ. ರಸ್ತೆಗಳನ್ನು ಡಿಸ್ಟ್ರಿಕ್ಟು ಬೋರ್ಡಿನವರು ತೆಗೆದುಕೊಳ್ಳುತ್ತಾರೆ.

ಅನೇಕ ಮಾನ್ಯಸದಸ್ಯರು ಹೇಳಿರತಕ್ಕ ಎಲ್ಲಾ ಅಂಶಗಳನ್ನು ನಾವು ಗಮನಕ್ಕೆ ತೆಗೆದುಕೊಂಡಿದ್ದೇವೆ. ಗಮನದಲ್ಲಿಟ್ಟುಕೊಂಡು ಅದನ್ನು ಸರಿಪಡಿಸಲಿಕ್ಕೆ ಸರ್ವ ಪ್ರಯತ್ನ ಪಡುತ್ತೇವೆ.

ಶ್ರೀ ಇ. ನಾರಾಯಣಗೌಡ (ಬಂಗಾರಪೇಟೆ).—ಮಾನ್ಯ ಮಂತ್ರಿಗಳು ಕೆ. ಜಿ. ಎಫ್. ಸ್ಯಾನಿಟರಿ ಬೋರ್ಡಿನ ವಿಚಾರವನ್ನೇನೂ ತಿಳಿಸಲೇ ಇಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯ.—ಈ ವಿಚಾರದಲ್ಲಿ ಶ್ರೀಮಾನ್ ನಾರಾಯಣಗೌಡರಿಗೂ ಮತ್ತು ಶ್ರೀ ಆರೋಗ್ಯಂರವರಿಗೂ ಬಹಳ ಕುತೂಹಲವಿದೆಯೆಂಬ ವಿಚಾರ ಗೊತ್ತಿದೆ. ನಾನೂ ಸಹ ಈಗ ಆ ವಿಚಾರವನ್ನೇ ಹೇಳುತ್ತಿದ್ದೆ. ಆದರೆ ಕಾಲಾವಕಾಶವಿಲ್ಲ. ಈಗ ಅಲ್ಲಿರುವ ಸ್ಯಾನಿಟರಿ ಬೋರ್ಡನ್ನು ತೆಗೆದುಹಾಕಿ ಆ ನಾನ್ ಮ್ಯೈನಿಂಗ್ ಏರಿಯಾಕ್ಕೇ ಒಂದು ಪ್ರತ್ಯೇಕ ಸ್ಯಾನಿಟರಿ ಬೋರ್ಡನ್ನ ಜಾರಿಗೆ ತರತಕ್ಕ ವಿಚಾರದಲ್ಲಿ ಆ ಜಿಲ್ಲೆಯ ಅಧಿಕಾರಿಗಳ ನ್ನೆಲ್ಲಾ ಸಭೆಕರೆದು ಎಲ್ಲ ವಿಚಾರಗಳನ್ನೂ ಪರಿಶೀಲನೆ ನಡೆಸಿದ್ದೇವೆ. ಈ ವಿಚಾರದಲ್ಲಿ ಈಗ ಎಲ್ಲ ಪ್ರದೇಶ ಗಳಿಗೂ ಯೂನಿಫಾರಂ ಆಗಿ ಅಷ್ಟೇ ಆಗತಕ್ಕಂಥ ಒಂದು ಮುನಿಸಿಪಲ್ ಆಕ್ಟನ್ನ ಜಾರಿಗೆ ತರತಕ್ಕ ಪ್ರಯತ್ನದಲ್ಲಿದ್ದೇವೆ. ಆ ಬಗ್ಗೆ ಈಗಾಗಲೇ ಒಂದು ಮಸೂದೆ ತಯಾರಾಗಿದೆ. ಅದು ಸದ್ಯದಲ್ಲೇ ಈ ಸಭೆಯ ಮುಂದಿರತಕ್ಕ ವಿಚಾರ ಎಲ್ಲ ಮಾನ್ಯ ಸದಸ್ಯ ರಿಗೂ ಈಗಾಗಲೇ ಗೊತ್ತಿದೆ. ಈ ಒಂದು ಹೊಸ ದಾಗಿ ಜಾರಿಗೆ ತರಬೇಕೆಂದಿರುವ ಮುನಿಸಿಪಲ್ ಆಕ್ಟ್ ಇನ್ನು ಮುಂದಕ್ಕೆ ಕೆ. ಜಿ. ಎಫ್. ನಾನ್ ಮ್ಯೈನಿಂಗ್ ಏರಿಯಾಕ್ಕೂ ಜಾರಿಗೆ ಕೊಡಬೇಕೆಂದಿ ದ್ದೇವೆ. ಇದರ ಬಗ್ಗೆ ಯಾರೂ ಸಂಶಯಪಡಬೇಕಾ ಗಿಲ್ಲ. ಮಾನ್ಯ ಸದಸ್ಯರು ಕೊಟ್ಟಿರುವ ಉತ್ತಮ ಸಲಹೆಗಳನ್ನೆಲ್ಲ ಸರ್ಕಾರದವರು ಪರಿಶೀಲನೆ ಮಾಡು ತ್ತಾರೆಂದು ಭರವಸೆ ಕೊಡುತ್ತೇನೆ.

ಶ್ರೀಮತಿ ಲೀಲಾವತಿ ವೆಂಕಟೇಶ ಮಾಗಡಿ (ಶಿರಹಟ್ಟಿ).—ತಾವು ಈ ಸ್ಕಾಲರ್‌ಷಿಪ್‌ಗಳ ವಿಚಾರ ವನ್ನೇನೂ ತಿಳಿಸಲೇ ಇಲ್ಲವಲ್ಲ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಆರ್ಥಿಕ ಸಚಿವ ರಾದ ಶ್ರೀ ಮರಿಯಪ್ಪನವರು ಈ ಪ್ರಶ್ನೆಗೆ ಉತ್ತರ ಕೊಡಬೇಕಾಗಿದೆ. ಆದರೆ ಈ ಬಗ್ಗೆ ಹೆಚ್ಚಿನ ವಿವರ ಗಳನ್ನೆಲ್ಲಾ ಡಿಮ್ಯಾಂಡ್‌ಗಳ ಬಗ್ಗೆ ಚರ್ಚೆನಡೆಯು ವಾಗ ಹೇಳಲಾಗುತ್ತದೆ.

ಶ್ರೀ ಬಿ. ರಾಚಯ್ಯ (ಚಾಮರಾಜನಗರ—ಅನು ಸೂಚಿತ ಜಾತಿಗಳು).—ಮುನಿಸಿಪಾಲಿಟಿಗಳ ವಿಚಾರ ದಲ್ಲಿ ಒಂದು ಕ್ಲಾರಿಫಿಕೇಷನ್......

[*Minister for Education rose.*]

ಅಧ್ಯಕ್ಷರು.—ಈ ರೀತಿ ಎಲ್ಲ ಮಾನ್ಯ ಸದಸ್ಯರೂ ಪ್ರಶ್ನೆ ಹಾಕಲು ಕಾಲಾವಕಾಶವಿಲ್ಲ. ನೀವು ಈ ವಿಚಾರಗಳನ್ನೆಲ್ಲ ಮಂತ್ರಿಗಳ ಛೇಂಬರಿನಲ್ಲಿ ತಿಳಿಯ ಬಹುದು. ತಾವು ಇಲ್ಲಿಗೆ ಸ್ವಲ್ಪ ಹೊತ್ತಿನ ಹಿಂದೆ ಸಭೆಯಲ್ಲಿರಲಿಲ್ಲ. ಏನೋ ಒಂದೆರಡು ಪ್ರಶ್ನೆಗಳಿದ್ದರೆ ಅದಕ್ಕೆ ಅವಕಾಶಕೊಡಬಹುದು. ಆದರೆ ಈಗ ಹೀಗೆ ಒಬ್ಬೊಬ್ಬರಿಗೆ ಪ್ರಶ್ನೆ ಕೇಳಲು ಅವಕಾಶ ಕೊಟ್ಟರೆ ಅನೇಕ ಮಾನ್ಯ ಸದಸ್ಯರು ನಮಗೂ ಅವಕಾಶ ಕೊಡಿ ಎಂದು ಕೇಳುತ್ತಾರೆ. ಆದರೆ ಅಷ್ಟಕ್ಕೆಲ್ಲ ಈಗ ಕಾಲಾವಕಾಶವಿಲ್ಲ; ವೇಳೆಯಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಏನಾದರೂ ಅಂಥ ವಿಚಾರ ಗಳಿದ್ದರೆ ಅದನ್ನು ಮಂತ್ರಿಗಳ ಛೇಂಬರಿನಲ್ಲಿ ತಿಳಿಯುವಂತೆ ತೀರ್ಮಾನ ಹೇಳಿದ್ದಾಗಿದೆ. ಹಾಗೆ ತೀರ್ಮಾನವಾದ ಮೇಲೂ ಈ ರೀತಿ ಮಾಡುತ್ತಿರು ವುದು ಸರಿಯಲ್ಲ.

ಶ್ರೀ ಬಿ. ರಾಚಯ್ಯ.—ನಾನೊಬ್ಬನೆ ಕೇಳುವುದು. ಒಂದೇ ಒಂದು ವಿಚಾರವಿದೆ......

ಅಧ್ಯಕ್ಷರು.—ಹಾಗಾದರೆ ಮತ್ತ್ಯಾರೂ ಮಾತ ನಾಡಗೊಡಿಸುವುದಿಲ್ಲ ಎಂಬ ಬಗ್ಗೆ ಈಗ ನೀವು ಜವಾ ಬ್ದಾರಿ ಹೊರುತ್ತೀರಾ ?

ಶ್ರೀ ಎ. ಮುನಿಯಪ್ಪ.—ಅಂಥ ಪ್ರಾಮುಖ್ಯವಾದ ಸಂಗತಿಗಳೇನಾದರೂ ಇದ್ದರೆ ಕಡೆಯಲ್ಲಿ ಅವುಗಳನ್ನು ಕೇಳಬಹುದೆಂದು ಮಾನ್ಯ ಮಂತ್ರಿಗಳೇ ತೀರ್ಮಾನ ಕೊಟ್ಟಿದ್ದರೂ ತಾವು ಅವಕಾಶವನ್ನೇಕೆ ಕೊಡ ಬಾರದು ?

ಅಧ್ಯಕ್ಷರು.—ಅಂಥ ಪ್ರಾಮುಖ್ಯ ಸಮಾಚಾರಗಳಿ ದ್ದರೆ ಅವಕಾಶಕೊಡೋಣ.

ಶ್ರೀ ಬಿ. ರಾಚಯ್ಯ.—ಎಲ್ಲ ಮುನಿಸಿಪಾಲಿಟಿ ಗಳಿಗೂ ನೀರನ್ನು ಒದಗಿಸಕ್ಕ ಬಗ್ಗೆ ಸರ್ಕಾರದವರು ಈ ಮುನಿಸಿಪಾಲಿಟಿಗಳಿಗೆ ಸಾಲ ಮಂಜೂರುಮಾಡು ತ್ತೇವೆಂದು ಹೇಳಿದ್ದರು. ಆದರೆ ಇತ್ತೀಚೆಗೆ ಆ ಸಾಲ ಕೊಡತಕ್ಕ ರೂಲ್ಸನ್ನ ರಿವೈಸ್‌ಮಾಡಿ ಬೇರೆ ರೂಪ ದಲ್ಲಿ ಸಾಲ ಕೊಡುತ್ತಿದ್ದಾರೆ. ಈ ಒಂದು ಬದಲಾವಣೆಯಿಂದ ಅನೇಕ ಮುನಿಸಿಪಾಲಿಟಿಗಳು ನೀರುಸರಬರಾಯಿ ಬಗ್ಗೆ ಕಾರ್ಯ ಪ್ರಾರಂಭಿಸಿ ಅರ್ಧಂ ಬರ್ಧ ಕೆಲಸಮಾಡಿ ಹಣವಿಲ್ಲದೆ ಈ ಕಾರ್ಯಗಳು ಹಾಗೇ ನಿಂತುಹೋಗಿರುತ್ತವೆ. ಈ ವಿಚಾರದಲ್ಲಿ ಸರ್ಕಾರದವರ ಅಭಿಪ್ರಾಯವೇನೆಂಬುದನ್ನು ತಿಳಿಯ ಬೇಕಾಗಿದೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಅವರು ಈ ವಿಚಾರವನ್ನು ಏಕೋ ಬಹಳ ವೇಗಂ ಆಗಿ ಕೇಳುತ್ತಿ ದ್ದಾರೆ. ಆದರೆ ಇದರಲ್ಲಿರತಕ್ಕ ಸ್ವಾರಸ್ಯವಿಷ್ಟೇ. ಈ ಹಿಂದೆ ಸರ್ಕಾರದವರು ಚಾಮರಾಜನಗರ ಮುನಿಸಿ ಪ್ಯಾಲಿಟಿಗೆ ನೀರಿನ ಸರಬರಾಯಿ ಬಗ್ಗೆ 12 ಲಕ್ಷ ರೂಪಾಯಿಗಳನ್ನು ಮಂಜೂರುಮಾಡಿ ಮೂರು ಲಕ್ಷ ರೂಪಾಯಿಗಳನ್ನಾಗಲೇ ಕೊಟ್ಟಿದ್ದಾರೆ. ಆದರೆ ಅವರಿಗೀಗ ಫರ್ದರ್‌ಲೋನ್ ಬೇಕಾಗಿದೆ. ಅದಕ್ಕೆ ಸಾಲ ತೀರಿಸಲು ಇರತಕ್ಕ ವರಮಾನ ಮತ್ತು ಸೆಕ್ಯೂರಿಟಿ ಕೇಳಿದ್ದೇವೆ. ಆ ವಿಚಾರದಲ್ಲಿ ಅವರಿಂದ ಉತ್ತರ ಬಂದಕೂಡಲೆ ಆದಷ್ಟು ಜಾಗ್ರತೆ ಆ ವಿಚಾರವನ್ನು ಫೈಸಲ್ಮಾಡುತ್ತೇವೆ.

ಶ್ರೀ ಎ. ಮುನಿಯಪ್ಪ.—ಹರಿಜನರ ಅಸ್ಪೃಶ್ಯತೆ ಯನ್ನು ತೊಡೆದುಹಾಕಲು ಏನು ಯೋಜನೆಮಾಡಿ ದ್ದೀರಿ ? ಎಲ್ಲೆಲ್ಲಿ ಪ್ರಚಾರ ನಡೆಸಿದ್ದೀರಿ ? ಯಾವ ತರಹೆಯಲ್ಲಿ ಅಸ್ಪೃಶ್ಯತೆಯನ್ನು ನಿವಾ ರಣೆ ಮಾಡಬೇಕೆಂದು ಆಲೋಚಿಸಿದ್ದೀರಿ ? ಹರಿಜನರ ಅಭಿವೃದ್ಧಿ ಬಗ್ಗೆ ನೇಮಿಸಿರತಕ್ಕ ಸ್ಪೆಷಲ್ ಆಫೀಸರಿಗೆ ಕೆಲವು ಹೆಚ್ಚಿನ ಅಧಿಕಾರಗಳನ್ನೇನಾದರೂ ಕೊಟ್ಟಿ ದ್ದೀರಾ ? ಏನು ಕ್ರಮ ಕೈಗೊಂಡಿದ್ದಾರೆಂಬುದನ್ನು ತಿಳಿಸಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು.—ನೀವು ಕೇಳುತ್ತಿರುವುದು ಯಾವ ತರಹೆ ಕ್ಲಾರಿಫಿಕೇಷನ್ ? ಅಥವಾ ನೀವೇನಾದರೂ ಈಗ ಮತ್ತೊಂದು ಭಾಷಣವನ್ನೇ ಮಾಡಲು ಹೊರಟ ಹಾಗೆ ಕಾಣುತ್ತಿದೆ.

ಶ್ರೀ ಎ. ಮುನಿಯಪ್ಪ.—ಹರಿಜನರಿಗೆ ಮನೆ, ಇನ್ನೂ ಅನೇಕ ವಿಚಾರಗಳ ಬಗ್ಗೆ ಸರ್ಕಾರ ಜರೂರು ಕಾರ್ಯ ಕ್ರಮಗಳನ್ನು ಕೈಗೊಳ್ಳಲು ಏನು ಮಾಡಿದ್ದಾರೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಕೆಲವು ವಾರಪತ್ರಿ ಕೆಗಳಿಗೆ ಧನಸಹಾಯ ನೀಡಿದ್ದೇವೆ. ಈ ದಿವಸ ಹರಿ ಜನೋದ್ಧಾರದ ಬಗ್ಗೆ ಸರ್ಕಾರ ಏನೇನು ಆಜ್ಞೆ ಗಳನ್ನು ಹೊರಡಿಸಿದೆ, ಯಾವ ಯಾವ ಮಾದರಿಯಲ್ಲಿ ಪ್ರಚಾರ ಕಾರ್ಯ ನಡೆಸುತ್ತಿದೆ ಎನ್ನತಕ್ಕ ವಿಚಾರಗಳ ನ್ನೆಲ್ಲ ಪಾಂಚಜನ್ಯ ಎನ್ನತಕ್ಕ ವಾರಪತ್ರಿಕೆಯಲ್ಲೂ ಮತ್ತು ಇನ್ನೂ ಕೆಲವು ದಿನಪತ್ರಿಕೆಗಳಲ್ಲೂ ತಾವು ನೋಡಿರಬೇಕು. ಈ ಅಸ್ಪೃಶ್ಯತೆ ನಿವಾರಣೆಗಾಗಿ ಪ್ರಚಾರ, ಕಾನ್ಫರೆನ್ಸ್ ಹೀಗೆಲ್ಲ ಏನೇನು ಮಾಡ ಬೇಕೋ ಅದನ್ನೆಲ್ಲಾ ಮಾಡುತ್ತಿದ್ದೇವೆ. ಆದರೆ

(ಶ್ರೀ ಆರ್. ಚೆನ್ನಿಗರಾಮಯ್ಯ)

ಬರೀ ಪ್ರಚಾರ ಒಂದರಿಂದಲೇ ಅಸ್ಪೃಶ್ಯತೆ ಹೋಗುವುದಿಲ್ಲ. ಜನರ ಮನಸ್ಸು ಪರಿವರ್ತನೆ ಆಗಬೇಕು. ಈ ಜಾಡ್ಯ ಸಾವಿರಾರು ವರ್ಷದಿಂದ ಬೆಳೆದುಕೊಂಡು ಬಂದಿದೆ. ಈ ಬಗ್ಗೆ ಕಾರ್ಮಿಕಹಾಸ್ಟಲು, ಕಾರ್ಮಿಕ ಕಾಲೋನಿ ಇತ್ಯಾದಿಗಳನ್ನು ಮಾಡಿ ಇದನ್ನು ನಿರ್ಮೂಲ ಮಾಡಬೇಕು. ಅದಕ್ಕೆ ತಕ್ಕ ಪ್ರಯತ್ನ ನಡೆಸಿದ್ದೇವೆ. ಆ ಒಂದು ಮಾರ್ಗ ವಿನಾ ಹೀಗೆಲ್ಲ ಕಾನ್ಫರೆನ್ಸ್ ನಿಂದಲಾಗಲಿ ಅಥವಾ ಪ್ರಚಾರದಿಂದಲಾಗಲಿ ಇದು ಹೋಗತಕ್ಕದ್ದಲ್ಲ.

ಶ್ರೀ ಡಿ. ಟಿ. ಸೀತಾರಾಮರಾವ್.—ಭದ್ರಾವತಿ ನೀರಿನ ವ್ಯವಸ್ಥೆ ಬಗ್ಗೆ ಏನು ಮಾಡುತ್ತೀರಿ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಎಸ್. ಸುಬ್ಬಯ್ಯನಾಯ್ಕ (ಪುತ್ತೂರು).—ಷೆಡ್ಯೂಲ್ಡ್ ಟ್ರೈಬ್ಸ್ ವಿಚಾರ ಭಾರತ ಘಟನಾವಳಿಯಲ್ಲಿ ಅಡಕಗಿದ್ದರೂ ಈ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಮಾತನ್ನಾದರೂ ಆಡಿಲ್ಲ. ರಾಜ್ಯಾಂಗದಲ್ಲಿ ಅವಕಾಶ ವಿದ್ದರೂ ರಾಜ್ಯ ಸರ್ಕಾರ ಇದರ ಕಡೆಗೆ ಗಮನ ಕೊಡುತ್ತಿಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯ.—ಷೆಡ್ಯೂಲ್ಡ್ ಟ್ರೈಬ್ಸ್, ಹಿಲ್‌ಟ್ರೈಬ್ಸ್ ವಿಚಾರದಲ್ಲಿ ಸೂಕ್ತ ಸಹಾಯ ನೀಡಲು ಕೇಂದ್ರ ಸರ್ಕಾರದವರೇ ಸಲಹೆ ನೀಡಿದ್ದಾರೆ. ಅದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಈಗ ತಿಳಿಸಲು ಕಾಲಾವಕಾಶವಿಲ್ಲವದ್ದರಿಂದ ಡಿಮ್ಯಾಂಡುಗಳ ಬಗ್ಗೆ ಚರ್ಚೆ ನಡೆಯುವಾಗ ತಿಳಿಸುತ್ತೇನೆ.

(Sri L. B. BIRJE in Marathi)

ಅಧ್ಯಕ್ಷರು.—ಅವರು ಹೇಳಿದ್ದು ಬ್ಯಾಕ್‌ವರ್ಡ್ ಸ್ಕಾಲರ್‌ಷಿಪ್‌ನ್ನು ಈವರ್ಷ ಮಂಜೂರ್ ಮಾಡಿದ್ದರೂ ಹಣವನ್ನಿನ್ನೂ ಕೊಡದಿರಲು ಕಾರಣವೇನೆಂದು ಕೇಳುತ್ತಿದ್ದಾರೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಆ ವಿಚಾರ ಗೊತ್ತಿಲ್ಲ. ವಿಚಾರ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—Centrally Sponsered Scheme ಎಂದು ಹೇಳಿ ಇಂಡಿಯಾ ಸರ್ಕಾರದವರು 14 ಲಕ್ಷದ 27 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. Central Assistance ಇದೆ ಎಂದು ಹೇಳಿ 16 ಲಕ್ಷ ಚಿಲ್ಲರೆ ನಮ್ಮ ಸರ್ಕಾರದವರು ಕೊಟ್ಟಿದ್ದಾರೆ. ಹಳೆಯ ಮೈಸೂರಿದ್ದಾಗಲೇ 19 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದರು. ಈಗ Area ದ್ವಿಗುಣವಾಗಿರುವಾಗ ನ್ಯಾಯವಾಗಿ ಅಲ್ಲಿನ ಗ್ರಾಂಟ್ ಕೂಡ ದ್ವಿಗುಣವಾಗಬೇಕಾಗಿತ್ತು. ಅಂಥದರಲ್ಲಿ ಈಗ ಮನೆ ಕಟ್ಟುವುದಕ್ಕೆ 11 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ವಿದ್ಯಾಭ್ಯಾಸ ತೆಗೆದುಕೊಂಡರೆ ಹೋದಸಾರಿ ನಾಲ್ಕು ಲಕ್ಷದ 34 ಸಾವಿರ ಕೊಟ್ಟಿದ್ದಾರೆ. ಈ ಸಾರಿ ಎರಡು ಲಕ್ಷದ 50 ಸಾವಿರ ಕೊಟ್ಟಿದೆ. ಇದರಲ್ಲಿ ಒಂದು ಲಕ್ಷದ 25 ಸಾವಿರ ಕೇಂದ್ರದಿಂದ ಬಂದ ಸಹಾಯ ದ್ರವ್ಯವಾಗಿದೆ. ಹೀಗಾಗಿ ಖಾಲಿ 16 ಲಕ್ಷ ರೂಪಾಯಿಗಳನ್ನು ನಮ್ಮ ಸರ್ಕಾರದವರು ಈಗಲೂ ಕೊಡುತ್ತಿಲ್ಲವಲ್ಲಾ ಏಕೆ? ಹರಿಜನರ ಅಭಿವೃದ್ಧಿ ಈಗಾಗಲೇ ಜಾಸ್ತಿಯಾಗಿದೆಯೆಂದು ತಿಳಿದುಕೊಳ್ಳೋಣವೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಏಕೆ ಕೇಂದ್ರ ಸರ್ಕಾರ, ಪ್ರಾಂತ್ಯ ಸರ್ಕಾರ ಎಂದು ಪ್ರತ್ಯೇಕ ಮಾಡುತ್ತೀರಿ? 22 ಲಕ್ಷ ರೂಪಾಯಿಗಳು ಸಾಲದು, ಇನ್ನೂ ಕೂಡಿ ಎಂದು ಕೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಹೋದ ವರ್ಷ 19 ಲಕ್ಷ ರೂಪಾಯಿಗಳನ್ನು ಕೊಟ್ಟಿರುವಾಗ ಈ ವರ್ಷ 11 ಲಕ್ಷ ರೂಪಾಯಿಗಳನ್ನು ಮಾತ್ರ ತಾವು ಹರಿಜನರ ಮನೆಗಳ ಬಗ್ಗೆ ಕೊಟ್ಟಿದ್ದೀರಿ. ಹಗಲೆಲ್ಲಾ ಪದೇ ಪದೇ ಕೇಳಬೇಕೆಂದಿದ್ದೀರಾ? ಕೇಳಿ ಕೇಳಿ ನಮಗೆ ಸಾಕಾಗಿ, ಸೋತಿದ್ದೇವೆ. ನೀವು ಪದೇಪದೇ ಇದೇ ಉತ್ತರ ಕೊಡುತ್ತಿದ್ದೀರಿ. ಕೇಂದ್ರ ಸರ್ಕಾರದವರು ಕೊಟ್ಟಿದ್ದೂ ನಮ್ಮದೇ ಎಂದು ಹೇಳುವುದು ಯಾವ ನ್ಯಾಯ?

ಶ್ರೀ ಎ. ವೆಂಕಟಪ್ಪ, (ವಿದ್ಯಾ ಇಲಾಖೆಯ ಸಚಿವರು).—ಮಾನ್ಯ ಅಧ್ಯಕ್ಷರೆ, ನಾನು ಈ ಚರ್ಚೆ ನಡೆಯುತ್ತಿದ್ದ ಕಾಲದಲ್ಲಿ, ಬಹಳ ಜನ ಮಾತನಾಡುವಾಗ, ಈ ಸಭೆಯಲ್ಲಿರಲು ಅವಕಾಶವಿಲ್ಲದೆ ಹೋದದ್ದರಿಂದ ಬಹಳಮಟ್ಟಿಗೆ ಅವರು ಹೇಳಿರತಕ್ಕ ಎಲ್ಲ ವಿಷಯಗಳನ್ನೂ ಪೂರ್ಣವಾಗಿ ಗ್ರಹಿಸಿ ಉತ್ತರ ಹೇಳುವುದಕ್ಕೆ ಪ್ರಯತ್ನಪಡುತ್ತೇನೆಂದು ಹೇಳಲಾರೆ. ಕೆಲವು ವಿಷಯಗಳನ್ನು ಗುರುತುಹಾಕಿಕೊಂಡು ನನಗೆ ಕೊಟ್ಟಿದ್ದಾರೆ. ಅವುಗಳ ವಿಷಯದಲ್ಲಿ ಮಾತ್ರ ಉತ್ತರ ಹೇಳುವುದಕ್ಕೆ ಪ್ರಯತ್ನಪಡುತ್ತೇನೆ. ಅಲ್ಲದೆ, ಹೆಚ್ಚಿಗೆ ಹೇಳಬೇಕಾದ ಅಗತ್ಯವೂ ಇಲ್ಲವೆಂದು ನಂಬಿದ್ದೇನೆ. ಇದಕ್ಕಾಗಿ ಈ ಸಭಾ ಸದಸ್ಯರು ನನ್ನನ್ನು ಕ್ಷಮಿಸುತ್ತಾರೆಂದು ನಂಬಿದ್ದೇನೆ.

ಮೊದಲನೆಯ ದಿವಸ ಭಾಷಣಮಾಡಿದ ನನ್ನ ಮಿತ್ರರಾದ ಮಲ್ಲಾರಾಧ್ಯರು ವಿದ್ಯಾಭ್ಯಾಸದ ವಿಷಯದಲ್ಲಿ ಏನಾದರೂ ಹೇಳಿದ್ದರೆ ಅದನ್ನು ಅವರು ಯೋಚನೆ ಮಾಡಿ ಸರಿಯಾದ ರೀತಿಯಲ್ಲೇ ಹೇಳಿದ್ದಾರೆಂದು ನಾನು ಭಾವಿಸುತ್ತೇನೆ. ಅವರ ಮಾತಿನಲ್ಲಿ ನನಗೆ ಗೌರವವುಂಟು.

ಮೊದಲನೆಯದಾಗಿ ಅವರು ಹೇಳಿದ್ದಾರೆ, ಉಪಾಧ್ಯಾಯರುಗಳಿಗೆ, ಅದರಲ್ಲೂ ಖಾಸಗಿ ಸಂಸ್ಥೆಗಳ ಉಪಾಧ್ಯಾಯರುಗಳಿಗೆ ಸಂಬಳಸಾರಿಗೆಗಳನ್ನು ಹೆಚ್ಚುಮಾಡಿರತಕ್ಕ ವಿಷಯದಲ್ಲಿ ಸರ್ಕಾರದವರು ಅನುಸರಿಸಿರುವಂಥ ನೀತಿ ಸ್ವಲ್ಪವೂ ಸರಿಯಿಲ್ಲ, ಸರ್ಕಾರದವರು ಕಡ್ಡಾಯವಾಗಿ, ಸರ್ಕಾರದ ಅಧೀನದಲ್ಲಿರತಕ್ಕ ಉಪಾಧ್ಯಾಯರುಗಳಿಗೆ ಏನು ಸಂಬಳವನ್ನು ಕೊಡುತ್ತಿದ್ದಾರೋ ಅದೇ ರೀತಿ ಇವರ ವಿಷಯದಲ್ಲೂ ಕೊಡಬೇಕೆಂದು ಒತ್ತಾಯಮಾಡಬೇಕೆಂದು ಹೇಳಿದ್ದಾರೆ. ಸರ್ಕಾರ ಈ ವಿಷಯವನ್ನು ಪರ್ಯಾಲೋಚನೆಮಾಡಿ, ಇದರಿಂದ ಏನು ಕಷ್ಟವಾಗಬಹುದೆಂದು ಮನಸ್ಸಿನಲ್ಲಿಟ್ಟುಕೊಂಡು, ಶ್ರೀ ಮಲ್ಲಾರಾಧ್ಯರು ಏನು ಅನುಮಾನಪಟ್ಟುಕೊಂಡಿದ್ದಾರೋ ಆ ಅನುಮಾನಕ್ಕೆ ಅವಕಾಶವಿಲ್ಲದಂತೆ ಮಾಡಿದೆಯೆಂದು ಹೇಳಬಯಸುತ್ತೇನೆ. 68 ಮುನಿಸಿಪಲ್ ಹೈಸ್ಕೂಲುಗಳ ಪೈಕಿ 65 ಮುನಿಸಿಪಲ್ ಹೈಸ್ಕೂಲುಗಳವರು ಸರ್ಕಾರದವರು ನಿಯಾಮಕಮಾಡಿರುವ ರೀತಿಯನ್ನೇ ಅನುಸರಿಸಿ ಸಂಬಳಸಾರಿಗೆಗಳನ್ನು ಕೊಡುವುದಕ್ಕೆ ಏರ್ಪಾಡುಮಾಡಿದ್ದಾರೆ. 77 ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲುಗಳ ಪೈಕಿ 76 ಹೈಸ್ಕೂಲುಗಳವರು ಇದನ್ನು ಒಪ್ಪಿ, ಅದೇ ಪ್ರಕಾರ ಆಚರಣೆಗೆ ಈಗಾಗಲೇ ತಂದಿದ್ದಾರೆ. 146 ಖಾಸಗೀ ಸಂಸ್ಥೆಗಳಲ್ಲಿ 140 ಖಾಸಗಿ ಸಂಸ್ಥೆಗಳವರು ಇದನ್ನು ಒಪ್ಪಿಕೊಂಡು, ಅದರಂತೆ ಜಾರಿಗೆ ತಂದು, ಅದರಂತೆ ಹಣವನ್ನೂ ಕೂಡ ತೆಗೆದುಕೊಂಡಿದ್ದಾರೆ. ಆದ್ದರಿಂದ ಸ್ವಲ್ಪ ಹೆಚ್ಚು

ಕಡಮೆ ಎಲ್ಲವೂ ಆಗಿ ಕೆಲವು ಮಾತ್ರ ಉಳಿದಿದೆ. ಅವರು ಕೂಡ ಈ ನಿಯಮಕ್ಕೆ ಒಪ್ಪುತ್ತಾರೆ. ಆದ್ದರಿಂದ ಕಡ್ಡಾಯಮಾಡಬೇಕಾದ ಅವಶ್ಯಕತೆ ಬರುವುದಿಲ್ಲವೆಂದು ನಾನು ವಿಜ್ಞಾಪನೆ ಮಾಡಿಕೊಳ್ಳಬಯಸುತ್ತೇನೆ.

ಆಟಪಾಟಗಳಿಗೆ ಹಣವನ್ನು ಒದಗಿಸುತ್ತಿಲ್ಲವೆಂದು ಒಂದು ಮಾತು ಹೇಳಿದರು. ಇದಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆಯೆಂದು ಅವರ ಗಮನಕ್ಕೆ ತರಬಯಸುತ್ತೇನೆ. ಅವಶ್ಯಕತೆಯಿದ್ದರೆ ಬಡ್ಜೆಟ್ಟಿನ 429ನೆಯ ಪುಟವನ್ನು ನೋಡಬಹುದು.

ಮತ್ತೊಂದು ಸಲಹೆಯನ್ನು ಅವರು ಮಾಡಿದ್ದಾರೆ. ಎಲ್ಲಾ ಸ್ಕೂಲುಗಳಲ್ಲೂ sports fund ಖರ್ಚಾಗದೆ accumulate ಆಗಿದೆ, ಅದನ್ನು sportsಗೆ ವಿನಿಯೋಗ ಮಾಡಬೇಕೆಂದು ಹೇಳಿದ್ದಾರೆ. ಈ ಬಗ್ಗೆ ಶ್ರೀ ಮಲ್ಲಾರಾಧ್ಯರು ಸೂಚನೆ ಕೊಡುವುದಕ್ಕೆ ಮುಂಚೆಯೇ ನಾನು ನವೆಂಬರ್ ತಿಂಗಳಿನಲ್ಲಿ ಕೆಲವು ಸ್ಕೂಲುಗಳನ್ನು ನೋಡಿದಾಗ, ಹೆಚ್ಚು ಹಣ ಈ ಬಾಬಿನಲ್ಲಿ ಉಳಿದಿದ್ದನ್ನು ನೋಡಿ ಅದನ್ನು ಕೊಡುವುದಕ್ಕೆ ಏನು ಏರ್ಪಾಡುಮಾಡಬೇಕೋ ಅದನ್ನು ಮಾಡಿದ್ದಲ್ಲದೆ, ಒಂದು ಸಾವಿರ ರೂಪಾಯಿಗಿಂತ ಹೆಚ್ಚಿಗೆ ಇದ್ದಂಥ ಸ್ಕೂಲುಗಳ ಪಟ್ಟಿಯನ್ನು ತರಿಸಿಕೊಂಡು ಅದನ್ನು ವಿದ್ಯಾರ್ಥಿಗಳಿಗೆ ವಿನಿಯೋಗಮಾಡಬೇಕೆಂದು ಅಧಿಕಾರಿಗಳಿಗೆ ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ಆದ್ದರಿಂದ ಶ್ರೀ ಮಲ್ಲಾರಾಧ್ಯರ ಸೂಚನೆಯನ್ನು ಅಂಗೀಕರಿಸಿದ್ದೇವೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಆಮೇಲೆ ಉಪಾಧ್ಯಾಯರುಗಳಿಗೆ 1958ನೆಯ ವರ್ಷದವರೆಗೂ ಕೆಲಸದಲ್ಲಿರುವುದಕ್ಕೆ ಅವಕಾಶ ಕೊಡಬೇಕೆಂದು ಹೇಳಿ ಹಿಂದೆ ಆರ್ಡರ್‌ಮಾಡಿದ್ದರೂ ಈಗ 55 ವರ್ಷಕ್ಕೆ ರಿಟೈರ್ ಆಗುವಹಾಗೆ ಮಾಡಿರುವುದು ಸರಿಯಲ್ಲವೆಂದು ಹೇಳಿದ್ದಾರೆ, ಹಿಂದೆ ಯಾವ ಪರಿಸ್ಥಿತಿಯಿತ್ತೋ ಆ ಪರಿಸ್ಥಿತಿ ಈಗ ಬದಲಾವಣೆಯಾಗಿದೆ. ಆಗ ಸಾಕಷ್ಟು ತರಪೇತಾದ ಉಪಾಧ್ಯಾಯರುಗಳು ಸಿಕ್ಕುವುದಿಲ್ಲವೆಂದು ಹೇಳಿ, ತರಪೇತಾಗಿರುವ ಹಾಗೂ ಶಕ್ತಿ ಮತ್ತು ಪಾಠ ಹೇಳಿಕೊಡುವ ಯೋಗ್ಯತೆಯನ್ನು ಹೊಂದಿರುವ ಉಪಾಧ್ಯಾಯರುಗಳಿಗೆ ಮೂರು ವರ್ಷಗಳ extension ಕೊಡಬಹುದೆಂದು ಆಗ ಮಾಡಿತ್ತು. ಇದಾದಮೇಲೆ ಈಚೆಗೆ ಎರಡು ಕಷ್ಟ ಬಂದಿವೆ. ಈಗ ತರಪೇತಾದ ಜನ ಹೆಚ್ಚು ಮಂದಿ ಸಿಕ್ಕುತ್ತಿದ್ದಾರೆ. ಅದರಲ್ಲೂ ಹೊಸ ಮೈಸೂರಾದ ಮೇಲೆ ಅನೇಕರು ತರಪೇತಾಗಿ ನೇಮಕವಾಗದಿರುವವರು, ಅದರಲ್ಲೂ ಮಂಗಳೂರು ಒಂದರಲ್ಲೇ 1,200 ಜನ ಸಿಕ್ಕುತ್ತಿದ್ದಾರೆ. ಅವರುಗಳನ್ನು ಇನ್ನೂ ನೇಮಕಮಾಡುವುದಕ್ಕಾಗಿಲ್ಲ. ಉಪಾಧ್ಯಾಯರುಗಳಿಗೆ ತರಪೇತು ಮಾಡುವುದಕ್ಕೆ ಹೆಚ್ಚಿನ ಅವಕಾಶವನ್ನು ಕಲ್ಪನೆಮಾಡಿಕೊಳ್ಳಬೇಕೆಂದು ಹೇಳಿ 54 ಟ್ರೈನಿಂಗ್ ಸಂಸ್ಥೆಗಳನ್ನು ಬೇರೆ ಏರ್ಪಾಡುಮಾಡಿದ್ದೇವೆ. ಈ ವರ್ಷ ಇನ್ನೂ ಎರಡು ಸಂಸ್ಥೆಗಳನ್ನು ಏರ್ಪಾಡುಮಾಡಬೇಕೆಂದು ಮಾಡಿದ್ದೇವೆ. ಆದ್ದರಿಂದ ಈಗ ಸಾಕಷ್ಟು ಜನರನ್ನು ತರಪೇತುಮಾಡುವುದಕ್ಕೆ ಅವಕಾಶವಿರುವುದರಿಂದ, ಮತ್ತು ವಿದ್ಯಾವಂತರಾದ ಯುವಕರು ತಮಗೇನು ಅವಕಾಶಮಾಡಿದ್ದೀರಿ ಎಂದು ಕೇಳುವ ಪರಿಸ್ಥಿತಿಯಿರುವುದರಿಂದ ಮೊದಲು ಸಾದರಾದ ಆರ್ಡರನ್ನು ಸ್ವಲ್ಪ ಬದಲಾವಣೆಮಾಡಿದೆಯೆಂದು ವಿಜ್ಞಾಪನೆಮಾಡಿಕೊಳ್ಳುತ್ತೇನೆ.

1957ನೆಯ ಇಸವಿಯಲ್ಲಿ ಎಕ್ಸ್‌ಟೆನ್‌ಷನ್ನು ಕೊಟ್ಟಿರುವ ವರಿಗೆ ನಡೆಯುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ (ನಂಜನಗೂಡು).—ಸ್ಟೇಟ್ಸ್ ರೀಆರ್ಗನೈಜೇಷನ್ ಆಕ್ಟಿನ ಪ್ರಕಾರ ತಮಗೆ ಆ ರೀತಿ ಹುಕುಂ ಮಾಡುವುದಕ್ಕೆ ಅಧಿಕಾರವಿಲ್ಲ ಎನ್ನುವ ವಾದವನ್ನು ಹೇಳಿದ್ದೆ. ಅದನ್ನು ರಾಜ್ಯಾಂಗದ ದೃಷ್ಟಿಯಿಂದ ಪರಿಶೀಲಿಸಬೇಕು ಎಂದು ಹೇಳಿದ್ದೆ.

ಶ್ರೀ ವಿ. ವೆಂಕಟಪ್ಪ.—ಪರಿಶೀಲಿಸಿದೆ. ಮೂರು ವರ್ಷದೊಳಗೇ ರಿಟೈರು ಮಾಡಬೇಕೆಂಬ ಆರ್ಡರನ್ನು ಜಾರಿಮಾಡಿದೆ. ಮತ್ತು ಆ ರೀತಿ ಏರ್ಪಾಡುಮಾಡಿದೆ.

ಇನ್ನು ಕಂಪಲ್ಸರಿ ಎಜುಕೇಷನ್ನಿನ ವಿಚಾರ. ಇದನ್ನು ಎಲ್ಲ ಕಡೆಗಳಲ್ಲಿಯೂ ಜಾರಿಗೆ ತರುವಂತೆ ಸೂಚನೆ ಕೊಟ್ಟಿದ್ದಾರೆ. ಇದರಲ್ಲಿರತಕ್ಕ ಕಷ್ಟ ಏನು ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕಂಥಾದ್ದೆ, ಒಂದೇ ಸಲ "Free and compulsory Education" ಪ್ರೈಮರಿ ಶಾಲೆಗಳಲ್ಲಿ ಎಲ್ಲ ಕಡೆಗಳಲ್ಲೂ ಜಾರಿಗೆ ಬರುವಂತೆ ಮಾಡುವಂತಹುದು ಬಹಳ ಕಷ್ಟದ ಕೆಲಸ. ಸಾಕಷ್ಟು ತರಬಿಯತ್ತಾದ ಉಪಾಧ್ಯಾಯರುಗಳು ಸಿಗುವುದು ಕಷ್ಟವಾಗಿದೆ. ಇದರ ಜೊತೆಗೆ ಹಣ ಬೇಕಾಗಿರುವುದರಿಂದ ಇದನ್ನು ಏರ್ಪಾಡುಮಾಡುವುದಕ್ಕೆ ಕಷ್ಟವಾಗಿದೆ. ಆದರೆ ನಾವು 1961ರಿಂದ 1963ರ ಒಳಗಾಗಿ ಆರು ವರ್ಷದಿಂದ ಹನ್ನೊಂದು ವರ್ಷ ವಯಸ್ಸಾಗಿರತಕ್ಕ ಎಲ್ಲ ಬಾಲಕಬಾಲಕಿಯರಿಗೆ ವಿದ್ಯಾಭ್ಯಾಸವು ಕಡ್ಡಾಯವಾಗಿ ದೊರೆಯುವಂತೆ ಮಾಡಬೇಕೆಂದು ಹೇಳಿ ಇಂಡಿಯಾ ಸರಕಾರದವರು ಒಂದು ನಿಯಮವನ್ನು ಮಾಡಿದ್ದಾರೆ. ಅದರಂತೆ ನಾವೂ ಕೂಡ ಈ ರೀತಿಯಾಗಿ ಕಡ್ಡಾಯವಾಗಿ ಮಾಡಬೇಕೆಂದು ಇಲ್ಲಿ ಏರ್ಪಾಡುಗಳನ್ನು ಮಾಡಿಕೊಂಡಿದ್ದೇವೆ. ಈಗಾಗಲೇ ನಮ್ಮಲ್ಲಿ ಅನೇಕ ಕಡೆಗಳಲ್ಲಿ ಕಡ್ಡಾಯ ವಿದ್ಯಾಭ್ಯಾಸ ಜಾರಿಯಲ್ಲಿದೆ. ಬೊಂಬಾಯಿಯ ಭಾಗಗಳಲ್ಲಿ ಸ್ವಲ್ಪ ಹೆಚ್ಚುಕಡಮೆ ಅನೇಕ ಶಾಲೆಗಳಲ್ಲಿ 500 ಜನಸಂಖ್ಯೆಗೆ ಮೇಲ್ಪಟ್ಟು ಹಳ್ಳಿಗಳಲ್ಲಿ ಕಡ್ಡಾಯ ವಿದ್ಯಾಭ್ಯಾಸ ಜಾರಿಯಲ್ಲಿದೆ.

ಮೈಸೂರಿನಲ್ಲಿ ಒಂದೊಂದು ಜಿಲ್ಲೆಯಲ್ಲಿ, ಒಂದೊಂದು ತಾಲ್ಲೂಕಿನಲ್ಲಿ ಕಡ್ಡಾಯ ವಿದ್ಯಾಭ್ಯಾಸ ಜಾರಿಯಲ್ಲಿದೆ. ಇನ್ನು ಎಲ್ಲೆಲ್ಲಿ N.E.S. ಬ್ಲಾಕುಗಳನ್ನು C.D. ಬ್ಲಾಕುಗಳನ್ನು ಕೊಡಲಾಗಿದೆಯೋ ಅಂಥ ಕಡೆಗಳಲ್ಲೆಲ್ಲ ಈ ಕಡ್ಡಾಯ ವಿದ್ಯಾಭ್ಯಾಸವನ್ನು ಜಾರಿಗೆಕೊಡಬೇಕು ಎಂದು ನಿರ್ಧಾರಮಾಡಿದ್ದೇವೆ. ಈಗ ದೇಶದಲ್ಲಿ ಸುಮಾರು 262 ಬ್ಲಾಕುಗಳು ಬೇಕಾಗಿವೆ. ಇದರಲ್ಲಿ 129 ಬ್ಲಾಕುಗಳನ್ನು ಕೊಡಲಾಗಿದೆ. ಈ ವರ್ಷ ಹತ್ತು ಬ್ಲಾಕುಗಳನ್ನು ಕೊಡಲಾಗಿದೆ. 129 ಬ್ಲಾಕುಗಳು ಪೂರ್ತಿಯಾಗಿವೆ. ಇನ್ನು 133 ಬ್ಲಾಕುಗಳನು 1961ನೆಯ ಇಸವಿ ಪೂರ್ತಿಯಾಗುವುದರೊಳಗೆ ಕೊಡಬೇಕೆಂದು ಹೇಳಿರುವುದರಿಂದ ಸಾಧ್ಯವಾದಮಟ್ಟಿಗೂ 1961ನೆಯ ಇಸವಿಯ ಹೊತ್ತಿಗೆ ಈ ಕಂಪಲ್ಸರಿ ಎಜುಕೇಷನ್ನನ್ನು ಕೂಡ ಪೂರ್ಣವಾಗಿ ಜಾರಿಗೆ ತರುವುದಕ್ಕೆ ಸರ್ವ ಪ್ರಯತ್ನವನ್ನು ಮಾಡಿಕೊಂಡು ಹೋಗುತ್ತಿದ್ದೇವೆ ಎಂದು ಇಲ್ಲಿ ನಾನು ತಿಳಿಸಲು ಇಷ್ಟಪಡುತ್ತೇನೆ. ಇನ್ನೂ ಪ್ರಯತ್ನ ನಡೆಯುತ್ತಿದೆ.

ಎಲ್ಲಿ ಕಡ್ಡಾಯವಾದ ವಿದ್ಯಾಭ್ಯಾಸ ಜಾರಿಯಲ್ಲಿದೆಯೋ ಅಲ್ಲಿ ಸರಿಯಾಗಿ ನಡೆಯುವುದಿಲ್ಲ. ಸರಿಯಾಗಿ ಜಾರಿಗೆ ತರುವುದು ಬಹಳ ಕಷ್ಟದ ಕೆಲಸ ಆದುದರಿಂದ

(ಶ್ರೀ ವಿ. ವೆಂಕಟಪ್ಪ)

ಮೈಸೂರಿನಲ್ಲಿ ಈಗಿರತಕ್ಕ ಹಾಗೆ ಸಾಕಷ್ಟು ಒತ್ತಾಯದ ಕೆಲಸ ನಡೆಯುತ್ತಿಲ್ಲ ಎಂದು ಇಲ್ಲಿ ತಿಳಿಸಬೇಕಾಗಿದೆ. ಆದುದರಿಂದ ಇದನ್ನು ಪರಿಶೀಲನೆಮಾಡಿ ಸರಿಯಾದ ರೀತಿಯಲ್ಲಿ ನಡೆಸುವ ಕಾರ್ಯಕ್ರಮವನ್ನು ಕೈಗೊಳ್ಳಬೇಕು ಎಂದು ವಿಚಾರಮಾಡಿ ಎಲ್ಲೆಲ್ಲಿ ಈ ಕಡ್ಡಾಯ ವಿದ್ಯಾಭ್ಯಾಸವನ್ನು ಅನ್ವಯಿಸಿ ಜಾರಿಗೆ ತರುವುದಕ್ಕೆ ಏನು ಏರ್ಪಾಡು ಮಾಡಬೇಕೋ ಅವನ್ನೆಲ್ಲ ಮಾಡಲು ಪ್ರಯತ್ನಪಡುತ್ತಿದ್ದೇವೆ.

ಈ ವರ್ಷ ಹೈದರಾಬಾದು ಕರ್ಣಾಟಕದಲ್ಲಿ ವಿದ್ಯಾಭ್ಯಾಸ ಸ್ವಲ್ಪ ಹಿಂದುಳಿದಿದೆ ಎಂದು ಶ್ರೀಮತಿ ಬಸವರಾಜೇಶ್ವರಿಯವರು ಮತ್ತು ಶ್ರೀ ಅಣ್ಣಾರಾಯರೂ ತಿಳಿಸಿದ್ದಾರೆ; ಮತ್ತು ಈ ಭಾಗಕ್ಕೆ ಸಾಕಷ್ಟು ಉತ್ತೇಜನ ಕೊಟ್ಟಿಲ್ಲ ಎಂದು ಹೇಳಿದರು. ಇದರಲ್ಲಿ ಶ್ರೀ ಅಣ್ಣಾರಾಯರು ಸ್ವಲ್ಪ ಉತ್ಪ್ರೇಕ್ಷೆಯಿಂದಲೂ ಹೇಳಿದರು. ಸ್ಕೂಲನ್ನು ಕೊಟ್ಟೇನೋ ಕೊಟ್ಟರು, ಆದರೆ ಸ್ಕೂಲು ಕೊಟ್ಟಿರುವ ಕಡೆ ಉಪಾಧ್ಯಾಯರೇ ಇಲ್ಲ ಎಂದು ಹೇಳಿದರು. ಇದು ಸರಿ ಎಂದು ಇಲ್ಲಿ ನಾನು ಒಪ್ಪಲಾರೆ. ಯಾವಾಗಲೂ ಹೊಸದಾಗಿ ಸ್ಕೂಲನ್ನು ಸ್ಥಾಪನೆ ಮಾಡಿದರೆ ಆಗ ಉಪಾಧ್ಯಾಯರನ್ನೂ ಮತ್ತು ಅಲ್ಲಿಗೆ ಬೇಕಾದ ಏರ್ಪಾಡನ್ನೂ ಮಾಡಬೇಕಾದುದು ಅಗತ್ಯ. ಹಾಗೆ ಮಾಡಿಯೇ ಮಾಡುತ್ತೇವೆ. ಹಾಗೆ ಮಾಡದಿದ್ದರೆ ಅದು ಸರಿಯಲ್ಲ ಮತ್ತು ಬುದ್ಧಿ ಇರುವವರಾರೂ ಆ ರೀತಿ ಮಾಡಲಾರರು. ಆ ರೀತಿ ಆಗಿರಲಾರದು ಎಂದು ತಿಳಿದುಕೊಂಡಿದ್ದೇನೆ. ಇಲಾಖೆಯವರಿಗೂ ಇಂತಹ ಕಡೆಗಳಿಗೆ ಹೆಚ್ಚಿನ ಅವಕಾಶ ಕೊಡಬೇಕು ಎನ್ನುವುದೂ ಪೂರ್ಣವಾಗಿ ಗೊತ್ತಿದೆ.

ಈ ವರ್ಷ 365 ಸ್ಕೂಲುಗಳನ್ನು ಮಂಜೂರು ಮಾಡಲಾಗಿದೆ. ಈ ಪೈಕಿ 161 ಸ್ಕೂಲುಗಳನ್ನು ಹೈದರಾಬಾದು ಕರ್ನಾಟಕದ ಭಾಗಗಳಿಗೇ ಕೊಟ್ಟಿದ್ದೇವೆ. ಇದನ್ನು ಕಡೆಗಣ್ಣಿನಿಂದ ನೋಡುತ್ತಿದ್ದೇವೆ ಅಥವಾ ಸಾಕಷ್ಟು ಗಮನವನ್ನು ಕೊಟ್ಟಿದ್ದರೂ ಇಲ್ಲವೆಂದು ಹೇಳತಕ್ಕ ವಾದ ಸರಿಯಲ್ಲ ಎಂದು ನಾನು ಅವರಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ನಮ್ಮ ಮಿತ್ರರಾದ ಶ್ರೀ ರೇವಣಸಿದ್ದಪ್ಪನವರು ಒಂದು ವಿಷಯವನ್ನು ಸಭೆಯ ಗಮನಕ್ಕೆ ತಂದರು. ಶಾಲೆಗಳಲ್ಲಿ ಕೆಲವು ಸಾಮಗ್ರಿಗಳನ್ನು ಕೊಳ್ಳುವುದರಲ್ಲಿ ಅದರಲ್ಲೂ ಹೋಮ್‌ಸೈನ್ಸಿಗೆ ಬೇಕಾದ ಸಾಮಗ್ರಿಗಳನ್ನು ಕೊಂಡುಕೊಳ್ಳತಕ್ಕ ವಿಚಾರದಲ್ಲಿ ಬಹು ಮಟ್ಟಿಗೆ ಅನ್ಯಾಯ ನಡೆದಿದೆ ಮತ್ತು ಇದುವರೆಗೆ ಏನೂ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದರು. ಇದು ಅವರಿಗೂ ಗೊತ್ತಿರತಕ್ಕ ವಿಷಯ; ಹೀಗೇಕೆ ಹೇಳಿದರೋ ಕಾರಣ ತಿಳಿಯಲಿಲ್ಲ. ನಾನು ತಿಪಟೂರಿಗೆ ಹೋಗಿದ್ದಾಗ ಅವರೂ ಸಹ ನನ್ನ ಜೊತೆಯಲ್ಲೇ ಇದ್ದರು. ಈ ವಿಷಯವು ನನ್ನ ಗಮನಕ್ಕೆ ಬಂದ ಕೂಡಲೇ ಅಲ್ಲೇ ಆಂಟೀಕರಪ್‌ಷನ್ನಿನ ಅಧಿಕಾರಿಗಳನ್ನು ಕರೆದು ಅವರು ಇದನ್ನು ಪರಿಶೀಲನೆಮಾಡಿ ಅವರ ಅಭಿಪ್ರಾಯಗಳನ್ನು ಕೊಡಬೇಕೆಂದು ಹೇಳಿದೆ. ಈ ಸ್ಕೂಲು ಮತ್ತು ಕಾಲೇಜುಗಳಿಗೆ ಪದಾರ್ಥಗಳನ್ನು ಸರಿಯಾಗಿ ತರಿಸಲಾಗುತ್ತಿದೆಯೇ ಇಲ್ಲವೇ ಎಂದು ಇವನ್ನೆಲ್ಲ ವಿಚಾರಮಾಡಿ ಮತ್ತು ಪರಿಶೀಲನೆಮಾಡಿ ಈಗ ಒಂದು ರಿಪೋರ್ಟನ್ನು ಸರಕಾರದ ಗಮನಕ್ಕೆ ಕಮಿಷನ್ನಿನವರು ಕಳುಹಿಸಿಕೊಟ್ಟಿದ್ದಾರೆ. ಇದನ್ನು ವಿಚಾರ ಮಾಡುತ್ತಿದ್ದೇವೆ. ಇದರಲ್ಲಿ ಯಾರೇ ತಪ್ಪು ಮಾಡಿರಲಿ ಅಂತಹವರ ಮೇಲೆ ಸರಿಯಾದ ಕ್ರಮವನ್ನು ಕೈಗೊಳ್ಳದೆ ಸರಕಾರದವರು ಬಿಡುವುದಿಲ್ಲ ಎಂದು ನಾನು ಶ್ರೀ ರೇವಣಸಿದ್ದಪ್ಪನವರಿಗೆ ತಿಳಿಸಲಿಚ್ಛಿಸುತ್ತೇನೆ.

ಇನ್ನು ಶ್ರೀ ಡಿ. ಹೆಚ್. ರುದ್ರಪ್ಪನವರು ಮಲ್ಟಿಪರ್‌ಪಸ್ ಹೈಸ್ಕೂಲುಗಳಲ್ಲಿ ತಾಂತ್ರಿಕ ವಿದ್ಯಾಭ್ಯಾಸವನ್ನು ಹೆಚ್ಚಾಗಿ ಕೊಡತಕ್ಕ ಸೌಕರ್ಯಗಳಿಗೆ ಹೆಚ್ಚು ಗಮನ ಕೊಡಬೇಕೆಂದು ಹೇಳಿದ್ದಾರೆ. ಇದು ಸರಕಾರದ ಉದ್ದೇಶವೂ ಆಗಿದೆ. ಈ ವರ್ಷ ಬಹು ಮಟ್ಟಿಗೆ ತಾಂತ್ರಿಕ ವಿದ್ಯಾಭ್ಯಾಸವನ್ನು ಹೆಚ್ಚು ಮಾಡುವುದಕ್ಕೋಸ್ಕರ ವಿದ್ಯಾರ್ಥಿಗಳಿಗೆ ಹೆಚ್ಚು ಅವಕಾಶಗಳನ್ನು ಕೊಡುವುದಕ್ಕೆ ಎಂದು ಈ ವರ್ಷದಲ್ಲೇ ಇದಕ್ಕೆ ಸಂಬಂಧಪಟ್ಟ ರೀಜನಲ್ ಕಮಿಟಿಯವರು, ವಿಜ್ಞಾಪನೆ ಮಾಡಿಕೊಂಡಂತೆ, ಈ ಸಂಖ್ಯೆಯನ್ನು ಹೆಚ್ಚು ಮಾಡಿದೆ. ಈ ವರುಷವೇ ಸುಮಾರು 900 ಜನ ವಿದ್ಯಾರ್ಥಿಗಳಿಗೆ ಅನುಕೂಲ ದೊರೆಯುವಂತೆ ಏರ್ಪಾಡು ಮಾಡಲಾಗಿದೆ. ಮುಂದಿನ ವರ್ಷದಿಂದ ವಿದ್ಯಾಭ್ಯಾಸ ಮಾಡಲು ಅನುಕೂಲವಾಗುವಂತೆ ಐದು ಪಾಲಿಟೆಕ್ನಿಕ್ ಶಾಲೆಗಳು ಸ್ಥಾಪನೆಯಾಗಬೇಕು ಎಂದು ಏರ್ಪಾಡು ಮಾಡಿದೆ. ಇದರಲ್ಲಿ ಒಂದು ಕಾಲೇಜನ್ನು ಇಂಡಿಯಾ ಸರಕಾರದವರು ತೆರೆಯತಕ್ಕದ್ದು ಮತ್ತು ನಾವು ಒಂದು ಪಾಲಿಟೆಕ್ನಿಕ್ ಕಾಲೇಜನ್ನು ಕೇಂದ್ರ ಸರಕಾರದ ನೆರವಿನಿಂದ ಸ್ಥಾಪನೆ ಮಾಡಬೇಕೆಂದು ಯೋಚನೆಇಟ್ಟುಕೊಂಡಿದ್ದೇವೆ. ಆದುದರಿಂದ ಈ ವಿಷಯದಲ್ಲಿ ಸಾಕಷ್ಟು ಕೆಲಸ ನಡೆದಿದೆ. ಯಾವ ವಿಧದಲ್ಲಿಯೂ ಸ್ವಲ್ಪವೂ ಮನಸ್ಸಿಗೆ ತೆಗೆದುಕೊಳ್ಳದೆ ಉದಾಸೀನಮಾಡಿರುತ್ತಾರೆ ಎನ್ನುವ ಭಾವನೆ ಸರಿಯಾದುದಲ್ಲ. ಹೀಗೆ ಒಂದು ವರ್ಷದಲ್ಲೇ ಮೈಸೂರಿನಲ್ಲಿ ಎಷ್ಟೋ ವರ್ಷಗಳಿಂದ ಇಂತಹ ಕೆಲಸವಾಗಿಲ್ಲ ಎಂದು ಹೇಳಿದರೆ ಅದನ್ನು ಉತ್ಪ್ರೇಕ್ಷೆಯಿಂದ ಹೇಳುತ್ತಿದ್ದೇನೆಂದು ತಿಳಿದುಕೊಳ್ಳಬಾರದು. ಅದಷ್ಟು ಮಟ್ಟಿಗೆ ಪ್ರಯತ್ನಪಡುತ್ತಿದ್ದೇವೆ.

ಇನ್ನು ಕಟ್ಟಡಗಳ ವಿಷಯದಲ್ಲಿ ಅನೇಕರು ಹೇಳಿದ್ದಾರೆ. ಸ್ಕಾಲರ್‌ಷಿಪ್ ವಿಷಯದಲ್ಲಿ ಸಹ ಹೇಳಿದ್ದಾರೆ. ಇದಕ್ಕೆ ಈಗಾಗಲೇ ಪ್ರಶ್ನೆಗಳ ಸಮಯದಲ್ಲಿ ಉತ್ತರ ಕೊಟ್ಟಿದ್ದೇನೆ. ಎಲ್ಲ ಕೋಮಿನವರಿಗೂ, ಯಾರು ಯಾರಿಗೆ ಸ್ಕಾಲರ್‌ಷಿಪ್ ಸಂದಾಯವಾಗುತ್ತಿತ್ತೋ ಅವರೆಲ್ಲರಿಗೂ ಇನ್ನೂ ಕೊಡುತ್ತಿದ್ದೇವೆ. ಸ್ಕಾಲರ್‌ಷಿಪ್‌ಗಳನ್ನು ಶೇಕಡ 68ರಷ್ಟು ಹೆಚ್ಚು ಮಾಡಿದ್ದೇವೆ. ಅದು ಬಹುಮಟ್ಟಿಗೆ ಸಮರ್ಪಕವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಕಟ್ಟಡಗಳನ್ನು ಕಟ್ಟತಕ್ಕ ವಿಷಯದಲ್ಲಿ ಮೂರು ವರ್ಷಗಳ ಕೆಳಗೆ ಒಂದು ಯೋಜನೆಯನ್ನು ಹಾಕಲಾಗಿತ್ತು. Cheap design Scheme ಎಂದು 750 ರೂಪಾಯಿಗಳನ್ನು ಸರ್ಕಾರದವರು ಕೊಡುವುದು ಉಳಿದುದನ್ನು ಹಳ್ಳಿಯವರು ಹಾಕಿಕೊಂಡು ಕಟ್ಟಡವನ್ನು ಕಟ್ಟತಕ್ಕದ್ದು ಎಂದು ಯೋಜನೆಯನ್ನು ಮಾಡಿದರು. ಅದರ ಪ್ರಕಾರ ಮೊದಲನೆಯ ವರ್ಷ ಏಳೂವರೆ ಸಾವಿರ ರೂಪಾಯಿ ಮಾತ್ರ ಖರ್ಚಾಯಿತು. ಎರಡನೆಯ ವರ್ಷ ಹತ್ತು ಸಾವಿರ ರೂಪಾಯಿ ಮಾತ್ರ ಖರ್ಚಾಯಿತು. ಏಕೆ ಹೀಗಾಯಿತು ಯೋಚನೆ ಮಾಡುವುದರಲ್ಲಿ ಅದರಲ್ಲಿ ಅನೇಕ ತೊಡಕುಗಳಿದ್ದುದು ಕಂಡು ಬಂತು. ಮೊದಲು ಮಂಜೂರಾಗಬೇಕು. ಮಂಜೂರಾದ ಮೇಲೆ ಬಿಲ್ಲಿನ ಹಣವನ್ನು ತೆಗೆದುಕೊಳ್ಳಲು ವರ್ಷಗಟ್ಟಲೆ ಆಗುತ್ತಿತ್ತು. ಹಣ ಪಡೆಯಲು ಬಿಲ್ ಪ್ರಿ-ಆಡಿಟ್ ಆಗುವ ಪದ್ಧತಿ ಇತ್ತು. ಅಕೌಂಟೆಂಟ್

ಜನರಲ್ ಹತ್ತಿರ ಹೋದಹೊರತು ಬಿಲ್ ಪಾಸ್ ಆಗುವ ಹಾಗೆಯೇ ಇರಲಿಲ್ಲ. ಅದಕ್ಕಾಗಿ ಅನೇಕರು ಬೇಜಾರು ಪಟ್ಟುಕೊಂಡು ತಾವು ಹಣವನ್ನು ಮೊದಲು ಖರ್ಚು ಮಾಡಿ ನಂತರ ಹಣವನ್ನು ವಾಪಸು ಪಡೆಯಲು ಅಲೆಯುವುದಕ್ಕೆ ಇಷ್ಟಪಡದೆ ಇದ್ದರು. ಅದರಿಂದ ಜನರು ಮುಂದೆ ಬರುತ್ತಿರಲಿಲ್ಲ. ನಾನು ಮಂತ್ರಿಯಾಗಿ ಬಂದ ಕೂಡಲೇ ಮೈಸೂರು ದೇಶದ ಎಲ್ಲ ಜಿಲ್ಲೆಗಳಲ್ಲಿಯೂ, ಕಾರವಾರ ಜಿಲ್ಲೆಯನ್ನು ಬಿಟ್ಟು, ಪ್ರವಾಸ ಮಾಡಿದ್ದೇನೆ. ನನ್ನ ಪ್ರವಾಸ ಕಾಲದಲ್ಲಿ ಎಲ್ಲ ಅಧಿಕಾರಿಗಳನ್ನೂ, ವಿದ್ಯಾ ಇಲಾಖೆಯ ಅಧಿಕಾರಿಗಳು ಮಾತ್ರವಲ್ಲ, P.W.D. ಅಧಿಕಾರಿಗಳು, ರೆವೆನ್ಯೂಅಧಿಕಾರಿಗಳು ಮತ್ತು ಡಿಸ್ಟ್ರಿಕ್ಟ್‌ಗೆ ಸಂಬಂಧಪಟ್ಟ ಎಲ್ಲ ಅಧಿಕಾರಿಗಳನ್ನೂ ಬರಮಾಡಿಕೊಂಡು ಸ್ಕೂಲು ಕಟ್ಟಡವನ್ನು ಕಟ್ಟುವುದರಲ್ಲಿರತಕ್ಕ ತೊಂದರೆಗಳೇನು ಎಂದು ಅವರೊಡನೆ ಚರ್ಚಿಸಿ, ನಾನೂ ಪರಿಶೀಲನೆಮಾಡಿ ತೊಂದರೆಯನ್ನು ಹೋಗಲಾಡಿಸುವುದಕ್ಕೆ ಪ್ರಯತ್ನಪಟ್ಟೆ. ಆ ಪ್ರಯತ್ನ ಫಲಕಾರಿಯಾಗಿದೆ ಎಂದು ಹೇಳಲು ಇಷ್ಟಪಡುತ್ತೇನೆ. ಈಗ, ಒಂದು ರೂಮಿಗೆ 1,500 ರೂಪಾಯಿಗಳವರೆಗೂ ಸರ್ಕಾರದವರು ಕೊಡತಕ್ಕದ್ದು ಮತ್ತು ಹಳ್ಳಿಯವರು ಅದರ ಮೇಲ್ಪಟ್ಟು ಏನು ಬೀಳುತ್ತದೆಯೋ ಅದನ್ನು ಹಾಕಿಕೊಂಡು ಕೆಲಸಮಾಡತಕ್ಕದ್ದು ಎಂದು ವಿಧಾಯಕ ಮಾಡಿದ್ದೇವೆ. ಶ್ರೀ ಪುಟ್ಟಸ್ವಾಮಿಯವರು, 750 ರೂಪಾಯಿಗಳನ್ನು ಕೊಡುವುದಕ್ಕೇ ಜನ ಹಿಂಜರಿಯುವಾಗ 1,500 ರೂಪಾಯಿ ಒಂದು ರೂಮಿಗೆ ಮಾಡಿಬಿಟ್ಟರೆ ಬಹಳ ಕಷ್ಟವಾಗುತ್ತದೆಯಲ್ಲವೇ ಎಂದು ಪ್ರಶ್ನೆ ಮಾಡಿದರು. ನಾನು ಇದನ್ನೆಲ್ಲ ಯೋಚನೆ ಮಾಡಿ, ಹಳ್ಳಿಯವರಿಗೆ ಅದರಿಂದ ತೊಂದರೆ ಯಾಗಬಾರದು ಎನ್ನುವ ಉದ್ದೇಶದಿಂದ ಮಾಡಿದ್ದೇನೆ. ಎಲ್ಲರೂ ಇದಕ್ಕೆ ಒಪ್ಪಿಕೊಂಡಿದ್ದಾರೆ,

ಶ್ರೀ ಡಿ. ಮಾಕಪ್ಪ.—ಈ ರೀತಿ 750 ರೂಪಾಯಿಗಳನ್ನು ಸರ್ಕಾರದಿಂದ ಕೊಡುವುದಕ್ಕೆ ಮುಂಚೆ ಗ್ರಾಮಸ್ಥರು 750 ರೂಪಾಯಿ ಡಿಪಾಜಿಟ್ ಕಟ್ಟಬೇಕು ಎಂದು ಒಂದು ಯೋಜನೆಯನ್ನು ಮಾಡಿತ್ತು. ಡಿಪಾಜಿಟ್ ಕಟ್ಟಿದ ಹಣ ಕಂಟ್ರಾಕ್ಟ್ ದಾರರಿಗೆ ಪಾವತಿಯಾಗಿಲ್ಲವೆನ್ನುವುದು ಗೊತ್ತಿದೆಯೆ?

ಶ್ರೀ ವಿ. ವೆಂಕಟಪ್ಪ.—ಈಗ ಆ ರೀತಿಯ ಕಡ್ಡಾಯವೂ ಇಲ್ಲ. ಹಣವನ್ನೂ ಕೊಡಬೇಕಾಗಿಲ್ಲ. ಈಗಿನ ಯೋಜನೆಯ ಪ್ರಕಾರ ಹಣವನ್ನು ಮಂಜೂರುಮಾಡುವವರು ಡೆಪ್ಯುಟಿ ಕಮಿಷನರು. ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರ್ ಸೇರಿ ಆಯಾ ಡಿಸ್ಟ್ರಿಕ್ಟಿನಲ್ಲಿ ಯಾವಯಾವದಕ್ಕೆ ಹಣವನ್ನು ಕೊಡಬೇಕು, ಯಾವಯಾವದು ಜಾಗ್ರತೆಯಾಗಬೇಕು ಎಂದು ಯೋಚನೆ ಮಾಡುತ್ತಾರೆ. ಡೆಪ್ಯುಟಿ ಕಮೀಷನರು ಮಂಜೂರು ಮಾಡುವವರು, ಅಮಲ್ದಾರರು ಅದನ್ನು ಇನ್ಸ್‌ಪೆಕ್ಟ್ ಮಾಡುವವರು ಮತ್ತು ಸಬ್ ಓವರ್ಸಿಯರ್ ಮೇಲ್ವಿಚಾರಣೆ ನೋಡುವವರು ಹೀಗೆ ಇದೆ. ಹಣವನ್ನು ನಾಲ್ಕುವೇಳೆ ಕೊಡಬೇಕು. ಮೊದಲನೆಯದು ತಳಹದಿಯಾದ ಕೂಡಲೇ, ಎರಡನೆಯ ಕಂತನ್ನು ಕಟ್ಟಡ ಎದ್ದ ಕೂಡಲೇ ಕೊಡಬೇಕು. ಮತ್ತೊಂದು ಕಂತನ್ನು ಮೇಲ್ಛಾವಣಿ ಹಾಕತಕ್ಕ ಕಾಲದಲ್ಲಿ ಆಮೇಲೆ ಎಲ್ಲ ಮುಗಿದ ಮೇಲೆ ಹೀಗೆ ನಾಲ್ಕು ವೇಳೆ ಕಟ್ಟಡದ ಕೆಲಸಕ್ಕೆ ತೊಂದರೆಯಾಗದ ರೀತಿಯಲ್ಲಿ ಮಾಡಬೇಕು ಎಂದು ಹಣವನ್ನು ಒದಗಿಸಿದ್ದೇವೆ. ಈಗಾಗಲೇ ಅನೇಕ ಕಡೆ ಕಟ್ಟಡಗಳಾಗಿವೆ. ನಾನು ಹೇಳುವುದಾದರೆ ಈ ವರ್ಷ 1957-58ರಲ್ಲಿ ಸುಮಾರು ಆರುಲಕ್ಷ ರೂಪಾಯಿ ಖರ್ಚಾಗುತ್ತದೆ ಶಿವಮೊಗ್ಗ, ಚಿತ್ರದುರ್ಗ; ಬೆಂಗಳೂರು ಮತ್ತು ಇನ್ನು ಕೆಲವು ಜಿಲ್ಲೆಗಳಲ್ಲಿ ಒಂದೊಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಖರ್ಚು ಮಾಡಿದ್ದಾರೆ; ಮತ್ತು ಇನ್ನೂ ಹಣಬೇಕು ಎಂದು ಕೇಳುತ್ತಿದ್ದಾರೆ. ಈ ಡೆಪ್ಯುಟಿ ಕಮಿಷನರುಗಳಿಗೆ ನಾನು ತುಂಬ ಕೃತಜ್ಞನಾಗಿದ್ದೇನೆ.

ಅಧ್ಯಕ್ಷರು.—ನೆರೆಪೀಡಿತವಾಗಿರುವ ಪ್ರದೇಶಗಳಿಗೂ ಇದು ಅನ್ವಯಿಸುತ್ತದೆಯೇ?

ಶ್ರೀ ವಿ. ವೆಂಕಟಪ್ಪ.—ಎಲ್ಲ ಕಡೆಗೂ ಅನ್ವಯಿಸುತ್ತದೆ. ಬಹಳ ವಿಶ್ವಾಸದಿಂದ ಕೆಲಸವನ್ನು ನಿರ್ವಂಚನೆಯಿಂದ ಮಾಡಿರುವ ಎಲ್ಲ ಅಧಿಕಾರವರ್ಗದವರಿಗೂ ನಾನು ಕೃತಜ್ಞತೆಗಳನ್ನು ಹೇಳದೆ ತೀರದು.

Sri K. PUTTASWAMY (Mysore).—Under the old scheme it was Rs. 500 for each school. In the present scheme......

ಶ್ರೀ ವಿ. ವೆಂಕಟಪ್ಪ.—ಅದನ್ನು ಕೇಳಿದ್ದೀರಿ. ಉತ್ತರ ಹೇಳುತ್ತಿದ್ದೇನೆ. ಕಂಟ್ರಾಕ್ಟರುಗಳಿಗೆ ಕೊಡಬೇಕಾದರೆ ಏನು ಖರ್ಚಾಗುತ್ತದೆಂದು ನೋಡಿ ಮಾಡಿದ್ದೇವೆ. ನಾನು ಅನೇಕ ಹಳ್ಳಿಗಳನ್ನು ನೋಡಿದ್ದೇನೆ. ಇವೊತ್ತಿನ ದಿವಸ ಇಲ್ಲಿ (ಬೆಂಗಳೂರಲ್ಲಿ) ಇಟ್ಟಿಗೆಯ ಬೆಲೆ 35—40 ರೂಪಾಯಿಗಳಿದ್ದರೆ ಹಳ್ಳಿಗಳಲ್ಲಿ 15 ರೂಪಾಯಿ ಇದ್ದರೆ ಹೆಚ್ಚು. ಅವರೇ ಸ್ವಂತವಾಗಿ ಮಾಡಿಕೊಳ್ಳುವುದಾದರೆ ಹತ್ತು ರೂಪಾಯಿಗಳಲ್ಲಿ ಆಗುತ್ತದೆ. ಈ ರೀತಿಯಾಗಿ ಮಾಡುತ್ತಿದ್ದಾರೆ. ಊರಿನವರು ಸ್ವಲ್ಪ ಸಹಾಯ ಮಾಡಿದರೆ, ಅವರ ಕೈಯಿಂದ ಹಣವನ್ನು ಹಾಕಬೇಕಾದದ್ದೇ ಇಲ್ಲ. ನಾವು ಎಲ್ಲವನ್ನೂ ನೋಡಿ 1,500 ರೂಪಾಯಿ ಎಂದು ಗೊತ್ತುಮಾಡಿದ್ದೇವೆ ಎಂದು ಶ್ರೀ ಪುಟ್ಟಸ್ವಾಮಿಯವರಿಗೆ ನಾನು ಹೇಳುತ್ತೇನೆ.

ಶ್ರೀ ಎಂ. ಎಂ. ಪಾಟೀಲ್ (ಹಡಗಲಿ).—ಬಳ್ಳಾರಿ ಜಿಲ್ಲೆಯ ಅನೇಕ ಗ್ರಾಮಗಳವರು ಹಣ ಕೊಡುತ್ತೇವೆಂದು ಮುಂದೆ ಬಂದಾಗ್ಯೂ ಕೂಡ ಏನೂ ನಡೆದಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ವಿ. ವೆಂಕಟಪ್ಪ.—ಅದನ್ನು ವಿಚಾರ ಮಾಡಬೇಕು. ಇನ್ನೊಂದು ವಿಷಯವೇನೆಂದರೆ, ಅನೇಕ ಜನರು ಬಹಳ ವರ್ಷಗಳ ಹಿಂದೆ ಸರ್ಕಾರಕ್ಕೆ ಹಣವನ್ನು ಕೊಟ್ಟಿದ್ದಾರೆ. ಸ್ಕೂಲು ಕಟ್ಟಡಗಳನ್ನು ಕಟ್ಟಲು ಸರ್ಕಾರದವರು ಎಷ್ಟೆಷ್ಟು ಕೇಳಿದರೋ ಅಷ್ಟನ್ನು ಎಂದರೆ 500 ರೂಪಾಯಿ, 700 ರೂಪಾಯಿ, ಸಾವಿರ ರೂಪಾಯಿ, ಎರಡು ಸಾವಿರ ರೂಪಾಯಿ ಹೀಗೆ ಕೊಟ್ಟಿದ್ದಾರೆ. ಇದರ ಬಾಬ್ತು ಲಕ್ಷಾಂತರ ರೂಪಾಯಿಗಳು ಸರ್ಕಾರದ ಖಜಾನೆಯಲ್ಲಿದೆ. ಅದಕ್ಕೆ ಪ್ರತಿಯಾಗಿ ಕಟ್ಟಡಗಳನ್ನು ಕಟ್ಟಿಕೊಟ್ಟಿಲ್ಲ. ಎಲ್ಲೆಲ್ಲಿ ಹೀಗಾಗಿದೆ ಎನ್ನುವುದನ್ನು ಗೊತ್ತುಮಾಡುವುದೇ ಸ್ವಲ್ಪ ಕಷ್ಟವಾಗಿದೆ. ಇದರ ಸಂಬಂಧದಲ್ಲಿ ಒಂದು ಪಟ್ಟಿಯನ್ನು ತರಿಸಬೇಕಾಗಿದೆ. ಯಾವ ಯಾವ ಊರಿನವರು ಹಣವನ್ನು ಕೊಟ್ಟಿದ್ದಾರೆ ಎಂದು ತಿಳಿದು ಅವರು ಎಷ್ಟೇ ಹಣವನ್ನು ಕೊಟ್ಟಿರಲಿ ಸರ್ಕಾರದವರು ಕಟ್ಟಡವನ್ನು ಕಟ್ಟಿಕೊಡತಕ್ಕದ್ದು ಮತ್ತು ಅಂಥ ಹಳ್ಳಿಗಳಿಗೆ ಮೊದಲು ಪ್ರಿಫರೆನ್ಸ್ ಕೊಡತಕ್ಕದ್ದು ಎಂದು, ತೀರ್ಮಾನ ಮಾಡಿದ್ದೇವೆ.

ಶ್ರೀಮತಿ ಲೀಲಾವತಿ ವೆಂಕಟೇಶ್ ಮಾಗಡಿ.—ಸ್ಕೂಲು ಕಟ್ಟಡಗಳ ರಿಪೇರಿಯ ಸಲುವಾಗಿ ಒಂದು ಮಾತನ್ನು ಹೇಳಿದ್ದೆ.

ಶ್ರೀ ವಿ. ವೆಂಕಟಪ್ಪ.—ಇದರಲ್ಲಿ ಒಂದು ಕಷ್ಟವಿದೆ. ಹಿಂದೆ ಕಟ್ಟಡವನ್ನು ಯಾರೋ ಧರ್ಮವಾಗಿ ಕಟ್ಟಿ ಕೊಟ್ಟಿದ್ದರು. ಹಳ್ಳಿಯವರು ಕಟ್ಟಿ ಕೊಟ್ಟಿದ್ದರು, ವ್ಯಕ್ತಿಗಳು ಕಟ್ಟಿ ಕೊಟ್ಟಿದ್ದರು ಹೀಗೆ ಕಟ್ಟಡಗಳು ಬಂದಿವೆ. ಆ ಕಟ್ಟಡಗಳನ್ನು ಸರ್ಕಾರದ ಸುಪರ್ದಿಗೆ ತೆಗೆದುಕೊಂಡಿಲ್ಲ. ಇಂಜಿನಿಯರಿಂಗ್ ಇಲಾಖೆಯವರು ಕಟ್ಟಡವನ್ನು ಕಟ್ಟಿಸಿದವರಿಂದ ದಾನಪತ್ರ ಬಂದ ಹೊರತು ಸ್ವಾಧೀನಕ್ಕೆ ತೆಗೆದುಕೊಳ್ಳುವುದಿಲ್ಲವೆಂದು ಹೇಳಿಬಿಟ್ಟರು. ನಾನು ಹೇಳುವುದೇನೆಂದರೆ ಇಷ್ಟು ವರ್ಷಗಳಿಂದ ನಡೆದುಕೊಂಡು ಬಂದಿರುವುದನ್ನು ಯಾರೂ ಸಹ ಕೊಟ್ಟಿರುವುದನ್ನು ನನ್ನದು ಎಂದು claim ಮಾಡುವುದಿಲ್ಲ. ಆದುದರಿಂದ ಯಾರು ಸಿಕ್ಕುತ್ತಾರೆಯೋ ಅವರಿಂದ ದಾನಪತ್ರಗಳನ್ನು ಬರೆಸಿಕೊಳ್ಳಿ; ಅವುಗಳನ್ನೆಲ್ಲ P.W.D.ಗೆ ವಹಿಸಿಕೊಂಡು ಆ ಕಟ್ಟಡಗಳು ರಿಪೇರಿಯಾಗಲು ಬೇಕಾದ ಹಣವನ್ನು ಒದಗಿಸಲು ಕೇಳಬೇಕೆಂದು ಗೊತ್ತುಮಾಡಿದೆ. ಉಳಿದುವನ್ನು ಸರ್ಕಾರದವರೇ ತೆಗೆದುಕೊಂಡು ರಿಪೇರಿ ಮಾಡಿಸಬೇಕಾಗುತ್ತದೆ. ಏಕೆಂದರೆ ರಿಪೇರಿಯಾಗದೆ ಆ ಕಟ್ಟಡಗಳು ಬಹುಕಾಲ ಉಳಿಯಲಾರವು. ಎಲ್ಲ ಕಟ್ಟಡಗಳನ್ನೂ ಒಂದು ವರ್ಷದಲ್ಲಿ ರಿಪೇರಿ ಮಾಡುತ್ತೇವೆ ಎಂದು ಹೇಳಲಾರೆ. ಎಷ್ಟೆಷ್ಟು ಕೆಲಸಗಳನ್ನು ಮಾಡಲು ಸಾಧ್ಯವೋ ಅಷ್ಟು ಕೆಲಸಗಳನ್ನೂ ಮಾಡುವುದಕ್ಕೆ ಪ್ರಯತ್ನಪಡುತ್ತೇವೆಂದು ಮಾತ್ರ ಹೇಳುತ್ತೇನೆ.

ನಾಲ್ಕೈದು ಪ್ರದೇಶಗಳು ಸೇರಿರುವುದರಿಂದ ವಿದ್ಯಾಭ್ಯಾಸದ ಕ್ರಮದಲ್ಲಿ ಬಹಳಮಟ್ಟಿಗೆ ವ್ಯತ್ಯಾಸವಿದೆ. ಅದನ್ನೆಲ್ಲಾ ಒಂದೇ ರೀತಿಗೆ ತರಬೇಕೆಂದು ಒಂದು ಕಮಿಟಿಯನ್ನು ನೇಮಿಸಲಾಗಿದೆ. ಆ ಸಮಿತಿಯಲ್ಲಿ ಅರಿತು ನುರಿತವರಿದ್ದಾರೆ. ಅವರ ಅಭಿಪ್ರಾಯವನ್ನು ಪಡೆದು, ವಿದ್ಯಾಭ್ಯಾಸಕ್ರಮವೆಲ್ಲಾ ಒಂದೇ ರೀತಿಯಾಗುವಂತೆ ಮಾಡಬೇಕಾಗಿರುತ್ತದೆ. ಕೆಲವು ಕಡೆಗಳಲ್ಲಿ ಪ್ರೈಮರಿ ಮತ್ತು ಮಿಡಲ್ ಸ್ಕೂಲ್‌ಗಳಲ್ಲಿ ಫೀಸ್ ಹಾಕುತ್ತಾ ಇದ್ದಾರೆ. ಹಳೆಯ ಮೈಸೂರಿನಲ್ಲಿ ಫೀಜು ಇಲ್ಲ.

ಒಬ್ಬ ಸದಸ್ಯರು.—ಬಳ್ಳಾರಿ ಜಿಲ್ಲೆಯಲ್ಲಿ ಇನ್ನೂ ವಸೂಲು ಮಾಡುತ್ತಾ ಇದ್ದಾರೆ.

ಶ್ರೀ ವಿ. ವೆಂಕಟಪ್ಪ.—ಹಳೆಯ ಕಾನೂನುಗಳೇ ಅಲ್ಲಿ ಜಾರಿಯಲ್ಲಿರುತ್ತವೆ. ನಾವು ಹೊಸದಾಗಿ ಅದನ್ನು ಪರಿಶೀಲನೆಮಾಡಿ ಆದಷ್ಟು ಜಾಗ್ರತೆ ತೀರ್ಮಾನ ಮಾಡಬೇಕು.

ಅಧ್ಯಕ್ಷರು.—ಬಳ್ಳಾರಿ ಹಳೆಯ ಮೈಸೂರಿನಲ್ಲಿರುತ್ತದೋ, ಹೊಸ ಮೈಸೂರಿನಲ್ಲಿರುತ್ತದೋ?

ಶ್ರೀ ವಿ. ವೆಂಕಟಪ್ಪ.—ಅದು ಪೂರ್ಣವಾಗಿ ಹಳೆಯ ಮೈಸೂರಿಗೆ ಸೇರಿ ಹೋಗಿದೆ ಎಂದು ಹೇಳಲಾರೆ. ಸರ್ಕಾರದವರು ಪರಿಶೀಲನೆಮಾಡಿ ಆದಷ್ಟು ಜಾಗ್ರತೆ ಒಂದೇ ರೀತಿಯ ಕ್ರಮವನ್ನು ಅನುಸರಿಸಿ, ಫೀಸ್ ತೆಗೆದುಹಾಕಬೇಕೆಂದು ಅಂದುಕೊಂಡಿದ್ದೇವೆ. ಈ ವಿಚಾರ ನಡೆದಿದೆ.

Sri C. J. MUCKANNAPPA.—I rise to a point of order. A doubt has been created in my mind. The Hon'ble Minister for Education said that he was yet doubtful about the integration of Bellary.

ಅಧ್ಯಕ್ಷರು.—ಅನುಮಾನವಿಲ್ಲ. ಏನೂ point of order ಇಲ್ಲ. ಸುಮ್ಮನೆ ಕಾಲ ಕಳೆಯುತ್ತದೆ.

ಶ್ರೀ ವಿ. ವೆಂಕಟಪ್ಪ.—ಆದ್ದರಿಂದ ಆದಷ್ಟು ಜಾಗ್ರತೆ ಯೋಚನೆ ಮಾಡುತ್ತೇನೆ. ಈಗ ಹೈಸ್ಕೂಲ್ ಕ್ಲಾಸುಗಳಲ್ಲಿ, ಒಂದೊಂದುಕಡೆ ಒಂದೊಂದು ವಿಧವಾದ ಫೀಸ್ ಇದೆ. ಬೊಂಬಾಯಿ ಪ್ರದೇಶದಲ್ಲಿ ಬಹಳ ಹೆಚ್ಚಾಗಿದೆ. ಮದ್ರಾಸ್ ಪ್ರದೇಶದಲ್ಲಿ ಅದಕ್ಕಿಂತ ಸ್ವಲ್ಪ ಕಡಮೆ ಇದೆ. ಹಿಂದಿನ ಮೈಸೂರಿನಲ್ಲಿ ಬಹಳ ಕಡಮೆ ಇದೆ. ಎಲ್ಲಾ ಕಡೆಗಳಲ್ಲೂ ಒಂದೇ ರೀತಿಯ ಫೀಸ್ ಮಾಡಬೇಕಾದರೆ, ಹಳೆಯ ಮೈಸೂರು ಪ್ರದೇಶದಲ್ಲಿ ಫೀಸ್ ಸ್ವಲ್ಪ ಹೆಚ್ಚಿಗೆ ಮಾಡಲೇಬೇಕಾಗುತ್ತದೆ. ಆದ್ದರಿಂದ ಈ ವಿಷಯವನ್ನು ಸಭೆಯ ಗಮನಕ್ಕೆ ತಂದೆ.

ಮತ್ತೊಂದು ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಮೊದಲು ಪ್ರಾರಂಭ ಮಾಡಿದಾಗ, ಶ್ರೀಮಾನ್ ಮಲ್ಲಾರಾಧ್ಯರು ಮಾಡಿದ ಭಾಷಣದ ವಿಷಯದಲ್ಲಿ ನಾವುಗಳೆಲ್ಲಾ ಅವರು ಉತ್ತಮ ರೀತಿಯ ಭಾಷಣ ಮಾಡಿದರು ಎಂದು ತಿಳಿದುಕೊಂಡಿದ್ದೇವೆ. ನಮ್ಮ ಎದುರುಪಕ್ಷದಲ್ಲಿ ಕುಳಿತುಕೊಂಡು ಹೇಳಿದ ಮಾತ್ರಕ್ಕೆ, ಅವರ ಮಾತಿಗೆ ಮನ್ನಣೆ ಇಲ್ಲ, ಗೌರವ ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಪ್ರತಿಭಟನೆ ಮಾಡತಕ್ಕಂಥ ಸ್ಥಾನದಲ್ಲಿ ಕುಳಿತುಕೊಂಡಿದ್ದೇವೆ ಎಂದ ಮಾತ್ರಕ್ಕೇ, ಹೇಗೆ ಬೇಕಾದರೂ ಹೇಳಿಬಿಡಬಹುದು ಎಂದು ಹೇಳುವುದು ಸರಿಯಲ್ಲ. ಈ ಸಭೆಯ ಗೌರವ, ಗಾಂಭೀರ್ಯವೇನು ಎನ್ನುವುದನ್ನು ಯಾರೂ ಮರೆಯಬಾರದು. ಈ ಬಜೆಟ್ಟನ್ನು ಒಂದು ಸುಳ್ಳಿನ ಕಂತೆ ಎಂದು ಹೇಳಿಬಿಟ್ಟರು. ಹೀಗೆ ಹೇಳಿಬಿಟ್ಟರೆ, ಕಾಮನ್‌ಸೆನ್ಸ್ ಇರತಕ್ಕಂಥ ಯಾವ ಮನುಷ್ಯನಾದರೂ ನಂಬುವುದಕ್ಕೆ ಸಾಧ್ಯವೇ? ಯೋಚನೆ ಮಾಡಿ. ಹಾಗೆ ಹೇಳಬಾರದು. ಈ ಘಳಿಗೆಯೇ ಈ ಸ್ಥಾನವನ್ನು ಬಿಟ್ಟುಹೋಗಿ ಎಂದು ಹೇಳಿಬಿಟ್ಟರು. ಈ ಸ್ಥಾನವನ್ನು ಬಿಟ್ಟುಹೋಗುವುದಕ್ಕೆ ಸಿದ್ಧ, ಆದರೆ ಅದನ್ನು ತೆಗೆದುಕೊಳ್ಳುವವರು ಇರಬೇಕಲ್ಲ. ಅದಕ್ಕೆ ದೇಶದ ತೀರ್ಮಾನವಾಗಬೇಕು. ತೆಗೆದುಕೊಳ್ಳಬೇಡ ಎಂದು ನಾವು ಅನ್ನುವುದಿಲ್ಲ. ತೆಗೆದುಕೊಳ್ಳಿ ಅಂದರೆ, ತೆಗೆದುಕೊಳ್ಳುವುದಕ್ಕೆ ಯಾರು ಬರುತ್ತಾರೆ? ಪುನಃ ದಾಸಯ್ಯನ ಹೆಣ. ಒಂದು ಹೋದರೆ, ಇನ್ನೊಂದು ದಾಸಯ್ಯನ ಹೆಣ ಬರುತ್ತದೆ. ಬರುವವರು ಯಾರು? ನಮ್ಮವರೇ ಬರತಕ್ಕವರು. ಬಾಯಿಚಪಲ ತೀರಿಸಿಕೊಳ್ಳುವುದಕ್ಕೆ ಮಾತು ಬೇಡ. ಗಾಂಭೀರ್ಯದಿಂದ, ಒಳ್ಳೆಯ ರೀತಿಯಲ್ಲಿ ಕ್ರಿಟಿಸೈಸ್ ಮಾಡಿ. ನಾನೂ ಆ ಸ್ಥಾನದಲ್ಲಿ ಕೆಲಸವನ್ನು ಮಾಡಿರತಕ್ಕಂಥವನು. ಜವಾಬ್ದಾರಿಯನ್ನು ಅರಿತು, ವಹಿಸಿಕೊಂಡು, ಹಾಗೆ ವಹಿಸಬಲ್ಲ ದೃಷ್ಟಿಯಿಂದ, ಮಾತನಾಡುವುದಾದರೆ, ಗೌರವ ಮನ್ನಣೆ ದೊರೆಯುತ್ತದೆ.

ಈ ಎರಡು ಮಾತುಗಳನ್ನಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು).—ಸಂಸ್ಥಾನಾದ್ಯಂತ ಏಡೆಡ್ ಹಾಸ್ಟೆಲ್‌ಗಳು, ಹರಿಜನರ ಸಂಖ್ಯೆ ಹಿಂದೆ ಎಷ್ಟಿತ್ತೋ, ಈಗಲೂ ಅಷ್ಟೇ ಇವೆ. ಈಗ ಅನೇಕ ಹರಿಜನ ಹುಡುಗರು ಆ ಹಾಸ್ಟಲುಗಳಿಗೆ ಅರ್ಜಿಹಾಕಿ, ಸ್ಥಾನ ಸಿಕ್ಕದೆ ನಿರಾಶರಾಗಿ ಹೋಗುತ್ತಿದ್ದಾರೆ. ದುಡ್ಡು ಖರ್ಚು ಮಾಡಿ ಅವರು ಓದುವುದಕ್ಕಾಗುವುದಿಲ್ಲ. ಆದ್ದರಿಂದ ಈ ವರ್ಷ ಪ್ರತಿಯೊಂದು ಹಾಸ್ಟೆಲಿಗೂ ಕೊನೆಯ ಪಕ್ಷ ಹತ್ತು ಹತ್ತು ಹುಡುಗರ ಸಂಖ್ಯೆ ಜಾಸ್ತಿಮಾಡಿ ಕೊಡಬೇಕು.

ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ, ಪ್ರೈಮರಿ ಸ್ಕೂಲ್ ಹಾಸ್ಟೆಲ್ ಮಾಡುವುದಕ್ಕೆ, ಅಲ್ಲಿ ಈವಾಗ ಸ್ಕೂಲ್ ಇದ್ದಕಡೆ, ಮಕ್ಕಳಿಗೆ ಜಾಗ ಕೊಡುವುದಿಲ್ಲ ಎಂದು

ತಕರಾರು ಆಗಿದೆ. ಸ್ಕೂಲ್ ಇದ್ದ ಕಡೆ ಇವರು ಕಳುಹಿಸುವುದಿಲ್ಲ, ವಿದ್ಯಾಭ್ಯಾಸಕ್ಕೆ ಹಿಂದೆ ಯಾವ ರೀತಿ ಗ್ರ್ಯಾಂಟ್ ಕೊಡುತ್ತಾ ಇದ್ದಿರೋ, ಅದೇ ರೀತಿ, ಪ್ರೈಮರಿ ಸ್ಕೂಲ್‌ಗಳಿಗೆ ಗ್ರ್ಯಾಂಟ್‌ಗಳನ್ನು ಮಾಮೂಲಿನಂತೆ ಕೊಡಬೇಕು. ಸ್ಕೂಲ್ ಇರಲಿ, ಇರದಿರಲಿ, ಹಾಸ್ಟೆಲ್‌ನಲ್ಲಿ ವಿದ್ಯಾಭ್ಯಾಸ ಮಾಡಿಸಬೇಕು.

ಶ್ರೀ ವಿ. ವೆಂಕಟಪ್ಪ.—ಈಗ ಹೊಸದೇನೂ ಅಲ್ಲ, ಹಿಂದಿನಿಂದ ಬಂದಿರತಕ್ಕದ್ದು. ಊರಿನ ಹುಡುಗರಿಗೆ ಕೊಡುವುದಾದರೆ ಹೊರಗಡೆಯಿಂದ ಬರುವವರಿಗೆ ಅನುಕೂಲ ಕಡಮೆಯಾಗುತ್ತದೆ ಎನ್ನುವ ದೃಷ್ಟಿಯಿಂದ ಹಾಗೆ ಮಾಡಿದ್ದಾರೆ. ಊರಿನಲ್ಲಿ ಇರತಕ್ಕವರು ಕೂಡ ಬಡವರು. ಅವರಿಗೂ ಅನುಕೂಲಮಾಡಿಕೊಡಬೇಕು. ಅದನ್ನು ಪರಿಶೀಲನೆಮಾಡಿ ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ವಿಚಾರ ಮಾಡಲಾಗುತ್ತದೆ.

ಶ್ರೀ ಜಿ. ಎಫ್. ಪುಟ್ಟಣ್ಣ—ತುಮಕೂರು ತಾಲ್ಲೂಕಿನಲ್ಲಿ ಏಳೆಂಟು ಸ್ಕೂಲುಗಳ ಕಟ್ಟಡ ಕಟ್ಟಿದ್ದರೂ ಅವುಗಳನ್ನು ಗೌರ್ನಮೆಂಟಿಗೆ ತೆಗೆದುಕೊಂಡಿಲ್ಲ. ಜಾಗ್ರತೆ ಅವನ್ನು ತೆಗೆದುಕೊಳ್ಳುವಂತೆ ಮಾಡುತ್ತೀರಾ ?

ಶ್ರೀ ವಿ. ವೆಂಕಟಪ್ಪ.—ಮಾಡಿಸುತ್ತೇನೆ.

Sri F. H. MOHSIN.—Sir, I had raised a question of levying of fees in primary schools. In municipal schools there is a practice of charging fees for schools run by them. Of course, Hon'ble Minister may say that fees will not be charged bys chools run by Government. In our areas especially primary schools are run by municipal boards. Will the Govern ment issue nstructions not to levy fees ?

ಶ್ರೀ ವಿ. ವೆಂಕಟಪ್ಪ.—ಇದನ್ನು ಪೂರ್ಣವಾಗಿ ವಿಚಾರ ಮಾಡುತ್ತೇನೆ. ಚೀಫ್ ಮಿನಿಸ್ಟರು ಆ ವಿಚಾರದಲ್ಲಿ ಹೇಳುತ್ತಾರೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಮುಳಬಾಗಿಲು).—ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ನಡೆಯುತ್ತಿರುವ ಹೈಸ್ಕೂಲುಗಳನ್ನು ಸರ್ಕಾರದವರು ತೆಗೆದುಕೊಳ್ಳುವ ವಿಚಾರದಲ್ಲಿ ತಮ್ಮ ಅಭಿಪ್ರಾಯವೇನು ?

ಶ್ರೀ ವಿ. ವೆಂಕಟಪ್ಪ.—ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ಇರುವುದನ್ನು ತೆಗೆದುಕೊಳ್ಳುವುದು ಸಾಧ್ಯವಾಗಲಾರದು ಎಂದು ಸರ್ಕಾರದ ಅಭಿಪ್ರಾಯ.

ಶ್ರೀ ಎಸ್. ಪಿ. ತಳವಾರ್‌ಕರ್ (ರಾಯಬಾಗ್).—(ಮರಾಠಿಯಲ್ಲಿ) ಟ್ರೈನಿಂಗ್ ಕಾಲೇಜಿಗೆ ಹೋಗುವವರಿಗೆ ಸಂಪೂರ್ಣ ಸಂಬಳ ಸಿಕ್ಕುತ್ತಿಲ್ಲ. ಅವರಿಗೆ ಸ್ಕಾಲರ್‌ಷಿಪ್ ಅಥವಾ ಸಾಲ ಕೊಟ್ಟರೆ ತೊಂದರೆಯಾಗುತ್ತದೆ. ಆದ್ದರಿಂದ ಸಂಪೂರ್ಣ ಪಗಾರ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ವಿ. ವೆಂಕಟಪ್ಪ.—ಅದು ನಾವು ಮಾಡಿದ ಏರ್ಪಾಡು ಅಲ್ಲ. ಹಿಂದಿನಿಂದ ಬಂದಿರುವುದು. ಪರಿಶೀಲನೆಮಾಡಿ ಯಾವರೀತಿ ಒಂದು ಏರ್ಪಾಡು ಮಾಡಬೇಕು ಎಂಬುದನ್ನು ಯೋಚನೆ ಮಾಡುತ್ತೇವೆ.

*ಶ್ರೀ ಟಿ. ಮರಿಯಪ್ಪ (ಹಣಕಾಸಿನ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಆಯವ್ಯಯಪಟ್ಟಿಯ ಮೇಲೆ ದೀರ್ಘವಾಗಿ ಶ್ರೀ ವೈಕುಂಠ ಬಾಳಿಗರವರು ಭಾಷಣವನ್ನು ಕೊಡುತ್ತಾರೆ. ಈ ಆಯವ್ಯಯ ಪಟ್ಟಿಯನ್ನು ವಿಮರ್ಶೆಮಾಡುವಂಥ ಮಹನೀಯರು ತಮ್ಮ ತೃಪ್ತಿಯನ್ನು ವ್ಯಕ್ತಪಡಿಸಿದುದಕ್ಕೋಸ್ಕರ ಅವರಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಕೊಡುವುದಕ್ಕೋಸ್ಕರ ಈ ಭಾಷಣವನ್ನು ಮಾಡುತ್ತಿದ್ದೇನೆ. ಈ ಆಯವ್ಯಯ ಪಟ್ಟಿಯನ್ನು ಅನೇಕರು ಸ್ವಾಗತಿಸಿದ್ದಾರೆ. ಇದರಲ್ಲಿ ಯಾವ ಮುಚ್ಚುಮರೆಯೂ ಇಲ್ಲ ಎಂದು ನನ್ನ ಭಾಷಣದಲ್ಲಿ ಹೇಳಿದ್ದೇನೆ. ಪ್ರಜಾಪ್ರಭುತ್ವದಲ್ಲಿ ಯಾವ ಪಕ್ಷದವರೇ ಸರ್ಕಾರವನ್ನು ನಡೆಸಲಿ ಅದರಲ್ಲಿ ಮುಚ್ಚುಮರೆ ಮಾಡುವ ಸಂಗತಿ ಇಲ್ಲ. ತಾತ್ಕಾಲಿಕವಾಗಿ ಒಂದು ಪಕ್ಷದವರು ರಾಜ್ಯಭಾರ ನಡೆಸುತ್ತಾರೆ. ಆಡಳಿತದ ವಿಷಯದಲ್ಲಿ ಎಲ್ಲಾ ಪಕ್ಷದವರ ಅಭಿಮತವನ್ನೂ ಪಡೆಯಬೇಕಾದ ಅಗತ್ಯವಿರುವುದರಿಂದ ಎಲ್ಲಾ ವಿಷಯಗಳನ್ನೂ ಮುಚ್ಚುಮರೆ ಇಲ್ಲದೆ ಇಡಬೇಕಾದದ್ದು ನಮ್ಮ ಕರ್ತವ್ಯ. ಆದ್ದರಿಂದ ಆ ರೀತಿ ಇಟ್ಟಿದ್ದೇವೆ. ಹೊಸ ರಾಜ್ಯ ಸ್ಥಾಪನೆ ಆದ ಮೇಲೆ ನಮ್ಮ ಹಣಕಾಸಿನ ಪರಿಸ್ಥಿತಿ ಯಾವ ರೀತಿ ಇತ್ತು ಎಂಬುದನ್ನು ಹಿಂದೆಯೇ ತಿಳಿಸಿದ್ದೇನೆ. ಈಗ ತಮ್ಮೆಲ್ಲರ ಸಹಕಾರದಿಂದ ಮತ್ತು ಹೆಚ್ಚಾಗಿ ಫೈನಾನ್ಸ್ ಕಮಿಷನ್‌ನವರ ಸಹಾಯದಿಂದ ಮತ್ತು ಕೇಂದ್ರ ಸರ್ಕಾರದವರ ಸಹಾಯದಿಂದ ನಮ್ಮ ಹಣಕಾಸಿನ ಭದ್ರತೆಗೆ ಸಂಬಂಧಪಟ್ಟ ವಿಚಾರವನ್ನು ಈ ಸಭೆಯ ಮುಂದೆ ಇಟ್ಟಿದ್ದೇವೆ. ಇದರಲ್ಲಿ ಜಗ್ಲರಿ ಇಲ್ಲ ; ಮತ್ತು ಕಣ್ಣಾಮುಚ್ಚಾಲೆ ಆಟವಿಲ್ಲ, ಅಥವಾ ಬಣ್ಣ ಬಳಿದಂಥ ಬೊಂಬೆಯ ಆಟವಿಲ್ಲ. ಅಷ್ಟು ತೀಕ್ಷ್ಣಬುದ್ಧಿ ಇರತಕ್ಕ ಸಭಾಸದಸ್ಯರಲ್ಲಿ ಹಾಗೆ ಮಾಡುವುದಕ್ಕೆ ಹೋದರೆ ಬೆಚ್ಚಿಬೀಳುತ್ತೇವೆ. ಅದನ್ನೆಲ್ಲಾ ಬಿಟ್ಟು ಯಾವ ಅಂಕಿ ಅಂಶಗಳನ್ನೂ ಮರೆಮಾಚದೆ ಮತ್ತು ಏನು ವರಮಾನ ಬರಬೇಕು ಅದನ್ನು ಕೂಡ ಬಹಳ ಕಡಮೆಯಾಗಿ ಇಟ್ಟುಕೊಂಡಿದ್ದೇವೆ. ನಾವು 100 ರೂಪಾಯಿ ಬರಬೇಕು ಎಂದು ಮನಸ್ಸಿನಲ್ಲಿ ಇಟ್ಟುಕೊಂಡಿದ್ದರೆ 98 ರೂಪಾಯಿ ತೆಗೆದುಕೊಂಡಿದ್ದೇವೆ. ಆ ರೀತಿ ಬರಬೇಕಾದ್ದು ತೆಗೆದುಕೊಂಡು ವೆಚ್ಚ ಮಾಡುವುದನ್ನು ಕೂಡ ಸಾಧ್ಯವಾದಮಟ್ಟಿಗೆ ಎಲ್ಲೆಲ್ಲಿ ಕಡಮೆ ಮಾಡಬೇಕು ಎಂಬುದನ್ನು ವಿಮರ್ಶೆಮಾಡಿ ಮಾಡಿದ್ದೇವೆ. ಅದನ್ನು ಅರಿತು ಬಹಳ ಚೆನ್ನಾಗಿ ಅಪ್ರಿಷಿಯೇಟ್ ಮಾಡಿದ್ದಾರೆ. ಕೆಲವರು ಮಾತ್ರ ಅದರಲ್ಲಿ ಸ್ವಲ್ಪ ತಪ್ಪು ಕಂಡುಹಿಡಿದಿದ್ದಾರೆ. ತಪ್ಪು ಕಂಡುಹಿಡಿಯಬೇಕಾದದ್ದು ಅಗತ್ಯ. ಎಲ್ಲರೂ ಬಡ್ಜೆಟ್ಟನ್ನು ಹೊಗಳಬೇಕಾಗಿಲ್ಲ. ಕೆಲವರು ಇದು ಸಿಕ್‌ಮ್ಯಾನ್ಸ್ ಬಡ್ಜೆಟ್ ಎಂದು ನನ್ನ ಕಾಯಿಲೆ ತೆಗೆದುಕೊಂಡು ವ್ಯಥೆಪಟ್ಟಿದ್ದಾರೆ. ಇದು ಖಂಡಿತ ಸಿಕ್‌ಮ್ಯಾನ್ಸ್ ಬಡ್ಜೆಟ್ ಆಗಿದ್ದರೆ ಇಷ್ಟು ತಿಣುಕಬೇಕಾಗಿತ್ತೇ, ಇಷ್ಟು ಕಷ್ಟಪಡಬೇಕಾಗಿತ್ತೇ ? ಫೈನಾನ್ಸ್ ಕಮಿಷನ್ ಮುಂದೆ ನಮ್ಮ ದೇಶದ ವಿಷಯವನ್ನು ಚೆನ್ನಾಗಿ ಇಟ್ಟಿದೆ. ಈ ಹೊಸ ರಾಜ್ಯವು ದೃಢಕಾಯವಾಗಿರಬೇಕು, ಭದ್ರಕಾಯವಾಗಿರಬೇಕು, ತನ್ನ ಶಕ್ತಿಯಿಂದ ಮುಂದೆ ಬರತಕ್ಕ ಕಷ್ಟಗಳನ್ನು ನುಂಗಿಕೊಂಡು ದುಡಿಯಬೇಕಾಗುತ್ತದೆ. ಈಶ್ವರ ಹೇಗೆ ವಿಷವನ್ನು ಕುಡಿದು ಮುಂದಕ್ಕೆ ಹೋಗಬಯಸಿದನೋ ಹಾಗೆಯೇ ರಾಜ್ಯ ಕಟ್ಟಬೇಕಾದರೆ ಕಷ್ಟಪಟ್ಟು ಮುಂದೆ ಹೋಗಬೇಕು. ಇದು ರಾಜ್ಯಗಳ ಪ್ರದೇಶಗಳೂ ಒಂದು ಮಟ್ಟದಲ್ಲಿದ್ದರೆ ಪರವಾಯಿಲ್ಲ. ಆದರೆ ಐದು ಯೂನಿಟ್ಟುಗಳ ಅಂಕಿ ಅಂಶಗಳು ಗೊತ್ತಿಲ್ಲದೆ ಇರುವಾಗ ಮೊದಲನೆಯ ಬಾರಿ ಅದನ್ನು ವರ್ಕ್ ಔಟ್ ಮಾಡಿ ಅಂಕಿ ಅಂಶಗಳನ್ನು ತಯಾರುಮಾಡಿ ಇಷ್ಟರ ಮಟ್ಟಿಗೆ ಪರವಾಯಿಲ್ಲ ಎನ್ನುವ ಹಾಗೆ ಮಾಡಿರುವುದನ್ನು ಕೆಲವರು ಮನಗಂಡಿದ್ದಾರೆ, ಆದ್ದರಿಂದ ನನ್ನ ಕಾಯಿಲೆ ಈ ಬಡ್ಜೆಟ್ಟಿಗೆ ಬಂದಿಲ್ಲ. ದಯವಿಟ್ಟು ಕ್ಷಮಿಸಬೇಕು. ದೇಶ ಸುಭದ್ರವಾಗಿದೆ. ನಾವು

(ಶ್ರೀ ಟಿ. ಮರಿಯಪ್ಪ)

ಸಾಲ ಎತ್ತುವುದಕ್ಕೆ ಹೋದಾಗ ಜನರು ಉತ್ಸಾಹದಿಂದ ಅದನ್ನು ತುಂಬಿದರು. ಅದು ಒಂದರಿಂದಲೇ ಭದ್ರವಾಗಿದೆ ಎಂದು ಹೇಳುವುದಿಲ್ಲ. ಸಾಲ ಸಿಕ್ಕಿರುವುದರಿಂದ ಭದ್ರವಾಗಿದೆ ಎಂದು ಹೇಳುವುದಿಲ್ಲ. ತಮ್ಮ ಕಣ್ಣುಗಳಿಂದ ಪರೀಕ್ಷೆ ಮಾಡಿದರೆ ಗೊತ್ತಾಗುತ್ತದೆ. ಹಾಗೆ ಭದ್ರವಾಗಿದೆ ಎಂದು ಹೇಳಿ ಕೈಲಾಗದೆ ಶಕ್ತಿ ಮೀರಿ ಮಾಡುವುದಕ್ಕಾಗುವುದಿಲ್ಲ. ನನ್ನ ಶಕ್ತಿಮೀರಿ ಕೆಲಸ ಮಾಡುವುದಕ್ಕೂ ಆಗುವುದಿಲ್ಲ. ಇದಕ್ಕೆ ಒಂದು ಮಿತಿ ಇದೆ. ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕ ಸಹಾಯದ ಜೊತೆಗೆ ಇನ್‌ಟರ್ನಲ್ ರಿಸೋರ್ಸಸ್ ಮ್ಯಾಕ್ಸಿಮೈಸ್ ಮಾಡಿದ್ದೇವೆ. ಹಾಗಾದರೂ ನಮ್ಮ ರೆವಿನ್ಯೂ ಬಡ್ಜೆಟ್ ಖೋತಾ ಆಗಿದೆ. ನಾನು ಒತ್ತಿ ಒತ್ತಿ ಹೇಳಿವೆ. ದೇಶ ಭದ್ರತೆಯಿಂದ ಇರಬೇಕಾದರೆ ದೇಶದ ಭದ್ರತೆಯನ್ನು ಕಾಪಾಡುವುದಕ್ಕೆ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಕಡಮೆ ಮಾಡಲೇ ಬೇಕು. ದೇಶವನ್ನು ಒಂದೇಸಾರಿ ಕಟ್ಟುವುದಕ್ಕೆ ಆಗುವುದಿಲ್ಲ. ಒಂದೇಸಾರಿ ಕಟ್ಟುತ್ತೇವೆಂದು ಮನಸ್ಸಿನಲ್ಲಿ ಇಟ್ಟುಕೊಂಡರೆ ಅದು ಬರಿಯ ಭ್ರಾಂತಿ. ಹಣ ಸ್ಯಾಂಕ್ಷನ್ ಮಾಡಬಹುದು. ಅದು ಡ್ರೇನ್ ಕೆಳಗೆ ಹೋಗುತ್ತದೆ. ಮನುಷ್ಯ ಮಾಡುವುದಕ್ಕೆ ಒಂದು ಮಿತಿ ಇದೆ. ನನಗೆ ಎಷ್ಟು ಮಾಡುವುದಕ್ಕೆ ಸಾಧ್ಯವೋ ಅಷ್ಟೇ ಮಾಡಬಲ್ಲೆ. ಎಂಥ ದೃಢಕಾಯನಿಗೂ ಜೀರ್ಣಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಪ್ರತಿಯೊಂದು ರೂಪಾಯಿಗೂ ಪ್ರತಿಫಲ ಬರುವುದಿಲ್ಲ ಎಂದು ನಾನು ಒತ್ತಿ ಒತ್ತಿ ಹೇಳಿದ್ದೇನೆ. ಸರ್ಕಾರಕ್ಕೆ ಈ ಸಭಾಸದಸ್ಯರ ಸಹಕಾರವಿರಲೇ ಬೇಕು. ನಾವು ನಿಮ್ಮನ್ನು ರಿಫ್ಲೆಕ್ಟ್ ಮಾಡುತ್ತೇವೆ. We are after all a barometer. ಈ ಹೌಸ್‌ನಲ್ಲಿ ನಲ್ಲಿ ಟೆಂಪರೇಚರ್ ಜಾಸ್ತಿ ಆಗಿದ್ದರೆ ಕಷ್ಟಕಾಲ ಆಗಿರುತ್ತದೆ. ನಾನ್‌ಪ್ಲಾನ್ಡ್ ಮೊಬಲಗನ್ನು ಹೆಚ್ಚಿಗೆ ಮಾಡುವಂತೆ ಹೇಳಬೇಡಿ. ಈ ವರ್ಷ ಅಲ್ಲದಿದ್ದರೆ ಮುಂದಿನ ವರ್ಷ ಮಾಡೋಣ. ಯಾವುದರಿಂದ ರಿಟರ್ನ್ ಬರುತ್ತದೆ ಅದನ್ನು ಮಾತ್ರ ಮಾಡಬೇಕಾಗುತ್ತದೆ; ಎರಡು ಪರ್ಸೆಂಟ್ ಬರಲಿ ಮಾಡುತ್ತೇವೆ.

ಖರ್ಚುಗಳನ್ನು Remunerative ಹಾಗೂ unremunerative ಎಂದು Plan ಮತ್ತು non-Plan ಎಂಬುದಾಗಿಯೂ ವಿಂಗಡಿಸಲಾಗಿದೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳಾದ ಶ್ರೀಮಾನ್ ವೀರಣ್ಣಗೌಡರಿಗೆ ಅನೇಕ ಪ್ರಶ್ನೆಗಳನ್ನು ಸದಸ್ಯರು ಕೇಳಿದ್ದಾರೆ. ಅವುಗಳಿಗೆಲ್ಲ ಅವರು ಸಮರ್ಪಕವಾಗಿ ಉತ್ತರ ಕೊಟ್ಟಿದ್ದಾರೆ. ಬ್ರಿಟಿಷರು ನಮ್ಮ ದೇಶ ಬಿಟ್ಟು ಹೋದ ಒಂದು ವರ್ಷದಲ್ಲಿಯೇ ಎಲ್ಲವನ್ನೂ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಸಾಕಷ್ಟು ಕಾಲಾವಕಾಶ ಬೇಕು. ಆದುದರಿಂದ ಆ ರೀತಿಯಾಗಿ ಸದಸ್ಯರು ನಮಗೆ ಹೇಳಬಾರದು; ಹಾಗು ನಾವು ಕೇಳಬಾರದು. ಆಕ್ಷೇಪಣೆ ಮಾಡಿರಿ. ಬೇಡವೆನ್ನುವುದಿಲ್ಲ. ಆದರೆ ನಮಗೆ ಇರತಕ್ಕ resources ಎಷ್ಟು ಇದೆ, ಎಂಬುದನ್ನು ಗಮನಿಸಬೇಕಾಗುತ್ತದೆ. ಟ್ಯಾಕ್ಸ್ ಹೆಚ್ಚಿಗೆ ಮಾಡಬಾರದು ಎಂದು ಸಲಹೆ ಮಾಡುತ್ತಾರೆ. ಅದೇ ರೀತಿಯಾಗಿ ಈ ವರ್ಷ ಹೊಸ ಟ್ಯಾಕ್ಸ್ ಹಾಕುವ ಪ್ರೊಪೋಜಲ್ ಮಾಡಿಲ್ಲ. ಆದರೆ ಇದನ್ನೆಲ್ಲಾ ದಕ್ಷತೆಯಿಂದ ಪರಿಶೀಲಿಸುತ್ತೇವೆ. ಇನ್ನೂ ಯಾವುದರ ಮೇಲೆ ಟ್ಯಾಕ್ಸ್ ಹಾಕಬಹುದು ಎಂಬುದನ್ನೂ ನೋಡುತ್ತೇವೆ. ಇನ್ನೂ ಯಾವುದರ ಮೇಲೆ ಟ್ಯಾಕ್ಸ್ ಹಾಕಲು ಬರುವುದೋ ಅಂಥಾದ್ದೊಂದನ್ನೂ ಬಿಡುವುದಿಲ್ಲ. ಈ ವಿಷಯದಲ್ಲಿ ಮಸೂದೆಯನ್ನು ತಯಾರು ಮಾಡಿ ಸಭೆಯ ಮುಂದೆ ಇಡುತ್ತೇವೆ. ಹೊಸದಾಗಿ ಟ್ಯಾಕ್ಸ್ ಹಾಕದೆ ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಪೂರ್ತಿಗೊಳಿಸುವುದು ಸಾಧ್ಯವಿಲ್ಲ. ಈಗ ಯಾವ ವಿಧವಾದ ಹೊಸ ತೆರಿಗೆಯನ್ನೂ ವಿಧಿಸಿಲ್ಲ. ಆದರೆ ಯೋಜನೆಯ ಕೊನೆಯ ಎರಡು ವರ್ಷ ಬಹಳ ಕಠಿಣ ಸ್ಥಿತಿಯಲ್ಲಿರುವುದು. ಸಭೆಯ ಮುಂದೆ ಮಂಡಿಸಲಾಗುವ ಏಕ ರೀತಿಯ ತೆರಿಗೆಯ ಕಾನೂನಿಂದ ಹೆಚ್ಚಿನ ಆದಾಯವನ್ನು ತರಬಹುದೆಂದು ಭಾವಿಸಲಾಗಿದೆ. ಅಗತ್ಯವಾಗಿ ವೆಚ್ಚಮಾಡಬೇಕಾಗಿರುವ ಕಾರ್ಯಗಳಿಗೆ ಹಣವನ್ನು ಒದಗಿಸಲು ಯೋಜನೆಯ ಕೊನೆಯ ಎರಡು ವರ್ಷ ತೆರಿಗೆಗಳನ್ನು ನೀಡಲು ಸಿದ್ಧರಾಗಿರಬೇಕು! ರಾಜ್ಯದ ಆರ್ಥಿಕ ಪರಿಸ್ಥಿತಿ ಸುಭದ್ರತೆಯಿಂದ ಕೂಡಿದೆ. ಆದರೆ ನಾವು ನಮ್ಮ ಮಿತಿಯನ್ನು ಮೀರದಂತೆ ವೆಚ್ಚ ಮಾಡಬೇಕಾಗಿದೆ. ಆದ್ದರಿಂದ ಕಡೆಯ ಆ ಎರಡು ವರ್ಷಗಳಲ್ಲಿ ಬಹಳ ಕಷ್ಟವಾಗುತ್ತದೆ. ಸಾಕಷ್ಟು ಹಣ ಇಲ್ಲದೇ ಹೋದರೆ ಡೆವಲಪ್‌ಮೆಂಟ್ ಮಾಡುವುದು ಶಕ್ಯವಿಲ್ಲ. ಹೆಚ್ಚು ಕಂದಾಯ ವಿಧಿಸಲು ಸಾಧ್ಯವಿಲ್ಲ. ಆದಕಾರಣ ಟ್ಯಾಕ್ಸ್ ಕೊಡಲು ಮನಸ್ಸು ರೆಡಿ ಮಾಡಬೇಕು. ಟ್ಯಾಕ್ಸ್ ಯಾರು ಹೊರಬಲ್ಲರೋ ಅಂಥವರ ಬೆನ್ನು ಮೂಳೆ ಮುರಿದುಹೋಗುವಷ್ಟು ಟ್ಯಾಕ್ಸ್ ಹಾಕಿಬಿಟ್ಟಿದ್ದೇವೆ ಎಂಬ ವಾದವನ್ನು ನಾನು ಒಪ್ಪುವುದಿಲ್ಲ. ಡೆವಲಪ್‌ಮೆಂಟ್ ಆಗಬೇಕಾದರೆ ಹಣ ಖರ್ಚು ಮಾಡಬೇಕಾಗುತ್ತದೆ. ಕಡೆಯ ದರ್ಜೆಯಲ್ಲಿರುವವರನ್ನು ಬಿಟ್ಟು ಉಳಿದವರ ಮೇಲೆ ಟ್ಯಾಕ್ಸ್ ಹಾಕುವುದು ಸಾಧ್ಯವಿದೆ. ಇದನ್ನೆಲ್ಲಾ ತಿಳಿದುಕೊಂಡಿರತಕ್ಕ ಪ್ರಾಜ್ಞರು ಈ ಸಭೆಯಲ್ಲಿ ಇದ್ದಾರೆ.

ಇನ್ನು ಬಹಳ ತೆರಿಗೆಗಳ ಬಾಕಿಯನ್ನು ವಸೂಲು ಮಾಡುವದರಲ್ಲಿ ಸರಕಾರ ವಿಫಲವಾಗಿದೆ, ನಿಶ್ಯಕ್ತವಾಗಿದೆ ಎಂದು ಸದಸ್ಯರು ಟೀಕೆ ಮಾಡಿದರು. ಆದರೆ ಸ್ವಲ್ಪ ಯೋಚನೆ ಮಾಡಬೇಕು. ಒಂದು ಮನೆಯಿಂದ ಮತ್ತೊಂದು ಮನೆಗೆ ಸಾಮಾನುಗಳನ್ನು ತೆಗೆದುಕೊಂಡು shift ಮಾಡಲು ಎಷ್ಟೋ ಕಾಲ ಕಳೆದುಹೋಗುತ್ತದೆ. ಈ ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ ಕಾಲಾವಕಾಶಬೇಕು. ಈ ರೀತಿ ಸದಸ್ಯರು ಮಾಡಿದ ಆಪಾದನೆಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಬಾಕಿಯನ್ನು ವಸೂಲು ಮಾಡಲು ಅಗತ್ಯವಿರುವ ಕ್ರಮವನ್ನು ಕೈಕೊಳ್ಳಲಾಗಿದೆ. ಆದ್ದರಿಂದ ದಯವಿಟ್ಟು ಮನಸ್ಸಿನಲ್ಲಿರುವ ಇಂಥ ಭಾವನೆಯನ್ನು ಸದಸ್ಯರು ಅಳಿಸಿಬಿಡಬೇಕು. ಸೇಲ್ಸ್‌ಟ್ಯಾಕ್ಸ್ ಇದೊಂದು ಹೊಸ ಆಕ್ಟು. ಇದು 1ನೆಯ ಅಕ್ಟೋಬರ್ 1957ಕ್ಕೆ ಜಾರಿಯಲ್ಲಿ ಬಂದಿದೆ. ಈ ಕಾನೂನನ್ನು ಸುವ್ಯವಸ್ಥಿತ ರೀತಿಯಲ್ಲಿ ಜಾರಿಗೆ ತರಲು ಸ್ವಲ್ಪ ಕಾಲ ಬೇಕಾಯಿತು. ಆದರಿಂದ ಬಾಕಿವಸೂಲು ಮಾಡುವದರಲ್ಲಿ ಸ್ವಲ್ಪ ತಡವಾಗಿದೆ. Latest figures ಕೊಡುತ್ತೇನೆ. ಈ ಹೊಸ ಕಾನೂನನ್ನು ಜಾರಿಗೆ ತರುವಾಗ ಡಿಪಾರ್ಟ್‌ಮೆಂಟ್ organise ಮಾಡಬೇಕು, rules frame ಮಾಡಬೇಕು. ಹೊರಗಡೆಯಿಂದ ಎಷ್ಟೋ ಅಧಿಕಾರಿಗಳು ಬಂದಿದ್ದಾರೆ. ಮೈಸೂರಿನಲ್ಲಿರುವ ಪರಿಸ್ಥಿತಿ ಈಗ ಅವರಿಗೂ ಗೊತ್ತಾಗಿದೆ. ಅವರೆಲ್ಲಾ ದಕ್ಷತೆಯಿಂದ ಕೆಲಸಮಾಡುತ್ತಿದ್ದಾರೆ. ಯಾವುದನ್ನಾದರೂ ಮೊದಲು ಪ್ರಾರಂಭಿಸುವಾಗ ಬಹಳ ಕಷ್ಟವಿರುತ್ತದೆ. ಸೇಲ್ಸ್ ಟ್ಯಾಕ್ಸ್ ಬಾಕಿ ವಸೂಲಿಯ ವಿಚಾರವಾಗಿ latest figures ಹೇಳುತ್ತೇನೆ.

Sales Tax Arrears:—

	Rs.
Arrears as on 1-11-1956.	56,44,873
Arrears from 1-11-1956 to 31-3-1957 ...	41,46,482
Total ...	97,91,355

	Rs.
Collection from 1-11-1956 to 31-12-1957 ...	34,07,339
Current demand from 1-4-1957 to 31-12-1957	1,79,57,343
Collection	1,43,98,469

ಆದುದರಿಂದ current demand ನಲ್ಲಿ ಬಹಳ ಮಟ್ಟಿಗೆ collect ಮಾಡಿದ್ದಾರೆ. Arrears ವಸೂಲು ಮಾಡುವದಕ್ಕೆ ಸಮಜಾಯಿಷಿ ಕೊಡುವುದು ಬಹಳ ಕಷ್ಟ. ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಎರಡು ಮೂರು ವರ್ಷಗಳಾದಮೇಲೆ ಅಸೆಸ್‌ಮೆಂಟ್ ಮಾಡುವ ರೂಢಿ ಬಂದಿದೆ. ಸಮಜಾಯಿಷಿ ಮಾಡಿ ಕೊಡಬೇಕಾಗಿದೆ. ಹೈದರಬಾದ್ ಪ್ರದೇಶದಲ್ಲಿ ಇನ್ನೂ ರಿಕಾರ್ಡು ತಯಾರುಮಾಡಬೇಕಾಗಿದೆ. ಅಲ್ಲಿಯ ವ್ಯಾಪಾರಸ್ಥರು ಉಪಯೋಗಿಸುವ ಉರ್ದು ಭಾಷೆಯಲ್ಲಿ ಲೆಕ್ಕ ಪತ್ರಗಳನ್ನು ತಿಳಿದುಕೊಂಡು ಕೆಲಸ ಮಾಡುವುದು ಬಹಳ ಕಷ್ಟವಾಗಿದೆ.

	Rs.
Collection from 1-11-1956 to 31-12-1957 ...	34,07,339
Collection-current Demand from 1-4-1957 to 31-12-1957 ...	1,43,98,469
Balance of arrears as on 31-12-1957 ...	63,84,016
Balance of current Demand	35,58,874

Action Taken :—	Rs. in lakhs.
Prosecution launched to the extent of ...	2,37
Recovery certificates issued to the extent of ...	47
Stay Orders ...	13,73,000
Appeals Pending	2,32,000
Write off (recommendation) ...	1,90,000
Departmental action taken ...	38,000 pending
Conviction in the court about ...	4,000

ಅಧ್ಯಕ್ಷರು.—ಈ ವಿವರಗಳನ್ನೆಲ್ಲಾ ಸದಸ್ಯರಿಗೆ ಒದಗಿಸಿದರೆ ಚೆನ್ನಾಗಿರುತ್ತದೆ. ಈ D.C.B. Statement ಎಲ್ಲ ಸದಸ್ಯರಿಗೆ ಸರ್ಕ್ಯುಲೇಟ್ ಮಾಡಿದರೆ ಉತ್ತಮವಾಗುತ್ತದೆ. ಅದರಿಂದ ಎಲ್ಲರಿಗೆ ಉಪಯೋಗವಾಗುತ್ತದೆ.

ಶ್ರೀ ಟಿ. ಮರಿಯಪ್ಪ.—D.C.B. statement ಕೊಡುತ್ತೇನೆ. ಅಧಿಕಾರಿಗಳು ಬಾಕಿ ಹಣವನ್ನು ವಸೂಲು ಮಾಡುತ್ತಿದ್ದಾರೆ. ಬಾಕಿ ವಸೂಲು ಮಾಡುವುದನ್ನು ದಯವಿಟ್ಟು ನಿಲ್ಲಿಸಿರಿ ಎಂದು ಸದಸ್ಯರು ಟೆಲಿಗ್ರಾಂ ಕಳಿಸುತ್ತಿದ್ದಾರೆ. ಈ ರೀತಿ ದಯವಿಟ್ಟು ಬಾಕಿ ವಸೂಲು ಮಾಡುವುದನ್ನು ನಿಲ್ಲಿಸಿ ಎಂದು ಟೆಲಿಗ್ರಾಮ್ ಕಳಿಹಿಸಿಕೊಡುವುದು ಬೇಡ. ಅದನ್ನು ನಿಲ್ಲಿಸಬೇಕು. ಬಾಕಿಯನ್ನು ವಸೂಲು ಮಾಡುವುದರ ಸಂಬಂಧದಲ್ಲಿ ಸದಸ್ಯರು ಸರಕಾರದೊಡನೆ ಸಹಕರಿಸಬೇಕು. ಈಗಾಗಲೇ 30-40 ಸಾವಿರ ರೂಪಾಯಿಗಳವರೆಗೆ ಸ್ಟೇ ಆರ್ಡರ್ ಆಯಿತು. ಆದರೆ ಈಗ ಟೆಲಿಗ್ರಾಮು ಬಂದರೂ ಸುಮ್ಮನೇ ಇರುತ್ತೇವೆ. ಯಾವ ಕ್ರಮ ತೆಗೆದುಕೊಂಡಿಲ್ಲ.

ಒಬ್ಬ ಸದಸ್ಯರು.—ಟೆಲಿಗ್ರಾಮ್ ಯಾರು ಕೊಟ್ಟಿದ್ದಾರೆ, ಸ್ವಾಮಿ ?

ಶ್ರೀ ಟಿ. ಮರಿಯಪ್ಪ.—ಹೀಗೆಯೇ ಇದ್ದಾರೆ, XYZ. ಅವರ ಹೆಸರುಗಳನ್ನು disclose ಮಾಡುವುದಿಲ್ಲ. ನಿಲ್ಲಿಸಿ ಎಂದು ಹೇಳುವದರಲ್ಲಿ ಅಷ್ಟೇನು ತಪ್ಪು ಇಲ್ಲ. ಅದು ಮುಖ್ಯವಲ್ಲ. ಆದರೆ ಅವರ intention ಏನಿದೆ ನೋಡಿ. ಹಣ ಕೊಡಲು ಶಕ್ತಿ ಇದ್ದರೂ ಹಣ ಕೊಡುವುದಕ್ಕೆ ಮನಸ್ಸಿಲ್ಲ. ಒಂದು ವೇಳೆ ನಾವೇನಾದರೂ ಹಾಗೆ ಮಾಡಿದರೆ ವ್ಯಕ್ತಿ ನೋಡಿ ಮಣೆ ಹಾಕುತ್ತಾರೆಂದು ಜನರು ನಮಗೆ ದೂಷಣೆ ಕೊಡುತ್ತಾರೆ.

ಒಬ್ಬ ಸದಸ್ಯರು.—ಯಾವ area ದಿಂದ ಟೆಲಿಗ್ರಾಂ ಬಂದಿದೆ ಹೇಳುತ್ತೀರಾ ?

ಶ್ರೀ ಟಿ. ಮರಿಯಪ್ಪ.—ಹೊಸ ಮೈಸೂರು ರಾಜ್ಯದಲ್ಲಿಯ area ದಿಂದ ಬಂದಿದೆ.

ದಯವಿಟ್ಟು ಸದಸ್ಯರು ನಮಗೆ ರಚನಾತ್ಮಕ ಸಲಹೆ ಕೊಡಬೇಕು. ಬಡ್ಜೆಟ್ ಮೆಮೊರಾಂಡಂನಲ್ಲಿ ಅನೇಕ ವಿಷಯಗಳನ್ನು ಕೊಟ್ಟಿದೆ. ಅವುಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕು. ಬೇರೆ ಬೇರೆ ಕಡೆಗೆ ಪೆನ್ಸಿಲ್ ಗುರುತು ಹಾಕಿ ಬರೆದುಕೊಳ್ಳಬೇಕು. ನಾನು ಈ ಸಭೆಯಲ್ಲಿದ್ದು 30 ವರ್ಷಗಳಾದುವು. ಎಲ್ಲಾ ವಿಷಯವನ್ನು ಸೂಕ್ಷ್ಮವಾಗಿ ಅಭ್ಯಾಸಮಾಡಿ ಮಾತನಾಡಬೇಕು. ಬಡ್ಜೆಟ್ ಪೇಜು 10ರಲ್ಲಿ ಈ ಅಂಕಿ ಅಂಶಗಳನ್ನು ಕೊಟ್ಟಿದೆ. T.A. ಮತ್ತು D.A. ವಿವರಕೊಟ್ಟಿದೆ. ಬುದ್ಧಿವಂತಿಕೆಯಿಂದ ಯೋಚನೆ ಮಾಡಿನೋಡಬೇಕು. ಯಾವುದನ್ನು ನೋಡದೆ assets ಗಿಂತ liabilities ಜಾಸ್ತಿಯಾಗಿದೆ ಎಂದು ಹೇಳಿದರೆ ಏನು ಪ್ರಯೋಜನವಾಗುತ್ತದೆ ? ದಕ್ಷತೆಯಿಂದ ಬಡ್ಜೆಟ್ ಮೆಮೋರಾಂಡಂ ನೋಡಬಾರದೆ ? Should they not be fair to us ? ಸುಲಭವಾಗಿ ತಿಳಿಯುವ ಹಾಗೆ ಎಲ್ಲ ವಿವರಗಳನ್ನು ಕೊಟ್ಟಿದ್ದೇವೆ. ತುಂಗಭದ್ರಾ, ಘಟಪ್ರಭಾ ಯೋಜನೆಗಳ ಅಸೆಟ್ಸ್ ವಿವರ ಬಂದಿಲ್ಲ. If you run us down, tomorrow somebody will run you down. ಸ್ಟೇಟ್ ರನ್ ಡೌನ್ ಮಾಡುವುದು ಒಳ್ಳೆಯದಲ್ಲ. But you should not run down a state, because if we raise a loan, what should happen ? ನಮಗೆ ಶಕ್ತಿ ಇಲ್ಲ, ದೌರ್ಬಲ್ಯವಿದೆ ಎಂದು ಬೇಕಾದರೆ ಹೇಳಬಹುದು. ನಮ್ಮ ರಾಜ್ಯದ ಆರ್ಥಿಕಪರಿಸ್ಥಿತಿ ಸುಭದ್ರತೆಯಿಂದ ಕೂಡಿದೆ. ಆದರೆ ನಾವು ನಮ್ಮ ಮಿತಿಯನ್ನು ಮೀರದಂತೆ ವೆಚ್ಚಮಾಡಬೇಕಾಗಿದೆ. ಆದಕಾರಣ ದೇಶದ ಆರ್ಥಿಕ ಭದ್ರತೆಯನ್ನು ಕಾಪಾಡೋಣ. ಬಡ್ಜೆಟ್ ಮೇಲೆ ಮಾತನಾಡುವುದಾದರೆ ಶ್ರೀಮಾನ್ ಮಲ್ಲಾರಾಧ್ಯರವರು ಮಾತನಾಡಿದ ರೀತಿ

(ಶ್ರೀ ಟಿ. ಮರಿಯಪ್ಪ)

ಯನ್ನು ಅನುಸರಿಸಬೇಕು. ಅವರು ಬಡ್ಜೆಟ್ಟನ್ನು ಆಳವಾಗಿ ಅಭ್ಯಾಸಮಾಡಿ ಅಂಕಿ ಅಂಶಗಳನ್ನು ವಿವರಿಸಿ ಸೂಚನೆಗಳನ್ನೂ ಸಲಹೆಗಳನ್ನೂ ಕೊಟ್ಟಿದ್ದಾರೆ. ಈ ರೀತಿಯಾಗಿ ಮಾತನಾಡಿದರೆ ಒಳ್ಳೆಯದಾಗುತ್ತದೆ. ಬಿಕಾನೀರ್ ಬ್ಯಾಂಕು, ಬೊಂಬಾಯಿ ಸರಕಾರಕ್ಕೆ ಕೊಡದೆ ನಮಗೆ ಲೋನ್ ಕೊಟ್ಟಿದೆ, 75 ಲಕ್ಷ ರೂಪಾಯಿ ನಮ್ಮ ಸರಕಾರದ ಲೋನ್‌ನಲ್ಲಿ investment ಮಾಡಿದೆ. ಇದು ನಮ್ಮ ರಾಜ್ಯದ ಹಣಕಾಸಿನ ಭದ್ರತೆಯನ್ನು ತೋರಿಸುತ್ತದೆ.

ಶ್ರೀ ಕೆ. ಕೆಂಚಪ್ಪ.—ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟಿನಲ್ಲಿ ತೋರಿಸಿರತಕ್ಕ ಅಸೆಟ್ಸಿಗಿಂತ ಎಫ್. ಇ. ಎಸ್. ಬ್ಲಾಕಿನಲ್ಲಿ ತೋರಿಸಿರತಕ್ಕ ಅಸೆಟ್ಸ್ ಹೆಚ್ಚಿದೆ. ಅದು ಹೇಗೆ ಹೇಳಿ ?

ಶ್ರೀ ಟಿ. ಮರಿಯಪ್ಪ.—ಸ್ಟೇಟನ್ನು ಮಾತ್ರ ರನ್‌ಡೌನ್ ಮಾಡಬೇಡಿ. ಬಡ್ಜೆಟ್ ಏನಾದರೂ ಡಿಫಿಸಿಟ್ ಆದರೆ, ಆಗ ಕ್ರಿಟಿಸೈಜ್‌ಮಾಡಿ, ಪರವಾಗಿಲ್ಲ.

ಕೊನೆಯಲ್ಲಿ ಮಾನ್ಯಸದಸ್ಯರೆಲ್ಲರೂ ನಾನು ಖಾಯಿಲೆಯಿಂದ ಜಾಗ್ರತೆಯಾಗಿ ಗುಣಮುಖನಾಗಬೇಕೆಂದು ಕೋರಿದ್ದಕ್ಕೆ, ಎಲ್ಲರಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಒಂದು ಕ್ಲಾರಿಫಿಕೇಷನ್, ಸ್ವಾಮಿ.

ಅಧ್ಯಕ್ಷರು.—ಈಗ ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಅರ್ಥಸಚಿವರು ಆರೋಗ್ಯವಾಗಿಲ್ಲ.

ಶ್ರೀ ಎಲ್. ಎಸ್. ವೆಂಕಾಜಿರಾವ್.—ಅವರು ಒಂದು ಕ್ಲಾರಿಫಿಕೇಷನ್ ಕೇಳಬೇಕೆಂದು ನಿಂತಿದ್ದಾರೆ. ಕ್ಲಾರಿಫಿಕೇಷನ್ ಕೇಳುವುದರಲ್ಲಿ ಏನೂ ತಪ್ಪು ಇಲ್ಲ. ಹಣಕಾಸಿನ ಮಂತ್ರಿಗಳು ಅನಾರೋಗ್ಯದ ಕಾರಣದಿಂದ ಮಧ್ಯೇ ಮಧ್ಯೇ ಉತ್ತರ ಹೇಳದೆ ಇದ್ದರೂ, ಇತರ ಮಂತ್ರಿಗಳು ಯಾರಾದರೂ ಉತ್ತರ ಕೊಡುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಈ ವರ್ಷದ ಬಡ್ಜೆಟ್ ಮೆಮೊರ್ಯಾಂಡಂನಲ್ಲಿ ಪುಟ 12ರಲ್ಲಿ ಯೂನಿಯನ್ ಎಕ್ಸೈಜು ಡ್ಯೂಟೀಸ್, ರೆಸೀಟ್ ಸೈಡಿನಲ್ಲಿ additional duties of excise ಎಂಬ ಬಾಬಿನಲ್ಲಿ 136.27 ಲಕ್ಷ ರೂಪಾಯಿಗಳನ್ನು ತೋರಿಸಿದ್ದಾರೆ ಮತ್ತು ಪುಟ 23ರಲ್ಲಿ ಸೇಲ್ಸ್‌ಟ್ಯಾಕ್ಸ್ ಹೆಡ್ಡಿನಲ್ಲಿಯೂ ಕೂಡ ರೆವಿನ್ಯೂ ಬಾಬಿನಲ್ಲಿ additional duties of excise in lieu of Sales-tax ಗೂ 136·27 ಲಕ್ಷ ರೂಪಾಯಿಗಳನ್ನು ತೋರಿಸಿದ್ದಾರೆ. ಇದರ ಅರ್ಥವೇನು ?

ಅಧ್ಯಕ್ಷರು.—ಶ್ರೀಮಾನ್ ರಾಜಯ್ಯಶೆಟ್ಟರು ಅದನ್ನೇ ಕೇಳಿದ್ದಾರೆ.

ಶ್ರೀ ಟಿ. ಮರಿಯಪ್ಪ.—ಅದೇನೂ ಡಬ್ಬಲ್ ಎಂಟ್ರಿ ಅಲ್ಲ. We expect more revenue. ಇದರಿಂದ ನಮಗೆ ಐದುಕೋಟಿ 88 ಲಕ್ಷ ಚಿಲ್ಲರೆ ಆದಾಯ ಬರುತ್ತದೆ. ಇನ್ನೂ ಜಾಸ್ತಿ ಆದಾಯ ಬರುತ್ತದೆಂದು ಆ ರೀತಿ ತೋರಿಸಿದ್ದೇವೆ.

Sri C. K. RAJAIAH SETTY.—The Hon'ble Minister has not replied to that point.

Sri T. MARIAPPA.—We expect more revenue and also .

Sri C. K. RAJAIAH SETTY.—Now The Hon'ble Minister says that he expects more revenue which is different from what he said while speaking on the Sales Tax (Amendment) Bill. I do not know how he can say something different from what has been given

***Sri B. VAIKUNTA BALIGA** (Minister for Labour and Legal Affairs).—Sir, I have heard many debates on the Budget but this has been most lively and interesting with plenty of details. I would have loved to refer to various points in greater detail but in view of the fact that there is sufficient explanation rendered and in view of the paucity of the time that is available, I propose to be very brief.

My friend Sri Mariappa has rendered all the explanation that is necessary with regard to the finances of the State and also with regard to various items of criticisms that were levelled against Government. I may only say further that so far as the present capacity of the State is concerned either with regard to internal resources or by way of raising loans, it is certainly much better than what it was in the previous years. I may also say that with regard to the existing fiscal laws, as has already been mentioned, they have not been in operation for the last 12 months. There are various enterprises which have been taken up which will lead to better life and better facilities.

I would have referred to certain items in greater detail but since they are likely to be raised during the course of the debate on Demands I am not doing so. I must not, however, fail to say that even today when compared with other sister States the taxation that is prevailing in the Mysore State is low either with regard to land revenue or water rates and we are lagging behind. But it is not my suggestion that we should immediately collect more taxes from the people. I must certainly not fail to mention that there is that background which must not be forgotten.

I will now proceed to refer to one or two items which particularly touch my portfolio. On the 5th of April, in the course of the debate, my friend Sri Arumugham appears to have

observed that in the appointment of Government pleaders one supposed to be a junior of mine has been appointed. He could have asked me and got from me further details. I am sure he will have the same affection for me as before and will continue to have greater caution before making such a statement. No pleader who has ever been my junior has been appointed as Government Pleader. I have a number of juniors but none of them has been appointed as Government pleader. I do not know which particular individual he had in his mind. To say that a particular individual among the three persons was at any time my junior is farthest from the truth. It would have been very wise and proper if he had ascertained the facts before saying on the floor of the House that the Minister for Labour had chosen to appoint a junior of his own to work as a Government Pleader.

AN HON'BLE MEMBER.—What is wrong?

Sri B. VAIKUNTA BALIGA.—Sir, a question is put: what is wrong? If the insinuation is there it is wrong; it is a wrong premise. When the premises are wrong then the inference is equally wrong.

I must not fail to refer to one more aspect, *i.e.*, what my friend Sri M. C. Narasimhan appears to have said that he had heard something with regard to the Cabinet secret said to have been divulged by me. Here again he is in as wrong a position as my friend Sri Arumugham. I will leave it at that.

Sri C. M. ARUMUGHAM.—How many Government pleaders the Hon'ble Minister has appointed?

Sri B. VAIKUNTA BALIGA.—I have appointed three Government pleaders none of whom has ever been my junior. The gravamen of the charge that a junior of mine has been appointed as a Government pleader is entirely wrong and I repudiate it. I do not want to use a stronger language.

Lastly I wish to refer to what my friend Sri Srinivas Shetty did say that there was something wrong with the party. I do not know what he had in his mind. Evidently he wishes that the party should not be in power. If that is his desire he can certainly go on carrying on propaganda in a proper place and in a proper manner.

Sri V. SRINIVAS SHETTY.—Very legitimate.

Sri B. VAIKUNTA BALIGA.—He thinks it is very legitimate. Again he takes a wrong premise particularly when he says that there is no discipline. He will have to prove it. The proof of the pudding is in the eating. When the voting takes place every member of the party like a disciplined soldier will support the Budget and see that we go on.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಸ್ವಾಮಿ ಅಧ್ಯಕ್ಷರೇ, ಈಗಾಗಲೆ ಸಾಕಾದಷ್ಟು ಸದಸ್ಯರು ಎದುರು ಪಕ್ಷದಿಂದ ಮಾತನಾಡಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳು ಸಮರ್ಪಕವಾದ ಉತ್ತರಗಳನ್ನು ಕೊಟ್ಟಿದ್ದಾರೆ. ಅನೇಕ ಜನ ಸದಸ್ಯರು ಒಳ್ಳೆಯ ಯೋಗ್ಯವಾದ ಸೂಚನೆಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಬಹು ಜನ ಸದಸ್ಯರು ಈ ಸಭೆಯ ಘನತೆ ಗೌರವಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ಅದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ಕೆಲವು ಸದಸ್ಯರು ಅದಕ್ಕೆ ಅವಕಾಶ ಕೊಡಲಿಲ್ಲವಲ್ಲಾ ಎಂದು ವ್ಯಸನವಾದರೂ ಅದನ್ನು ಉಳಿಸಿಕೊಂಡು ಬರುತ್ತಾರೆಂದು ನಂಬಿ ಆ ಬಗ್ಗೆ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಶ್ರೀನಿವಾಸಶೆಟ್ಟರು ನೀವೆಲ್ಲಾ ಒಡೆದು ಹೋಗುತ್ತೀರಿ, ಕಾಂಗ್ರೆಸ್ ಸಂಸ್ಥೆ ಉಳಿಯುವುದಿಲ್ಲ, ಎಲ್ಲಾ ಹಾಳಾಗುತ್ತಿದ್ದೀರಿ, ನಾವೂ ಹಾಳಾಗುತ್ತಿದ್ದೇವೆ, ನೀವೂ ಹಾಳಾಗುತ್ತಿದ್ದೀರಿ ಎಂದು ಹೇಳಿದರು. ಅವರ ವಿಚಾರದಲ್ಲಿ ನಾನು ಹೆಚ್ಚಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಾವಿಂದು ಪ್ರಜಾಪ್ರಭುತ್ವದಲ್ಲಿದ್ದೇವೆ. ನಾವು ಒಡೆದರೂ ವಿರೋಧ ಪಕ್ಷ ಒಡೆಯಬಾರದು. ತಮ್ಮಗಳ ಸೇವೆಯಿಂದ, ಶಕ್ತಿಯಿಂದ, ಸೂಕ್ತ ಕಾರ್ಯಕ್ರಮದಿಂದ ತಾವು ಬಲಗೊಳ್ಳಬೇಕೆಂಬುದು ನನ್ನ ಇಷ್ಟ. ಆ ಒಂದು ದೃಷ್ಟಿಯಿಂದ ವಿರೋಧ ಪಕ್ಷದವರು ಒಡೆಯಬಾರದು, ಪಕ್ಷ ಚೆನ್ನಾಗಿರಬೇಕು ಎಂದು ಹಾರೈಸುತ್ತೇನೆ. ಏಕೆಂದರೆ ಪ್ರಜಾಪ್ರಭುತ್ವ ಯೋಗ್ಯ ರೀತಿಯಲ್ಲಿ ಕೆಲಸ ಮಾಡಬೇಕಾದರೆ ಟೀಕೆ ಇರಬೇಕು, ವಿಧಾಯಕವಾಗಿ ಟೀಕೆ ಮಾಡಬೇಕು ಮತ್ತು ಟೀಕೆ ಮಾಡಿದರೆ ಸಾಕಾದಷ್ಟು ಯೋಗ್ಯವಾಗಿರಬೇಕು. ಅಲ್ಲದೆ ಒಟ್ಟುಗೂಡಿ ಕೆಲಸ ಮಾಡಬೇಕು. ಈ ದೃಷ್ಟಿಯಿಂದ ವಿರೋಧಪಕ್ಷ ಬಲವಾಗಲೆಂದು ಹಾರೈಸುತ್ತೇನೆ. ಆಗುವುದು ಬಿಡುವುದು ಅವರ ಯೋಗ್ಯತೆಯನ್ನನುಸರಿಸಿ ಆಗತಕ್ಕದ್ದಾಗಿದೆ. ನಮ್ಮ ವಿಚಾರದಲ್ಲಿ ಬಹುಶಃ ಇತ್ತೀಚಿನ ಪತ್ರಿಕೆಗಳನ್ನೋದಿ "ನೀವು ಒಡೆದು ಹೋಗುತ್ತೀರಿ" ಎಂದು ಹೇಳಿದ್ದಾರೆ. ಹಾಗಾಗಲೆಂಬ ಒಂದು ಆಸೆ ಅವರಲ್ಲಿರುವುದರಿಂದಲೋ ಏನೋ ಹಾಗೆ ಅವರು ಒಂದು ಅಭಿಪ್ರಾಯ ಸೂಚಿಸಿ ತೀರಾ ಕಟುವಾಗಿ ಟೀಕೆ ಮಾಡುವುದಕ್ಕೆ ಹೋಗಿರಬೇಕು. ಬಹುಶಃ ಹಾಗಿರಲಿಕ್ಕಿಲ್ಲ. ಈ ದಿವಸ ಕಾಂಗ್ರೆಸ್ ಪಕ್ಷ ಬಿಟ್ಟರೆ ಬೇರೆ ಬಲವಾದ ಪಕ್ಷವಿಲ್ಲ; ದೇಶದಲ್ಲಿ ಕೇಯೋಸ್—ಅರಾಜಕತೆ ಬಂದು ಹೋದೀತು. ನಾವು ನಾವು ಕೌರವ ಪಾಂಡವರಂತೆ

(ಶ್ರೀ ಎಸ್. ನಿಜಲಿಂಗಪ್ಪ)

ವ್ಯಾಜ್ಯವಾಡಬಹುದು. ಆದರೆ ಬೇರೆಯವರೊಡನೆ ಜಗಳವಾಡಬೇಕಾದ ಸಂದರ್ಭವೊದಗಿದರೆ 105 ಜನ ಕಾಂಗ್ರೆಸ್ ಸದಸ್ಯರೆಲ್ಲಾ ಒಟ್ಟಿಗೆ ಸೇರುವರೆಂಬುದನ್ನು ಯಾರೂ ಮರೆಯಬಾರದು. ಈ ದಿವಸ ನಾನು ಮುಖ್ಯಮಂತ್ರಿಯಾಗಿರಬಹುದು. ನಾಳೆ ಇನ್ನೊಬ್ಬರು ನನ್ನ ಸ್ಥಾನಕ್ಕೆ ಬರಬಹುದು. ಹೇಗಾದರೂ ಕಾಂಗ್ರೆಸ್ಸಿನವರೇ ಈ ಸ್ಥಾನದಲ್ಲಿರುತ್ತಾರೆಂದು ಆಶ್ವಾಸನೆಯನ್ನು ಕೊಡುತ್ತೇನೆ.

ಮತ್ತೆ ಕೆಲವು ಟೀಕೆಗಳು ಬಂದಿವೆ. ಏಳು ಗಂಟೆಯಾಗುತ್ತಾ ಬಂದಿರುವುದರಿಂದ ಸೂಕ್ಷ್ಮವಾಗಿ ಕೆಲವು ವಿಷಯಗಳನ್ನು ಮಾತ್ರ ಹೇಳುತ್ತೇನೆ. ಡಿಸ್ಪೋಸಲ್ ಆಫ್ ಪೇಪರ್ಸ್ ಬಹಳ ತಡವಾಗುತ್ತಿದೆ ಯೆಂಬ ಆಕ್ಷೇಪವಿದೆ. ಎಷ್ಟೋ ಕಷ್ಟದಿಂದ ಕೆಲಸ ಮಾಡಬೇಕಾಗಿದೆಯೆಂದು ಈಗಾಗಲೇ ಮಾನ್ಯ ಸ್ನೇಹಿತರನೇಕರು ಹೇಳಿದ್ದಾರೆ. ಐದು ಭಾಗಗಳು ಸೇರಿ ಐದು ಕಾನೂನುಗಳು ಒಂದಾಗಬೇಕಾದರೆ, ಐದು ಕಡೆಯ ರಿಕಾರ್ಡುಗಳು ಬರುವ ಆ ಸಂದರ್ಭದಲ್ಲಿ ಬಹುಶಃ ಶ್ರೀ ಟಿ. ಮರಿಯಪ್ಪನವರು ಹೇಳಿರುವ ಮಾತನ್ನು ಒಪ್ಪಿಕೊಂಡು ನಾವು ಮಾಡಿರುವ ಕೆಲಸ ಬಹಳ ಅಗಾಧವಾಗಿದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಷ್ಟೇ ಅಲ್ಲದೆ ಈ ಸಂದರ್ಭದಲ್ಲಿ ಈ ಸಭೆಯ ಎದುರು ಪಕ್ಷಗಳ ಸದಸ್ಯರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ, ಮತ್ತು ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಈ ಐದು ಭಾಗ ಒಂದಾಗುವಾಗ ಸಂಬಂಧಪಟ್ಟ ಕಾರ್ಯಗಳಲ್ಲಿ, ಉದ್ಯಮಗಳಲ್ಲಿ ಎಲ್ಲರ ಸಹಾಯ, ಸಹಕಾರ ದೊರಕಿದೆಯೆಂದು ಕೃತಜ್ಞತೆಯಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಬಹಳ ಕಷ್ಟವಾದ ಕೆಲಸ. ಈ ಐದು ಭಾಗಗಳ ಕಾನೂನು, ಭಾಷೆ ಮುಂತಾದ್ದರಲ್ಲಿ ವ್ಯತ್ಯಾಸವಿರುವುದರಿಂದ ಸ್ವಲ್ಪ ತೊಂದರೆಯಾಗಿದೆ. ಆದರೆ ಆರು ತಿಂಗಳುಗಳಿಂದ ದಕ್ಷತೆಯಿಂದ ಕೆಲಸ ಕಾರ್ಯವಾಗುತ್ತಿದೆ, ಏನೂ ತಡವಾಗುತ್ತಿಲ್ಲ ಎಂದು ಹೆಮ್ಮೆಯಿಂದ ಹೇಳುತ್ತೇನೆ. ಮೊದಲೆಷ್ಟು ಕೆಲಸವಾಗುತ್ತಿತ್ತೋ ಅದರ ಎರಡರಷ್ಟು ಕೆಲಸ ಸೆಕ್ರೆಟೇರಿಯಟ್‌ನಲ್ಲಿ ಆಗುತ್ತಿದೆ. ಸೆಕ್ರೆಟೇರಿಯಟ್ ಮೆಷೀನರಿ ಸಹ ಈಗ ಸುಧಾರಿತವಾಗಿದೆ. ಅದಕ್ಕೆ ಸುಗಮವಾದ ಮಾರ್ಗವನ್ನನುಸರಿಸಿ ಅಸ್ತಿಭಾರ ಹಾಕಿ ಬುನಾದಿಯಾಗಿ ಒಳ್ಳೆಯ ವ್ಯವಸ್ಥೆ ಮಾಡಲಾಗಿದೆ.

ಆಡಳಿತದಲ್ಲಿ ದಕ್ಷತೆಯಿಲ್ಲವೆಂದು ನನ್ನ ಸ್ನೇಹಿತರು ಹೇಳಿದ್ದಾರೆ. ದಕ್ಷತೆಯಿರಲಿ ಇಲ್ಲದಿರಲಿ ಆ ರೀತಿ ಹೇಳದಿದ್ದರೆ ಅವರ ಮನಸ್ಸಿಗೆ ಸಮಾಧಾನವಾಗುವುದಿಲ್ಲ. ಅದೊಂದು ಹಳೆಯ ವಾಡಿಕೆ, ಯಾವಾಗಲೂ ಹಾಗೆ ಹೇಳುವುದು ಪೂರ್ವದಿಂದಲೂ ಬಂದಿರುವುದು. ವಿರೋಧಪಕ್ಷ ಹಾಗೆ ಹೇಳದಿದ್ದರೆ ಅದಕ್ಕೂ ಸಮಾಧಾನವಾಗುವುದಿಲ್ಲ, ಕೇಳದಿದ್ದರೆ ನಮಗೂ ಸಮಾಧಾನವಾಗುವುದಿಲ್ಲ; ಈ ಸ್ಥಿತಿಯಿದೆ. ಆದ್ದರಿಂದ ಹೇಳಿದ್ದಾರೆ. ಈ ಸಂದರ್ಭದಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತಿದೆ. ಒಬ್ಬ ಒಳ್ಳೆಯ ಚಿತ್ರಗಾರ ಒಂದೇ ತರಹದ ಎರಡು ಸುಂದರ ಚಿತ್ರಗಳನ್ನು ಬರೆದ. ಮೊದಲು ಒಂದನ್ನು ಮನೆಯ ಮುಂದಿಟ್ಟು ಅದರಲ್ಲಿ ಬಹಳ ಯೋಗ್ಯವಾದ ಭಾಗ ಯಾವುದು, ಕಣ್ಣೋ, ಮೂಗೋ, ಕಾಲೋ, ಕೈಯೋ ಎಂಬುದನ್ನು ಗುರುತುಹಾಕಿ ಎಂದು ಹೇಳಿದ. ಬಹಳ ಒಳ್ಳೆಯ ಭಾಗ ಯಾವುದೆಂಬುದನ್ನು ಸೂಚಿಸುವಂತೆ ಹೇಳಿದ. ಎಲ್ಲರೂ ಬಂದರು, ಸಹಸ್ರಾರು ಜನ ನೋಡಿದರು. ಅವರಿಗೆ ತೋರಿದ ಕಡೆ ಗುರುತು ಹಾಕಿದ್ದರು. ಬೆಳಗ್ಗೆ ಹೋಗಿ ನೋಡಿದರೆ ಆ ಚಿತ್ರದ ಪ್ರತಿಯೊಂದು ಭಾಗಕ್ಕೂ ಒಂದೊಂದು ಗುರುತು ಹಾಕಿ ಎಲ್ಲಾ ಚೆನ್ನಾಗಿದೆಯೆಂದು ಸೂಚಿಸಿದ್ದರು. ಮತ್ತೆ ಅದೇ ಚಿತ್ರದ ಇನ್ನೊಂದು ಕಾಪಿಯನ್ನು ಮನೆಯ ಮುಂದಿಟ್ಟು ಕೆಟ್ಟ ಭಾಗ ಗುರುತು ಹಾಕಿ ಎಂದು ಹೇಳಿದ. ಯಥಾ ಪ್ರಕಾರ ಬೆಳಗ್ಗೆ ಹೋಗಿ ನೋಡಿದಾಗ, ಒಳ್ಳೆಯದೆಂದು ಸೂಚಿಸಿದ್ದ ಭಾಗಗಳೆಲ್ಲಾ ಕೆಟ್ಟದ್ದೆಂದು ಗುರುತುಮಾಡಿದ್ದರು. ಹೀಗೆ ಯಾವ ದೃಷ್ಟಿಯಿಂದ ನೋಡಿದರೆ ಆ ರೀತಿ ಕಾಣುತ್ತದೆ. ಒಳ್ಳೆಯ ದೃಷ್ಟಿಯಿಂದ ನೋಡಿದರೆ ಒಳ್ಳೆಯದಾಗಿಯೇ ಕಾಣುತ್ತದೆ; ಕೆಟ್ಟ ದೃಷ್ಟಿಯಿಂದ ನೋಡಿದರೆ ಕೆಟ್ಟುದಾಗೆಯೇ ಕಾಣಿಸುತ್ತದೆ. ಕೆಲವರು ಕೇಳಿದರೂ ಕೇಳದವರ ಹಾಗಿರುತ್ತಾರೆ, ನೋಡದೆ ಕಣ್ಣು ಮುಚ್ಚಿಕೊಂಡಿರುತ್ತಾರೆ. ಏನೇ ಮಾಡಿದರೂ ಕೆಲವರ ಮನಸ್ಸಿಗೆ ಸಮಾಧಾನವಾಗುವುದಿಲ್ಲ; ಮಾಡಿರುವುದನ್ನು ಎದ್ದು ನೋಡುವುದಕ್ಕೆ ಇಷ್ಟಪಡುವುದಿಲ್ಲ. ಆದ್ದರಿಂದ ದಕ್ಷತೆಯ ವಿಚಾರದಲ್ಲಿ ನಾನು ಇಷ್ಟು ಅರಿಕೆಮಾಡುತ್ತೇನೆ: ನಾವೆಲ್ಲಾ 1½ ವರ್ಷದಿಂದ ಬಹಳ ದಕ್ಷತೆಯಿಂದ ಕೆಲಸ ಮಾಡಿದ್ದೇವೆಂದು ಹೇಳುವುದಿಲ್ಲ. ಇಫಿಷಿಯೆನ್ಸಿಯನ್ನು ಒಂದೇ ಸಲ ತಪ್ಪಿಸುವುದಕ್ಕಾಗುವುದಿಲ್ಲ. ಅದಕ್ಕೆ ಅನೇಕ ಕಾರಣಗಳಿವೆ. ಅದನ್ನು ಹೋಗಲಾಡಿಸುವುದಕ್ಕೆ ಅವಕಾಶವಿದೆ. ಇದಕ್ಕಾಗಿ ಪ್ರತಿ ದಿವಸವೂ ಪ್ರಯತ್ನ ಮಾಡುತ್ತಿದ್ದೇವೆ. ಒಂದು ವಿಚಾರವನ್ನು ಬಹಳ ಸಂತೋಷದಿಂದ ಹೇಳುತ್ತೇನೆ: ಈ ಸರ್ಕಾರದಲ್ಲಿ ದಕ್ಷತೆ ದಿನೇ ದಿನೇ ಹೆಚ್ಚುತ್ತಿದೆ, ಮೊದಲು ಆರು ತಿಂಗಳಾಗುತ್ತಿದ್ದ ಕೆಲಸ ಈ ದಿವಸ ಎರಡು ತಿಂಗಳಲ್ಲಿ ಮಾಡುವುದಕ್ಕೆ ಸಾಧ್ಯವಾಗಿದೆ. ಇದು ಹೆಮ್ಮೆಯ ವಿಷಯ.

ಮತ್ತೊಂದು ವಿಚಾರ ಎಲ್ಲ ಮಿತ್ರರೂ ಪ್ರಸ್ತಾಪ ಮಾಡಿರುವುದು ಸೀನಿಯಾರಿಟಿ ಲಿಸ್ಟಿಗೆ ಸಂಬಂಧಪಟ್ಟಿದೆ. ನೌಕರರು, ಅಧಿಕಾರಿಗಳು, ದೊಡ್ಡ ಸಂಬಳದವರು, ಕಡಮೆ ಸಂಬಳದವರು ಎಲ್ಲರೂ ಕೂಡ ಸಂಬಳ ವಗೈರೆ ವಿಚಾರಗಳಲ್ಲಿ ವ್ಯತ್ಯಾಸವಿದ್ದರೂ ಸಹಕರಿಸಿ ಬಹಳ ಚೆನ್ನಾಗಿ ಕೆಲಸಮಾಡುತ್ತಿದ್ದಾರೆ. ಹಳೆಯ ಮೈಸೂರಿನವರು, ಹೊಸದಾಗಿ ಬಂದವರು ಎಂಬ ಭಿನ್ನತೆಯಿಲ್ಲದೆ ಎಲ್ಲರೂ ಒಂದಾಗಿ ಚೆನ್ನಾಗಿ ಕೆಲಸ ನಿರ್ವಹಿಸುತ್ತಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರ ಕೆಲಸದಿಂದ ಸಮಾಧಾನವಾಗಿದೆ, ತೃಪ್ತಿಯಾಗಿದೆ. ಆದರೆ ಬೊಂಬಾಯಿ ಪ್ರಾಂತದಿಂದ ಬಂದಿರುವವರಿಗೆ ಹೆಚ್ಚು ಸಂಬಳ ಬರುತ್ತದೆ. ಹಳೆಯ ಮೈಸೂರಿನವರಿಗೇನು ಅನುಕೂಲಮಾಡಿದ್ದೀರಿ ಎಂದು ಹಳೆಯ ಮೈಸೂರಿನವರು ಆಡಿಕೊಳ್ಳುತ್ತಾರೆ. ಮೈಸೂರಿನಲ್ಲಿದ್ದ ಹಳಬರಿಗೆ ಅನುಕೂಲ ಮಾಡಿದ್ದಾರೆ, ಹೊಸದಾಗಿ ಹೈದರಾಬಾದ್, ಬೊಂಬಾಯಿ, ಕೊಡಗು ಮುಂತಾದ ಕಡೆಗಳಿಂದ ಬಂದವರಿಗೇನೂ ಇಲ್ಲ ಎಂದು ಹೊಸ ಪ್ರದೇಶದವರು ಆಡಿಕೊಳ್ಳುತ್ತಾರೆ. ಈ ರೀತಿ ಒಂದು ಜಿಜ್ಞಾಸೆಯಿದೆ. ಇದನ್ನು ಆದಷ್ಟು ಜಾಗ್ರತೆ ತೊಡೆದು ಹಾಕಬೇಕೆಂಬುದೇ ಸರ್ಕಾರದ ಉದ್ದೇಶ. ಆ ದೃಷ್ಟಿಯಿಂದ ನಾವು ಅಧಿಕಾರವಹಿಸಿಕೊಂಡ ಒಂದು ವಾರದಲ್ಲಿ ಒಂದು ಸಮಿತಿ ಏರ್ಪಾಡುಮಾಡಿ ಹೊಸದಾಗಿ ಇದನ್ನೆಲ್ಲಾ ಪರಿಶೀಲಿಸುತ್ತಿದ್ದೇವೆ. ಗೆಜೆಟೆಡ್ ಮತ್ತು ನಾನ್-ಗೆಜೆಟೆಡ್ ಆಫೀಸರುಗಳ ವಿಚಾರವನ್ನೂ ಪರಿಶೀಲನೆ ಮಾಡುತ್ತಿದ್ದೇವೆ. ಈಗ ಆಯಾ ಪ್ರದೇಶಗಳಿಗೆ ಸಂಬಂಧಪಟ್ಟ ಅಧಿಕಾರಿಗಳ ಸೀನಿಯಾರಿಟಿಯನ್ನು ಡಿಸ್ಟರ್ಬ್‌ಮಾಡಿಲ್ಲ. ಒಟ್ಟಿನಲ್ಲಿ ಸಂಸ್ಥಾನಕ್ಕೆ ಸಂಬಂಧಪಟ್ಟ ಹಾಗೆ ಸೀನಿಯಾರಿಟಿ ಲಿಸ್ಟ್ ತಯಾರಾಗುತ್ತಿದೆ. ಈ ಸಂದರ್ಭದಲ್ಲಿ ಅನೇಕರಿಗೆ ಅನುಮಾನ ಬಂದಿದೆ. ಕೆಲವು ತತ್ತ್ವಗಳ ಮೇಲೆ ಒಂದು ವ್ಯವಸ್ಥೆ

ಮಾಡಿದ್ದೇವೆ. ಪ್ರಶ್ನೋತ್ತರಗಳ ಕಾಲದಲ್ಲಿ ಈ ವಿಚಾರವನ್ನು ಅನೇಕ ಸಾರಿ ಹೇಳಿದ್ದೇವೆ. ಕೇಂದ್ರ ಸರ್ಕಾರದಿಂದ ಆದೇಶ ಬಂದಿದೆ. ಅದನ್ನನುಸರಿಸಿ ಸೀನಿಯಾರಿಟಿ ಲಿಸ್ಟ್‌ಮಾಡಿದೆವು. ಹಾಗೆ ಮಾಡಿದ ಮೇಲೆ ಎಲ್ಲಾ ಅಧಿಕಾರಿಗಳಿಗೂ, ನೌಕರರಿಗೂ, 'ಈರೀತಿ ಮಾಡಿದ್ದೇವೆ, ನಿಮ್ಮ ಅಭಿಪ್ರಾಯಗಳನ್ನು ಹೇಳಬೇಕು, ತಕರಾರಿದ್ದರೆ ಸೂಚಿಸಬೇಕು' ಎಂದು ಅವಕಾಶ ಕೊಟ್ಟೆವು ಆ ಮೇಲೆ ತಕರಾರನ್ನು ವಿಚಾರಮಾಡಿ ನಾವಾಗಲಿ ಅಥವಾ ಸೆಕ್ರೆಟೇರಿಯಟ್ ಕಮಿಟಿಯಾಗಲೀ ತೀರ್ಮಾನ ಮಾಡುವುದು ಬೇಡ, ಅದನ್ನು ಕೇಂದ್ರಸರ್ಕಾರದ ಉನ್ನತ ಅಧಿಕಾರಿಗಳು ಮಾಡಲಿ ಎಂದು ಪಂಜಾಬಿನಿಂದ ಒಬ್ಬರನ್ನೂ, ಬಂಗಾಳದಿಂದ ಒಬ್ಬರನ್ನೂ ಕರೆಸಿ ಅವರ ಕೈಗೆ ಸೀನಿಯಾರಿಟಿ ಪಟ್ಟಿ ಕೊಟ್ಟು ತಕರಾರಿರುವುದನ್ನು ಕ್ರಮವಾಗಿ ವಿಚಾರ ಮಾಡಿ ತಿಳಿದುಕೊಳ್ಳುವಂತೆ ಅವರಿಗೆ ಸೂಚಿಸಲಾಯಿತು. ಅವರು ಆ ರೀತಿ ತಿಳಿದುಕೊಂಡು, ಬಹುಶಃ ಗೆಜೆಟೆಡ್ ಆಫೀಸರುಗಳ ಪಟ್ಟಿಯನ್ನು ತಯಾರು ಮಾಡಿ ನಮಗೆ ಕಳುಹಿಸುತ್ತಾರೆ. ಅವರು ಕೊನೆಯದಾಗಿ ತೀರ್ಮಾನ ಮಾಡುವುದಿಲ್ಲ. ಸರ್ಕಾರದವರು ಅದನ್ನೆಲ್ಲಾ ಪರಿಗಣಿಸಿ ಏನು ತಕರಾರು ಬಂದಿದೆ ಎಂಬುದನ್ನು ನೋಡಿ ನ್ಯಾಯವಾದ ರೀತಿಯಲ್ಲಿ ಮಾಡಬೇಕೆಂದು ತೀರ್ಮಾನಮಾಡಿಕೊಂಡಿದ್ದೇವೆ. ತಾತ್ಕಾಲಿಕವಾಗಿ ಕೆಲಸ ನಡೆಸುವುದಕ್ಕೆ ಅಲ್ಲಲ್ಲಿ ಕೆಲವು ಅಧಿಕಾರಿಗಳನ್ನು ನಿಯಮಿಸಿಕೊಂಡಿದ್ದೇವೆ. ಪ್ರಮೋಷನ್ ಇತ್ಯಾದಿಗಳನ್ನು ತಾತ್ಕಾಲಿಕವಾಗಿ ಕೊಟ್ಟಿದ್ದೇವೆ. ಎಲ್ಲಾ ಆರ್ಡರ್‌ನಲ್ಲೂ ತಾತ್ಕಾಲಿಕವಾಗಿ ಎಂದು ಬರೆದಿದ್ದೇವೆ. ಹೀಗೆ ಆಗತಕ್ಕ ಸಂದರ್ಭದಲ್ಲಿ ಅಲ್ಲಲ್ಲಿ ಕೆಲವು ಅಸಮಾಧಾನಗಳಿಗೆ ಕಾರಣವಾದರೂ ಕೂಡ ಕೊನೆಯಲ್ಲಿ ಎಲ್ಲರಿಗೂ ಸಮಾಧಾನಕರವಾಗಿರಬೇಕೆಂಬ ರೀತಿಯಲ್ಲಿ ಕೆಲಸ ಮಾಡುತ್ತಾ ಇದ್ದೇವೆ. ನಾನ್ ಗೆಜೆಟೆಡ್‌ಗೂ ಅಷ್ಟೇ, ಗೆಜೆಟೆಡ್‌ಗೂ ಅಷ್ಟೆ. ಈ ರೀತಿ ಕೆಲಸ ನಡೆದುಬರುತ್ತಾ ಇದೆ. ಯಾರಿಗೂ ಅನ್ಯಾಯವಾಗಿಲ್ಲ. ಹೊಸದಾಗಿ ಪೇಸ್ಕೇಲ್ಸ್ ಮಾಡಿದ್ದೇವೆ. ಹೊರಗಡೆಯಿಂದ ಬಂದಿರತಕ್ಕವರಿಗೂ ಅವಕಾಶ ಕೊಟ್ಟಿದ್ದೇವೆ. ಮತ್ತು ಹಳೆಯ ಮೈಸೂರಿನಲ್ಲಿ ಏನು ನೌಕರರ ಸಂಬಳ ಕಡಮೆ ಇತ್ತು ಅದನ್ನು ಜಾಸ್ತಿಮಾಡಿದ್ದೇವೆ. ಇತ್ತೀಚೆಗೆ ಬರಬರುತ್ತಾ ಅನೇಕ ಇಲಾಖೆಗಳಲ್ಲಿ ಜಾಸ್ತಿ ಸಂಬಳಬೇಕೆಂದು ಕೇಳುತ್ತಾ ಇದ್ದಾರೆ. ಅದನ್ನು ಪರಿಗಣಿಸಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಜಾಸ್ತಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಆದ್ದರಿಂದ ನಾನು ಆ ನೌಕರರಿಗೆ ಮತ್ತು ಅಧಿಕಾರಿಗಳಿಗೆ ನಿವೇದನೆ ಮಾಡಿಕೊಳ್ಳುತ್ತೇನೆ; ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ನೋಡಿಕೊಳ್ಳುತ್ತೇವೆ ಮತ್ತು ನಾವು ಏನು ತೀರ್ಮಾನಮಾಡುತ್ತೇವೆಯೋ ಅದರ ಮೇಲೆ ಕೇಂದ್ರ ಸರ್ಕಾರದವರಿಗೆ ಅಪೀಲು ಹೋಗುವುದಕ್ಕೆ ಅವಕಾಶ ಇದೆ ಎಂದು ಕಾಣುತ್ತದೆ. ಹೀಗಾಗಿ ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ನೋಡಿಕೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆ. ನನ್ನ ಸ್ವಂತ ಅಭಿಪ್ರಾಯ ಹೇಳಬೇಕಾಗಿದ್ದರೆ ನಮ್ಮ ದೇಶದಲ್ಲಿ ಸರ್ಕಾರಿ ನೌಕರರ ಸಂಬಳ ಅದರಲ್ಲೂ ಕೆಳದರ್ಜೆ ನೌಕರರ ಸಂಬಳ ಬಹಳ ಕಡಮೆ. ಇನ್ನು ಐದು ಹತ್ತು ವರ್ಷಗಳಲ್ಲಿ ಯಾವುದೇ ಸರ್ಕಾರ ಇರಲಿ, ನೌಕರರ ಸಂಬಳ 100ರೂಪಾಯಿಗಳಿಗಿಂತ ಕಡಮೆ ಇರಬಾರದು ಎಂದು ನನ್ನ ಅಭಿಪ್ರಾಯ. ಅದರಂತೆ ಕೆಲಸಮಾಡಬೇಕೆಂದು ನಮ್ಮ ಸರ್ಕಾರದ ಉದ್ದೇಶ. ಈ ರೀತಿ ಸುಖವಾಗಿರಬೇಕು. ಯಾವ ಜನರ ದುಡಿಮೆಯ ಮೇಲೆ, ಕರ್ತವ್ಯನಿಷ್ಠೆಯ ಮೇಲೆ ಸರ್ಕಾರ ನಡೆಯುತ್ತದೆಯೋ ಆ ಜನರನ್ನು ಯೋಗ್ಯ ರೀತಿಯಲ್ಲಿ ತೃಪ್ತಿಪಡಿಸಬೇಕಾದ್ದು ಸರ್ಕಾರದವರ ಕರ್ತವ್ಯ. ಆರೀತಿ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ. ಯಾರೂ ಅದರಲ್ಲಿ ಅನುಮಾನ ಮಾಡಬಾರದು ಎಂದು ಹೇಳಿ, ಆ ನೌಕರರು ಮತ್ತು ಅಧಿಕಾರಿಗಳು ನಮ್ಮೊಡನೆ ಯಾವ ರೀತಿಯಲ್ಲಿ ಈಗ ಸಹಕಾರ ಮಾಡುತ್ತಿದ್ದಾರೋ ಇದೇ ರೀತಿ ಮುಂದೂ ಮಾಡಬೇಕೆಂದು ಅವರಲ್ಲಿ ಬಿನ್ನೈಸಿಕೊಳ್ಳುತ್ತೇನೆ.

ದಕ್ಷತೆ ಹೇಗೆ ಹೆಚ್ಚಾಗಬೇಕು, ಖರ್ಚೇನಾದರೂ ಕಡಮೆ ಮಾಡುವುದಕ್ಕೆ ಸಾಧ್ಯವೇ ಎನ್ನುವುದಕ್ಕೆ ಗೋರ್‌ವಾಲಾ ಅವರನ್ನು ನೇಮಕಮಾಡಿಕೊಂಡಿದ್ದೇವೆ. ಅವರ ವರದಿ ಬಂದ ತಕ್ಷಣ ನೋಡಿಕೊಂಡು ಸೂಕ್ತಕ್ರಮವನ್ನು ಕೈಕೊಳ್ಳುತ್ತೇವೆ.

ಸರ್ಕಾರಿ ಸರ್ವೀಸ್‌ನಲ್ಲಿ ಕೆಲಸಮಾಡುತ್ತಿರುವ ಈ ಅಧಿಕಾರಿಗಳಲ್ಲಿ ಬಹಳ ಲಂಚಕೋರತನ ಇದೆ ಎಂದು ಒಂದು ಟೀಕೆ ಇದೆ. ಬಹುಶಃ ಸರ್ಕಾರ ಎಂದು ಹುಟ್ಟಿತೋ ಅಂದಿನಿಂದ ಈ ದೂರು ಇದೆ ಎಂದು ಕಾಣುತ್ತದೆ. ಔಷಧಿ ಏನೋ ಒಂದೂ ಗೊತ್ತಾಗುವುದಿಲ್ಲ. ಆದರೆ ಕಡಮೆಮಾಡುವುದಕ್ಕೆ ಸಾಧ್ಯವಿದೆ. ಸಿಕ್ಕಾಗ ಬಲಿಹಾಕಿದರೆ—ಗ್ರಾಮ್ಯ ಶಬ್ದ ಉಪಯೋಗಿಸುತ್ತೇನೆ, ಕ್ಷಮಿಸಬೇಕು—ಎಲ್ಲಿ ಯಾವ ಅಧಿಕಾರಿ ಸಿಕ್ಕುತ್ತಾನೆಯೋ ಅವನನ್ನು ಬಲಿ ಹಾಕಿದರೆ ಅನುಕೂಲವಾಗುತ್ತದೆ ಎಂದು ಅನಿಸುತ್ತದೆ. ಬರಿಯ ಸಣ್ಣ ಸಣ್ಣ ನೌಕರರನ್ನು ಬಲಿ ಹಾಕುವುದಕ್ಕಿಂತ, ದೊಡ್ಡ ದೊಡ್ಡ ನೌಕರರು ಹಾಗೆ ಸಿಕ್ಕಾಗ ಹೆಚ್ಚಿನ ಶಿಕ್ಷೆಕೊಡಬೇಕೆಂದು ನನ್ನ ಅಭಿಪ್ರಾಯ. ಪಾಪ 50ರೂಪಾಯಿ ಸಂಬಳ ಬರತಕ್ಕ ಕಾನ್‌ಸ್ಟೇಬಲ್, ದಫೇದಾರ ಎಂಟು ಆಣೆ ತೆಗೆದುಕೊಂಡು ದೊಡ್ಡ ತಪ್ಪು ಮಾಡುವುದಿಲ್ಲ. 2000ರೂಪಾಯಿ ಸಂಬಳ ಬರತಕ್ಕ ಮನುಷ್ಯ ಅವನ ಆದಾಯಕ್ಕೆ ಅನುಸರಿಸಿ ತೆಗೆದುಕೊಳ್ಳುತ್ತಾನೆ. ಸಾವಿರ, ಎರಡು ಸಾವಿರ ರೂಪಾಯಿಗಳನ್ನು ತೆಗೆದುಕೊಂಡಾಗ ಆ ಮನುಷ್ಯನನ್ನು ಡಿಸ್‌ಮಿಸ್ ಮಾಡುವುದು ಆವಶ್ಯಕ. ಆ ಮನುಷ್ಯನಿಗೆ ಶಿಕ್ಷೆಕೊಡುವುದಕ್ಕೂ ಸಿದ್ಧ. ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ನಾನು ಸದಸ್ಯರನ್ನು ಅತ್ಯಂತ ಕಳಕಳಿಯಿಂದ, ದೈನ್ಯದಿಂದ ಬೇಡಿಕೊಳ್ಳುತ್ತೇನೆ. ಅನೇಕ ಸಲ ಇಂಥ ಮನುಷ್ಯ ಕೆಟ್ಟವನಿರುತ್ತಾನೆ, ಈ ಅಧಿಕಾರಿ ಲಂಚ ತೆಗೆದುಕೊಳ್ಳುತ್ತಾನೆ ಎಂದು ಗೊತ್ತಿರುತ್ತದೆ. ಆದರೆ ಅದನ್ನು ನಮ್ಮ ಹತ್ತಿರ ಬಂದು ಹೇಳುವುದಿಲ್ಲ. ಮತ್ತು ಒಂದು ವಿಷಾದದಿಂದ ಹೇಳತಕ್ಕ ವಿಷಯವೆಂದರೆ ಯಾವುದೋ ಒಂದು ಅಭಿಮಾನದಿಂದ ಬಂದು ಹೇಳುವುದೂ ವುಂಟು. ಅವರು ನಮ್ಮ ಸ್ನೇಹಿತರು ಎಂದು ಕೆಲವರು ಬಂದು ಹೇಳುತ್ತಾರೆ, ಹಾಗೆ ಹೇಳುವಾಗ 'ಏನೋ ಬಿಡ್ರಿ ಪಾಪ, ಮಾಡಿದ್ದಾನೆ. ಕ್ಶೈ ಬಿಡ್ರಿ' ಎಂದು ಹೇಳುವುದಕ್ಕೂ ಬರುತ್ತಾರೆ. ಶ್ರೀಮಾನ್ ವೀರಣ್ಣಗೌಡರು ಅದನ್ನು ಒತ್ತಿ ಒತ್ತಿ ಹೇಳಿದ್ದಾರೆ. ಅದಕ್ಕೆ ಮಾತ್ರ ಸಹಾಯಮಾಡುವುದಕ್ಕೆ ತಾವು ಬರಬೇಡಿ. ನಾನು ಅಧಿಕಾರದಲ್ಲಿ ಇದ್ದರೂ ಸರಿಯೇ, ಇಲ್ಲದೇ ಇದ್ದರೂ ಸರಿಯೇ, ನಾನು ಇರುವ ವರೆಗೂ ಇಂತಹ ಕೆಲಸಮಾಡಬೇಡಿ. ನಾನು ಅಧಿಕಾರ ಬಿಟ್ಟರೂ ಚಿಂತೆಯಿಲ್ಲ. ಯಾವ ಅಧಿಕಾರಿ ತಪ್ಪು ಮಾಡುತ್ತಾನೆಯೋ ಅವನಿಗೆ ಶಿಕ್ಷೆಮಾಡುವುದು ಆವಶ್ಯಕವಾದ ಕರ್ತವ್ಯ ಎಂದು ತಿಳಿದುಕೊಂಡಿದ್ದೇನೆ. ಈ ರೀತಿ ಕೆಲವು ಅಧಿಕಾರಿಗಳಿಗೆ ಶಿಕ್ಷೆ ಆಗಿದೆ. ಜನ ಹೇಳುತ್ತಾರೆ: ನಾನು ಬಹಳ ಮೃದುವಾದ ಮನುಷ್ಯ, ಈ ಮನುಷ್ಯ ಚೀಫ್ ಮಿನಿಸ್ಟರ್ ಕೆಲಸಕ್ಕೆ ಯೋಗ್ಯನಲ್ಲ, ಹೇಳುವುದನ್ನೆಲ್ಲಾ ಒಪ್ಪಿಕೊಳುತ್ತಾನೆ; ಆದ್ದರಿಂದ ಏನು ಅಧಿ-

(ಶ್ರೀ ಎಸ್. ನಿಜಲಿಂಗಪ್ಪ)

ಕಾರ ನಡೆಸುತ್ತಾನೆಯೋ ಏನೋ ಎಂದು ಅನೇಕರ ಮನಸ್ಸಿನಲ್ಲಿದೆ. ಆದರೆ ಒಂದು ಮಾತು ಹೇಳುತ್ತೇನೆ. ಈ ವಿಚಾರ ಬಂದಾಗ ಮಾತ್ರ ಬಹಳ ಕಠಿಣವಾಗಿ ಇರುತ್ತೇನೆ. ನನ್ನ ಸಹೋದ್ಯೋಗಿಗಳಿಗಿಂತಲೂ ನಾನು ಬಹಳ ಕಠಿಣವಾಗಿರುತ್ತೇನೆ ಎಂದು ಹೇಳಬಯಸುತ್ತೇನೆ. ಈ ವಿಚಾರದಲ್ಲಿ ಎಂದೂ ದಯಾ ದಾಕ್ಷಿಣ್ಯಗಳಿಗೆ ಒಳಗಾಗುವುದಿಲ್ಲ. ಇದಕ್ಕೆ ನಿಮ್ಮ ಸಹಕಾರ ಬೇಕು. ಒಬ್ಬ ಅಧಿಕಾರಿಗೆ ಲಂಚಕೊಡಬೇಕಾದರೆ ಅದಕ್ಕೆ ಮತ್ತೊಬ್ಬನು ಇರಬೇಕು. ಎರಡುಕೈ ಸೇರದೆ ಚಪ್ಪಾಳೆ ಆಗುವುದಿಲ್ಲ. ಸಾರ್ವಜನಿಕರೂ ಸಹ ಇದಕ್ಕೆ ಸೇರುತ್ತಾರೆ. ಸೇರದಿದ್ದರೆ ಆಗುವುದಿಲ್ಲ. ಹೀಗಾಗಿ ಇದು ತಮ್ಮ ಕರ್ತವ್ಯ, ನನ್ನ ಕರ್ತವ್ಯ, ನಮ್ಮೆಲ್ಲರ ಕರ್ತವ್ಯ, ಈ ಮಾನ್ಯ ಸಭೆಯ ಎಲ್ಲರ ಕರ್ತವ್ಯ. ಏನಾದರೂಮಾಡಿ ಲಂಚಕೋರತನವನ್ನು ಕಡಮೆಮಾಡುವುದಕ್ಕೆ ನಾವೆಲ್ಲರೂ ಪ್ರಯತ್ನಮಾಡಬೇಕು. ಖಂಡಿತ ನಾವು ನಿರ್ವಂಚನೆಯಿಂದ ಪ್ರಯತ್ನಮಾಡಿದರೆ, ದಯಾ ದಾಕ್ಷಿಣ್ಯ ಎಲ್ಲ ಬಿಟ್ಟರೆ ಇದು ಸಾಧ್ಯವಾಗುತ್ತದೆ ಎಂದು ಕಾಣುತ್ತದೆ. ಇದಕ್ಕೆ ತಮ್ಮ ಸಹಕಾರವನ್ನು ಕೋರುತ್ತೇನೆ.

ಇನ್ನು ಪ್ರೊಹಿಬಿಷನ್ ವಿಚಾರ. ಇದು ಬಹಳ ಕಷ್ಟವಾದ ಪ್ರಶ್ನೆ. ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ, ಒಂದು ಕಡೆ ಕುಡಿಯುವುದಕ್ಕೆ ನಿರ್ಬಂಧ ಹಾಕುವುದು ಮತ್ತೊಂದು ಕಡೆ ಉತ್ತೇಜನ ಕೊಡುವುದು, ಇದು ಸರಿಯಲ್ಲ. ಪೂರ್ತಿ ನಾವು ಈ ನೀತಿಯನ್ನು ಒಪ್ಪಬೇಕು, ಇಲ್ಲವೇ ತಿರಸ್ಕರಿಸಬೇಕು. ನನ್ನ ಅನುಭವದಲ್ಲಿ ಇವೊತ್ತು ಒಂದು ಕವಲು ಮನಸ್ಸಾಗಿದೆ, ಇಟ್ಟುಕೊಳ್ಳಬೇಕೆ ಬಿಡಬೇಕೇ ಎಂದು. ಮಾನವ ದೃಷ್ಟಿಯಿಂದ, ನೀತಿಯ ದೃಷ್ಟಿಯಿಂದ ಎಲ್ಲ ದೃಷ್ಟಿಗಳಿಂದಲೂ ಇದು ಹೋಗಬೇಕು. ಇದು ಆಗುವಾಗ ಈಗಿನ ದೃಷ್ಟಿಯಿಂದ ನೋಡಿದರೆ ಕೆಲವು ಕಡೆ ಪಾನನಿರೋಧ ಇದೆ; ಕೆಲವು ಕಡೆ ಪಾನನಿರೋಧ ಇಲ್ಲ. ಹೀಗಿರುವಾಗ ಇದನ್ನು ಹೇಗೆ ಸಾಧನೆ ಮಾಡಬೇಕು ಎನ್ನುವುದೇ ಗೊತ್ತಾಗುವುದಿಲ್ಲ. ನಮ್ಮ ಅರ್ಥಿಕ ಮಂತ್ರಿಗಳಿಗೆ ಇದನ್ನು ಬಿಟ್ಟು ಬಿಡಬೇಕೆಂದರೆ ಮನಸ್ಸು ಬರುವುದಿಲ್ಲ. ಏಕೆಂದರೆ ಕಷ್ಟ. ತಕ್ಕಡಿ ತೂಗಬೇಕಲ್ಲ! ಆ ದೃಷ್ಟಿಯಿಂದ ಯೋಗ್ಯ ಎಂದರೂ ಮುಂದಿನ ವರ್ಷ ಈ ಬಡ್ಜೆಟ್ ಅಧಿವೇಶನದ ಒಳಗಾಗಿ ಯಾವುದಾದರೂ ಒಂದು ಕ್ರಮ ತೆಗೆದುಕೊಂಡು, ಇಟ್ಟುಕೊಳ್ಳುವುದಾದರೆ ಪೂರ್ತಿ ಎಲ್ಲಾ ಕಡೆಯೂ ಪಾನನಿರೋಧವನ್ನು ಜಾರಿಗೆ ತರುತ್ತೇವೆ. ಈ ರೀತಿ ಅರ್ಥ ಉಂಟು ಅರ್ಥ ಇಲ್ಲ ಎನ್ನತಕ್ಕ ವಿಚಾರ ತೀರ್ಮಾನವಾಗಿ ಈ ಸಭೆಯಮುಂದೆ ಮುಂದಿನ ಬಡ್ಜೆಟ್ ಅಧಿವೇಶನದಲ್ಲಿ ಖಂಡಿತವಾಗಿ ಬರುತ್ತದೆ ಎಂದು ಖಂಡಿತವಾಗಿಯೂ ಹೇಳುತ್ತೇನೆ. ಪಾನನಿರೋಧ ಜಾರಿಗೆ ಬರಬೇಕೆಂದು ನನ್ನ ಮನಸ್ಸಿನಲ್ಲಿ ಇದೆ. ನಿಜವಾಗಿಯೂ ಕಾರ್ಯಗತವಾಗಬೇಕಾದರೆ, ಇದು ಬಹಳ ಕಷ್ಟದ ಮಾತು, ಬಹಳ ಕಷ್ಟಇದೆ. ಎಲ್ಲೋ ಒಂದು ರಾಜ್ಯದಲ್ಲಿ ಮಂತ್ರಿಗಳ ಕಾಂಪೌಂಡ್‌ನಲ್ಲೇ ಸಾರಾಯಿ ತಯಾರಾಗುತ್ತಿತ್ತು. ಪಾಪ ಅವರು ಏನು ಮಾಡುತ್ತಾರೆ?

ಒಬ್ಬ ಸದಸ್ಯರು.—ಮನೆಯ ಒಳಗೇ?

ಶ್ರೀ ಎಸ್. ನಿಜಲಿಂಗಪ್ಪ.—ಮನೆಯ ಒಳಗಲ್ಲ. ಅವರು ಬಹಳ ದೊಡ್ಡವರು. ಅದು ಬೊಂಬಾಯಿ ರಾಜ್ಯದಲ್ಲಿ ಆಯಿತು. ಬೊಂಬಾಯಿ ರಾಜ್ಯ ಎಂದರೆ ಬಹಳ ಕಠಿಣವಾಗಿ ಸರ್ಕಾರವನ್ನು ನಡೆಸತಕ್ಕ ಜನ. ಅಂತಹವರ ಮನೆಯ ಕಾಂಪೌಂಡಿನಲ್ಲೇ ಈ ರೀತಿ ನಡೆಯುತ್ತಾ ಇತ್ತು. ಮನುಷ್ಯತ್ವ ಒಂದು ಕೆಳದರ್ಜೆಗೆ ಹೋದಾಗ ಎಲ್ಲಿಗೆ ನಿಲ್ಲುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆಗಲೇ ನಾನು ಹೇಳಿದಂತೆ ತಾವುಗಳೆಲ್ಲರೂ ಸಹಕರಿಸುತ್ತೀರಿ ಎಂಬ ನಂಬಿಕೆಯಿಂದ ಇದನ್ನು ನಿಲ್ಲಿಸಬೇಕು, ನಿಲ್ಲಿಸುತ್ತೇವೆ. ಈ ದಿವಸ ಏನಾಗಿದೆ ಎಂದರೆ ಇದನ್ನು ಪೋಲೀಸ್‌ನವರಿಗೆ ವಹಿಸಿ ಬಿಟ್ಟಿದ್ದಾರೆ. ಆದ್ದರಿಂದ ಇದನ್ನು ಅವರ ಕೈತಪ್ಪಿಸಿ ಬೇರೆ ಏನಾದರೂ ಏರ್ಪಾಡು ಮಾಡಬೇಕು ಎನ್ನತಕ್ಕ ಒಂದು ಭಾವನೆ ನಮಗೆ ಬಂದಿದೆ. ಆದಷ್ಟು ಜಾಗ್ರತೆ ಅದನ್ನು ಕಾರ್ಯ ರೂಪಕ್ಕೆತಂದು ಪೋಲೀಸ್‌ನವರ ಕೈಯಿಂದ ತಪ್ಪಿಸುತ್ತೇವೆ. ಪೋಲಿಸ್‌ನವರ ಮೇಲೆ ಆಕ್ಷೇಪಣೆ ಮಾಡುತ್ತೇನೆಎಂದಲ್ಲ, ಯಾರೂ ಇಲ್ಲಿ ದೇವರ ಹಾಗೆ ಹುಟ್ಟಿರುವುದಿಲ್ಲ. ಪೋಲೀಸ್‌ನವರೂ ಕುಡಿಯುತ್ತಾರೆ, ಕುಡಿಯುವವನಿಗೂ ಕೊಡುತ್ತಾರೆ, ಮಕ್ಕಳು, ಮರಿ, ಮನೆಯವರಿಗೂ ಕೊಡುತ್ತಾರೆ. ಆದ್ದರಿಂದ ಇದು ಅವಶ್ಯಕ ಎಂದು ನಮಗೆ ಅನಿಸಿದೆ. ಸರ್ಕಾರದವರು ಈ ವಿಚಾರವನ್ನು ಅತ್ಯಂತ ತೀವ್ರತೆಯಿಂದ ಪರಿಶೀಲಿಸುತ್ತಾ ಇದ್ದಾರೆ.

ಇನ್ನು ಹರಿಜನರ ಮನೆಗಳ ವಿಚಾರದಲ್ಲಿ ಇಲ್ಲಿಯವರೆಗೂ ಸರ್ಕಾರ ಮನೆಯೊಂದಕ್ಕೆ 300 ರೂಪಾಯಿಗಳ ಸಹಾಯವನ್ನೊದಗಿಸುತ್ತಿತ್ತು. ನಮಗೆ ಮನೆಯೊಂದಕ್ಕೆ 500 ರೂಪಾಯಿಗಳ ಸಹಾಯವನ್ನಾದರೂ ನೀಡಬೇಕೆಂದು ಅಭಿಪ್ರಾಯವಿದೆ. ಆದರೆ ಈ ಬಗ್ಗೆ ತಕ್ಕಡಿಬೇರೆ ಸರಿತೂಗಿಸಬೇಕಾಗಿದೆ. ಆದರೆ ಬಾಕಿ ಬಾಬುಗಳಲ್ಲೇನಾದರೂ ಸ್ವಲ್ಪ ಹೆಚ್ಚುಕಡಮೆಮಾಡಿ ಅಷ್ಟಿಷ್ಟನ್ನು ಉಳಿಸಿ ಈಗ ಸದ್ಯಕ್ಕೆ ಮನೆಯೊಂದಕ್ಕೆ 400 ರೂಪಾಯಿಗಳ ಧನ ಸಹಾಯ ನೀಡಬೇಕೆಂಬ ತೀರ್ಮಾನಕ್ಕೆ ಬರುವುದರಲ್ಲಿದ್ದೇವೆ. ಆದರೆ ಈಗ ಅವರಿಗೆ ಕೊಡಲಾಗುತ್ತಿರುವ ಸಹಾಯ ದ್ರವ್ಯವೇನಿದೆ ಅದರ ಬಗ್ಗೆ ನನಗೇನೋ ಅಷ್ಟು ತೃಪ್ತಿಯಿಲ್ಲ. ಅವರಿಗೂ ನಮಗೂ ಅಷ್ಟಿಷ್ಟು ತೃಪ್ತಿ ಉಂಟಾಗುವಷ್ಟರ ಮಟ್ಟಿಗೆ ಈ ಮೊಬಲಗನ್ನು ಹೆಚ್ಚುಮಾಡಬೇಕೆಂದು ಮನಸ್ಸುಮಾಡಿದ್ದೇವೆ. ನಾನು ನಿರ್ವಂಚನೆಯಿಂದ ಈ ಅಭಿಪ್ರಾಯವನ್ನು ತಮ್ಮ ಮುಂದಿಡುತ್ತಿದ್ದೇನೆ. ಇತರರಿಗೆ ನೀಡತಕ್ಕ ಸಹಾಯವನ್ನು ಸ್ವಲ್ಪ ಮಟ್ಟಿಗೆ ಕಡಮೆಮಾಡಿದರೂ ಚಿಂತೆಯಿಲ್ಲ, ಈ ಹರಿಜನರಿಗೆ ಮಾತ್ರ ಹೆಚ್ಚಿನ ಸಹಾಯ ನೀಡಬೇಕಾದ್ದು ಅಗತ್ಯ ಎಂದು ಹೇಳುತ್ತಿದ್ದೇನೆ. ಆದರೆ ಶ್ರೀ ಬಸವಲಿಂಗಪ್ಪನವರು ಒಂದು ಬುದ್ಧಿವಂತಿಕೆಯ ಮಾತನ್ನು ಹೇಳತಕ್ಕದ್ದರಲ್ಲಿ ಏನೂ ಜಾಣತನವಿಲ್ಲ. ನಾವು ಹರಿಜನರಿಗೆ ಈಗ ಕೊಡುತ್ತಿರುವ 300 ರೂಪಾಯಿಗಳ ಸಹಾಯಕ್ಕೆ ಬದಲಾಗಿ 400 ರೂಪಾಯಿಗಳ ಸಹಾಯ ನೀಡಬೇಕೆಂದು ಆಲೋಚನೆಮಾಡಿದ್ದೇವೆ.

ಇನ್ನು ವಿದ್ಯಾಭ್ಯಾಸದ ವಿಚಾರ. ನಾನು ಈ ಜನರಲ್ ಬಡ್ಜೆಟ್ ಚರ್ಚೆಯ ಬಗ್ಗೆ ಉತ್ತರ ಕೊಡುವಾಗ ಒಂದು ತತ್ವಾಧಾರದಮೇಲೆ ಮಾತನಾಡುತ್ತಿದ್ದೇನೆ. ಹಾಗೆ ಒಂದು ತತ್ತ್ವ ಪ್ರತಿಪಾದನೆ ಮಾಡತಕ್ಕಂಥಾ ಉತ್ತರಕ್ಕೆ ಒಂದು ಮಾನ್ಯತೆಯಿದೆ. ಆದರೆ ನಾವು ಇಲ್ಲಿಯವರೆಗೂ ಹೇಳಿರತಕ್ಕಂಥ ವಿಚಾರಗಳನ್ನೆಲ್ಲ ಕೇಳಿಕೇಳಿ ಸದಸ್ಯರಾದ ತಮ್ಮೆಲ್ಲರಿಗೂ ಬಹಳ ಬೇಜಾರಾಗಿರಬಹುದು. ಆದಾಗ್ಗೂ ತಾವೆಲ್ಲರೂ ನಮ್ಮ ಸಂಬಂಧಿಗಳಂತೆ ನಮ್ಮೊಡನೆ ಸಹಕರಿಸುತ್ತಿರುವುದಕ್ಕಾಗಿ ತಮ್ಮೆಲ್ಲರಿಗೂ ನಮ್ಮ ಧನ್ಯವಾದಗಳನ್ನರ್ಪಿಸುತ್ತೇನೆ. ಈಗ ಹೊಸರಾಜ್ಯದಲ್ಲಿ ನಡೆಯುತ್ತಿರುವ ಪ್ರಾಥಮಿಕ ವಿದ್ಯಾಭ್ಯಾಸಕ್ರಮದಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಹಳೆಯ ಮೈಸೂರು—ಕೊಡಗು ಈ ಪ್ರಾಂತ

ದಲ್ಲಿರತಕ್ಕ ಮಿಡಲ್‌ಸ್ಕೂಲುಗಳಲ್ಲಿ ಯಾವಫೀಜೂ ಇರುವುದಿಲ್ಲ. ಇನ್ನುಳಿದ ಮೂರುಕಡೆಗಳಲ್ಲಿ ಬಾಲಕರು ಈ ಶಾಲೆಯಲ್ಲೂ ಫೀಜನ್ನು ಕೊಡುತ್ತಿದ್ದಾರೆ. ಆದರೆ ಬೊಂಬಾಯಿ ಕರ್ಣಾಟಕ ಪ್ರದೇಶದಲ್ಲಿ ಈ ಫೀಜೂ ಸ್ವಲ್ಪ ಮಟ್ಟಿಗೆ ಜಾಸ್ತಿಯಾಗಿಯೇಇದೆ. ಈ ವ್ಯತ್ಯಾಸವನ್ನು ನಾನೂ ಮತ್ತು ನನ್ನ ಇತರ ಮಾನ್ಯ ಸಹೋದ್ಯೋಗಿಗಳೂ ತಪ್ಪಿಸಬೇಕೆಂದು ಆಲೋಚನೆ ಮಾಡಿದ್ದೇವೆ. ಪ್ರಾಥಮಿಕ ವಿದ್ಯೆ ಅನೇಕ ಬಾಬುಗಳಿಗೆ ಒಂದು ದೊಡ್ಡ ಬುನಾದಿ. ಆದುದರಿಂದ ಈ ಪ್ರಾಥಮಿಕ ಶಿಕ್ಷಣ ಪದ್ಧತಿಯನ್ನು ಉಚಿತವಾಗಿ ಎಲ್ಲರಿಗೂ ದೊರೆಯತಕ್ಕ ಒಂದು ಏರ್ಪಾಡನ್ನು ಮಾಡೋಣವೆಂದು ಆಲೋಚನೆ ಮಾಡಿದ್ದೇವೆ.

ಇನ್ನು N.E.S. ಮತ್ತು C. D. ಪ್ರಾಜೆಕ್ಟ್‌ಗಳ ವಿಚಾರದಲ್ಲಿ ಒಬ್ಬರು ಮನಸ್ಸಿಗೆ ಬಹಳ ನೋವನ್ನುಂಟು ಮಾಡತಕ್ಕಂಥ ವಿಚಾರವನ್ನೂ ಹೇಳಿದ್ದಾರೆ. ಈ ಬ್ಲಾಕುಗಳನ್ನು ಸರ್ಕಾರ ಈ ದಿವಸ ಕಾಂಗ್ರೆಸ್ ಮೆಂಬರುಗಳು ಯಾವ ಯಾವ ಕಾನ್ಸ್ಟಿಟ್ಯುಯೆನ್ಸಿಯಿಂದ ಚುನಾವಣೆಯಾಗಿ ಬಂದಿರುತ್ತಾರೋ ಅಂಥಾ ಚುನಾವಣಾ ಕ್ಷೇತ್ರಗಳಿಗೆ ಮಾತ್ರ ಕೊಡಲಾಗಿದೆಯೆಂದು ಒಂದು ಅಪಾದನೆ ಮಾಡಿದ್ದಾರೆ. ಇಂಥ ಆಕ್ಷೇಪಣೆಗೆ ಬುಡವಿಲ್ಲವೆಂದು ಒಂದು ಮಾತು ತಿಳಿಸಿದರೆ ಸಾಕು.

ಶ್ರೀ ಜಿ. ಎಚ್. ಪುಟ್ಟಣ್ಣ.—ಯಾರು ಸ್ವಾಮಿ, ಆ ರೀತಿ ಆಕ್ಷೇಪಣೆ ಮಾಡಿರತಕ್ಕವರು ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ನೀವೇ ಎಂದು ಇಟ್ಟುಕೊಳ್ಳೋಣ. ನೀವು ನಾನ್‌ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದೀರಿ. ನೀವು ಆರಿಸಿಬಂದ ಚುನಾವಣೆ ಕ್ಷೇತ್ರ ಕಾಂಗ್ರೆಸ್ಸಿನವರಿಗೆ ಸೇರಿದುದಲ್ಲವೆಂಬ ಭಾವನೆಯಿಂದ ನಮ್ಮ ಕ್ಷೇತ್ರಕ್ಕೆ ಈ ಬ್ಲಾಕುಗಳನ್ನು ಕೊಡದೆ ಕಾಂಗ್ರೆಸ್ ಸದಸ್ಯರು ಆರಿಸಿಬಂದಿರತಕ್ಕಂಥ ಚುನಾವಣೆ ಕ್ಷೇತ್ರಗಳಿಗೇ ಈ ಬ್ಲಾಕುಗಳನ್ನು ಕೊಟ್ಟಿದ್ದಾರೆಂದು ಒಂದು ಆಕ್ಷೇಪಣೆ ಎತ್ತಿದ್ದಾರೆ. ಆದರೆ ಈ ವಿಚಾರ ನಿಮ್ಮ ಚುನಾವಣಾ ಕ್ಷೇತ್ರಕ್ಕೇನೂ ಸಂಬಂಧಪಡುವುದಿಲ್ಲ. ಏಕೆಂದರೆ ನಿಮ್ಮ ಕ್ಷೇತ್ರ ನಾನ್ ಕಾಂಗ್ರೆಸ್ ಮೆಂಬರಿಗೆ ಸೇರಿದ್ದರೂ ಅಲ್ಲಿಗೆ ನಾವೀಗ ಒಂದಲ್ಲ ಎರಡು ಬ್ಲಾಕುಗಳನ್ನು ಕೊಟ್ಟಿದ್ದೇವೆ. ಇದರ ಸತ್ಯಾಂಶ ಹೀಗಿದೆ. 1957ನೆಯ ನವೆಂಬರಿನಲ್ಲಿ 60 ಬ್ಲಾಕುಗಳು ಮಂಜೂರಾಗಿ ಬಂದವು. ಆ ಪೈಕಿ 19 ಬ್ಲಾಕುಗಳು ಇರುವಕಡೆ ಯಾರೊಬ್ಬ ಕಾಂಗ್ರೆಸ್ ಮೆಂಬರೂ ಇರುವುದಿಲ್ಲ. ಈ ಸಭೆಯಲ್ಲಿ ಈ ದಿವಸ ಇರತಕ್ಕ ಕಾಂಗ್ರೆಸ್ ಮತ್ತು ನಾನ್ ಕಾಂಗ್ರೆಸ್ ಸದಸ್ಯರ ಬಲಾಬಲವನ್ನು ಗಮನಿಸಿದರೆ ಕಾಂಗ್ರೆಸ್ ¾ ಪಾಲು ನಾನ್‌ಕಾಂಗ್ರೆಸ್ ¼ ಪಾಲಿದೆ. ಹೀಗಿದ್ದರೂ ನಾವು ನಮ್ಮ ಪಾಲಿನಲ್ಲೂ ಖೋತಾಮಾಡಿಕೊಂಡು ನಿಮಗೆ ಸಹಾಯ ಮಾಡಿದ್ದೇವೆ. ಆದುದರಿಂದ ಆ ರೀತಿಯಾಗಿ ಮಾತನಾಡತಕ್ಕದ್ದು ಸರಿಯಾದದ್ದಲ್ಲ. ವಿನಾ ಕಾರಣ ಹೀಗೆಲ್ಲ ಮಾತನಾಡಿ ಒಬ್ಬರ ಮನಸ್ಸಿಗೆ ನೋವುಂಟು ಮಾಡುವುದು ಖಂಡಿತ ಸರಿಯಾದದ್ದಲ್ಲ. ಈ ರೀತಿ ಸತ್ಯಕ್ಕೆ ದೂರವಾದ ವಿಚಾರಗಳನ್ನು ಹೇಳಿ ಮನಸ್ಸಿಗೆ ಅತ್ಯಂತ ನೋವುಂಟುಮಾಡತಕ್ಕದ್ದು ಯಾರೊಬ್ಬರಿಗೂ ಸರಿಯಾದ್ದಲ್ಲ. ನಾವು ಮೊದಲೇನೋ ಎಲ್ಲರಂತೆ ಸಂಸ್ಥೆಗಳ ಆಶ್ರಯದಲ್ಲಿ ಚುನಾವಣೆಗೆ ನಿಲ್ಲುತ್ತೇವೆ. ಜನರು ತಮ್ಮ ಓಟನ್ನು ಕೊಟ್ಟು ಸದಸ್ಯರನ್ನಾಗಿ ಆರಿಸಿ ಕಳುಹಿಸಿಬಿಡುತ್ತಾರೆ. ಆದರೆ ಹಾಗೆ ಬಂದ ಅನಂತರ ಇಲ್ಲಿ ಸರ್ಕಾರದ ಆಡಳಿತ ನಡೆಸಲು ಕುಳಿತುಕೊಂಡ ಮೇಲೆ ಇದು ಕಾಂಗ್ರೆಸ್ ಏರಿಯಾ—ಇದು ನಾನ್ ಕಾಂಗ್ರೆಸ್ ಏರಿಯಾ ಎಂದು ಭಿನ್ನಭೇದವೆಣಿಸಲಿಕ್ಕೆ ಅವಕಾಶವೇ ಇಲ್ಲ. ಸರ್ಕಾರ ಇಡಿಯ ರಾಜ್ಯಕ್ಕೆ ಹೊಣೆಗಾರವಾಗಿದೆ. ಒಂದು ಪಾರ್ಟಿಗಾಗಿ ಸರ್ಕಾರವಿಲ್ಲ. ಆದುದರಿಂದ ಅಂಥ ಭಿನ್ನಭಾವಗಳನ್ನೆಲ್ಲ ಈ ಸ್ಥಾನಕ್ಕೆ ಬಂದ ಕೂಡಲೇ ಬಿಟ್ಟುಬಿಡಬೇಕಾಗುತ್ತದೆ. ಕಾಂಗ್ರೆಸ್ ಪಾರ್ಟಿ ರಾಜ್ಯಭಾರ ಮಾಡುತ್ತಿದ್ದರೂ ಕಾನ್‌ಸ್ಟಿಟ್ಯೂಷನ್‌ಗೆ ಅನುಸರಿಸಿ ಆಡಳಿತಗಳು ನಡೆಯಬೇಕು.

ಇನ್ನು ಸಹಕಾರ ಬಾಬಿನ ಪರವಾಗಿ ಕೆಲವು ಟೀಕೆಗಳನ್ನು ಮಾಡಿದ್ದಾರೆ. ಆ ಟೀಕೆಗಳಲ್ಲಿ ಕೆಲವು ನಿಜವಾಗಿಯೂ ಮಾನ್ಯತೆಗೆ ಯೋಗ್ಯವಾದಂಥವುಗಳಾಗಿವೆ. ಈ ಇಲಾಖೆ ಇತ್ತೀಚೆಗೆ ಬಹಳವಾಗಿ ಬೆಳೆಯುತ್ತಿದೆ. ಈ ಇಲಾಖೆಯ ಆಡಳಿತ ಕಾರ್ಯವನ್ನು ಬಹಳ ದಕ್ಷತೆಯಿಂದ ನಡೆಸುತ್ತಿದ್ದಂಥ ಒಬ್ಬ ಅಧಿಕಾರಿಗಳು ನಮ್ಮಲ್ಲಿದ್ದರು. ಶ್ರೀ ಬಿ. ಎ. ಪಾಟೀಲ್ ಎಂದರೆ ಅವರು ಬಹಳ ದಕ್ಷರು. ಆದರೆ ನಮ್ಮೆಲ್ಲರ ದುರದೃಷ್ಟವಶಾತ್ ಅವರು ಕಾಲವಾಗಿ ಹೋದರು. ಈ ದಿವಸ ಯಾರು ಆ ಸ್ಥಾನದಲ್ಲಿದ್ದಾರೋ ಅವರೂ ಕೂಡ ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಈ ಇಲಾಖೆ ಬಹಳ ವರ್ಷದಿಂದಲೂ ಕೆಲಸಮಾಡಿಕೊಂಡು ಬರುತ್ತಿದೆ. ಈ ಇಲಾಖೆಯಲ್ಲಿ ಕೆಲವು ನ್ಯೂನತೆಗಳಿವೆ. ಕೆಲವು ಕಡೆ ಲೆಕ್ಕಪತ್ರಗಳು ಆಡಿಟ್ ಆಗಿಲ್ಲ: ಕೆಲವು ಕಡೆ ಹಣ ದುರುಪಯೋಗವಾಗಿದೆ. ಅಂಥ ಕೇಸುಗಳ ಬಗ್ಗೆ ಪ್ರಾಸಿಕ್ಯೂಟ್‌ಮಾಡಿದ್ದೇವೆ. ಇನ್ನು ಕೆಲವು ದಿವಸಗಳಲ್ಲೇ ಈ ಇಲಾಖೆಯ ಕೆಲಸಕಾರ್ಯಗಳನ್ನು ಒಂದು ಯೋಗ್ಯರೀತಿಯಲ್ಲಿ ವ್ಯವಸ್ಥೆಮಾಡೋಣ. ಈ ಇಲಾಖೆಯನ್ನು ರೀಆರ್ಗನೈಸ್‌ಮಾಡತಕ್ಕಬಗ್ಗೆ ಕೆಲವು ಏರ್ಪಾಡುಗಳನ್ನಾಗಲೇ ಕೈಗೊಂಡಿದ್ದೇವೆ. ಕೆಲವು ಆಫೀಸರುಗಳಿಗೆ ಮತ್ತು ನೌಕರರಿಗೆ ಈ ಬಾಬಿನಲ್ಲೊಂದು ಹೆಚ್ಚಿನ ಮಾಹಿತಿ ದೊರೆಯುವಂತೆ ಮಾಡಲು ಮೂರು ಕಡೆ ಟ್ರೈನಿಂಗ್ ಸೆಂಟರುಗಳನ್ನು ತೆರೆಯಲಾಗಿದೆ. ವರ್ಷಕ್ಕೆ ಸುಮಾರು 300 ಜನ ಟ್ರೈನಿಂಗ್ ಪಡೆದು ಹೊರಗೆ ಬರಲು ಅವಕಾಶಮಾಡಿದೆ. ಈ ನೌಕರರಲ್ಲಿ ದಕ್ಷತೆ ಹೆಚ್ಚಿಸಲು ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನೆಲ್ಲಾ ಕೈಗೊಳ್ಳಲು ತೀರ್ಮಾನ ಮಾಡಿದ್ದೇವೆ. ಇನ್ನು ತುಮಕೂರಿನ ಸೊಸೈಟಿಯ ವಿಚಾರದ ಬಗ್ಗೆ ಒಂದು ಮಾತು ತಿಳಿಸಬೇಕಾಗಿದೆ. ಈ ದಿವಸ ಅಲ್ಲಿಯ ಕೆಲಸಕಾರ್ಯಗಳು ಸರಿಯಾಗಿ ನಡೆಯುವಂತೆ ಏರ್ಪಾಡನ್ನು ಮಾಡಲಾಗಿದೆಯೆಂಬ ಆಶ್ವಾಸನ ಕೊಡುತ್ತೇನೆ. ಈಗಾಗಲೇ ಏಳೂಕಾಲು ಗಂಟೆಯಾಗಿದೆ. ಇನ್ನು ಉಳಿದಿರತಕ್ಕ ಕೆಲವು ವಿಚಾರಗಳೇನಿವೆ ಅವುಗಳ ಬಗ್ಗೆ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರಕೊಡುವಾಗ ವಿವರವಾಗಿ ತಿಳಿಸಲಾಗುತ್ತದೆ.

ಶ್ರೀ ಎಫ್. ಎಚ್. ಮೊಹಸಿನ್.—ಹೋಂಗಾರ್ಡುಗಳ ವಿಚಾರವೋ ?

Sri S. NIJALINGAPPA.—I will examine it. ಇನ್ನು ಕಡೆಯದಾಗಿ ಈ ದಿವಸ ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಎಂತೆಂತಹ ಸಂಪತ್ ಸಮೃದ್ಧಿಗಳಿರುತ್ತವೆ ಎಂಬುದನ್ನು ಪ್ರತಿಯೊಬ್ಬ ಮಾನ್ಯಸದಸ್ಯರೂ ಹೋಗಿ ನೋಡಿಕೊಂಡು ಬರತಕ್ಕದ್ದು ಒಳ್ಳೆಯದು. ನಮ್ಮ ದೇಶದ ಸಂಪತ್ ಸಮೃದ್ಧಿ ಈ ದಿವಸ ಒಂದಕ್ಕೆ ಒಂದೂವರೆಯಷ್ಟು ಜಾಸ್ತಿಯಾಗಿದೆ. ದೇಶದಲ್ಲಿ ನಮ್ಮ ನೈಸರ್ಗಿಕ ಸಂಪತ್ತು ಎಲ್ಲೆಲ್ಲಿ ಹೀಗೆ ಎಷ್ಟೆಷ್ಟರಮಟ್ಟಿಗಿದೆಯೆಂಬುದನ್ನು ಪ್ರತಿಯೊಬ್ಬರೂ ನೋಡಿ ಆ ವಿಚಾರಗಳನ್ನು ಗ್ರಹಿಸತಕ್ಕದ್ದು ಬಹಳ ಒಳ್ಳೆಯದು. ಅದರಿಂದ ಬಹಳ ಅನುಕೂಲವಿದೆ. ಆದರೆ ಆ ಒಂದು ಮಹತ್ತ್ವದ ವಿಚಾರದ ಕಡೆಗೆ ಗಮನ ಹರಿಯದೆ ಮಂತ್ರಿಗಳು ಸುಮ್ಮನೆ ಟಿ. ಎ., ಡಿ. ಎ. ಗಾಗಿ ಪದೇ ಪದೇ ತಿರುಗುತ್ತಿದ್ದಾರೆಂದು ಮಾತನಾಡುವುದು ಸರಿಯಲ್ಲ. ಈ ಅಧಿವೇಶನ ಮುಗಿಯುವುದರೊಳಗಾಗಿಯೇ ಈ ಮಾನ್ಯ

(SRI S. NIJALINGAPPA)

ಸಭೆಯ ಹಾಗೂ ಮೇಲ್ಮನೆಯ ಮತ್ತು ಪಾರ್ಲಿಮೆಂಟಿನ ಎಲ್ಲ ಸದಸ್ಯರುಗಳನ್ನೂ ಒಂದೊಂದು ಬ್ಯಾಚ್ ಮಾಡಿ ನಮ್ಮ ರಾಜ್ಯ ಎಷ್ಟು ಸುಂದರವಾಗಿದೆ ಮತ್ತು ಎಲ್ಲೆಲ್ಲಿ ಎಂಥೆಂಥ ಸಂಪತ್ತುಗಳಿಂದ ಕೂಡಿದೆ, ನಮ್ಮ ದೇಶದ ಸಂಪತ್ತು, ಸಂಸ್ಕೃತಿ, ಚಾರಿತ್ರಿಕ ಹಿನ್ನೆಲೆ, ಇವೆಲ್ಲ ಎಂಥ ಪ್ರಭಾವವುಳ್ಳಂಥವುಗಳೆಂಬುದನ್ನು ತಿಳಿಯಲು 5-6 ಬ್ಯಾಚುಗಳ ಮೂಲಕ ಎಲ್ಲರನ್ನೂ ಕರೆದುಕೊಂಡುಹೋಗಿ ಆ ಸ್ಥಳಗಳು ಎಲ್ಲೆಲ್ಲಿರುತ್ತವೆಂಬುದನ್ನು ನೋಡಿಕೊಂಡು ಬರತಕ್ಕಂಥ ಒಂದು ಏರ್ಪಾಡನ್ನು ಮಾಡಬೇಕೆಂದಿದ್ದೇವೆ. ಎಲ್ಲರೂ ನಮ್ಮ ರಾಜ್ಯ ಎಂಥ ಸಂಪದ್ಯುಕ್ತವಾದ ರಾಜ್ಯ ಎನ್ನುವುದನ್ನು ನೋಡಿ ತಿಳಿದುಕೊಳ್ಳಲಿ. ಹಾಗೆ ಆ ಸ್ಥಳಗಳನ್ನು ನೋಡಿಕೊಂಡು ಬಂದನಂತರ ಈ ರಾಜ್ಯವನ್ನು ಮುಂದಕ್ಕೆ ಹೇಗೆ ಕಟ್ಟಬೇಕೆಂಬುದನ್ನು ನಾವೆಲ್ಲರೂ ಸೇರಿ ಪರಿಶೀಲನೆ ಮಾಡಿ ತೀರ್ಮಾನಕ್ಕೆ ಬಂದು ಅದರಂತೆ ಈ ರಾಜ್ಯವನ್ನು ಕಟ್ಟೋಣ. ಆದರೆ ನಮ್ಮಲ್ಲಿ ಜಗಳಗಳೇನೂ ಇಲ್ಲವೆಂದು ನಾನು ಹೇಳುತ್ತಿಲ್ಲ. ಈ ನಮ್ಮ ಜಗಳಗಳೆಲ್ಲ ಗಂಡ ಹೆಂಡಿರ ಜಗಳದಂತೆ. ಈ ದಿವಸ ಜಗಳವಾಡಿದರೆ ಮತ್ತೆ ನಾಳೆ ಸೇರಿಯೇ ಸೇರಿಕೊಳ್ಳುತ್ತೇವೆ.

ಈಗ ತಾನೆ ಪ್ರಜಾಪ್ರಭುತ್ವವನ್ನು ಈ ದೇಶದಲ್ಲಿ ಕಲಿಯುತ್ತಿದ್ದೇವೆ. ನಮಗೆ ಪ್ರಜಾಪ್ರಭುತ್ವ ಹೊಸದು. ಸಹಸ್ರಾರು ವರ್ಷಗಳಿಂದ ಇರಲಿಲ್ಲ. ಅಂಥಾದ್ದು, ಈ ಹೊತ್ತು ಒಂದು ದೇಶ, ಒಂದು ಕಾನೂನು, ಒಬ್ಬ ಅಧ್ಯಕ್ಷ, ಒಂದು ಬಾವುಟವಾಗಿದೆ. ಹೊಸರಾಜ್ಯವನ್ನು ಕಟ್ಟುತ್ತಿದ್ದೇವೆ. ಪ್ರಜಾವರ್ಗಕ್ಕೆ ಅಧಿಕಾರ ಕೊಟ್ಟಿದ್ದೇವೆ. ಆದ್ದರಿಂದ ಮುಖ್ಯವಾಗಿ ಇಂದು ದೇಶವನ್ನು ಹೇಗೆ ಬೆಳೆಸೋಣ, ಹೆಚ್ಚಿಗೆ ಆಹಾರವನ್ನು ಹೇಗೆ ಉತ್ಪತ್ತಿ ಮಾಡೋಣ ಎಂಬುದು ನಮ್ಮ ಉದ್ದೇಶವಾಗಿರಬೇಕು. ನಿಮ್ಮ ಟೀಕೆ ಅದಕ್ಕಾಗಿ ಇರಬೇಕು. ಎಷ್ಟು ಕಟುವಾಗಿಯಾದರೂ ಟೀಕೆಮಾಡಿ. ಅದನ್ನು ಕೇಳುವುದು ನನ್ನ ಜವಾಬ್ದಾರಿ, ನನ್ನ ಹೊಣೆಗಾರಿಕೆ ಮತ್ತು ನನ್ನ ಸ್ನೇಹಿತರ ಹೊಣೆಗಾರಿಕೆ. ಒಟ್ಟಿನಲ್ಲಿ ತಾವೂ ನಾವೂ ಇಬ್ಬರೂ ಒಂದೇ ಕೆಲಸಮಾಡುತ್ತಿದ್ದೇವೆಂದು ಹೇಳಿ ಕೊನೆಯದಾಗಿ ಒಂದು ಮಾತನ್ನು ಹೇಳಬಯಸುತ್ತೇನೆ ಶ್ರೀಮಾನ್ ಮಲ್ಲಾರಾಧ್ಯರು-ಅವರೀಗ ಇಲ್ಲದಿದ್ದರೆ ಚೆನ್ನಾಗಿತ್ತು-ಅವರು ಹೇಳಿದರು, 'ಸುಟ್ಟುಹಾಕಿರಿ, ನಿಮ್ಮ statistics ನ್ನು ' ಎಂದು. ಏಕೆಂದರೆ, ಶೇಕಡ 148 ರಷ್ಟು food production ಜಾಸ್ತಿಯಾಗಿದೆಯೆಂದು print ಮಾಡಿದ್ದಾರೆ. ಅಷ್ಟುಮಾಡಿಲ್ಲ. ಇದು ಮಹಾ ತಪ್ಪು; ಆದ್ದರಿಂದ ಸುಟ್ಟುಹಾಕಿರಿ ಎಂದು ಹೇಳಿದರು. ಈ ವರ್ಷ ತಾನೆ ರಿಟೈರ್ ಆಗಿದ್ದಾರೆ; ಬುದ್ಧಿವಂತರು; ಒಳ್ಳೆಯ ವಿದ್ಯಾಭ್ಯಾಸ ಮಾಡಿದವರು; ಹಾಗೂ ಇನ್ನೂ active ಆಗಿರುವವರು—He is physically active—ಇಂಥವರು ಉದ್ವೇಗದಲ್ಲಿ ಸ್ವಲ್ಪ ಮುನ್ನುಗ್ಗಿ ಹೇಳಿದ್ದಾರೆನ್ನಬೇಕು. ಅವರಿಗೆ ಇಷ್ಟು ಹೇಳಬಯಸುತ್ತೇನೆ. ಮೊದಲು 1939 ನೆಯ ಇಸವಿಯನ್ನು basic year ಆಗಿ ಇಟ್ಟುಕೊಂಡಿದ್ದೆವು, ಆಮೇಲೆ 1949 ನೆಯ ಇಸವಿಯನ್ನು ಇಟ್ಟುಕೊಂಡಿತ್ತು. ಈಗ 1952-53 ನೆಯ ಇಸವಿಯನ್ನು ಇಟ್ಟುಕೊಂಡು ಅದರಿಂದ ಅಳೆಯುತ್ತಿದ್ದೇವೆ. ಆ ವರ್ಷದ್ದನ್ನು 100 ಎಂದು ಭಾವಿಸಿಕೊಂಡರೆ ಈ ವರ್ಷದ್ದು 148 ಎಂದು ಹೇಳಬಹುದು. ಇದನ್ನೇನೂ ಸುಡಬೇಕಾಗಿಲ್ಲ; ಸ್ವಲ್ಪ ಸಾವಧಾನದಿಂದ ಓದಿರಿ. ವಿಷಯಗಳನ್ನು ಮನನ ಮಾಡಿಕೊಳ್ಳಿ. ಕಷ್ಟಪಟ್ಟು ಅಂಕಿ ಅಂಶಗಳನ್ನು ಶೇಖರಿಸಿದ್ದೇವೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಎಷ್ಟು ರೂಪಾಯಿ ಖರ್ಚಾಗಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಮತ್ತೂ ಹೇಳುತ್ತೇನೆ, ಸಮುದ್ರದಲ್ಲಿ ಮೀನು ಹಿಡಿಯೋಣ ಎಂದು.

ಹಾಗೆಯೇ 11 ನೆಯ ಪುಟದಲ್ಲಿ Area sown 24,420 ಎಕರೆಗಳೆಂದು ಹೇಳಿದೆ, 16 ನೆಯ ಪುಟದಲ್ಲಿ Total Area under food and non-food crops 22,742 ಎಕರೆಗಳೆಂದು ಹೇಳಿದೆ, total Area under food and non-food crops 22,742 ಎಕರೆಗಳಾದಲ್ಲಿ, Area sown 24,420 ಎಕರೆಗಳು ಹೇಗಾದೀತು ಎಂದು ಟೀಕಿಸಿದರು. ಈ ವ್ಯತ್ಯಾಸಕ್ಕೆ ಕಾರಣ ಇಷ್ಟೆ. ಜಮೀನುಗಳಲ್ಲಿ ಎರಡು ಸಲ ಬೆಳೆಬೆಳೆಯುತ್ತಾರೆ. ಈ ಕಾರಣದಿಂದ 15 ಎಕರೆಗಳು ಬಿತ್ತಿದ ಪ್ರದೇಶವಾದರೂ area under food crops 5 ಎಕರೆಗಳೇ ಆಗಬಹುದು. ಮಂಗಳೂರು ಮುಂತಾದ ಕೆಲವು ಕಡೆಗಳಲ್ಲಿ ಎರಡು ಮತ್ತು ಮೂರು ಬೆಳೆಗಳನ್ನೂ ಬೆಳೆಯುತ್ತಾರೆ. ಆದ್ದರಿಂದ ಅಂಕಿಗಳಲ್ಲೇನೂ ತಪ್ಪಿಲ್ಲ. ಅಷ್ಟೊಂದು ಅವಹೇಳನ ಮಾಡಬೇಕಾಗಿಲ್ಲ. ನೋಡಿದರೇನೋ ಯಾರಿಗಾದರೂ ಅನುಮಾನ ಬರುವುದು ಸಹಜ. ಆದರೆ, ವಿಚಾರ ಹೇಗಿದೆಯೆಂದು ಸ್ವಲ್ಪ ತಿಳಿದುಕೊಳ್ಳಲಿ ಎಂದು ನಾನು ಹೇಳ ಬಯಸುತ್ತೇನೆ.

ನನ್ನ ಮಾನ್ಯ ಸಹೋದ್ಯೋಗಿಗಳು ತಮತಮಗೆ ಸಂಬಂಧಪಟ್ಟ ಖಾತೆಗಳ ವಿಚಾರದಲ್ಲಿ ಮಾತನಾಡುವುದು ಬೇರೆ ಇದೆ. ಕಾಲಾವಕಾಶವಿಲ್ಲದಿರುವುದರಿಂದ ಈಗ ಮಾತನಾಡದಿರಬಹುದು. Demands ಸಂಬಂಧದಲ್ಲಿ ಮಾತನಾಡುತ್ತಾರೆ. ತಾವುಗಳೆಲ್ಲಾ ಈವರೆಗೂ ಹೇಳಿದಂತೆ ಅತ್ಯಂತ ಜವಾಬ್ದಾರಿಯಿಂದ ಹೇಳಬೇಕು. ನಾವೂ ಅತ್ಯಂತ ಅಭಿಮಾನದಿಂದ ಕೇಳುತ್ತೇವೆ. ಮತ್ತು ಇಲ್ಲಿನ ಚರ್ಚೆಗಳು ಬರಬರುತ್ತಾ ಮೇಲ್ಮಟ್ಟಕ್ಕೆ ಬರುವಂತೆ ಶ್ರಮಿಸೋಣ.

ಕೊನೆಯದಾಗಿ ನಾವೆಲ್ಲರೂ ವಿಶ್ವಾಸವನ್ನು ಬೆಳೆಸೋಣ. ನಮ್ಮ ರಾಜ್ಯದ ಜನ ಸುಖದಿಂದ ಇರುವುದಕ್ಕೆ ಏನೇನು ಮಾಡಬೇಕೋ ಅದನ್ನು ಮಾಡೋಣವೆಂದು ಹೇಳುತ್ತಾ ತಮ್ಮೆಲ್ಲರ ಸಹಕಾರವನ್ನು ಆಶಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

MR. SPEAKER.—The House will now adjourn and meet again at one of the clock tomorrow.

The House adjourned at Twenty-five Minutes past Seven of the Clock to meet again at One of the Clock on Thursday, the 10th April 1958.

Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರವೇಶ ಕ್ರಮಾಂಕ Accession No(D)........4757

WD 920—GPB—900—20-9-1958

(Department Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರವೇಶ ಕ್ರಮಾಂಕ Accession No. B 4759
ದಿನಾಂಕ Date..................................

MYSORE LEGISLATIVE ASSEMBLY

THIRTY-THIRD DAY

Thursday, 10th April 1958.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI S. R. KANTHI, B.A., LL.B.) in the Chair.

QUESTIONS AND ANSWERS.

Accommodation to the Taluk Office Staff in Channarayapatna.

Q.—1643. Sri N. G. NARASIMHE GOWDA (Sravanabelagola).—

Will the Government be pleased to state :—

(*a*) whether they are aware of the inconvenience caused to the Taluk Office Staff in Channarayapatna for not providing them with quarters ;

(*b*) whether they propose to take immediate action to provide accommodation to the Non-Gazetted Staff ?

A.—Sri H. K. VEERANNA GOWDH (Minister for Public Works).—

(*a*) Government are not aware that any inconvenience has been caused.

(*b*) The question of providing accommodation is under examination.

ಶ್ರೀ ಎನ್. ಜಿ. ನರಸಿಂಹೇಗೌಡ.—ಪ್ರಶ್ನೆಯ (ಬಿ) ಭಾಗಕ್ಕೆ ಉತ್ತರವಾಗಿ ಪರಿಶೀಲನೆಮಾಡುತ್ತಿದ್ದೇವೆಂದು ಹೇಳಿದ್ದೀರಿ. ತಾವು ಈ ಚೆನ್ನರಾಯ ಪಟ್ಟಣ ತಾಲ್ಲೂಕು ಒಂದರ ವಿಚಾರವನ್ನು ಪರಿಶೀಲನೆ ಮಾಡುತ್ತಿದ್ದೀರೋ ಅಥವಾ ಇಡಿಯ ರಾಜ್ಯದ ಒಂದು ಯೋಜನೆಯನ್ನು ಈ ಸಂಬಂಧವಾಗಿ ಪರ್ಯಾಲೋಚನೆ ಮಾಡುತ್ತಿದ್ದೀರೋ ?

*ಶ್ರೀ ಎಚ್. ಕೆ. ವೀರಣ್ಣಗೌಡ.—ತಾವು ಈ ಪ್ರಶ್ನೆಯಲ್ಲೇನೋ ಕೇವಲ ಚೆನ್ನರಾಯ ಪಟ್ಟಣಕ್ಕೆ ಸಂಬಂಧಪಟ್ಟ ಹಾಗೆ ಕೇಳಿದ್ದೀರಿ. ಆದರೆ ಸಾಧಾರಣವಾಗಿ ಈ ನೌಕರರ ವಸತಿ ಸೌಕರ್ಯಗಳ ಪರಿಸ್ಥಿತಿ ಎಲ್ಲ ತಾಲ್ಲೂಕುಗಳಲ್ಲೂ ಯಾವ ರೀತಿ ಇದೆಯೋ ಇಲ್ಲೂ ಅದೇ ಪರಿಸ್ಥಿತಿ ಇರುತ್ತದೆ. ಚೆನ್ನರಾಯ ಪಟ್ಟಣದ ತಾಲ್ಲೂಕು ಈ ದಿವಸವೇನೂ ಹೊಸದಾಗಿ ಆದುದಲ್ಲ. ಆ ಸ್ಥಳದಲ್ಲಿರತಕ್ಕ ತಾಲ್ಲೂಕು ಆಫೀಸುಗಳು ಬಹಳ ವರ್ಷಗಳಿಂದಲೂ ಅಲ್ಲಿ ನಡೆದುಕೊಂಡು ಬರುತ್ತಿವೆ. ಇಲ್ಲಿಯವರೆಗೂ ಅಲ್ಲಿ ಅಂಥ ಕಷ್ಟಗಳೇನೂ ಇದ್ದಂತೆ ಕಂಡಿರಲಿಲ್ಲ. ಆದರೆ ಈ ದಿವಸ ತಾವು ಇದ್ದಕ್ಕಿದ್ದಂತೆ ಪರಿಸ್ಥಿತಿ ಬಹಳ ತೊಂದರೆಗೊಳಗಾಗಿದೆ ಎಂದು ಹೇಳಿರತಕ್ಕ ಅಂಶವನ್ನು ಪರಿಶೀಲನೆ ಮಾಡಬೇಕಾಗಿದೆ ಎಂಬುದು ಮೊದಲನೆಯ ವಿಚಾರವಾಯಿತು. ಇನ್ನು ಎರಡನೆಯ ವಿಚಾರವೆಂದರೆ ? ಈ ದಿವಸ ಎಲ್ಲ ಇಲಾಖೆಗಳ ನೌಕರರಿಗೂ ವಸತಿ ಸೌಕರ್ಯದ ಬಗ್ಗೆ ಕಟ್ಟಡಗಳನ್ನು ಸರ್ಕಾರದವರು ಕಟ್ಟಿಸಲು ಸಾಧ್ಯವಿಲ್ಲದ ಮಾತು ಎಂಬುದು. ಆದರೆ ಈವರೆಗೂ ಎಲೆಕ್ಟ್ರಿಕಲ್ ಇಲಾಖೆಯಲ್ಲಿ, ಪೋಲೀಸ್ ಇಲಾಖೆಯಲ್ಲಿ ಮತ್ತು ಎಲ್ಲೆಲ್ಲಿ ಕೆಲವು ಕಡೆ ಹೊಸದಾಗಿ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟಲಾಗುತ್ತಿದೆಯೋ ಅಲ್ಲಿ ಈ ಮೂರು ಬಾಬುಗಳಲ್ಲಿ ನೌಕರರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕ ಪದ್ಧತಿ ಇದೆ. ಇನ್ನುಳಿದ ಇಲಾಖೆಗಳ ವಿಚಾರಕ್ಕೆ ಬಂದರೆ ಯಾವ ಯಾವ ಕಾಲಕ್ಕೆ ಎಷ್ಟೆಷ್ಟು ಹಣದ ಅನುಕೂಲತೆ ದೊರೆಯುತ್ತದೋ ಅದಕ್ಕನುಸಾರವಾಗಿ ಒಂದು ಒಟ್ಟು ಮೊಬಲಗನ್ನು ಬಡ್ಜೆಟ್ಟಿನಲ್ಲಿ ಅಲಾಟ್ ಮಾಡಿ ಅದನ್ನು ಜಿಲ್ಲಾವಾರಾಗಿ ಹಂಚಲಾಗುತ್ತದೆ.

ಶ್ರೀ ಎನ್. ಜಿ ನರಸಿಂಹೇಗೌಡ.—ಚೆನ್ನರಾಯ ಪಟ್ಟಣಕ್ಕೆ P.W.D. ಸಬ್ ಡಿವಿಜನ್ ಬಂದ ನಂತರ ಈ ತಾಲ್ಲೂಕ್ ಕಚೇರಿಯ ನೌಕರರಿಗೆ ವಾಸದ ಮನೆಗಳು ಸಿಕ್ಕದೆ ತೊಂದರೆಯಾಗಿದೆ ಎಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ತಾವು ಹೇಳುತ್ತಿರುವ ಅಂಶ ಪರಿಶೀಲನೆ ಮಾಡಬೇಕಾಗಿರುವಂಥಾದ್ದು. ಈಗ ಬಡ್ಜೆಟ್ಟಿನಲ್ಲಿ ತೆಗೆದಿಟ್ಟಿರುವ ಹಣದಲ್ಲಿ ಹಾಸನ ಜಿಲ್ಲೆಗೆಷ್ಟು ಬರುತ್ತದೆ; ಅದರಲ್ಲಿ ಚೆನ್ನರಾಯ ಪಟ್ಟಣಕ್ಕೆಷ್ಟು ದೊರೆಯುತ್ತದೆ ಎಂಬುದನ್ನೆಲ್ಲ ಮುಂದೆ ನೋಡಬೇಕಾಗಿದೆ. ಬಹುಶಃ ಅಲ್ಲಿಗೂ ಒಂದೆರಡು ಮನೆಗಳ ಬಗ್ಗೆ ಹಣ ದೊರೆತೀತು.

ಶ್ರೀ ಎನ್. ಜಿ. ನರಸಿಂಹೇಗೌಡ.—ಪೋಲೀಸ್, ಎಲೆಕ್ಟ್ರಿಕಲ್ ಇಲಾಖೆಗಳಂತೆ ಈ ರೆವಿನ್ಯೂ ಇಲಾಖೆಗೂ ಕೂಡ ನೌಕರರ ಬಗ್ಗೆ ಏಕೆ ಮನೆಗಳನ್ನು ಕಟ್ಟಿಸಿಕೊಡಬಾರದು ?

*Asterisk indicates that the remarks or speeches have not been revised by the member concerned.

ಶ್ರೀ ಎಚ್. ಕೆ. ವೀರಣ್ಣಗೌಡ.—ರೆವಿನ್ಯೂ ಇಲಾಖೆ ಇತ್ತೀಚೆಗೆ ಬಂದುದೇನೂ ಅಲ್ಲ. ಎಷ್ಟೋ ವರ್ಷಗಳಿಂದ ಕೆಲಸ ಮಾಡುತ್ತಾ ಬಂದಿದೆ. ಆದರೆ ತಾವು ಹೇಳುತ್ತಿರುವಷ್ಟು ತೊಂದರೆ ಅಲ್ಲಿ ಉಂಟಾಗಿದೆಯೋ ಎಂಬ ಅಂಶವನ್ನು ಪರಿಶೀಲನೆ ಮಾಡಬೇಕಾಗಿದೆ ಎಂದು ಮೊದಲೇ ತಿಳಿಸಿದ್ದೇನೆ.

———

Extension of Hiriyur Municipal Limit.

Q.—1654. Sri K. KENCHAPPA (Hiriyur).—

Will the Government be pleased to state :—

(*a*) whether the Hiriyur Muncipality has taken steps for acquisition of some Survey numbers for extending the Municipal limit with a view to provide suitable lands for construction of their houses;

(*b*) if so, since how long the proposal is pending with Government;

(*c*) whether they would take immediate steps to acquire the survey numbers and give possession to the Muncipality ?

A.—Sri R. CHENNIGARAMAIAH (Minister for Local Self-Government).—

(*a*) Yes.

(*b*) The proposal is not pending with Government.

(*c*) 13 acres–26 guntas of land in S. No. 1/1 and 1/2 has already been utilized by the Municipality though the Municipality has not paid the balance of Rs. 2,354-12-0 since 19th January, 1955. Action will be taken after receipt of specific proposals from the Municipality and after having deposited the balance of acquisition and appropriation charges in other cases.

ಶ್ರೀ ಕೆ. ಕೆಂಚಪ್ಪ.—(ಬಿ) ಗೆ ಉತ್ತರವಾಗಿ ಪೆಂಡಿಂಗ್ ಇಲ್ಲ ಎಂದು ಹೇಳಿ (ಸಿ)ಗೆ ಒದಗಿಸಿರುವ ಉತ್ತರದಲ್ಲಿ 13 ಎಕರೆ 26 ಗುಂಟೆ ಜಮಿನು ಅಕ್ವಯಿರ್ ಆಗಿ ಈ ಬಗ್ಗೆ 2,354ರೂಪಾಯಿ ಹನ್ನೆರಡಾಣೆ ಬಾಕಿ ಬರಬೇಕಾಗಿದೆ ಎಂದು ತಿಳಿಸೋಣವಾಗಿದೆ. ಈ ಜಮಿನಿಗೆ ಸಂಬಂಧಪಟ್ಟ ದಾಖಲೆಗಳು ಈಗ ಯಾವ ಆಫೀಸಿನಲ್ಲಿವೆ ?

*ಶ್ರೀ ಆರ್. ಚೆನ್ನಿಗರಾಮಯ್ಯ.—ಆ ದಾಖಲೆಗಳು ಸರ್ಕಾರದಲ್ಲಿ ಪೆಂಡಿಂಗ್ ಆಗಿಲ್ಲವೆಂದು ಅದರ ಅರ್ಥ.

ಶ್ರೀ ಕೆ. ಕೆಂಚಪ್ಪ.—ಹಾಗಾದರೆ ಎಲ್ಲಿ ಪೆಂಡಿಂಗ್ ನಿಂತಿವೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸಂಬಂಧಪಟ್ಟ ಮುನಿಸಿಪಾಲಿಟಿಯಲ್ಲಿರಬೇಕು.

ಶ್ರೀ ಕೆ. ಕೆಂಚಪ್ಪ.—ಹಾಗಾದರೆ ಇಷ್ಟು ಹಣ ಬಾಕಿ ಇದೆ ಎಂಬುದು ತಮಗೆ ಹೇಗೆ ಗೊತ್ತಾಯಿತು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಈ 13 ಎಕರೆ ಜಮಿನಿನಲ್ಲಿ 7 ಎಕರೆ ಜಮಿನನ್ನು ಎಲೆಕ್ಟ್ರಿಕಲ್ ಇಲಾಖೆಗೋಸ್ಕರವಾಗಿ ಸ.ನಂಬರ್ 275, 276, 277 ಗಳಲ್ಲಿ ಅಕ್ವಯಿರ್ ಮಾಡಿಕೊಳ್ಳಲಾಯಿತು. ಇನ್ನುಳಿದ ಜಮಿನನ್ನು ಈ ಹಿರಿಯೂರು ಮುನಿಸಿಪಾಲಿಟಿಗೆ ಅಕ್ವಯಿರ್‌ಮಾಡಿಕೊಳ್ಳತಕ್ಕ ಬಗ್ಗೆ 8,242 ರೂಪಾಯಿಗಳ ಪೈಕಿ 5,888 ರೂಪಾಯಿಗಳನ್ನು ಪಾವತಿ ಮಾಡಿ ಬಾಕಿ ಹಣವನ್ನು ಹಾಗೆಯೇ ಇನ್ನೂ ನಿಲ್ಲಿಸಿಕೊಂಡಿದ್ದಾರೆ. ಈ ವಿಚಾರ ಅಲ್ಲಿಗೇ ನಿಂತುಹೋಗಿದೆ.

ಶ್ರೀ ಕೆ. ಕೆಂಚಪ್ಪ.—ಈಗ ಅದು ಯಾವ ಇಲಾಖೆಯಲ್ಲಿ ಪೆಂಡಿಂಗ್ ಇದೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಮುನಿಸಿಪಾಲಿಟಿಯಲ್ಲಿದೆ.

ಶ್ರೀ ಕೆ. ಕೆಂಚಪ್ಪ.—2,354 ರೂಪಾಯಿ 12 ಆಣೆಯನ್ನು 1955ನೆಯ ಇಸವಿಯಿಂದ ಕೊಡಬೇಕಾಗಿದೆಯೆಂದು ತಮಗೆ ಯಾರು ತಿಳಿಸಿದರು ? ಮುನಿಸಿಪಾಲಿಟಿಯವರೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—8,933 ರೂಪಾಯಿಗಳು ಅಪ್ರೋಪ್ರಿಯೇಷನ್ ಚಾರ್ಜನ್ನು ಮುನಿಸಿಪಾಲಿಟಿಯವರು ಅಕ್ವೈರ್ ಮಾಡಿಕೊಂಡಿದ್ದಕ್ಕೆ ಕೊಡಬೇಕಾಗಿತ್ತು. ಇದರಲ್ಲಿ ಸ್ವಲ್ಪ ಮಾತ್ರ ಕೊಟ್ಟಿದ್ದಾರೆ. ಬಾಕಿ ಅಷ್ಟನ್ನು ಕೊಡಬೇಕಾಗುತ್ತದೆ ಎಂದು ತಿಳಿಸಿದ್ದೇವೆ.

ಶ್ರೀ ಕೆ. ಕೆಂಚಪ್ಪ.—ಇಷ್ಟು ಹಣ ಕೊಡಬೇಕೆಂದು ತಮಗೆ ತಿಳಿಸಿದವರು ಯಾರು ? ಮುನಿಸಿಪಾಲಿಟಿಯವರೇ ? ತಾಲ್ಲೂಕಿನವರೇ ಅಥವಾ ಡೆಪ್ಯುಟಿ ಕಮಿಷನರೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಮುನಿಸಿಪಾಲಿಟಿಯವರು ದೆಪ್ಯುಟಿ ಕಮಿಷನರಿಗೆ ತಿಳಿಸುತ್ತಾರೆ. ಡೆಪ್ಯುಟಿ ಕಮಿಷನರು ನಮಗೆ ತಿಳಿಸುತ್ತಾರೆ.

ಶ್ರೀ ಕೆ. ಕೆಂಚಪ್ಪ.—ಸರ್ಕಾರದ ಹತ್ತಿರ ಪೆಂಡಿಂಗ್ ಇಲ್ಲವೆಂದು ಹೇಳುವುದರ ಅರ್ಥವೇನು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸರ್ಕಾರದಲ್ಲಿ ಈ ಅಕ್ವಿಸಿಷನ್ ಕೇಸು ಪೆಂಡಿಂಗ್ ಇಲ್ಲವೆಂದೇ ಇದರ ಅರ್ಥ.

ಶ್ರೀ ಕೆ. ಕೆಂಚಪ್ಪ.—1955ನೆಯ ಇಸವಿಯಿಂದ ಇನ್ನೂ ಇದು ಬಗೆಹರಿಯದಿರಬೇಕಾದರೆ ಕಾರಣವೇನು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅಕ್ವಿಸಿಷನ್ ರಿಕಾರ್ಡ್ ಫೈಸಲಾಗಿಲ್ಲ. 8,933 ರೂಪಾಯಿಗಳನ್ನು ಮುನಿಸಿಪಾಲಿಟಿಯವರು ಕೊಡಬೇಕಾಗಿತ್ತು. ಅದರ ಪೈಕಿ 5888ರೂಪಾಯಿಗಳನ್ನು ಕೊಟ್ಟಿದ್ದಾರೆ. ಬಾಕಿ ಹಣ ಕೊಡುವುದು ಅವರಲ್ಲಿ ಪೆಂಡಿಂಗ್ ಆಗಿದೆ. ನಮ್ಮಲ್ಲಿಲ್ಲ.

ಶ್ರೀ ಕೆ. ಕೆಂಚಪ್ಪ.—ಪ್ರಶ್ನೆಯ (*a*) ಭಾಗದಲ್ಲಿ "whether the Hiriyur Municipality has taken steps for acquisition" ಎಂದು ಕೇಳಿರುವುದಕ್ಕೆ ಉತ್ತರವಾಗಿ 'yes' ಎಂದು ಹೇಳಿದ್ದೀರಿ. ಆದರೆ ಮೂರನೆಯ ಭಾಗಕ್ಕೆ ಉತ್ತರದಲ್ಲಿ 2,588 ರೂಪಾಯಿ ಕೊಡತಕ್ಕ ವಿಚಾರ ಪೆಂಡಿಂಗ್ ಇದೆಯೆಂದು ಬೇರೆ ಹೇಳಿದ್ದೀರಿ. ಈಗ ಉತ್ತರ ಹೇಳುವುದಕ್ಕೂ ಇಲ್ಲಿ ಉತ್ತರ ಕೊಟ್ಟಿರುವುದಕ್ಕೂ ಒಂದಕ್ಕೊಂದಕ್ಕೆ ಸಮಂಜಸವಾಗಿಲ್ಲ. ಎಲ್ಲಿ ನಿಜವಾಗಿಯೂ ಪೆಂಡಿಂಗ್ ನಲ್ಲಿದೆಯೆಂದು ಹೇಳುತ್ತೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅಕ್ವಿಸಿಷನ್ ರಿಕಾರ್ಡ್ ಪ್ರಕಾರ 8,933 ರೂಪಾಯಿಗಳನ್ನು ಮುನಿ

ಸಿಪಾಲಿಟಿಯವರು ಕೊಡಬೇಕಾಗಿತ್ತು. ಅದನ್ನು ಮುನಿಸಿಪಾಲಿಟಿಯವರು ಕೊಡಲಿಲ್ಲ. 5888 ರೂಪಾಯಿಗಳನ್ನು ಮಾತ್ರ ಕೊಟ್ಟರು. ಆದ್ದರಿಂದ ಆ ಪ್ರಶ್ನೆ ಅಲ್ಲಿಗೇ drop ಆಗಿದೆ. ಆದ್ದರಿಂದ ಸರ್ಕಾರದಲ್ಲಿ ಪೆಂಡಿಂಗ್ ಇದೆಯೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಕೆಂಚಪ್ಪ.—ಹಾಗಾದರೆ, ಮುನಿಸಿಪಾಲಿಟಿಯವರು ಆ ಹಣ ಕೊಡುವವರೆಗೂ acquisition ಕಾರ್ಯಕ್ರಮವನ್ನು ಮುಂದುವರಿಸಕೂಡದೆಂದು ಹೇಳಿದೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಹೌದು.

ಶ್ರೀ ಕೆ. ಕೆಂಚಪ್ಪ.—ದುಡ್ಡು ಕೊಡುವವರೆಗೂ ತೆಗೆದುಕೊಳ್ಳಬೇಡಿ ಎಂದು ಹೇಳುವುದು ಒಂದು Procedure ಆದೀತೇ ?

ಶ್ರೀ ಆರ್. ಚೆನ್ನಿಗರಾಮಯ್ಯ.-Compensation ಕೊಟ್ಟಿಲ್ಲವೆಂದು ಅಲ್ಲಿಗೇ ನಿಂತಿದೆ.

ಶ್ರೀ ಬಿ. ರಾಚಯ್ಯ.—ಎಷ್ಟು ಜಮೀನನ್ನು ಮುನಿಸಿಪಾಲಿಟಿಯವರು ತೆಗೆದುಕೊಂಡಿದ್ದರೋ ಅಷ್ಟಕ್ಕೆ ಮುನಿಸಿಪಾಲಿಟಿಯವರು ಕೊಡಬೇಕಾದ್ದು ಧರ್ಮವಲ್ಲವೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಹೌದು.

ಶ್ರೀ ಬಿ. ರಾಚಯ್ಯ.—ಅವರು ಬಾಕಿ ಕೊಡದೆ ಇದ್ದರೆ ಸರ್ಕಾರದವರು ಅವರನ್ನು ಕೊಡುವಂತೆ ಮಾಡುವುದಕ್ಕೆ ಅಧಿಕಾರ ಹೊಂದಿಲ್ಲವೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅಧಿಕಾರ ಹೊಂದಿದ್ದಾರೆ. ಮುನಿಸಿಪಾಲಿಟಿಯವರನ್ನು ಕೇಳುತ್ತಿದ್ದಾರೆ. ಕಾಲವಿಳಂಬವಾಗಿದೆ.

ಶ್ರೀ ಬಿ. ರಾಚಯ್ಯ.—ಸರ್ಕಾರದವರು ಈಗಾದರೂ ಮುನಿಸಿಪಾಲಿಟಿಯವರಿಗೆ ಬಾಕಿಯನ್ನು ಕೊಡಬೇಕೆಂದು ಹೇಳಿ ಸೂಚನೆ ಕೊಡುತ್ತಾರೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಕೊಡುತ್ತೇವೆ.

ಶ್ರೀ ಜಿ. ವೆಂಕಟೇಗೌಡ.—ಈ 13 ಎಕರೆಗಳು ಯಾರಿಗೆ ಸೇರಿವೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸರ್ವೆ ನಂಬರು ಗೊತ್ತಿದೆ. ಯಾರಿಗೆ ಸೇರಿದ್ದು ಎಂಬುದು ಗೊತ್ತಿಲ್ಲ.

ಶ್ರೀ ಜಿ. ವೆಂಕಟೇಗೌಡ.—ಅವರಿಗೆ ಹಣ ಪಾವತಿ ಮಾಡಿದ್ದೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸರ್ಕಾರದವರು ಮಾಡುವುದಿಲ್ಲ. ಅಕ್ವಿಸಿಷನ್ ಆಫೀಸರು ಮಾಡುತ್ತಾರೆ.

Extension of National Extension Service Schemes to Haveri.

Q.—1763. Smt. LEELAVATI VENKATESH MAGADI (Shirahatti).—

Will the Government be pleased to state :—

(*a*) whether it is a fact that the District Development Board had recommended for taking Haveri Taluk under the N.E.S. scheme immediately after Shirahatti;

(*b*) the reasons for the delay in not taking up this taluk;

(*c*) when do they propose to bring the said taluk under the N. E. S. scheme ?

A.—Sri S. NIJALINGAPPA (Chief Minister).—

(*a*) Yes.

(*b*) The number of Blocks allotted was limited and as such it was not possible to allocate two blocks to Haveri taluk during the year 1957-58.

(*c*) All the taluks in the State are likely to be covered by N.E.S. Blocks before the end of the Second Plan period.

ಶ್ರೀಮತಿ ಲೀಲಾವತಿ ವೆಂಕಟೇಶ ಮಾಗಡಿ.-ಪ್ರಶ್ನೆಯ (*a*) ಭಾಗಕ್ಕೆ ಉತ್ತರವಾಗಿ ತಾವು ಹಾವೇರಿ ತಾಲ್ಲೂಕಿಗೆ ರಾಷ್ಟ್ರೀಯ ವಿಸ್ತರಣ ಯೋಜನೆಯನ್ನು ಜಾರಿ ಮಾಡಬೇಕೆಂದಿದೆಯೆಂದು ಹೇಳಿದ್ದೀರಿ, ಆದರೆ, (*b*) ಭಾಗದ ಉತ್ತರದಲ್ಲಿ ಎರಡು ಬ್ಲಾಕ್ ಹಂಚಿಕೊಡಲು ಸಾಧ್ಯವಿರಲಿಲ್ಲವೆಂದು ಹೇಳಿದ್ದೀರಿ. ಹಾಗಾದರೆ, ಈಗ ಹಾವೇರಿ ತಾಲ್ಲೂಕಿನಲ್ಲಿ ಬ್ಲಾಕ್ ಇದೆಯೇ ?

*ಶ್ರೀ ರಾಮಕೃಷ್ಣ ಹೆಗ್ಗಡೆ (ಯೋಜನೆ ಮತ್ತು ಅಭಿವೃದ್ಧಿ ಶಾಖೆಯ ಉಪಮಂತ್ರಿಗಳು).—ಹಾವೇರಿಯ ಜನಸಂಖ್ಯೆ ಒಂದು ಲಕ್ಷಕ್ಕೆ ಮೀರಿದೆ. ಈಗಿನ ಹೊಸ ಧೋರಣೆಯ ಪ್ರಕಾರ ಯಾವುದೇ ಒಂದು ತಾಲ್ಲೂಕಿನ ಕೆಲವು ಭಾಗಗಳನ್ನು ತೆಗೆದುಕೊಂಡು ಒಂದು ಬ್ಲಾಕ್ ಕೊಟ್ಟು ಮಿಕ್ಕ ಭಾಗವನ್ನು ಬಿಡುವುದಕ್ಕೆ ಬದಲಾಗಿ ಒಟ್ಟಾಗಿ ತೆಗೆದುಕೊಂಡು ಎರಡು ಬ್ಲಾಕ್ ಅಥವಾ ಹೆಚ್ಚಿಗೆ ಮಾಡಿಕೊಂಡು ಕೆಲಸ ಮಾಡಬೇಕೆಂದಿದೆ. ನಮಗೆ ಈ ಸಲ ಕಡಮೆ ಬ್ಲಾಕ್ ಬಂದದ್ದರಿಂದ ಹಾವೇರಿಗೆ ಎರಡು ಕೊಡುವುದಕ್ಕಾಗುತ್ತಿರಲಿಲ್ಲ. ಆದ್ದರಿಂದ ಕೊಡಲಿಲ್ಲ.

ಶ್ರೀಮತಿ ಲೀಲಾವತಿ ವೆಂಕಟೇಶ ಮಾಗಡಿ.—ಎರಡನೆಯ ಪಂಚವಾರ್ಷಿಕ ಯೋಜನೆಯ ಆಖೈರಿನೊಳಗೆ ಇಡಿಯ ರಾಜ್ಯದಲ್ಲಿ ಎಲ್ಲ ಹಳ್ಳಿಗಳಿಗೂ ಈ ಯೋಜನೆಯನ್ನು ಅನ್ವಯಿಸುತ್ತೇವೆಂದು ಹೇಳಿದ್ದೀರಿ. ನಿಶ್ಚಿತವಾಗಿ ಹಾವೇರಿ ತಾಲ್ಲೂಕನ್ನು ಯಾವಾಗ ತೆಗೆದುಕೊಳ್ಳುತ್ತೀರೆಂದು ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದನ್ನು ಹೇಳುವುದಕ್ಕಾಗುವುದಿಲ್ಲ.

House Rent Allowance of the Employees of Madras State transferred to Mysore.

Q.—1775. Sri Y. MANJAYA SHETTY (Baindur).—

Will the Government be pleased to state :—

(*a*) whether the N.G.O.'s of old Madras State now transferred to Mysore State were entitled to House Rent Allowances when they were in Madras State and if so at what rate;

(*b*) whether the said allowances are now continued ?

A.—Sri B. VAIKUNTA BALIGA (Minister for Labour and Legal Affairs) [On behalf of Sri T. MARIAPPA (Minister for Finance)].—

(*a*) Yes. The rates applicable are as per statement given below.

(*b*) Yes. This is treated as personal pay absorbable in future increments under the terms of protections of States Re-organisation Act.

Statement showing the House Rent Allowance— Mangalore Town (South Kanara District).

Pay Group		Sanctioned Rates per month
Less than Rs. 40 per month ...	...	5
More than 40 but not more than Rs. 80 per month	...	7
More than 80 but not more than Rs. 100 per month	...	9
More than 100 but not exceeding Rs. 150 per month	...	12

Government servants who are in receipt of pay exceeding Rs. 150 per month but not exceeding Rs. 162 per month will be allowed a house rent allowance which together with their pay will give them a total emolument of Rs. 162 per month.

In Taluk Headquarters (South Kanara District).

Government servants who are in receipt of pay not exceeding Rs. 150 per month—Rs. 3 per month

Government servants who are in receipt of pay exceeding Rs. 150 per month but not exceeding Rs. 153 will be allowed a house rent allowance which together with their pay will give them a total emolument of Rs. 153 per month.

Sri Y. MANJAYA SHETTY.—In answer to Part (*b*) of the questoin it has been stated that this is treated as personal pay absorbable in future increments. This course, Sir, would affect the annual increments of the N. G. O's. Will the Government consider the desirability of continuing the payment of house rent allowance as before ?

*Sri B. VAIKUNTA BALIGA.—The present allowance that is paid is definitely shown as absorbable in future increments. Therefore it is clear that the increments will not be given effect to till this is absorbed in addition to what they are drawing. The further suggestion implies certain extra payment and that will be considered by the Government.

Sri G. VENKATAI GOWDA.—I understand that the House Rent Allowance is added on to the pay, apart from the increment to which they are entitled to. Is it not so ?

Sri B. VAIKUNTA BALIGA.—It is seen from the reply that this House Rent allowance is paid in addition to the Salary on certain conditions, at certain levels and in certain proportion.

Sri G. VENKATAI GOWDA.—Will it not affect the provisions of the S. R. Act ?

Sri B. VAIKUNTA BALIGA.—Sir, the S. R. Act is not affected by this.

Sri G. VENKATAI GOWDA.—The House Rent Allowance is apart from their pay and increments. Now if the Hon'ble Minister is going to stop this,

does it not affect the provisions of the S. R. Act?

Sri B. VAIKUNTA BALIGA.—Sir, under the Act all the emoluments that they are entitled to have to be paid and no diminution is permitted and we cannot transgress the provisions of that Act. What is mentioned here is that the allowance paid is treated as personal pay absorbable in future increments.

ಶ್ರೀ ಎಚ್. ಜಿ. ನರಸಿಂಹೇ ಗೌಡ.—ಹಳೆಯ ಮೈಸೂರು N. G. O. ಗಳಿಗೂ ಮನೆ ಬಾಡಿಗೆ allowance ಅನ್ವಯಿಸುತ್ತಿದೆಯೇ?

Sri B. VAIKUNTA BALIGA.—This supplementary does not arise.

ಶ್ರೀ ಎಚ್. ಜಿ. ನರಸಿಂಹೇ ಗೌಡ.—ಈ ತೆರದ ವ್ಯತ್ಯಾಸವನ್ನು ಕೂಡಲೇ ತೆಗೆದುಹಾಕಿ ಏಕರೀತಿಯಲ್ಲಿ ಎಲ್ಲರಿಗೂ ನಿಗದಿ ಮಾಡುತ್ತೀರಾ?

Sri B. VAIKUNTA BALIGA.—Uniformity will be attempted in all respects and it is the policy enunciated in clear terms on more than one occasion.

Extent of Land under Date-grove in Sulekere Village.

Q.—1808. Sri KUNDUR RUDRAPPA (Channagiri).—

Will the Government be pleased to state :—

(*a*) the extent of land covered by date-grove belonging to Sulekere village behind Shanti Sagar (Sulekere), Channagiri Taluk;

(*b*) the extent of assessed land;

(*c*) the extent of land granted to ryots in Sulekere Village.

(*d*) the extent of land under unauthorised cultivation.

A.—Sri M. P. PATIL (Minister for Revenue).—

(*a*) 385 acres 36 guntas.

(*b*) 4,808 acres 13 guntas.

(*c*) 98 acres 25 guntas of land have been granted since 1955.

(*d*) 157 acres 33 guntas.

ಶ್ರೀ ಕುಂದೂರು ರುದ್ರಪ್ಪ.—ಉತ್ತರದಲ್ಲಿ 385 ಎಕರೆ 36 ಗುಂಟೆ ಎಂದಿದೆ. ಇದಿಷ್ಟೂ ಒಂದೇ ಸರ್ವೆ ನಂಬರಿನಲ್ಲಿದೆಯೇ?

ಶ್ರೀ ಎಂ. ಪಿ. ಪಾಟೀಲ್.—ಇದರ ಮಾಹಿತಿ ನನ್ನಲ್ಲಿಲ್ಲ. ಆದರೆ 385 ಎಕರೆಗಳಷ್ಟಿರುವುದರಿಂದ ಇದು ಒಂದೇ ಸರ್ವೆ ನಂಬರು ಆಗಿರಬೇಕಿಲ್ಲ.

ಶ್ರೀ ಕುಂದೂರು ರುದ್ರಪ್ಪ.—(ಸಿ) ಉತ್ತರದಲ್ಲಿರುವ 98 ಎಕರೆ 25 ಗುಂಟೆಗಳು ಮತ್ತು (ಡಿ) ಉತ್ತರದಲ್ಲಿರುವ 157 ಎಕರೆ 33 ಗುಂಟೆಗಳು, ಈ ಮೇಲೆ ಹೇಳಿದ 385 ಎಕರೆಯೊಳಗೆ ಬರುತ್ತದೆಯೇ?

ಶ್ರೀ ಎಂ. ಪಿ. ಪಾಟೀಲ್.—ಮಾನ್ಯ ಸದಸ್ಯರು ಕೇಳಿರುವುದು "(a) the extent of land covered by date-grove" ಅದು 385 ಎಕರೆ 36 ಗುಂಟೆ ಎಂದು ಉತ್ತರದಲ್ಲಿ ತಿಳಿಸಿದೆ. ಮತ್ತು (ಸಿ) ನಲ್ಲಿ "the extent of land granted to ryots" ಎಂದು ಕೇಳಿರುವುದಕ್ಕೆ ಉತ್ತರವಾಗಿ 98 ಎಕರೆ ಮತ್ತು 15 ಗುಂಟೆಗಳು ಎಂದು ತಿಳಿಸಿದೆ.

ಶ್ರೀ ಕುಂದೂರು ರುದ್ರಪ್ಪ.—ಇಲ್ಲಿ ಹೇಳಿರುವ 157 ಎಕರೆ 33 ಗುಂಟೆಯೊಳಗೆ ಎಷ್ಟು ಬಗರು ಹುಕುಂನಂತೆ ಸಾಗುವಳಿಯಾಗುತ್ತಿದೆ?

ಶ್ರೀ ಎಂ. ಪಿ. ಪಾಟೀಲ್.—ಅದರ ಬಗ್ಗೆ ಚೌಕಸಿ ನಡೆದಿದೆ.

ಅಧ್ಯಕ್ಷರು.—ಚೌಕಸಿ ಎಂದರೆ ತನಿಖೆ ನಡೆಯುತ್ತಿದೆ ಎಂದು.

ಶ್ರೀ ಕುಂದೂರು ರುದ್ರಪ್ಪ.—157 ಎಕರೆ 33 ಗುಂಟೆ ಎಂದಿರುವ ಜಮೀನಿನಲ್ಲಿ ಈಗ ಇಪ್ಪತ್ತು ವರ್ಷದಿಂದಲೂ ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದಾರೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಪಿ. ಪಾಟೀಲ್.—ಅದು ಗೊತ್ತಾಗಿಲ್ಲ.

ಶ್ರೀ ಕುಂದೂರು ರುದ್ರಪ್ಪ.—ಈ ರೀತಿಯಾಗಿ ಅನಧಿಕೃತವಾಗಿ ಸಾಗುವಳಿ ಮಾಡಲು ಬಿಡುತ್ತ ಹೋಗುವುದಕ್ಕಿಂತ ಇವರ ಮೇಲೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೇ?

ಶ್ರೀ ಎಂ. ಪಿ. ಪಾಟೀಲ್.—ಕ್ರಮ ತೆಗೆದುಕೊಳ್ಳುವ ವಿಚಾರ ಇದರಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಕುಂದೂರು ರುದ್ರಪ್ಪ.—ಇಲ್ಲಿರುವ 385 ಎಕರೆಯಲ್ಲಿ, ಉತ್ತರದಲ್ಲಿ ಹೇಳಿರುವಂತೆ 98 ಎಕರೆ ಮತ್ತು 157 ಎಕರೆ, ಇವುಗಳು ಜಾತಾ ಉಳಿಕೆಯಾದ ಸುಮಾರು 128 ಎಕರೆ ಜಮೀನನ್ನು ಯಾರಿಂದಲಾದರೂ ಅರ್ಜಿ ಬಂದರೆ ವಿಲೇವಾರಿ ಮಾಡುತ್ತೀರಾ?

ಶ್ರೀ ಎಂ. ಪಿ. ಪಾಟೀಲ್.—ಆ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.

ಶ್ರೀ ಕುಂದೂರು ರುದ್ರಪ್ಪ.—ಇಲ್ಲಿ ಉತ್ತರದಲ್ಲಿ ಹೇಳಿರುವಂತೆ 98 ಎಕರೆ ಚಿಲ್ಲರೆ ಮತ್ತು 157 ಎಕರೆ ಚಿಲ್ಲರೆ, ಇದು ಜಾತಾ ಉಳಿಕೆಯಾಗುವ ಸುಮಾರು 128 ಎಕರೆಗಳಷ್ಟು ಜಮೀನನ್ನು ಅರ್ಜಿಗಳು ಬಂದರೆ ಏಕೆ ಕೊಡಬಾರದು?

ಶ್ರೀ ಎಂ. ಪಿ. ಪಾಟೀಲ್.—ಈಗ 98 ಎಕರೆಯಷ್ಟು ಕೊಟ್ಟಿದೆ. 156 ಎಕರೆಯಷ್ಟು ಅನ್ ಆಥರೈಜ್ಡ್ ಕಲ್ಟಿವೇಷನ್ನಾಗಿದೆ. ಉಳಿಕೆ ಬರುವ ಜಮೀನನ್ನು ಕೊಡಬೇಕೋ ಅಥವಾ ಬೇಡವೋ ಈಗಲೇ ಹೇಳಲಾಗುವುದಿಲ್ಲ. ಕೊಡಲಿಕ್ಕೆ ಬರುವುದಿದ್ದರೆ ಕೊಡಬಹುದು.

ಶ್ರೀ ಕುಂದೂರು ರುದ್ರಪ್ಪ.—ಈ ರೀತಿ ಅನಧಿಕೃತವಾಗಿ ಸಾಗುವಳಿಯಾಗುತ್ತ ಇರುವ ಜಮೀನುಗಳನ್ನು ಸರಕಾರ ವಶಕ್ಕೆ ತೆಗೆದುಕೊಂಡು ಪೊಲಿಟಿಕಲ್ ಸಫರರ್ಸ್‌ಗಳಿಗೋ ಅಥವಾ ಇತರ ಬಡಜನಗಳಿಗೋ ಏಕೆ ಹಂಚಬಾರದು?

ಶ್ರೀ ಎಂ. ಪಿ. ಪಾಟೀಲ್.—ಜಮೀನುಗಳನ್ನು ಹೇಗೆ ಹಂಚಬೇಕು ಎಂಬುದರ ಬಗ್ಗೆ ರೂಲ್ಸುಗಳಿವೆ. ಆ ರೂಲ್ಸಿನ ಪ್ರಕಾರ ಸರಕಾರದವರು ಮಾಡಬೇಕು.

ಶ್ರೀ ಕುಂದೂರು ರುದ್ರಪ್ಪ.—ಬಗರು ಹುಕುಂ ಸಾಗುವಳಿ ಮಾಡುತ್ತಿದ್ದರೂ ಕೇಳುತ್ತಿಲ್ಲ. ಜಮೀನನ್ನು ಕೊಡಬೇಕೆಂದು ಕೇಳಿದರೆ ಈ ರೀತಿ ಹೇಳುತ್ತೀರಿ. ಇದರಿಂದ ಸರಕಾರಕ್ಕೆ ಆದಾಯ ಬರುತ್ತಿರುವಾಗ ಏಕೆ ಈ ಜಮೀನುಗಳನ್ನು ಕೊಡಬಾರದು ?

ಶ್ರೀ ಎಂ. ಪಿ. ಪಾಟೀಲ್.—ರೂಲ್ಸಿನ ಪ್ರಕಾರ ಸರಕಾರದವರು ಕ್ರಮ ಕೈಗೊಳ್ಳಬೇಕು.

ಶ್ರೀ ಡಿ. ಟಿ. ಸೀತಾರಾಮರಾವ್.—ಇಲ್ಲಿ 157 ಎಕರೆ 33 ಗುಂಟೆಯಷ್ಟು ಜಮೀನನ್ನು ಬಗರು ಹುಕುಂ ಸಾಗುವಳಿ ಮಾಡುತ್ತಿರುವವರು ಯಾವ ಜನಾಂಗಕ್ಕೆ ಸೇರಿದವರು ಮತ್ತು ಎಷ್ಟು ವರ್ಷಗಳಿಂದ ಮಾಡುತ್ತಿದ್ದಾರೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎಂ. ಪಿ. ಪಾಟೀಲ್.—ಇದರ ಬಗ್ಗೆ ತನಿಖೆ ನಡೆದಿದೆ. ಈಗಲೇ ಇದನ್ನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಡಿ ಟಿ. ಸೀತಾರಾಮರಾವ್.—ಇದು ಹಿಂದುಳಿದ ಪಂಗಡಕ್ಕೆ ಸೇರಿದವರಿಂದ ಸಾಗುವಳಿಯಾಗುತ್ತಿದೆ ಎನ್ನುವುದು ಸರಕಾರಕ್ಕೆ ಗೊತ್ತಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಯಾವ ಪಂಗಡಕ್ಕೆ ಸೇರಿದವರು ಎನ್ನುವುದು ಗೊತ್ತಿಲ್ಲ. ಅಂತೂ ಅನ್ ಆಥರೈಜ್ಡ್ ಆಗಿ ಸಾಗುವಳಿಯಾಗುತ್ತಿದೆ.

Sri H. V. KOUJALGI.—Whether the Government has recovered at least the assessment of the land under unauthorised cultivation ?

Sri M. P. PATIL.—In the old Mysore areas, there is a practice of levying what is called "Thakarar Thaktha", which is twice the assessment.

ಶ್ರೀ ಜಿ. ದುಗ್ಗಪ್ಪ.—ಈ ರೀತಿಯಾಗಿ ಅನ್ ಆಥರೈಜ್ಡ್ ಕಲ್ಟಿವೇಷನ್ನು ಎಂದು ಯಾರು ಯಾರು ಸಾಗುವಳಿ ಮಾಡುತ್ತಿದ್ದಾರೋ ಅವರ ಹೆಸರಿಗೇ ಖಾಯಂ ಆಗಿ ಮಾಡಬೇಕೆಂದು ಅರ್ಜಿ ಹಾಕಿಕೊಂಡಿದ್ದಾರೆಯೇ?

ಶ್ರೀ ಎಂ. ಪಿ. ಪಾಟೀಲ್.—ಕೆಲವು ಜನರು ಅರ್ಜಿ ಹಾಕಿರಬಹುದು.

ಶ್ರೀ ಜಿ ದುಗ್ಗಪ್ಪ.—ಅದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ?

ಶ್ರೀ ಎಂ. ಪಿ. ಪಾಟೀಲ್.—ಇದರ ಬಗ್ಗೆ ಹಳೆಯ ಮೈಸೂರಿನಲ್ಲಿ ವಿಚಾರ ಮಾಡಿ ಒಂದು ಸರ್ಕ್ಯುಲರನ್ನು ಕೂಡ ಹೊರಡಿಸಿದ್ದಾರೆ.

Sri J. B. MALLARADHYA.—Are these lands applied for by any political sufferers or are these lands reserved for political sufferers ?

Sri M. P. PATIL.-Political categories are of many categories.

Sri J. B. MALLARADHYA.—I am speaking of the balance of land after deducting the 98 acres 25 guntas plus the 157 acres under unauthorised cultivation ?

Sri M. P. PATIL.—I am not aware of that.

Sri J. B. MALLARADHYA.—Were there no applications from political sufferers and are not any of these lands reserved for political sufferers ?

Sri M. P. PATIL.—I am not aware of any application from political sufferers in this area.

Sri J. B. MALLARADHYA.—Is this block of land reserved for political sufferers ?

Sri M. P. PATIL.—The original question pertains to the extent of land disposed of and the extent of land under unauthorised cultivation.

ಶ್ರೀ ಎನ್. ಜಿ. ನರಸಿಂಹೇಗೌಡ.—ಪೊಲಿಟಿಕಲ್ ಸಫರರ್ಸ್ ಎಂದರೆ ಬರಿಯ ಕಾಂಗ್ರೆಸ್ಸಿನವರೇ ಅಥವಾ ಇನ್ನಾರಾದರೂ ಸೇರಿದ್ದಾರೆಯೋ ?

ಶ್ರೀ ಎಂ. ಪಿ. ಪಾಟೀಲ್.—ಇಲ್ಲಿ ಲ್ಯಾಂಡ್ ರೆವೆನ್ಯೂ ಕೋಡು ಎಂದಿದೆ. ಅದರಲ್ಲಿರುವ ರೂಲ್ಸಿನ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುತ್ತದೆ. ತಾವು ಆ ರೂಲ್ಸನ್ನು ನೋಡಬಹುದು.

ಶ್ರೀ ಎನ್. ಜಿ. ನರಸಿಂಹೇಗೌಡ.—ರೂಲ್ಸನ್ನು ತಾವೇ ಮಂತ್ರಿಗಳಾಗಿರುವುದರಿಂದ ಹೇಳಬಹುದಲ್ಲ ?

ಅಧ್ಯಕ್ಷರು.—ರೂಲ್ಸುಗಳ ಬಗ್ಗೆ ಇಲ್ಲಿ ಮಾತನಾಡಬಾರದು. ರೂಲ್ಸುಗಳನ್ನು ಜಾರಿಗೆ ತರುವುದರಲ್ಲಿ ಏನಾದರೂ ತಪ್ಪಾಗಿದ್ದರೆ ಅಂತಹ ವಿಚಾರಗಳನ್ನು ಕೇಳಬಹುದು.

ಶ್ರೀ ಕುಂದೂರು ರುದ್ರಪ್ಪ.—ಚನ್ನಗಿರಿಯಲ್ಲಿರುವ ಒಬ್ಬ ಪಿ. ಎಸ್. ಪಿ. ಪಾರ್ಟಿಯವರಿಗೆ ಮತ್ತು ಶಿವಮೊಗ್ಗದಲ್ಲಿರುವ ಪಿ.ಎಸ್.ಪಿ. ಪಾರ್ಟಿಗೆ ಸೇರಿದವರಿಗೆ ನಾಲ್ಕು ನಾಲ್ಕು ಎಕರೆಗಳಂತೆ ಜಮೀನನ್ನು ಕೊಟ್ಟಿದ್ದಾರೆ ಎಂದು ನಾನು ಹೇಳುತ್ತೇನೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಪಿ.ಎಸ್.ಪಿ. ಪಾರ್ಟಿಗೆ ಕೊಟ್ಟಿರುವುದು, ಪ್ರಗನಟ್ಟೆಯಾಗಿ ಏನಾದರೂ ಕೊಟ್ಟಿದ್ದಾರೆಯೇ ?

(No answer)

ಶ್ರೀ ಕುಂದೂರು ರುದ್ರಪ್ಪ.—ಈ ಜಮೀನನ್ನು ಪಿ.ಎಸ್.ಪಿ. ಪಾರ್ಟಿಗೆ ರೇರಿದವರಿಗೇ ಕೊಟ್ಟಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

(No answer)

ಶ್ರೀ ಎನ್. ಜಿ. ನರಸಿಂಹೇಗೌಡ.—ಶೇಕಡ 95 ಭಾಗ ಈ ರೀತಿ ಜಮೀನಿನ ವಿಲೇವಾರಿಯಾಗಿರುವುದು ಕಾಂಗ್ರೆಸ್ಸಿನ ಪಕ್ಷಕ್ಕೆ ಎನ್ನುವುದು ಗೊತ್ತಿದೆಯೇ ?

ಅಧ್ಯಕ್ಷರು.—ಆ ಪ್ರಶ್ನೆ ಮೂಲಪ್ರಶ್ನೆಯಿಂದ ಉದ್ಭವಿಸುವುದಿಲ್ಲ.

Promotion of Bench Clerks to the Posts of Magistrates.

Q.—1835. Sri F. H. MOHSIN (Hubli City).—

Will the Government be pleased to state :—

(*a*) whether any of the Bench Clerks working in the offices of the Magistrates have been promoted to the post of Magistrates in the old Mysore area, since the date of integration ;

(*b*) if so, the number of them, together with their names;

(*c*) whether they have been adopting the same policy in respect of employees of the integrated areas?

A.—Sri C. M. POONACHA (Minister for Home Affairs and Industries).—

(*a*) No.

(*b*) & (*c*) Does not arise in view of the reply to (*a*).

Sri F. H. MOHSIN.—Are there any uniform rules applicable to the whole of the State regarding recruitment to the posts of Magistrates?

*Sri C. M. POONACHA.—This is with regard to the recruitment of judicial officers. So far as recruitment of Munsiff Magistrates is concerned, we have what are called the Mysore Munsiff Temporary Recruitment Rules in force and as per those Rules some recruitments have been made to some vacancies arising in the Munsiff Magistrates' posts.

Sri F. H. MOHSIN.—Have those appointments been made from the ministerial staff?

Sri C. M. POONACHA.—Of course, some of the appointments have been made from the ministerial staff that was working in the various judicial courts.

Sri F. H. MOHSIN.—How many of them come from old Mysore and how many from the integrating areas?

Sri C. M. POONACHA.—(Showing a notification) Here is the first notification that was issued in this regard. Out of 8 appointments made, 5 are from old Mysore, one is from Udipi, one is from Dharwar and one is from Raichur.

Sri F. H. MOHSIN.—Are there any representations from the Bar Associations of the Bombay Area not to recruit persons from the ministerial staff for the posts of Munsiff Magistrates?

Sri C. M. POONACHA.—No doubt, some representations were received, but these recruitments were made according to the rules which are now prevailing.

Sri C. S. HULKOTI.—Do the old Mysore Rules apply to the Bombay Karnatak Area?

Sri C. M. POONACHA.—These temporary rules have been made applicable to the new Mysore State.

Sri F. H. MOHSIN.—According to the rules, are the Police Prosecutors entitled to be appointed as Munsiff Magistrates?

Sri C. M. POONACHA.—If they are graduates in law with a certain amount of service, I think their cases might have been considered.

Sri F. H. MOHSIN.—Has any such appointment been made from amongst the Police Prosecutors?

Sri C. M. POONACHA.—I do not have that information with me now.

Sri C. K. RAJAIAH SETTY.—The question is about the promotion of Bench Clerks to the posts of Magistrates. Out of the 8 who have been appointed as Magistrates, are there any Bench Clerks?

Sri C. M. POONACHA.—One was actually a Bench Clerk in the High Court of Mysore at Bangalore.

ಶ್ರೀ ಎಂ. ಹನುಮಂತಯ್ಯ.—ಈ ಎಂಟುಜನರ ಪೈಕಿ ಹರಿಜನರು ಯಾರಾದರೂ ಇದ್ದಾರೆಯೇ?

ಶ್ರೀ ಸಿ. ಎಂ. ಪೂಣಚ್ಚ.—ನನ್ನಲ್ಲಿ ನೋಟಿಫಿಕೇಷನ್ ಗಳಿವೆ. ಅದರಲ್ಲಿ ಯಾರು ಯಾವಪಂಗಡಕ್ಕೆ ಸೇರಿದವರೆನ್ನುವುದು ತಿಳಿಯ ಲವುದಿಲ್ಲವಾದ್ದರಿಂದ ಹೇಳಲಿಕ್ಕೆ ಬರುವುದಿಲ್ಲ.

Sri G. VENKATAI GOWDA.—Is there any notification issued by a competent authority as per the provisions of the S.R. Act making the old Mysore Rules applicable to the integrating areas?

Sri C. M. POONACHA.—Yes. After the date of integration, the Government have powers to extend the rules to the entire area by a notification and such things have happened.

ಶ್ರೀ ಎಂ. ಹನುಮಂತಯ್ಯ.—ಈ ಎಂಟುಜನರ ಪೈಕಿ ಹರಿಜನರು ಯಾರೂ ಇಲ್ಲವೆಂದರೆ ಒಪ್ಪಿಕೊಳ್ಳುತ್ತೀರಾ?

ಶ್ರೀ ಸಿ. ಎಂ. ಪೂಣಚ್ಚ.—ಆ ವಿಷಯ ಮಾನ್ಯ ಸದಸ್ಯರಿಗೆ ತಿಳಿದಿರಬಹುದೋ ಏನೋ. ನಾನು ಒಂದು ವಿಷಯವನ್ನು ಹೇಳುತ್ತೇನೆ. ಒಟ್ಟು 19 ಜನರನ್ನು ಮುನಸೀಫ ನೇಮಕಮಾಡಿದ್ದೇವೆ. ಅದರಲ್ಲಿ ಹರಿಜನರು ಯಾರು ಇದ್ದಾರೆ ಎನ್ನುವ ವಿಷಯ ಗೊತ್ತಾಗುವುದಿಲ್ಲ.

ಶ್ರೀ ಎಂ. ಹನುಮಂತಯ್ಯ.—ಹರಿಜನರು ಯಾರೂ ಇವರಪೈಕಿ ಇಲ್ಲದೆ ಇದ್ದರೆ ಆ ಬಗ್ಗೆ ಪರಿಶೀಲನೆ ಮಾಡುತ್ತೀರಾ?

ಶ್ರೀ ಸಿ. ಎಂ. ಪೂಣಚ್ಚ.—ಪರಿಶೀಲನೆ ಮಾಡಿ ನೋಡುತ್ತೇನೆ.

Sri G. B. SHANKAR RAO.—May I know whether these 8 appointments were fresh appointments or promotions?

Sri C. M. POONACHA.—They were selected from the ministerial staff for the vacancies in accordance with the rules now prevailing.

Sri G. B. SHANKAR RAO.—Had any outsider other than these clerks applied for these posts ?

Sri C. M. POONACHA.—Actually, the recommendation to appoint these persons came from the High Court and I am not aware of the other details as to how many applied and who were interviewed.

Sri F. H. MOHSIN.—After the representations were made to the Government, is that practice of recruitment still continuing or suspended or stopped ?

Sri C. M. POONACHA.—The temporary rules will be in force till about the 30th June but in the meantime final rules governing recruitment of these officers will be issued.

Industrial Training Centres in Dharwar District.

Q.—1907. **Smt. YELLAVVA SAMBRANI** (Ranibennur).—

Will the Government be pleased to state :—

the names of places in Dharwar District where Industrial Training Centres have been started for the benefit of people of backward classes ?

A.—**Sri B. VAIKUNTA BALIGA** (Minister for Labour and Legal Affairs).—

There is one Industrial Training Centre the B.V.B. College of Engineering and Technology at Hubli. Twelve and a half per cent of the seats are reserved for the Scheduled castes and five per cent for Scheduled tribes.

"The mood and temper of the public with regard to the treatment of crime and criminals is one of the most unfailing tests of the civilisation of any country. A calm, dispassionate recognition of the rights of the accused and even of the convicted criminal against the State; a constant heart-searching by all charged with the duty of punishment; a desire and eagerness to rehabilitate in the world of industry those who have paid their due in the hard coinage of punishment; tireless efforts towards the discovery of curative and regenerative processes; unfailing faith that there is a treasure if you can duly find it in the heart of every man—these are the symbols which in the treatment of crime and criminals, mark and measure the stored up strength of a nation and are sign and proof of the living virtue in it." He said this as far back as 1927 and it is included in one of his Memoirs. I would, therefore, like to invite the attention of the Hon'ble Minister to the importance of prison and jail reforms.

Talking about prison administration, from the Financial Memorandum on page 38, I see that so far as jail manufactures are concerned the estimated receipts are Rs. 3·77 lakhs and the estimated expenditure is Rs. 4·60 lakhs. This means that there would be a loss of about Rs. 83,000 per year. This is something which is staggering. I do not think anybody who is charged with the responsibility of running prisons in Mysore could ever be complimented for the performance. I may here quote the instance of the Coimbatore Jail where it is treated as a self-supporting institution or commercial department. It supplies khakhi to the entire police force in the State, if my information is correct, for uniforms and other purposes. I should like to know if any technical advice has been taken in regard to the selection of industries for the Mysore jail and some of the sub-jails. Instead of dabbling in too many industries, I think it is much better if we concentrate on some remunerative industries. The textile industry is one which is admirably suited for jails. This is an industry which we would do well to concentrate on, in our jails. I may also mention a few others like the printing industry. I understand that this industry is there in the Bangalore Central Jail, but its relative importance in the work of that jail is a minor one. It is doing only a few forms for the Director of Printing and Stationery. There is scope for

expanding this work which is a very useful one. There are quite a large number of other industries which lend themselves admirably well to jail manufacture, like, making boots and shoes, school and office furniture, sealing wax, manufacture and repair of tents, etc. The Government of Mysore find it impossible to give people even a few tents. There are no tents available with us. Tent manufacture is one of the most useful jail industries.

Sri VEERENDRA PATIL.—Tents are manufactured in the Central Jail at Gulbarga.

Sri J. B. MALLARADHYA.—I am very happy to hear that. For my scout work I wanted 100 tents. As they could not be available here, I had to send an indent all the way to Calcutta and pay transport charges to the tune of Rs. 1,000. I had to negotiate with the Defence Department and then get some tents for our training camps after paying hundreds of rupees.

The printing industry as a jail industry has succeeded wonderfully well in Yeravada and Madras Jails and I do not know why we also should not take to that industry on a large scale in our jails.

In regard to political prisoners, my friend Sri Srinivas Shetty has already mentioned that those who were detained in connection with the Socialist Satyagraha were not being treated well. I wish that report is incorrect. I want to say that a lot of consideration should be shown to these political prisoners. That is legitimately due to them because they are only trying to do certain things in pursuance of a particular cause which they hold as sacred. There is no moral turpitude attached to them. What I feel is that some of the ordinary amenities which they claim are being denied to them today.

Sri VEERENDRA PATIL.—More amenities than those prescribed under the rules to A Class prisoners are being given to them.

Sri J. B. MALLARADHYA.—Now that Hon'ble the Deputy Minister is talking of rules, I wish to say that they frame a very definite set of rules. At present everything depends upon the whims and fancies of the authorities. When he says that they are treated more than the A Class prisoners, I cannot exactly understand what it means. If what he says is a fact, I cannot understand why Sri Gopal Gowda, the Chairman of the Socialist Party had to resort to fast at Shimoga. I am mentioning this because a measure of courtesy is due to an important political party when it is doing certain things in furtherance of certain principles which it holds sacred. You may not agree with them, but there should be a human approach to the matter and it is only in that light that I say that every facility should be given to the Socialist Satyagrahis.

Then, I would like to mention that a system called the 'earning system' may be brought into force in our jails. At present most of the convicts do not have anything to depend on for their livelihood when they come out of jail after 10 or 12 years. If this earning system is introduced in our jails it will provide something on which they could depend after they come out of jail. I would like the earning scheme to be introduced in the Central Jail to begin with. You put the prisoners on certain industries and give them wages. You may demand 8 hours work from them. For doing overtime work you may give them at the rate of 1 or 2 annas a day. The usual wage that they get may be credited to their account. The small overtime wage that they would be getting would be sufficient for their beedis or cigarettes. You put them on regular industries and give them proper wages. After recovering the cost of production, you include a certain percentage to be credited to them. In this way when the prisoners leave the jail after serving their term of imprisonment you will be providing them with a substantial sum to fall back on. With that money and with the training received, they can take to some avocation and earn their livelihood. Such earning system for prisoners is there in force in most progressive countries of the world and I wish such a scheme is brought into force in the Mysore State also. Sir, with regard to this Administration Report, I should like that, in future, the details in regard to these certified schools and

(SRI J. B. MALLARADHYA)

Borstal schools are mentioned in the Administration Report of the Prisons Department. There is a lot of complaint of lack of adequate educational facilities within the jail. For a big Central Jail with a population of 6,300 and odd you say there are two adult literacy classes and I think it is grossly inadequate. The official report says that there are two adult literacy educational classes one for Kannada and another for Urdu continued in the Central Jail in Bangalore in addition to the Borstal schools. Borstal school is quite different. If you cannot provide adequate educational facilities for the people who are imprisoned, what exactly is it that you do as a civilised Government? I am astonished at the callousness that is displayed in the administration of prisons in Mysore State. May be that the ruling party and the treasury benches think that it is a minor department. They should not.

Regarding the Board of Visitors to these Jails, I was surprised to see that there is no mention as to the work done by the Board of Visitors to the Central Jail. In fact they form an important link between the convict, the Government and the officers who administer the jails. And the Administration Report does not contain a word about what work was done by the Board of Visitors, whether they made any suggestions and whether the administration gave effect to those suggestions and if so with what effect.

Sri VEERENDRA PATIL.—What is the year of the Administration Report the Hon'ble Member refers to? Is it 1957?

Sri J. B. MALLARADHYA.—For the period ending December 31, 1956. I have also looked at the reports of previous years. Even there nothing is said about the administration of the Prison Department. In future when they refer to Prison Administration, a few more details should be given and they must consider this as important as any other major department. It is not merely from the economic development that the progress of the State is judged, but with reference to various reforms also. In fact, I consider that it is an essential social service that you do in the Prisons Department. The more attention you give here, the greater the name of the State will be. I am therefore not prepared to support the Demands either with regard to the Administration of Justice or with regard to the Administration of Prisons.

Sri B. VAIKUNTA BALIGA.—The Hon'ble Member's laughter and smile shows that he is showing his support to the Demands.

Sri J. B. MALLARADHYA.—I wish to remind the Minister of the statement usually made that I may smile and smile and yet be a villain. (*Laughter*).

*ಶ್ರೀ ಎಫ್. ಎಚ್. ಮೊಹಸಿನ್ (ಹುಬ್ಬಳ್ಳಿಸಿಟಿ).—ಮಾನ್ಯ ಸಭಾಪತಿಗಳೇ, ಈ ಡಿಮ್ಯಾಂಡುಗಳನ್ನು ಅನುಮೋದಿಸಿ ಕೆಲವು ಸೂಚನೆಗಳನ್ನು ಮಾಡಬಯಸುತ್ತೇನೆ. ಶ್ರೀಮಾನ್ ಮಲ್ಲಾರಾಧ್ಯರು ಹೈಕೋರ್ಟ್ ನ್ಯಾಯಾಧೀಶರನ್ನು ನೇಮಕ ಮಾಡುವಾಗ್ಗೆ ಒಳ್ಳೆಯ ಯೋಗ್ಯರಾದವರನ್ನು ಮತ್ತು ಸಾಮರ್ಥ್ಯವುಳ್ಳವರನ್ನು ನೇಮಕಮಾಡತಕ್ಕದ್ದು ಎಂದು ಸೂಚನೆ ಮಾಡಿದ್ದನ್ನು ನಾನು ಸಮರ್ಥಿಸುತ್ತೇನೆ. ಅದು ಬಹಳ ಒಳ್ಳೆಯ ಮತ್ತು ಸೂಕ್ತವಾದ ಸಲಹೆ. ನಮ್ಮ ಕೇಂದ್ರ ಸರ್ಕಾರದವರು ಹೈಕೋರ್ಟಿನ ನ್ಯಾಯಾಧೀಶರನ್ನು ನೇಮಕ ಮಾಡುವಾಗ್ಗೆ ಇಂಟರ್‌ಸ್ಟೇಟ್ ಲಿಸ್ಟ್ ಒಂದನ್ನು ತಯಾರಿಸಬೇಕೆಂದು ಮೊನ್ನೆ ನಿರ್ಧಾರ ಮಾಡಿದ್ದಾರೆಂದು ಗೊತ್ತಾಗಿದೆ. ಅದು ನಿಜವಾಗಿದ್ದರೆ ನಮ್ಮ ರಾಷ್ಟ್ರಕ್ಕೆ ಹಿತಕಾರಿಯಾಗಬಹುದು; ನಮ್ಮ ಸಂಸ್ಥಾನಕ್ಕೇ ಅಲ್ಲ, ಇಡಿಯ ದೇಶಕ್ಕೆಯೇ ಹಿತಕಾರಿಯಾಗಬಹುದು, ಒಳ್ಳೆಯ ನ್ಯಾಯದಾನ ಸಿಕ್ಕಬಹುದು ಎಂದು ಭಾವಿಸುತ್ತೇನೆ. ಶ್ರೀ ಮಲ್ಲಾರಾಧ್ಯರು ಹೈ ಕೋರ್ಟಿನ ನ್ಯಾಯಾಧೀಶರನ್ನು ನೇಮಕ ಮಾಡುವಾಗ ರಾಜಕೀಯ ಕಾರಣದಮೇಲೆ ಪಕ್ಷಪಾತ ಮಾಡಿದ್ದಾರೆಂದು ಅಭಿಪ್ರಾಯ ಪಟ್ಟಿದ್ದಾರೆ. ಅದು ಹಿಂದಿನ ರಾಜ್ಯದ ಮಾತಾಗಿರಬಹುದು. ನವ ಮೈಸೂರು ರಾಜ್ಯ ಉದಯವಾದ ಅನಂತರ ಅಂಥ ಉದಾಹರಣೆಯನ್ನು ಅವರು ಉಲ್ಲೇಖಿಸಿಲ್ಲ. ಅಂಥ ಘಟನೆಗೂ ನಮಗೂ ಸಂಬಂಧವಿಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಾನು ಹೆಸರು ಹೇಳುವುದಕ್ಕೆ ಇಷ್ಟಪಡಲಿಲ್ಲ.

ಶ್ರೀ ಎಫ್. ಎಚ್. ಮೊಹಸಿನ್.—ಈಗಲೂ ಹಾಗೆ ನಡೆಯುತ್ತಿದೆಯೆಂಬುದನ್ನು ನಾನು ಒಪ್ಪುವುದಿಲ್ಲ. ಅದೇನೇ ಇರಲಿ, ಈ ನೇಮಕ ಮಾಡುವಾಗ ಕೇಂದ್ರ ಸರ್ಕಾರ ತಮ್ಮ ಅಧಿಕಾರ ಇಟ್ಟುಕೊಂಡಿದ್ದಾರೆ; ಅದನ್ನಾದರೂ ಶ್ರೀ ಮಲ್ಲಾರಾಧ್ಯರು ಗಮನಿಸಬೇಕಾಗಿದೆ. ಹೈ ಕೋರ್ಟಿನ ನ್ಯಾಯಾಧೀಶರನ್ನು ನೇಮಕ ಮಾಡುವುದರ ಬಗ್ಗೆ ರಾಜ್ಯ ಸರ್ಕಾರಕ್ಕೆ ಹತೋಟಿಯಿಲ್ಲ; ಕೇವಲ ಶಿಫಾರಸ್ಸು ಮಾಡುವುದಕ್ಕೆ ಮಾತ್ರ ರಾಜ್ಯ ಸರ್ಕಾರಕ್ಕೆ ಅವಕಾಶವಿದೆ; ನೇಮಕ ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕಿದೆ. ಇದನ್ನು ಮನಸ್ಸಿನಲ್ಲಿಡಬೇಕು. ಈ ನೇಮಕ ಮಾಡುವಾಗಲೂ

ಕೂಡ ಸರ್ಕಾರದವರು ವಿಶೇಷ ಜಾಗ್ರತಿಯನ್ನು ವಹಿಸಿದ್ದಾರೆ, ಸರಿಯಾದವರನ್ನು ಆರಿಸಿಕೊಂಡಿದ್ದಾರೆ. ಇದನ್ನು ನಾವು ಲಕ್ಷ್ಯದಲ್ಲಿಡಲೇಬೇಕು. ಜನರಿಗೆ ನ್ಯಾಯದಾನ ಸಿಕ್ಕಬೇಕಾದರೆ ಯೋಗ್ಯರಾದವರನ್ನು ಹುಡುಕಿ ದೇಶದ ಹಿತದೃಷ್ಟಿಯಿಂದ ನೇಮಕಮಾಡುವುದು ಸಹಜ. ಆ ಪ್ರಕಾರ ಮಾಡುತ್ತಿದ್ದಾರೆ. ಹೆಚ್ಚು ಯೋಗ್ಯರಾದವರನ್ನು ನೌಕರಿಗೆ ತೆಗೆದುಕೊಳ್ಳುವಾಗ ಅವರಿಗೆ ಯೋಗ್ಯರೀತಿಯಲ್ಲಿ ಪಗಾರ ಅಂದರೆ ವೇತನ ದೊರೆಯುವುದು ಅವಶ್ಯಕ. ಮಾನ್ಯ ಮಂತ್ರಿಗಳಾದ ಶ್ರೀ ಬಾಳಿಗ ಅವರು ಒಳ್ಳೆಯ ಸಮರ್ಥರಾದ ವಕೀಲರಾಗಿದ್ದರೆಂದು ನಾನು ಕೇಳಿದ್ದೇನೆ. ಅವರಿಗೆ ಆಗ ಈಗ ಸಿಕ್ಕುವುದಕ್ಕಿಂತ ಹೆಚ್ಚು ಉತ್ಪತ್ತಿ ಸಿಕ್ಕುತ್ತಿತ್ತೆಂದು ಗೊತ್ತಾಗಿದೆ. ಅಂಥ ಜನರು ಕೇವಲ ಅಲ್ಪ ಹಣಕ್ಕೆ ಹೈ ಕೋರ್ಟ್ ಜಡ್ಜ್ ಆಗುವುದಕ್ಕೆ ಒಪ್ಪುತ್ತಾರೆಯೇ? ಅಂಥ ಯೋಗ್ಯರಾರೂ ಕಡಮೆ ಸಂಬಳವಿದ್ದರೆ ನ್ಯಾಯಾಧೀಶರಾಗಲು ಒಪ್ಪುವ ಸಂಭವವಿಲ್ಲ. ಅಂಥ ಸಮರ್ಥರನ್ನು ನ್ಯಾಯಾಧೀಶರಾಗಿ ನೇಮಿಸಿದರೆ ಸರಿಯಾದ ನ್ಯಾಯ ಸಿಕ್ಕುತ್ತದೆ. ಅಂಥವರ ಸಲುವಾಗಿ ಯೋಗ್ಯವೇತನವನ್ನು ಅವರನ್ನಾಕರ್ಷಿಸಲು ಕೊಡಲೇಬೇಕು. ಈ ನ್ಯಾಯಾಧೀಶರ ವೇತನ ಎಲ್ಲಾ ಸರ್ಕಾರಿ ನೌಕರರಿಗಿಂತ ಹೆಚ್ಚಾಗಿರಬೇಕೆಂಬುದು ನನ್ನ ಅಭಿಪ್ರಾಯ.

ಇದರಂತೆಯೇ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜಸ್ ನೇಮಕ ಮಾಡುವುದರ ಸಲುವಾಗಿ ಶ್ರೀ ಮಲ್ಲಾರಾಧ್ಯರು ಕೆಲವು ಸೂಚನೆಗಳನ್ನು ಕೊಟ್ಟರು. ಅವಶ್ಯವಾದರೆ ಸರ್ಕಾರಿ ನೌಕರರಿಗೆ ಮುನ್ಸೀಫರಾಗಿ ಬಡ್ತಿ ಕೊಡಲು ಕೆಲವೊಂದು ಸ್ಥಾನಗಳನ್ನು ರಿಸರ್ವ್ ಮಾಡಬೇಕೆಂದು ಸೂಚನೆ ಮಾಡಿದರು. ಹಾಗೆ ಮುನ್ಸೀಫ್ ಕೆಲಸಕ್ಕೆ ಬಡ್ತಿ ಕೊಟ್ಟು ಅವರನ್ನು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್‌ಗಳಾಗಿ ಮಾಡುವುದರಿಂದ ಬಹಳ ಅನರ್ಥವಾಗುತ್ತದೆ. ನನಗೆ ಗೊತ್ತಿರುವ ಹಾಗೆ ವೇತನಗಳ ಪ್ರಮಾಣ ಅಷ್ಟು ಸರಿಯಾಗಿಲ್ಲ. ಆದಕಾರಣ ಒಳ್ಳೆಯ ಪ್ರಾಕ್ಟೀಸ್ ಇರುವ ವಕೀಲರು ನ್ಯಾಯಧೀಶರ ಸ್ಥಾನಗಳ ಕಡೆ ಲಕ್ಷ್ಯ ಕೊಡುವುದಿಲ್ಲ. ನಾನು ವಿಮರ್ಶಾತ್ಮಕ ದೃಷ್ಟಿಯಿಂದ ಹೇಳುವುದಾದರೆ ಹೆಚ್ಚುಮಂದಿ ಮುನ್ಸೀಫರು ಮತ್ತು ಮ್ಯಾಜಿಸ್ಟ್ರೇಟರುಗಳು ಒಳ್ಳೆಯ ವಕೀಲರಲ್ಲವೆಂದು ಹೇಳಬಹುದು, ಕಡಮೆ ವೇತನವಿರುವುದೇ ಇದಕ್ಕೆ ಕಾರಣ. ಇದರಿಂದ ಒಳ್ಳೆಯ ವಕೀಲರೂ, ನಿಷ್ಪಕ್ಷಪಾತವಾಗಿ ಕೆಲಸ ಮಾಡುವವರೂ, ದಕ್ಷರೂ ಮುಂದೆ ಬರುತ್ತಿಲ್ಲ. ಅಂಥವರನ್ನು ಆಕರ್ಷಿಸಲು ಸರಿಯಾದ ವೇತನ ನಿಗದಿಮಾಡಿ ಡಿಸ್ಟ್ರಿಕ್ಟ್ ಮತ್ತು ಸೇಷನ್ಸ್ ಜಡ್ಜಸ್ ಇಂಥ ಹುದ್ದೆಗಳಿಗೆ ವಕೀಲರು ಬರಲು ಅವಕಾಶ ಮಾಡಬೇಕು. ಎಲ್ಲಾ ಸ್ಥಾನಗಳನ್ನೂ ವಕೀಲರಿಗೆ ಕೊಡಬೇಕೆಂದು ನಾನು ಹೇಳುತ್ತಿಲ್ಲ. ಶೇಕಡ 50 ಆದರೂ ವಕೀಲರಲ್ಲಿ ಯೋಗ್ಯರಾದವರು ಬರಲು ಮೀಸಲಾಗಿಡಬೇಕೆಂಬುದು ನನ್ನ ಅಭಿಪ್ರಾಯ.

ಇನ್ನು ಮ್ಯಾಜಿಸ್ಟ್ರೇಟರ ಸಲುವಾಗಿ ಒಂದು ಸಲಹೆ ನಮ್ಮಲ್ಲಿ ಮುಂಬಯಿ ಕರ್ಣಾಟಕದಲ್ಲಿ ಈಗಲೂ ಕೆಲವು ಮಂದಿ ರೆವೆನ್ಯೂ ಮ್ಯಾಜಿಸ್ಟ್ರೇಟರುಗಳಿದ್ದಾರೆ. ರೆವೆನ್ಯೂ ಖಾತೆಯಿಂದ ಬಂದಿರುವವರು ಮ್ಯಾಜಿಸ್ಟ್ರೇಟರಾಗಿರಬಾರದು. ಅವರಿಂದ ನ್ಯಾಯ ದೊರೆಯುವುದಿಲ್ಲ. ಕಾಯಿದೆಗಳಲ್ಲಿ ನುರಿತವರು ಬೇಕು, ಕಾಯಿದೆಗಳನ್ನು ಚೆನ್ನಾಗಿ ಅರಿತು ಅಳವಡಿಸಿಕೊಂಡಿರುವವರು ಬೇಕು. ಅಂಥವರು ರೆವೆನ್ಯೂ ಖಾತೆಯಲ್ಲಿ ಸಿಕ್ಕುವುದು ವಿರಳ. ಕೆಲ ಕೆಲವು ದಕ್ಷರಾದ ಜನರಿರಬಹುದು. ಸಾಮಾನ್ಯವಾಗಿ ರೆವೆನ್ಯೂ ಖಾತೆಯಲ್ಲಿರುವವರಿಗೆ ಜಡ್ಜ್‌ಮೆಂಟ್ ಬರೆಯಲು ಸರಿಯಾಗಿ ಬರುವುದಿಲ್ಲ. ಕಾಯಿದೆ ಪ್ರಾಕ್ಟೀಸ್ ಮಾಡುವವರು, ವಕೀಲರು ಮ್ಯಾಜಿಸ್ಟ್ರೇಟರಾದರೆ ಯೋಗ್ಯ ತೀರ್ಮಾನ ಕೊಡಬಲ್ಲರು. ಅವರು ಕೊಡುವಂತೆ ತೀರ್ಮಾನವನ್ನು ರೆವೆನ್ಯೂ ಖಾತೆಯಿಂದ ಬಂದವರು ಕೊಡಲಾರರು. ಆದಕಾರಣ ಆದಷ್ಟು ಜಾಗ್ರತೆ ರೆವೆನ್ಯೂ ಖಾತೆಯ ಜನರನ್ನು ಆ ಖಾತೆಗೇ ವರ್ಗಾಯಿಸಿ ವಕೀಲಿ ವೃತ್ತಿಯವರನ್ನು ಮುನ್ಸೀಫರನ್ನಾಗಿ ಮಾಡಬೇಕೆಂದು ಸೂಚಿಸುತ್ತೇನೆ.

ಶ್ರೀ ಜಿ. ಬಿ. ಶಂಕರರಾವ್ (ಹಿರೇಕೆರೂರು).—ಎಗ್ಸಿಕ್ಯುಟಿವ್ ಮ್ಯಾಜಿಸ್ಟ್ರೇಟರ ವಿಚಾರ ಹೇಳುತ್ತಿದ್ದೀರಾ?

Sri F. H. MOHSIN.—There are some magistrates who have been lent from the Revenue Department to the Judiciary. I am speaking with regard to them. ಮುಂಬಯಿ ಕರ್ಣಾಟಕದಲ್ಲಿ ತಹಶೀಲ್‌ದಾರರನ್ನು ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಮಾಡಿದ್ದಾರೆ. ರೆವೆನ್ಯೂ ಖಾತೆಯವರಿಗೆ ಕಾಯಿದೆಯ ವಿಚಾರ ಚೆನ್ನಾಗಿ ಗೊತ್ತಿರುವುದಿಲ್ಲ; ಅದರಬಗ್ಗೆ ಅನುಭವವಿರುವುದಿಲ್ಲ. ಹಾಗಿದ್ದರೂ ಸಹ ಅವರನ್ನು ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಮಾಡಿರುವ ವಿಚಾರ ನಾನು ಹೇಳುತ್ತಿರುವುದು.

[MR. DEPUTY SPEAKER in the Chair]

ಅವರನ್ನು ರೆವಿನ್ಯೂ ಖಾತೆಯಿಂದ ಈ ಖಾತೆಗೆ ಲೆಂಟ್ ಹ್ಯಾಂಡ್ ಎಂದು ನಮೂದು ಮಾಡಿ ಕೊಟ್ಟಿದ್ದಾರೆ. ಆದ್ದರಿಂದ ಅಂತಹವರನ್ನು ತಿರುಗಿ ಕರೆಸಿಕೊಂಡು, ಅವರ ಜಾಗದಲ್ಲಿ ಸಂಪೂರ್ಣ ವಕೀಲವೃತ್ತಿ ಕೈಕೊಂಡಂತಹವರನ್ನು ಇಡಬೇಕೆಂದು ನನ್ನ ಸಲಹೆ. ನಾನು ಒಮ್ಮೆ ಬಡ್ಜೆಟ್ ಮೇಲೆ ಭಾಷಣ ಮಾಡುವಾಗ ಹೇಳಿದ್ದೇನೆ, ನಮ್ಮ ಮುಂಬೈ ಕರ್ನಾಟಕ ಭಾಗದಲ್ಲಿ ತಿರುಗಾಡುವ (moving) ಕೋರ್ಟ್‌ಗಳು ಇವೆ. ಮಿಕ್ಕಕಡೆಗಳಲ್ಲಿ ಅವು ಇಲ್ಲದೇ ಇದ್ದರೆ, ಪುನಃ ಪ್ರಾರಂಭ ಮಾಡಬೇಕಾಗಿಲ್ಲ. ಕೆಲಕೆಲವು ತಾಲ್ಲೂಕುಗಳಲ್ಲಿ ಅಷ್ಟೇನೂ ವ್ಯಾಜ್ಯಗಳಿಲ್ಲ ಮತ್ತು ಫಿರ್ಯಾದುಗಳಿಲ್ಲ ಎಂದು ಹೇಳಿ 2-2 ತಾಲ್ಲೂಕುಗಳನ್ನು ಕೂಡಿಸಿ ಈ ಪ್ರಕಾರ ವ್ಯವಸ್ಥೆ ಮಾಡಲಾಗಿದೆ. ಈ ವಾರ ಒಂದು ತಾಲ್ಲೂಕು, ಮುಂದಿನವಾರ ಇನ್ನೊಂದು ತಾಲ್ಲೂಕು ಈ ರೀತಿ ಒಂದೊಂದು ಕಡೆಗೆ ಹೋಗಿ ಕಟ್ಟಲೆ ಮತ್ತು ದಾವೆಗಳನ್ನು ವಿಚಾರ ಮಾಡಿದ್ದಾರೆ. ಆ ತರಹದ ಒಂದು ವ್ಯವಸ್ಥೆಯಿಂದ ಯೋಗ್ಯವಾದ ನ್ಯಾಯದಾನ ಸಿಕ್ಕುತ್ತಿಲ್ಲ. ಅಷ್ಟೇ ಅಲ್ಲ ಕಕ್ಷಿಗಾರರಿಗೂ ಸಹ ವಿಶೇಷ ತೊಂದರೆಯಾಗುತ್ತದೆ. ಮಿತವ್ಯಯದ ದೃಷ್ಟಿಯಿಂದಲೂ ಸಹ ಯೋಗ್ಯವಲ್ಲ ಎಂದು ಹೇಳುತ್ತೇನೆ. ಈ ತಿರುಗಾಡುವಂಥ ಕೋರ್ಟುಗಳನ್ನು ಬಂದುಮಾಡಿ ಒಂದು ಅಥವಾ ಎರಡು ತಾಲ್ಲೂಕುಗಳನ್ನು ಒಂದು ಗೂಡಿಸಿ ಒಂದು ಸ್ಥಿರವಾದ ಕೋರ್ಟು ಸ್ಥಾಪನೆ ಮಾಡಬೇಕೆಂದು ನನ್ನ ಸೂಚನೆ.

ಇನ್ನೂ ಬಾಲಕ ಬಾಲಕಿಯರ ಸಲುವಾಗಿ ಜ್ಯೂವಿನೈಲ್ ಕೋರ್ಟ್ಸ್ ಎಂಬುದಾಗಿವೆ. 16 ವರ್ಷ ವಯಸ್ಸಿಗಿಂತ ಕಡಮೆ ಇರತಕ್ಕ ಬಾಲಕ ಬಾಲಕಿಯರು ಯಾವುದಾದರೂ ಒಂದು ಅಪರಾಧ ಮಾಡಿದರೆ ಆ ಅಪರಾಧವನ್ನು ವಿಚಾರಣೆ ಮಾಡುವ ಸಲುವಾಗಿ ಪ್ರತ್ಯೇಕ ಕೋರ್ಟು ಇದೆ. ಅವರಿಗೆ ಬೇರೆ ಒಂದು ತರಹದ ತರಬೇತು ಅಥವಾ ಯೋಗ್ಯವಾದ ಒಂದು

(SRI F. H. MOHSIN)

ಉತ್ತೇಜನಕೊಟ್ಟು ಅವರನ್ನು ತರಬೇತು ಮಾಡುವಂಥ ಒಂದು ಪದ್ಧತಿ ನಮ್ಮ ಮುಂಬೈ ಕರ್ನಾಟಕದಲ್ಲಿ ಇದೆ. ಅಂತಹ ಜ್ಯೂವಿನೈಲ್ ಕೋರ್ಟಿನ ಮ್ಯಾಜಿಸ್ಟ್ರೇಟ ರಾಗಿ ಶ್ರೀಮತಿ ಮಾಗಡಿ ಅವರು ಇದ್ದಾರೆ. ಈ ತರ ಹದ ಒಂದು ಬೇರೆ ಕಟ್ಟಲೆ ಮಾಡಿಕೊಂಡು ಬಹಳ ಒಳ್ಳೆಯ ರೀತಿಯಲ್ಲಿ ಬಾಲಕ ಬಾಲಕಿಯರನ್ನು ಸುಧಾರಿಸುವುದರ ಸಲುವಾಗಿ ಈ ಒಂದು ಸಿಸ್ಟಂ ಇಡಿಯ ರಾಜ್ಯದಲ್ಲಿ ಮಾಡಬೇಕೆಂಬುದು ನನ್ನ ಸೂಚನೆ.

ಇನ್ನೊಂದು ಸೂಚನೆ ಏನೆಂದರೆ, ಈ ನ್ಯಾಯದಾನ ಬಹಳ ಸುಲಭವಾಗಿ ಮತ್ತು ಕಡಮೆ ವೆಚ್ಚದಿಂದ ಸಿಕ್ಕ ಬೇಕು ಎಂದು ಎಲ್ಲರಲ್ಲೂ ಒಂದು ಇಚ್ಛೆ ಇದೆ. ಆ ಪ್ರಕಾರ ನಮಗೆ ಒಂದು ಅನುಭವದ ಮಾತು ಎಂದರೆ ಎಷ್ಟೋ ಸಲ ಅಪೀಲು ಮಾಡುವಾಗ ಅಪೀಲು ವಾದಿ ಎಷ್ಟೋ ತರಹದ ಖರ್ಚಿಗೆ ತುತ್ತಾಗಬೇಕಾ ಗುತ್ತದೆ. ಕೆಳಗಿನ ಕೋರ್ಟಿನ ಜಡ್ಜ್‌ಮೆಂಟ್ ಪ್ರಕಾರ, ತೀರ್ಮಾನದ ಪ್ರಕಾರ, ಡಿಕ್ರಿಪ್ರಕಾರ ಎಷ್ಟೋ ಸಲ ಹಣವನ್ನು ಕಟ್ಟಬೇಕಾಗುತ್ತದೆ. ಅನಂತರ ಅಪೀಲು ಹಾಕಬೇಕಾದರೆ ಎಲ್ಲಾ ರಿಕಾರ್ಡು ಗಳು ಇರಲೇಬೇಕು. ಅದಕ್ಕೆ ಅಪೀಲು ಬುಕ್ ಎಂದು ಅಪೀಲು ವಾದಿ ತಯಾರು ಮಾಡಬೇಕಾಗುತ್ತದೆ. ಒಂದು ಬುಕ್ ಡಿಕ್ರಿಉತಾರ್ ಖರ್ಚಿನ ಬಗ್ಗೆ ಮತ್ತೊಂದು ಬುಕ್ ಅಪೀಲು ವಾದಿ ಬಗ್ಗೆ ಮತ್ತೊಂದು ಬುಕ್ ಪ್ರತಿವಾದಿ ಬಗ್ಗೆ ಈ ಪ್ರಕಾರ ಮೂರು ಬುಕ್ಕುಗಳ ಚಾರ್ಜಸ್‌ನ್ನು ಅಪೀಲು ವಾದಿ ವಹಿಸಬೇಕಾಗುತ್ತದೆ. ಇದರಿಂದ ಅಪೀಲು ವಾದಿಗೆ ಬಹಳ ಖರ್ಚಾಗುತ್ತದೆ. ಎಷ್ಟೋಸಾರಿ ಈ ಖರ್ಚು ನೋಡಿ ಹೆದರಿ ಅಪೀಲು ಮಾಡುವುದನ್ನೇ ಬಿಟ್ಟು ಬಿಟ್ಟಿರುವ ಪ್ರಸಂಗ ಬಂದಿದೆ. ಕೋರ್ಟ್ ಫೀಜು ಹೆಚ್ಚು. ಆದ್ದರಿಂದ ಅಪೀಲು ಬುಕ್ ಸಲುವಾಗಿ ತಗಲುವ ಖರ್ಚು ವಹಿಸಲು ಸಾಧ್ಯವಾಗದೆ ಎಷ್ಟೋ ಸಲ ಅಪೀಲು ಮಾಡತಕ್ಕ ವಿಚಾರವನ್ನೇ ಬಿಟ್ಟಿದ್ದಾರೆ. ಆದಕಾರಣ ಸುಲಭವಾಗಿ ಮತ್ತು ಕಡಮೆ ವೆಚ್ಚದಿಂದ ನ್ಯಾಯದೊರಕುವಂಥ ತತ್ವವನ್ನು ಅಥವಾ ಉದ್ದೇಶವನ್ನು ನಾವೇನು ಇಟ್ಟುಕೊಂಡಿದ್ದೇ ವೆಯೋ ಅದಕ್ಕೆ ವಿರುದ್ಧವಾಗಿ ಪ್ರಸಂಗ ನಡೆಯುತ್ತದೆ ಎಂದು ಹೇಳಬೇಕಾಗಿದೆ. ಆದಕಾರಣ ಅಪೀಲು ವಾದಿ ಬುಕ್‌ಗೆ ಎಷ್ಟು ಖರ್ಚು ಬರುತ್ತದೋ ಅಷ್ಟನ್ನು ಮಾತ್ರ ತೆಗೆದುಕೊಂಡು ಬಾಕಿಯದನ್ನು ಹಾಗೆಯೇ ಕೊಡಬೇಕು ಮತ್ತು ಅಪೀಲಿನಲ್ಲಿ ಡಿಕ್ರಿ ಸಹ ಸರ್ಕಾರದ ಖರ್ಚಿನಲ್ಲೇ ದೊರಕುವಂತೆ ಒಂದು ವ್ಯವಸ್ಥೆ ಮಾಡಬೇಕು. ಹೀಗೆ ಮಾಡಿದರೆ ಸುಲಭವಾಗಿ ನ್ಯಾಯದೊರಕಿಸಿ ಕೊಟ್ಟಂತಾಗುತ್ತದೆ. ಇಲ್ಲದೆ ಹೋದರೆ ಅನಾವಶ್ಯಕವಾಗಿ ಲಿಟಿಗೇಷನ್ ಹೆಚ್ಚುತ್ತದೆ ಎಂದು ನನ್ನ ಅಭಿಪ್ರಾಯವಲ್ಲ. ಕೋರ್ಟ್ ಫೀಜು ಹೆಚ್ಚಾಗಿದೆ, ಇದರಿಂದ ಎಷ್ಟೋ ಲಿಟಿಗೇಷನ್ ಕಡಮೆ ಆಗಬಹುದು. ಆದರೆ ನಮ್ಮ ಉದ್ದೇಶ ನ್ಯಾಯದಾನ ವನ್ನು ದೊರಕಿಸಿಕೊಡುವ ಉದ್ದೇಶವಾಗಿದೆ. ಖರ್ಚು ಹೆಚ್ಚುಮಾಡಿಸಿ ನ್ಯಾಯವನ್ನು ದೊರಕಿಸಿಕೊಡುವುದು ನ್ಯಾಯವಾದುದಲ್ಲ. ಸುಲಭರೀತಿಯಿಂದ ದೊರಕಿಸಿ ಕೊಡಬೇಕೆಂದು ನನ್ನ ಅಭಿಪ್ರಾಯ.

ಇನ್ನು ಜೈಲಿನ ವಿಚಾರ. ಯಾವನಾದರೂ ಒಬ್ಬ ಮನುಷ್ಯ ಯಾವುದಾದರೂ ಒಂದು ಅಪರಾಧ ಮಾಡಿ ದರೆ ಯಾವ ಕಾರಣದ ಸಲುವಾಗಿ ಮಾಡುತ್ತಾನೆ ಎಂಬುದನ್ನು ಪತ್ತೆಹಚ್ಚುವುದು ಒಳ್ಳೆಯ ವಿಷಯ. ಕೆಲವರು ಕೇವಲ ಒಂದು ಕಳವು ಮಾಡಬೇಕೆಂಬ ಉದ್ದೇಶದಿಂದ ಮಾಡುವುದಿಲ್ಲ, ಜೀವನದಲ್ಲಿ ಅಂತಹ ಪ್ರಸಂಗ ಬರುತ್ತದೆ. ಅವನ ಸ್ಥಿತಿ ನೋಡಿಕೊಂಡು ಅಥವಾ ಬೇರೆ ಉಪಾಯವಿಲ್ಲದೆ ಕಳವು, ದರೋಡೆ ಮಾಡಲು ಉದ್ಯುಕ್ತನಾಗುತ್ತಾನೆ. ಕೇವಲ ಫ್ಯಾಷನ್ ಸಲುವಾಗಿ ಕಳವು, ದರೋಡೆ ಮಾಡುವುದಿಲ್ಲ. ಆದಕಾರಣ ಅಂತಹ ಒಂದು ಕಳುವಿನ ಪ್ರಕರಣ ಅಥವಾ ಯಾರಾದರೂ ಕಳುವಿಗೆ ಶಿಕ್ಷೆ ಮಾಡಲ್ಪಟ್ಟಿ ದ್ದರೆ ಅಂತಹವರ ಜೀವನದ ಇತಿಹಾಸವನ್ನು ನಾವು ಅರಿತುಕೊಳ್ಳುವಂತಹ ಒಂದು ಯೋಗ್ಯ ಏರ್ಪಾಡು ಮಾಡಿ, ಈ ಅಪರಾಧಿಗಳ ಜೀವನದ ಒಂದು ಇತಿಹಾಸ ವನ್ನು ಕಂಡುಹಿಡಿದು ಅವರು ಏಕೆ ಅಂತಹ ಒಂದು ಉದ್ಯೋಗಕ್ಕೆ ಈಡಾಗಿದ್ದಾರೆ, ಹೇಗೆ ಮಾರ್ಪಾಡು ಮಾಡಬೇಕೆಂಬುದನ್ನು ವಿಚಾರ ಮಾಡಬೇಕು. ಹಾಗೆ ಮಾಡದೇ ಯಾವ ಉದ್ದೇಶಕ್ಕಾಗಿ ಅವರನ್ನು ಬಂಧನ ದಲ್ಲಿಡುತ್ತೇವೆಯೋ ಆ ತತ್ವವನ್ನೇ ಮರೆತ ಹಾಗೆ. ಜೈಲುವಾಸಿಗಳನ್ನು ಸುರಕ್ಷಿತವಾಗಿ ಇಡುವುದ ಕ್ಕಿಂತಲೂ, ಅಪರಾಧಿಗಳ ಸಂಖ್ಯೆ ಕಡಮೆ ಮಾಡುವ ಈ ಒಂದು ತತ್ತ್ವ ಮಹತ್ವದ್ದಾಗಿದೆ. ಅದಕ್ಕೆ ಅವನ ಜೀವನದ ಇತಿಹಾಸದಲ್ಲಿ ಯಾವ ಪ್ರೇರಣೆ ಯಿಂದ ಅಥವಾ ಯಾವ ಸ್ಥಿತಿಗತಿಯಿಂದ ಆ ಅಪರಾಧ ಮಾಡಲಿಕ್ಕೆ ಅಣಿಯಾದ ಎಂಬುದನ್ನು ನೋಡಬೇಕು. ಅಂತಹವರ ಸಲುವಾಗಿ ಒಂದು ವೈದ್ಯಕೀಯ ತಜ್ಞರ ಸಮಿತಿಯನ್ನು ನಿರ್ಮಾಣಮಾಡಬೇಕು.

ಅಲ್ಲಿ ಪ್ರತಿಯೊಬ್ಬರಿಗೂ ಒಂದು ಕೈಗಾರಿಕೆ ಯನ್ನು ಕಲಿಸತಕ್ಕ ಏರ್ಪಾಡು ಮಾಡಬೇಕು ಮತ್ತು ಅವರ ಮನಸ್ಸನ್ನು ಈ ಕೆಟ್ಟ ಪದ್ಧತಿಯಿಂದ ಬೇರೆ ಕಡೆಗೆ ಚಲಿಸುವಂತೆ ಮಾಡಬೇಕು. ಈ ಕಾರ್ಯದ ಸಲುವಾಗಿ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಲು ಏರ್ಪಾಡಾಗಬೇಕೆಂದು ಸಲಹೆ ಮಾಡುತ್ತೇನೆ. ಆ ಜೈಲಿಗೆ ಬರತಕ್ಕ ಜನರ ಮನಸ್ಸು ಪರಿವರ್ತನೆ ಯಾಗತಕ್ಕ ರೀತಿಯಲ್ಲಿ ಅವರಿಗೆ ಒಂದು ಯೋಗ್ಯ ಬೋಧನೆ ದೊರೆಯಬೇಕು. ಅವರಿಗೆ ಅಂಥ ನೀತಿ ಬೋಧನೆ ಮಾಡಬೇಕಾದದ್ದು ಅತ್ಯಗತ್ಯ. ಈಗೇನೋ ಜೈಲುಗಳಲ್ಲಿ ಅಲ್ಲಲ್ಲೇ ಅವರಿಗೊಂದು ಕೆಲಸಕೊಟ್ಟು ಏನೋ ಒಂದು ಧಂದೆಯನ್ನು ಕಲಿಸಿ ಕೊಡುತ್ತಿದ್ದಾರೆ. ಆದರೆ ಇದು ಸಾಲದು. ಇದರ ಜೊತೆಗೆ ಅವರ ಮನಸ್ಸು ಬದಲಾವಣೆಗೆ ಅವರ ಮನಸ್ಸಿನ ಮಾರ್ಪಾ ಡಿಗೆ ಒಂದು ಯೋಜನೆ ಹಾಕತಕ್ಕದ್ದು ಅತ್ಯಾವಶ್ಯಕ. ಆದರೆ ನಾವೆಲ್ಲರೂ ಈ ದಿವಸ ಜನರು ಕಳವು ಮಾಡ ಬಾರದು, ಮದ್ಯಪಾನ ಮಾಡಬಾರದು, ಜಗಳವಾಡ ಬಾರದು ಎಂದು ಹೀಗೆಲ್ಲ ಹೇಳುತ್ತಿದ್ದೇವೆ. ಹೀಗೆಯೇ ಆ ಜೈಲಿನಲ್ಲೂ ಸಹ ಮನುಷ್ಯನ ತಿಳಿವಳಿಕೆಯನ್ನು ಹೆಚ್ಚಿಸಿ ಅವನಿಗೊಂದು ಧರ್ಮ ಬೋಧನೆಮಾಡಿ ಆ ಮೂಲಕ ಆತನ ಮನಸ್ಸು ಬದಲಾವಣೆ ಮಾಡುವಂತೆ ವ್ಯವಸ್ಥೆಮಾಡಬೇಕು. ಅವರಿಗೆ ದಂಧೆಯನ್ನೂ ಕೂಡ ಕಲಿಸಿಕೊಡಬೇಕು. ಅವರು ಕಲಿತಂಥ ಧಂದೆ ಏನಿದೆ ಅದರಲ್ಲೇ ಅವರ ಮನಸ್ಸು ಉದ್ಯುಕ್ತವಾಗುವಂತೆ ಮತ್ತು ನಿಲ್ಲುವಂತೆ ವ್ಯವಸ್ಥೆ ಮಾಡಬೇಕು. ಆದರೆ ಇದುವರೆಗೂ ನಡೆದಿರತಕ್ಕ ಅಪರಾಧಗಳಲ್ಲಿ ಕಳುವು ಕೇಸುಗಳೇ ಹೆಚ್ಚಾಗಿವೆ. ಇದಕ್ಕೆ ಕಾರಣ ಜನಗಳಿಗೆ ಇರತಕ್ಕ ನಿರುದ್ಯೋಗದ ಸಮಸ್ಯೆ. ಆದುದರಿಂದ ಈ ಅಪರಾಧಗಳ ಸಂಖ್ಯೆ ಕಡಮೆಯಾಗುವಂತಾಗಬೇಕಾ ದರೆ ಈ ಕೃತ್ಯಗಳನ್ನು ಹೋಗಲಾಡಿಸಬೇಕಾದರೆ ಅನೇಕ ಹೊಸ ಹೊಸ ಉದ್ಯೋಗಗಳನ್ನು ತೆರೆಯಲು ಏರ್ಪಾಡು ಮಾಡಬೇಕು. ಜನರನ್ನು ಹೊಸ ಹೊಸ ದಾಗಿ ಹೆಚ್ಚು ಹೆಚ್ಚಾಗಿ ಆ ಉದ್ಯಮಗಳಲ್ಲಿ ನೌಕರಿ

ಗಳಲ್ಲಿ ಸೇರಿಕೊಳ್ಳುವಂಥ ಅವಕಾಶ ಕಲ್ಪಿಸಿಕೊಡಬೇಕು. ಇದರಿಂದ ಮುಂದಿನ ಜನಾಂಗದವರಾದರೂ ನೆಮ್ಮದಿಯಿಂದ ಸುಖವಾಗಿರಲು ಅವಕಾಶವಾಗುತ್ತದೆಂದು ಇಷ್ಟು ಸಲಹೆಗಳನ್ನು ಮಾಡಿ ಈ ಡಿಮ್ಯಾಂಡಿಗೆ ನನ್ನ ಬೆಂಬಲವನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಭಾಪತಿಗಳೇ, ಇದುವರೆಗೂ ಕೂಡ ನನ್ನ ಮಿತ್ರರನೇಕರು ಈ ಜೈಲುಗಳ ಸುಧಾರಣೆಯ ಬಗ್ಗೆ ಮತ್ತು ಜೈಲುಗಳಲ್ಲಿ ಈಗ ನಡೆಯುತ್ತಿರುವ ಕೈಗಾರಿಕೆಯ ಉದ್ಯಮಗಳ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ನಾನಾದರೂ ಈ ವಿಚಾರದಲ್ಲಿ ಹೇಳುವುದಿಷ್ಟೆ. ಸಾಧಾರಣವಾಗಿ ಈ ದಿವಸ ಈ ಜೈಲುಗಳನ್ನು ನಡೆಸತಕ್ಕ ಬಗ್ಗೆ ಜೈಲುಗಳ ಆಡಳಿತಕ್ಕಾಗಿ ಮತ್ತು ಈ ವಾರ್ಡುಗಳ ಬಗ್ಗೆ ಮತ್ತು ಅಲ್ಲಿಯ ಕೈಗಾರಿಕೆ ಬಗ್ಗೆ ಈವರೆಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿರುತ್ತೇವೆ. ಆದರೆ ಈ ಬಾಬಿನಿಂದ ಬರತಕ್ಕ ಪ್ರತಿಫಲವಾದರೋ ಬಹಳ ಕಡಮೆ. ಈ ದಿವಸ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ Discharged Prisoners Aided Society ಎಂಬ ಒಂದು ಸೊಸೈಟಿಯಿದೆ. ಇದಕ್ಕೆ ಪ್ರತಿ ವರ್ಷವೂ ಎರಡು ಸಾವಿರ ರೂಪಾಯಿಗಳನ್ನು ಕೊಡಲಾಗುತ್ತದೆ. ಹೀಗೆ 10-20 ವರ್ಷಗಳಿಂದಲೂ ಇದಕ್ಕೆ ಸರ್ಕಾರದವರು ಹಣವನ್ನೊದಗಿಸುತ್ತಿದ್ದಾರೆ. ಈ ಸೊಸೈಟಿಯಲ್ಲಿ 25 ಜನ ಷೇರ್ ಹೋಲ್ಡರುಗಳಿರಬಹುದು. ಅದರಲ್ಲಿ 15 ಜನ ಡೈರೆಕ್ಟರುಗಳಿದ್ದಾರೆ. ಆದರೆ ಈ ಸೊಸೈಟಿಯಿಂದ ಇಲ್ಲಿಯವರೆಗೂ ಎರಡು ಮೂರು ಸಾವಿರ ರೂಪಾಯಿಗಳ ಸಾಲವನ್ನೇನಾದರೂ ಕೊಟ್ಟಿದ್ದಾರೆಯೋ ಅಥವಾ ಇಲ್ಲವೋ ಗೊತ್ತಾಗುತ್ತಿಲ್ಲ. ಹೀಗೆ 10-20 ವರ್ಷಗಳಿಂದ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿದಾಗ್ಯೂ ಅದರಿಂದ ಜನರಿಗೆ ಮೂರುಕಾಸಿನ ಪ್ರಯೋಜನ ಕೂಡ ಆಗದೆ ಇದ್ದರೆ ನೀವು ಏತಕ್ಕೆ ಅಂಥ ಬಾಬುಗಳಿಗೆ ದುಡ್ಡನ್ನು ಖರ್ಚು ಮಾಡಬೇಕು? ಇದರಿಂದ ಆ ಜೈಲಿನಿಂದ ಹೊರಗೆ ಬಂದಂಥ ಅಪರಾಧಿ ಮನುಷ್ಯನಿಗೆ ಏನಾದರೂ ಹಣದ ಸಹಾಯ ದೊರೆತಂತಾಯಿತೇ? ಈಗ ಆಲ್ ಇಂಡಿಯ ವೆಲ್‌ಫೇರ್ ಸೊಸೈಟಿಯೆಂಬ ಸಂಸ್ಥೆಯೊಂದಿದೆ. ಇದಕ್ಕೆ ಡೈರೆಕ್ಟರಾಗಿರತಕ್ಕವರು ಡಿಲ್ಲಿ-ಆಗ್ರ ಇತ್ಯಾದಿ ಸ್ಥಳಗಳಲ್ಲಿ ನಡೆಯತಕ್ಕ ಕಾನ್‌ಫರೆನ್ಸ್‌ಗಳಿಗೆಂದು ಆಗಾಗ ಹೋಗುತ್ತಾರೆ. ಅದರಿಂದ ಆಗುತ್ತಿರುವ ಪ್ರಯೋಜನವೇನೆಂದರೆ ಈ ಡೈರೆಕ್ಟರಾಗಿರತಕ್ಕವರು ಡೆಲ್ಲಿ-ಆಗ್ರ ಇತ್ಯಾದಿ ಯಾತ್ರೆಗಳನ್ನು ಮುಗಿಸಿಕೊಳ್ಳಲು ಅನುಕೂಲವಾಗಿದೆ, ಅಷ್ಟೇ ಹೊರತು ಮತ್ತೇನೂ ಪ್ರಯೋಜನವಿಲ್ಲ. ಆದ್ದರಿಂದ ಇದನ್ನು ನಿಲ್ಲಿಸಿ ಬಿಡುವುದು ಉತ್ತಮ. ಈ ಸೊಸೈಟಿ ದಕ್ಷತೆಯಿಂದ ಕೆಲಸ ನಡೆಸುತ್ತಿಲ್ಲ. ಅಷ್ಟೇ ಅಲ್ಲದೆ ಇದಕ್ಕೆ ವರ್ಷೇ ವರ್ಷೇ ಎರಡು ಸಾವಿರ ರೂಪಾಯಿಗಳು ಬೇರೆ ದಂಡವಾಗಿ ಖರ್ಚಾಗುತ್ತಿದೆ. ಇದನ್ನು ತಪ್ಪಿಸುವುದೇ ಒಳ್ಳೆಯದು.

ಇನ್ನು ಜೈಲಿನಲ್ಲಿ ನಡೆಯತಕ್ಕ ಕೈಗಾರಿಕೆಯ ವಿಚಾರಕ್ಕೆ ಬಂದರೆ—ಗಾರ್ಬರ್‌ಪ್ಲಾಂಟ್ ಎಂದು ಒಂದು ಮೆಷಿನರಿಯನ್ನು 43 ಸಾವಿರ ರೂಪಾಯಿಗಳು ಕೊಟ್ಟು ಕೊಂಡು ಕೊಂಡು ಬಂದಿದ್ದಾರೆಂದು ಹೇಳಿದರು. ಈ ಯಂತ್ರದಲ್ಲಿ ಕೆಲಸಮಾಡತಕ್ಕ ಕೂಲಿಗಳಿಗೆ ಇಸಂ ಒಂದಕ್ಕೆ ಒಂದಾಣೆ ಒಂದೂವರೆಯಾಣೆ ಬರುತ್ತದೆ. ಜೈಲಿನಲ್ಲಿದ್ದ ಅಪರಾಧಿ ಜೈಲಿನಿಂದ ಹೊರಗಡೆಗೆ ಬಂದನಂತರ ಅವನು 43ಸಾವಿರ ರೂಪಾಯಿಗಳನ್ನು ಕೊಟ್ಟು ಅಂತಹ ಯಂತ್ರವನ್ನು ತರುವುದಕ್ಕಾಗುವುದಿಲ್ಲ ಮತ್ತು ಅವನು ಆ ಯಂತ್ರದಲ್ಲಿ ಕೆಲಸಮಾಡಲೂ ಸಾಧ್ಯವಿಲ್ಲ. ಜೈಲಿನಲ್ಲಿರತಕ್ಕ ಕಾಲದಲ್ಲಿ ಈ ಕೈಗಾರಿಕೆಯಲ್ಲಿ ನಿರತರಾದವರಿಗೆ ಬರತಕ್ಕ ಕೂಲಿ 1 ಆಣೆ ಅಥವಾ ಒಂದೂವರೆ ಆಣೆ, ಆದರೆ ಜೈಲಿನಿಂದ ಹೊರಗೆ ಬಂದ ಮೇಲೆ ಅವರು ಬಾಕಿ ಕೆಲಸಕಾರ್ಯಗಳಿಗೆ ಕೂಲಿಹೋದರೆ ದಿನಕ್ಕೆ 1-2 ರೂಪಾಯಿಗಳ ಕೂಲಿಸಿಕ್ಕುತ್ತದೆ. ಆದುದರಿಂದ ಈಗ ಸರ್ಕಾರದವರು ತರಿಸಿರತಕ್ಕ ಗಾರ್ಬರ್‌ಪ್ಲಾಂಟಿನಿಂದ ಏನೂ ಪ್ರಯೋಜನವಿಲ್ಲ. ಇದನ್ನು ಯಾರಿಗಾದರೂ ಮಾರಿಬಿಡಿ, ಇಲ್ಲವೇ ಸ್ಕ್ರ್ಯಾಪ್‌ಮಾಡಿ ಹರಾಜು ಹಾಕಿಬಿಡಿ. ಇದಕ್ಕೇಕೆ ಅಷ್ಟು ಹಣ ಖರ್ಚುಮಾಡಬೇಕು? ಇದಕ್ಕೆ ಎಲೆಕ್ಟ್ರಿಕ್ ಕರೆಂಟ್ ಬೇರೆ ದಂಡ. ಇಂಥ ಒಂದು ಲಾಭದಾಯಕವಲ್ಲದ ಉದ್ಯಮವೇಕೆ ಇರಬೇಕೋ ನನಗಂತೂ ಹೊಳೆಯುತ್ತಿಲ್ಲ. ಇದಕ್ಕೆ ಸಿಬ್ಬಂದಿ ವೆಚ್ಚ ಬೇರೆ. ಇನ್ನು ಬ್ಯಾಂಬೋ ರಟ್ಟನ್ ಎಷ್ಟೋ ವರ್ಷಗಳಿಂದ ಅಲ್ಲೇ ಸ್ಟಾಕ್‌ಬಿದ್ದಿದೆ. ಅಲ್ಲಿ ಆ ಕೆಲಸ ಮಾಡುವಂಥ ಜನಗಳಿದ್ದರೂ ಆ ಸಾಮಾನುಗಳನ್ನು ತಯಾರಿಸುತ್ತಿಲ್ಲ. ಹೀಗಾಗಿ ಈ ದಿವಸ ಜೈಲಿನಲ್ಲಿರತಕ್ಕ ಖೈದಿಗಳಿಗೆ ಸರಿಯಾಗಿ ಯಾವ ಒಂದು ಕೈಗಾರಿಕೆಯನ್ನೂ ಕಲ್ಪಿಸಿದಂತಾಗಲಿಲ್ಲ. ಈಗಾಗಲೇ ಶ್ರೀ ಜೆ.ಬಿ. ಮಲ್ಲಾರಾಧ್ಯರವರು ತಿಳಿಸಿದಂತೆ ಜೈಲಿನಲ್ಲಿರತಕ್ಕ ಖೈದಿಗಳಿಗೆ ಅವರು ಅಲ್ಲಿಂದ ಹೊರಗೆ ಬಂದ ಅನಂತರ ಯಾವ ಕೈಗಾರಿಕೆಗಳನ್ನು ಸುಲಭವಾಗಿ ಕೈಗೊಳ್ಳಲು ಅವಕಾಶವಿರುತ್ತೆಂದು ಕಂಡು ಬರುತ್ತದೋ ಅಂಥ ಕೈ ಕೆಲಸಗಳನ್ನು ಅವರಿಗೆ ಕಲಿಸ ಬೇಕಾದ್ದು ಮುಖ್ಯ. ಆದರೆ ಈ ದಿವಸ ಖೈದಿಗಳಾಗಿರುವಾಗ ಜನರಿಗೆ ಒಳಗೂ ಒಂದು ಸರಿಯಾದ ಉದ್ಯೋಗ ಕಲಿಸದೆ ಹೋದರೆ ಅವರು ಹೊರಗೆ ಬಂದ ಮೇಲೆ ಕಷ್ಟತಪ್ಪಲು ಅವಕಾಶವೆಲ್ಲಿದೆ? ಇನ್ನು ಜೈಲಿನ ಆಡಳಿತದ ವಿಚಾರವನ್ನು ತೆಗೆದುಕೊಂಡರೆ ಅಲ್ಲಿ ಒಂದು ದೊಡ್ಡ ಟೀಕ್‌ಮರದ ಲಾಟು ಕಾಂಪೌಂಡ್‌ನಲ್ಲಿ ಇತ್ತು. ಈ ದಿವಸ ಈ ಸಾಗುವಾನಿ ಮರದ ಬೆಲೆ ಹೇಗಿದೆ ಎಂಬುದು ಮಾನ್ಯ ವ್ಯವಸಾಯದ ಮಂತ್ರಿಗಳಿಗೆ ಗೊತ್ತಿದೆ. ಈ ದಿವಸ ತೇಗದಮರದ ಬೆಲೆ ಬಹಳ ಜಾಸ್ತಿಯಾಗಿದೆ. ಆದರೆ ಅಲ್ಲಿ ಕಾಂಪೌಂಡ್‌ನಲ್ಲಿದ್ದಂಥ ತೇಗದಮರವೆಲ್ಲ ಈಗ ಎಲ್ಲಿ ಹೋಯಿತು? ಅದು ಯಾವರೀತಿ ವಿಲೇ ಆಯಿತು? ಆ ಜೈಲಿನ ಆಡಳಿತವನ್ನು ನೋಡಿಕೊಳ್ಳುವ ಅನೇಕ ಅಧಿಕಾರಿಗಳ ಮನೆಗೆ ಬೇಕಾದಂಥ ಸಾಮಾನುಗಳನ್ನು ಮಾಡಿಸಿ ಸಾಗಿಸಲಾಗಿದೆ. ಈ ಬಗ್ಗೆ ವಿವರಗಳನ್ನು ಒದಗಿಸಬೇಕೆಂದು ಕೇಳುತ್ತೇನೆ. ಈ ದಿವಸ ನಾವು ಮದ್ರಾಸ್ ಸರ್ಕಾರದ ಬಡ್ಜೆಟ್ಟನ್ನ ತೆಗೆದು ನೋಡಿದರೆ ಅದರಲ್ಲಿ ಈ ಜೈಲಿನಲ್ಲಿ ಮ್ಯಾನುಫ್ಯಾಕ್ಚರ್ ಆದಂಥ ಸಾಮಾನುಗಳಿಂದ ಎಷ್ಟು ಲಾಭ ಬಂದಿದೆ ಇಲ್ಲಿ ನಮ್ಮ ಜೈಲುಗಳ ಕೈಗಾರಿಕೆಗಳಿಂದ ಎಷ್ಟು ಲಾಭ ಬಂದಿದೆ ಎಂಬುದನ್ನು ನೋಡಿದರೆ ಆ ಮದ್ರಾಸ್ ಜೈಲಿನಲ್ಲಿರತಕ್ಕ ಖೈದಿಗಳೇ ಬೇರೆ ಇಲ್ಲಿ ನಮ್ಮ ಜೈಲಿನಲ್ಲಿರತಕ್ಕ ಖೈದಿಗಳೇ ಬೇರೆಯೇನೋ ಎನ್ನುವಂಥ ಒಂದು ವ್ಯತ್ಯಾಸ ಕಾಣುತ್ತಿದೆ. ಹೀಗೆ ಸರ್ಕಾರದವರ ಕಣ್ಣೆದುರಿಗಿರತಕ್ಕ ಜೈಲು ಒಂದರಲ್ಲೇ ಇಷ್ಟೊಂದು ಲೋಪ ದೋಷಗಳಿರುವಾಗ, ಅವುಗಳನ್ನು ಇಲ್ಲಿಯವರೆಗೂ ಸರಿಪಡಿಸಲು ಸರ್ಕಾರಕ್ಕೆ ಸಾಧ್ಯವಿಲ್ಲವೆಂಬುದಾಗಿ ಕಂಡು ಬರುತ್ತಿರುವಾಗ ಇನ್ನು 300-400 ಮೈಲಿಗಳ ದೂರದಲ್ಲಿರತಕ್ಕ ಜೈಲುಗಳ ಆಡಳಿತ ಯಾವ ಸ್ಥಿತಿಯಲ್ಲಿರಬಹುದೆಂಬುದನ್ನು ಊಹಿಸುವುದಕ್ಕೂ ಸಹ ಸಾಧ್ಯವಾಗಿರುವುದಿಲ್ಲ. ಬೆಳಗಾಂ ಜೈಲಿನಲ್ಲಿ ಅನೇಕ ಪರಿಣತರು ಇದ್ದಾರಂತೆ. ಇತ್ತೀಚೆಗೆ ಇನ್ಸ್‌ಪೆಕ್ಟರ್ ಆಫ್ ಪ್ರಿಸನ್ಸ್‌ಗಳಿಗೆ ಸಂಬಳ ಜಾಸ್ತಿ ಕೊಡುತ್ತಿದ್ದಾರೆ. ಇನ್ಸ್‌ಪೆಕ್ಟರ್

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ಜನರಲ್ ಆಫ್ ಪ್ರಿಸನ್ಸ್‌ರವರ ಸ್ಥಾನ ಬಹಳದಿವಸಗಳಿಂದ ಖಾಲಿಬಿದ್ದಿದೆ.

Sri C. M. POONACHA.—This is an in charge arrangement and the Head-quarters man is holding charge. That is all.

Sri C. K. RAJAIAH SETTY.—The person who is now in charge cannot hold the charge for ever.

ಆಡಳಿತದಲ್ಲಿ ಅವ್ಯವಸ್ಥೆಯಾಗಿರುವುದೇ ಇದಕ್ಕೆಲ್ಲ ಮುಖ್ಯ ಕಾರಣವಾಗಿರುತ್ತದೆ. ಆ ಸ್ಥಾನದಲ್ಲಿ ಒಬ್ಬರನ್ನ ಭರ್ತಿಮಾಡಲು ಸರ್ಕಾರ ಏಕೆ ಇಷ್ಟು ನಿಧಾನ ಮಾಡುತ್ತಿದೆ ? ಇಲ್ಲಿಗೆ ಸುಮಾರು 11 ತಿಂಗಳ ಮೇಲಾಯಿತೇ? ಇಂಥ ಸ್ಥಾನದಲ್ಲಿ ಟೆಂಪೊರರಿ ಜನರನ್ನು ಇಟ್ಟರೆ ಇದರ ಆಡಳಿತ ಯಾವರೀತಿ ನಡೆದೀತು ? ಬೇರೆ ದೇಶಗಳಲ್ಲಿ ಈ ಜೈಲುಗಳ ಆಡಳಿತ ಹೇಗಿದೆ ? ರಷ್ಯಾದೇಶ ತೆಗೆದುಕೊಳ್ಳಿ. ಎಲ್ಲ ದೇಶಗಳಲ್ಲಿ ತಪ್ಪಿತಸ್ಥರಿಗೆ ಏನು ಒಂದು ಶಿಕ್ಷೆ ವಿಧಿಸಲಾಗುತ್ತದೋ ಅದಕ್ಕಿಂತಲೂ ಕಠಿಣವಾದ ಶಿಕ್ಷೆಯನ್ನು ಒಂದು ಸಣ್ಣ ತಪ್ಪಿಗೂ ಸಹ ಈ ದಿವಸ ಆ ರಷ್ಯಾದೇಶದಲ್ಲಿ ವಿಧಿಸಲಾಗುತ್ತಿದೆಯಂತೆ. ನಮ್ಮ ದೇಶದಿಂದ ರಷ್ಯಾದೇಶಕ್ಕೆ ಹೋಗಿದ್ದಂಥ ಡೆಲಿಗೇಷನ್ನಿನವರು ರಷ್ಯಾದೇಶದಲ್ಲಿ ಈ ಜೈಲುಗಳ ಸುಧಾರಣೆ ಎಷ್ಟರಮಟ್ಟಿಗೆ ನಡೆದಿದೆಯೆಂಬುದರ ಬಗ್ಗೆ ಏನು ಹೇಳಿದ್ದಾರೆಂಬುದನ್ನು ಈಗ ಓದಲಿಚ್ಛಿಸುತ್ತೇನೆ. ಈ ವಿಚಾರ ಆ ಡೆಲಿಗೇಷನ್ನಿನ ವರದಿಯಿಂದ ತಂದಿದ್ದು. ಈ ವಿಚಾರಹಾಗಿರಲಿ. ಈ ದಿವಸ ನಮ್ಮ ಬೆಂಗಳೂರು ಜೈಲಿನಲ್ಲಿರುವ ರೇಡಿಯೋ ಕೆಟ್ಟು ಹೋಗಿ ಎಷ್ಟು ದಿವಸಗಳಾದವು ? ಒಂದು ವರ್ಷದ ಮೇಲಾಗಿದ್ದರೂ ಆ ಅಧಿಕಾರಿಗಳು ಆ ಬಗ್ಗೆ ಇನ್ನೂ ರಿಪೋರ್ಟೇ ಮಾಡಿಲ್ಲ. ಇದರ ಅರ್ಥವೇನೆಂದರೆ ಇಷ್ಟು ಅಧಿಕಾರಿಗಳು, ಸರ್ಕಾರ ಇಷ್ಟೆಲ್ಲ ಇಲ್ಲಿಯೆ ಇದ್ದರೂ ಯಾರೊಬ್ಬರೂಸಹ ಬೆಂಗಳೂರಲ್ಲಿರುವ ಸೆಂಟ್ರಲ್ ಜೈಲಿಗೆ ಹೋಗಿ ಅಲ್ಲಿಯ ವಿಚಾರಗಳನ್ನು ಪರಿಶೀಲನೆ ಮಾಡಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದು. ಇದರ ಜೊತೆಗೆ ಕಲ್ಚರಲ್ ಆಕ್ಟಿವಿಟೀಸ್‌ಗೆ ಎಂದು ಹಣವನ್ನು ಬೇರೆ ಖರ್ಚು ಮಾಡುತ್ತಿದ್ದಾರೆ. ಒಂದು ಲೆಕ್ಚರಿಗೆ 15 ರೂಪಾಯಿಗಳಂತೆಯೋ ಏನೋ ಕೊಡುತ್ತಿದ್ದರು. ಈಗ ಅದೂಸಹ ನಿಂತುಹೋಗಿರುವಂತೆ ಕಾಣುತ್ತಿದೆ. ಇನ್ನು ಕೆಲವು ಪುಸ್ತಕಗಳನ್ನು ಬೇರೆ ಸ್ಕೂಲಿಗೋಸ್ಕರ ಕೊಳ್ಳಬೇಕು. ಅದಕ್ಕೆ 25 ರೂಪಾಯಿಗಳನ್ನು ಕೊಟ್ಟು ಕೊಂಡು ಕೊಳ್ಳಬೇಕಾಗಿದೆ. ಯಾರ ಕೈಯಲ್ಲಿ ಈ ಪುಸ್ತಕ ಕೊಳ್ಳಲು ಹಣವಿದೆ ? ವರ್ಷೇ ವರ್ಷೇ ಶಾಲೆಗಳಲ್ಲಿ ಉತ್ತೀರ್ಣರಾಗತಕ್ಕ ಮಕ್ಕಳಿಗೆ ಪುಸ್ತಕ ಕೊಂಡು ಕೊಡಿಸುವುದೇ ದುಸ್ತರವಾಗಿರುವಾಗ ಇನ್ನು ಈ ಪುಸ್ತಕಗಳನ್ನು ಕೊಳ್ಳಲು ಯಾರಿಗೆ ಸಾಧ್ಯವಿದೆ ? ಇಂಥ ಪದ್ಧತಿಯಿಂದ ಏನು ಪ್ರಯೋಜನವಾಗುತ್ತದೆಯೆಂದು ಕೇಳುತ್ತೇನೆ ? ಈ ವಿಚಾರಗಳನ್ನೆಲ್ಲ ಸರ್ಕಾರ ಕಣ್ಣು ಬಿಟ್ಟು ನೋಡಬೇಕು. ನಿನ್ನೆಯ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಕಟುವಾಗಿ ಸದಸ್ಯರು ಟೀಕೆಗಳನ್ನು ಮಾಡುತ್ತಿದ್ದಾರೆಂದು ಹೇಳಿದರು. ಈ ರೀತಿ ಆಡಳಿತವೆಲ್ಲ ಕೆಟ್ಟುಹೋಗುತ್ತಿದ್ದರೆ ಕಣ್ಣಿಂದ ನೋಡಿಕೊಂಡು ಸುಮ್ಮನಿರುವುದು ಹೇಗೆ ? ಆಯಿತು, ಇನ್ನು ನಾವು ಕಟುವಾಗಿ ಟೀಕೆ ಮಾಡುವುದನ್ನು ಲಘುವಾಗಿಯೇ ಮಾಡೋಣ. ಬೆಂಗಳೂರಿನಲ್ಲಿ ಇಂಥ ಒಂದು ಸರ್ಕಾರದ ಕೇಂದ್ರದಲ್ಲಿರತಕ್ಕ ಜೈಲಿನ ಆಡಳಿತ ಇಷ್ಟು ದುಸ್ಥಿತಿಯಲ್ಲಿರಬಾರದು. ಬಳ್ಳಾರಿ ಜೈಲಿನಲ್ಲೊಬ್ಬರು ಉಣ್ಣೆ ಕೈಗಾರಿಕೆ ಕಲಿಸತಕ್ಕ ಡೆಮಾನ್‌ಸ್ಟ್ರೇಟರಿದ್ದಾರೆ. ಇವರಿಗೆ ವಿನಾ ಕಾರಣ 3 ವರ್ಷಗಳಿಂದಲೂ ಸಂಬಳ ಸಾರಿಗೆಗಳನ್ನು ಕೊಡುತ್ತಿದ್ದಾರೆ. ಆ ಡೆಮಾನ್‌ಸ್ಟ್ರೇಟರಿಗೆ ಅಲ್ಲಿ ಏನೂ ಕೆಲಸವೇ ಇಲ್ಲ. ಬಡ್ಜೆಟ್‌ನಲ್ಲಿ ದುಡ್ಡನ್ನು ಮಾತ್ರ ಒದಗಿಸುತ್ತಿದ್ದಾರೆ. ಆ ದುಡ್ಡು ನೀರಿನಂತೆ ಖರ್ಚಾಗುತ್ತಿದೆ. ಇನ್ನು ಅಲ್ಲಿರುವ ಖೈದಿಗಳಿಗೆ ಈ ಹಣದಿಂದ ಯಾವ ಪ್ರಯೋಜನವೂ ದೊರೆಕಿದಂತೆ ಕಾಣುವುದಿಲ್ಲ. ಹೀಗೆ ವಿನಾ ಕಾರಣ ಬಹಳ ಹಣ ಖರ್ಚಾಗಿ ಹೋಗುತ್ತಿದೆ. ಹೀಗೆಲ್ಲಾ ನಿಜಾಂಶಗಳಿರುವಾಗ ಅಪರಾಧಿಗಳ ಮಾನಸಿಕ ಪರಿಸ್ಥಿತಿಯನ್ನು ಇವರು ಬದಲಾಯಿಸುತ್ತಿದ್ದಾರೆಂದರೆ ಅದು ನಿಜಾಂಶಕ್ಕೆ ದೂರದ ಮಾತು. ಇದರ ಒಳವ್ಯವಹಾರವೇ ಬೇರೆಯಾಗಿದೆ. ಸರ್ಕಾರದವರಿಗೆ ಅವರ ಪಕ್ಕದಲ್ಲಿರತಕ್ಕ ಜೈಲಿನಲ್ಲಿ ನಡೆಯುತ್ತಿರುವ ವಿಚಾರಗಳೇ ಗೊತ್ತಿಲ್ಲ. ಸ್ಟೋರಿನ ವಿಚಾರ ತೆಗೆದುಕೊಂಡರೆ ಅಲ್ಲಿಯಲೆಕ್ಕ ಪತ್ರಗಳು ಹತ್ತಾರು ವರ್ಷಗಳಿಂದ ಆಡಿಟ್ಟೇ ಆಗಿರುವುದಿಲ್ಲ. ಆಡಿಟ್ ಆದ ವರದಿ ಹೊರಬಿದ್ದಮೇಲೆ ಕನಿಷ್ಠಪಕ್ಷ ಇದರಲ್ಲಿ ಶೇಕಡ 25 ರಷ್ಟು ಹಣ ಸೋರಿಹೋಗಿರುವುದಾಗಿ ತಿಳಿಯಬಹುದು. ಈ ದಿವಸ ಈ ಸ್ಟೋರಿನಲ್ಲಿ ಸರಿಯಾದ ಅಕೌಂಟುಗಳನ್ನೇ ಇಟ್ಟಿಲ್ಲ. ಎಂದೋ ಒಂದು ದಿವಸ ಈ ಸಭೆಯ ಮುಂದೆ ಹತ್ತು ವರ್ಷಗಳ ಕೆಳಗಿನ ಒಂದು ಆಡಿಟ್ ವರದಿಯನ್ನು ಇಟ್ಟು ಬಿಡುತ್ತೀರಿ. ಈ ಡಿಫಿಷಿಯೆನ್ಸಿಯ ಬಗ್ಗೆ ಯಾರು ಯಾರಿಂದ ಎಷ್ಟೆಷ್ಟು ಹಣ ಬರಬೇಕಾಗಿದೆ, ಎಷ್ಟು ಹಣ ವಸೂಲಾಗಿದೆ ಬಾಕಿ ಎಷ್ಟು ನಿಂತಿದೆ, ಹತ್ತು ವರ್ಷಗಳಿಂದಲೂ ಇದರ ಆಡಳಿತವನ್ನ ಯಾರು ಯಾರು ನೋಡಿಕೊಳ್ಳುತ್ತಿದ್ದರು, ಆ ಅಧಿಕಾರಿಗಳೆಲ್ಲ ಈಗ ಎಲ್ಲೆಲ್ಲಿದ್ದಾರೆ ಎಂಬುದನ್ನು ನಾವು ಹೇಗೆ ತಿಳಿದುಕೊಳ್ಳುವುದು ? ಈ ದಿವಸ ಅಲ್ಲಿರತಕ್ಕ ಇದರ ಮೇಲುಸ್ತುವಾರಿ ಜನಗಳೆಲ್ಲ ದೊಡ್ಡ ಹೆಗ್ಗಣಗಳಾಗಿದ್ದಾರೆ. ಈ ಬಗ್ಗೆ ಎಲ್ಲರ ಕೈವಾಡವೂ ಇರುತ್ತದೆ. ನಾವೇನಾದರು ಇನ್ಸ್‌ಪೆಕ್ಟರ್ ಜನರಲ್ ಆಫ್ ಪ್ರಿಸನ್ಸ್ ಅವರಿಗೆ ಈ ವಿಚಾರದಲ್ಲಿ ಒಂದು ದೂರನ್ನು ತಿಳಿಸಿದರೆ ಆ ಕೂಡಲೆ ಅಲ್ಲಿಂದ ಒಂದು ಸ್ವಿಚ್ ಅವರ ಕೆಳಗಿನ ಆಫೀಸಿಗೆ ಬೀಳುತ್ತದೆ. ಅನಂತರ ಆ ಆಫೀಸಿನವರು ಮತ್ತೊಂದು ಕಡೆಗೆ ಸ್ವಿಚ್ ಮಾಡುತ್ತಾರೆ. ಸರ್ಕಾರಕ್ಕೆ ದೂರಿತ್ತರೂ ಇಷ್ಟೇನೆ. ಆದರೆ ನನಗೆ ಯಾರು ಯಾರು ಹೀಗೆಲ್ಲ ಮಾಡುತ್ತಿದ್ದಾರೆಂಬ ವಿಚಾರ ಸಂಪೂರ್ಣವಾಗಿ ಗೊತ್ತಿದೆ. ಆದರೆ ಅವರ ಹೆಸರುಗಳನ್ನು ಈಗ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಆದರೆ ಅವರನ್ನೆಲ್ಲ ಅಲ್ಲಿಂದ ತಕ್ಷಣ ಟ್ರಾನ್ಸ್‌ಫರ್ ಮಾಡಬೇಕು. ಇನ್ನು ಈ ಜೈಲುಗಳಿಗೆ ತರಕಾರಿ ಒದಗಿಸಲು ಕೆಲವು ಕಂಟ್ರಾಕ್ಟರುಗಳನ್ನು ಮಾಡಿಕೊಂಡಿರುತ್ತಾರೆ. ಹೇಗಯ್ಯ, ನಿಮಗೆ ಆ ಬಾಬಿನಲ್ಲಿ ಅಷ್ಟುಲಾಭವಿದೆ ಎಂದು ಒಬ್ಬ ಕಂಟ್ರಾಕ್ಟರನ್ನು ಕೇಳಿದ್ದಕ್ಕೆ ಆತ ಒಂದು ಕುಂಬಳಕಾಯಿಗೆ 25-30 ರೂಪಾಯಿಗಳಿಗೆ ಚಾರ್ಜು ಮಾಡುವಂಥ ಅವಕಾಶವಿದೆಯೆಂದು ಹೇಳಿದ, ಅವು ನಿಮ್ಮ ಟೆಂಡರು ಪಟ್ಟಿಯಲ್ಲೂ ಇರುತ್ತವೆ. ಬಟಾಣಿ, ಖಾಲಿ ಫ್ಲವರ್—ಎಲ್ಲವೂ ಇರುತ್ತವೆ. ಆದರೆ, ಒಂದಾಣೆಗೆ ಒಂದು ಪೌಂಡು ಸಿಕ್ಕುವುದನ್ನು ಪೌಂಡಿಗೆ 10 ಆಣೆಯಂತೆ ಹಾಕಿದರೆ ಏನು ಪ್ರಯೋಜನ ? ಕಂಟ್ರಾಕ್ಟರುಗಳ ಬಾಯಿಂದ ಬಂದ ಮಾತು ಇದು. ಸುಮ್ಮನೆ ಹೇಳುತ್ತಿಲ್ಲ. ಈ ರೀತಿ ಸರ್ಕಾರದ ಹಣ ಪೋಲಾದರೆ ವ್ಯಸನವಾಗುವುದಿಲ್ಲವೇ ? ವ್ಯವಹಾರ ಹೀಗೆ ನಡೆಯುತ್ತಿದ್ದರೆ ಸರಕಾರದ ರಕ್ಷಣೆ

ಎಷ್ಟರಮಟ್ಟಿಗಿದೆಯೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳೇ ತಿಳಿದುಕೊಳ್ಳಲಿ. ಈ ದಕ್ಷತೆಯನ್ನು ಯಾವ ರೀತಿ ವರ್ಣನೆಮಾಡಬೇಕೆಂಬುದೇ ನನಗರ್ಥವಾಗುವುದಿಲ್ಲ.

ಆಮೇಲೆ, ಕೂಲಿ. ಗಂಡಾಳಿಗೆ ನಾಲ್ಕು ಆಣೆ ಕೂಲಿಯೆಂದು ವಿಧಿಸಿದ್ದೀರಿ. ಹತ್ತು ವರ್ಷಗಳ ಹಿಂದೆ ಇದನ್ನು ನಿಗದಿಮಾಡಿದ್ದು. ಹಿಂದೆ ಎಂಟು ಆಣೆ ತೆಗೆದುಕೊಳ್ಳುತ್ತಿದ್ದವನು ಈಗ ಒಂದು ರೂಪಾಯಿ ತೆಗೆದುಕೊಳ್ಳುತ್ತಾನೆ. ಹೀಗಿರುವಲ್ಲಿ ಅದೇ ಕೂಲಿಯನ್ನು ಇಂದೂ ಕೊಡುತ್ತಿದ್ದರೆ ಏನು ಹೇಳೋಣ? ವಿಧಾನ ಸೌಧದಲ್ಲಿ ನೂರಾರು ಜನ ಖೈದಿಗಳು engage ಆಗಿದ್ದಾರೆ. ಅವರು ಕಿಂಚಿತ್ತಾದರೂ ಕೆಲಸಮಾಡುತ್ತಿದ್ದಾರೆ, ಸ್ವಲ್ಪ ಸುಧಾರಣೆಯಾಯಿತು ಎಂದು ತಿಳಿದಿದ್ದೆವು. ಆದರೆ ವಾಸ್ತವವಾಗಿ ನೋಡಿದರೆ 1940ನೆಯ ಇಸವಿಯಲ್ಲಿ ಚಂದ್ರಶೇಖರಯ್ಯರ್ ಕಮಿಟಿಯವರು ಏನು ಸುಧಾರಣೆಗಳನ್ನು ಹೇಳಿದ್ದರೋ ಅದರಲ್ಲಿ ಶೇಕಡ 25 ಭಾಗದಷ್ಟು ಕೂಡ ಸುಧಾರಣೆಯಾಗಿಲ್ಲ. ಕಾರಣ ಇಲ್ಲಿ ದಕ್ಷತೆ ಏನೇನೂ ಇಲ್ಲ. ತೇಗದಮರದ ವಿಚಾರವನ್ನೇ ನೋಡಿ. ಅದು ಹೇಗೆ ಹೋಯಿತು ನೋಡಿ. First class ಆದ standard wood ಅದು. ಅವರು ಊಟಮಾಡುವ ತಟ್ಟೆಗಳನ್ನು ನೋಡಿ. ತೆಗೆದುಕೊಂಡು 10 ವರ್ಷವಾಯಿತು. ಅವುಗಳನ್ನು ಯಾವಾಗ ಹರಾಜು ಹಾಕಿದರು? ಅವು ಹೇಗೆ ಮಾಯವಾದುವೋ ಗೊತ್ತಿಲ್ಲ. ಈಗ ಎರಡು ವರ್ಷಗಳ ಕೆಳಗೆ ಕುಂಬಳಗಿಡದ ಎಲೆಯಲ್ಲಿ ಊಟಮಾಡುತ್ತಿರುವುದನ್ನು ನೋಡಿ ಬಹಳ ವ್ಯಸನವಾಯಿತು. ಈಚೆಗೇನೋ ತಟ್ಟೆ ಮುಂತಾದುವುಗಳನ್ನು ತರಿಸಿ ಸ್ವಲ್ಪ ಶ್ರದ್ಧೆಯಿಂದ ಕೆಲಸಮಾಡುತ್ತಿದ್ದಾರೆಂದು ಗೊತ್ತಾಯಿತು. ಕಿಂಚಿತ್ತಾದರೂ ಮಾಡಿದರಲ್ಲಾ ಎಂದು ಸಂತೋಷವಾಯಿತು. ಆದರೂ ಒಟ್ಟಿನಲ್ಲಿ ಸರಿಯಾದ ಆಡಳಿತ ಇಲ್ಲವೆಂದು ಹೇಳುತ್ತೇನೆ.

ಇಲ್ಲಿ ಅಂಕಿಗಳನ್ನು ಕೊಟ್ಟಿದ್ದೀರಿ. ಏನಿದು! 3.77 ಲಕ್ಷ ರೂಪಾಯಿಗಳ ಆದಾಯ, 4.66 ಲಕ್ಷ ರೂಪಾಯಿಗಳ ಖರ್ಚಾಗಿದೆಯೆಂದು ಹೇಳಿದ್ದೀರಿ, Jail manufacturesನಿಂದ, ನೀವು ಕೊಡುವ ಕೂಲಿಯು ಖರ್ಚು ಇಷ್ಟು ಕಡಮೆಯಾಗಿರುವಾಗ, ನಷ್ಟ ಹೇಗೆ ಆಗುತ್ತದೆ? ನಾಲ್ಕಾಣೆ ಕೂಲಿ ಹಾಕಿದರೂ ಶೇಕಡ 30 ರಷ್ಟು ನಷ್ಟವಾಯಿತೆಂದರೆ ಅಲ್ಲಿರುವ ಹೆಗ್ಗಣಗಳೆಲ್ಲವನ್ನೂ ಮೊದಲು ಹಿಡಿದು ಹೊಡೆದು ಹಾಕಬೇಕು. ಇಲ್ಲದಿದ್ದರೆ, ಈ ವರ್ಷ ಶೇಕಡ 30 ನಷ್ಟವಾದರೆ ಮುಂದಿನ ವರ್ಷ 60 ನಷ್ಟವಾಗುವುದು ಸ್ವತಸ್ಸಿದ್ಧ. ನಮ್ಮ ಇಂಡಿಯನ್ ಪಾರ್ಲಿಮೆಂಟರಿ ಡೆಲಿಗೇಷನ್ ರಷ್ಯಾಕ್ಕೆ ಹೋಗಿದ್ದಾಗ ಅಲ್ಲಿನ ಖೈದಿಗಳನ್ನು ಭೇಟಿಮಾಡಿದಾಗ ನಡೆದ ಸಂಭಾಷಣೆ ಬಹಳ ಸ್ವಾರಸ್ಯವಾಗಿದೆ. ಅಲ್ಲಿನ ಸರ್ಕಾರ ಖೈದಿಗಳನ್ನು ಹೇಗೆ ನೋಡಿಕೊಳ್ಳುತ್ತಿದ್ದಾರೆಂಬುದು ಗೊತ್ತಾಗುತ್ತದೆ. ತಮ್ಮ ಅಪ್ಪಣೆ ಪಡೆದು ಅದನ್ನು ಸ್ವಲ್ಪ ಓದುತ್ತೇನೆ. ಅದು ಈ ರೀತಿ ಇದೆ:—"ನಾವು ಒಳಗೆ ಹೋದೆವು. ಅಲ್ಲಿದ್ದ ಮೂವರು ಬಂದಿಗಳು ಎದ್ದು ನಿಂತರು. ಕೋಣೆಯ ಉಭಯ ಪಾರ್ಶ್ವಗಳಲ್ಲೂ ಕಬ್ಬಿಣದ ಮಂಚಗಳಿದ್ದುವು. ಅವು ನೆಲಕ್ಕೆ ಸ್ಕ್ರೂಗಳ ಮೂಲಕ ಬಂಧಿಸಲ್ಪಟ್ಟಿದ್ದುವು. ಒಂದೊಂದು ಮಂಚದ ಮೇಲೂ ಒಂದೊಂದು ಹಾಸಿಗೆ, ಹೊದಿಕೆಯುಳ್ಳ ದಿಂಬು, ಎರಡು ದುಪ್ಪಟಿಗಳು ಮತ್ತು ಒಂದು ಕಂಬಳಿ ಇದ್ದುವು. ಆ ಕೋಣೆಯಲ್ಲಿ 21 ಹಾಸಿಗೆಗಳಿದ್ದುವು. ಪ್ರತಿಯೊಂದು ಹಾಸಿಗೆಯ ಪಕ್ಕದಲ್ಲೂ ಒಂದು ಚಿಕ್ಕ ಮೇಜು ಇದ್ದಿತು.

"ಉಳಿದ ಖೈದಿಗಳೆಲ್ಲಿ"?—ಖಾಲಿ ಹಾಸಿಗೆಗಳನ್ನು ಕಂಡು ಶ್ರೀ ಡಗೆಯವರು ಮೇಲ್ವಿಚಾರಕನನ್ನು ಕೇಳಿದರು.

"ಅವರು ಕ್ಲಬ್ಬಿಗೆ ಹೋಗಿದ್ದಾರೆ, ಅಲ್ಲಿ ಇಂದು ಅವರಿಗೆ ಒಂದು ಹೊಸ ಚಲಚ್ಚಿತ್ರ ತೋರಿಸಲ್ಪಡುತ್ತಿದೆ."

ಅತಿಥಿಗಳು ಬೆರಗಾಗಿ ಒಬ್ಬರ ಮುಖ ಒಬ್ಬರು ನೋಡಿದರು.

"ನಿಮ್ಮ ಹೆಸರೇನು?" ಖೈದಿಗಳಲ್ಲೊಬ್ಬರನ್ನು ಶ್ರೀ ಡಗೆಯವರು ಕೇಳಿದರು.

"ಸ್ಮಿರ್ನೋವ್"

"ನೀವೇಕೆ ಸಿನೀಮಾಕ್ಕೆ ಹೋಗಲಿಲ್ಲ?"

"ಮೈಗೆ ಚೆನ್ನಾಗಿಲ್ಲ"

"ಏನದು, ನೀವು ಓದುತ್ತಾ ಇರೋದು?"

ಸ್ಮಿರ್ನೋವ್ ಕೈಯಲ್ಲಿದ್ದ ಪುಸ್ತಕವನ್ನು ಮುಂದಕ್ಕೆ ಚಾಚಿದರು. ಎಲೆಕ್ಟ್ರೋ-ಮೆಕ್ಯಾನಿಕ್ಸ್ ಮೇಲಿನ ಒಂದು ಪಠ್ಯಪುಸ್ತಕ.

"ಕಾಲೇಜಿಗೆ ಸೇರಬೇಕೆಂದು ನಿಮ್ಮ ಅಭಿಲಾಷೆಯೇ? ಪ್ರವೇಶಿಕ ಪರೀಕ್ಷೆ ಪಾಸುಮಾಡಲು ಸಿದ್ಧತೆ ನಡೆಸುತ್ತಿರುವಿರೇನೋ"

"ಹೌದು ನನ್ನ ಶಿಕ್ಷಾವಧಿ ತೀರಿದವೇಲೆ ಎಲೆಕ್ಟ್ರೋಟೆಕ್ನಿಕಲ್ ಶಾಲೆಗೆ ಹೋಗಲು ಇಚ್ಛಿಸಿದ್ದೇನೆ"

ಉಪಾಧ್ಯಕ್ಷರು.—ಎಲ್ಲಿಂದ ಬಂದ ರಿಪೋರ್ಟ್, ಅದು?

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—Report of the Indian Delegation which visited Russia.

ಅಲ್ಲಿನ comforts ಖೈದಿಗಳಿಗೇನಿದೆ ಎಂಬುದನ್ನು ಒಬ್ಬ ಖೈದಿಯೇ ಹೇಳಿದ್ದಾಳೆ. "ನನಗೆ ಇಲ್ಲಿ ಏನೂ ಕೊರತೆಯಿಲ್ಲ. ತಿನ್ನಲು ಸಾಕಷ್ಟಿದೆ, ಕೆಲಸವಿದೆ. ಕೆಲಸಕ್ಕೆ ತಕ್ಕಷ್ಟು ಹಣ ನನ್ನ ಲೆಕ್ಕದಲ್ಲಿದೆ. ಅದನ್ನು ನನ್ನ ಸಂಸಾರಕ್ಕೂ ವರ್ಗಾಯಿಸಬಹುದು. ನನಗೆ ಬೇಕಾದಂಥ ಊಟ-ತಿಂಡಿ ಮತ್ತಿತರ ಸಾಮಾನುಗಳನ್ನು ಸೆರೆಮನೆಯ ಅಂಗಡಿಗಳಲ್ಲಿ ವಿಶೇಷ ಕೂಪನ್‌ಗಳ ಮೇಲೆ ಕೊಳ್ಳಬಹುದು. ಪುಸ್ತಕ, ಪತ್ರಿಕೆಗಳನ್ನು ಓದುತ್ತೇನೆ. ಚಲಚ್ಚಿತ್ರ, ಟಿ. ವಿ. ಪ್ರಸಾರಗಳನ್ನು ನೋಡುತ್ತೇನೆ. ಇಷ್ಟೆಲ್ಲ ಇದ್ದರೂ, ಅಯ್ಯೋ, ಸ್ವಾತಂತ್ರ್ಯಕ್ಕಾಗಿ ನನ್ನ ಮನಸ್ಸು ಎಷ್ಟು ಹಂಬಲಿಸುತ್ತದೆ" ಎಂದಳು, ಋನ್ನೈದ ಕ್ಯಾಥೊಕ್ವಾ ಕಂಬನಿ ತುಂಬಿ.

ಇದನ್ನು ನೋಡಿದರೆ ನಮಗೆ ಗೊತ್ತಾಗುತ್ತದೆ, ಅಲ್ಲಿನ ಬಂದಿಖಾನೆಗಳಲ್ಲಿ ಯಾವ ತೆರದ ಅನಾನುಕೂಲವೂ ಇಲ್ಲವೆಂಬುದು. ಮತ್ತೆ ನೋಡಿದರೆ, ರಷ್ಯ ದೇಶದಲ್ಲಿ ಮಿಕ್ಕೆಲ್ಲ ದೇಶಗಳಿಂದಲೂ ಅತಿ ಕಠಿಣ ಶಿಕ್ಷೆಗಳು ವಿಧಿಸಲ್ಪಡುತ್ತವೆಯೆಂದು ನಮಗೆ ಗೊತ್ತು. ಕಮ್ಯೂನಿಸ್ಟ್ ಸರ್ಕಾರ ಇಷ್ಟರಮಟ್ಟಿಗೆ ಮಾಡಿರುವಾಗ ನಾವೇನು ಮಾಡಿದ್ದೇವೆ? ನಾವು ಕೊಡುತ್ತಿರುವ ಲಕ್ಷಾಂತರ ರೂಪಾಯಿಗಳೂ ಕೂಡ ಪೋಲಾಗುತ್ತಿವೆ. ಕೊಟ್ಟ ದುಡ್ಡು ಸಾರ್ಥಕವಾಗುತ್ತಿಲ್ಲ. ಸುಮ್ಮನೆ ಹಾಗಿದೆ, ಹೀಗಿದೆ, ಏನೋ ಸುಧಾರಣೆ ಮಾಡುತ್ತೇವೆ ಎನ್ನುತ್ತೀರಿ. ರಾಜಕೀಯ ಖೈದಿಗಳಿಗೆ ಈಚೆಗೆ A ಕ್ಲಾಸ್‌ಖೈದಿಗಳಿಗಿಂತ ಜಾಸ್ತಿ ಕೊಡುತ್ತೇವೆಂದು ಹೇಳಿದಿರಿ. ಯಾವುದೋ political object ಮೇಲೆ ಅವರನ್ನು arrest ಮಾಡಿರುವಾಗ, 107ನೆಯ ಸೆಕ್ಷನ್ನನ್ನೇಕೆ ಪ್ರಯೋಗಮಾಡಿದಿರಿ? ಕಾಂಗ್ರೆಸ್ಸಿನವರ ಹೊಡೆದಾಟಮಾಡಿದಾಗ ಕೂಡ 107ನೆಯ ಸೆಕ್ಷನ್ನನ್ನು ಹಾಕಲಿಲ್ಲ ಎಂದ ಮೇಲೆ; ಈಗ 107ನೆಯ ಸೆಕ್ಷನ್ನನ್ನು ಪ್ರಯೋಗಮಾಡಿದೆಯೆಂದರೆ ಏನೋ ಆಳವಾದ

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ಉದ್ದೇಶವಿದೆಯೆಂದು ಗೊತ್ತಾಗುತ್ತದಲ್ಲವೇ ? ಅವರು ಚಳವಳಿ ಹೂಡಿರುವುದು ಒಂದು ತತ್ವದ ಸಾಧನೆಗಾಗಿ. ಅಂಥವರಮೇಲೆ 107ನೆಯ ಸೆಕ್ಷನ್ ಹಾಕುವುದು ಯಾವ ನ್ಯಾಯ ? ಬ್ರಿಟಿಷರೂಕೂಡ ಈ ರೀತಿ treat ಮಾಡದಿರುವಾಗ, ನೀವು ಪ್ರಜಾಪ್ರಭುತ್ವದಲ್ಲಿ ಇಷ್ಟು ಕಠಿಣ ರೀತಿಯಲ್ಲಿ ವರ್ತಿಸುವುದಾದರೆ, ಬೇರೆ ಇನ್ನಾವ ಪಾರ್ಟಿಗಳೂ ಇರಕೂಡದು, ಅವುಗಳನ್ನು ಮಟ್ಟಹಾಕಬೇಕೆಂಬ ಉದ್ದೇಶದಿಂದ ಮಾಡಿರುವಂತೆ ಕಾಣುತ್ತದೆ.

ಕೋರ್ಟುಗಳ ವಿಚಾರದಲ್ಲಿ ಮಾನ್ಯ ಮಿತ್ರರುಗಳು ಈಗಾಗಲೇ ಮಾತನಾಡಿದ್ದಾರೆ. ಈಚೆಗೆ ಸರ್ಕಾರದವರು ಪಬ್ಲಿಕ್ ಪ್ರಾಸಿಕ್ಯೂಟರುಗಳನ್ನು ನೇಮಕ ಮಾಡಿರುವುದನ್ನು ನೋಡಿದರೆ, ಏನೋ ದಾಕ್ಷಿಣ್ಯ, ಅಭಿಮಾನದಮೇಲೆ ಮಾಡಿದ್ದಾರೆಂದು ಕಾಣುತ್ತದೆ. ಅವರು ಸರ್ಕಾರಿ ಕೇಸುಗಳನ್ನು ಎಷ್ಟುಮಟ್ಟಿಗೆ conduct ಮಾಡಿದ್ದಾರೆ, ಎಷ್ಟು ಖೂನಿ ಮೊಕದ್ದಮೆಗಳನ್ನು ನಡೆಸಿದ್ದಾರೆಂಬುದನ್ನು ನೋಡಿದ್ದಾರೆಯೇ ? ನಿರ್ದಾಕ್ಷಿಣ್ಯವಾಗಿ Barನಲ್ಲಿ ಉತ್ತಮ ಲಾಯರಾಗಿರುವವರನ್ನು, ಸರ್ಕಾರಿ ಕೆಲಸಕ್ಕೆ ಬರುವುದಕ್ಕೆ ಲಾಯಕ್ಕಾಗಿದ್ದರೆ-ಅಂಥವರನ್ನು ತೆಗೆದುಕೊಳ್ಳಿ. ನಮ್ಮ ಚಿಕ್ಕನಾಯ್ಕನಹಳ್ಳಿ ಮುನಿಸಿಪಾಲಿಟಿಯ ಒಂದು ಕೇಸು ಕೆಳಗಿನ ಕೋರ್ಟಿನಲ್ಲಿ ನಮ್ಮಂತೆ ತೀರ್ಮಾನವಾದುದು ಪಬ್ಲಿಕ್ ಪ್ರಾಸಿಕ್ಯೂಟರು ಸಂಬಂಧಪಟ್ಟ ದಾಖಲೆಗಳನ್ನು ಹಾಜರ್‌ಪಡಿಸದಿದ್ದ ಕಾರಣ ಕೊನೆಗೆ ಬಿದ್ದು ಹೋಯಿತು. ನ್ಯಾಯವನ್ನು ಪ್ರತಿನಿಧಿಸುವ, ನ್ಯಾಯವನ್ನು ಎತ್ತಿಹಿಡಿಯುವ ಸರ್ಕಾರಿ ಪ್ರಾಸಿಕ್ಯೂಟರ್ ಲಾಯಕ್ಕಾದವನಾಗಿದ್ದರೆ ಕೇಸುಗಳು ನಿಲ್ಲುತ್ತವೆ. ಆದ್ದರಿಂದ ಈ ರೀತಿ ಮುಂದೆ ನೇಮಿಸಿಕೊಳ್ಳಬೇಕಾದರೆ..........

ಶ್ರೀ ಬಿ. ವೈಕುಂಠಬಾಳಿಗ.—ಆ ಕೇಸಿನ ನಂಬರ್ ಏನು ?

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಚಿಕ್ಕನಾಯ್ಕನಹಳ್ಳಿ ಮುನಿಸಿಪಲ್ ಕೇಸನ್ನು ಪಬ್ಲಿಕ್ ಪ್ರಾಸಿಕ್ಯೂಟರ್ ತೆಗೆದು ಕೊಂಡು ಹಾಳುಮಾಡಿದರು.

ಶ್ರೀ ಬಿ. ವೈಕುಂಠಬಾಳಿಗ.—ಪಬ್ಲಿಕ್ ಪ್ರಾಸಿಕ್ಯೂಟರು ಮುನಿಸಿಪಾಲಿಟಿ ಕೇಸ್ ತೆಗೆದು ಕೊಂಡು ಹಾಳು ಮಾಡಿದ ಕೇಸು ಯಾವುದೆಂಬುದನ್ನು ಹೇಳುತ್ತೀರಾ ?

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಚಿಕ್ಕನಾಯಕನಹಳ್ಳಿ ಮುನಿಸಿಪಾಲಿಟಿಗೆ ಸಂಬಂಧಪಟ್ಟ ಡಿಸ್ಟ್ರಿಕ್ಟ್‌ಬೋರ್ಡ್ ಮುನಿಸಿಪಾಲಿಟಿಗಳ ಕೇಸುಗಳನ್ನು ನಡೆಸುವುದಕ್ಕೆ ತಾವು ಯಾರನ್ನು ನೇಮಿಸುತ್ತೀರಿ ?

ಶ್ರೀ ಬಿ. ವೈಕುಂಠಬಾಳಿಗ.—Criminal caseಗಳನ್ನು conduct ಮಾಡುವುದಕ್ಕೆ ಸೆಷನ್ಸ್‌ನಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್ ಇರುತ್ತಾರೆ. ಸಿವಿಲ್ ಕೇಸ್‌ಗಳಲ್ಲಾದರೆ Government pleader ಇರುತ್ತಾರೆ.

Sri C. K. RAJAIAH SETTY.—The Land Acquisition Officer is the only authority to appeal and when he appeals, he appoints the Government Pleader.

ಹೀಗೆ ಜುಡಿಷಿಯಲ್ ಇಲಾಖೆಗೆ ನೇಮಕಮಾಡುವಾಗ ದಕ್ಷತೆ ಇಲ್ಲದಿದ್ದರೆ ಅಲ್ಲಿ ಕೆಲಸ ಚೆನ್ನಾಗಿ ನಡೆಯುವುದಿಲ್ಲ. ಇವೊತ್ತಿನ ದಿವಸ ಒಬ್ಬ ಸಾಮಾನ್ಯ ಪ್ರಜೆ ಕೋರ್ಟಿಗೆ ಹೋದರೆ ಅವನ ನ್ಯಾಯವಾದ ಕೇಸೂ ಕೂಡ ದಕ್ಷತೆಯಿಲ್ಲದೆ ಇರುವುದರಿಂದ ಯಶಸ್ವಿಯಾಗದ ಸಂಭವವಿರುತ್ತದೆ. ಆದುದರಿಂದ ಈ ವಿಷಯದಲ್ಲಿ ನನ್ನ ಸಲಹೆ ಏನೆಂದರೆ, ಸರಕಾರ ನ್ಯಾಯವನ್ನು ಎತ್ತಿ ತೋರಿಸಬೇಕಾಗಿದ್ದರೆ ದಕ್ಷತೆಯಿರುವ ವ್ಯಕ್ತಿಗಳನ್ನು ನೇಮಿಸಬೇಕು. ಇದರಿಂದ ಸರಕಾರದ ಗೌರವ ಉಳಿಯುತ್ತದೆ. ಯಾವುದೋ ಒಂದು ದಾಕ್ಷಿಣ್ಯಕ್ಕೊಳಗಾಗಿ ಅಥವಾ ಯಾವುದೋ ಒತ್ತಾಯಕ್ಕೊಳಗಾಗಿ ದಕ್ಷತೆಯಿಲ್ಲದವರನ್ನು ಇಂತಹ ಹುದ್ದೆಗಳಿಗೆ ನೇಮಿಸಿದರೆ ಬಡಜನಗಳಿಗೆ ಸರಿಯಾದ ನ್ಯಾಯ ದೊರಕುವುದಿಲ್ಲ. ಇದಲ್ಲದೆ ಇದರಿಂದ ಸರಕಾರದ ಗೌರವವೂ ಹೋಗುತ್ತದೆ.

ಹಿಂದೆ ಮಲ್ಲಪ್ಪ ಕಮಿಟಿಯು ತನ್ನ ವರದಿಯನ್ನು ಸರಕಾರಕ್ಕೆ ಒಪ್ಪಿಸಿತ್ತು. ಅದರಂತೆ ಯಾವ ಯಾವ ಕಡೆಗಳಲ್ಲಿ ಎಷ್ಟೆಷ್ಟು ಮುನ್ಸೀಫ್ ಮತ್ತು ಮ್ಯಾಜಿಸ್ಟ್ರೇಟು ಕೋರ್ಟುಗಳಿರಬೇಕು, ಯಾವ ಯಾವ ಕಡೆ ಬರಿಯ ಮುನ್‌ಸೀಫ್ ಕೋರ್ಟಿರಬೇಕು ಯಾವ ಯಾವ ಪ್ರದೇಶದಲ್ಲಿ ಮ್ಯಾಜಿಸ್ಟ್ರೇಟು ಕೋರ್ಟಿರಬೇಕು ಎಂಬುದರ ಬಗ್ಗೆ ಸಮಿತಿಯವರು ಹಿಂದೆಯೇ ಸಲಹೆಗಳನ್ನು ಕೊಟ್ಟಿದ್ದಾರೆ. ಈಗ ಕೆಲವು ಕೋರ್ಟುಗಳಲ್ಲಿ ಕೆಲಸ ಬಹಳ ಜಾಸ್ತಿಯಾಗಿದೆ. ಉದಾಹರಣೆಯಾಗಿ ಈಗ ತಿಪಟೂರಿನಲ್ಲಿರುವ ಕೋರ್ಟಿನಲ್ಲಿ ಒಂದು ವರ್ಷದಿಂದ ಎರಡು ವರ್ಷಗಳವರೆಗಿರುವ ಎಷ್ಟೋ ಕೇಸುಗಳು ಇನ್ನೂ ಫೈಸಲೇ ಆಗಿಲ್ಲ. ಒಂದು ದೊಡ್ಡ ಹೊಡೆದಾಟಕ್ಕೆ ಸಂಬಂಧಿಸಿದ ಕೇಸು ಇನ್ನೂ, ಎಂದರೆ ಸುಮಾರು ಒಂದೂವರೆ ವರ್ಷಗಳಿಂದ, ನಡೆಯುತ್ತಿದೆ. ಪ್ರತಿಹೀರಂಗಿನಲ್ಲೂ ಐದಾರು ಸಾಕ್ಷಿಗಳನ್ನು ಕರೆದು ಕೊಂಡು ಬಂದು ಅವರಿಗಾಗಿ 15 ರಿಂದ 20 ರೂಪಾಯಿಗಳವರೆಗೆ ಖರ್ಚುಮಾಡಿದಾಗ್ಯೂ ಸರಿಯಾದ ನ್ಯಾಯ ದೊರಕದಿದ್ದರೆ ಬಡವನಾಗಿರುವವನಿಗೆ ಹೇಗೆ ಅನುಕೂಲವಾಗುತ್ತದೆ ? ತಾವೇ ಯೋಚಿಸಿ. ಹೀಗೆ ಎಷ್ಟೋ ಕಡೆಗಳಲ್ಲಿ ಕೇಸುಗಳು ಬಹಳ ಜಾಸ್ತಿಯಾಗಿವೆ ಇದು ತಮಗೂ ಗೊತ್ತಿದೆ. ಎಷ್ಟು ಕೇಸುಗಳನ್ನು ಸಿವಿಲ್ ಕೋರ್ಟುಗಳು ತೀರ್ಮಾನಮಾಡಬೇಕು, ಎಷ್ಟು ಕೇಸುಗಳನ್ನು ಮ್ಯಾಜಿಸ್ಟ್ರೇಟ್ ಕೋರ್ಟುಗಳು ತೀರ್ಮಾನಮಾಡಬೇಕು, ಎನ್ನುವುದನ್ನು ವಿಚಾರಮಾಡಿ ನೋಡಿದರೆ ಕೆಲಸ ಜಾಸ್ತಿಯಾಗಿದೆ ಎನ್ನುವುದು ತಿಳಿಯುತ್ತದೆ. ಅದರಂತೆ ಹೆಚ್ಚಿಗೆ ಕೋರ್ಟುಗಳನ್ನು ಕೊಡಬೇಕು. ಹೀಗೆ ಇವೊತ್ತಿನ ದಿನ ತಿಪಟೂರಿನಲ್ಲಿ ಸಾವಿರಾರು ಕೇಸುಗಳು pending ಆಗಿವೆ. ಮಲ್ಲಪ್ಪ ಕಮಿಟಿಯವರು ಹೇಳಿರುವಂತೆ ತಾವೂ ವಿಮರ್ಶೆಮಾಡಿ ಇಂತಹ ಕಡೆಗಳಲ್ಲಿ ಬೇರೆ ಕೋರ್ಟುಗಳನ್ನು ನೇಮಿಸುವುದರಿಂದ ನ್ಯಾಯ ಸುಲಭವಾಗಿ ದೊರೆಯುತ್ತದೆ ಮತ್ತು ಜನರಿಗೂ ತೃಪ್ತಿಯಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಬೇರೆ ಬೇರೆ ಕೋರ್ಟುಗಳನ್ನು ಕೊಡುವುದಕ್ಕೆ ಒಪ್ಪದಿದ್ದರೆ ಈಗ ನಮ್ಮ ಮುಂದಿರುವ ನ್ಯಾಯಾಂಗದ ಬೇಡಿಕೆಯನ್ನು ಒಪ್ಪುವುದಕ್ಕಾಗುವುದಿಲ್ಲ.

ಆದರೆ ಒಂದು ವಿಚಾರಕ್ಕೆ ನಾನು ಸಂತೋಷ ಸೂಚಿಸಬೇಕಾಗಿದೆ. ಅದೇನೆಂದರೆ, ಹೊರಗಡೆಯಿಂದ ನಮ್ಮ ಹೈಕೋರ್ಟಿಗೆ ಚೀಫ್ ಜಡ್ಜಿಗಳನ್ನು ನೇಮಿಸಿರುವುದರಿಂದ ನಮ್ಮ ಹೈಕೋರ್ಟಿನ ಗೌರವ ಪ್ರತಿಷ್ಠೆಗಳು ಉಳಿಯಲು ಅನುಕೂಲವಾಗಿದೆ. ಹಿಂದೆ ಡಿಸ್ಟ್ರಿಕ್ಟು ಕೋರ್ಟುಗಳಲ್ಲಿ, ನ್ಯಾಯಾಧೀಶರಾಗಿದ್ದವರು ಎರಡು ಗಂಟೆಗೆ ಕೋರ್ಟಿಗೆ ಬರುತ್ತಿದ್ದರು. ಈಗ ಈ ನೂತನ ಜಡ್ಜಿಗಳು ಬಂದನಂತರ ಡಿಸ್ಟ್ರಿಕ್ಟು ಕೋರ್ಟುಗಳಲ್ಲಿ ಮತ್ತು ಇತರ ಕೋರ್ಟುಗಳಲ್ಲಿ ಕಾಲಕ್ಕೆ ಸರಿಯಾಗಿ 11 ಗಂಟೆಗೇ ಕೋರ್ಟಿಗೆ ಬರುತ್ತಿದ್ದಾರೆ. ಇದರಿಂದ

ಜಾಸ್ತಿ ಕೇಸುಗಳನ್ನು ತೆಗೆದುಕೊಳ್ಳಲು ಅನುಕೂಲವಾಯಿತು. ಹೀಗೆ ಈಗ ಅನೇಕ ವರ್ಷಗಳಿಂದ ತೀರ್ಮಾನವಾಗದಿರುವ ಕೇಸುಗಳನ್ನು ಈಗ ತೀರ್ಮಾನ ಮಾಡುತ್ತಿರುವುದು ನಿಜವಾಗಿಯೂ ಸಂತೋಷದ ವಿಚಾರ. ನಮ್ಮ ಸರಕಾರಕ್ಕೇ ಮುಖ್ಯ ನ್ಯಾಯಾಧೀಶರನ್ನು ನೇಮಿಸುವ ಈ ಅಧಿಕಾರ ಇದ್ದಿದ್ದರೆ ಇಂತಹ ಅವಕಾಶ ಸಿಕ್ಕುತ್ತಿತ್ತೋ ಇಲ್ಲವೋ ಎಂದು ಅನುಮಾನಪಡಬೇಕಾಗಿದೆ.

Just because a non-Mysorean has come, the Court has got some prestige. ಇಷ್ಟನ್ನು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ, 1958–1959ನೆಯ ಸಾಲಿನಲ್ಲಿ ನ್ಯಾಯಾಂಗದ ಬಾಬಿಗಾಗಿ ನಮ್ಮ ಮುಂದೆ ಇಟ್ಟಿರತಕ್ಕ 69,58,000 ರೂಪಾಯಿಗಳ ಬಡ್ಜೆಟ್ಟಿಗೆ ನನ್ನ ಅನುಮೋದನೆಯನ್ನು ಕೊಡುತ್ತ ಒಂದೆರಡು ಸಲಹೆಗಳನ್ನು ಸೂಚನೆ ಮಾಡಲಚ್ಛಿಸುತ್ತೇನೆ.

ಸ್ವಾಮೀ, ಸಂಸ್ಥಾನದಲ್ಲಿ ಜೈಲುಗಳನ್ನ ನಡೆಸಲು ಮತ್ತು ಜೈಲುಗಳನ್ನು ನೋಡಿಕೊಳ್ಳುವುದಕ್ಕಾಗಿ 34,63,000 ರೂಪಾಯಿಗಳನ್ನು ಖರ್ಚುಮಾಡುವುದೇನೋ ಸರಿ. ಆದರೆ ಇಷ್ಟೊಂದು ಸಾರ್ವಜನಿಕರ ಹಣವನ್ನು ವಿನಿಯೋಗಿಸುತ್ತಿರುವಾಗ ಈ ಜೈಲಿನಲ್ಲಿರುವ ಖೈದಿಗಳ ಮನಸ್ಸನ್ನು ಪರಿವರ್ತನೆಯಾಗುವಂತೆ ಮಾಡಿ ಸತ್ಪ್ರಜೆಗಳಾಗುವಂತಹ ಸುಧಾರಣೆಗಳೇನೂ ಆಗಿಲ್ಲ. ಹೀಗೆ ಇದನ್ನು ನೋಡುವಾಗ ಮನಸ್ಸಿಗೆ ಸುಂಬಾ ನಿರಾಶೆಯಾಗುತ್ತದೆ. ಸಮಾಜದಲ್ಲಿರತಕ್ಕ ಏರುಪೇರುಗಳು, ದರಿದ್ರಾವಸ್ಥೆ ಮತ್ತು ಇನ್ನಿತರ ಕಾರಣಗಳಿಂದ ಅನೇಕ ಜನರು ಜೈಲುಗಳಿಗೆ ಹೋಗುತ್ತಾರೆ. ಹೀಗೆ ಹೋಗುವ ಖೈದಿಗಳಲ್ಲಿ ಮಹಿಳೆಯರೂ ಮತ್ತು ಪುರುಷರೂ ಇರುತ್ತಾರೆ. ಬಹಳವಾಗಿ ಈ ಖೈದಿಗಳಷ್ನೆಕಿ ತಿಳಿವಳಿಕೆಯಿಲ್ಲದ ಸಣ್ಣ ವಯಸ್ಸಿನ ಹುಡುಗರೂ ಇರುತ್ತಾರೆ. ಇವರ ಮನಸ್ಸು ಪರಿವರ್ತನೆಯಾಗುವಂತಹ ಶಿಕ್ಷಣವನ್ನು ಕೊಟ್ಟು ಅವರು ಮುಂದೆ ಜೈಲಿನಿಂದ ಹೊರಗೆ ಬಂದ ಮೇಲೆ ಅವರೇ ಸ್ವತಃ ತಮ್ಮ ಕಾಲಿನ ಮೇಲೆ ನಿಂತು ಜೀವನವನ್ನು ನಡೆಸುವಂತಹ ಸುಧಾರಣೆಗಳಾವವನ್ನೂ ಮಾಡಿಲ್ಲ ಎಂದು ಹೇಳಬೇಕಾಗಿದೆ. ಮಾನ್ಯ ವಿದ್ಯಾ ಮಂತ್ರಿಗಳು ಈಚೆಗೆ ಒಂದು ಸೂಚನೆಯನ್ನು ಕೊಟ್ಟರು. ಎಲ್ಲ ಕಡೆಗಳಲ್ಲಿಯೂ ಮಲ್ಟಿ ಪರ್ಪಸ್ ಸ್ಕೂಲುಗಳನ್ನು ತೆರೆಯಬೇಕೆಂದು ಅವರು ಸೂಚನೆಯನ್ನು ಕೊಟ್ಟರು. ಇಂತಹ ಶಿಕ್ಷಣವನ್ನು ಜೈಲುಗಳಲ್ಲಿ ಜಾರಿಗೆ ತೆಗೆದುಕೊಂಡು ಬಂದು ಅಲ್ಲಿರುವ ಬಾಲ ಖೈದಿಗಳಿಗೆ ಶಿಕ್ಷಣವನ್ನು ಕೊಡಿಸಿ, ಅವರು ಜೈಲಿನಿಂದ ಹೊರಗಡೆ ಬಂದಾಗ ಉತ್ತಮವಾದ ಜೀವನವನ್ನು ಮಾಡತಕ್ಕ ಏರ್ಪಾಡು ಮಾಡಬೇಕು. ಇನ್ನು ಮಹಿಳೆಯರ ಟ್ರೇನಿಂಗಿನ ವಿಚಾರವಾಗಿ ಹೇಳಬೇಕಾದರೆ, ಅವರ ಸಂಖ್ಯೆ ಹೆಚ್ಚಾಗಿಲ್ಲದಿದ್ದರೂ ಸಾಕಷ್ಟು ಪ್ರಮಾಣದಲ್ಲಿದೆ. ಅವರುಗಳಿಗೆ ಈಗ ಬೆಂಗಳೂರಿನಲ್ಲಿರುವ ಸೆಂಟ್ರಲ್ ಜೈಲಿನಲ್ಲಿ ಕೈಗಾರಿಕೆಗಳಲ್ಲಿ ಎಂದರೆ, ನೇಯ್ಗೆ ಮತ್ತು ಇತರ ಕೈಗಾರಿಕೆಗಳಲ್ಲಿ ತರಬೇತನ್ನು ಕೊಡುತ್ತಿದ್ದಾರೆ. ಅವರುಗಳು ತರಬೇತನ್ನು ಪಡೆದು ಜೈಲುಗಳಿಂದ ಬಿಡುಗಡೆಯಾಗಿ ಹೊರಗಡೆ ಇಂತಹ ಕೈಗಾರಿಕೆಗಳನ್ನು ತಾವೇ ಸ್ವತಃ ಮಾಡಿಕೊಳ್ಳುವುದಕ್ಕೆ ಅನುಕೂಲಿಸುವಂತೆ ಸ್ವಲ್ಪ ಮಟ್ಟಿಗೆ ಧನ ಸಹಾಯವನ್ನು ಕೊಟ್ಟು ಅದನ್ನು ಸುಲಭ ಕಂತುಗಳಲ್ಲಿ ವಾಪಸ್ಸು ಪಡೆಯುವಂತೆ ಏರ್ಪಾಡನ್ನು ಮಾಡಿದರೆ ಇಂತಹ ಮಹಿಳೆಯರಿಗೆ ಬಹಳವಾದ ಅನುಕೂಲವಾಗುತ್ತದೆ. ಈ ರೀತಿಯಾದ ಏರ್ಪಾಡನ್ನು ಮಾಡಬೇಕಾದ ಅಗತ್ಯವಿದೆ. ಈಗೇನೋ ಕೆಲಸವನ್ನು ಜೈಲುಗಳಲ್ಲಿ ಒದಗಿಸುತ್ತಿದ್ದಾರೆ. ಇದರಲ್ಲಿ ನೇಯ್ಗೆ ಕೈಗಾರಿಕೆ, ಬೆತ್ತ ಹೆಣೆಯುವುದು ಮತ್ತು ಇತರ ಕೈಗಾರಿಕೆಗಳನ್ನು ಮಾಡುವುದರಲ್ಲಿ ಹೆಚ್ಚಿನ ಗಮನ ಕೊಡುತ್ತಿದ್ದಾರೆ. ಆದರೆ ಈ ಕೈಗಾರಿಕೆಗಳನ್ನು ಮಾಡುವಾಗ ನಾಲ್ಕಾಣೆಯಂತೆ ಮಾತ್ರ ಇವರಿಗೆ ಸಂಭಾವನೆ ರೂಪದಲ್ಲಿ ಕೊಡುತ್ತಿದ್ದಾರೆ ಎಂದು ಕೇಳಿದ್ದೇನೆ. ಹೀಗೆ ಕೇವಲ ನಾಲ್ಕಾಣೆಯನ್ನು ಕೊಡುವುದರಿಂದ ಈ ಕೆಲಸವನ್ನು ಮಾಡುವವರಿಗೆ ಅದರಲ್ಲಿ ಅಭಿರುಚಿ ಇರುವುದಿಲ್ಲ ಮತ್ತು ಇದರಿಂದಾಗಿ ಶ್ರದ್ಧೆಯಿಂದ ಕೆಲಸ ಮಾಡುವುದಕ್ಕಾಗುವುದಿಲ್ಲ. ಈ ರೀತಿಯಾಗಿ ಶಿಕ್ಷಣದಲ್ಲಿ ಸಾಕಷ್ಟು ಪರಿಶ್ರಮಹೊಂದಿ ಸ್ವತಃ ಅವರೇ ತಯಾರು ಮಾಡುವ ಶಕ್ತಿಯನ್ನು ಪಡೆದ ಮೇಲೆ ಅವರುಗಳಿಗೆ ಅವರು ಮಾಡಿದ ಕೆಲಸಕ್ಕೆ ಹೊರಗಡೆಯಲ್ಲಿ ಏನು ಕೂಲಿ ದೊರೆಯುತ್ತದೆಯೋ ಅಷ್ಟು ಕೂಲಿಯನ್ನು ಎಂದರೆ ಸುಮಾರು ಮೂರೂವರೆ ರೂಪಾಯಿಗಳಿಂದ ನಾಲ್ಕು ರೂಪಾಯಿಗಳವರೆಗೆ, ಕೊಟ್ಟರೆ ಅನುಕೂಲ ವಾಗುತ್ತದೆ. ಹೀಗೆ ಮಾಡಿದ ಕೆಲಸಕ್ಕೆ ಎಷ್ಟು ಹಣ ಬೇಕಾಗುತ್ತದೆಯೋ ಅಷ್ಟನ್ನು ಉಪಯೋಗಿಸಿಕೊಂಡು ಉಳಿಕೆಯಾದ ಹಣವನ್ನು ಅವರ ಸಂಸಾರಕ್ಕೆ ಉಪಯೋಗಿಸಿದ ಪಕ್ಷದಲ್ಲಿ ಅವರಲ್ಲಿ ಕೆಲಸ ಮಾಡಲು ಒಂದು ರೀತಿಯಾದ ಶ್ರದ್ಧೆ ಬರುತ್ತದೆ, ಉತ್ಸಾಹ ಬರುತ್ತದೆ ಮತ್ತು ಅವರ ಮನೆಯವರು ಬದುಕಿಕೊಳ್ಳಲೂ ಒಂದು ಮಾರ್ಗವಾಗುವುದು. ಈ ರೀತಿಯಾದ ಏರ್ಪಾಡುಗಳನ್ನು ಮಾಡಿ ಸಹಾಯ ಮಾಡಬೇಕಾಗಿದೆ. ಇದನ್ನು ಮಾಡದೆ ಹೋದರೆ ಜೈಲಿನ ಸುಧಾರಣೆ ಎಂದೆಂದಿಗೂ ಆಗುವುದಿಲ್ಲ ಎಂದು ನನಗೆನಿಸುತ್ತದೆ.

ಇನ್ನು ಜೈಲಿನ ಮೇಲ್ವಿಚಾರಣೆಯನ್ನು ನಡೆಸತಕ್ಕಂಥವರಿಗೆ ಮತ್ತು ಅಧಿಕಾರಿಗಳಿಗೆ ಜೈಲುವಾಸಿಗಳ ಮನಸ್ಸು ಪರಿವರ್ತನೆ ಆಗುವಂತೆ ಮಾಡಲು ಶಿಕ್ಷಣ ಕೊಡುವಂಥಾದ್ದು ಇಲ್ಲದೆ ಹೋಗಿದೆ. ಇದು ಬಹಳ ಅತ್ಯಗತ್ಯವಾಗಿ ಆಗಬೇಕು. ವಿದೇಶಗಳ ವಿಶ್ವವಿದ್ಯಾನಿಲಯಗಳಲ್ಲಿ ಮಾನಸಿಕ ಪರಿವರ್ತನೆಗೆ ಸಂಬಂಧಪಟ್ಟ ವಿದ್ಯಾಭ್ಯಾಸ ಕ್ರಮವನ್ನು ಎರಡು ವರ್ಷ ಏರ್ಪಡಿಸಿ ಅದರಲ್ಲಿ ಉತ್ತೀರ್ಣರಾದವರಿಗೆ ಪದವಿಯನ್ನು ಕೊಡುವ ಏರ್ಪಾಡುಮಾಡಿದ್ದಾರೆಂದು ಕೇಳಿದ್ದೇನೆ. ಅಂಥ ಶಿಕ್ಷಣ ನಮ್ಮ ದೇಶದಲ್ಲಿಯೂ ಜಾರಿಗೆ ಬರಬೇಕು. ತಮ್ಮ ಶ್ರದ್ಧೆಯಿಂದ ಜೈಲುವಾಸಿಗಳ ಮನೋವೃತ್ತಿಯನ್ನು ಅರಿತು ಅವರ ಮನಸ್ಸಿಗೆ ಹಿಡಿಯುವಂತೆ ಹೇಳಿ ದೇಶದ ಸತ್ಪ್ರಜೆಗಳಾಗುವಂತೆ ಅವರಿಗೆ ಜ್ಞಾನ, ಬುದ್ಧಿ, ಬರುವಂತೆ ಮಾಡುವ ಶಕ್ತಿ ಜೈಲು ಅಧಿಕಾರಿಗಳಿಗೆ ಬರಬೇಕು. ಈ ರೀತಿ ಏರ್ಪಾಡನ್ನು ಮಾಡಬೇಕು ಎಂದು ಸೂಚಿಸಿ ಈ ಬೇಡಿಕೆಯನ್ನು ಅನುಮೋದಿಸುತ್ತೇನೆ.

Sri V. P. DEENADAYALU NAIDU (Cubbonpet).—Mr. Speaker, Sir, I wish to suggest only two aspects while accepting this Demand. The first item I would like to touch is a mobile court. This question of mobile court has been before us for some time. I think there is necessity and it has been very prominently felt. To start with, it has already been experimented and found successful in all cities. I think at least in the Bangalore Corpora-

(SRI V. P. DEENADAYALU NAIDU)

tion area, the starting of a mobile court immediately is very necessary. I do not see why so much of time has been spent in other matters in trying to bring this into force. It needs very little for me to emphasise the necessity of having a mobile court. In fact, we are encountered with difficulties relating to public health and unauthorised constructions and unauthorised activities like development of slum areas. We are finding ourselves almost impossible to tackle them without certain legislation. Then there are certain building encroachments and public street vending, vending in trains and people consuming some of these articles. All these illegal activities and unauthorised activities can be put an end to by having a mobile magesterial court. Then, Sir, I may say that it is also remunerative. We could collect fines on the spot and we can inflict punishment. We can recover more money and the money that may have to be spent on establishment and conveyance will be very little when compared to the revenue that is going to be collected under that system. Unfortunately, the matter is pending in spite of the Corporation and other bodies agitating for having a mobile court. Therefore I say that is one of the items which should have prominently found a place in the Budget, but I find that by some inadvertence or oversight it has been dropped. I know that file must be somewhere but it will have to be unearthed and this should be implemented at a very early date. The second question which I some time ago referred to is with regard to charges. On page 38 of the Budget Memorandum, mention is made of fees to Advocates employed on behalf of Government. I once again emphasise that if Government is really serious about giving justice, no Advocate will come for Rs. 16 per day which is paid for advocates who are engaged by the Government. No decent advocate will come and nobody will come forth to accept any brief for such a meagre sum. Therefore we are denying justice. My point is that these charges should be revised and it should be made a little more dignified.

Sri B. BASAVALINGAPPA.—Is it the opinion of the Hon'ble Member that advocates who receive more than Rs. 16 are decent advocates?

Sri V. P. DEENADAYALU NAIDU.—Let us not quarrel about it. Even a man who may receive a thousand rupees may be accused of breach of duties. Even God cannot be responsible for that; much less a legislator like Sri Basavalingappa. At least let us say that we will do honorary work, and not for the sake of Rs. 16. I will do honorary work and my work is according to my conscience. Whether you pay Rs. 16 or Rs. 1,600 is immaterial; but when you say that the Government has to engage a particular Counsel, let it also be said that expect them to do it in a proper and dignified way which does justice both to the Counsel as well as to the person who engages him. It does not become a Government to engage advocates, prosecutors and standing Counsels on Rs. 16 a day to deal with murder cases, and cases charge under 302. There may be most important cases of the highest magnitude. I think it does not require me to explain to Sri Baliga all this. Therefore, I would very humbly urge the Government to revise the rules in that regard. Then there is another idea which I would like to place before the Government. Who are the prosecutors in criminal courts? The prosecutors in all these criminal courts still continue to be police officers. I think it is high time that we think of having advocates replacing the police officers as prosecutors in criminal courts. We must have technical men. I even go a step further and include the Home Department and say that even for police investigation at the time of placing your charge sheets you must have technical legal men; charge sheets must be scrutinised according to law; they must be pursued; you must have a technical section for placing charge sheets and not merely ordinary police officers going into these matters. I would tell you if you could only think of having a technical section to scrutinise these things and then place a charge sheet, you would be doing real justice pursuing cases where you ought to, and

and dropping cases where you should not pursue and where there is no case. You will be thus saving your money; you will be doing things in the right direction and you will be giving proper advice in the right time. Then, Sir, I very well appreciate what Sri Malla-radhya said with regard to Advocate General's Office. One thing he has missed is this. Today, 50 per cent of the High Court work is Government work, *i.e.*, writs where the Government appear. What I say is, the bulk of the work that has accumulated in the High Court is Government work. My friend raised the point whether there was any necessity to have an Advocate General, two Advocates to support him and 4 or 5 more Government Pleaders. I say the work that they have to do is Government work and not private work where private counsels appear. Most of the cases in the High Court are those in which Government figure very prominently; at least more than 50 per cent is Government work and therefore the Government will have to have so many Advocates appointed. My friend also went a step further and asked in which other State in India they had such a big paraphernalia to conduct the cases. Sir, I think, we are moving in the right direction. Even in the matter of having administration of justice, we are moving in the right direction. But, I shall only say that there is a necessity for reorganisation of the High Court and the Advocate-General and it is being done and done in consonance with the other High Courts.

Sir, the last point which I wish to place before the House is with regard to the Mental Hospital at Bangalore. This Hospital has today become an All-India institution. I ask the Government whether they have gone to that hospital and looked into the state of affairs there. Certain under-trial prisoners are taken to that hospital at the instance of the Magistrate Courts and no distinction is made between these undertrials and the persons who are suffering from chronic mental disorders.

[MR. SPEAKER in the Chair]

A person who has a chance to recover and a person who is suffering from chronic mental disorder are clubbed and put together. Sir, is there any chance for that person to recover under these circumstances? They have taken away even the remote chance of his recovery. I request the Government to kindly look into this matter and bifurcate and keep them in a separate compartment. At present, people who can be cured in weeks remain for months. For want of convenience, a person should not be put to such a position. I think that Government have not bestowed sufficient thought over this matter. For providing separate compartments it may not cost Government much. I only hope that they would at least pay heed to thi now

*ಶ್ರೀ ವೈ. ರಾಮಕೃಷ್ಣ (ಬೆಂಗಳೂರ ನಾರ್ತ್).—ಮಾನ್ಯ ಅಧ್ಯಕ್ಷರೆ, ನ್ಯಾಯಾಂಗ ಹಾಗೂ ಜೈಲುಗಳಿಗೆ ಸಂಬಂಧಪಟ್ಟ ಬೇಡಿಕೆಗಳಿಗೆ ಬೆಂಬಲ ನೀಡುತ್ತಾ, ಕೆಲವಾರು ವಿಷಯುಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸ ಬೇಕೆಂಬ ಕೂಗು ಅನೇಕ ವರ್ಷಗಳಿಂದ ಇದೆ. ಈ ವಿಚಾರದಲ್ಲಿ ಸರ್ಕಾರದವರು ಆಗಲೇ ಕೆಲವಾರು ವಿಷಯುಗಳನ್ನು ತಿಳಿಸಿದ್ದಾರೆ ಮತ್ತು ಅದರ ಪ್ರಕಾರ ಮಾಡಿದ್ದಾರೆ. ಅವುಗಳಲ್ಲಿ ಅತಿ ಮುಖ್ಯವಾದುದು ಎಂದರೆ ಪೋಲೀಸ್ ಪ್ರಾಸಿಕ್ಯುಟಿಂಗ್ ಇನ್ಸ್ಪೆಕ್ಟರು ಗಳು. ಮೇಜಿಸ್ಟ್ರೇಟ್ ಕೋರ್ಟುಗಳಲ್ಲಿ ಅವರುಗಳು ಇನ್ನೂ ಉಳಿದಿದ್ದಾರೆ. ಈ ಸಂಬಂಧದಲ್ಲಿ ಅನೇಕ ಪ್ರಶ್ನೆಗಳೂ ಬಂದಿವೆ. ಈ ವಿಚಾರದಲ್ಲಿ ಆದಷ್ಟು ಜಾಗ್ರತೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿ ಸುಮಾರು ಒಂದು ವರ್ಷದ ಮೇಲಾಯಿತು: ಆದರೂ ಇವರುಗಳನ್ನು ತೆಗೆದುಹಾಕುವ ಸಲಹೆ ಸಫಲವಾಗಿಲ್ಲ. ಸರ್ಕಾರದವರು ಆದಷ್ಟು ಜಾಗ್ರತೆ ಈ ಸಲಹೆಯನ್ನು ಈಡೇರಿಸಿಕೊಡಬೇಕು.

ಇರುವ ಆಸ್ತಿಗಳ ಪೈಕಿ, ಲೀಗಲ್ ಬಾರ್ ಬಹಳ ದೊಡ್ಡ ಆಸ್ತಿ. ನಾಗರಿಕರ ಹಕ್ಕುಭಾದ್ಯತೆಗಳನ್ನು ಕಾಪಾಡುವುದರಲ್ಲಿ ಅದು ಅಗ್ರಸ್ಥಾನವನ್ನು ಪಡೆದಿದೆ. ಈ ಬಾರ್ ಏನಾದರೂ ಒಂದು ವಿಷಯವನ್ನು ಸರ್ಕಾರದ ಮುಂದೆ ಇಟ್ಟರೆ, ಅದನ್ನು ಸರ್ಕಾರ ಕಡೆಗಣ್ಣಿನಿಂದ ನೋಡುವುದು ತುಂಬ ವಿಷಾದಕರ. ನಾನು ಈ ಬೆಂಗಳೂರು ನಗರದಲ್ಲಿರತಕ್ಕಂಥ ಒಬ್ಬ ಸದಸ್ಯನಾಗಿ ಹೇಳುತ್ತಿದ್ದೇನೆ. ಇಲ್ಲಿ ಲಾಯರುಗಳಿಗೆ ಅನೇಕ ಕಷ್ಟ ಗಳಿವೆ. ಉದಾಹರಣೆಗೆ, ವಿಧಾನ ಸೌಧಕ್ಕೆ ತಳಹದಿ ಹಾಕಿದಾರಭ್ಯದಿಂದ, ಬೆಂಗಳೂರಿನಲ್ಲಿರತಕ್ಕಂಥ ಕೋರ್ಟುಗಳಿಗೆಲ್ಲಾ ಒಂದೇ ಕಡೆ ಜಾಗ ಪ್ರೊವೈಡ್ ಮಾಡಿ ಎಂದು ಹೇಳುತ್ತಿದ್ದೇವೆ. ಶ್ರೀ ಹನುಮಂತಯ್ಯನವರು ಮುಖ್ಯ ಮಂತ್ರಿಗಳಾಗಿದ್ದಾಗ ಒಪ್ಪಿಕೊಂಡಿದ್ದರು. ಇವೊತ್ತಿನ ದಿವಸ ಬೆಂಗಳೂರು ನಗರದಲ್ಲಿ ಕೋರ್ಟುಗಳು ಅನೇಕ ಕಡೆ ಇವೆ. ಕ್ರಿಮಿನಲ್ ಕೋರ್ಟುಗಳು ಒಂದು ಕಡೆ ಹೈಕೋರ್ಟ್ ಒಂದು ಕಡೆ, ಡಿಸ್ಟ್ರಿಕ್ಟ್ ಕೋರ್ಟ್ ಒಂದು ಕಡೆ, ಟ್ರಿಬ್ಯೂನಲ್,

(ಶ್ರೀ ವೈ. ರಾಮಕೃಷ್ಣ)

ರೆವಿನ್ಯೂ ಬೋರ್ಡ್ ಒಂದು ಕಡೆ. ಸಿವಿಲ್ ಸ್ಟೇಷನ್‌ನಲ್ಲಿ ಕೆಲವು ಕೋರ್ಟುಗಳಿವೆ. ಇದರಿಂದ ವಕೀಲರಿಗೆ ತುಂಬ ಅನಾನುಕೂಲವಾಗಿದೆ. ಹನ್ನೊಂದು ಘಂಟೆಗೆ ಅನೇಕ ಕಡೆ ಹೋಗಬೇಕೆಂದರೆ ಬಹಳ ಕಷ್ಟ. ಇದಕ್ಕೋಸ್ಕರವಾಗಿ ಎಲ್ಲಾ ಕೋರ್ಟುಗಳನ್ನೂ ಅತಾರಾ ಕಚೇರಿಯಲ್ಲಿ ಇಡುವಹಾಗೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರದ ಮುಂದೆ ಬೇಡಿಕೆ ಇಡುತ್ತೇನೆ. ಸರ್ಕಾರದವರು ಈ ಸಲಹೆಯನ್ನು ಬಹಳ ತೀವ್ರವಾಗಿ ಪರಿಶೀಲನೆಮಾಡಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನ್ಯಾಯ ಅದಷ್ಟು ಜಾಗ್ರತೆ ದೊರೆಯಬೇಕು ಮತ್ತು ದೊರೆಯತಕ್ಕಂಥ ನ್ಯಾಯ ಅದಷ್ಟು ಸುಲಭ ದರದಲ್ಲಿ ದೊರಕಬೇಕು. ಹಳೆಯ ಮೈಸೂರಿನಲ್ಲಿ ಯಾವ ಸ್ಥಳಗಳಿಗೆ ಹೊಸದಾಗಿ ಕೋರ್ಟುಗಳು ಬೇಕು, ಇರತಕ್ಕಂಥ ಕೋರ್ಟುಗಳಲ್ಲಿ ಎಷ್ಟನ್ನು ಕಡಮೆಮಾಡಬಹುದೆಂಬುದನ್ನು ವಿಚಾರ ಮಾಡುವುದಕ್ಕೋಸ್ಕರ ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮೈಸೂರು ಸರ್ಕಾರದವರು ನೇಮಕಮಾಡಿದ್ದರು. ಆ ಸಮಿತಿಯವರು ದೇಶಾದ್ಯಂತ ತಿರುಗಿ ಅನೇಕ ವಿಷಯಗಳನ್ನು ಮತ್ತು ಸಲಹೆಗಳನ್ನು ಕ್ರೋಡೀಕರಿಸಿ ಒಂದು ರಿಪೋರ್ಟ್ ಮಾಡಿದರು. ಈ ಸಮಿತಿಯ ವರದಿಯನ್ನು ಜಾರಿಗೆ ತಂದರೆ ದೇಶಕ್ಕೆ ಒಳ್ಳೆಯದು.

ಕೋರ್ಟುಗಳಲ್ಲಿ ಕ್ಲಾರ್ಕ್ಸ್ ಆಗಿದ್ದವರನ್ನು ಮ್ಯಾಜಿಸ್ಟ್ರೇಟ್, ಮುನ್ಸೀಫ್ ಆಗಿ ನೇಮಕಮಾಡುತ್ತಿದ್ದಾರೆ. ಇದನ್ನು ನಿಲ್ಲಿಸುವುದು ಒಳ್ಳೆಯದೆಂದು ನನ್ನ ಭಾವನೆ. ಹೀಗೆ ನೇಮಕಮಾಡುವುದರ ಸಾಧಕ ಬಾಧಕಗಳನ್ನು ಐದು ನಿಮಿಷದಲ್ಲಿ ಚರ್ಚೆಮಾಡಲಿಕ್ಕೆ ಸಾಧ್ಯವಿಲ್ಲ. ಸರ್ಕಾರದವರು ಹೈಕೋರ್ಟ್ ಜಡ್ಜ್‌ಗಳನ್ನೂ ಡಿಸ್ಟ್ರಿಕ್ಟ್ ಜಡ್ಜ್‌ಗಳನ್ನೂ ಸಿವಿಲ್ ಜಡ್ಜ್‌ಗಳನ್ನೂ ನೇಮಕ ಮಾಡುವಾಗ ಕೊನೆಯ ಪಕ್ಷ ಶೇಕಡ 75ರಷ್ಟು ಮಂದಿಯನ್ನು ಬಾರ್‌ನಿಂದ ತೆಗೆದುಕೊಳ್ಳಬೇಕೆಂದು ವಿನಯದಿಂದ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಏಕೆಂದರೆ ಹತ್ತು ವರ್ಷಗಳಿಂದ ವಕೀಲರ ಸಂಖ್ಯೆ ಎರಡು ಸಾವಿರಕ್ಕೂ ಮೀರಿದೆ. ನೂರಕ್ಕೆ ನೂರರಷ್ಟು ಜಾಸ್ತಿಯಾಗುತ್ತಿದೆ. ಅವರ ಸ್ಥಿತಿ ಹೇಳುವುದಕ್ಕಾಗುವುದಿಲ್ಲ. ದಯೆಯಿಟ್ಟು ಸರ್ಕಾರದವರು ಈ ಹುದ್ದೆಗಳಿಗೆಶೇಕಡ 70ರಷ್ಟನ್ನಾದರೂ ಬಾರ್‌ನಿಂದ ತೆಗೆದುಕೊಳ್ಳಬೇಕು.

ಈ ರೀತಿ ತೆಗೆದುಕೊಳ್ಳುವಾಗ, ಶೇಕಡ 18 ರಷ್ಟು ಸ್ಥಾನಗಳನ್ನು ನಿಮ್ನವರ್ಗದವರಿಗೆ ಕಡ್ಡಾಯವಾಗಿ ಕೊಡಬೇಕು. ಈ ನೀತಿಯನ್ನು ಇಟ್ಟುಕೊಂಡರೆ ದೇಶಕ್ಕೆ ಕ್ಷೇಮಕರ. ಈ ನೀತಿಯನ್ನು ಅನುಸರಿಸದಿದ್ದರೆ ಇನ್ನು 50 ವರ್ಷಗಳಾದರೂ, ಶೇಕಡ 18 ರಷ್ಟು ನಿಮ್ನ ವರ್ಗದವರನ್ನು ಜುಡಿಷಿಯರಿಯಲ್ಲಿ ನೋಡುವುದಕ್ಕಾಗುವುದಿಲ್ಲ. ಇವೊತ್ತಿನ ದಿವಸ ಮೈಸೂರು ಸ್ಟೇಟ್‌ನಲ್ಲಿ, ಒಬ್ಬರು ಡಿಸ್ಟ್ರಿಕ್ಟ್ ಜಡ್ಜು, ಇನ್ನೊಬ್ಬರು ಮ್ಯಾಜಿಸ್ಟ್ರೇಟ್ ಇಬ್ಬರೇ ಇಬ್ಬರು ನಿಮ್ನ ವರ್ಗದವರಿರುವುದು ತುಂಬ ವಿಷಾದಕರ. ಜೊತೆಗೆ ತಾವು ಪಬ್ಲಿಕ್ ಪ್ರಾಸಿಕ್ಯೂಟರ್, ಅಫಿಷಿಯಲ್ ರಿಸೀವರ್, ಅಸಿಸ್ಟೆಂಟ್ ಅಡ್ವೋಕೇಟ್ ಜನರಲ್, ಲೀಗಲ್ ಆಡ್ವೈಸರ್ ಮುಂತಾದವರುಗಳನ್ನು ತೆಗೆದುಕೊಳ್ಳುವಾಗ ಹರಿಜನರಿಗೂ ಕೂಡ ಮಾನ್ಯತೆ ಕೊಡಬೇಕು. ಶೇಕಡ ಹದಿನೆಂಟರಷ್ಟು ಸ್ಥಾನಗಳನ್ನು ಹರಿಜನರಿಗೆ ಪೂರ್ಣವಾಗಿ ಕೊಡಬೇಕು, ಇಲ್ಲದಿದ್ದರೆ ಕಷ್ಟ.

ಇನ್ನು ಬೆಂಗಳೂರು ಕೋರ್ಟುಗಳು ಹೇಗಿವೆಯೆಂಬುದನ್ನು ಹೇಳುತ್ತೇನೆ. ಈ ದಿವಸ ಮಾನ್ಯ ಮಂತ್ರಿಗಳು ಹನ್ನೊಂದು ಗಂಟೆಗೆ ಕೋರ್ಟಿನ ಹತ್ತಿರ ಬಂದು ನೋಡಿದರೆ ಅದರ ಸ್ಥಿತಿ ಹೇಗಿದೆಯೆಂಬುದು ಅವರಿಗೆ ಚೆನ್ನಾಗಿ ಗೊತ್ತಾಗುತ್ತದೆ. ಕೋರ್ಟಿರುವ ಕಟ್ಟಡಗಳನ್ನು ನೋಡಿದರೆ ಕೋರ್ಟೆಂದು ಕರೆಯುವ ಸ್ಥಿತಿಯಲ್ಲೇ ಇಲ್ಲ. ಸೆಕೆಂಡ್ ಅಡೀಷನಲ್ ಡಿಸ್ಟ್ರಿಕ್ಟ್ ಕೋರ್ಟು ಮತ್ತು ಸೆಕೆಂಡ್ ಮುನ್ಸೀಫ್ಸ್ ಕೋರ್ಟು ಈ ಎರಡು ಕೋರ್ಟುಗಳಲ್ಲೂ ಕಕ್ಷಿಗಾರರು ವರಾಂಡಗಳಲ್ಲಿ ನಿಂತಿರಬೇಕು. ಕೂಗಿದ ತಕ್ಷಣ ಅವರು ಕೋರ್ಟಿನೊಳಕ್ಕೆ ಹೋಗುವುದಕ್ಕೆ ಅವಕಾಶವೇ ಇರುವುದಿಲ್ಲ. ಹೀಗಾಗಿ ಕಕ್ಷಿಗಾರರು ಕೋರ್ಟಿನೊಳಕ್ಕೆ ಹೋಗುವುದರೊಳಗಾಗಿ ಎಕ್ಸ್‌ಪಾರ್ಟಿ ಡಿಕ್ರಿ ಆಗಿರುತ್ತದೆ. ಇದರಿಂದ ತುಂಡಿ ಅನಾನುಕೂಲವಾಗಿದೆ. ಕೋರ್ಟುಗಳಲ್ಲಿರುವ ಫರ್ನಿಚರ್ ಕೋರ್ಟು ಸ್ಥಾಪನೆಯಾದಾಗ ಕೊಟ್ಟಿರುವುದೆಂದು ಕಾಣುತ್ತದೆ. ಒಂದಕ್ಕೆ ಕೈಯಿಲ್ಲ, ಒಂದಕ್ಕೆ ಕಾಲಿಲ್ಲ, ಹೀಗಿದೆ. ದಯವಿಟ್ಟು ಈಗಲಾದರೂ ಕೋರ್ಟುಗಳಿಗೆ ಒಳ್ಳೆಯ ಫರ್ನಿಚರನ್ನೊದಗಿಸಿ ಸ್ಟೇಷನರಿಯನ್ನೂ ಸಾಕಷ್ಟು ಸರಬರಾಯಿ ಮಾಡಬೇಕು.

ಪಾನನಿರೋಧದ ಸಂಬಂಧದಲ್ಲಿ ತಪ್ಪಿತಸ್ಥರಿಗೆ ಈಗ ಶಿಕ್ಷೆಯೇನೋ ಆಗುತ್ತಿದೆ. ಅದು ಸಾಲದು. ಫೈನ್ ಮತ್ತು ಡೆಟರೆಂಟ್ ಪನಿಷ್‌ಮೆಂಟ್ ಎರಡೂ ಇದ್ದರೆ ಅನುಕೂಲ, ಇಲ್ಲಿಸಿಟ್ ಡಿಸ್ಟಿಲೇಷನ್ ನಿಲ್ಲಿಸಬೇಕಾದರೆ ಈ ಎರಡು ಶಿಕ್ಷೆಯೂ ಇರಬೇಕು, ಈ ರೀತಿಯಾದರೆ ಅನುಕೂಲ ಎಂದು ಸಲಹೆ ಮಾಡುತ್ತೇನೆ.

ಶ್ರೀ ಜಿ. ವೆಂಕಟೇಗೌಡ (ಪಾಳ್ಯಂ).—ಸ್ವಾಮಿ, ನ್ಯಾಯಾಂಗಕ್ಕೆ ಸಂಬಂಧಪಟ್ಟ ಬೇಡಿಕೆಯ ಬಗ್ಗೆ 78 ಲಕ್ಷ 91 ಸಾವಿರ ರೂಪಾಯಿಗಳನ್ನೊದಗಿಸಲಾಗಿದೆ. ಈ ಬಾಬಿನಲ್ಲಿ 16 ಲಕ್ಷ 30 ಸಾವಿರ ರೂಪಾಯಿಗಳ ಆದಾಯವಿದೆ. ಜ್ಯುಡಿಷಿಯರಿಗೆ ಜನರಲ್ ಸ್ಟಾಂಪ್ ಪೇಪರು ವಗೈರೆಗಳ ಮಾರಾಟದಿಂದ ಬೇರೆ ವರಮಾನ ಬರುತ್ತದೆ. ಆದಾಯಕ್ಕಿಂತ ಐದರಷ್ಟು ಹೆಚ್ಚಾಗಿ ಖರ್ಚು ಮಾಡುತ್ತಿದ್ದಾರೆ. ಕೋರ್ಟ್ ಫೀಜು ಸ್ಟಾಂಪು ವಗೈರೆಗಳ ಮಾರಾಟ ಮಾಡುವುದರಿಂದ 41 ಲಕ್ಷ 30 ಸಾವಿರ ರೂಪಾಯಿಗಳ ಆದಾಯ ಬರುತ್ತದೆ. ಶೇಕಡ 75 ಭಾಗ ಖರ್ಚಿಗಾಗಿ ಆದಾಯವನ್ನು ಉಪಯೋಗಿಸಿಕೊಂಡು ಈ ದಿವಸ ನ್ಯಾಯವನ್ನೊದಗಿಸಲಾಗುತ್ತಿದೆಯೆಂಬುದು ಅಂಕಿ ಅಂಶಗಳಿಂದ ವ್ಯಕ್ತವಾಗುತ್ತದೆ. ಇದು ನಿಜವಾಗಿಯೂ ಪ್ರಜಾಪ್ರಭುತ್ವದಲ್ಲಿ, ನಾಗರಿಕ ಯುಗದಲ್ಲಿ ಸಲ್ಲದ ವಿಷಯವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ದಿವಸ ಮಹಾಜನರಿಗೆ ಕೋರ್ಟು ಖರ್ಚು ಬಹಳ ಹೊರೆಯಾಗಿದೆ. ಜನತೆಯಮೇಲೆ ಹೆಚ್ಚು ಹೊರೆ ಹೇರಿ ನ್ಯಾಯ ದೊರಕಿಸಿದರೆ ಅದು ಹೇಗೆ ಸುಧಾರಣೆ ಮಾಡಿದಂತಾಗುತ್ತದೆ ? ಸಮಾಜದಲ್ಲಿರುವ ಏರುಪೇರು ಕಡಮೆಮಾಡಲು ಹೀಗೆ ಮಾಡಿದರೆ ಸಾಧ್ಯವೇ ? ಇದರಿಂದ ಯಾವ ರೀತಿ ಸಹಾಯವಾಗುತ್ತದೆಂದು ಕೇಳಬೇಕಾಗಿದೆ. ಇದು ಪ್ರಗತಿದಾಯಕವಲ್ಲ. ಈ ಬಾಬಿನಲ್ಲಿ ಆದಷ್ಟು ಆದಾಯ ಕಡಮೆ ಮಾಡಿಕೊಂಡು ಹೆಚ್ಚು ಖರ್ಚಿಲ್ಲದೆ ನ್ಯಾಯ ಸಾಮಾನ್ಯ ಜನರಿಗೂ ಸಿಕ್ಕುವ ಹಾಗೆ ಮಾಡಬೇಕು.

ಎರಡನೆಯದಾಗಿ ನ್ಯಾಯ ತೀರ್ಮಾನ ಆದಷ್ಟು ಬೇಗೆ ಆಗಬೇಕಾದ ಅವಶ್ಯಕತೆಯಿದೆಯೆಂದು ಮಾನ್ಯ ಮಿತ್ರರು ಹೇಳಿದ್ದಾರೆ. ಈ ದಿವಸ ಮದ್ರಾಸು ಸರ್ಕಾರದಲ್ಲಿ ಯಾವ ರೀತಿ ನ್ಯಾಯ ಪರಿಪಾಲನೆ ಯಾಗುತ್ತಿದೆಯೆಂದು ಎಂಬುದನ್ನು ಸ್ವಲ್ಪಮಟ್ಟಿಗಾದರೂ

ಸರ್ಕಾರದವರು ಗಮನಿಸಬೇಕೆಂದು ಹೇಳಬಯಸು ತ್ತೇನೆ. ಮದ್ರಾಸಿನಲ್ಲಿ ಆರು ತಿಂಗಳಮೇಲೆ ಯಾವ ಕ್ರಿಮಿನಲ್ ಕೇಸೂ ನಿಲ್ಲುವುದಿಲ್ಲ, ಆರು ವಾರಗಳಲ್ಲಿ ಕೊಲೆಯ ಕೇಸು ಸೆಷನ್ಸ್‌ಗೆ ಗುರಿಯಾಗುತ್ತದೆ. ಅದೇ ರೀತಿ ಇಲ್ಲೂ ಕೂಡ ಆದಷ್ಟು ಬೇಗ ಮುಖ್ಯವಾಗಿ ಕ್ರಿಮಿನಲ್ ಕೇಸುಗಳನ್ನು ಫೈಸಲು ಮಾಡಲು ವ್ಯವಸ್ಥೆ ಮಾಡಬೇಕು.

ಇದಲ್ಲದೆ ಈ ದಿವಸ ಕೋರ್ಟುಗಳ ಜ್ಯೂರಿಸ್‌ಡಿಕ್ಷನ್ ಅಧಿಕಾರವ್ಯಾಪ್ತಿಯ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಬೇಕಾದದ್ದು ಅನಿವಾರ್ಯವಾಗಿದೆ. ಏಕೆಂದರೆ ಕೋರ್ಟುಗಳಿಗಾಗಿ 50 ಮೈಲಿಗಳ ದೂರ ಹೋಗ ಬೇಕಾಗಿದೆ. ಮೂರು ಮೈಲಿಗಳಲ್ಲೇ ಕೋರ್ಟಿದ್ದರೂ ಕೂಡ ದೂರದಲ್ಲಿರುವ ಕೋರ್ಟಿಗೆ ಹೋಗ ಬೇಕಾಗಿದೆ. ಆದ್ದರಿಂದ ರೆವೆನ್ಯೂ ಸೆಟ್ಲ್‌ಮೆಂಟ್ ಆಗಬೇಕು, ಜಿಲ್ಲಾ ಪುನರ್ವಿಂಗಡಣೆ ಆಗಬೇಕು. ಹೀಗೆ ಕೋರ್ಟಿನ ಜ್ಯೂರಿಸ್ಡಿಕ್ಷನ್ ವಿಚಾರ. ದಲ್ಲೂ ಪುನರ್ವ್ಯವಸ್ಥೆಯಾಗಿ ಕಕ್ಷಿದಾರರಿಗೆ ತೊಂದರೆ ಯಾಗದ ಹಾಗೆ ವ್ಯವಸ್ಥೆ ಮಾಡಬೇಕು. ಬಹುತೇಕ ಇದನ್ನು ಮಾಡಬೇಕಾದ ಅವಶ್ಯಕತೆಯಿದೆ. ಇದಕ್ಕೆ ಹೆಚ್ಚಿನ ಗಮನ ಕೊಟ್ಟು ಬೇಗ ಪುನರ್ವ್ಯವಸ್ಥೆ ಮಾಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣರವರು ಕಟ್ಟಡದ ಅಭಾವದ ವಿಷಯ ಒತ್ತಾಯಮಾಡಿ ಹೇಳಿದ್ದಾರೆ. ಅನೇಕ ಮುನ್ಸೀಫ್ ಕೋರ್ಟುಗಳಿಗೆ ಕಟ್ಟಡದ ಅಭಾವವಿದೆ, ಕೋರ್ಟುಗಳ ಅಟ್ಮಾಸ್ಫಿಯರ್ ಸರಿಯಾಗಿಲ್ಲ. ಅದು ಸರಿಯಾಗಿದ್ದು ಒಂದು ಮಾರಲ್ ಫಿಯರ್ ಉಂಟಾ ಗುವ ಹಾಗೆ ತಕ್ಕ ಕಟ್ಟಡವಿದ್ದರೆ ನಿಷ್ಪಕ್ಷಪಾತವಾಗಿ ನ್ಯಾಯ ದೊರೆಯುವುದಕ್ಕೆ ಸಾಧ್ಯವೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಆದ್ದರಿಂದ ಕೋರ್ಟ್ ಹಾಲ್, ಕಟ್ಟಡ ಮತ್ತು ಒಳಅಂಗಣ ಬಹಳ ಸ್ವಚ್ಛ ವಾಗಿ ಎಂಥವರಿಗೂ ಮನಸ್ಸು ಪರಿವರ್ತನೆಯಾಗುವ ಹಾಗೆ, ಅಂಥ ಒಳ್ಳೆಯ ವಾತಾವರಣವಿರುವ ಹಾಗೆ ಏರ್ಪಾಡು ಮಾಡಬೇಕೆಂದೂ ಅದು ತಮ್ಮ ಕರ್ತವ್ಯ ವೆಂದೂ ಸೂಚಿಸುತ್ತೇನೆ.

ಮಾನ್ಯ ಮಿತ್ರರಾದ ಶ್ರೀ ದೀನದಯಾಳು ನಾಯ್ಡು ಅವರು ಬಹಳ ಜೂನಿಯರ್ಸನ್ನು ಕೋರ್ಟುಗಳಲ್ಲಿ ನೇಮಕ ಮಾಡಿದ್ದಾರೆ, ಅದರಿಂದ ಕೋರ್ಟುಗಳಲ್ಲಿ ಸರಿಯಾದ ನ್ಯಾಯ ದೊರೆಯಲು, ತೀರ್ಮಾನ ಸಿಕ್ಕಲು ಅವಕಾಶವಾಗುತ್ತಿಲ್ಲ ಎಂದು ಹೇಳಿದರು. ಬಾರ್‌ನಲ್ಲಿ ರುವ ಜ್ಯೂನಿಯರ್ಸ್‌ನ್ನು ಕೋರ್ಟುಗಳಲ್ಲಿ ನೇಮಿಸಿದರೆ ಅಪರಾಧಿಗಳಿಗಿರುವ ಹಕ್ಕನ್ನು ಯಾವ ರೀತಿ ಸಾಧಿಸಿ ಅವರ ರಕ್ಷಣೆ ಮಾಡಲು ಸಾಧ್ಯ ? ಈ ನ್ಯೂನತೆ ಸರಿ ಪಡಿಸಬೇಕು.

ಮದ್ರಾಸು ಸರ್ಕಾರದವರು ಸ್ಟೇಟ್ ಬ್ರೀಫ್ಸ್‌ಗೆ 35 ರೂಪಾಯಿಗಳನ್ನು ಕೊಡುತ್ತಿದ್ದರು, ಮೈಸೂರು ಸರ್ಕಾರದವರು 18 ರೂಪಾಯಿಕೊಡುತ್ತಿದ್ದಾರೆ. ಅವರಿಗೆ ತಕ್ಕಷ್ಟು ಹಣ ಕೊಡಬೇಕು.

ಅಲ್ಲದೆ ಜ್ಯುಡಿಷಿಯಲ್ ಲಾಕಪ್‌ಗಳಲ್ಲಿ ಪೋಲೀಸಿ ನವರನ್ನು ಕಾವಲು ಹಾಕಿದರೆ ಅದರಿಂದ ಬಹಳ ಅನಾಹುತವಾಗುತ್ತದೆ. ಪೋಲೀಸರಿದ್ದರೆ ಕರ್ಫ್ಯೂ ಷನ್ ಆಗಿ ಹಿಂಸೆಯಾಗುತ್ತದೆ, ಇನ್ನೂ ಅನೇಕ ಅನಾ ಹುತವಾಗುತ್ತದೆ. ಆದ್ದರಿಂದ ಜ್ಯುಡಿಷಿಯಲ್ ಲಾಕಪ್‌ಗಳಲ್ಲಿ ಬೇರೆಯವರನ್ನು ನೇಮಕಮಾಡಬೇಕು ಪೋಲೀಸರನ್ನು ದೂರ ಇಡಬೇಕು.

ಇಂಟಿಗ್ರೇಷನ್ ಆದಮೇಲೆ ಹತ್ತಿರವಿದ್ದ ಖೈದಿಗಳನು ದೂರ ಕಳುಹಿಸಿದ್ದಾರೆ. ಕೊಳ್ಳೇಗಾಲದಲ್ಲಿದ್ದ ಖೈದಿ ಗಳನ್ನು ಬಳ್ಳಾರಿಗೆ ಕಳುಹಿಸಿದ್ದಾರೆ, ಒಂದು ವೇಳೆ ಆ ಖೈದಿಗಳ ತಂದೆತಾಯಿಗಳೇನಾದರೂ ಸಾಯುವ ಸ್ಥಿತಿಯಲ್ಲಿದ್ದರೆ ಅವರನ್ನು ನೋಡಲು ಹೋಗುವುದಕ್ಕೂ ಸಹ ಅವಕಾಶವಿಲ್ಲದಂತಾಗಿದೆ. ಇದು, ಸರಿಯೇ ? ಅಷ್ಟು ದೂರ ಕಳಿಸುವುದಕ್ಕೆ ಬದಲಾಗಿ ಹತ್ತಿರವಿರುವ ಜೈಲುಗಳಲ್ಲಿ, ಬೆಂಗಳೂರು ಮತ್ತು ಮೈಸೂರುಗಳಲ್ಲಿ ಇಟ್ಟಿದ್ದರೆ ಚೆನ್ನಾಗಿತ್ತು. ಇದಕ್ಕೆ ಗಮನ ಕೊಟ್ಟಿಲ್ಲ.

ಜೈಲುಗಳ ವಿಚಾರವನ್ನು ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು ಬಹಳ ಅರ್ಥಗರ್ಭಿತವಾಗಿ ಹೇಳಿ ದ್ದಾರೆ. ಅವರ ವಾದವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಮನುಷ್ಯ ನಾಗರಿಕನಾಗಿ ಬಾಳಬೇಕು, ಅದಕ್ಕೆ ಅವನ ಮನಸ್ಸು ಪರಿವರ್ತನೆಯಾಗಬೇಕು, ಅವನ ಜೀವನಮಟ್ಟ ಉತ್ತಮವಾಗಬೇಕು. ಇದಕ್ಕೆ ಏನು ಏರ್ಪಾಡು ಮಾಡಬೇಕೋ ಅದಕ್ಕೆತಕ್ಕ ವ್ಯವಸ್ಥೆ ಮಾಡಬೇಕೆಂದು ಒತ್ತಾಯಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಸರ್ಕಾರದಲ್ಲಿ ಮೂರು ಪಂಗಡಗಳಿವೆ. ಮೊದಲನೆಯದು ಎಗ್ಜಿಕ್ಯು ಟಿವ್, ಎರಡನೆಯದು ಲೆಜಿಸ್ಲೇಚರ್ ಮತ್ತು ಮೂರ ನೆಯದು ಜ್ಯುಡಿಷಿಯರಿ. ಜ್ಯುಡಿಷಿಯರಿ ಅಂದರೆ, ನ್ಯಾಯಾಂಗ. ಇದರ ವಿಚಾರದಲ್ಲಿ ನಮ್ಮ ಸಮಾಜಕ್ಕೆ ಬಹಳ ಗೌರವವಿದೆ. ಏಕೆಂದರೆ ನಮ್ಮ ಹಕ್ಕು ಬಾಧ್ಯತೆ, ನಾಗರಿಕರ ಹಕ್ಕುಗಳನ್ನು ಕಾಪಾಡಿ, ಧರ್ಮಪರಿಪಾಲನೆಮಾಡುತ್ತೀರೆಂದು ಈ ವಿಚಾರ ದಲ್ಲಿ ಬಹಳ ಘನತೆ ಗೌರವಗಳಿವೆ. ಈ ದಿವಸ ನ್ಯಾಯಾಂಗವನ್ನು ಏರ್ಪಡಿಸಿ ನಾಗರೀಕರಿಗೆ ನ್ಯಾಯ ವನ್ನೊದಗಿಸಲು ತಕ್ಕ ಅವಕಾಶ ಮಾಡಬೇಕಾಗಿದೆ.

ಶ್ರೀಮಾನ್ ಮಲ್ಲಾರಾಧ್ಯರು Judiciary is supreme over Legislature ಎಂದು ಬಹಳ ಮುಖ್ಯವಾದ ಪ್ರಶ್ನೆಯನ್ನೆತ್ತಿದ್ದಾರೆ. ಅದಕ್ಕೆ ನಾನು ಭಿನ್ನಾಭಿಪ್ರಾಯವನ್ನು ಸೂಚಿಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ಮಲ್ಲಾರಾಧ್ಯರವರು ನ್ಯಾಯಾಂಗ ಬಹಳ ಪ್ರಮುಖ್ಯವಾದುದು ಎಂದು ಹೇಳಿದ್ದಾರೆ. ಆದರೆ ಅದಕ್ಕೆ ನನ್ನದು ಭಿನ್ನಮತವಿದೆ. ಏಕೆಂದರೆ ನಮ್ಮ ದೇಶದಲ್ಲಿ ರಾಜ್ಯಾಂಗವು ಬಹಳ ಪ್ರಮುಖವಾದುದು ಮತ್ತು ಶ್ರೇಷ್ಠವಾದುದು. ಇಂಗ್ಲೆಂಡ್ ಮತ್ತು ಅಮೇರಿಕಾ ದೇಶಗಳ ರಾಜ್ಯಾಂಗ ಗಳ ಬಗ್ಗೆ ಅವರು ಹೇಳಿದರು. ಆದರೆ ನಮ್ಮ ದೇಶದ ರಾಜ್ಯಾಂಗ ಬೇರೆ ರೀತಿಯದಾಗಿದೆ. ನಮ್ಮ ದೇಶದಲ್ಲಿ ರಾಜ್ಯಾಂಗವು ನಮಗೆ ಶ್ರೇಷ್ಠವಾದದ್ದು. ಕಾನೂನಿನ ವಿಚಾರದಲ್ಲಿ ನ್ಯಾಯಾಂಗಕ್ಕೆ ಸರಿಪಡಿಸಲು ಹಕ್ಕು ಇದೆ. ಆದರೆ ಲೇಜಿಸ್ಲೇಚರ್‌ಗಿಂತಲೂ ನ್ಯಾಯಾಂಗ ಪ್ರಧಾನ ವಾಗಿರಬೇಕೆಂದು ಹೇಳುವ ವಾದವನ್ನು ನಾನು ಒಪ್ಪುವುದಿಲ್ಲ.

Sri J. B. MALLARADHYA.—By way of personal explanation, Sir, in saying that we have followed the American type of Constitution, I mentioned that in England, Parliament was supreme. There is no question of constitutional law in England. We have adopted some provisions of the American Constitution by which if there is a legislative Act which is repugnant to the provisions of the Constitution, in the State the High Court and in the Union, the Supreme Court, can interfere. They have the power to nullify

(SRI J. B. MALLARADHYA)

or modify any provisions or any Act of the Legislation which is repugnant to the Constitution.

(*Interruption.*)

That is the reason why they have made so many amendments to the Constitution in India. In view of this, they have even the powers to veto any legislative Act. In the Indian Constitution, the Judiciary occupies a supreme position which is notably absent from the British Constitution. When once a law is enacted in the British Parliament, the Courts can do nothing. When the Parliament takes a decision, the Judiciary can do nothing. It is in that sense that I made a comparison between the American type of Constitution and the British Parliamentary Constitution. In view of that the Judiciary today in India is supreme in the sense that it can veto any legislative Act.

Sri G. VENKATAI GOWDA.—Provided it is challenged.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಶ್ರೀಮಾನ್ ಮಲ್ಲಾರಾಧ್ಯರವರು ಹೇಳಿರತಕ್ಕಂಥ ವಿಚಾರದಲ್ಲಿ ನಾನು ದೀರ್ಘವಾಗಿ ಆಳವಾಗಿ ಯೋಚನೆ ಮಾಡಿದ್ದೇನೆ. ಆದರೆ ಅವರು ಹೇಳುವುದರಲ್ಲಿ ನನಗೆ ಯಾವ ವ್ಯತ್ಯಾಸವೂ ಕಾಣುವುದಿಲ್ಲ. ಅವರು ನ್ಯಾಯಾಂಗವೇ ಪ್ರಧಾನವಾದುದೆಂದು ಹೇಳುತ್ತಾರೆ. ಆದರೆ ನಾನು ಆ ರೀತಿಯಾಗಿ ಹೇಳುವುದಿಲ್ಲ. ನಾವು ಏನಾದರೂ ತಪ್ಪು ಮಾಡುತ್ತಿದ್ದರೆ ಆ ತಪ್ಪನ್ನು ತಿದ್ದಲು ನ್ಯಾಯಾಂಗವಿದೆಯೇ ಹೊರತು, ಯಾವ ರೀತಿಯಿಂದಲೂ ನ್ಯಾಯಾಂಗವೇ ಪ್ರಧಾನವಾದುದಲ್ಲ.

ಇನ್ನು ನ್ಯಾಯಾಂಗದಲ್ಲಿ (1) ಪ್ರೆಸ್, (2) ಬೆಂಚ್ ಮತ್ತು (3) ಬಾರ್, ಇವು ನಮ್ಮ ದೇಶದಲ್ಲಿ ಪ್ರಜಾಸತ್ತಾತ್ಮಕ ರಾಜ್ಯವು ಜಾರಿಗೆಬಂದಮೇಲೆ ದಕ್ಷತೆಯಿಂದ ನಡೆಯಬೇಕಾದುದು ಮುಖ್ಯ. ಮೂರನೆಯದಾದ ಬಾರ್ ವಿಷಯದಲ್ಲಿ ಹೇಳುವುದಾದರೆ ಅವುಗಳಿಗೆ ಸರಿಯಾದ ಕಟ್ಟಡಗಳ ಅಭಾವವಿದೆ. ಕಟ್ಟಡಗಳ ವಿಷಯದಲ್ಲಿ, ಹೇಳುವುದಾದರೆ, ಸರಕಾರದವರು ಅನುಕೂಲತೆಯನ್ನು ಅಷ್ಟಾಗಿ ಒದಗಿಸಿಲ್ಲ. ಪ್ರಜಾಸತ್ತಾತ್ಮಕ ನೀತಿಯನ್ನು ಸರಿಯಾಗಿ ಜಾರಿಗೆ ತರತಕ್ಕ ಕರ್ತವ್ಯ ಈ Barನದಾಗಿದೆ. ಆದುದರಿಂದ ಇದಕ್ಕೆ ಹೆಚ್ಚಿನ ಸ್ಥಾನಾನುಕೂಲಗಳನ್ನು ಒದಗಿಸಿಕೊಡಬೇಕಾದುದು ಅವಶ್ಯವಾಗಿದೆ. ಬೆಂಗಳೂರ್ ಬಾರ್ ಬಗ್ಗೆ ಬೇಕಾದಷ್ಟು ಸಾರಿ ಸರಕಾರಕ್ಕೆ ನಾವು ಮನವಿ ಮಾಡಿಕೊಂಡಿದ್ದೇವೆ. ಅದಕ್ಕೆ ಒಂದು ಉತ್ತಮ ಕಟ್ಟಡವಿಲ್ಲ. ಪುಸ್ತಕಗಳನ್ನು ಕೊಂಡುಕೊಳ್ಳಲು ಹಣವಿಲ್ಲ. ಒಳ್ಳೆಯ ಲೈಬ್ರರಿಯಿಲ್ಲ. ಕರ್ನಾಟಕದಲ್ಲಿಯೇ ಬೆಂಗಳೂರು ಬಾರ್ ಬಹಳ ಪ್ರಾಮುಖ್ಯವುಳ್ಳದು. ಲೈಬ್ರರಿ ಲಾಯರುಗಳಿಗೆ ಅನುಕೂಲವಾಗಿಲ್ಲ. ಕಾನೂನನ್ನು ಸರಿಯಾಗಿ ಅರ್ಥ ಮಾಡಿಕೊಂಡು ಜಾರಿಗೆ ತರುವುದರಲ್ಲಿ ಲಾಯರುಗಳಿರುವುದು ಅವಶ್ಯಕ. ನಾಗರಿಕರ ಹಕ್ಕು ಬಾಧ್ಯತೆಗಳನ್ನು ರಕ್ಷಣೆ ಮಾಡುವ ಕೆಲಸದಲ್ಲಿ ಲಾಯರುಗಳ ಆವಶ್ಯಕತೆಯಿದೆ. ಆದ್ದರಿಂದ ಬೆಂಗಳೂರು ಬಾರ್‌ಗೆ ಅನುಕೂಲತೆಗಳನ್ನೊದಗಿಸಿಕೊಡಲು ಅದರ ಕಡೆಗೆ ಹೆಚ್ಚು ಗಮನಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೆಂಗಳೂರಿನ ಮುನ್‌ಸಿಫ್ ಕೋರ್ಟಿನಲ್ಲಿ ಒಬ್ಬರೇ ನ್ಯಾಯಾಧೀಶರು ಇರುವುದರಿಂದ ಕೆಲಸ ಹೆಚ್ಚಾಗಿ ಬಹಳ ಕೇಸಿಸ್ ಪೆಂಡಿಂಗ್ ಇವೆ. ಎರಡು ಮೂರು ವರ್ಷಗಳ ಪೆಂಡಿಂಗ್ ಕೇಸಸ್ ಇವೆ. ಈ ರೀತಿ ನ್ಯಾಯ ದೊರಕಲು ಬಹಳ ಕಾಲವಿಳಂಬವಾಗುತ್ತಾ ಇದೆ. Delayed justice is denied justice ಎಂಬಂತಾಗಿದೆ. ಆದುದರಿಂದ ಇತ್ತಕಡೆಗೆ ಸರಕಾರವು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆದಷ್ಟು ತೀವ್ರವಾಗಿ ವ್ಯಾಜ್ಯಗಳು ತೀರ್ಮಾನವಾಗಿ ನ್ಯಾಯ ದೊರಕುವಂತಾಗಬೇಕು.

ಇನ್ನು ನ್ಯಾಯಾಂಗ ಶಾಖೆಯಲ್ಲಿ ನಡೆಯತಕ್ಕ ರಿಕ್ರೂಟ್‌ಮೆಂಟಿನ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ಈ ವಿಚಾರದಲ್ಲಿ ಮದ್ರಾಸ್ ರಾಜ್ಯದವರು ಬಹಳ ಮುಂದೆ ಬಂದಿದ್ದಾರೆ. ಒಳ್ಳೆಯ ಪಾಠವನ್ನು ಮದ್ರಾಸಿನಿಂದ ಕಲಿಯುವಂತಾಗಿದೆ. ಹಿಂದುಳಿದ ವರ್ಗದವರ ಹಿತಸಾಧನೆಯ ವಿಚಾರದಲ್ಲಿಯೂ ಅವರು ಪ್ರಗತಿಮಾರ್ಗದಲ್ಲಿ ಹೋಗುತ್ತಿದ್ದಾರೆ. ಬ್ಯಾಕ್‌ವರ್ಡ್ ಕ್ಲಾಸಿನವರಿಗೆ ಉತ್ತೇಜನ ಕೊಡಬೇಕೆಂದು ನಮ್ಮ ಕಾನ್‌ಸ್ಟಿಟ್ಯೂಷನ್ನಿನಲ್ಲಿ ಇದೆ. ಆರ್ಟಿಕಲ್ 309ರಲ್ಲಿ ಒಂದು ಪ್ರೊವಿಜನ್ ಇದ್ದರೂ ಮನಸ್ಸಿಗೆ ಬಂದಹಾಗೆ ರಿಕ್ರೂಟ್‌ಮೆಂಟ್ ಮಾಡುತ್ತಿದ್ದಾರೆ. ಇದನ್ನು ಈ ಸಭೆಯ ಅವಗಾಹನೆಗೆ ತಂದಿದ್ದೇನೆ. ಹಿಂದುಳಿದ ವರ್ಗದವರಿಗೆ ಅನ್ಯಾಯವಾಗುತ್ತಾ ಇದೆ. ಆದ್ದರಿಂದ ಇದಕ್ಕೆ ಗಮನ ಕೊಡಬೇಕೆಂದು ಸೂಚಿಸುತ್ತೇನೆ. ರಿಕ್ರೂಟ್‌ಮೆಂಟಿನ ವಿಚಾರದಲ್ಲಿ ಹೈಕೋರ್ಟ್ ಸರಿಯಾದ ಕ್ರಮ ತೆಗೆದುಕೊಳ್ಳುತ್ತಿದೆಯೇ ಎಂದು ನಾನು ಕೇಳಿದ ಒಂದು ಪ್ರಶ್ನೆಗೆ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಇನ್ನು ಮುಂದೆ ಸರಿಯಾದ ರೀತಿಯಲ್ಲಿ ಜಾರಿಗೆ ಬರುತ್ತದೆ ಎಂಬುದು ಸಂತೋಷಕರ. ಆದರೆ ಸದ್ಯಕ್ಕಿರುವ ರೆಜಿಸ್ಟ್ರಾರರು ಜಾತೀಯವಾದದ ಮೇಲೆ ನೇಮಕ ಮಾಡುತ್ತಿರುವಂತಿದೆ ಎಂದು ಬಹಳ ದುಃಖದಿಂದ ಹೇಳುತ್ತೇನೆ. ವೇಕೆನ್ಸಿ ಆದಕೂಡಲೇ ತಮ್ಮ ಜನರನ್ನೇ ಅವರು ನೇಮಕ ಮಾಡುತ್ತಿದ್ದಾರೆಂಬುದು ಗಮನಕ್ಕೆ ಬಂದಿದೆ.. ಕೆಳದರ್ಜೆಯ ನೌಕರರಿಗೆ ಪ್ರೊಮೋಷನ್ ಕೊಡುವಾಗ ಕೂಡ ಈ ವಿಚಾರದಲ್ಲಿ ಅವರು ಒಂದು ಹೆಜ್ಜೆ ಮುಂದೆ ಹೋಗಿ ಕೆಲಸಮಾಡುತ್ತಿದ್ದಾರೆ. ದೊಡ್ಡ ದೊಡ್ಡ ಅಧಿಕಾರಿಗಳಲ್ಲಿ ಇಂಥ ಜಾತೀಯವಾದವನ್ನು ಇಟ್ಟುಕೊಂಡಿರತಕ್ಕಂಥಾದ್ದು ಸರಿಯಲ್ಲ. ಇಷ್ಟು ಮಾತ್ರ ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟದಕ್ಕೆ ಅಧ್ಯಕ್ಷರನ್ನು ಅಭಿನಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಸವನಗೌಡ (ಲಿಂಗಸುಗೂರ್).—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳಿಗೆ ನಾನು ಬೆಂಬಲವನ್ನು ಕೊಡುತ್ತಾ ಮೂರು-ನಾಲ್ಕು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಹೈದರಾಬಾದ್ ರಾಜ್ಯದಲ್ಲಿರತಕ್ಕ ಭಾಷಾ ಸಮಸ್ಯೆಯನ್ನು ಈಗ ಬಗೆಹರಿಸಬೇಕಾಗಿದೆ. ಕೋರ್ಟುಗಳಲ್ಲಿರತಕ್ಕ ಭಾಷೆ ಇಂಗ್ಲಿಷ್ ಆಗಿದೆ. ಕೋರ್ಟುಗಳಲ್ಲಿರುವ ಮುನ್‌ಸೀಫ್ ಜಡ್ಜ್ ಅವರುಗಳು ಉರ್ದು ಬಲ್ಲವರು. ಅವರಿಗೆ ಇಂಗ್ಲಿಷ್ ಭಾಷಾಂತರ

ದವರು ಬೇಕಾಗಿದೆ. ಈಗ ಇಂಗ್ಲಿಷ್ ಭಾಷೆಯನ್ನು ಉರ್ದು ಭಾಷೆಗೆ ಭಾಷಾಂತರ ಮಾಡುವವರು ಇದ್ದಾರೆ. ಸಾಕ್ಷಿದಾರ ಕನ್ನಡ ಭಾಷೆಯಲ್ಲಿ ಹೇಳಿದಲ್ಲಿ ಅದನ್ನು ಚಪರಾಶಿಯಿಂದ ಉರ್ದುವಿನಲ್ಲಿ ತಿಳಿದುಕೊಂಡು ಇಂಗ್ಲೀಷಿಗೆ ಭಾಷಾಂತರ ಮಾಡಿ ಬರೆದುಕೊಳ್ಳುತ್ತಾರೆ. ಇದು ಬಹಳ ಅನ್ಯಾಯದ ಪ್ರಸಂಗವಾಗಿದೆ. ವಾದಿ ಮತ್ತು ಪ್ರತಿವಾದಿ ಲಾಯರುಗಳಿಗೆ ಇದರಿಂದ ಬಹಳ ತೊಂದರೆಯಾಗಿದೆ. ಬಡವರಿಗಂತೂ ಬಹಳ ಅನ್ಯಾಯವಾಗುತ್ತಿದೆ. ಕನ್ನಡದಲ್ಲಿಯೂ ಅಲ್ಲಿನ ಪ್ರೊಸೀಡಿಂಗ್ಸನ್ನು ರಿಕಾರ್ಡ್ ಮಾಡಿಕೊಳ್ಳುವುದಕ್ಕೆ ಸಿಬ್ಬಂದಿಯನ್ನು ಇಟ್ಟಿರುತ್ತಾರೆ. ಮ್ಯಾಜಿಸ್ಟ್ರೇಟರ ಉರ್ದುಭಾಷೆ ಜನಸಾಮಾನ್ಯರಿಗೆ ಅರ್ಥವಾಗುವುದಿಲ್ಲ. ಕನ್ನಡದಲ್ಲಿ ಅವರ ಭಾಷೆಯನ್ನು ಭಾಷಾಂತರ ಮಾಡುವವರನ್ನು ಜಾಗ್ರತೆಯಾಗಿ ನೇಮಿಸಬೇಕು; ಮತ್ತು ಕನ್ನಡ ಭಾಷೆಯನ್ನು ಬಲ್ಲಂಥ ಮ್ಯಾಜಿಸ್ಟ್ರೇಟರನ್ನು ಅಲ್ಲಿಗೆ ನೇಮಿಸಬೇಕು. ಯಾರಾದರೂ ಒಂದು ಅರ್ಜಿಯನ್ನು ಕನ್ನಡದಲ್ಲಿ ಬರೆದುಕೊಟ್ಟರೆ, ಅದನ್ನು ಇಂಗ್ಲಿಷ್‌ನಲ್ಲಿ ಭಾಷಾಂತರ ಮಾಡಬೇಕಾಗಿದೆ. ನಮ್ಮಲ್ಲಿ ಅಂತಹವರು ಸಿಕ್ಕುವುದು ಕಷ್ಟ. ಆ ರೀತಿ ಇಂಗ್ಲಿಷ್‌ನಲ್ಲಿ ಕನ್ನಡದಲ್ಲಿ ಬರೆದಿರುವ ಅರ್ಜಿಗಳನ್ನು ಭಾಷಾಂತರಗೊಳಿಸಲು ಫೀಸ್ ಕೊಡಬೇಕು. ಅದಕ್ಕಾಗಿ ಎಷ್ಟೋ ಜನರು ನಿರಾಶೆಪಟ್ಟುಕೊಂಡು ಹಿಂದಕ್ಕೆ ಹೋಗುತ್ತಾರೆ. ಕೋರ್ಟು ವ್ಯವಹಾರದಲ್ಲಿ ಭಾಗವಹಿಸುವುದೇ ಇಲ್ಲ. ಆದ್ದರಿಂದ ಅಂತಹ ಕೋರ್ಟುಗಳಲ್ಲಿ ಭಾಷಾಂತರ ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ನನ್ನ ಬೇಡಿಕೆ.

ಇನ್ನು ಹೈಕೋರ್ಟಿನಲ್ಲಿ ಉರ್ದು ಬಲ್ಲ ಜಡ್ಜರನ್ನು ಹಾಕಿಲ್ಲ. ಆದ್ದರಿಂದ ಜಾಗ್ರತೆಯಾಗಿ ಇನ್ನೊಬ್ಬ ಜಡ್ಜ್ ಅವರನ್ನು ಅಲ್ಲಿಗೆ ಹಾಕಬೇಕು. ಅದಕ್ಕಾಗಿ ಸುಮಾರು ಎಂಟು-ಹತ್ತು ವರ್ಷಗಳಿಂದ ನೂರಾರು ಫೈಲುಗಳು ಹಾಗೆಯೇ ಉಳಿದಿವೆ. ಈ ವಿಚಾರವಾಗಿ ಮನವಿಗಳನ್ನು ಮಾಡುತ್ತಿದ್ದೇವೆ. ಈ ವಿಷಯವನ್ನು ಇನ್ನೊಂದು ವರ್ಷದೊಳಗಾಗಿ ಇತ್ಯರ್ಥ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನೊಂದು ವಿಷಯ. ಕೋರ್ಟುಗಳಲ್ಲಿರುವ ಪ್ರೋಸೆಸ್ ಸರ್ವರುಗಳಿಗೆ ಡಿಯರ್‌ನೆಸ್ ಅಲೋಯನ್ಸನ್ನು ಕೊಡುತ್ತಲೇ ಇಲ್ಲ. ಅದರಲ್ಲೂ ರಾಯಚೂರ್ ಭಾಗದಲ್ಲಿರುವ ಕೋರ್ಟುಗಳ ಪ್ರೋಸೆಸ್ ಸರ್ವರುಗಳಿಗೆ ಡಿ. ಎ. ಕೊಡುತ್ತಿಲ್ಲವೆಂದು ಹೈಕೋರ್ಟಿಗೆ ವರದಿ ಮಾಡಿ ಎರಡು ತಿಂಗಳುಗಳಾದರೂ ಇನ್ನೂ ಉತ್ತರ ಸಿಕ್ಕಲಿಲ್ಲ. ಪ್ರೋಸೆಸ್ ಸರ್ವರುಗಳು ಬಹಳ ಬಡವರು. ಅವರೆಲ್ಲಾ ರಾತ್ರಿ ಹಗಲೂ ದುಡಿಯುತ್ತಿದ್ದಾರೆ. ಅವರು, ಸಂಸಾರವನ್ನು ಯಾವ ರೀತಿ ಕಾಪಾಡಬೇಕು? ಅವರ ಮನವಿಗಳನ್ನು ಪರ್ಯಾಲೋಚಿಸಿ, ಜಾಗ್ರತೆಯಾಗಿ ಅವರಿಗೆ ಇತರರಿಗೆ ಕೊಟ್ಟ ಹಾಗೆ ಡಿ. ಎ.ಯನ್ನು ಸರ್ಕಾರದ ಕಾನೂನು ಪ್ರಕಾರ ಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು).—ನಮ್ಮ ಜಿಲ್ಲೆಗೆ ಒಬ್ಬ ಜಿಲ್ಲಾಧಿಕಾರಿಯನ್ನು ನೇಮಕಮಾಡಿದ್ದಾರೆ, ಅವರಿಗೆ ಕನ್ನಡವೇ ಬರುವುದಿಲ್ಲ, ಸ್ವಾಮಿ.

ಅಧ್ಯಕ್ಷರು.—ತಮಗೆ ಕಾಲಾವಕಾಶ ಕೊಟ್ಟಾಗ ಆ ವಿಷಯವನ್ನು ಮಾತನಾಡಬಹುದು.

*Sri C. M. ARUMUGHAM (Kolar Gold Fields).—Before I begin to speak on the Demands, I would like to say at the very outset that we cannot get justice from the Home Ministry in the matter of administration of jails. This is because, it is the Home Ministry which charge-sheets and commits the prisoners to jail. I would therefore suggest that the administration of justice should be vested with the Law Minister and convict settlements with my friend Sri Chennigaramiah, because he is in charge of social welfare. They would not bring to bear the 'police mentality' in the administration of justice. They would not allow even the police people to get into the jails. Today a police officer could do so with the permission of the Home Minister. So also any police officer can walk into the court and try to influence the Prosecuting Inspector, because he can easily obtain the permission of the Home Minister.

Sir, I am aware of the conditions of some of the jails, particularly in Kolar District. I had been in one of the jails for seventeen days and have personal experience. Next, I visited the jail at Alipore, this time in a different capacity—as a visitor. Sir, I would not hesitate to pay a compliment and I should say that this is one of the best managed jails in the State. It has a wall-less compound and has undergone a good deal of reforms. I would very well advise the Home and Law Ministers and the Minister for Convict Settlement to visit the Alipore Jail and find out why the conditions there could not be applied to the other jails, particularly the Central Jail, at Bangalore. Sir, I must say that the Central Jail is the worst-managed and ill-kept jail I have ever seen. In this connection I would like to read a portion of the Jail Reforms Committee's report:

> "Apart from this, it is distinctly undesirable to continue to have the chief prison of the State in the heart of the city and in close proximity to courts, offices and educational institutions. This is bound to have an unhealthy psychological influence on the mind of the public, especially the younger generation. A little commotion inside the jail is bound to

(SRI C. M. ARUMUGHAM)

attract curiosity from outside and lead to excitement".

Sir, the conditions inside this jail are appalling. The prisoners were wearing dirty clothes, when I had been there. I do not know how many among them were attacked with 'Flu.' Sir, it has been stated that the Inspector General of Prisons had studied this problem in America and Madras. I am told he is a qualified person on this subject and I do not know why he cannot introduce reforms in the Central Jail on the same model as the Alipore Jail. In Madras every person is given opportunity to earn his wages. Here he is given four annas. In Madras the prisoners are used by the Public Works Department for construction of roads, bridges and in the several projects. But here, I learn that during Sri. Hanumanthaiah's term, they were used in the construction of Vidhana Soudha.

Sri J. B. MALLARADHYA.—It should not be done.

Sri C. M. ARUMUGHAM.—They will have to be given a living wage, I differ from my friend Sri Mallaradhya. The prisoners should not be confined to the four walls of the jails. When I say that the prisoners should work and earn a full wage, I do not mean to say that the Government should profit by their work and that they should earn revenues. The idea is to teach them a good life, to make them love honest work and to make them better citizens. It does not matter, how much money the Government spends on them. Today it is 34 lakhs. I would like them to spend another 34 lakhs, because they are going to root out criminality in vast number of men.

Sir, the education given to the prisoners is scanty, just for three hours. I would suggest that, with the help of the Director of Public Instruction, you should be able to make the teachers go to the jail and impart really good education to the inmates. You should be able to take them up to the high school standards and if some of the prisoners deserve you should be able to give them scholarships and see that they continue higher education, even after they leave the prison. So far as education is concerned, it needs some consideration at the hands of the Government. They must appoint whole-time teachers and not part-time teachers for two or three hours.

I think there need not be a Superintendent for the Jails. Let the I.G.P. who is in charge of the Central Jail do all the reform work. Our jails should be a model for others to follow.

Lastly, I want to say a word about the Administration of Justice. So far as my constituency is concerned, there is a court but it is located in a Travellers' Bungalow. Half the portion is occupied by the court and the other half, by the Travellers' Bungalow. If any officer comes to the Travellers' Bungalow, he does not know how to reside there because the court premises are full of illicit liquor. Within 3 months' time, the police have detected 2,000 cases. It is a compliment to the Home Minister. The fine for the offenders ranges from Rs. 5 to Rs. 100. The K.G.F. needs a proper building for the court and it should not be located in the Travellers' Bungalow.

Regarding appointments, I am told that in England the politicians are debarred from appointing Judges. The politicians, that means, the Ministers should not appoint or recommend the appointment of Judges because they will influence them. If the Constitution comes in the way, by all means amend it because after all the Constitution is nothing but what is copied from the French, English and American Constitutions. In England, the politicians do not appoint them and the Judges are the supreme authority. You cannot remove them. I was told that in 1948 the Government there removed a Judge. If that is true, it is wrong. The Government should not be given the power to remove a Judge or even recommend the removal of a Judge. I am also told that a son-in-law of a Minister has been appointed as a Public Prosecutor in Mandya. That should not be done.

Sri B. D. JATTI (Jamkhandi).—Even if he is duly qualified ?

Sri C. M. ARUMUGHAM.—When there are seniors, why should a raw man

coming from some other place be appointed as Public Prosecutor in Mandya ? You can appoint your own son-in-law or father-in-law in the Police Department but not in such posts which come under the Administration of Justice.

With these few remarks, I thank the Chair for having given me this opportunity to speak.

Sri B. R. SUNTHANKAR (Belgaum City).—Mr. Speaker, Sir, I wish to make a few suggestions regarding the Jails, Remand Homes and the After-Care Associations in the State. Before that, I would like to voice a grievance similar to that voiced a little while ago by my Hon'ble friend from Hyderabad about the question of language. From the very beginning, the Belgaum District is considered as a bilingual district where Kannada and Marathi are official languages. For all practical purposes only Kannada is being used in the court. The charge-sheets given to the Marathi-speaking accused are invariably in Kannada. Similarly, the statements, etc., that are taken down in the courts are all invariably in Kannada. This causes a great inconvenience to the Marathi people there. I would like the Government and particularly the Law Minister to look into this state of affairs and safeguard properly the interests of the Marathi people there.

Coming to Remand Homes, I would like to suggest to the Government and particularly to the Minister in charge that they should be more vigilant in respect of Remand Homes. They should exercise strict supervision, check and control over the Remand Homes and the After-Care Associations in the State. The Remand Homes are run with the object of improving and reforming the juvenile boys and girls and so if they are not properly conducted the effect is likely to be the reverse. The experience of the Remand Home in the Bombay Area, I regret to say, is not very happy. I wish to draw the particular attention of the Government to the Remand Home that is run at Belgaum by the After-Care Association. The affairs of the Remand Home there are mismanaged. There are a number of irregularities committed in the Office of the Remand Home. There is lack of co-operation between the Secretary and the staff of the After-Care Association. We have been receiving complaints particularly from the clerical staff that they are being harassed by the Secretary on flimsy pretexts. The officers do not discharge their duties properly. The former officer in charge of the Probation of the Offenders Act was a relation of the Honorary Secretary of the After-Care Association. He used to attend office rarely and when he attended, it was for two or three hours in a week. That was the way in which he was working. Fortunately, he has been recently transferred. The members of the Managing Committee are bound to take undue advantage of the Remand Home. There are about 81 boys and girls in the Remand Home there. Seventeen out of them are girls. Some of them are grown-up girls. During the last Ganapathi Festival a very nasty incident took place. One of the sons of a Managing Committee member took a girl aged 17 from the Remand Home to his house at 7-30 in the evening without the permission of the Lady Probation Officer with her absence and brought her back at 12-30 midnight. The Lady Probation Officer after coming to know about this, filed a complaint immediately at 2 P.M. in the night to the police station, but unfortunately that complaint was summarily disposed of.

Similarly, Sir, there is a lot of wastage and misuse of funds. Sir, the Remand Home gets a grant of Rs. 30,000 annually, but that amount is not properly utilised. That Remand Home has rented a Bungalow No. 11 in the Belgaum Fort Road. That bungalow is lying vacant for the last several years. The rent fixed is Rs. 100 per month I do not understand why there should be so much waste of public funds! I would request the Hon'ble Minister to look personally into this affair.

I am finishing, Sir. Some of the officers of the Remand Home are in the habit of drawing T.A. and D.A. unauthorisedly in contravention of the

(SRI B. R. SUNTHANKAR)

Rules. I am prepared to submit a list of such T.A., D.A. received by one or two officers. I would again request the Hon'ble Minister to investigate into the affair. In the former Bombay State, there used to be annual inspection and audit of accounts of such associations. Since the inauguration of this new State, there has been neither any inspection nor auditing of the accounts of this Association. This is rather surprising. I would request the Hon'ble Minister to personally look into the affairs of this Remand Home and After-Care Association, and investigate all such matters

I have done Sir.

*Sri B. G. KHOT (Sadalga).—Sir, I am not a lawyer. I have a little working knowledge of laws. But still I desire to place before the Treasury Benches my own experience of what I am undergoing these years. Litigation has attained its topmost in the rural areas. I insist on the Treasury Benches trying to minimise litigation. How to minimise this litigation is the question. For minimising it there are two ways, according to me. One is to take serious steps against the village touts, the so-called pleaders. That arrangement is as necessary as anything. I hold the Treasury Benches responsible for the other thing--I request them not to make statutes concerning our own social life.

Mr. SPEAKER.—Not only the Treasury Benches, I hold the Law Minister responsible in particular! (*Laughter*).

Sri B. G. KHOT.—I hold the entire Council of Ministers responsible, because they are making statutes after statutes calculated to interfere with the settled social life of the people. This is injurious to the interests of our rural life. By this the Government are setting up class against class. Take for instance, the Tenancy Act, Rent Act the Debt Reconciliation Act, etc. All these things which we are enacting, will have the effect of interfering with domestic peaceful life in our villages. Therefore I request the Government that they should not hasten to make such statutes that will not only put a strain on social life, but also upset it. They must study the effects fully before they try to make statutes.

The other request is, minorities should not in any case be neglected in the matter of appointments, etc. They should be given more than adequate representation in the services. Of course, it must no doubt be based on merits only. I hope and trust that the Government will do this.

*Sri BALWANT RAO (Bhalki).—Mr. Speaker, Sir, I want to suggest only two or three points. The first point is regarding appointment of Urdu-knowing Judges in the State High Court. For a long time, after the Reorganisation, only one Urdu-knowing Judge was appointed after one year. Owing to this, Urdu files accumulated in the High Court and there was inordinate delay for a long time and no single civil case was disposed of. Only five or six cases were disposed of. There is again an accumulation of cases in the High Court. I understand that one single Urdu-knowing Judge is not found to be enough. Therefore I suggest that at least one more Urdu-knowing judge be appointed to our High Court.

The next point is, sometimes, we see that magistrates and judges of mofussil courts are transferred to distant places. For exampsle, the Magistrate in Bidar District is transferred to Bangalore District Magistrates coming from the Hyderbad district know English and Urdu and if such Magistrates are transferred to places where Kannada and English are prevalent, how can we expect judges and magistrates who do not know the regional languages to dispose of cases satisfactorily and expeditiously? The magistrate from Mangalore District does not know Urdu. How can he dispose of cases where records are built up in Urdu? Therefore my suggestion is that such transfers may not be made or they may be stopped as early as possible.

The third point is: Sri Sunthankar has already referred to Marathi. Bidar District also is a bilingual area and there are no facilities for Marathi

speaking people in that area. I therefore suggest and support my Hon'ble friend in saying that Marathi be deemed as official language in courts also.

The next point is, there is no Remand Home in Bhalki and every time the accused persons are brought from jail and sent back. I therefore suggest that one Remand Home be established in Bidar District at Bhalki.

*ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸಭಾಪತಿಗಳೇ, ನಾನು ಇವತ್ತಿನ ದಿವಸ ಡಿಮ್ಯಾಂಡ್ ನಂಬರ್ 16. ಜೈಲು ಆಡಳಿತದ ಬಗ್ಗೆ ಇಲ್ಲಿ ನಡೆದಂತಹ ಚರ್ಚೆಗೆ ಉತ್ತರಕೊಡಲು ನಿಂತಿದ್ದೇನೆ. ನನ್ನ ತರುವಾಯ ನನ್ನ ಉಳಿದ ಮಾನ್ಯಮಿತ್ರರು ಇತರ ಚರ್ಚೆಗಳಿಗೆ ಉತ್ತರಕೊಡುತ್ತಾರೆ. ಜೈಲು ಆಡಳಿತದ ಬಗ್ಗೆ ಅನೇಕ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡುತ್ತಾ ಅನೇಕ ಉತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ಸಲಹೆಗಳನ್ನು ಎಷ್ಟರಮಟ್ಟಿಗೆ ಜಾರಿಗೆ ತರಬಹುದು ಎನ್ನುವುದರ ಬಗ್ಗೆ ನಾನು ಗಂಭೀರವಾಗಿ ವಿಚಾರಮಾಡಿದೆ. ಕೆಲವು ಮಾನ್ಯಸದಸ್ಯರು ಯಾವುದೂ ವಿಧಾಯಕವಾದ ಸಲಹೆಗಳನ್ನು ಕೊಡದೇ ಜೈಲು ಆಡಳಿತ ಸರಿಯಾಗಿ ನಡೆಯುತ್ತಿಲ್ಲ, ಬ್ರಿಟಿಷರು ಹಾಕಿಕೊಟ್ಟಂಥ ಒಂದು ಪದ್ಧತಿಯಲ್ಲೇ ಇವತ್ತಿನ ದಿವಸವೂ ಆಡಳಿತ ನಡೆಯುತ್ತಾ ಇದೆ, ಇದರಲ್ಲಿ ಯಾವತರಹದ ಸುಧಾರಣೆಯೂ ಆಗಿಲ್ಲ ಎಂದು ಒಂದು ರೀತಿ ಆರೋಪಣೆ ಮಾಡಿದರೇ ಹೊರತು ವಿಧಾಯಕವಾಗಿ ಯಾವತರಹದ ಸಲಹೆಯನ್ನೂ ಕೊಟ್ಟಿಲ್ಲ.

ಆದರೂಕೂಡ ಜೈಲಿನ ಆಡಳಿತದಲ್ಲಿ ಸುಧಾರಣೆಯಾಗತಕ್ಕ ಬಗ್ಗೆ ಮತ್ತು ಜೈಲಿನಲ್ಲಿರತಕ್ಕವರ ರಕ್ಷಣೆಯ ಬಗ್ಗೆ ಹಾಗೂ ಜೈಲಿಗೆ ಬರತಕ್ಕ ಜನಗಳಿಗೆ ಅವರು ಜೈಲಿನಲ್ಲಿರುವ ಒಂದು ಅವಧಿಯಲ್ಲಿ ಅವರ ಮಾನಸಿಕ ಪರಿವರ್ತನೆಯಾಗಿ, ಅವರು ಜೈಲಿಂದ ಹೊರಗೆ ಬಂದ ಅನಂತರ ಇವರೂ ಕೂಡ ಯೋಗ್ಯ ನಾಗರಿಕರಾಗಿ ಸಮಾಜದಲ್ಲಿ ಒಂದು ಮರ್ಯಾದೆ ಗಳಿಸುವಂಥ ರೀತಿಯಲ್ಲಿ ಸುಖವಾಗಿ ತಮ್ಮ ಜೀವನೋಪಾಯ ನಡೆಸಿಕೊಂಡು ಹೋಗಲು ಅವಕಾಶಗಳಿರಬೇಕೆಂಬ ಉದ್ದೇಶದಿಂದ ಅವರೆಲ್ಲರೂ ಟೀಕೆ ಮಾಡಿದ್ದಾರೆಂದು ತಿಳಿದುಕೊಂಡು ಈ ಜೈಲಿನ ಆಡಳಿತದ ಬಗ್ಗೆ ನಡೆದಂಥ ಚರ್ಚೆಯಲ್ಲಿ ಭಾಗವಹಿಸಿದ್ದಂಥವರಿಗೆಲ್ಲ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನರ್ಪಿಸುತ್ತೇನೆ.

ಇನ್ನು ಜೈಲಿನ ಆಡಳಿತದ ಬಗ್ಗೆ ಸರ್ಕಾರದವರ ಧೋರಣೆ ಅಥವಾ ಅವರ ಒಂದು ಪಾಲಿಸಿ ಏನಿದೆ ಎಂಬುದರ ಬಗ್ಗೆ ಈ ವರೆಗೂ ಮಾನ್ಯ ಸದಸ್ಯರೆಲ್ಲ ಹೇಳಿರುವಂತೆ ಇದರಲ್ಲಿ ಯಾರಿಗೂ ಎರಡು ವಿಚಾರಗಳಿಲ್ಲ. ಮಾನ್ಯ ಸದಸ್ಯರಿಗೂ ಸರ್ಕಾರಕ್ಕೂ ಈ ವಿಚಾರಗಳಲ್ಲಿ ಭಿನ್ನಾಭಿಪ್ರಾಯವೇನೂ ಇಲ್ಲ. ಈಗ ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರಗಳೇನಿವೆ ಅವುಗಳಿಗೆ ಹೊಂದಾವಣಿಕೆಯಾಗತಕ್ಕಂಥ ಪಾಲಿಸಿ ಮತ್ತು ಧೋರಣೆಗಳನ್ನು ಸರ್ಕಾರ ಕೈಗೊಂಡಿದೆ. ಸಾಮಾನ್ಯವಾಗಿ ಜೈಲಿಗೆ ಬರತಕ್ಕಂಥ ಜನರಲ್ಲಿ ಸಮಾಜದಲ್ಲಿರುವ ಮಧ್ಯಮ ವರ್ಗದವರು, ಹೈಕ್ಲಾಸ್‌ಗೆ ಸೇರಿದ ಜನರು ಬರುವುದು ಬಹಳ ಅಪರೂಪ. ಕೀಳು ತರಗತಿಯ ಜನರೇ ಹೆಚ್ಚಾಗಿರುತ್ತಾರೆ. ಈ ಜನ ಜೈಲಿನಿಂದ ಹೊರಗಡೆ ಬಂದಮೇಲೆ ಸಮಾಜ ಇವರನ್ನು ದೂರವಿಟ್ಟು ಬಿಡುತ್ತದೆ. ಸಮಾಜದಿಂದಲೇ ಇವರನ್ನು ಹೊರಗೆ ಹಾಕಲಾಗುತ್ತಿದೆ. ಸಮಾಜ ಇವರನ್ನು ಒಳ್ಳೆಯ ಹಾದಿಗೆ ತರಲು ಪ್ರಯತ್ನ ಮಾಡುತ್ತಿಲ್ಲ. ಯಾರಾದರೂ ಏನೋ ಒಂದು ತಪ್ಪುಮಾಡಿ ಅಥವಾ ಏನೋ ಒಂದು ಕಾರಣದಿಂದ ಕಾನೂನು ಭಂಗಮಾಡಿ ಜೈಲಿಗೆ ಬರತಕ್ಕಂಥ ಜನಗಳಿಗೆ ಅವರು ಮಾಡಿರತಕ್ಕಂಥ ತಪ್ಪು ಕೃತ್ಯಗಳ ಬಗ್ಗೆ ಅಥವಾ ಅವರ ಒಂದು ದುಷ್ಟ ನಡತೆಯ ಬಗ್ಗೆ ಅವರು ಜೈಲಿನಲ್ಲಿ ವಾಸ ಮಾಡತಕ್ಕ ಅವಧಿಯೊಳಗೆ ಅವರ ಮನಸ್ಸಿಗೆ ಪಶ್ಚಾತ್ತಾಪ ಉಂಟಾಗಿ, ಇನ್ನು ಮುಂದಾದರೂ ನಾವು ಇಂಥ ಅಕೃತ್ಯಗಳನ್ನು ನಡೆಸಬಾರದೆಂದು ಅವರಲ್ಲಿ ಮಾನಸಿಕ ಪರಿವರ್ತನೆಯಾದರೆ ಆಗ ಅವರು ಜೈಲಿನಿಂದ ಹೊರಗಡೆಗೆ ಬಂದಾಗ ಇತರ ಎಲ್ಲ ಯೋಗ್ಯ ನಾಗರಿಕರಂತೆ ಒಂದು ಸನ್ಮಾರ್ಗದಲ್ಲಿ ಜೀವನ ನಡೆಸಿಕೊಂಡು ಹೋಗಲು ಯೋಗ್ಯವಾಗಿರುವಂಥ ರೀತಿಯಲ್ಲಿ ಈ ಜೈಲಿನ ಆಡಳಿತವನ್ನು ನಡೆಸಬೇಕೆಂದು ನಾವು ಪ್ರಯತ್ನ ಮಾಡಿದ್ದೇವೆ. ಆದರೆ ನಮ್ಮ ಈ ಪ್ರಯತ್ನ ಎಷ್ಟರಮಟ್ಟಿಗೆ ಸಫಲವಾಗಿದೆ ಎಂಬುದನ್ನು ಈಗಲೇ ಹೇಳುವುದಕ್ಕೆ ಸಾಧ್ಯವಿಲ್ಲ. ಜೈಲಿನ ಆಡಳಿತವೆಲ್ಲ ಈ ದಿವಸ ಸರಿಯಾಗಿ ನಡೆಯುತ್ತಿದೆ ಇದರಲ್ಲಿ ನ್ಯೂನತೆಗಳೇನೂ ಇಲ್ಲ ಎಂದು ಹೇಳುವುದಕ್ಕಾಗಿ ನಾನೀಗ ನಿಂತಿಲ್ಲ. ಈಗ ತಾನೆ ಮಾತನಾಡಿದ ಶ್ರೀ ಸಿ. ಕೆ. ರಾಜಯ್ಯಶೆಟ್ಟರು ಜೈಲಿನ ಆಡಳಿತದ ಬಗ್ಗೆ ಬಹಳ ವಿವರವಾಗಿ ಮಾತನಾಡಿದ್ದಾರೆ. ಈ ಬಗ್ಗೆ ಅನೇಕ ಕುಂದುಕೊರತೆಗಳಿರಬಹುದು. ಸದಸ್ಯರುಗಳು ಹೇಳಿರತಕ್ಕ ಅಂಶಗಳೆಲ್ಲ ಶುದ್ಧ ತಪ್ಪು, ಅವುಗಳೆಲ್ಲ ಸುಳ್ಳೆಂದು ಹೇಳುವುದಕ್ಕಾಗಿ ನಾನೀಗ ನಿಂತಿಲ್ಲ. ಈ ಜೈಲುಗಳ ಬಗ್ಗೆ ಏನೇನು ಸುಧಾರಣೆಗಳಾಗಬೇಕಾಗಿದೆಯೋ, ಆಡಳಿತದ ಬಗ್ಗೆ ಏನೇನು ಮಾರ್ಪಾಡುಗಳಾಗಬೇಕಾಗಿವೆಯೋ ಅವೆಲ್ಲವನ್ನೂ ನಾವೂ ನೀವೂ ಒಟ್ಟಾಗಿ ಒಮ್ಮನಸ್ಸಿನಿಂದ ಕೂಡಿ ಮಾಡೋಣ. ಈ ಬಗ್ಗೆ ನಮಗೆ ನಿಮ್ಮ ನೆರವು ಇದ್ದೇ ಇರುತ್ತದೆಂಬ ಭರವಸೆಯಿಂದ ನಾನೀಗ ಈ ಜೈಲುಗಳ ಆಡಳಿತ ನಡೆಸುತ್ತಿದ್ದೇನೆ. ಈ ಒಂದು ಅಭಿಪ್ರಾಯದ ಮೇಲೆ ಈ ಆಡಳಿತವನ್ನು ಸಾಧ್ಯವಾದ ಮಟ್ಟಿಗೂ ಸುಧಾರಣೆ ಮಾಡುತ್ತೇವೆಂಬ ಭರವಸೆಯನ್ನು ನಾನೀಗ ತಮಗೆ ಕೊಡುತ್ತಿದ್ದೇನೆ. ಆದರೆ ನಾನಾಗಲೇ ತಿಳಿಸಿದಂತೆ ಶಿಕ್ಷೆಗೆ ಗುರಿಯಾಗಿ ಜೈಲುಗಳಿಗೆ ಖೈದಿಗಳಾಗಿ ಬರತಕ್ಕ ಜನರಬಗ್ಗೆ ಅವರಲ್ಲಿ ಎಷ್ಟು ಜನ ಮಧ್ಯಮ ತರಗತಿಗೆ ಸೇರಿರುತ್ತಾರೆ, ಎಷ್ಟು ಜನ ಉಚ್ಚತರಗತಿಗೆ ಸೇರಿರುತ್ತಾರೆ ಎಂಬುದರ ಬಗ್ಗೆ ನಮಗಿನ್ನೂ ಖಚಿತವಾದ ಅಂಕಿ ಅಂಶಗಳು ದೊರೆತಿಲ್ಲ. ಆದರೆ ಇಷ್ಟು ಮಾತ್ರ ಹೇಳಬಹುದು. ಜೈಲಿಗೆ ಬರತಕ್ಕವರಲ್ಲಿ ವಿದ್ಯಾವಂತರಾದ ಜನರ ಹಾಗೂ ಹೈಕ್ಲಾಸ್ ಜನರ ಸಂಖ್ಯೆ ತೀರ ಅಲ್ಪ. ಜೈಲಿಗೆ ಖೈದಿಗಳಾಗಿ ಬರತಕ್ಕ ಜನರಲ್ಲಿ ನೂರಕ್ಕೆ ಸುಮಾರು 80 ಜನ ಯಾರಿರುತ್ತಾರೆಂದರೆ ಯಾರಿಗೆ ಸರಿಯಾಗಿ ತಮ್ಮ ಜೀವನ ನಡೆಸಲಿಕ್ಕೆ ಮಾರ್ಗವಿಲ್ಲವೋ ಯಾರಿಗೊಂದು ದುಡಿಮೆ ಮಾಡಲು ಮಾರ್ಗವಿರುವುದಿಲ್ಲವೋ ಅಂಥ ಜನರೇ ಹೆಚ್ಚಾಗಿರುತ್ತಾರೆ. ಆ ಜನರು ಕಾನೂನು ಭಂಗ ಮಾಡತಕ್ಕಂಥ ಕಾರ್ಯಗಳನ್ನು ಮಾಡುತ್ತಾರೆ. ಇನ್ನು ಬೇರೆ ಕಾರಣಗಳಿಂದ ಶಿಕ್ಷೆಗೊಳಗಾಗತಕ್ಕವರ ಸಂಖ್ಯೆ ಬಹಳ ಕಡಮೆ. ಜನಗಳಿಗೆ ಮೊದಲು ಹೊಟ್ಟೆಯ ಸಮಸ್ಯೆ. ಹೊಟ್ಟೆ ತುಂಬಿಕೊಳ್ಳಲು ಯಾವ ಉಪಾಯವೂ ಇಲ್ಲದೆ ಹೋದರೆ ಭಿಕ್ಷೆ ಬೇಡುತ್ತಾರೆ. ಸಮಾಜದಲ್ಲಿ ಅದಕ್ಕೂ ತಾಪತ್ರಯವಾದಾಗ ಅವರು ಅಕೃತ್ಯಗಳಿಗೆ ಕೈಹಾಕುತ್ತಾರೆ. ಸಮಾಜದಲ್ಲೂ ಕೆಲವು

(ಶ್ರೀ ವೀರೇಂದ್ರ ಪಾಟೀಲ್)

ಕೊರತೆಗಳಿವೆ. ಹೀಗೆ ಜನರು ದುರ್ದೈವದಿಂದ ನಾನಾ ರೀತಿಯಲ್ಲಿ ಕುಂದುಕೊರತೆಗಳಿಗೊಳಗಾಗಿ ಜೈಲುವಾಸಕ್ಕೆ ಬರುತ್ತಿದ್ದಾರೆ. ಇವರು ಜೈಲಿನಿಂದ ಹೊರಗೆ ಬಂದ ಅನಂತರವಾದರೂ ಇವರನ್ನು ಸಮಾಜ ಯಾವ ರೀತಿ ಕಾಣುತ್ತಿದೆ? ಈಗ ನಾನು ಹೇಳುತ್ತಿರುವ ವಿಚಾರಗಳೆಲ್ಲ ಕೇವಲ ನನ್ನ ವೈಯಕ್ತಿಕವಾದ ಅಭಿಪ್ರಾಯಗಳಾಗಿವೆ. ಆದುದರಿಂದ ಇವುಗಳು ಸರಿಯಾಗಿದ್ದರೂ ಇರಬಹುದು ಅಥವಾ ಸರಿಯಿಲ್ಲದಿದ್ದರೂ ಇರಬಹುದು. ಈ ಹಿಂದೆ ಇದೇ ವಿಧಾನ ಸೌಧ ಕಟ್ಟಡವನ್ನು ಕಟ್ಟುತ್ತಿದ್ದ ಕಾಲದಲ್ಲಿ ಕೆಲಸಮಾಡುತ್ತಿದ್ದ ಸಾಮಾನ್ಯ ಕೂಲಿಗಾರರ ಜೊತೆಗೆ ಈ ಕಟ್ಟಡದ ಕೆಲಸ ನಡೆಸಲು ಸೆಂಟ್ರಲ್‌ಜೈಲಿನಲ್ಲಿದ್ದ ಖೈದಿಗಳನ್ನೂ ಸಹ ಕರೆದುಕೊಂಡು ಬಂದಿದ್ದ ವೇಳೆಯಲ್ಲಿ ಆ ಸಾಮಾನ್ಯ ಕೂಲಿಗಾರರೆಲ್ಲ ನಾವು ಈ ಖೈದಿಗಳ ಜೊತೆಯಲ್ಲಿ ಕೆಲಸ ಮಾಡಲು ತಯಾರಿಲ್ಲವೆಂದು ಒಂದು ಪ್ರತಿಭಟನೆ ನಡೆಸಲಾಗಿತ್ತೆಂಬ ಒಂದು ಸುದ್ದಿಯನ್ನು ನಾನು ಕೇಳಿದ್ದೆನು. ಆದರೆ ಆ ಕಾಲಕ್ಕೆ ನಾನು ಇಲ್ಲಿ ಇದ್ದಿಲ್ಲ. ಆದುದರಿಂದ ಆ ಸುದ್ದಿ ಎಷ್ಟರಮಟ್ಟಿಗೆ ಸರಿಯಾದದ್ದು ಅಥವಾ ಅಲ್ಲ ಎಂಬ ವಿಚಾರ ನನಗೆ ಗೊತ್ತಿಲ್ಲ. ಈಗ ನಾನು ಈ ವಿಚಾರವನ್ನು ಏಕೆ ಹೇಳುತ್ತಿದ್ದೇನೆಂದರೆ ಖೈದಿಗಳಾಗಿದ್ದಂಥ ಜನರು ಜೈಲಿನಿಂದ ಹೊರಕ್ಕೆ ಬಂದ ಮೇಲೆ ಏನೋ ದುರ್ದೈವದಿಂದ ತಪ್ಪುಮಾಡಿ ಶಿಕ್ಷೆಗೊಳಗಾಗಿದ್ದಾರೆ, ಇವರಿಗೂ ಸಮಾಜದಲ್ಲಿ ಒಂದು ಸ್ಥಾನಮಾನ ದೊರಕಿಸಿಕೊಡೋಣ ಎನ್ನುವಂಥಾ ಭಾವನೆ ಜನಗಳಲ್ಲಿಲ್ಲ. ಜೈಲಿನಿಂದ ಹೊರಗೆ ಬಂದ ಜನರನ್ನು ಯಾರೂ ಹತ್ತಿರ ಸೇರಿಸುವುದಿಲ್ಲ. ಎಲ್ಲಿಯೂ ಇವರಿಗೆ ಉದ್ಯೋಗಗಳು ದೊರೆಯುವುದಿಲ್ಲ; ಕೈಗಾರಿಕೆಗಳಲ್ಲಿ ಇವರಿಗೆ ಕೆಲಸ ಕೊಡಲು ಅವರಿಗೆ ಉತ್ತೇಜನವಿಲ್ಲ. ಹೀಗೆಲ್ಲಾ ಆಗಿ ಅವರ ಜೀವನವೇ ಒಂದು ಬಹಳ ದುಸ್ತರಸ್ಥಿತಿಯಲ್ಲಿರುತ್ತದೆಂಬುದನ್ನು ನಾನೀಗ ತಿಳಿಸುತ್ತಿದ್ದೇನೆ. ಇವರಿಗೆ ಎಲ್ಲಿಯೂ ಸಾಲ ದೊರೆಯುವುದಿಲ್ಲ. ಹೀಗೆಲ್ಲ ಸಮಾಜ ಈ ಜನರನ್ನು ಬಹಳ ಕೀಳುದೃಷ್ಟಿಯಿಂದ ನೋಡುತ್ತಿದೆ. ಜೈಲಿನಿಂದ ಹೊರಗೆಬಂದ ಜನರು ಜೀವಂತರಾಗಿ ಬಾಳುವುದೇ ಬಹಳ ಕಷ್ಟವಾಗಿದೆ. ಈ ದಿವಸ ನಮ್ಮ ಸಮಾಜ ಈ ರೀತಿಯಲ್ಲಿರುತ್ತದೆಂದು ನನ್ನ ಭಾವನೆ. ಈ ದಿವಸ ಕೆಲವು ಕಡೆ ಜೈಲಿಗೆ ಬರತಕ್ಕ ಜನರಲ್ಲಿ ನಾಲ್ಕನೆಯ ಸಲಕ್ಕೆ, ಐದನೆಯ ಸಲಕ್ಕೆ, ಆರನೆಯ ಸಲಕ್ಕೆ, ಏಳನೆಯ ಸಲಕ್ಕೆ ಬರುತ್ತಿರುವಂಥಾ ಜನರೂ ಇದ್ದಾರೆ. ಮೊದಲನೆಯ ಸಲ ಜೈಲಿಗೆ ಬಂದಿರತಕ್ಕಂಥ ಜನರ ಸಂಖ್ಯೆ ಬಹಳ ಕಡಮೆ. ಜನರು ಹೀಗೆ ಏನೋ ಕಾರಣಾಂತರದಿಂದ ಒಂದು ಸಾರಿ ಜೈಲಿಗೆ ಹೋಗಬಹುದು. ಆದರೂ ಸಮಾಜ ಅವರನ್ನು ಪುನಃ ಮೇಲಕ್ಕೆತ್ತಿಕೊಳ್ಳಬೇಕು. ಅವರಿಗೂ ಸಮಾಜದಲ್ಲೊಂದು ಸ್ಥಾನಮಾನ ಕೊಡಬೇಕು. ಇಂಥ ಒಂದು ಸದ್ಭಾವನೆ ಸಮಾಜ ಬಾಂಧವರಲ್ಲಿ ಬರಬೇಕಾದದ್ದು ಅತ್ಯಗತ್ಯ. ಈ ವಿಚಾರಗಳೆಲ್ಲೆಲ್ಲ ಸಮಾಜ ಮತ್ತು ಸರ್ಕಾರ ಒಟ್ಟಿಗೆ ಸೇರಿ ಒಂದು ಸುಧಾರಣೆ ತರಬೇಕಾಗಿದೆ ಎಂದು ಶ್ರೀ ಮಲ್ಲಾರಾಧ್ಯರವರು ಹೇಳಿದ್ದು ಸರಿ. ಈ ಕಾರ್ಯ ಬರಿಯ ಜೈಲಿನ ಅಡ್ಮಿನಿಸ್ಟ್ರೇಷನ್ನಿನ ಸುಧಾರಣೆಯೊಂದರಿಂದಲೇ ಆಗದು. ಈ ವಿಚಾರಗಳೆಲ್ಲ ಅಷ್ಟೇನೂ ಮಹತ್ತರವಾದುವುಗಳಲ್ಲ. ನಮ್ಮಲ್ಲಿ ಈ ದಿವಸ ಸಮಾಜದಲ್ಲಿ ಅಂಥ ಮಹತ್ತರವಾದ ಇನ್‌ಸ್ಟಿಟ್ಯೂಷನ್‌ಗಳಿಲ್ಲ. ಸಂಸ್ಥೆಗಳಾಗಲೀ—ಸಮಾಜವಾಗಲಿ ಅಷ್ಟು ಕಡೆಗಣ್ಣಿನಿಂದ ನೋಡತಕ್ಕಂಥ ವಿಚಾರವಲ್ಲ ಇದು. ಈ ದಿವಸ ಸಮಾಜ ಏನೋ ಒಂದು ರೆಪ್ಯುಟೇಷನ್ ಸಲುವಾಗಿ ಈ ರೀತಿ ಕೀಳು ಭಾವನೆಯಿಂದ ಕಾಣುತ್ತಿದೆ. ಈ ಜನರನ್ನು ನಮ್ಮ ಸಮಾಜ ಮತ್ತು ಸಂಸ್ಥೆಗಳು ಅಭಿವೃದ್ಧಿಗೆ ತರಬೇಕಾಗಿದೆ. ಎಲ್ಲರೂ ಸೇರಿ ಮಾಡತಕ್ಕಂಥ ಒಂದು ಮಹತ್ಕಾರ್ಯ ಇದು ಎಂದು ತಿಳಿಸಬಯಸುತ್ತೇನೆ. ಸರ್ಕಾರದವರಾದರೂ ಸಹ ಈ ವಿಚಾರವನ್ನು ಅಷ್ಟೇನೂ ಲಘುವಾಗಿ ಕಾಣುತ್ತಿಲ್ಲ, ಇದಕ್ಕೆ ಒಂದೇ ಉದಾಹರಣೆ ಕೊಡಬೇಕೆಂದರೆ—ಈ ವಿಚಾರ ಹಳೆಯ ಮೈಸೂರಿನವರಿಗೆ ಚೆನ್ನಾಗಿ ಗೊತ್ತಿದೆ.—ಈ ಹಿಂದೆ ಮೈಸೂರಿನಲ್ಲಿ ಜೈಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಒಬ್ಬ ಪ್ರತ್ಯೇಕ ಇಲಾಖಾ ಮೊಖ್ತೇಸರರು ಇದ್ದಿಲ್ಲ. ಬೇರೆ ಇಲಾಖೆಗಳ ಅಧಿಕಾರಿಗಳು ಈ ಬಾಬನ್ನು ಪಾರ್ಟ್ ಟೈಂವರ್ಕ್‌ನೋಪಾದಿಯಲ್ಲಿ ನೋಡಿಕೊಳ್ಳುತ್ತಿದ್ದರು. ಕೆಲವುಕಾಲ ಮೆಡಿಕಲ್ ಇಲಾಖೆಯ ಮೊಖ್ತೇಸರರೂ, ಕೆಲವು ಕಾಲ ಡಿಸ್ಟ್ರಿಕ್ಟ್ ಜಡ್ಜ್‌ರೂ ಹೀಗೆ ಇನ್ನೂ ಯಾರು ಯಾರೋ ಇದರ ಆಡಳಿತ ನೋಡಿಕೊಳ್ಳುತ್ತಿದ್ದರು. ಆದರೆ ಇತ್ತೀಚೆಗೆ ರಾಜ್ಯಗಳ ಪುನರ್‌ನಿರ್ಮಾಣವಾದ ನಂತರ ಸರ್ಕಾರ ಈ ಇಲಾಖೆಗೇ ಪ್ರತ್ಯೇಕವಾಗಿ ಒಂದು ಇನ್‌ಸ್ಪೆಕ್ಟರ್ ಜನರಲ್ ಆಫ್ ಪ್ರಿಸನ್ಸ್ ಎಂಬ ಹುದ್ದೆಯನ್ನು ನೇಮಕ ಮಾಡಿದೆ. ಇತ್ತೀಚೆಗೆ ಹೊಸ ಮೈಸೂರು ರಾಜ್ಯವಾದ ಮೇಲೆ ದೇಶ ಮೊದಲಿದ್ದುದಕ್ಕಿಂತಲೂ ಎರಡು ಪಟ್ಟು ಹೆಚ್ಚಾಗಿದೆ. ಜೈಲುಗಳ ಮತ್ತು ಲಾಕಪ್‌ಗಳ ಸಂಖ್ಯೆ ಜಾಸ್ತಿಯಾಗಿದೆ. ಇವುಗಳ ಆಡಳಿತವನ್ನು ಒಂದು ಸುವ್ಯವಸ್ಥೆಯಿಂದ ನಡೆಸುವಂತೆ ಮಾಡಬೇಕೆಂಬ ಉದ್ದೇಶದಿಂದ ತಾರೀಖು ಒಂದನೆ ನವಂಬರ್ 1956ರಲ್ಲಿ Inspector General of Prisons ಎಂಬ ಉಚ್ಚ ದರ್ಜೆಯ ಅಧಿಕಾರಿಗಳನ್ನು ನೇಮಿಸಲಾಯಿತು. ಆದರೆ ಕೆಲವು ಕಾರಣಗಳಿಂದ ಅವರ ಮೇಲೆ ಯಾವುದೋ ಒಂದು ಎನ್‌ಕ್ವೈರಿ ನಡೆಯುತ್ತಿದೆ. ಆದ್ದರಿಂದ ಈಗ ಆ ಸ್ಥಳ ಖಾಲಿ ಇದೆ. ಆದರೆ ಇವರ ವಿಚಾರಣೆ ಆದಷ್ಟು ಬೇಗ ಪೂರೈಸಬಹುದು; ಆಗ ಅವರನ್ನೇ ಆ ಸ್ಥಾನಕ್ಕೆ ಹಾಕಿದರಾಗುತ್ತದೆಂಬ ಉದ್ದೇಶದಿಂದ ಬೇರೆ ಯಾರನ್ನೂ ಈ ಸ್ಥಾನಕ್ಕೆ ನೇಮಕ ಮಾಡಿಲ್ಲ. ಅವರ ಬಗ್ಗೆ ನಡೆಯಲಿರುವ ಎನ್‌ಕ್ವೈರಿ ಆದಷ್ಟು ಬೇಗ ಪೂರೈಸಿ ವಿಚಾರಗಳೆಲ್ಲ ಒಂದು ಹಾದಿಗೆ ಬರಬಹುದೆಂಬ ಆಸೆಯಿಂದ ಈ ಸ್ಥಾನವಿನ್ನೂ ಖಾಲಿ ಇದೆ. ಈ ಬಗ್ಗೆ ನಾವು ಆದಷ್ಟು ತ್ವರಿತದಿಂದ ವಿಚಾರ ಮಾಡುತ್ತೇವೆಂದು ತಮಗೆ ನಾನು ಆಶ್ವಾಸನ ಕೊಡಬಯಸುತ್ತೇನೆ.

ಇನ್ನು ಮುಂದೆ, ಮಾನ್ಯ ಸದಸ್ಯರು ಒಬ್ಬೊಬ್ಬರೂ ಇದರ ಆಡಳಿತದ ಬಗ್ಗೆ ಟೀಕೆಗಳನ್ನೂ ಸಲಹೆಗಳನ್ನೂ ಏನು ಹೇಳಿದ್ದಾರೋ ಅದಕ್ಕೆ ಉತ್ತರ ಕೊಡುತ್ತೇನೆ. ವಿರೋಧ ಪಕ್ಷದ ನಾಯಕರಾದ ಶ್ರೀ ಕೆಂಚಪ್ಪನವರು ಮತ್ತು ಇನ್ನೂ ಅನೇಕ ವಿರೋಧ ಪಕ್ಷದ ಸದಸ್ಯರೂ ಈಗ ಸೋಷಿಯಲಿಸ್ಟರು ನಡೆಸುತ್ತಿರತಕ್ಕ ಸತ್ಯಾಗ್ರಹದ ಸಂಬಂಧದಲ್ಲಿ ಯಾರು ಯಾರು ಜೈಲಿನಲ್ಲಿದ್ದಾರೋ ಅವರನ್ನೂ ಕೂಡ ಸರ್ಕಾರ ಸರಿಯಾಗಿ ನೋಡಿಕೊಳ್ಳುತ್ತಿಲ್ಲ, ಅವರಿಗೆ ಸಾಕಷ್ಟು ಸೌಲಭ್ಯ, ಸೌಕರ್ಯಗಳನ್ನು ಕೊಡುತ್ತಿಲ್ಲ, ಅವರನ್ನೂ ಮನುಷ್ಯರಂತೆ ಕಾಣುವುದು ಸರ್ಕಾರದ ಧರ್ಮ ಎಂಬದಾಗಿ ಟೀಕೆ ಮಾಡಿದ್ದಾರೆ. ಹಾಲಿ ಸೋಷಿಯಲಿಸ್ಟ್ ಖೈದಿಗಳಿಗೆ ಕೊಟ್ಟಿರತಕ್ಕ ಸೌಕರ್ಯಗಳೇನು ಮತ್ತು ಅವರು ನಮ್ಮ ಮುಂದಿಟ್ಟಿರತಕ್ಕ demands ಏನು ಎಂಬುದನ್ನು ಸ್ವಲ್ಪದರಲ್ಲಿ ತಮ್ಮ ಮುಂದೆ ಇಡಬಯಸುತ್ತೇನೆ. ಸೋಷಿಯಲಿಸ್ಟ್ ಖೈದಿಗಳು 30ನೆಯ ಜನವರಿ 1958 ರಿಂದ ತಮ್ಮ ಚಳವಳಿ ಪ್ರಾರಂಭ ಮಾಡಿದ್ದಾರೆ. ಇದಕ್ಕೆ ಕಾರಣ ಅವರು ಕೊಟ್ಟಿದ್ದ 16 ಅಂಶಗಳ ಡಿಮ್ಯಾಂಡ್

ಪಟ್ಟಿಯಲ್ಲಿ ಏನೇನು ಹೇಳಿತ್ತೋ ಅದನ್ನು ಸರ್ಕಾರ ಒಪ್ಪಲಿಲ್ಲ ಎಂಬುದು. ಅದರ ಸಲುವಾಗಿ ಕಾನೂನು ಭಂಗಮಾಡಿ ಜೈಲಿಗೆ ಬರುವುದಕ್ಕೆ ಆರಂಭಿಸಿದರು.

ಈ ವಿಚಾರಗಳಲ್ಲಿ, ನಾವು ಜೈಲು ಮ್ಯಾನ್ಯುಯಲ್ ಪ್ರಕಾರ ಯಾವ ರೂಲ್ಸ್ ಹಾಕಿಕೊಂಡಿದ್ದೇವೋ ಅದನ್ನು ಅನುಸರಿಸುವುದು ಸ್ವಾಭಾವಿಕ. ಅವರು ಕೋರ್ಟ್ ಮುಂದೆ ಹೋದ ತರುವಾಯ ಶಿಕ್ಷೆಯಾಯಿತು. Under Trial Prisoner ಆಗಿದ್ದಾಗ ಅಥವಾ convict ಆದ ತರುವಾಯ ಅವರಿಗೇನಾದರೂ special classification ಆಗಬೇಕಾದರೆ, ತಮ್ಮ ಸಮಾಜದ ಸ್ಥಾನಕ್ಕೆ, ಅಂತಸ್ತಿಗೆ ಅನುಸಾರವಾಗಿ ಹೀಗೆ ಇರಿಸಬೇಕು, ಇಂಥ ಸೌಲಭ್ಯಗಳು ಬೇಕು ಎಂದು ಅಪೇಕ್ಷಿಸುವುದಾದರೆ, ಆತನು ಕೋರ್ಟಿಗೆ ಹೋಗಿ apply ಮಾಡಿಕೊಳ್ಳಬೇಕು.

AN HON'BLE MEMBER.—Then he would not be a Sathyagrahi.

ಶ್ರೀ ವೀರೇಂದ್ರ ಪಾಟೀಲ್.—ಅವರು ಸತ್ಯಾಗ್ರಹಿಗಳೇ ಇರಬಹುದು. ಆದರೂ ಕ್ರಿಮಿನಲ್ ಪ್ರೊಸೀಜರ್ ಕೋಡ್, ಇಂಡಿಯನ್ ಪೀನಲ್ ಕೋಡ್ ಪ್ರಕಾರ ಅವರಿಗೆ ಶಿಕ್ಷೆಯಾಗಿದೆ. ಶಿಕ್ಷೆ ಭೋಗಿಸುತ್ತಿದ್ದಾರೆ. ಅಗ್ಗೆ ಅವರು ತಮ್ಮ classification ಸಲುವಾಗಿ ಕೋರ್ಟಿಗೆ ಹೋಗಿ ಕೇಳಬಹುದಾಗಿತ್ತು. ತಾವು political prisoners, ತಮ್ಮನ್ನು ಈ ರೀತಿಯಾಗಿ classify ಮಾಡಬೇಕು ಎಂದು ಹೇಳುವುದರಲ್ಲಿ ಅವರಿಗೇನೂ ಅಡ್ಡಿ ಇಧ್ದಿಲ್ಲ. ನನಗೆ ತಿಳಿದ ಮಟ್ಟಿಗೆ ಅವರು ಯಾರೂ ಹಾಗೆ ಅರ್ಜಿ ಹಾಕಿಲ್ಲ. ಅವರು ನೇರವಾಗಿ ಸೂಪರಿಂಟೆಂಡೆಂಟರನ್ನೂ ತರುವಾಯ ಅಲ್ಲಿರತಕ್ಕ ಅಧಿಕಾರಿಗಳನ್ನೂ ನಮಗೆ ಈ ರೀತಿಯಾದಂಥ ಸೌಲಭ್ಯಗಳು ಬೇಕು, ಅಷ್ಟನ್ನೂ ಒದಗಿಸದಿದ್ದರೆ ತಾವು ಉಪವಾಸದ ಮುಷ್ಕರ ಹೂಡುತ್ತೇವೆಂದು ಹೇಳಿದರು. ನಮ್ಮಲ್ಲೂ ಕೂಡ ಅನೇಕ ಜನರು ಸತ್ಯಾಗ್ರಹ ಮಾಡಿದ್ದೇವೆ. ಇದೇನೂ ನಮಗೆ ಹೊಸದಲ್ಲ. ಯಾವ ರೀತಿ ನಡೆದುಕೊಳ್ಳಬೇಕೆಂದು ತಮ್ಮಿಂದ ಬುದ್ಧಿವಾದ ತೆಗೆದುಕೊಳ್ಳುವಂಥ ಅವಶ್ಯಕತೆಯಿಲ್ಲ. ಅಲ್ಲದೆ ಅವರಿಗೀಗ A ಕ್ಲಾಸ್‌ಗಿಂತ ಹೆಚ್ಚಿಗೆ ಅನುಕೂಲಗಳನ್ನು ಕೊಟ್ಟಿದೆ. ಅವರಿಗೆ ಕೊಟ್ಟಿರುವುದನ್ನು ಹೇಳುವುದಕ್ಕೆ ಮುನ್ನ A ಕ್ಲಾಸ್ ಖೈದಿಗಳಿಗೆ ಏನು ಕೊಡುತ್ತಾರೆ, ಜೈಲ್ ಮಾನ್ಯುಯಲ್ ಪ್ರಕಾರ ಏನಿದೆಯೆಂದು ಹೇಳುತ್ತೇನೆ. A ಕ್ಲಾಸ್ ಖೈದಿಗಳಿಗೆ. . . . .

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಾನು 840 ಜನ ಕಾಂಗ್ರೆಸ್ಸಿನವರನ್ನು convict ಮಾಡಿದ್ದೇನೆ!! . . . 840 Congressmen including top ranking persons!

ಶ್ರೀ ವೀರೇಂದ್ರ ಪಾಟೀಲ್.—A ಕ್ಲಾಸ್ ಖೈದಿಗಳಿಗೆ ಒದಗಿಸುವ ಸೌಲಭ್ಯಗಳು :

Morning—Wheat bread, tea or coffee.

Mid Day—Rice and wheat chapathi, ghee, vegetable curry, pepper water, butter-milk, curds.

Evening.—Tea or Coffee.

Night.—Rice and wheat chapathi, two vegetable curries, ghee, pepper water, butter milk.

ಶ್ರೀ ಜಿ. ಶಿವಪ್ಪ.—ಇದನ್ನೆಲ್ಲಾ ಕೊಟ್ಟರೂ ಕೂಡ P.S.P.ಯವರು ಹೋರಾಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇವು ಅವರು ಮೊದಲು ಬೇಡಿದ್ದು. ಮೊದಲು ಅವರು ಕೇಳಿದ್ದನ್ನು ಕೊಟ್ಟೆವು. ಆಮೇಲೆ ಇನ್ನೊಂದು ಬೇಕೆಂದು ಕೇಳಿದರು. ಅದನ್ನೂ ಕೊಟ್ಟೆವು. ಇದು ಕೊನೆಗೆ ಎಲ್ಲಿಗೆ ಬಂದಿದೆಯೆಂದು ಹೇಳುತ್ತೇನೆ : ಈಗ ಅವರು Soap soapnut powder, tooth powder, daily hot, water bath, one ounce of ghee, one coconut, toilet soap, news papers, beedis ಇತ್ಯಾದಿಗಳನ್ನು ಕೇಳುತ್ತಿದ್ದಾರೆ. ನಾವು ಮೇಲೆ ಹೇಳಿದಂತೆ ಸೌಲಭ್ಯಗಳನ್ನು ಒದಗಿಸಿದ ಅನಂತರವೂ ಸೆಂಟ್ರಲ್ ಜೈಲಿನ ಆರು ಏಳು ಜನರು ಸರ್ಕಾರಕ್ಕೆ 27ನೆಯ ಮಾರ್ಚಿ 1958ರಲ್ಲಿ ಒಂದು ನೋಟೀಸ್ ಕೊಟ್ಟರು. ನಮ್ಮ ಈ ಬೇಡಿಕೆಗಳನ್ನು ಪೂರೈಸದಿದ್ದರೆ 10ನೆಯ ಏಪ್ರಿಲ್ 1958ರಿಂದ ಮತ್ತೆ strike ಮಾಡುತ್ತೇವೆಂದು ತಿಳಿಸಿದ್ದಾರೆ. ಇದನ್ನೇಕೆ ತಮ್ಮ ಮುಂದೆ ಹೇಳುತ್ತೇನೆಂದರೆ, ತಾವು ರಚನಾತ್ಮಕ ರೀತಿಯಿಂದ ಸಲಹೆ ಕೊಡುತ್ತೀರೆಂದು ನನಗೆ ಗೊತ್ತು. ಅವರು ಕೇಳಿದ್ದಾರೆ :

"Increase in the quantity of coffee, sugar, milk. Supply of a table, chair, good blanket and mosquito net. Supply of two sets of non-prisoner's clothing, a pair of footwear, a pair of towels, tooth paste and tooth brush, and oil bath every week, meat to be given thrice a week, quantity of fuel to be increased, newspapers, a pack of Player's cigarette per day, to be provided." ಅವರ ಡಿಮ್ಯಾಂಡ್‌ಗಳು ಏನು ಎಂಬುದನ್ನು ತಮ್ಮ ಮುಂದಿಟ್ಟಿದ್ದೇನೆ. ಪ್ರತಿಯೊಬ್ಬರಿಗೂ ಪ್ಲೇಯರ್ಸ್ ಸಿಗರೇಟ್ ಪ್ಯಾಕೆಟ್ ಬೇಕೆಂದು ಹೇಳಿದರೆ, ಆ ಬೇಡಿಕೆಗಳು ಎಷ್ಟು ಮಾತ್ರ ಯೋಗ್ಯವಾಗಿವೆ ? ಎಲ್ಲಿಯವರೆಗೆ ನಾವು ಆ ಬೇಡಿಕೆಗಳನ್ನು ಪೂರೈಕೆ ಮಾಡಿಕೊಂಡು ಹೋಗಬೇಕು ?—ಇದಾದ ಮೇಲೆ ಅವರೇನು ಬೇಡುತ್ತಾರೆಂಬುದನ್ನೂ ಹೇಳುವುದಕ್ಕೆ ಸಾಧ್ಯವಿಲ್ಲ ! ಈ ರೀತಿಯಾಗಿ, ದೇಶದಲ್ಲಿ ಸೋಷಿಯಲಿಸ್ಟ್ ಆರ್ಡರ್ ತರಬೇಕೆಂದು ಹೇಳುವ ಜನ, ಜನಸಾಮಾನ್ಯರ ಪರಿಸ್ಥಿತಿ, ರೀತಿನೀತಿಗಳನ್ನು ಬದಲಾಯಿಸಬೇಕೆಂದು ಹೇಳುವ ಜನ, ಪ್ಲೇಯರ್ಸ್ ಸಿಗರೇಟ್ ಬೇಕು ಎಂದೆಲ್ಲಾ ಬೇಡುತ್ತಾ ಹೋದರೆ ಏನು ಹೇಳೋಣ ! ನಾನು ತಮ್ಮನ್ನೇ ಕೇಳುತ್ತೇನೆ, ಇವತ್ತಿನ ದಿವಸ ನಮ್ಮ ಸಮಾಜದಲ್ಲಿ, ಈ ಮಾನ್ಯ ಸದಸ್ಯರಲ್ಲೇ ಇಷ್ಟು ಐಟಂಗಳನ್ನು, ಊಟ, ಉಡಿಗೆತೊಡಿಗೆಗಳನ್ನು ಹೊಂದಿರುವವರು ಎಷ್ಟು ಜನರಿದ್ದಾರೆ ?

ಶ್ರೀ ಕೆ. ಕಂಚಪ್ಪ.—ತಾವೇನು ಮಾಡುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ನಾವು ಸಿಗರೇಟೇ ಸೇದುವುದಿಲ್ಲ. ಇವರು ರಾಜಕೀಯ ಬಂದಿಗಳು ! !

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ತೆಂಗಿನಕಾಯನ್ನು ತೆಗೆದುಕೊಂಡು ಏನು ಮಾಡುತ್ತಾರೆ ?

ಶ್ರೀ ಜೆ. ಬಿ. ಮಲ್ಲಾರಾಧ್ಯ.—ದೇವಸ್ಥಾನದಲ್ಲಿ ಒಡೆಯಲಿಕ್ಕೆ ತೆಗೆದುಕೊಂಡು ಹೋಗುತ್ತಾರೆ. (ನಗು)

ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಲೀಡರ್ ಆಫ್ ದಿ ಅಪೋಸಿಷನ್ನಿನವರಾದ ಶ್ರೀ ಕೆ. ಕೆಂಚಪ್ಪನವರು ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡಿದರು. ನಮ್ಮಲ್ಲಿ ಜೈಲುಗಳಲ್ಲಿರುವ ಲಾಕಪ್ಪುಗಳು ಇಂಗ್ಲಿಷರ ಕಾಲದಲ್ಲಿ ಕಟ್ಟಿದ್ದಂತೆ "ಬ್ಲಾಕು ಹೋಲ್ ಆಫ್ ಕಲ್ಕತ್ತಾ" ಇದ್ದಂತಿವೆ ಎಂದು ಹೇಳುತ್ತ ಇಂತಹ ಜೈಲುಗಳಲ್ಲಿರುವುದು ಯೋಗ್ಯವಲ್ಲ ಮತ್ತು ಯಾವ ಜೈಲುಗಳೂ ಇರಲು ಯೋಗ್ಯವಾಗಿಲ್ಲ ಎಂದರು.

ಶ್ರೀ ಕೆ. ಕೆಂಚಪ್ಪ.—ಕೆಲವು ಯೋಗ್ಯವಾದುವೂ ಇವೆ ಎಂದು ಹೇಳಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್.—ದಾವಣಗೆರೆಯೊಂದನ್ನು ಬಿಟ್ಟರೆ ಮತ್ತಾವುದೂ ಇಲ್ಲವೆಂದು ತಾವು ಹೇಳಿದ್ದೀರಿ. ಲಾಕಪ್ ಮತ್ತು ಜೈಲುಗಳ ಪರಿಸ್ಥಿತಿಯನ್ನು ನೋಡಿಕೊಂಡು ಯಾವುದು ಕಟ್ಟಿಸುವುದಕ್ಕೆ ಸಾಧ್ಯವಿದೆ, ಅದನ್ನು ಕಟ್ಟಿಸುವುದಕ್ಕಾಗಿ ವಿಚಾರ ಮಾಡುತ್ತಿದ್ದೇವೆ. ಆದರೆ ನಾನು ತಮಗೆ ಈ ವಿಚಾರವನ್ನು ತಿಳಿಸುತ್ತೇನೆ. 1947ನೆಯ ಇಸವಿಯ ಅನಂತರ ಮಂಡ್ಯದಲ್ಲಿರುವ ಡಿಸ್ಟ್ರಿಕ್ಟ್ ಲಾಕಪ್ಪನ್ನು ಹೊಸದಾಗಿ ಕಟ್ಟಿಸಲಾಯಿತು. ಇದೇ ರೀತಿಯಾಗಿ ಕೋಲಾರದ ಡಿಸ್ಟ್ರಿಕ್ಟಿನ ಲಾಕಪ್ಪನ್ನು ಹೊಸದಾಗಿ ಕಟ್ಟಿಸಲಾಯಿತು. ಇದೇ ರೀತಿ ಕೆ.ಜಿ.ಎಫ್.ನಲ್ಲಿಯೂ ಕೂಡ ಸ್ಪೆಷಲ್ ಲಾಕಪ್ಪನ್ನು ಹೊಸದಾಗಿ ಕಟ್ಟಿಸಲಾಯಿತು.

ಶ್ರೀ ಕೆ. ಕೆಂಚಪ್ಪ.—ಪೋಲೀಸು ಸ್ಟೇಷನ್ನಿನಲ್ಲಿರುವ ಲಾಕಪ್ಪುಗಳ ವಿಚಾರ ಹೇಳಿ. ಎಲ್ಲ ಕಡೆಯೂ ಡಿಸ್ಟ್ರಿಕ್ಟ್ ಲಾಕಪ್ಪುಗಳಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಅನಂತರ ಚಿತ್ರದುರ್ಗದಲ್ಲಿರುವ ಡಿಸ್ಟ್ರಿಕ್ಟ್ ಲಾಕಪ್ಪನ್ನು ಸರಿಪಡಿಸಲು ಇತ್ತೀಚೆಗೆ ಕೆಲವು ಅಡಿಷನಲ್ ಮತ್ತು ಮೈನರ್ ಇಂಪ್ರೂವ್‌ಮೆಂಟುಗಳನ್ನು ಮಾಡಲಾಗಿದೆ. ಮತ್ತೆ ಇನ್ನೂ ಕೆಲವು ಕಡೆಗಳಲ್ಲಿ ಈ ರೀತಿಯಾದ ರಿಪೇರಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕೆಲವು ಮಾನ್ಯ ಸದಸ್ಯರು ಈ ಬೆಂಗಳೂರಿನಲ್ಲಿರತಕ್ಕ ಸೆಂಟ್ರಲ್ ಜೈಲನ್ನು ಕಟ್ಟಿರುವ ಸ್ಥಳವು ಲಾಯಕ್ಕಾಗಿಲ್ಲ, ಅದರಿಂದ ಈ ಸೆಂಟ್ರಲ್ ಜೈಲನ್ನು ಇಲ್ಲಿಂದ ತೆಗೆದುಹಾಕಿ ಮತ್ತೊಂದು ಕಡೆ ಕಟ್ಟಬೇಕು ಎಂದು ಹೇಳಿದರು. ಇದನ್ನು ಶ್ರೀ ಮಲ್ಲಾರಾಧ್ಯರೂ ಹೇಳಿದ ಹಾಗೆ ಜ್ಞಾಪಕವಿದೆ. ಇದರ ಬಗ್ಗೆ ಸರಕಾರ ವಿಚಾರ ಮಾಡಿ ನಿರ್ಣಯವನ್ನು ತೆಗೆದುಕೊಂಡಿದೆ. ಬೆಂಗಳೂರಿನಲ್ಲಿ ಈಗಿರುವ ಸೆಂಟ್ರಲ್ ಜೈಲನ್ನು ತೆಗೆದು ಮೆಂಟಲ್ ಹಾಸ್ಪಿಟಲ್ ಹತ್ತಿರ ಕಟ್ಟಬೇಕೆಂದು ಈಗಾಗಲೇ ಒಂದು ಸೈಟನ್ನು ಕೊಂಡುಕೊಳ್ಳಲಾಗಿದೆ ಮತ್ತು ಇದಕ್ಕಾಗಿ ಜಮೀನನ್ನೂ ಸಹ ಅಕ್ವೈರು ಮಾಡಲಾಗಿದೆ. ಇದಕ್ಕಾಗಿ ಪ್ಲಾನು, ಎಸ್ಟಿಮೇಟು ಇವುಗಳನ್ನೆಲ್ಲ ಪ್ರಿಪೇರ್ ಮಾಡಿ ನಮ್ಮ ಹತ್ತಿರ ಕಳಿಸಿದ್ದಾರೆ. ಆದಷ್ಟು ತೀವ್ರವಾಗಿ ಈ ಜೈಲನ್ನು ಕಟ್ಟಿಸಬೇಕು ಎಂದು ನಿರ್ಣಯವನ್ನು ತೆಗೆದುಕೊಂಡು ಗವರ್ನಮೆಂಟ್ ಆರ್ಡರನ್ನು ಪಾಸು ಮಾಡಿಸಿ ಪ್ಲಾನು, ಎಸ್ಟಿಮೇಟು ಬಂದ ತಕ್ಷಣ ಅಲ್ಲಿ ಜೈಲಿನ ಕಟ್ಟಡವನ್ನು ಕಟ್ಟಿ ಇದನ್ನು ಅಲ್ಲಿಗೆ ವರ್ಗಾಯಿಸಲಾಗುತ್ತದೆ ಎನ್ನುವ ಭರವಸೆಯನ್ನು ತಮಗೆ ಕೊಡುತ್ತೇನೆ. ನನಗೆ ಬೊಂಬಾಯಿ ಏರಿಯಾದ ಮಾಹಿತಿ ಇಲ್ಲ ಮತ್ತು ಆ ಕಡೆಗೆ ಹೋಗಿಲ್ಲ ಮತ್ತು ಅಲ್ಲಿನ ಜೈಲುಗಳ ಪರಿಸ್ಥಿತಿಯನ್ನು ನಾನು ನೋಡಿಕೊಂಡಿಲ್ಲ. ಆದರೆ ನನ್ನ ಭಾಗದ ಜಿಲ್ಲೆಗಳ ಪರಿಸ್ಥಿತಿ ಗೊತ್ತು. ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಒಂದು ಸೆಂಟ್ರಲ್ ಜೈಲು ಇದೆ. ಇದನ್ನು ಎಷ್ಟೋ ಜನ ಹೊರಗಿನಿಂದ ಬಂದು ನೋಡಿಕೊಂಡು ಹೋಗುತ್ತಿದ್ದರು. ಅಷ್ಟು ಚೆನ್ನಾಗಿದೆ ಅದು.

ಅಧ್ಯಕ್ಷರು.—ಹಿಂದೆ ಬೆಳಗಾವಿಯಲ್ಲಿದ್ದ ಜೈಲಿನ ಹಾಗಿದೆಯೋ?

